ರಜತ ಮಹೋತ್ಸವ ವರ್ಷದ ಪ್ರಕಟನೆ

ಸಂಪುಟ ೯
ಸಂಚಿಕೆ ೧-೨

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ • ರಾಜ್ಯೋತ್ಸವ
ಸಂಯುಕ್ತ ಸಂಚಿಕೆ

೧೯೭೬

ತ್ರೈಮಾಸಿಕ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦೦೦೩** ಇವರಿಗೆ ಕಳುಹಿಸಬೇಕು, ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ

೩. ಸಂಕ್ರಮಣ ಸಂಚಿಕೆ ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

ರಜತಮಹೋತ್ಸವ ಸಂಚಿಕೆಯ ಬೆಲೆ: ರೂ. ೫-೦೦ (ಅಂಚೆವೆಚ್ಚ ಪ್ರತ್ಯೇಕ)

(ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ೪-೦೦ ಮಾತ್ರ)

ಹಣವನ್ನು ಡಿಮಾಂಡಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಅಫೀಸರ, ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ-೫೮೦ ೦೦೩

ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೯ ಸಂಚಿಕೆ : ೧ ಮತ್ತು ೨

ಪ್ರಧಾನ ಸಂಪಾದಕರು

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೯ ಸಂಚಿಕೆ : ೧ ಮತ್ತು ೨

ಅಗಸ್ಟ – ನವಂಬರ ೧೯೭೬

ಸ್ವಾತಂತ್ರ್ಯೋತ್ಸವ - ರಾಜ್ಯೋತ್ಸವ
ಸಂಯುಕ್ತ ಸಂಚಿಕೆ

ಪ್ರಕಾಶಕರು
ಸಿ. ಎಸ್. ಕಣವಿ
ನಿರ್ದೇಶಕರು
ಪ್ರಸಾರಾಂಗ ವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು
ಸೋಮಶೇಖರ ಅಕಳವಾಡಿ
ಮನೋಹರ ಮುದ್ರಣಾಲಯ, ಧಾರವಾಡ

ಪರಿವಿಡಿ

- **ಅಂತ್ಯಶಿಲ್ಪ**

ಬೆಳ್ಳಿ

ನೂರು ಮನಸು, ನೂರು ಕನಸು–
ಏಳಿ : ಬೆಳ್ಳಿ ಮೂಡಿದೆ:
ರಜತೋತ್ಸವ ರಥಕೆ ಮುಂದೆ
ಧ್ರುವಮಂಡಲ ಹರಡಿದೆ.

ಇದು ವಾಸ್ತವ, ಇದು ಕಲ್ಪನೆ
ಸದ್ದಿಲ್ಲದ ಸಾಧನೆ;
ಹೊಸ ಯುಗಾದಿ, ಹೊಸ ದಿಗಂತ
ಹೊಸ ಗುರಿಗಳ ಶೋಧನೆ.

ವಿಶ್ವದೆದೆಯ ತೆರೆದನುಭವ
ಕನ್ನಡ ಕುಲ ಚಿಂತನೆ;
ಎದ್ದೇಳುವ ಜನಪದವೇ–
ಸದ್ಭಾವಕೆ ವಂದನೆ.

ಅಸಂತೋಷ ಅಸಹನೆಗಳ
ತಿರುಗಣಿಮಡು ಆಚೆಗೆ–
ಸೌಹಾರ್ದದ, ಸೌಂದರ್ಯದ
ಒಲುಮೆಯ ದಡ ಈಚೆಗೆ.

ನಯ–ವಿನಯವೆ, ಸೌಜನ್ಯವೆ
ವಿದ್ಯೆಯ ತವರ್ಮನೆಯೆ–
ಬುದ್ಧಿಗೆ ಹೃದ್ಗತವು ಹೊಳೆಯೆ
ಉದ್ಧಾರವು ಸನಿಹವೆ.

ನೂರು ಮನಸು, ನೂರು ಕನಸು
ಏಳಿ : ಬೆಳ್ಳಿ ಮೂಡಿದೆ:
ದಣಿವಿಲ್ಲದ ದುಡಿಮೆಗಾಗಿ
ಇಡಿ ಹಗಲೇ ಕಾದಿದೆ.

—ಚೆನ್ನವೀರ ಕಣವಿ




ರಜತಮಹೋತ್ಸವದ ಹೊಸ್ತಿಲಲ್ಲಿ ಕರ್ನಾಟಕ ವಿಶ್ವವಿದ್ಯಾಲಯ



ರಜತಮಹೋತ್ಸವ ಮುಕ್ತಾಯಸಮಾರಂಭದ ಮುಖ್ಯ ಅತಿಥಿಗಳಾದ
ಸನ್ಮಾನ್ಯ ರಾಷ್ಟ್ರಪತಿ ಡಾ. ಫಕರುದ್ದೀನ ಅಲಿ ಅಹಮದ್ ಅವರು



ಕುಲಪತಿ ಡಾ. ಆರ್. ಸಿ. ಹಿರೇಮಠ ಅವರು



ಕರ್ನಾಟಕ ರಾಜ್ಯ
ಮಹಾರಾಷ್ಟ್ರ
ಬೀದರ
ಗುಲ್ಬರ್ಗಾ
ವಿಜಾಪುರ
ರಾಯಚೂರು
ಬೆಳಗಾಂವ
ಧಾರವಾಡ
ಗೋವಾ
ಬಳ್ಳಾರಿ
ಕಾರವಾರ
ಶಿವಮೊಗ್ಗ
ಚಿತ್ರದುರ್ಗ
ಚಿಕ್ಕಮಗಳೂರು
ತುಮಕೂರು
ಕೋಲಾರ
ಮಂಗಳೂರು
ಹಾಸನ
ಬೆಂಗಳೂರು
ಮಂಡ್ಯ
ಮಡಿಕೇರಿ
ಮೈಸೂರು
ತಮಿಳುನಾಡು
MURTHY

ಆದಿಶಿಲ್ಪ

ಭಾಷಾಪ್ರಭೇದ

● ಡಾ. ಆರ್. ಸಿ. ಹಿರೇಮಠ

ನಿತ್ಯಪರಿವರ್ತನೆ, ಭಾಷೆಯ ಜೀವಂತಿಕೆಯ ಲಕ್ಷಣ. ಬದಲಾವಣೆ, ತತ್ಫಲವಾಗಿ ಬೆಳವಣಿಗೆ ಇಲ್ಲದೆ ಹೋದರೆ ಭಾಷೆ ಬದುಕಲಾರದು. ವಿಸ್ತಾರವಾದ ಭಾಷಾಪ್ರಪಂಚದಲ್ಲಿ ಅನೇಕ ರೀತಿಯ ಬದಲಾವಣೆಗಳು ನಡೆದೇ ಇರುತ್ತವೆ. ಭಿನ್ನ ಭಿನ್ನ ಬದಲಾವಣೆಗೆ ಸಂವಾದಿಯಾಗಿ ಕಾರಣಗಳೂ ಭಿನ್ನಭಿನ್ನವಾಗಿರುತ್ತವೆ. ಕಾರಣಗಳೇನೇ ಇರಲಿ, ಬದಲಾವಣೆ ಮಾತ್ರ ನಿತ್ಯಸತ್ಯವಾಗಿ ಭಾಷೆಯನ್ನು ಜೀವಂತವಾಗಿಡುತ್ತದೆ.

ಹೊರನೋಟಕ್ಕೆ ಭಾಷೆ ಏಕರೀತಿಯದಾಗಿ ಕಂಡುಬರಬಹುದು. ಆದರೆ ಪರಿಚಯ ಹೆಚ್ಚಿದಂತೆ, ಆ ಭಾಷೆಯ ವಿವಿಧ ಪ್ರದೇಶಗಳ ಸಂಪರ್ಕ ಬಂದಂತೆ ಅದರಲ್ಲಿಯ ಭಿನ್ನತೆಗಳು ಗಮನಕ್ಕೆ ಬರಲಾರಂಭಿಸುತ್ತವೆ. ಜನಸಾಮಾನ್ಯರು, ಚಿಕ್ಕ ಮಕ್ಕಳೂ ಸಹ ಇಂಥ ವ್ಯತ್ಯಾಸಗಳನ್ನು ಗಮನಿಸುವುದು ಸರ್ವವಿದಿತ. ಇಂಥ ಭಿನ್ನತೆಗಳು ಒಂದು ಭಾಷೆಯಲ್ಲಿ ನಾನಾ ಬಗೆಯಾಗಿರುತ್ತವೆ. ಒಂದು ಭಾಷೆ ವ್ಯಕ್ತಿವ್ಯಕ್ತಿಗೆ ಭಿನ್ನ, ವೃತ್ತಿವೃತ್ತಿಗೆ ಭಿನ್ನ, ಪ್ರದೇಶಪ್ರದೇಶಕ್ಕೆ ಭಿನ್ನ, ಜಾತಿಜಾತಿಗೆ ಭಿನ್ನ. ವ್ಯಕ್ತಿ-ವ್ಯಕ್ತಿಗೆ ಭಿನ್ನವಲ್ಲದೆ ಅದೇ ವ್ಯಕ್ತಿಯ ಭಾಷೆಯಲ್ಲಿ ಸನ್ನಿವೇಶಗಳನ್ನನುಸರಿಸಿ, ಭಿನ್ನತೆ ಕಂಡುಬರುತ್ತದೆ. ಮನೆಯಲ್ಲಿ ಮಾತನಾಡುವುದೊಂದು ರೀತಿ; ಮಿತ್ರರೊಡನೆ ಮಾತನಾಡುವುದು ಇನ್ನೊಂದು ರೀತಿ; ಆಫೀಸು – ವರ್ಗಗಳಲ್ಲಿ ಮಾತನಾಡುವುದು ಮತ್ತೊಂದು ರೀತಿ. ಇಂಥ ಸ್ಥೂಲ ಸೂಕ್ಷ್ಮ ಭೇದಗಳನ್ನಳವಡಿಸಿಕೊಂಡು ಒಂದೆಂಬಂತೆ ಮೆರೆಯುವುದೇ ಭಾಷೆ.

ಒಂದು ಭಾಷೆಯಲ್ಲಿಯ ಭಿನ್ನತೆಗಳನ್ನು ಅವಲೋಕಿಸಿದಾಗ ಅದರಲ್ಲಿ ವ್ಯಕ್ತಿಭಾಷೆ, ಪ್ರಭೇದ ಮತ್ತು ಉಪಭಾಷೆ – ಹೀಗೆ ವೈವಿಧ್ಯಗಳು ಕಂಡುಬರುತ್ತವೆ. ಒಂದು ವ್ಯಕ್ತಿ ಒಂದು ನಿರ್ದಿಷ್ಟ ಪರಿಸರದಲ್ಲಿ ಬಳಸುವ ಮಾತು ವ್ಯಕ್ತಿಭಾಷೆ. ಇದು ಭಾಷೆಯ ಅತಿ ಪ್ರಾರಂಭಿಕ ಅವಸ್ಥೆ. ಇಲ್ಲಿಂದಲೇ ಭಾಷೆ ಮೊದಲಾಗುವುದು, ಇಂಥ ಅನೇಕ ವ್ಯಕ್ತಿಭಾಷೆಗಳು ಕೂಡಿದಾಗ ಒಂದು ಪ್ರಭೇದವಾಗುತ್ತದೆ. ಪರಸ್ಪರ ಅರ್ಥವಾಗು

ವಂಥ ಮಾತನ್ನು ಬಳಸುವ ಒಂದು ಸಣ್ಣ ಗುಂಪಿದು. ಹೆಚ್ಚು ಸಮಾನಾಂಶಗಳನ್ನುಳ್ಳ ಈ ಪ್ರಭೇದ ಒಂದು ಹಳ್ಳಿಗೋ, ತಾಲೂಕಿಗೋ, ಜಿಲ್ಲೆಗೋ ಸೀಮಿತವಾಗಿರಬಹುದು. ಪ್ರದೇಶ ವಿಸ್ತಾರವಾದಂತೆ ಭಿನ್ನತೆಯ ಪರಿಘವು ಹೆಚ್ಚಿ, ತಿಳಿವಳಿಕೆಯು ಹಂತ ಮೀರಿದ ಅದು ಉಪಭಾಷಾವಲಯವನ್ನು ಪ್ರವೇಶಿಸುತ್ತದೆ. ಅಂದರೆ ಅನೇಕ ಪ್ರಭೇದಗಳು ಕೂಡಿ ಒಂದು ಉಪಭಾಷಾವಲಯ ನಿರ್ಮಾಣವಾಗುತ್ತದೆ. ಸಹಜವಾಗಿಯೇ ಉಪಭಾಷೆಯ ಕ್ಷೇತ್ರ, ಪ್ರಭೇದದ ಕ್ಷೇತ್ರಕ್ಕಿಂತ ವಿಸ್ತಾರವಾಗಿರುತ್ತದೆ. ಏಕೆಂದರೆ ಒಂದು ನಿರ್ದಿಷ್ಟ ಕ್ಷೇತ್ರದ ಅನೇಕ ಪ್ರಭೇದಗಳನ್ನು ಈ ಉಪಭಾಷೆ ಒಳಗೊಂಡಿರುತ್ತದೆ. ಇಂಥ ಅನೇಕ ಉಪಭಾಷಾಪ್ರವಾಹಗಳು ಸೇರಿ ಭಾಷಾಸಾಗರ ರೂಪುಗೊಳ್ಳುತ್ತದೆ.

ಈ ಭಿನ್ನತೆಗಳಲ್ಲಿಯೂ ಎರಡು ಪ್ರಮುಖ ವಿಧಗಳನ್ನು ಗುರುತಿಸಬಹುದು. ಒಂದು, ಕಾಲಾನುಗತ ಭಿನ್ನತೆ; ಇನ್ನೊಂದು, ಪ್ರದೇಶಾನುಗತ ಭಿನ್ನತೆ. ಕಾಲಾನುಕ್ರಮದಲ್ಲಿ ಉಂಟಾದ ಭಿನ್ನತೆ, ಕಾಲಾನುಗತ ಭಿನ್ನತೆ ಒಂದು ಭಾಷೆಯನ್ನು ಅದರ ಹಿಂದಿನ ಘಟ್ಟದಿಂದ ಅವಲೋಕಿಸುತ್ತ ಬಂದಾಗ ಅಲ್ಲಿಯ ರೂಪಗಳು ಕಾಲಕಾಲಕ್ಕೆ ಬದಲಾಗಿದ್ದುದು ಕಂಡುಬರುತ್ತದೆ. ನಿರಂತರವೂ ನಡೆಯುತ್ತಲೇ ಇರುವ ಈ ಭಿನ್ನತೆ ಕಾಲಾನುಗತ ಭಿನ್ನತೆ. ಭಿನ್ನಭಿನ್ನ ಪ್ರದೇಶಕ್ಕನುಸರಿಸಿ ಭಿನ್ನವಾಗುವುದು ಪ್ರದೇಶಾನುಗತ ಭಿನ್ನತೆ. ಒಂದು ಪ್ರದೇಶದಲ್ಲಿ ಒಂದು ರೂಪು ಕಂಡುಬಂದರೆ. ಇನ್ನೊಂದು ಪ್ರದೇಶದಲ್ಲಿ ಇನ್ನೊಂದು ರೂಪು ಕಂಡುಬರುತ್ತದೆ. ಇಂಥ ರೂಪಗಳೇ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳು. ಆಯಾ ಪ್ರದೇಶದಲ್ಲಿಯೇ ಹಿಂದಿದ್ದ ರೂಪು ಇಂದು ಬದಲಾಗಿರಬಹುದು ಅಥವಾ ಇಲ್ಲವಾಗಿರಬಹುದು. ಇಲ್ಲಿ ಆಯಾ ಪ್ರಾದೇಶಿಕ ಭಿನ್ನತೆಯಲ್ಲಿ ಕಾಲಾನುಗತ ಭಿನ್ನತೆಯೂ ಸೇರಿರುತ್ತದೆ. ಒಂದು ಭಾಷೆಯಲ್ಲಿಯ ಭಿನ್ನತೆ ಕಾಲಾನುಗತವೇ ಇರಲಿ, ಪ್ರದೇಶಾನುಗತವೇ ಇರಲಿ ಇಂಥ ಭಿನ್ನತೆಗೆ ಕಾರಣಗಳೇನು ಎನ್ನುವುದೂ ಅಷ್ಟೇ ಮಹತ್ವದ ಅಂಶ.

ಬದಲಾವಣೆಗೆ ಕಾಲ ಮೂಲ ಕಾರಣ. ಒಂದು ಭಾಷೆಯನ್ನು ಮಾತನಾಡುವ ಜನರಲ್ಲಿ ಕೆಲವರು ಸಾವಿರ ಮೈಲಿನ ಮೇಲೆ ವಲಸೆಹೋದರೂ ಆ ಭಾಷೆ ಮೊದಲಿನಂತೆಯೇ ಇರುತ್ತದೆ. ಆದರೆ ಕಾಲಕ್ರಮೇಣ ಅಲ್ಲಿ ವ್ಯತ್ಯಾಸಗಳು ಮೈದೋರಲಾರಂಭಿಸುತ್ತವೆ. ಇಂಥ ಬದಲಾವಣೆ ಅತಿ ಸಾವಕಾಶವಾಗಿ ನಡೆಯುತ್ತಿದ್ದು, ನಮಗೆ ಗೋಚರವಾಗದ ಸ್ಥಿತಿಯಲ್ಲಿರುತ್ತದೆ. ಆದರೂ ಅದು ನಡೆದೇ ಇರುತ್ತವೆ. ಸಾಮಾನ್ಯವಾಗಿ ಇಂಥ ಬದಲಾವಣೆ ಆದ ನಂತರವೇ ನಮಗೆ ಕಂಡುಬರಬಹುದು. ಒಮ್ಮೊಮ್ಮೆ ವ್ಯಕ್ತಿಯ ಜೀವಮಾನದಲ್ಲಿ ಗೋಚರವಾಗದೆ. ಹಳೆಯ ಕೃತಿಗಳ ಮೂಲಕ ನಂತರ

ಗೊತ್ತಾಗಬಹುದು. ಹೇಗೇ ಗೊತ್ತಾಗಲಿ, ಕಾಲ ಭಾಷೆಯಲ್ಲಿ ಅತಿ ಮೂಲಭೂತವಾಗಿ ವ್ಯತ್ಯಾಸವನ್ನುಂಟುಮಾಡುವ ಅಂಶ.

ಕಾಲದಷ್ಟೇ ಮಹತ್ವದ ಇನ್ನೊಂದು ಕಾರಣ ಪ್ರದೇಶ. ಒಂದು ಪ್ರದೇಶದಲ್ಲಿ ಒಂದು ರೂಪು ಬಳಕೆಯಾಗುತ್ತಿರಬಹುದು, ಇನ್ನೊಂದು ಪ್ರದೇಶದಲ್ಲಿ ಇನ್ನೊಂದು ರೂಪು ಬಳಕೆಯಾಗುತ್ತಿರಬಹುದು. ಒಂದು ಪ್ರದೇಶದಲ್ಲಿ ಬಳಕೆಯಲ್ಲಿರುವ ಒಂದು ರೂಪು ಇನ್ನೊಂದು ಪ್ರದೇಶದಲ್ಲಿ ಬಳಕೆಯಾಗಲಾರಂಭಿಸಿದರೆ ಆ ರೂಪದಲ್ಲಿ ವ್ಯತ್ಯಾಸ ತಲೆದೋರಬಹುದು. ಪರಸ್ಪರ ಸಮೀಪ ಪ್ರದೇಶದಲ್ಲಿ ಕಂಡುಬರುವ ವ್ಯತ್ಯಾಸಗಳು ಗೌಣವಾಗಿರಬಹುದು. ಎರಡು ಪ್ರದೇಶಗಳ ನಡುವಣ ಅಂತರ ಹೆಚ್ಚಿದಂತೆ ಈ ವ್ಯತ್ಯಾಸವೂ ಹೆಚ್ಚಾಗಬಹುದು. ದೂರ-ಸಮೀಪ ಅಷ್ಟೇ ಅಲ್ಲದೆ ಎರಡರ ನಡುವಣ ಸಂಪರ್ಕವನ್ನನುಸರಿಸಿ ಈ ವ್ಯತ್ಯಾಸ ಹೆಚ್ಚು-ಕಡಿಮೆಯಾಗಬಹುದು.

ಭಾಷೆಯಲ್ಲಿಯ ವ್ಯತ್ಯಾಸಕ್ಕೆ ಕಾರಣವಾಗುವ ಇನ್ನೊಂದು ಪ್ರಮುಖ ಅಂಶ ಪರಿಸರ. ಈ ಪರಿಸರ ಅನೇಕ ಬಗೆಯಾಗಿರಬಹುದು. ನದಿ, ಪರ್ವತ, ಅರಣ್ಯ ಮುಂತಾಗಿ ನೈಸರ್ಗಿಕ ಪರಿಸರವಾಗಿರಬಹುದು. ಇನ್ನೊಂದು ಭಾಷೆಯ ಪರಿಸರವೂ ಆಗಿರಬಹುದು. ನೈಸರ್ಗಿಕ ಅಡೆತಡೆಯ ಮೂಲಕ ಒಂದೇ ಭಾಷೆಯನ್ನು ಮಾತನಾಡುವ ಎರಡು ಗುಂಪುಗಳ ನಡುವೆ ಸಂಪರ್ಕ ತಪ್ಪಿ, ಎರಡು ಗುಂಪುಗಳು ತಮ್ಮದೇ ಆದ ವೈಶಿಷ್ಟ್ಯಗಳನ್ನು ಬೆಳೆಸಿಕೊಳ್ಳಬಹುದು. ಕನ್ನಡ ಭಾಷಾಪ್ರದೇಶದಲ್ಲಿ ಹರಿಯುವ ಕೃಷ್ಣಾ, ತುಂಗಭದ್ರಾ, ಕಾವೇರಿ, ಮಲಪ್ರಭಾ, ಘಟಪ್ರಭಾ, ಭೀಮಾ, ನೇತ್ರಾವತಿ, ವರದಾ, ಹೇಮಾವತಿ ಮುಂತಾದ ನದಿಗಳು ತಮ್ಮ ಎರಡೂ ಬದಿಗೆ ಪ್ರಭೇದಗಳನ್ನು ಉಂಟುಮಾಡಿವೆ. ತುಂಗಭದ್ರೆಯ ಒಂದು ಮಗ್ಗುಲಿನ ರಾಯಚೂರು ಒಂದು ಪ್ರಭೇದವಾದಂತೆ, ಇನ್ನೊಂದು ಮಗ್ಗುಲಿನ ಬಳ್ಳಾರಿ ಇನ್ನೊಂದು ಪ್ರಭೇದವಾಗಿದೆ. ಇನ್ನೊಂದು ಬದಿಯ ಧಾರವಾಡ ಇವೆರಡಕ್ಕಿಂತ ಭಿನ್ನವಾದ ಪ್ರಭೇದವಾಗಿದೆ. ನದಿಗಳಂತೆಯೇ ಗುಡ್ಡ-ಬೆಟ್ಟಗಳೂ ಇಂಥ ವ್ಯತ್ಯಾಸಕ್ಕೆ ಕಾರಣವಾಗುತ್ತವೆ. ಅನೇಕ ಗುಡ್ಡ-ಬೆಟ್ಟಗಳಿರುವ ಕನ್ನಡದ ಪ್ರದೇಶದಲ್ಲಿ ಕರಾವಳಿ ಕನ್ನಡ, ಮಲೆನಾಡ ಕನ್ನಡಗಳಂತೂ ಈ ಕಾರಣದಿಂದಲೇ ಭಿನ್ನವಾಗಿವೆ. ಗುಡ್ಡ-ಬೆಟ್ಟ-ಅರಣ್ಯ ತುಂಬಿದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ಗುಡ್ಡ-ಬೆಟ್ಟ-ಅರಣ್ಯಗಳ ಆಚೆ ಈಚೆಗೆಲ್ಲ ವಿವಿಧ ಪ್ರಭೇದಗಳ ನಿರ್ಮಾಣವಾಗಿದೆ.

ಇನ್ನೊಂದು ಭಾಷೆಯ ಪರಿಸರವೂ ಹೀಗೆಯೇ ವೈವಿಧ್ಯಕ್ಕೆ ಕಾರಣವಾಗಿದೆ. ಸಾಮಾನ್ಯವಾಗಿ ಒಂದು ಭಾಷೆ, ಇನ್ನೊಂದು ಭಾಷೆಯ ಸಂಪರ್ಕದಲ್ಲಿ ಬಂದೇ ಬರುತ್ತದೆ. ಅಲ್ಲದೆ ಆ ಭಾಷೆಯ ಪ್ರದೇಶ ವಿಸ್ತೃತವಾದಂತೆ ಒಂದಕ್ಕಿಂತ ಹೆಚ್ಚು ಭಾಷೆಗಳ ಸಂಪರ್ಕ ಬರಬಹುದು. ಒಂದು ಭಾಷೆ ಇನ್ನೊಂದು ಭಾಷೆಯ ಸಂಪರ್ಕದಲ್ಲಿ

ಬಂದಾಗ ಪರಸ್ಪರ ಆದಾನ–ಪ್ರದಾನ ನಡೆದೇ ಇರುತ್ತದೆ. ಇದರ ಮೂಲಕ ಎರಡರ ರೂಪಗಳ ಮೇಲೆಯೂ ಪರಿಣಾಮ ಉಂಟಾಗುತ್ತದೆ. ಹೀಗಾಗಿ ಅವು ವ್ಯತ್ಯಾಸಗೊಳ್ಳಲಾರಂಭಿಸುತ್ತವೆ. ಇನ್ನೊಂದು ಭಾಷೆಯ ಸಂಪರ್ಕ ಇಂಥ ಇನ್ನೊಂದು ರೀತಿಯ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಹೀಗಾಗಿ, ಎಷ್ಟು ಭಾಷೆಗಳ ಸಂಪರ್ಕ ಒದಗುತ್ತದೆ, ಯಾವ ಭಾಷೆಯ ಸಂಪರ್ಕ ಎಲ್ಲಿ ಎನ್ನುವುದರ ಮೇಲಿಂದ ಎಷ್ಟು ರೀತಿಯ ವ್ಯತ್ಯಾಸಗಳು, ಎಲ್ಲಿ ಎನ್ನುವುದನ್ನು ಸ್ಥೂಲವಾಗಿ ಹೇಳಲು ಬರುತ್ತದೆ. ಕನ್ನಡಕ್ಕೆ ತಮಿಳು, ತೆಲುಗು, ಮಲಯಾಳ, ತುಳು, ಉರ್ದು, ಕೊಂಕಣಿ, ಹಿಂದಿ, ಮರಾಠಿ ಮುಂತಾದ ಭಾಷೆಗಳ ಸಂಪರ್ಕ ಬೇರೆಬೇರೆ ಪ್ರದೇಶದಲ್ಲಿ ಉಂಟಾಗಿ ಬೇರೆಬೇರೆ ಪ್ರಾದೇಶಿಕ ಪ್ರಭೇದಗಳುಂಟಾದವು. ಮೈಸೂರು ಜಿಲ್ಲೆಯಲ್ಲಿ ತಮಿಳಿನ ಪ್ರಭಾವ ಹೊಂದಿದ ಕನ್ನಡ ಪ್ರಭೇದ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಹಾಗೂ ಕೋಲಾರ ಜಿಲ್ಲೆಗಳಲ್ಲಿ ತೆಲುಗು ಪ್ರಭಾವಿತ ಕನ್ನಡ ಪ್ರಭೇದ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಮಲಯಾಳದಿಂದ ಪ್ರಭಾವಿತವಾದ ಪ್ರಭೇದ, ಬೀದರ, ಕಲಬುರ್ಗಿ, ರಾಯಚೂರು ಜಿಲ್ಲೆಗಳಲ್ಲಿ ಉರ್ದು ಪ್ರಭಾವಿತ ಕನ್ನಡ, ಬೆಳಗಾಂವಿ, ವಿಜಾಪುರ, ಬೀದರ, ಕಾರವಾರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮರಾಠಿ ಪ್ರಭಾವಿತ ಕನ್ನಡ ಹೀಗೆ ಅನೇಕ ಪ್ರಭೇದಗಳು ಗೋಚರವಾಗುತ್ತವೆ. ಮೇಲಿನ ಭಾಷೆಗಳ ಪ್ರಭಾವ ಒಂದು ವಿಶಿಷ್ಟ ಪ್ರದೇಶದಲ್ಲಿ ಆಗಿರುವುದರಿಂದ ಒಂದೊಂದು ವೈಶಿಷ್ಟ್ಯಕ್ಕೆ ಕಾರಣವಾಗುತ್ತದೆ. ಆದರೆ ಇವೆಲ್ಲ ಭಾಷೆಗಳಿಗಿಂತ ವ್ಯಾಪಕ ಪ್ರಭಾವ ಬೀರಿದ ಸಂಸ್ಕೃತ ಮತ್ತು ಇಂಗ್ಲೀಷ ಭಾಷೆಗಳು ಪ್ರಾದೇಶಿಕ ಪ್ರಭೇದಗಳನ್ನು ನಿರ್ಮಿಸಲು ಸಮರ್ಥವಾಗಿಲ್ಲ. ಇದಕ್ಕೆ ಕಾರಣ, ಇವುಗಳ ಪ್ರಭಾವ ಸಾರ್ವತ್ರಿಕವಾಗಿದ್ದು ಎಲ್ಲ ಪ್ರದೇಶಗಳ ಮೇಲೆಯೂ ಉಂಟಾದ್ದರಿಂದ ಒಂದು ಪ್ರದೇಶದಲ್ಲಿ ಒಂದು ವಿಶಿಷ್ಟ ಪ್ರಭೇದ ಇವುಗಳ ಮೂಲಕ ನಿರ್ಮಾಣವಾಗುವ ಪ್ರಮೇಯವಿಲ್ಲ.

ಬದಲಾವಣೆ ಪ್ರಾರಂಭವಾಗುವುದು ಒಂದು ಅಂಶದಲ್ಲಿ. ಈ ಅಂಶ ಹಾಗೆಯೇ ಹಬ್ಬಿ, ಇಡೀ ಗುಂಪಿಗೆ ಪಸರಿಸಬೇಕು. ಹೀಗೆ ಪಸರಿಸಿದ ನಂತರವೇ ಅದು ಆ ಭಾಷೆಯಲ್ಲಿಯ ಬದಲಾವಣೆಯೆನ್ನಿಸಿಕೊಳ್ಳುತ್ತದೆ. ಒಂದು ಬದಲಾವಣೆ ಸಾಧ್ಯವೇ ಅಸಾಧ್ಯವೇ ಎನ್ನುವುದು ಎರಡು ಮುಖ್ಯ ಸಂಗತಿಗಳನ್ನು ಅವಲಂಬಿಸಿರುತ್ತದೆ. ಒಂದು ಭಾಷಾಪರಿವಾರದ ಪರಂಪರೆಯನ್ನು, ಅಂದರೆ ಅಲ್ಲಿರುವ ಪ್ರಯೋಗವನ್ನು ಅದರ ಪ್ರಾಂತಾಭಿಮಾನ ಅಥವಾ ವೈಯಕ್ತಿಕತೆ ಯಾವಾಗಲೂ ಕಾಯ್ದುಕೊಳ್ಳಲು ಯತ್ನಿಸುತ್ತಿರುತ್ತದೆ. ತನ್ನದೆನ್ನುವ ಅಭಿಮಾನದಿಂದ. ತನ್ನತನವನ್ನು ಉಳಿಸಿಕೊಳ್ಳಲು ಈ ಅಂಶ ಹೆಣಗುತ್ತದೆ. ಈ ಅಂಶ ಬಹುಮಟ್ಟಿಗೆ ಪ್ರಭಾವಿಯಾದರೆ ಅದರ ಮೇಲೆ ಅನ್ಯಪ್ರಭಾವ ಗಣನೀಯವಾಗಿ ಕಡಿಮೆಯಾಗುತ್ತದೆ. ಇಂಥ ಅಭಿಮಾನವ ಮೂಲಕವೇ ತಮಿಳಿನ ಮೇಲೆ ಸಂಸ್ಕೃತದ ಪ್ರಭಾವ ಅನ್ಯ ಭಾಷೆಗಳ ಮೇಲೆ ಕಂಡು

ಬರುವಷ್ಟು ಇಲ್ಲದಿರುವುದು. ಪ್ರತಿಪ್ರಭೇದವೂ ತನ್ನತನವನ್ನು ಮೆರೆದಂತೆ ಇಂಥ ಪ್ರಭೇದಗಳ ಸಂಖ್ಯೆ ಬೆಳೆಯುತ್ತಹೋಗುತ್ತದೆ. ಇದು ಹೀಗೆಯೇ ಮುಂದುವರಿದರೆ ಸ್ವತಂತ್ರ ಭಾಷೆಯ ನಿರ್ಮಾಣಕ್ಕೂ ಕಾರಣವಾಗಬಹುದು.

ಇಂಥ ಪ್ರಸಂಗವನ್ನು ತಪ್ಪಿಸಲು ಇನ್ನೊಂದು ಸಂಗತಿ ನೆರವಾಗುತ್ತದೆ. ಅದೇ ಬಳಕೆ. ಒಂದು ಪ್ರಭೇದವನ್ನು ಬಳಸುವ ಜನ ಇನ್ನೊಂದು ಪ್ರಭೇದವನ್ನು ಬಳಸುವ ಜನದೊಡನೆ ಹೆಚ್ಚು ಹೆಚ್ಚು ಸಂಪರ್ಕ ಬೆಳೆಸಿ, ಪರಸ್ಪರ ಬಳಕೆ ಹೆಚ್ಚಾದಂತೆ ಪರಸ್ಪರ ಭಾಷಿಕರೂಪಗಳ ತಿಳಿವಳಿಕೆ ಮೂಡುತ್ತದೆ. ಇದು ಹೀಗೇ ಮುಂದುವರಿದು ಪರಸ್ಪರ ಗ್ರಹಣದ ಮೂಲಕ ಎರಡರಲ್ಲಿಯ ವೈಶಿಷ್ಟ್ಯಗಳು ಕಡಿಮೆಯಾಗುತ್ತವೆ. ಹೀಗಾಗಿ ಪ್ರತಿಯೊಂದು ಪ್ರಭೇದವೂ ಒಂದು ವಿಶಿಷ್ಟ ರೂಪವಾಗುವುದು ತಪ್ಪಿ, ವೈಯಕ್ತಿಕತೆಯಿಂದ ನಿರ್ಮಿತವಾದ ಭಿನ್ನತೆಯಲ್ಲಿ ಈ ಬಳಕೆ ಏಕತೆಯನ್ನು ತರುತ್ತದೆ.

ಆದರೂ ವೈಯಕ್ತಿಕತೆ ಹಾಗೂ ಬಳಕೆಗಳು ಪರಸ್ಪರ ವಿರುದ್ಧ ದಿಶೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಪರಸ್ಪರ ವೈಶಿಷ್ಟ್ಯಗಳು ಕಡಿಮೆಯಾಗುವ ಕ್ರಮ ಒಂದು ದಿಕ್ಕಿನಲ್ಲಿ ನಡೆದರೆ, ವಿಶಿಷ್ಟ ಅಂಶಗಳು ಬೆಳೆಯುವ, ಉಳಿಯುವ ಕ್ರಿಯೆಯೂ ಇನ್ನೊಂದು ದಿಕ್ಕಿನಲ್ಲಿ ನಡೆದೇ ಇರುತ್ತದೆ. ಹೀಗಾಗಿ ಪ್ರಭೇದಗಳು ಪ್ರತಿಯೊಂದು ಭಾಷೆಯಲ್ಲಿ ಕಂಡುಬರುತ್ತವೆ. ಕನ್ನಡದಲ್ಲಿ ಉಳಿದ ಭಾಷೆಗಳಲ್ಲಿಯೂ ಕಂಡುಬರುವಂತೆ ಎರಡು ಪ್ರಮುಖ ಪ್ರಭೇದಗಳನ್ನು ಗುರುತಿಸಬಹುದು.

೧. ಪ್ರಾದೇಶಿಕ ಪ್ರಭೇದ

೨. ಸಾಮಾಜಿಕ ಪ್ರಭೇದ

ಬೇರೆ ಬೇರೆ ಪ್ರದೇಶಗಳಲ್ಲಿ ಆಯಾ ಪ್ರದೇಶ ವೈಶಿಷ್ಟ್ಯಗಳನ್ನನುಸರಿಸಿ, ಬೇರೆ ಬೇರೆ ರೂಪಗಳು ನಿರ್ಮಾಣವಾಗಿ ಅವು ಆ ಪ್ರಭೇದ ನಿರ್ಮಾಣಕ್ಕೆ ಕಾರಣವಾಗುತ್ತವೆ. ಕನ್ನಡದಲ್ಲಿ ಮೈಸೂರು ಪ್ರದೇಶ, ಧಾರವಾಡ ಪ್ರದೇಶ, ಗುಲ್ಬರ್ಗಾ ಪ್ರದೇಶ ಹಾಗೂ ಕರಾವಳಿ ಪ್ರದೇಶಗಳಲ್ಲಿ ವಿಶಿಷ್ಟವಾದ ಪ್ರಭೇದಗಳಿವೆ. ಒಂದು ಪ್ರದೇಶ ಇನ್ನೊಂದು ಪ್ರದೇಶದೊಡನೆ ಸಂಪರ್ಕ ಹೊಂದದಿರುವುದೇ ಇಂಥ ವೈಶಿಷ್ಟ್ಯಕ್ಕೆ ಕಾರಣ. ಭಿನ್ನ ಆಡಳಿತಕ್ಕೊಳಪಟ್ಟು, ಭಿನ್ನ ರಾಜಕೀಯ ಪರಿಸರದಲ್ಲಿ ಬೆಳೆದ ಈ ಪ್ರದೇಶಗಳು ಸಹಜವಾಗಿಯೇ ಇನ್ನೊಂದು ಪ್ರದೇಶದೊಡನೆ ಸಂಪರ್ಕ ಬೆಳೆಸಲು ಅವಕಾಶವಿರಲಿಲ್ಲ. ಈ ಸಂಪರ್ಕಾಭಾವ ಆಯಾ ಪ್ರಭೇದದ ವೈಶಿಷ್ಟ್ಯಗಳನ್ನು ಸ್ಥಿರೀಕರಿಸಿತು. ಸಂಪರ್ಕ ಹೆಚ್ಚಿದಂತೆ ಈ ವೈಯಕ್ತಿಕ ಅಂಶಗಳು ಕಡಿಮೆಯಾಗುತ್ತಿರುವುದು ಈಗ ಗೋಚರವಾಗುತ್ತಿದೆ, ಇಂಥ ಭಿನ್ನತೆಗಳು ಕೇವಲ ವಿಶಾಲ ಪ್ರದೇಶಕ್ಕೆ ಮಾತ್ರ ಸೀಮಿತವಾಗಿವೆಯೆಂತಲ್ಲ. ಈ ಪರಿಸ್ಥಿತಿ ಜಿಲ್ಲೆ-ಜಿಲ್ಲೆಗೆ, ತಾಲೂಕು–ತಾಲೂಕಿಗೆ ಭಿನ್ನವಾಗಿರುವುದು

ಕಂಡುಬರುತ್ತದೆ. ಸಂಪರ್ಕ ಇಂಥ ಭಿನ್ನತೆಗಳನ್ನು ಕಡಿಮೆ ಮಾಡಿದರೂ, ಅದನ್ನು ಇಲ್ಲದಂತೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ಆಯಾ ಪ್ರಭೇದವೈಶಿಷ್ಟ್ಯಗಳು ಉಳಿದು ಕೊಳ್ಳುತ್ತವೆ.

ಇದು ಪ್ರಾದೇಶಿಕಪ್ರಭೇದಗಳ ಮಾತಾಯಿತು. ಒಂದು ಪ್ರದೇಶದ ಒಂದು ಹಳ್ಳಿಯಲ್ಲಿಯೇ ಆ ಹಳ್ಳಿಯ ಸಾಮಾನ್ಯ ಪ್ರಾದೇಶಿಕ ಪ್ರಭೇದ ಒಂದೇ ಆದರೂ ಆಯಾ ಜಾತಿಗನುಸರಿಸಿ ಭಿನ್ನತೆ ಕಂಡುಬರುತ್ತದೆ. ಒಂದೇ ಹಳ್ಳಿಯಲ್ಲಿ ಬ್ರಾಹ್ಮಣರ ಮಾತು, ಲಿಂಗಾಯತರ ಅಥವಾ ಒಕ್ಕಲಿಗರ ಮಾತು ಮತ್ತು ಹರಿಜನರ ಮಾತು ಸಾಕಷ್ಟು ಭಿನ್ನವಾಗಿರುತ್ತದೆ, ಜಾತಿಜಾತಿಗೆ ಭಿನ್ನವಾಗಿರುವ ಈ ಪ್ರಭೇದ ಸಾಮಾಜಿಕ ಪ್ರಭೇದವೆನ್ನಿಸಿಕೊಳ್ಳುತ್ತದೆ. ಇಲ್ಲಿ ನಿಜವಾಗಿಯೂ 'ಕುಲವು ನಾಲಗೆಯುರುಹಿತು' ಎನ್ನುವ ಪರಿಸ್ಥಿತಿ ಕಂಡುಬರುತ್ತದೆ, ಅವನ ಮಾತಿನ ಮೇಲಿಂದ ಅವನು ಯಾವ ಜಾತಿಗೆ ಸೇರಿದವನು ಎನ್ನುವುದನ್ನು ಸಹಜವಾಗಿ ಹೇಳಲು ಬರುತ್ತದೆ. ಬ್ರಾಹ್ಮಣ ರಾಡುವ ಮಾತು ಗ್ರಂಥಸ್ಥ ಭಾಷೆಗೆ ಸಮೀಪ. ಅಲ್ಲಿ ಮಹಾಪ್ರಾಣ ಬಳಕೆ ಅಧಿಕ. ಲಿಂಗಾಯತರ ಮಾತಿನಲ್ಲಿ ವಿಶಿಷ್ಟ ಪ್ರಯೋಗಗಳನ್ನು ಕಾಣಬಹುದು. ಉಳಿದವರು ಬಳಸುವ ವಿಶಿಷ್ಟ ಪದಗಳು, ವಿಶಿಷ್ಟ ಕ್ರಿಯಾರಚನೆಗಳು ಅವರು ಯಾರು ಎನ್ನುವುದನ್ನು ಹೇಳಲು ಸಮರ್ಥವಾಗುತ್ತವೆ. ಇಂಥ ಸಾಮಾಜಿಕ ಪ್ರಭೇದ ಆಯಾ ಪ್ರಾದೇಶಿಕ ಪ್ರಭೇದಗಳನ್ನು ಕಾಯ್ದುಕೊಂಡು ಉಳಿದವುಗಳಿಗಿಂತ ಭಿನ್ನವೆನ್ನುವ ತನ್ನತನವನ್ನು ಉಳಿಸಿಕೊಂಡಿರುತ್ತದೆ. ಹೀಗಾಗಿ ಧಾರವಾಡ, ಗುಲ್ಬರ್ಗಾ, ಮೈಸೂರು, ಕಾರವಾರಗಳ ಬ್ರಾಹ್ಮಣರೂ ಬೇರೆಬೇರೆಯಾಗಿಯೇ ಮಾತನಾಡುತ್ತಾರೆ. ಹಾಗೆಯೇ ಧಾರವಾಡ. ಗುಲ್ಬರ್ಗಾ, ಮೈಸೂರುಗಳ ಲಿಂಗಾಯತರ ಮಾತು ಭಿನ್ನ. ಉಳಿದವರ ವಿಷಯ ದಲ್ಲಿಯೂ ಇದೇರೀತಿ.

ಹೀಗೆ ವ್ಯಕ್ತಿಭಾಷೆಯಿಂದ ಪ್ರಾರಂಭವಾಗಿ ಪ್ರಭೇದವಾಗಿ ಬೆಳೆದು. ಸಾಮಾ ಜಿಕವೊ, ಪ್ರಾದೇಶಿಕವೊ ಉಪಭಾಷೆಯಾಗಿ ಆ ಮೇಲೆ ಭಾಷೆಯಲ್ಲಿ ವಿಲೀನಗೊಳ್ಳುವ ಈ ಭಿನ್ನತೆ ಯಾವುದೇ ಜೀವಂತಭಾಷೆಯ ಅವಿಭಾಜ್ಯ ಅಂಗ. ಅನೇಕ ವ್ಯಕ್ತಿಭಾಷೆಗಳ ತೆರೆಗಳು ಪ್ರಭೇದದಲ್ಲಿ ಕೂಡಿ, ಈ ಪ್ರಭೇದ ಪ್ರವಾಹಗಳು ಉಪಭಾಷಾ ನದಿಯಲ್ಲಿ ಸೇರಿ, ಈ ಉಪಭಾಷಾ ನದಿಗಳು ಭಾಷಾಸಮುದ್ರದಲ್ಲಿ ಸೇರಿ, ಅದರ ಹರವನ್ನು ಹೆಚ್ಚಿಸುತ್ತವೆ. ಇಂಥ ಪರಿಸ್ಥಿತಿಯಲ್ಲಿ ಯಾವುದನ್ನು ಮೊದಲು ಅಭ್ಯಸಿಸಬೇಕು ? ಯಾವುದನ್ನು ಬಿಡಬೇಕು ? ಯಾವುದು ಮುಖ್ಯ ? ಯಾವುದು ಗೌಣ ? ಒಂದು ಇನ್ನೊಂದರ ಅಂಗವಾದುದರಿಂದ, ಒಂದರ ಅಭ್ಯಾಸ ಇನ್ನೊಂದಕ್ಕೆ ಪೋಷಕ. ಒಂದನ್ನು ಅಭ್ಯಸಿಸಿದರೆ ಇನ್ನೊಂದನ್ನು ಅಭ್ಯಸಿಸಿದಂತೆಯೇ. ಹೀಗಾಗಿ ಪ್ರಭೇದದ ಅಭ್ಯಾಸ ಉಪಭಾಷೆಗೆ ಪೋಷಕ; ಉಪಭಾಷೆಯ ಅಭ್ಯಾಸ ಭಾಷೆಗೆ ಆವಶ್ಯಕ.

ಭಾಷೆ ಪ್ರಾಣ, ಉಪಭಾಷೆ ದೇಹ, ಪ್ರಭೇದಗಳು ಅಂಗಾಂಗಗಳು. ಒಂದನ್ನು ಬಿಟ್ಟು ಇನ್ನೊಂದಿಲ್ಲ, ಇರುವಂತಿಲ್ಲ. ಭಾಷೆಯ ಕಾರ್ಯವಾದ ಸಾಮಾನ್ಯ ಸಂಪರ್ಕವನ್ನು ಎಲ್ಲವೂ ಕೂಡಿ ಸಾಧಿಸುತ್ತವೆ.

ವಿವಿಧ ಪ್ರಾದೇಶಿಕ, ಸಾಮಾಜಿಕ ಪ್ರಭೇದಗಳನ್ನು ಹಾಗೆಯೇ ಬೆಳೆಯಗೊಟ್ಟರೆ ಒಟ್ಟು ಸಂಪರ್ಕಕ್ಕೆ ವ್ಯತ್ಯಯುವುಂಟಾಗುತ್ತದೆ. ಒಂದು ಪ್ರಭೇದ ಇನ್ನೊಂದು ಪ್ರಭೇದ ವನ್ನು ಬಳಸುವವರಿಗೆ ಅರ್ಥವಾಗುವುದಿಲ್ಲ. ಅವರ ಪ್ರಭೇದ ಇವರಿಗೆ ಅರ್ಥ ವಾಗುವುದಿಲ್ಲ. ಹೀಗಾಗಿ ಸಾಮಾನ್ಯ ಸಂಪರ್ಕಕ್ಕೆ ವ್ಯತ್ಯಯ ಬರುತ್ತದೆ. ಇಂಥ ಪರಿಸ್ಥಿತಿಯನ್ನು ಹೋಗಲಾಡಿಸಲು ಒಂದು ಪ್ರಮಾಣಭೂತ ಪ್ರಭೇದ ನಿರ್ಮಾಣ ವಾಗುತ್ತದೆ. ಇದು ಒಂದು ಭಾಷೆಯನ್ನು ಮಾತನಾಡುವ ಸಕಲರಿಗೂ ಅರ್ಥವಾಗುವ ಗುರಿಯನ್ನು ಹೊಂದಿದೆ. ಇಂಥ ಒಂದು ರೂಪು ನಿರ್ಮಾಣವಾದಾಗ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳು ಮಾಯವಾಗಿ ಒಂದು ವಿಶಿಷ್ಟರೂಪವೇ ನಿರ್ಮಾಣವಾಗು ತ್ತದೆ. ಗ್ರಂಥಗಳು, ಆಕಾಶವಾಣಿ, ಸಿನೇಮಾ ಮುಂತಾದ ಮಾಧ್ಯಮಗಳು ಬಳಸುವ ಪ್ರಭೇದ ಇದು. ಈ ಪ್ರಭೇದವು ಕನ್ನಡವೇ ಆದರೂ ಅದು ಪ್ರತಿಯೊಂದು ಪ್ರಭೇದಕ್ಕಿಂತಲೂ ಭಿನ್ನವಾಗಿದ್ದು. ಅದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅದನ್ನು ಮತ್ತೆ ಅಭ್ಯಸಿಸಬೇಕಾಗುತ್ತದೆ. ಜಗತ್ತಿನ ಪ್ರತಿಭಾಷೆಯ ಪರಿಸ್ಥಿತಿಯೂ ಸಾಮಾನ್ಯ ವಾಗಿ ಇದೇ.

ಸಾಮಾನ್ಯ ಸಂಪರ್ಕ ಸಾಧನವನ್ನು ಖಚಿತವಾಗಿ ಮಾಡುವ ಗುರಿಯುಳ್ಳ ಈ ಪ್ರಮಾಣಭಾಷೆಯಲ್ಲಿ ವಿವಿಧ ಪ್ರಾದೇಶಿಕ, ಸಾಮಾಜಿಕ ಪ್ರಭೇದಗಳು ಮಾಯವಾಗು ತ್ತವೆ ಎಂದಾಗ, ಆಯಾ ಪ್ರಭೇದದ ವಿಶಿಷ್ಟ ಪ್ರಯೋಗಗಳೂ. ಗಡಸೂ ಮಾಯವಾಗುತ್ತವೆ ಎಂಬುದೂ ಅಷ್ಟೇ ಸತ್ಯ. ಆಯಾ ಪ್ರಭೇದದ ವಿಶಿಷ್ಟ ಶಕ್ತಿ ಯನ್ನು ಗಮನದಲ್ಲಿಟ್ಟುಕೊಂಡು. ಪ್ರಮಾಣಭೂತಭಾಷೆಯನ್ನು ಅವಲೋಕಿಸಿದಾಗ ಅದು ಸಪ್ಪೆಯೆನಿಸುತ್ತದೆ. ಇಂಥ ಪ್ರಮಾಣ ಭಾಷೆಯನ್ನೇ ಬಳಸಿದ ಕೃತಿಗಳಿಗಿಂತ ಆಯಾ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಮೆರೆದ ಕೃತಿಗಳು ಹೆಚ್ಚು ಸತ್ವಶಾಲಿಯಾಗುತ್ತವೆ. ಹಿರಿಯ ಕೃತಿಗಳ ಒಳಗುಟ್ಟುಗಳಲ್ಲಿ ಇದೂ ಒಂದು. ಈ ಸಂಗತಿಯನ್ನರಿತು ಪ್ರಾದೇ ಶಿಕ ವೈಶಿಷ್ಟ್ಯಗಳನ್ನು ಬಳಸಿಕೊಂಡವರು ಮಹಾಕವಿಗಳಾದರು. ನಮ್ಮ ಸಾಹಿತ್ಯದಲ್ಲಿ ಬರುವ ಮಾರ್ಗ ಹಾಗೂ ದೇಶಿ. ಪ್ರಮಾಣಭಾಷೆ ಹಾಗೂ ಪ್ರಾದೇಶಿಕ ಪ್ರಭೇದಗಳಿಗೆ ಸಂವಾದಿ ಪದಗಳು. ಮಾರ್ಗಪದ್ಧತಿಯಲ್ಲಿ ರಚಿತವಾದ ಕೃತಿಗಳು ಪ್ರೌಢ ಕೃತಿಗಳಾಗಿ ಮನ್ನಣೆ ಪಡೆದಿರಬಹುದು. ಆದರೆ ದೇಶಿ ಪ್ರಾಚುರ್ಯ ಪಡೆದ ಕೃತಿಗಳು ಮಹಾ ಕಾವ್ಯಗಳಾದವು. ಔಚಿತ್ಯವರಿತು ದೇಶಿಯನ್ನು ಬಳಸಿದ ಪಂಪಕನ್ನಡದ ಶ್ರೇಷ್ಠಕವಿ ಯಾದ, ಇಂಥ ಪ್ರಾದೇಶಿಕ ಪ್ರಭೇದವನ್ನು ಬಳಸುವ ಕವಿ ಜನಜೀವನಕ್ಕೆ ಸಮೀಪ

ವಾಗಿದ್ದಾನೆ ಎಂದು ಅರ್ಥ. ಜನಜೀವನದಿಂದ ದೂರವಾಗಿ, ಅವರ ಜೀವನದೊಡನೆ ಸ್ಪಂದಿಸಲಾರದ ಕವಿ ಜನಮನವನ್ನು ಸೂರೆಗೊಳ್ಳುವ ಕಾವ್ಯ ರಚಿಸಲಾರ. ಜನಜೀವನ ವನ್ನು ಸಮೀಪದಿಂದ ನಿರೀಕ್ಷಿಸಿ, ಅದನ್ನು ತನ್ನ ಮಾಧ್ಯಮದಲ್ಲಿ ಅಭಿವ್ಯಕ್ತಿಗೊಳಿಸುವ ಕವಿ ಅವರ ಭಾಷಾಪ್ರಭೇದವನ್ನು ಬಳಸಿದರೆ, ಅವನ ಅಭಿವ್ಯಕ್ತಿಗೊಂದು ಗಡಸು ಬಂದು, ಆ ಕೃತಿ ಶಕ್ತಿಶಾಲಿಯಾಗುತ್ತದೆ. ಇದನ್ನೇ ನಾವು ಪಂಪಭಾರತ, ಕುಮಾರ ವ್ಯಾಸಭಾರತ, ಶರಣರ ವಚನ ಮುಂತಾದ ಕೃತಿಗಳಲ್ಲಿ ಕಾಣುವುದು. ಈ ಕಾರಣಕ್ಕಾ ಗಿಯೇ ಅವು ಶ್ರೇಷ್ಠ ಕೃತಿಗಳಾಗಿರುವವು.

ಭಾಷೆಯ ಸೂತ್ರವನ್ನೇ ಹಿಡಿದ ವೈಯಾಕರಣರಿಗೂ ಇದು ಅನ್ವಯಿಸುತ್ತದೆ. ಜನರಾಡುವ ಭಾಷೆಯನ್ನು ಸಮೀಪದಿಂದ ಅವಲೋಕಿಸಿ, ಅವರು ಬಳಸುವ ರೂಪ ಗಳನ್ನೆಲ್ಲ ಆತ್ಮಸಾತ್ ಮಾಡಿಕೊಂಡ ವೈಯಾಕರಣ ಶ್ರೇಷ್ಠವ್ಯಾಕರಣ ರಚನೆ ಮಾಡಬಲ್ಲ. ಪಾಣಿನಿಯ ಅಷ್ಟಾಧ್ಯಾಯಿಯನ್ನು ಅವಲೋಕಿಸಿದರೆ ಈ ಮಾತು ಚನ್ನಾಗಿ ಮನದಟ್ಟಾ ಗುತ್ತದೆ. ಪಾಣಿನಿ ಸಂಸ್ಕೃತಭಾಷೆ ಬಳಕೆಯಲ್ಲಿರುವ ಸಮಗ್ರ ಭಾರತದ ಪರ್ಯಟನ ಮಾಡಿರಬೇಕು. ಅವರ ಭಾಷೆಯನ್ನು ಅದರ ಸಕಲಪ್ರಭೇದಗಳೊಡನೆ ತಿಳಿದು ಕೊಂಡಿರಬೇಕು. ಆತ ಹೀಗೆ ಅದನ್ನೆಲ್ಲ ತಿಳಿದುಕೊಂಡಿದ್ದನೆನ್ನಲು ಅಷ್ಟಾಧ್ಯಾಯಿಯಲ್ಲಿ ಬರುವ ಆಗಿನ ಕಾಲದ ಭಾರತದ ಜನಜೀವನದ ಉಲ್ಲೇಖಗಳೇ ಸಾಕ್ಷಿ. ಅಲ್ಲಿ ಅಪಾರ ಸಾಮಗ್ರಿಯಿದೆ. ಅವನ ಶಕ್ತಿಯೂ ಅಪಾರ. ಇಂಥ ಜ್ಞಾನದ ಮಟ್ಟ ಏಕಸ್ಥಾನಿಕ ವಾಗಿ ನಿರ್ಮಾಣವಾಗಲು ಸಾಧ್ಯವಿಲ್ಲ.

ಇದೇರೀತಿ ಕನ್ನಡದ ಶ್ರೇಷ್ಠ ವೈಯಾಕರಣ ಕೇಶಿರಾಜನೂ ಜನರಾಡುವ ಮಾತಿನ ಅತಿ ಸಮೀಪ ಜ್ಞಾನ ಹೊಂದಿದ್ದನೆನ್ನುವುದು ಅವನ ಶಬ್ದಮಣಿದರ್ಪಣ ದಿಂದ ವಿದಿತ. ತನ್ನ ಸಮಕಾಲೀನ ಹಾಗೂ ಹಿಂದಿನ ಕಾಲದ ಕೃತಿಗಳನ್ನೆಲ್ಲ ಅಭ್ಯಸಿಸಿ, ಮೂಲಸಾಮಗ್ರಿಯನ್ನು ಪಡೆದುಕೊಂಡಿದ್ದ ಕೇಶಿರಾಜ. ತನ್ನ ಸುತ್ತಮುತ್ತಲಿನ ಜನರು ಬಳಸುವ ಪ್ರಯೋಗಗಳನ್ನು ಅತಿ ಸೂಕ್ಷ್ಮವಾಗಿ ಗಮನಿಸಿದ್ದ. ಅವರು ಪಕಾರವನ್ನು ಹಕಾರವನ್ನಾಗಿ ಉಚ್ಚರಿಸುವುದು, ಲಕಾರಾಂತ ಶಬ್ದಗಳನ್ನು ಳಕಾರಾಂತ ವಾಗಿ ಉಚ್ಚರಿಸುವುದು ಇವೆಲ್ಲ ಅವನ ಗಮನಕ್ಕೆ ಬಂದಿದ್ದವು. ಹೀಗಾಗಿ ಹಿಂದಿನ ವ್ಯಾಕರಣ ಪರಂಪರೆಗೆ ಭಿನ್ನವಾಗಿ, ಕವಿಕೃತಿಗಳೊಡನೆ ಅಂದಿನ ಜನಬಳಕೆಯ ಪ್ರಯೋಗ ಗಳಿಗೂ ಮನ್ನಣೆಯಿತ್ತು ವ್ಯಾಕರಣ ರಚಿಸಿದ. ಇವೆಲ್ಲ ಕಾರಣಗಳಿಂದ ಶಬ್ದಮಣಿ ದರ್ಪಣ ಉಳಿದೆಲ್ಲ ವ್ಯಾಕರಣಗಳಿಗಿಂತ ಹೆಚ್ಚು ಜನಪ್ರಿಯ ಕೃತಿಯಾಗಿದೆ. ಕೇಶಿರಾಜ ಜನತೆಯ ವೈಯಾಕರಣನಾದ.

ಕನ್ನಡದಲ್ಲಿ ಕವಿರಾಜಮಾರ್ಗಕಾರನಿಗಿಂತ ಹಿಂದಿನಿಂದಲೂ ಕಂಡುಬರುತ್ತಿದ್ದ ಈ ವೈವಿಧ್ಯ. ಕವಿರಾಜಮಾರ್ಗಕಾರನ ಗಮನಕ್ಕೂ ಬಂದಿತ್ತು. "ಪಾಸುಗಿಯುಮಱಿಯಲಾಱದೆ ಬೇಸಱುಗುಂ ದೇಶಿ ಬೇಱೆವೇಱಪ್ಪುದಱಿಂ" ಎಂದು ಹೇಳಿದ್ದಾನೆ. ಆಗ ಉತ್ತರ ಮಾರ್ಗ, ದಕ್ಷಿಣ ಮಾರ್ಗ, ಉತ್ತರೋತ್ತರ ಮಾರ್ಗಗಳೆಂಬ ಭಿನ್ನತೆಗಳಿದ್ದವು. ಅವು ಮುಂದೆ ಪಂಪನ ಕಾಲದಲ್ಲಿಯೂ ಇದ್ದವು. ಇಂಥ ಈ ವೈವಿಧ್ಯ ಹೆಚ್ಚುತ್ತ ಹೋಗುವುದೇ ಹೊರತು ಕಡಿಮೆಯಾಗುವುದಿಲ್ಲ. ಇರುವುದನ್ನು ಒಪ್ಪಿಕೊಂಡು ಸಾಗಬೇಕು ಅಷ್ಟೇ.

• •

ಭಾಷಾಪ್ರಭೇದದ ವಿಶ್ಲೇಷಣವಿಧಾನ

• ವಿಲ್ಯಂ ಮಾಡ್ತ

೦.೧ ಸಾಮಾನ್ಯವಾಗಿ ಭಾಷೆಗೆ ಶ್ರಾವಣ ಮತ್ತು ಚಾಕ್ಷುಷಗಳೆಂಬ ಎರಡು ರೂಪಗಳೆಂದು ಹೇಳುವುದು ರೂಢಿ. ವೈಜ್ಞಾನಿಕ ದೃಷ್ಟಿಯಿಂದ ಭಾಷೆಯನ್ನು ಗಮನಿಸಿದಾಗ ವಿಶೇಷವಾಗಿ ಶ್ರಾವಣರೂಪಕ್ಕೆ ಪ್ರಾದೇಶಿಕ (Regional) ಅಂತೆಯೇ ಸಾಮಾಜಿಕ (Social) ಪ್ರಭೇದಗಳೂ ಉಂಟು. ಹೀಗೆ ಕನ್ನಡದಲ್ಲಿ ಹವ್ಯಕ ಕನ್ನಡ, ಗೌಡ ಕನ್ನಡ, ಹಾಲಕ್ಕಿ ಕನ್ನಡ ಮೊದಲಾದ ಸಾಮಾಜಿಕ ಪ್ರಭೇದಗಳೊಂದಿಗೆ ಮಂಗಳೂರು ಕನ್ನಡ, ಧಾರವಾಡ ಕನ್ನಡ, ಮೈಸೂರು ಕನ್ನಡಾದಿ ಪ್ರಾದೇಶಿಕ ಪ್ರಭೇದಗಳೂ ಇವೆ.

೦.೨ ಭಾಷಾವಿಜ್ಞಾನ, ಈ ಭಾಷಾಪ್ರಭೇದಗಳನ್ನು ವಿಶ್ಲೇಷಿಸಿ ಅವುಗಳ ಧ್ವನಿಮಾತ್ಮಕ(Phonological) ಮತ್ತು ವ್ಯಾಕರಣಾತ್ಮಕ (Grammatical)ವ್ಯವಸ್ಥೆಗಳನ್ನು ಹುಡುಕಿ ವಿವರಿಸುತ್ತದೆ. ಪ್ರಸ್ತುತದಲ್ಲಿ ಅದು ಭಾಷೆಯ ಪ್ರಾದೇಶಿಕ ಪ್ರಭೇದಗಳನ್ನು ವಿಶ್ಲೇಷಿಸುವ ವಿಧಾನವನ್ನು ಮಾತ್ರ ವಿವರಿಸಲಾಗಿದೆ[೧].

೦.೩ ಭಾಷೆಯ ಯಾವ ಪ್ರಾದೇಶಿಕಪ್ರಭೇದವಾದರೂ ಸರಿಯೇ. ಅದು ಮುಖ್ಯವಾಗಿ ಆಯಾ ಪ್ರದೇಶದ ಹಲವಾರು ಸಮಾಜಗಳ ಜನರು ನಿರ್ದಿಷ್ಟ ಕಾಲದಲ್ಲಿ ಆಡುವ ಮಾತಿನ ಅರ್ಥಾತ್ ವ್ಯಕ್ತಿಭಾಷೆ (Idiolect) ಗಳ ಅಮೂರ್ತರೂಪ. ಈ ಅಮೂರ್ತರೂಪವನ್ನು ಪ್ರಾದೇಶಿಕ ಉಪಭಾಷೆ (Regional dialect) ಎಂದು ಕರೆಯುವುದು

---

೧ ಭಾಷೆಯ ಸಾಮಾಜಿಕಪ್ರಭೇದದ ವಿಶ್ಲೇಷಣೆಯ ವಿಧಾನ ಪ್ರಾದೇಶಿಕಪ್ರಭೇದವನ್ನು ವಿಶ್ಲೇಷಿಸುವ ವಿಧಾನಕ್ಕಿಂತ ತೀರ ಭಿನ್ನವಲ್ಲ; ಯಾಕೆಂದರೆ, ಸಮಾಜವನ್ನು ಬಿಟ್ಟು ಭಾಷಾಪ್ರದೇಶವಿಲ್ಲ; ಅಂತೆಯೇ ಭಾಷಾಪ್ರದೇಶವನ್ನು ಬಿಟ್ಟು ಸಮಾಜವಿಲ್ಲ; ಅಷ್ಟೇ ಅಲ್ಲದೆ ಅವೆರಡೂ ಕಾಲ ಪರಿಮಿತಿಗೆ ಒಳಗಾಗಿಯೇ ಇರುತ್ತವೆ. ಆದರೆ, ಸಾಮಾಜಿಕ ಪ್ರಭೇದದ ವಿಶ್ಲೇಷಣೆ ಮಾಡುವಲ್ಲಿ ಒಂದೇ ಸಮಾಜದ ಹಲವಾರು ಬಾತಮಿದಾರ(Informant)ರನ್ನು ಹಲವಾರು ಪ್ರದೇಶಗಳಿಂದ ಆರಿಸಿ ಸಂಗ್ರಾಹಿತ ದತ್ತದ ವಿಶ್ಲೇಷಣೆ ಮಾಡಿ ಅದರಿಂದ ಪ್ರಾದೇಶಿಕ ಭಿನ್ನತೆಗಳನ್ನು ಕಳೆಯಬೇಕಾಗುತ್ತದೆ.

ಭಾಷಾವಿಜ್ಞಾನದ ಒಂದು ರೂಢಿ. ಭಾಷೆಯಂತೆ ಉಪಭಾಷೆಯೂ ಹಲವಾರು ವ್ಯವಸ್ಥೆ(System)ಗಳನ್ನೊಳಗೊಂಡ ಒಂದು ಬೃಹತ್ ವ್ಯವಸ್ಥೆ. ಇಲ್ಲಿ ಐದು ಉಪ ವ್ಯವಸ್ಥೆ(Sub-system)ಗಳನ್ನು ಗುರುತಿಸಬಹುದು : [೨]

೧. ಧ್ವನಿ ವ್ಯವಸ್ಥೆ (Phonetic system), ೨. ಧ್ವನಿಮಾ ವ್ಯವಸ್ಥೆ (Phonemic system), ೩. ಆಕೃತಿಮಾ ವ್ಯವಸ್ಥೆ (Morphological system) ೪. ವಾಕ್ಯ ವ್ಯವಸ್ಥೆ (Syntactic system), ೫. ಅರ್ಥ ವ್ಯವಸ್ಥೆ (Semantic system).

೦.೪ ಭಾಷೆಯ ವ್ಯವಸ್ಥೆಗಳಲ್ಲಿ ಧ್ವನಿ ವ್ಯವಸ್ಥೆ ಮತ್ತು ಅರ್ಥ ವ್ಯವಸ್ಥೆಗಳು ಭಾಷೆಯ ಮೇಲ್ಮೈಗೆ (Periphery) ಸೇರಿದವುಗಳಾದರೆ ಉಳಿದವು ಅದರ ಒಳಮೈ (Core)ಗೆ ಸಂಬಂಧಪಟ್ಟವುಗಳು. ಭಾಷಾವೈಜ್ಞಾನಿಕ ವಿಶ್ಲೇಷಣೆಗಳಲ್ಲಿ ತಿರುಳು, ಅರ್ಥಾತ್, ಒಳಮೈಗೆ ಸೇರಿದ ವ್ಯವಸ್ಥೆಗಳಿಗೆ ನೇರವಾಗಿ ಗಮನವನ್ನೀಯುತ್ತಾರೆ. ಉಳಿದವುಗಳು ಅವುಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸೇರಿಬಿಡುತ್ತವೆ.[೩]

೦.೫ ಭಾಷಾ ವಿಶ್ಲೇಷಣೆ ನಡೆಯಬೇಕಾದರೆ ಎರಡು ತರಹದ ವ್ಯಕ್ತಿಗಳ ಅಗತ್ಯ ಇದೆ : ಭಾಷಾಕ್ಷೇತ್ರ ವಿಜ್ಞಾನಿ (Field linguist) ಮತ್ತು ಬಾತಮಿದಾರ (Information).[೪] ಈ ಎರಡೂ ವ್ಯಕ್ತಿಗಳು ಭಾಷಾದತ್ತ (Linguistic data) ಸಂಗ್ರ

---

೨. ಸಿ. ಎಫ್. ಹೊಕೆಟ್ ಎಂಬಾತ ಭಾಷೆಯ ಉಪವ್ಯವಸ್ಥೆಗಳನ್ನು ಕೆಳಗಿನ ರೀತಿಯಲ್ಲಿ ಗುರುತಿಸಿದ್ದಾನೆ : ೧. ವ್ಯಾಕರಣ ವ್ಯವಸ್ಥೆ, ೨. ಧ್ವನಿಮಾ ವ್ಯವಸ್ಥೆ, ೩. ಆಕೃತಿ-ಧ್ವನಿಮಾ (Morpho phonemic) ವ್ಯವಸ್ಥೆ. ೪. ಅರ್ಥ ವ್ಯವಸ್ಥೆ. ೫. ಧ್ವನಿ ವ್ಯವಸ್ಥೆ (C. F. Hockett, *A Course in Modern Linguistics*, 1965, pp. 137—38). ನನ್ನ ಅಭಿಪ್ರಾಯದ ಪ್ರಕಾರ ಆಕೃತಿ–ಧ್ವನಿಮಾ ಭಾಷೆಯ ಒಂದು ಸ್ವತಂತ್ರ ವ್ಯವಸ್ಥೆಯಲ್ಲ. ಅದು ಆಕೃತಿಮಾಗಳಲ್ಲಿ ಧ್ವನಿಮಾತ್ಮಕ ಬದಲಾವಣೆಗಳಷ್ಟೆ. ಭಾಷಾ ವಿಶ್ಲೇಷಣೆಯ ನಿರೂಪಣೆಯಲ್ಲಿ ಆ ಎಲ್ಲ ಬದಲಾವಣೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಜೋಡಿಸಿ ಒಂದು ಪ್ರತ್ಯೇಕ ಅಧ್ಯಾಯದಲ್ಲಿ ತೋರಿಸಬಹುದು. ಆಗ ಅದು ನಿರೂಪಣಾ ತಂತ್ರದ ಒಂದು ವ್ಯವಸ್ಥೆಯೇ ಹೊರತು ಭಾಷೆಯ ಸ್ವತಂತ್ರ ವ್ಯವಸ್ಥೆಯಲ್ಲವೆಂಬುದು ನನ್ನ ಅಭಿಪ್ರಾಯ. ಆಕೃತಿಮಾ ಮತ್ತು ವಾಕ್ಯ ವ್ಯವಸ್ಥೆಗಳನ್ನು ವ್ಯಾಕರಣ ವ್ಯವಸ್ಥೆಯಲ್ಲಿ ಸೇರಿಸಬಹುದು.

೩. ಈ ಮಾತು ಪ್ರಸ್ತುತದಲ್ಲಿ ಬಳಸಿಕೊಂಡ ರಚನಾತ್ಮಕ ವಿಧಾನ (Structural method)ಕ್ಕೆ ಮಾತ್ರ ಅನ್ವಯಿಸುತ್ತದೆ ವಿನಹ, ರೂಪಾಂತರ – ಉತ್ಪಾದಕ (Transformational-Generative) ಮೊದಲಾದ ಇತರ ವಿಧಾನಗಳಿಗೆ ಅನ್ವಯಿಸುವುದಿಲ್ಲ.

೪. ಭಾಷಾಕ್ಷೇತ್ರವಿಜ್ಞಾನಿ ಮತ್ತು ಬಾತಮಿದಾರರ ಅರ್ಹತೆಗಳ ಬಗೆಗೆ ಇಲ್ಲಿ ಪ್ರಸ್ತಾಪ ಮಾಡಿಲ್ಲ. ಅವುಗಳನ್ನು ಕುರಿತು ನೋಡಿ : William J. Sammarin, *A Guide to Linguistic Field Work*, 1967. pp. 7-41.

ಹಣೆಯಲ್ಲಿ ಪರಸ್ಪರ ಸಹಕಾರಭಾವದಿಂದ ದುಡಿಯಬೇಕಾಗುತ್ತದೆ. ಈ ಕಾರ್ಯಕ್ಕೋಸ್ಕರ ಭಾಷಾಕ್ಷೇತ್ರವಿಜ್ಞಾನಿ ಭಾಷಾಕ್ಷೇತ್ರ(Linguistic field)ಕ್ಕೆ ಹೋಗಬಹುದು ಅಥವಾ ಬಾತಮಿದಾರನ/ರನ್ನು ತಾನಿದ್ದಲ್ಲಿಗೆ ಆಮಂತ್ರಿಸಬಹುದು. ಖಚಿತ ಉದ್ದೇಶವನ್ನಿಟ್ಟುಕೊಂಡು ಒಂದು ಭಾಷೆಯ ಅಥವಾ ಅದರ ಪ್ರಭೇದದ ಕ್ಷೇತ್ರಕಾರ್ಯ (Field work) ಮಾಡುವಾತನೇ ಭಾಷಾಕ್ಷೇತ್ರವಿಜ್ಞಾನಿ. ಭಾಷಾಕ್ಷೇತ್ರ ಕಾರ್ಯವೆಂದರೆ ಒಂದು ಕ್ಷೇತ್ರ ಅರ್ಥಾತ್ ಪ್ರದೇಶದಲ್ಲಿರುವ ಜನರ ಭಾಷಾಪ್ರಭೇದಗಳ ವಿಶ್ಲೇಷಣೆ ಮಾಡುವುದು. ವಿಶ್ಲೇಷಣಾ ಸಾಮಗ್ರಿಯನ್ನು ಕೊಡುವಾತನೇ ಬಾತಮಿದಾರ. ಇವರಿಬ್ಬರ ಈ ಕಾರ್ಯವಿಧಾನವನ್ನು ನಿರೂಪಕ ವಿಧಾನ (Informant method) ಎಂದು ಕರೆಯುತ್ತಾರೆ. ಇಲ್ಲಿ ಭಾಷಾಕ್ಷೇತ್ರವಿಜ್ಞಾನಿ ಮತ್ತು ಬಾತಮಿದಾರರಲ್ಲಿ ಆತ್ಮೀಯ ಸಂಪರ್ಕಕ್ಕೆ ಮಹತ್ವವಿರುವುದರಿಂದ ಈ ವಿಧಾನವನ್ನು ಸಂಪರ್ಕ ವಿಧಾನ (Contact method) ಎಂದೂ ಕರೆಯುವುದುಂಟು.

೦.೬ ಭಾಷಾಕ್ಷೇತ್ರವಿಜ್ಞಾನಿ ಎರಡು ರೀತಿಯಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಮೊದಲನೆಯದಾಗಿ, ಅನ್ವೇಷಕ (Investigator) ಆಗಿ ಬಾತಮಿದಾರನ ಮೂಲಕ ಭಾಷಾದತ್ತ ಸಂಗ್ರಹಣೆ (Gathering) ಯ ಕಾರ್ಯಮಾಡಬೇಕು. ಎರಡನೆಯದಾಗಿ, ವಿಶ್ಲೇಷಕ (Analyst) ಆಗಿ ಸಂಗ್ರಹಿತ ದತ್ತದ ವಿಶ್ಲೇಷಣೆಯನ್ನು ಮಾಡಬೇಕು.

೦.೭ ಭಾಷಾದತ್ತವನ್ನು ಸಂಗ್ರಹಿಸುವಲ್ಲಿ ಅನ್ವೇಷಕನು ಬಹಳ ಜಾಗರೂಕತೆಯಿಂದ ಬಾತಮಿದಾರರೊಡನ ಕೆಲಸ ಮಾಡಬೇಕಾಗುತ್ತದೆ. ಮೊದಲನೆಯದಾಗಿ ಸಂಗ್ರಹಣೆಗೆ ಅನುಕೂಲವಾಗುವ ರೀತಿಯಲ್ಲಿ ಆತನು ಒಂದು ಪ್ರಶ್ನಾವಳಿ (Questionnaire) ಯನ್ನು ಸಿದ್ಧಗೊಳಿಸಬೇಕು. ಈ ಪ್ರಶ್ನಾವಳಿ ಸಂಪರ್ಕ ಭಾಷೆಯಲ್ಲಿ ಬರೆದಿರಬೇಕು. ಸಂಪರ್ಕಭಾಷೆ ಅಸಾಧ್ಯವಾದಲ್ಲಿ ಚಿತ್ರ, ಕೈಸನ್ನೆ ಮೊದಲಾದ ಇತರ ಸಾಧನಗಳ (Aids) ಮೂಲಕ ಬಾತಮಿದಾರನಿಂದ ಅನ್ವೇಷಕನು ದತ್ತಸಂಗ್ರಹಣೆ ಮಾಡಬೇಕಾಗುತ್ತದೆ. ವಿಶ್ಲೇಷಣೆಗೋಸ್ಕರ ದತ್ತಸಂಗ್ರಹವನ್ನು ದೀರ್ಘಕಾಲ ಉಳಿಸಿಕೊಳ್ಳಲು ಅನುಕೂಲವಾಗುವಂತೆ ಅಂತೆಯೇ **ಉಚ್ಚಾರಕ್ಕೆ ಅನುಗುಣವಾಗಿ ಖಚಿತವಾಗಿ ಅದನ್ನು ಬರೆದಿಟ್ಟುಕೊಳ್ಳಬೇಕು.** ಈ ಬರೆಹವನ್ನು ದತ್ತಾಭಿಲೇಖ (Data recording)ಎಂದು ಕರೆಯುವರು.

೦.೮ ದತ್ತಾಭಿಲೇಖಕ್ಕೆ ಧ್ವನಿಲಿಪಿ(Phonetic script)ಯೇ ಅನುಕೂಲವಾದುದರಿಂದ ಅದನ್ನೇ ಬಳಸತಕ್ಕದ್ದು. ಉಚ್ಚರಿಸಿದಂತೆ ಬರೆದಿಟ್ಟುಕೊಳ್ಳುವುದೇ ಧ್ವನಿಲಿಪಿ. ಈ ಕಾರ್ಯಕ್ಕೆ ಯೋಜಿಸಿದ ಧ್ವನಿಸಂಕೇತ (Phonetic symbol) ಗಳೇ

ಇವೆ. * ಉಚ್ಚಾರದ ಸೂಕ್ಷ್ಮಾಂಶಗಳನ್ನೆಲ್ಲ ಒಳಗೊಳ್ಳುವಂತೆ ಬಳಸಿಕೊಂಡರೆ ಆಗ ಅವನ್ನು ಸೂಕ್ಷ್ಮ ಧ್ವನಿಲಿಪಿ (Narrow phonetic script) ಎನ್ನುವರು. ಕೇವಲ ಸ್ಥೂಲಾಂಶಗಳನ್ನಷ್ಟೇ ಸಂಕೇತಿಸುವಂತೆ ಬಳಸಿಕೊಂಡರೆ ಅವನ್ನು ಸ್ಥೂಲ ಧ್ವನಿಲಿಪಿ (Broad phonetic script) ಎನ್ನುವರು :

೧. [na:nu na:ḷe barutte:ne] (ನಾನು ನಾಳೆ ಬರುತ್ತೇನೆ) : ಇಲ್ಲಿ ವಾಕ್ಯ ಸ್ಥೂಲಧ್ವನಿಲಿಪಿಯಲ್ಲಿದೆ.

೨. [# na:ˌnuˌ² + na:ˌˌḷeˌ³ + baˌrutˌte:ˌne¹ #] (ನಾನು ನಾಳೆ ಬರುತ್ತೇನೆ) : ಇಲ್ಲಿ ಅದು ಸೂಕ್ಷ್ಮಧ್ವನಿಲಿಪಿಯಲ್ಲಿದೆ.

೦.೯ ಸಂಗ್ರಹಿತದತ್ತವು **ಖಚಿತ** ಮತ್ತು **ಸಂಪೂರ್ಣ**ವೆಂಬುದಾಗಿ ವಿಶ್ಲೇಷಕ ಗ್ರಹಿಸಿಕೊಳ್ಳಬೇಕು. ಇದು ಅನಿವಾರ್ಯ. ಹೀಗೆ ಗ್ರಹಿಸಿಕೊಳ್ಳದಿದ್ದರೆ ಸಂಗ್ರಹ ಕಾರ್ಯ ಮುಗಿಯುವಂತಿಲ್ಲ. ಅನ್ವೇಷಕನು ಬಹುಮಟ್ಟಿಗೆ ತೃಪ್ತಿಯಾಗುವತನಕ, ತನ್ನ ಹಿಂದಿನ ಅನುಭವವನ್ನು ಹೊಂದಿಕೊಂಡು ಇಂತಹ ನಿರ್ಧಾರಕ್ಕೆ ಬರಬೇಕಾಗುತ್ತದೆ. ಇಲ್ಲಿಂದ ಮುಂದೆ ವಿವಿಧ ಭಾಷಾ ವ್ಯವಸ್ಥೆಗಳ ವಿಶ್ಲೇಷಣೆ ನಡೆಯುತ್ತದೆ.

೧.೦ ಧ್ವನಿಮಾ ವಿಶ್ಲೇಷಣೆ :

೧.೧ ಧ್ವನಿಲಿಪಿ ರೂಪದಲ್ಲಿ ಸಂಗ್ರಹಿತ ದತ್ತದ ಸಹಾಯದಿಂದ ಒಂದು ಭಾಷೆಯ ಅಥವಾ ಅದರ ಪ್ರಭೇದದ ಧ್ವನಿಮಾವ್ಯವಸ್ಥೆಯನ್ನು ಕಂಡು ಹುಡುಕುವುದೇ ಧ್ವನಿಮಾವಿಶ್ಲೇಷಣೆ (Phonological analysis)ಯ ಗುರಿ. ಈ ಗುರಿಯನ್ನು ಸಾಧಿಸುವಲ್ಲಿ ಪ್ರಥಮ ಹೆಜ್ಜೆಯೆಂದರೆ **ಧ್ವನಿಪಟ್ಟಿ (Phonetic chart)ಯ ಸಿದ್ಧತೆ.** ದತ್ತದಲ್ಲಿ ಬಂದ ಧ್ವನಿಗಳೆಲ್ಲವನ್ನೂ, ಧ್ವನಿವಿಜ್ಞಾನಿಗಳು ಸಿದ್ಧಗೊಳಿಸಿದ ಧ್ವನಿಪಟ್ಟಿಗೆ ಅನುಗುಣವಾಗಿ ಅರ್ಥಾತ್ ಧ್ವನಿಗಳ ಉಚ್ಚರಣಾ ಸಾಮ್ಯತೆ(Phonetic relation)ಗಳಿಗೆ ಅನುಗುಣವಾಗಿ ಕ್ರಮಬದ್ಧ ರೀತಿಯಲ್ಲಿ ಸಂಯೋಜಿಸಿದಾಗ ಆ ಧ್ವನಿಗಳ ಪಟ್ಟಿಯೊಂದು ತಯಾರಾಗುತ್ತದೆ. ಈ ಪಟ್ಟಿಯಿಂದಾಗಿ ಯಾವ ಯಾವ ಧ್ವನಿಗಳು ಯಾವ ಯಾವ ಧ್ವನಿಗಳೊಂದಿಗೆ ಎಷ್ಟೆಷ್ಟು ಸಾಮ್ಯತೆಯನ್ನು ಹೊಂದಿವೆಯೆಂಬುದನ್ನು ಖಚಿತವಾಗಿ ತಿಳಿದುಕೊಳ್ಳಬಹುದು. ಉದಾಹರಣೆಯಾಗಿ ಧ್ವನಿಲಿಪಿಯಲ್ಲಿ ಬರೆದ ಭಾಷಾ ದತ್ತವನ್ನು ಗಮನಿಸಿ :

* ಅಂತರ್ರಾಷ್ಟ್ರೀಯ ಧ್ವನಿಲಿಪಿ (International Phonetic Alphabet (IPA) ಗಣ್ಯಸ್ಥಾನವನ್ನು ಪಡೆದಿದ್ದರೂ ಧ್ವನಿವಿಜ್ಞಾನಿ(Phonetician)ಗಳು ಅವನ್ನು ಸೌಲಭ್ಯಕ್ಕೋಸ್ಕರ ಸಂದರ್ಭಕ್ಕನುಗುಣವಾಗಿ ಬದಲಾಯಿಸಿಕೊಂಡಿದ್ದರೆಂಬುದನ್ನು ಮರೆಯುವಂತಿಲ್ಲ. ಹೀಗೆ ಬದಲಾಯಿಸಿಕೊಂಡ ಧ್ವನಿಲಿಪಿ ಸಂಕೇತಗಳನ್ನು ವಿವಿಧ ಧ್ವನಿವಿಜ್ಞಾನಿಗಳ ಪುಸ್ತಕಗಳಿಂದ ತಿಳಿದುಕೊಳ್ಳಬಹುದು. IPA ಲಿಪಿಸಂಕೇತ ಪಟ್ಟಿಗೋಸ್ಕರ ನೋಡಿ : Robert A Hall (Jr.), *Introductory Linguistics*, 1976 pp 486-87. ಬದಲಾವಣೆಗೊಂಡ ಧ್ವನಿಸಂಕೇತಮಾಲೆಗೋಸ್ಕರ ನೋಡಿ : ಜೆ.ಎಸ್.ಕುಳ್ಳಿ, ವರ್ಣನಾತ್ಮಕ ಭಾಷಾವಿಜ್ಞಾನ, ೧೯೭೧ ಪು.೪೨,೪೩.

ಧಾರವಾಡ ಕನ್ನಡ : ೬

ಧ್ವನಿಲಿಪಿಯಲ್ಲಿ ಸಂಗ್ರಹಿತ ದತ್ತ :

[hiri] ಹಿರಿ	[haṁsa] ಹಂಸ	[ku:ri] ಕೂರಿ
[maka] ಮಕ 'ಮುಖ'	[kuri] ಕುರಿ	[amma] ಅಮ್ಮ 'ಅಜ್ಜಿ'
[hi:ri] ಹೀರಿ	[saṁse] ಸಂಸೆ 'ಸಂಶಯ	[ka:ri] ಕಾರಿ
[sa:li] ಸಾಲಿ 'ಶಾಲೆ'	[heri] ಹೆರಿ	[siṁha] ಸಿಂಹ
[geri] ಗೆರಿ 'ಗೆರೆ'	[kasa] ಕಸ	[he:ri] ಹೇರಿ
[ma:sa] ಮಾಸ	[keri] ಕೆರಿ 'ಕೆರೆ'	[aṣṭu] ಅಷ್ಟು
[kari] ಕರಿ 'ಕರೆ'	[sa:kṣi] ಸಾಕ್ಷಿ	[na:ma] ನಾಮ 'ಹೆಸರು'
[na:nu] ನಾನು	[huñja] ಹುಂಜ	[a:ni] ಆನಿ 'ಆನೆ'
[saṅgṭa] ಸಂಗ್ಟ 'ಸಂಕಟ'.		

ಧ್ವನಿಪಟ್ಟಿ :

i ಇ	i: ಈ	u ಉ	u: ಊ
e ಎ	e: ಏ	—	—
a ಅ	a: ಆ		

			ṭ ಟ್	j ಜ್	k ಕ್	g ಗ್	
		s ಸ್	ṣ ಷ್				h ಹ್
m ಮ್	ṁ	n ನ್		ñ ಞ್		ṅ ಙ್	
		r ರ್					
		l ಲ್					

೧.೨ ಧ್ವನಿಪಟ್ಟಿ ತಯಾರಿಸಿದ ಬಳಿಕ **ಧ್ವನಿಸಾಮ್ಯತೆಯುಳ್ಳ ಧ್ವನಿಗಳನ್ನು ಜೊತೆಜೊತೆಯಾಗಿ ಪಟ್ಟಿಗೊಳಿಸಬೇಕು.** ಅವು ಸ್ವತಂತ್ರಧ್ವನಿಮಾಗಳಾಗುವ

೬ ಪ್ರಸ್ತುತ ಲೇಖನದಲ್ಲಿ ಉಲ್ಲೇಖಿಸಿದ ದತ್ತವೆಲ್ಲವೂ ಮಾದರಿಗಾಗಿ ಮಾತ್ರ ಡಾ. ಆರ್. ಸಿ. ಹಿರೇಮಠ ಅವರ *The Structure of Kannada* (1961) ಎಂಬ ಗ್ರಂಥದಿಂದ ಆರಿಸಿದುದಾಗಿದೆ. ಧ್ವನಿಗಳನ್ನು [ ] ಎಂಬ ಆವರಣಗಳಲ್ಲಿಯೂ ಧ್ವನಿಮಾಗಳನ್ನು / / ಎಂಬ ವಾಲಿದ ಗೆರೆಗಳ ನಡುವಿನಲ್ಲಿಯೂ ಸೂಚಿಸುವುದು ಭಾಷಾವಿಜ್ಞಾನದ ರೂಢಿ.

ಬಗೆಗೆ ಭಾಷಾವಿಶ್ಲೇಷಕನು ಸಂಶಯುಪಡೆಯುಬಹುದಾದುದರಿಂದ ಅವನ್ನು **ಸಂದಿಗ್ಧ ಧ್ವನಿ** (Suspicious sound)ಗಳೆಂದು ಕರೆಯುುವರು[೭]. ಧ್ವನ್ಯಂಗ (Articulator), ಧ್ವನಿಸ್ಥಾನ (Point of articulation) ಮತ್ತು ಧ್ವನ್ಯುತ್ಪಾದನಾ ರೀತಿ (Manner of articulation) ಇವುಗಳಲ್ಲಿ ಯಾವುದಾದರೂ ಒಂದು ವಿಷಯುದಲ್ಲಿಯೂ ಕೂಡ ಧ್ವನಿಗಳೊಳಗೆ ಸಂಬಂಧವಿದ್ದರೆ ಅವು ಸಂದಿಗ್ಧಧ್ವನಿಗಳೆಂದು ಪರಿಗಣಿಸಲಾಗುತ್ತವೆ. ಉದಾಹರಣೆಗೆ :

[i] ಇ ಮತ್ತು [i:] ಈ	[a] ಅ ಮತ್ತು [a:] ಆ
[e] ಎ ಮತ್ತು [e:] ಏ	[k] ಕ್ ಮತ್ತು [g] ಗ್
	[s] ಸ್ ಮತ್ತು [ṣ] ಷ್
[i] ಇ ಮತ್ತು [e] ಎ	[m] ಮ್ ಮತ್ತು [ṃ]
[u] ಉ ಮತ್ತು [u:] ಊ	[n] ನ್ [ñ] ಞ್ [ṅ] ಙ್

೧.೩ **ಅಸಂದಿಗ್ಧ ಧ್ವನಿಗಳೆಲ್ಲವನ್ನು ಬೇರೊಂದು ಕಡೆಯುಲ್ಲಿ ಕಲೆ ಹಾಕಿಕೊಳ್ಳಬೇಕು.** ಯಾಕೆಂದರೆ ಅವು ಸ್ವತಂತ್ರಧ್ವನಿಮಾಗಳಾಗಿರುವ ಸಂಭವವೇ ಹೆಚ್ಚು. ಅವುಗಳಿಗೆ ಉದಾಹರಣೆ :

[ṭ] ಟ್; [j] ಜ್; [h] ಹ್; [r] ರ್; [l] ಲ್

೧.೪ ಧ್ವನಿಮಾವಿಶ್ಲೇಷಣೆಯುಲ್ಲಿ ಇಲ್ಲಿಯುತನಕ ಕೇವಲ ಪೂರ್ವಸಿದ್ಧತೆಯು ಕೆಲಸ. ಇನ್ನು ನೇರವಾಗಿ ಧ್ವನಿಮಾ ವಿಶ್ಲೇಷಣಾನಿಯುಮಗಳನ್ನು ಅನುಸರಿಸಿ ವಿಶ್ಲೇಷಣಾಕಾರ್ಯ ನಡೆಯುಬೇಕಾಗಿದೆ. ಇಲ್ಲಿ ಮುಖ್ಯವಾಗಿ ಎರಡು ಬಗೆಯು ವಿಧಾನಗಳಿವೆ. ಒಂದು : **ಪ್ರತ್ಯೇಕತಾವಿಧಾನ**(Separating procedure)ಮತ್ತು ಎರಡು: **ಸಂಯೋಜನಾ ವಿಧಾನ** (Uniting procedure). ಪ್ರತ್ಯೇಕತಾವಿಧಾನ ವೈದೃಶ್ಯ ತತ್ತ್ವ(Principle of contrast)ವನ್ನೂ ಸಂಯೋಜನಾವಿಧಾನ ಪೂರಕತತ್ತ್ವ(Principle of complementation)ವನ್ನೂ ಅಳವಡಿಸಿಕೊಳ್ಳುತ್ತವೆ. ಪ್ರತ್ಯೇಕತಾವಿಧಾನದಿಂದ ಧ್ವನಿಸಾಮ್ಯತೆಯುಳ್ಳ ಎರಡು ಧ್ವನಿಗಳನ್ನು ಪ್ರತ್ಯೇಕ ಧ್ವನಿಮಾಗಳನ್ನಾಗಿ ವಿಂಗಡಿಸಿದರೆ ಸಂಯೋಜನಾವಿಧಾನದಿಂದಾಗಿ ಅವನ್ನು ಒಂದೇ ಧ್ವನಿಮಾದ ಉಪಧ್ವನಿ (Allophone) ಅರ್ಥಾತ್ ಉಪಾಂಗ(Submember)ಗಳನ್ನಾಗಿ ಇಟ್ಟುಕೊಳ್ಳಲಾಗುತ್ತದೆ.

೭ ಕೆ.ಎಲ್.ಪೈಕ್ ಎಂಬ ಭಾಷಾವಿಜ್ಞಾನಿ ಸಾಮಾನ್ಯಸಂದಿಗ್ಧ ಧ್ವನಿಗಳ ಒಂದು ಪಟ್ಟಿಯುನ್ನೇ ತಯಾರಿಸಿದ್ದಾನೆ, ಇದನ್ನರಿತುಕೊಳ್ಳುವುದು ಹೊಸ ವಿಶ್ಲೇಷಕರಿಗೆ ಬಹಳ ಅನುಕೂಲ. ನೋಡಿ : K. L. Pike, *Phonemics* (1947), p. 70.

೧.೫ ಧ್ವನಿ ಸಾಮ್ಯತೆಯುಳ್ಳ ಧ್ವನಿಗಳು ಸಾದೃಶ್ಯ (Analogous) ಅಥವಾ ಸಮ (Identical) ಪರಿಸರಗಳಲ್ಲಿ ಬಂದು, ಶಬ್ದಾರ್ಥದಲ್ಲಿ ಭಿನ್ನತೆಯನ್ನುಂಟುಮಾಡಿದರೆ ಅವು ವೈದೃಶ್ಯ ಪ್ರಸಾರದಲ್ಲಿವೆ; ಅವು ನಿಯಮಿತ ಪರಿಸರದಲ್ಲಿ ಬಂದರೆ ಅವು ಪೂರಕ ಪ್ರಸಾರದಲ್ಲಿವೆ ಎಂದು ಹೇಳಲಾಗುವುದು.

೧.೬ ಪ್ರಸ್ತುತದಲ್ಲಿ ಪರಿಸರ(Environment)ದ ಬಗ್ಗೆ ತಿಳಿದುಕೊಳ್ಳುವುದು ಅನಿವಾರ್ಯ. ಪರಿಸರವೆಂದರೆ ಯಾವುದಾದರೊಂದು ಭಾಷಾಘಟಕದ ಪೂರ್ವ ಅಥವಾ / ಮತ್ತು ಪರಸ್ಥಾನಗಳಲ್ಲಿರುವ ಇತರ ಭಾಷಾಘಟಕಗಳು. ಈ ಪರಿಸರಗಳ ಮೊತ್ತವೇ ಆ ಘಟಕದ ಪ್ರಸಾರ (Distribution). ಧ್ವನಿ ಸಾಮ್ಯತೆಯುಳ್ಳ ಧ್ವನಿಗಳು ಒಂದರ ಸ್ಥಾನದಲ್ಲಿ ಇನ್ನೊಂದು ಬರಬಹುದಾದರೆ ಅವುಗಳ ಪರಿಸರವನ್ನು ಅನಿಯಮಿತ (Unconditioned) ಎಂದೂ, ಬರಲಾರವಾದರೆ ಅದನ್ನು ನಿಯಮಿತ (Conditioned) ಎಂದೂ ಕರೆಯಲಾಗುತ್ತದೆ. ಕನ್ನಡದ ಅನುನಾಸಿಕಗಳಲ್ಲಿ ಞ್, ದಂತ್ಯ –ನ್ ಮತ್ತು ವರ್ತ್ಸ್ಯ –ನ್ ನಿಯಮಿತ ಪರಿಸರಗಳಲ್ಲಿ ಬರುತ್ತವೆ: ಞ್ ತಾಲವ್ಯ ಸ್ಪರ್ಶಗಳ ಪೂರ್ವದಲ್ಲಿ ಬಂದರೆ ದಂತ್ಯ –ನ್ ದಂತ್ಯಸ್ಪರ್ಶಗಳ ಪೂರ್ವದಲ್ಲಿ ಬರುತ್ತದೆ. ಆ ಸ್ಥಾನಗಳಲ್ಲಿ ವರ್ತ್ಸ್ಯ -ನ್ ಬರಲಾರದು.

೧.೭ ರೂಪದ ದೃಷ್ಟಿಯಿಂದ ಪರಿಸರವನ್ನು ಸಮ (Identical) ಮತ್ತು ಸಾದೃಶ್ಯ (Analogous) ಎಂದು ವಿಂಗಡಿಸುತ್ತಾರೆ. ಪರಿಸರದಲ್ಲಿ ಏನೇನೂ ವ್ಯತ್ಯಾಸವಿಲ್ಲದಿದ್ದರೆ ಅದು ಸಮ ಪರಿಸರ: ಅಲ್ಪಸ್ವಲ್ಪ ವ್ಯತ್ಯಾಸವಿದ್ದರೆ ಸಾದೃಶ್ಯ ಪರಿಸರ. ಎಮ್ಮೆ. ಒಮ್ಮೆ; ನೆರೆ. ಹೊರೆ– ಈ ಯುಗ್ಮಗಳಲ್ಲಿ ಬರುವ ಎ ಮತ್ತು ಒ ಧ್ವನಿಗಳು ಸಮಪರಿಸರದಲ್ಲಿದ್ದರೆ ಎಣ್ಣೆ, ಒಮ್ಮೆ: ನೆರೆ. ಹೊರೆ– ಎಂಬ ಯುಗ್ಮಗಳಲ್ಲಿ ಬರುವ ಆ ಧ್ವನಿಗಳು ಸಾದೃಶ್ಯ ಪರಿಸರದಲ್ಲಿವೆ.

೧.೮ ಪ್ರತ್ಯೇಕತಾವಿಧಾನವನ್ನು ಸಮ ಹಾಗೂ ಸಾದೃಶ್ಯ ಪರಿಸರಗಳಲ್ಲಿರುವ ಧ್ವನಿಘಟಕಗಳಿಗೆ ಅನ್ವಯಿಸಬಹುದು. ಪ್ರಸ್ತುತದಲ್ಲಿ ಸಮಪರಿಸರದಲ್ಲಿ ಬರುವ ಧ್ವನಿಘಟಕಗಳನ್ನು ವಿಶ್ಲೇಷಿಸುವ ರೀತಿಯನ್ನು ಪರಿಗಣಿಸಲಾಗಿದೆ.

ಭಾಷೆ : ಧಾರವಾಡ ಕನ್ನಡ

ಧ್ವನಿಲಿಪಿಯಲ್ಲಿ ಸಂಗ್ರಹಿತ ದತ್ತ : ನೋಡಿ ೧.೧

ಧ್ವನಿಪಟ್ಟಿ : ನೋಡಿ ೧.೧

ಆರಿಸಿದ ಸಂದಿಗ್ಧ ಧ್ವನಿಯುಗ್ಮಗಳು :

೧. [i] ಮತ್ತು [i :]   ೨. [e] ಮತ್ತು [e :]
೩. [u] ಮತ್ತು [u :]   ೪. [a] ಮತ್ತು [a :]
೫. [u] ಮತ್ತು [u :]   ೬. [k] ಮತ್ತು [g]

೧ ಅ. [i] ಮತ್ತು [i :]

ಧ್ವನಿ ವ್ಯತ್ಯಾಸ : [i] ಉನ್ನತ ಪೂರ್ವ ಹ್ರಸ್ವಸ್ವರ
[i :] ಉನ್ನತ ಪೂರ್ವ ದೀರ್ಘಸ್ವರ

ಪರಿಸರ : ಸಮಪರಿಸರ

ಪ್ರಸಾರ : ವೈದೃಶ್ಯ ಪ್ರಸಾರ

ಉದಾಹರಣೆ : hiri
hi:ri

ಧ್ವನಿಮಾತ್ಮಕ ನಿರ್ಣಯ : [i] ಮತ್ತು [i :] ಪ್ರತ್ಯೇಕ ಧ್ವನಿಮಾಗಳು

ಧ್ವನಿಮಾ ಚಿಹ್ನೆಗಳು : / i / ಮತ್ತು / i : /

ಇದೇ ರೀತಿಯಲ್ಲಿ ೨ – ೫ ರ ತನಕದ ಧ್ವನಿಯುಗ್ಮಗಳ ವಿಶ್ಲೇಷಣೆ ಮಾಡಬಹುದು. [k] ಮತ್ತು [g] ಸಾದೃಶ್ಯ ಪರಿಸರದಲ್ಲಿ ಮತ್ತು ವೈದೃಶ್ಯ ಪ್ರಸಾರದಲ್ಲಿವೆ. ಆಗ / e / / e : / / a / / a : / / u / / u : / / k / / g / ಎಂಬ ಹೊಸ ಧ್ವನಿಮಾಗಳು ಸೇರಿ ಒಟ್ಟಿಗೆ ೧೦ ಧ್ವನಿಮಾಗಳು ಸಿಗುತ್ತವೆ : / ಎ, ಏ, ಅ, ಆ, ಉ, ಊ, ಕ್, ಗ್, ಇ, ಈ /

೧.೯ ಸಮ ಮತ್ತು ಸಾದೃಶ್ಯ ಪರಿಸರಗಳಲ್ಲಿರದ ಧ್ವನಿಘಟಕಗಳಿಗೆ ಅರ್ಥಾತ್ ಪ್ರತ್ಯೇಕತಾ ವಿಧಾನವನ್ನು ಅನ್ವಯಿಸಿ ವಿಶ್ಲೇಷಿಸಿದ ಬಳಿಕ ಶೇಷವಾಗಿ ಉಳಿದಿರುವ ಇತರ ಸಂದಿಗ್ಧ ಧ್ವನಿಯುಗ್ಮಗಳಿಗೆ ಸಂಯೋಜನಾ ವಿಧಾನವನ್ನು ಅನ್ವಯಿಸಬೇಕಾಗುತ್ತದೆ.

ಶೇಷಸಂದಿಗ್ಧ ಧ್ವನಿಯುಗ್ಮಗಳು :

೧. [s] ಮತ್ತು [ṣ]   ೨. [m] ಮತ್ತು [ṃ]
೩. [n] [ñ] ಮತ್ತು [ṅ]

೧ ಅ. [s] ಮತ್ತು [ṣ]

ಪ್ರಮೇಯ (Hypothesis) :

[ṣ] ಅಘೋಷ ಮೂರ್ಧನ್ಯ ಸ್ಪರ್ಶದ ಪೂರ್ವದಲ್ಲಿ ಮತ್ತು ಅಘೋಷ ಕಂಠ್ಯ ಸ್ಪರ್ಶದ ಪರದಲ್ಲಿ ಸಂಭವಿಸುತ್ತದೆ.

[s] ಇತರೆಡೆಗಳಲ್ಲಿ.

ಪ್ರಮೇಯದ ಪರೀಕ್ಷೆ (Test of Hypothesis) :

ಉಪಧ್ವನಿಗಳು	ಅಘೋಷ ಮೂರ್ಧನ್ಯ ಸ್ಪರ್ಶದ ಪೂರ್ವದಲ್ಲಿ ಮತ್ತು ಅಘೋಷ ಕಂಠ್ಯಸ್ಪರ್ಶದ ಪರದಲ್ಲಿ	ಇತರೆಡೆಗಳಲ್ಲಿ
[ṣ]	// (೨ ಸಲ)	ಇಲ್ಲ
[s]	ಇಲ್ಲ	/////, //// (೯ ಸಲ)

ಧ್ವನಿಮಾತ್ಮಕ ನಿರ್ಣಯ :

[ṣ] ಮತ್ತು [s] ಧ್ವನಿಸಾಮ್ಯತೆಯುಳ್ಳ ಧ್ವನಿಗಳಾಗಿದ್ದು ಪೂರಕ ಪ್ರಸಾರದಲ್ಲಿ ಬರುವುದರಿಂದ ಅವು ಒಂದೇ ಧ್ವನಿಮಾದ ಉಪಧ್ವನಿಗಳು.

ಧ್ವನಿಮಾಚಿಹ್ನೆ / s / ಸ್.

೨ ಆ. [m] ಮತ್ತು [ṃ]

ಪ್ರಮೇಯ : [ṃ] ದಂತೋಷ್ಠ್ಯ ಅನುನಾಸಿಕ ಸ್ ಮತ್ತು ಹ್ ಧ್ವನಿಮಾಗಳ ಪೂರ್ವದಲ್ಲಿ ಸಂಭವಿಸುತ್ತದೆ.

[m] ಉಭಯೋಷ್ಠ್ಯ ಅನುನಾಸಿಕ ಇತರೆಡೆಗಳಲ್ಲಿ.

ಪ್ರಮೇಯದ ಪರೀಕ್ಷೆ :

ಧ್ವನಿಗಳು	ಸ್ ಮತ್ತು ಹ್ ಧ್ವನಿಮಾಗಳ ಪೂರ್ವದಲ್ಲಿ	ಇತರೆಡೆಗಳಲ್ಲಿ
[ṃ]	/// (೩ ಸಲ)	ಇಲ್ಲ
[m]	ಇಲ್ಲ	///// (೫ ಸಲ

ಧ್ವನಿಮಾತ್ಮಕ ನಿರ್ಣಯ :

[ṃ] ಮತ್ತು [m] ಧ್ವನಿಸಾಮ್ಯತೆಯುಳ್ಳ ಧ್ವನಿಗಳಾಗಿದ್ದು ಪೂರಕ ಪ್ರಸಾರದಲ್ಲಿರುವುದರಿಂದ ಅವು ಒಂದೇ ಧ್ವನಿಮಾದ ಉಪಧ್ವನಿಗಳು.

ಧ್ವನಿಮಾ ಚಿಹ್ನೆ : / m / ಮ್

[n] ನ್ [ñ] ಞ್ ಮತ್ತು [ṅ] ಙ್ ಪೂರಕ ಪ್ರಸಾರದಲ್ಲಿವೆ. ಞ್, ತಾಲವ್ಯ ಸ್ಪರ್ಶಗಳ ಪೂರ್ವದಲ್ಲಿಯೂ ಙ್, ಕಂಠ್ಯಸ್ಪರ್ಶಗಳ ಪೂರ್ವದಲ್ಲಿಯೂ ಬಂದರೆ ನ್, ಇತರೆಡೆಗಳಲ್ಲಿ ಬರುತ್ತದೆಯಾದುದರಿಂದ ಅವು ಒಂದೇ ಧ್ವನಿಯಾದ ಉಪಧ್ವನಿಗಳು. ನ್, ಅಧಿಕ ಪ್ರಸಾರವುಳ್ಳ ಧ್ವನಿಯಾದುದರಿಂದ ಅದನ್ನೇ ಧ್ವನಿಮಾ ಚಿಹ್ನೆಯಾಗಿ ಇಟ್ಟುಕೊಳ್ಳುತ್ತೇವೆ : / n / ನ್.

ಒಂದು ಭಾಷೆಯಲ್ಲಿ ಬಂದಿರುವ ಎಲ್ಲ ಧ್ವನಿಗಳನ್ನು ಪ್ರತ್ಯೇಕತಾ ಮತ್ತು ಸಂಯೋಜನಾ ವಿಧಾನಗಳಿಂದ ವಿಶ್ಲೇಷಿಸಿದ ಬಳಿಕ ಆ ಧ್ವನಿಮಾಗಳನ್ನು ಒಂದು ಪಟ್ಟಿಯಲ್ಲಿ ಗುರುತಿಸಿಟ್ಟುಕೊಳ್ಳುವುದು ಲೇಸು.

ಧ್ವನಿಮಾ ಪಟ್ಟಿ :

i ಇ	i: ಈ	u ಉ	u: ಊ
e ಎ	e: ಏ	—	—
a ಅ	a: ಆ		

		ṭ ಟ್	j ಜ್	k ಕ್	g ಗ್
	s ಸ್				h ಹ್
m ಮ್	n ನ್				
	r ರ್				
	l ಲ್				

೨. ಆಕೃತಿಮಾ ವಿಶ್ಲೇಷಣೆ :

೨.೧ ಭಾಷಾರಚನೆಯಲ್ಲಿ ವೈದೃಶ್ಯ ಪ್ರಸಾರದಲ್ಲಿರುವ ಅರ್ಥಸಹಿತವಾದ ಕನಿಷ್ಠತಮ ಧ್ವನಿಮಾ ಘಟಕಗಳೇ ಆಕೃತಿಮಾ (Morpheme) ಗಳು. ಪೂರಕ ಪ್ರಸಾರದಲ್ಲಿರುವ ಇಂತಹ ಘಟಕಗಳನ್ನು ಉಪಾಕೃತಿ (Allomorph) ಗಳೆಂದು ಕರೆಯುವರು. ಭಾಷಾ ವಿಶ್ಲೇಷಕ, ಆರಿಸಿಕೊಂಡ ಭಾಷೆಯ ಆಕೃತಿಮಾಗಳನ್ನು ನಿರ್ಣಯಿಸಿ ಅವುಗಳ ಸಂಯೋಜನಾ ರೀತಿಯನ್ನು ಗುರುತಿಸಿಕೊಳ್ಳುತ್ತಾನೆ.

೨.೨ ಆಕೃತಿಮಾಗಳನ್ನು ಗುರುತಿಸಲು ಮೊತ್ತಮೊದಲು ಸಂಗ್ರಹಿತ ದತ್ತ

ದಲ್ಲಿರುವ ಶಬ್ದರೂಪಗಳನ್ನು ಆಂಶಿಕ ಸಾಮ್ಯಗಳ (Partial similarity) ಆಧಾರದ ಮೇಲೆ ಮೂಲ ಘಟಕಗಳನ್ನು ಒಡೆಯಬೇಕು.

ದತ್ತ :	aṣṭu ಅಷ್ಟು	aṣṭra ಅಷ್ಟ್ರ, 'ಅಷ್ಟರ'
	eṇṭu ಎಂಟು	eṇṭra:ga ಎಂಟ್ರಾಗ, 'ಎಂಟರಲ್ಲಿ'
	huḍuga ಹುಡುಗ	huḍugana ಹುಡುಗನ
	ma:tu ಮಾತು	ma:tina:ga ಮಾತಿನಾಗ

ಕನಿಷ್ಠತಮ ಅರ್ಥ ಸಹಿತ ಘಟಕಗಳು :

ಅಷ್ಟು	–ಅ
ಎಂಟು	–ಆಗ
ಹುಡುಗ	
ಮಾತು	

ಉಳಿದ ಘಟಕಗಳು : ರ್, ನ್, ಇನ್

೨.೩ ಕನಿಷ್ಠತಮ ಅರ್ಥ ಸಹಿತ ಘಟಕಗಳನ್ನು ಗುರುತಿಸುವಾಗ ಸ್ವತಂತ್ರವಾದ ಅರ್ಥವಿಲ್ಲದ ಘಟಕಗಳೂ (ಉದಾ : ರ್, ನ್, ಇನ್...) ಬರಬಹುದು. ಅವು ಆಕೃತಿಗಳನ್ನು ಜೋಡಿಸಲು ಅರ್ಥಾತ್ ಸಂಧಿಕಾರ್ಯಕ್ಕೆ ಆಗತ್ಯ. ಅವುಗಳನ್ನು ಆಕೃತಿ-ಧ್ವನಿಮಾ (Morpho-phoneme) ಎಂದು ಕರೆಯುತ್ತಾರೆ.

೨.೪ ಘಟಕಗಳ ಪ್ರಸಾರ ತಿಳಿದುಕೊಳ್ಳಲು ಅಂತೆಯೇ ಅವುಗಳ ಸಂಯೋಜನಾ ರೀತಿ ಸ್ಪಷ್ಟಪಡಿಸಿಕೊಳ್ಳಲು ಈ ಕೆಳಗಿನಂತೆ ಸಿದ್ಧಗೊಳಿಸಿದ ಪಟ್ಟಿಯಲ್ಲಿ ಆಕೃತಿಗಳನ್ನು ತುಂಬಿಸಬೇಕು.

ಪ್ರಕೃತಿ	ಪ್ರತ್ಯಯ	ಪದ	ಸಂಧಿಕಾರ್ಯ ೮
೧. ಅಷ್ಟು	– ಅ	ಅಷ್ಟ್ರ	೧. ಉ → φ / – & ಅ
			೨. φ → ರ್ / ಟ್ – & ಅ
೨. ಎಂಟು	– ಆಗ,	ಎಂಟ್ರಾಗ,	೩. ಉ → φ / – & ಆ
			೪. φ → ರ್ / ಟ್ – & ಆ
೩. ಹುಡುಗ	– ಅ	ಹುಡುಗನ	೫. φ → ನ್ / ಹುಡುಗ – & ಅ

೮. ಸೂಚಿಸಿದ ೧–೫ ಸಂಧಿ ಕಾರ್ಯಗಳನ್ನು ಇನ್ನು ಸಂಕ್ಷೇಪವಾಗಿ ಎರಡೇ ನಿಯಮಗಳಲ್ಲಿ ಸೂಚಿಸಬಹುದು :

$$೧.\ ಉ \rightarrow \varphi / - \& \begin{Bmatrix} ಅ \\ ಆ \end{Bmatrix} \quad ೨.\ \varphi \rightarrow \begin{bmatrix} ರ್ \\ ನ್ \end{bmatrix} / \begin{bmatrix} ಟ್ \\ ಹುಡುಗ \end{bmatrix} - \& \begin{bmatrix} \begin{Bmatrix} ಅ \\ ಆ \end{Bmatrix} \\ ಅ \end{bmatrix}$$

೨.೫ ಪ್ರತಿ ಕಲಮಿನಲ್ಲಿರುವ ಆಕೃತಿಗಳ ರೂಪವರ್ಗ[೯] (Form class)ವನ್ನು ನಿರ್ಧರಿಸಬೇಕು. ಇಲ್ಲಿ ಪ್ರಕೃತಿಗಳೆಲ್ಲವೂ ವಿಭಕ್ತಿ ಪ್ರತ್ಯಗಳನ್ನು ಸ್ವೀಕರಿಸುತ್ತವೆ ಯಾದುದರಿಂದ ಅವು ನಾಮಪ್ರಕೃತಿಗಳು. ಪ್ರತ್ಯಯಗಳು, ವಿಭಕ್ತಿ ಸೂಚಕಗಳು.

೨.೬ ಆಕೃತಿಗಳ ಪ್ರಸಾರವನ್ನು ಗಮನಿಸಿ ಆಕೃತಿಗಳ ನಿರ್ಣಯ ಮಾಡುವುದು ಕೊನೆಯ ಹಂತ. ಪ್ರಕೃತಿಗಳೆಲ್ಲವೂ ವೈದೃಶ್ಯ ಪ್ರಸಾರದಲ್ಲಿವೆ. ಅಂತೆಯೇ –ಅ ಮತ್ತು –ಆಗ ಎಂಬೆರಡು ಪ್ರತ್ಯಯಗಳು ವೈದೃಶ್ಯ ಪ್ರಸಾರದಲ್ಲಿವೆ. ಕಾರಣ ಅವೆ ಲ್ಲವೂ ಸ್ವತಂತ್ರ ಆಕೃತಿಮಾಗಳು.

೨.೭ ಮೇಲಿನ ಪಟ್ಟಿ ತೋರಿಸುವಂತೆ ವಿಭಕ್ತಿ ಪ್ರತ್ಯಯಗಳು ನೇರವಾಗಿ ನಾಮ ಪ್ರಕೃತಿಗಳನ್ನು ಸೇರುತ್ತವೆ. ಆಗ ಆಕೃತಿಮಾಗಳಲ್ಲಿ ಕೆಲವು ಧ್ವನಿಮಾ ಬದಲಾವಣೆ ಗಳಾಗಬಹುದು.

೩. ವಾಕ್ಯ ವಿಶ್ಲೇಷಣೆ :

೩.೧ ಭಾಷೆಯಲ್ಲಿ ಮೂಲತಃ ಇನ್ನೊಂದರ ರಚನಾಂಗವಾಗದೆ, ಸ್ವತಂತ್ರ ವಾಗಿರತಕ್ಕ ಅಸಾಂದ್ರ (Non-tight) ರಚನೆಯೇ ವಾಕ್ಯ. ಯಾವ ರಚನೆಯಲ್ಲಿ ಆಂತರಿಕ ಬೆಳವಣಿಗೆ (Intra-expansion) ಸಾಧ್ಯವೋ ಅವು ಅಸಾಂದ್ರ ರಚನೆಗಳು :

೧. **jana bandru** ↑ ಜನ ಬಂದ್ರು ?
೨. **de:wru ada:na** ದೇವ್ರು ಅದಾನ.
೩. **biḷe: angi** ಬಿಳೇ ಅಂಗಿ.

೧–೩ ರಚನೆಗಳೂ ಮೂಲತಃ ರಚನಾಂಗಗಳಲ್ಲ; ಅಲ್ಲದೆ ಅವನ್ನು ಆಂತರಿಕವಾಗಿ ಬೆಳೆಯಿಸಬಹುದು :

೧ ಅ. ಜನ ಎಲ್ಲಿ ಬಂದ್ರು ?
೨ ಅ. ದೇವ್ರು ಹತ್ರ ಅದಾನ.
೩ ಅ. ಬಿಳೇ ಹೊಸ ಅಂಗಿ.

ಕಾರಣ ೧–೩ ವಾಕ್ಯಗಳೇ.

೩.೨ ವಾಕ್ಯವಿಶ್ಲೇಷಣೆಯಲ್ಲಿ ಗಮನಿಸಬೇಕಾದ ಮುಖ್ಯಾಂಶಗಳೆರಡು : ಒಂದು, ವಾಕ್ಯದ ರಚನೆ; ಎರಡು, ವಾಕ್ಯದ ವಿನ್ಯಾಸ ವೈವಿಧ್ಯತೆ, ವಾಕ್ಯ ರಚನೆಯನ್ನು ಪದ

೯. ಒಂದೇ ರೀತಿಯ ಪ್ರಸಾರದಲ್ಲಿದ್ದುಕೊಂಡು ಒಂದೇ ಕೆಲಸವನ್ನು ಮಾಡುವ ರೂಪಗಳ ಗುಂಪಿಗೆ ರೂಪವರ್ಗ ಎನ್ನುವರು.

ಪುಂಜ ರಚನಾ ನಿಯಮ(Phrase-structure rule)ಗಳ ಮೂಲಕವೂ ವಾಕ್ಯ ವಿನ್ಯಾಸ ವೈವಿಧ್ಯತೆಯನ್ನು ರೂಪಾಂತರ ನಿಯಮ (Transformational rule) ಗಳ ಮೂಲಕವೂ ತೋರಿಸಬಹುದು.

೩.೩ ಪದಪುಂಜ ರಚನಾ ನಿಯಮಗಳು ವಾಕ್ಯದ ನಿಕಟತಮ ಘಟಕ (Immediate constituent) ಗಳನ್ನೂ ಅವುಗಳ ವ್ಯಾಕರಣಾನ್ವಯ (Parsing) ವನ್ನೂ ಬಳಸಿದ ರೂಪಗಳ ಅರ್ಥಗಳನ್ನೂ ಸೂಚಿಸುತ್ತವೆ. ಅವು ಒಂದು ಸಂಕೇತ ವನ್ನು ಇನ್ನೊಂದಾಗಿ ಬರೆ ಎಂದು ನಿರ್ದೇಶಿಸುವಂತಹವುಗಳಾಗಿವೆ. ಉದಾ : ವಾಕ್ಯ → ನಾಮಪುಂಜ (Noun Phrase) + ಕ್ರಿಯಾಪುಂಜ (Verb Phrase) ಈ ನಿಯಮಗಳು ವಾಕ್ಯ ಎಂಬ ಸಂಕೇತದಿಂದ ಆರಂಭಗೊಂಡು ನಿಯಮಗಳಿಗೆ ಅನು ಗುಣವಾಗಿ ಬೆಳೆದುಕೊಂಡು ಬಂದು ಕಟ್ಟಕಡೆಗೆ ಆಕೃತಿಮಾಗಳನ್ನು ಸೂಚಿಸುತ್ತವೆ. ಪದಪುಂಜ ವಿನ್ಯಾಸಕಗಳನ್ನು ಕೊಡಲು ಅನುಕೂಲವಾಗುವಂತೆ ಈ ಆಕೃತಿಮಾಗಳನ್ನು ಬರೆಯಬೇಕು.

೩.೪ ಪದಪುಂಜ ನಿಯಮಗಳು ನಿರ್ದೇಶಿಸುವ ವಿನ್ಯಾಸಕ(Marker)ಗಳೇ ಪದಪುಂಜ ವಿನ್ಯಾಸಕ (Phrase marker) ಗಳು. ಅವು ಸ್ವಯಂಚಲಿಗಳು. ಈ ಸ್ವಯಂಚಲಿತ್ವಕ್ಕೆ ಸಹಾಯಕವಾಗಿ ಪದಪುಂಜ ರಚನಾ ನಿಯಮಗಳ ಮೇಲೆ ಕೆಲವು ನಿರ್ಬಂಧಗಳಿವೆ :

೧ ಒಂದು ನಿಯಮ ಒಂದೇ ಸಂಕೇತವನ್ನು ಬದಲಾಯಿಸತಕ್ಕದ್ದು.
೨ ಬದಲಾಯಿಸಿದ ಸಂಕೇತ (ಮೊದಲನೆಯದನ್ನು ಹೊರತು) ಹಿಂದಿನ ಸರಣಿಯ ಘಟಕವಾಗಿರಬೇಕು.
೩ ಒಂದು ಸಂಕೇತದ ಸ್ಥಾನದಲ್ಲಿ ಇನ್ನೊಂದು ಸಂಕೇತ ಬರಲೇ ಬೇಕು.
೪ ಹೊಸತಾಗಿ ಬರುವ ಸರಣಿ ಹಿಂದಿನ ಸರಣಿಗಿಂತ ಭಿನ್ನವಾಗಿರಬೇಕು.
೫ ಸ್ಥಾನಪಟಲಕ್ಕೆ ಇಲ್ಲಿ ಅವಕಾಶವಿಲ್ಲ.

ಉದಾಹರಣೆಯಾಗಿ ಕೆಳಗಿನ ವಾಕ್ಯಗಳನ್ನು ಪರಿಶೀಲಿಸುವ :

ವಾಕ್ಯ : ಚಲೊ ಹುಡುಗುರು ಸಾಯ್ತಾವು.

೧ ವಾಕ್ಯ → ನಾಮಪುಂಜ + ಕ್ರಿಯಾಪುಂಜ
೨ ನಾಮಪುಂಜ → ವಿಶೇಷಣ + ನಾಮಪದ
೩ ನಾಮಪದ → ನಾಮಪ್ರಕೃತಿ + ವಚನ
೪ ಕ್ರಿಯಾಪುಂಜ → ಕ್ರಿಯಾಪ್ರಕೃತಿ + ಕಾಲ–ರೂಪ
೫ ಕಾಲ–ರೂಪ → ಕಾಲಪ್ರತ್ಯಯ + ರೂಪಪ್ರತ್ಯಯ
೬ ವಿಶೇಷಣ → ಚಲೊ 'ಒಳ್ಳೆಯ'
೭ ನಾಮಪ್ರಕೃತಿ → ಹುಡುಗ

೮ ವಚನ → -ಉರು -'ರು'
೯ ಕ್ರಿಯಾಪ್ರಕೃತಿ → ಸಾಯ್
೧೦ ಕಾಲ ಪ್ರತ್ಯಯ → -ತ್
೧೧ ರೂಪ ಪ್ರತ್ಯಯ → -ಆವು

೩.೫ ವಾಕ್ಯರಚನಾ ವಿನ್ಯಾಸದಲ್ಲಿ ವೈವಿಧ್ಯವನ್ನು ತರಲು ಪದಪುಂಜ ವಿನ್ಯಾಸಕಗಳಲ್ಲಿ ಬದಲಾವಣೆಯನ್ನುಂಟುಮಾಡುವ ನಿಯಮಗಳೇ ರೂಪಾಂತರ ನಿಯಮಗಳು. ಬಳಕೆಯನ್ನು ಹೊಂದಿಕೊಂಡು ಇವುಗಳಲ್ಲಿ ಐಚ್ಛಿಕ (Optional) ಮತ್ತು ಕಡ್ಡಾಯ (Obligatory) ಗಳೆಂದು ಎರಡು ವಿಧ. ಐಚ್ಛಿಕ ರೂಪಾಂತರ ನಿಯಮಗಳು ನಾನಾ ವಿಧದ ವಾಕ್ಯಗಳನ್ನು ಹುಟ್ಟಿಸಿದರೆ ಕಡ್ಡಾಯ ರೂಪಾಂತರ ನಿಯಮಗಳು ಸಂಧಿ ಬದಲಾವಣೆ ಹಾಗೂ ಉಪಾಕೃತಿಗಳ ವ್ಯತ್ಯಾಸಗಳ ಬಗ್ಗೆ ಲಕ್ಷ್ಯವಹಿಸಿಕೊಳ್ಳುತ್ತವೆ. ಉದಾಹರಣೆಗಾಗಿ ಕೆಳಗಿನ ವಾಕ್ಯ ಗಮನಿಸಿ :

ಮೂಲವಾಕ್ಯ : ಕೆಂಪ್ಯ ಅಕ್ಕನ್ನ ಕಂಡ.

ಪದಪುಂಜ ನಿಯಮ :

೧. ವಾಕ್ಯ → ನಾಮಪುಂಜ + ಕ್ರಿಯಾಪುಂಜ
೨. ಕ್ರಿಯಾಪುಂಜ → ನಾಮಪದ + ಕ್ರಿಯಾಪದ
೩. ನಾಮಪದ → ನಾಮಪ್ರಕೃತಿ + ವಿಭಕ್ತಿ ಪ್ರತ್ಯಯ
೪. ಕ್ರಿಯಾಪದ → ಕ್ರಿಯಾಪ್ರಕೃತಿ + ಕಾಲ – ರೂಪ
೫. ನಾಮಪುಂಜ → ಕೆಂಪ್ಯ
೬. ನಾಮಪ್ರಕೃತಿ → ಅಕ್ಕ
೭. ವಿಭಕ್ತಿಪ್ರತ್ಯಯ → –ನ್ನ
೮. ಕ್ರಿಯಾಪ್ರಕೃತಿ → ಕಾಣ್
೯. ಕಾಲ–ರೂಪ → –ದ

ಕಡ್ಡಾಯ ರೂಪಾಂತರ ನಿಯಮ :

ಕಾಣ್ + ದ => ಕಂಡ,

ಕೆಂಪ್ಯ ಅಕ್ಕನ್ನ ಕಂಡ —ಎಂಬ ವಾಕ್ಯವನ್ನು ಪ್ರಶ್ನೆಯನ್ನಾಗಿ ರೂಪಾಂತರಿಸಬೇಕಾದರೆ ಈ ಮೂಲವಾಕ್ಯ[೧೦]ವನ್ನು ಐಚ್ಛಿಕ ರೂಪಾಂತರ ನಿಯಮಕ್ಕೆ ಒಳಪಡಿಸಬೇಕು :

೧೦. ಐಚ್ಛಿಕ ರೂಪಾಂತರ ನಿಯಮಗಳು ಉತ್ಪಾದಿಸದ ವಾಕ್ಯಗಳೇ ಮೂಲವಾಕ್ಯಗಳಾದರೆ, ಉತ್ಪಾದಿಸುವವುಗಳು ಉತ್ಪಾದಿತ ವಾಕ್ಯಗಳು.

ಕೆಂಪ್ಯ + ಅಕ್ಕ + ನ್ನ + ಕಂಡ => ಕೆಂಪ್ರ + ಅಕ್ಕ + ನ್ನ + ಕಂಡ + / ೧ ೩ ↑ /.

ಸಾಧಿತ ವಾಕ್ಯ : ಕೆಂಪ್ಯ ಅಕ್ಕನ್ನ ¹ಕಂಡ³ ↑ (ಕೆಂಪ್ಯ ಅಕ್ಕನ್ನ ಕಂಡ ?)

೩.೬ ವಾಕ್ಯಗಳ ಸಂಖ್ಯೆಯನ್ನು ಹೊಂದಿಕೊಂಡು ಐಚ್ಛಿಕ ರೂಪಾಂತರದಲ್ಲಿ ಏಕವಾಕ್ಯ ರೂಪಾಂತರ (Single based transformation) ಮತ್ತು ಅನೇಕ-ವಾಕ್ಯ ರೂಪಾಂತರ (Double based transformation) ಎಂದು ಎರಡು ರೀತಿ. ಮೇಲೆ ಉದ್ಧರಿಸಿದ ಪ್ರಶ್ನೆ ಅಂತೆಯೇ ನಿಷೇಧ ವಾಕ್ಯ ಮುಂತಾದವುಗಳು ಏಕವಾಕ್ಯ ರೂಪಾಂತರಗಳು.

ಅನೇಕ ವಾಕ್ಯಗಳು ಒಳಗೊಂಡು ಒಂದು ರಚನೆಯಾದರೆ ಆಗ ಅದನ್ನು ಅನೇಕ-ವಾಕ್ಯ ರೂಪಾಂತರವೆನ್ನುತ್ತೇವೆ :

೧. ಮೂಲವಾಕ್ಯ : ಬಂದೆ.
ಸೇರುವ ವಾಕ್ಯ : ತಂದೆ.
ಉತ್ಪಾದಿತ ವಾಕ್ಯ : ಬಂದೆ ಮತ್ತಂದೆ.

೨. ಮೂಲವಾಕ್ಯ : ಮಗಳು ಬಳಿ ಕೇಳಿದ್ಲು
ಸೇರುವ ವಾಕ್ಯ : ತಾಯಿ ಬಳಿ ಕೊಡಿಸಿದ್ಲು
ಉತ್ಪಾದಿತ ವಾಕ್ಯ : ಮಗಳು ಹೆಂತ ಬಳಿ ಕೇಳಿದ್ಲು ತಾಯಿ ಹಂತ ಬಳಿ ಕೊಡಿಸಿದ್ಲು. (ಮಗಳು ಎಂತಹ ಬಳೆ ಕೇಳಿದಳು ತಾಯಿ ಅಂತಹ ಬಳೆಯನ್ನು ಕೊಡಿಸಿದಳು.)

೩.೭ ವಾಕ್ಯಗಳನ್ನು ಒಟ್ಟಿನಲ್ಲಿ ಮೂಲ ಮತ್ತು ಸಾಧಿತಗಳೆಂದು ವಿಂಗಡಿಸಿ ಸಾಧಿತ ವಾಕ್ಯಗಳನ್ನು ಏಕವಾಕ್ಯ ಮತ್ತು ಅನೇಕವಾಕ್ಯ ರೂಪಾಂತರಗಳ ಮೂಲಕ ವಾಗಿಯೂ ಮೂಲವಾಕ್ಯಗಳನ್ನು ಪದಪುಂಜರಚನಾ ನಿಯಮಗಳ ಮೂಲಕವಾಗಿಯೂ ವಿವರಿಸುತ್ತಾರೆ. ಈ ವಿಧಾನ ಇತ್ತೀಚಿನದು ಹಾಗೂ ವಾಕ್ಯ ರಚನೆಯನ್ನು ಸ್ಪಷ್ಟ ವಾಗಿ ತೋರಿಸಿಕೊಡುವಂಥಾದ್ದು. ಇದಕ್ಕೂ ಹಿಂದಿನದಾದ ವ್ಯಾಕರಣಾನ್ವಯ ಮತ್ತು ನಿಕಟತಮ ಘಟಕ ವಿಶ್ಲೇಷಣಾ ವಿಧಾನಗಳೆಂಬ ಇತರ ವಾಕ್ಯವಿಶ್ಲೇಷಣಾ ವಿಧಾನಗಳೂ ಇವೆ. ಅವು ಪ್ರಸ್ತುತದಲ್ಲಿ ವಿವರಿಸಿದ ಪದಪುಂಜ ರಚನಾ ನಿಯಮಗಳಲ್ಲಿ ಅಂತರ್ಗತ ವಾಗುತ್ತವೆ.

೪.೦ ಭಾಷಾ ವಿಶ್ಲೇಷಕನು ತಾನು ಆರಿಸಿದ ಭಾಷಾಕ್ಷೇತ್ರಕ್ಕೆ ಹೋಗಿ ಸಂಗ್ರಹಿ ಸಿದ ಭಾಷಾದತ್ತವನ್ನು ಯಾವ ಯಾವ ಹಂತಗಳಲ್ಲಿ ಯಾವ ಯಾವ ವಿಧಾನಗಳ

ಮೂಲಕ ವಿಶ್ಲೇಷಿಸಬೇಕೆಂಬುದನ್ನು ಇಷ್ಟರವರೆಗೆ ಸೋದಾಹರಣವಾಗಿ ವಿವರಿಸಿದ್ದಾಯಿತು. ಮಾಡಿದ ವಿಶ್ಲೇಷಣೆಯನ್ನು ನಿರೂಪಿಸುವ ಕ್ರಮ, ರೀತಿ, ಮಾದರಿಗಳ ಬಗ್ಗೆ ಪ್ರಸ್ತುತದಲ್ಲಿ ಪ್ರಸ್ತಾಪ ಮಾಡಿಲ್ಲ: ಅದೊಂದು ಪ್ರತ್ಯೇಕ ವಿವೇಚನೆಯೇ ಸರಿ.

ಆಧಾರ ಸಾಹಿತ್ಯ

Hiremath, R. C 1961 *The Structure of Kannada*, Dharwar: Karnataka University.

Hockett, Charles F. 1965 *A Course in Modern Linguistics*, New York : The Macmillan Company.

Pike, Kenneth L. 1947 *Phonemics*, Ann Arbor: University of Michigan Press.

Samarin, William J. 1967 *Field Linguistics, A Guide to Linguistic field work*, New York: Holt, Rinehart and Winston.

ಬಿಳಿಗಿರಿ ಎಚ್. ಎಸ್. 1970 ವರ್ಣನಾತ್ಮಕ ವ್ಯಾಕರಣ, ಬೆಂಗಳೂರು : ಬೆಂಗಳೂರು ವಿಶ್ವವಿದ್ಯಾಲಯ.

ಕುಳ್ಳಿ ಜೆ. ಎಸ್. 1971 ವರ್ಣನಾತ್ಮಕ ಭಾಷಾವಿಜ್ಞಾನ, ಧಾರವಾಡ : ಸಿರಿಗನ್ನಡ ಪ್ರಕಾಶನ.

ಮಾಡ್ತ ವಿಲ್ಯಂ 1975 ಕನ್ನಡ ಭಾಷೆಯ ರೂಪರೇಷೆಗಳು, ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ, ಕನ್ನಡ ಅಧ್ಯಯನಪೀಠ, ಪಠ್ಯಪುಸ್ತಕ ನಿರ್ದೇಶನಾಲಯ.

• •

ಭಾಷಾಪ್ರಭೇದಗಳ ಅಧ್ಯಯನದ ಪ್ರಯೋಜನ

• ಕೃ. ಗೋವಿಂದರೆಡ್ಡಿ
• ಎ. ಮುರಿಗೆಪ್ಪ

ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ತೋರುವ ವ್ಯತ್ಯಾಸಘಟ್ಟಗಳನ್ನು ಅವಸ್ಥಾ ಭೇದಗಳೆಂದೂ, ಸ್ಥಳದಿಂದ ಸ್ಥಳಕ್ಕೆ ತೋರುವ ವ್ಯತ್ಯಾಸಘಟ್ಟಗಳನ್ನು ಪ್ರಾದೇಶಿಕ ಭೇದಗಳೆಂದೂ ಭಾಷಾವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಸಾಮಾನ್ಯವಾಗಿ ಪಂಪನ ಕಾಲದ ಭಾಷೆ ಈಗಿನವರಿಗೆ ಭಿನ್ನವೆನಿಸುವಂತೆ ಮೈಸೂರು ಪ್ರದೇಶದ ಭಾಷೆ ಧಾರವಾಡ ಪ್ರದೇಶಕ್ಕೆ ಭಿನ್ನವೆನಿಸುತ್ತದೆ. ಈ ಎಲ್ಲಾ ಭೇದಗಳು ಮೂಲ ಭಾಷೆಯ ಅಂಗಗಳು. ಇವನ್ನು ಉಪಭಾಷೆಗಳೆಂದು ಕರೆಯಲಾಗಿದೆ. ಒಂದು ಉಪ ಭಾಷೆಯ ಜನಾಂಗ, ಪರಸ್ಪರರಲ್ಲಿ ವ್ಯವಹರಿಸುವಾಗ ಯಾವುದೇ ತೊಡಕು ಉಂಟಾ-ಗದು. ಆದರೆ ಭಿನ್ನ ಉಪಭಾಷೆಯವರೊಡನೆ ವ್ಯವಹರಿಸುವಾಗ ಕೆಲವು ವೇಳೆ ತಡ-ವರಿಸಬಹುದು. ಆದರೆ ಎಲ್ಲಾ ಉಪಭಾಷೆಗಳಿಗೆ ಸಮಾನವಾಗಿರಬಹುದಾದ ಒಂದು ಪ್ರಮಾಣಭಾಷೆಯನ್ನು ಆ ಭಾಷೆಯವರು ರೂಪಿಸಿಕೊಂಡಿರುವುದರಿಂದ ಆ ಪ್ರಮಾಣ ಭಾಷೆಯ ಮುಖಾಂತರ ಪರಸ್ಪರರಲ್ಲಿ ವಿಚಾರ ವಿನಿಮಯಕ್ಕೆ ಯಾವುದೇ ರೀತಿಯ ತೊಡಕು ಉಂಟಾಗದು. ಈ ಪ್ರಮಾಣಭಾಷೆಯೂ ಸಹ ಆ ಕಾಲಕ್ಕೆ ಮಾತ್ರ ಪ್ರಸ್ತುತವಾಗಿರುತ್ತದೆ. ಕಾಲಸಂದಂತೆ ಪ್ರಮಾಣರೂಪದಲ್ಲೂ ಬದಲಾವಣೆ ಅನಿವಾರ್ಯ.

ಯಾವುದೇ ಒಂದು ವಿಷಯ ಅದರ ಅವಶ್ಯಕತೆಗನುಸಾರವಾಗಿ ಪ್ರಯೋಜನ ಕಾರಿ ಎನಿಸುತ್ತದೆ. ಅದೇ ರೀತಿ, ಜೀವನದ ಪ್ರತಿ ಹಂತದಲ್ಲಿ ಮಿಡಿಯುತ್ತಿರುವು ದರಿಂದ, ಸಾಮಾಜಿಕ ಹಾಗೂ ಪ್ರಾದೇಶಿಕ ಜೀವನಾವಶ್ಯಕತೆಗಳನ್ನು ಪ್ರತಿಧ್ವನಿಸುತ್ತಿರು ವುದರಿಂದ ಉಪಭಾಷೆಗಳು ನಮಗೆ ಪ್ರಯೋಜನಕಾರಿ ಎನಿಸುತ್ತವೆ. ಎಲ್ಲರಿಗೂ ಸಾಮಾನ್ಯವಾದ ಪ್ರಮಾಣಭಾಷೆ ಇರುವುದೇನೋ ನಿಜ. ಆದರೆ ಆ ಜನರೊಡನೆ ತೀರ ಹತ್ತಿರವಾಗಿ ಆತ್ಮೀಯವಾಗಿ ವ್ಯವಹರಿಸಲು ಪ್ರಮಾಣಭಾಷೆಗಿಂತ ಆ ಬುಡಕಟ್ಟಿನ ಉಪಭಾಷೆ ಹೆಚ್ಚು ಫಲದಾಯಿ ಎನಿಸುತ್ತದೆ. ಅದರ ಪ್ರಯೋಜನ ಸಾಧ್ಯತೆಗಳನ್ನು ಹೀಗೆ ವಿವರಿಸಬಹುದು.

ಉಪಭಾಷೆ ಮತ್ತು ಉಪಭಾಷೆ :

ಪ್ರತಿ ಪ್ರದೇಶಕ್ಕೆ ಮತ್ತು ಪ್ರದೇಶದಲ್ಲಿಯೇ ಸಮಾಜಕ್ಕೆ ಭಿನ್ನ ಉಪ ಭಾಷೆಯಿರುವುದು ನಿಜ. ಅವೆಲ್ಲಕ್ಕೂ ಒಂದು ಪ್ರಮಾಣಭಾಷೆಯಿರುವುದೂ ಅಷ್ಟೇ ಸತ್ಯ. ಉಪಭಾಷಿಕ ಸಾಮಾನ್ಯವಾಗಿ ಪ್ರಮಾಣಭಾಷೆಯನ್ನು ಅರ್ಥಮಾಡಿ ಕೊಳ್ಳಬಲ್ಲ. ಆದರೆ ಎಲ್ಲಾ ಉಪಭಾಷಿಕರೂ ಪ್ರಮಾಣಭಾಷೆಯಲ್ಲಿ ಮಾತ ನಾಡುವ ಸಂಭವ ಕಡಿಮೆ. ಭಿನ್ನ ಉಪಭಾಷೆಯುವರು ಸಂಧಿಸಿದಾಗ ಪರಸ್ಪರರ ವ್ಯವಹಾರ ಉಪಭಾಷೆ ಮತ್ತು ಪ್ರಮಾಣಭಾಷೆಯ ಮುಖಾಂತರವಾಗಿಯೋ, ಅಥವಾ ಅವರವರ ಉಪಭಾಷೆಗಳಲ್ಲಿಯೋ, ಸಾಗುತ್ತದೆ. ಇದು ಭಿನ್ನ ಉಪ ಭಾಷಿಕರು ಭಿನ್ನ ಉಪಭಾಷೆಯನ್ನು ಬಳಸುವ ಅಥವಾ ಅರ್ಥೈಸಿಕೊಳ್ಳುವ ಸಾಮರ್ಥ್ಯ ವಿದ್ದಾಗ ಸಾಧ್ಯ. ಅರ್ಥವೇ ಆಗದ ಸಂದರ್ಭದಲ್ಲಿ ವ್ಯವಹಾರವೇ ಕುಂಠಿತವಾಗುತ್ತದೆ. ಉದಾ : ಶಿವಮೊಗ್ಗದವನೊಬ್ಬ "ಕಡುವಿಗೆ ಎರಡು ಕಣ್ಣು ಇರುತ್ತವೆ" ಎಂದರೆ ಧಾರವಾಡದವ ಕಣ್ಣು ಬಿಡಬೇಕಾಗುತ್ತದೆ. ಯಾಕೆಂದರೆ ಆತನಿಗೆ 'ಕಡು' ಎಂದರೆ ಒಂದು ನಿರ್ಜೀವ ವಸ್ತು, ಶಿವಮೊಗ್ಗದ "chalk piece" ಅಥವಾ "ಸೀಮೇಸುಣ್ಣ". ಅದೇ ರೀತಿ ಧಾರವಾಡದವ "ಬಿಡ್ಡಿ ಬಾಯಾಗ್ ಇಟ್ಗಂತಿದ್ದನ್ರಿ, ಇಟ್ಗಬ್ಯಾಡಂದ್ರು ಇಟ್ಗನ್ರಿ. ಅದ್ಕ ಹೊಡ್ದಿ್ರಿ. ಹೊಡ್ಯಾಣ ಬಿದ್ ಸತ್ರಿ". ಅಂದರೆ ಅದನ್ನು ಮೈಸೂರಿನವ ಅರ್ಥಮಾಡಿಕೊಳ್ಳಲು ಉಪಭಾಷಾ ಶಬ್ದಕೋಶದ (ಇದ್ದರೆ) ಸಹಾಯ ದಿಂದ "ಬಿಡ್ಡಿ" ಪದದ ಅರ್ಥ ಹುಡಕಬೇಕು. ಅಂತೆಯೇ ಮಂಗಳೂರಿನವ "ಇತ್ ಕಾಣೆ ಆ ಬ್ಯಳೀದ್ ಇತ್ತಲ್ದ, ಅದ್ರ್ ಸೊಡ್ಡೀಗ್ ಕಿಚ್ ಹಾಕೂಕ್, ಬಗೀಲ್ ನನ್ ಕಂಡ್ರ್ ಗುರ್ ಅಸ್ತು." ಎಂದರೆ ಇತರ ಉಪಭಾಷಿಕರು ಭಾಷಾಂತರಕಾರರನ್ನು ಹುಡುಕಬೇಕು. ಇದರಿಂದಾಗಿಯೇ ಪರಸ್ಪರರಲ್ಲಿ ಉಪಭಾಷಾಜ್ಞಾನವನ್ನು ನೀಡಲು ಸಂಗ್ರಹಿತ ಉಪಭಾಷಾ ಶಬ್ದಕೋಶವಾಗಲಿ, ಪರಿಚಯ ಪುಸ್ತಕವಾಗಲಿ ಬೇಕು.

ಶಿಕ್ಷಣ ಮತ್ತು ಉಪಭಾಷೆ :

ವ್ಯಕ್ತಿ ವಯಸ್ಕನೇ ಇರಲಿ, ಬಾಲಕನೇ ಇರಲಿ, ಭಾಷೆಯನ್ನು ಅಭ್ಯಸಿಸುವುದಕ್ಕೆ ಮುಂಚೆ ತನ್ನ ಉಪಭಾಷೆಯಲ್ಲಿ ಪ್ರಭುತ್ವವನ್ನು ಹೊಂದಿರುತ್ತಾನೆ. ಆ ಉಪಭಾಷೆಯ ಮುಖಾಂತರ ಆತ ತನ್ನ ಅನಿಸಿಕೆಗಳನ್ನು ಹೊರಗೆಡಹಬಲ್ಲ. ಇದು ಮೊದಲ ಹಂತ. ಆಮೇಲೆ ಆತ ಪ್ರಮಾಣಭಾಷೆಯನ್ನೂ, ಪ್ರಮಾಣಭಾಷೆಯ ಮುಖಾಂತರ ಇತರ ವಿಷಯಗಳನ್ನೂ ಕಲಿಯಬೇಕಾಗುತ್ತದೆ. ಇಂಥ ಸಂದರ್ಭದ ಪ್ರಾರಂಭ ದಲ್ಲಿ ಪ್ರಮಾಣಭಾಷೆಯ ಮುಖಾಂತರ ಕಲಿಯುವುದಕ್ಕಿಂತ ಆತನದೇ ಆದ ಉಪ-

ಭಾಷೆಯಲ್ಲಿ ಕಲಿಯುವುದು ಕಡಿಮೆ ಶ್ರಮದಾಯಕವೆನಿಸುತ್ತದೆ. ಉದಾ : ಉಪ-ಭಾಷೆ, ಗ್ರಾಂಥಿಕವಲ್ಲದ ಉಂಟೋ- ಕಡು- ಮಸಿ- ಐತಿ- ತಿಂತಾನ ಮೊದಲಾದ ಪದಗಳನ್ನು ಬಳಸುತ್ತದೆ. ಪ್ರಾರಂಭದಲ್ಲಿ ಇವೇ ಶಬ್ದಗಳನ್ನು ಬಳಸುತ್ತ ಇದಕ್ಕೆ ಸರಿಸಮಾನವಾದ ಗ್ರಾಂಥಿಕರೂಪಗಳನ್ನು ಗಮನಕ್ಕೆ ತಂದುಕೊಡುತ್ತ ಹೋದರೆ, ಅಂದರೆ ಅವನದೇ ಆದ ಉಪಭಾಷೆಯನ್ನು ಮಾಧ್ಯಮವಾಗಿಸುವುದರಿಂದ ವಿದ್ಯಾರ್ಥಿಗೆ ಅಭ್ಯಾಸದಲ್ಲಿ ಆಸ್ಥೆ, ಉಪಾಧ್ಯಾಯರಲ್ಲಿ ಆತ್ಮೀಯತೆ ಹೆಚ್ಚುವ ಸಂಭವವಿದೆ. ಹೀಗೆ ಮಾಡದ ಪಕ್ಷದಲ್ಲಿ ವಿದ್ಯಾರ್ಥಿ ಮತ್ತು ವಿಷಯ, ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಮಧ್ಯೆ ಒಂದು ಕಂದರ ಏರ್ಪಡುವ ಸಾಧ್ಯತೆ ಇರುತ್ತದೆ. ಅಂದ ಮಾತ್ರಕ್ಕೆ ಉಪಭಾಷೆಯನ್ನು ಕೊನೆಯವರೆಗೂ ಬಳಸಬೇಕೆಂದು ಅರ್ಥವಲ್ಲ. ಪ್ರಮಾಣಭಾಷೆಯನ್ನು ಪರಿಚಯಿಸುವುದು ಶಿಕ್ಷಣದ ಗುರಿಯಾಗಿರುವುದರಿಂದ ಹಂತ ಹಂತವಾಗಿ ಉಪಭಾಷೆಯಿಂದ ವಿದ್ಯಾರ್ಥಿಯನ್ನು ಪ್ರಮಾಣಭಾಷೆಗೆ ಕೊಂಡೊಯ್ಯ ಬೇಕಾಗುತ್ತದೆ. ಇಲ್ಲಿ ಉಪಾಧ್ಯಾಯನಾದವನು ಉಪಭಾಷೆ ಮತ್ತು ಪ್ರಮಾಣ-ಭಾಷೆಗಿರುವ ಸಾಮ್ಯವೈಷಮ್ಯಗಳನ್ನು ಹಂತಹಂತವಾಗಿ ಪರಿಚಯಿಸಿ ಕಲಿಸಬೇಕು. ವಿದ್ಯಾರ್ಥಿಗಳ ಉತ್ತರದಲ್ಲಿ ಕಂಡುಬರುವ ವ್ಯತ್ಯಾಸಗಳು ನಿಜವಾದ ತಪ್ಪುಗಳೋ ಅಥವಾ ಆತನ ಪ್ರಾದೇಶಿಕ ರೂಪವೋ ಎಂದು ತಿಳಿದುಕೊಳ್ಳುವ ಪರಿ-ಜ್ಞಾನ ಆತನಿಗಿರಬೇಕು. ಒಂದು ವೇಳೆ ಉಪಭಾಷಾರೂಪವಾಗಿದ್ದಲ್ಲಿ ಅದಕ್ಕೆ ತಕ್ಕ ಗ್ರಾಂಥಿಕರೂಪವನ್ನು ಗಮನಕ್ಕೆ ತರುವುದರ ಮೂಲಕ ಆತನಿಗೆ ಗ್ರಾಂಥಿಕ ರೂಪ ವನ್ನು ಕಲಿಸಬೇಕಾಗುತ್ತದೆ. ಹೀಗಾಗಿ ಉಪಭಾಷಾ ಅಧ್ಯಯನ ಒಂದು ಭಾಷೆಯ ಉಪಭಾಷಾ ಅಂಶಗಳನ್ನು ಕ್ರೂಢೀಕರಿಸಿ ತಿಳಿಸುವುದರಿಂದ ಉಪಾಧ್ಯಾಯನಾದವನು ಇದರ ಸಹಾಯ ಪಡೆಯುವುದು ಅವಶ್ಯಕವಿದೆ.

ಅನ್ಯಭಾಷಾಬೋಧನೆ ಮತ್ತು ಉಪಭಾಷೆ :

ಯಾವುದೇ ಭಾಷೆಯ ಅಧ್ಯಯನದಲ್ಲಿ ಸಾಮಾನ್ಯವಾಗಿ ಅದರ ಗ್ರಾಂಥಿಕರೂಪ ವನ್ನೇ ಕಲಿಸುತ್ತೇವೆ. ಒಬ್ಬ ವಿದ್ಯಾರ್ಥಿ ೧೦ ವರ್ಷಗಳವರೆಗೆ ಆ ಭಾಷೆಯನ್ನು ಕಲಿಯುತ್ತಾನೆ; ಪರಿಣತೆಯನ್ನೂ ಗಳಿಸುತ್ತಾನೆ. ಆಮೇಲೆ ಆ ಭಾಷೆಯನ್ನಾಡುವ ವಾತಾವರಣವನ್ನು ಪ್ರವೇಶಿಸಿದಾಗ ಅವರಾಡುವ ಮಾತುಗಳು ಆತನಿಗೆ ಅರ್ಥ-ವಾಗುವುದು ತೀರ ಕಷ್ಟ; ಕಾರಣ ಆತ ಗ್ರಾಂಥಿಕ ರೂಪಗಳನ್ನು ಮಾತ್ರ ಬಲ್ಲ. ಆದರೆ ದಿನನಿತ್ಯದ ಬಳಕೆಯಲ್ಲಿ ಗ್ರಾಂಥಿಕರೂಪವಿರುವುದು ತೀರ ಕಡಿಮೆ. ಅದ್ದ-ರಿಂದಲೇ ನಾವು ಒಂದು ಪದವಿಯನ್ನು ಗಳಿಸಿದರೂ (ಇಂಗ್ಲಿಷ್ ಮಾಧ್ಯಮದ ಮೂಲಕ) ಇಂಗ್ಲಿಷ್ ವ್ಯಕ್ತಿ ಮಾತನಾಡುವ ಭಾಷೆಯನ್ನು ಅರ್ಥ ಮಾಡಿಕೊಳ್ಳ-ಲಾರೆವು. ಕರ್ನಾಟಕದಲ್ಲಿ ಪ್ರವಾಸಕ್ಕೆ ಬರುವ ಮುಂಚೆ ಒಬ್ಬ ಕನ್ನಡವನ್ನು ಕಲಿತು

ಬಂದ ಎಂದಿಟ್ಟುಕೊಳ್ಳಿ. ಆತನಿಗೆ ಇಲ್ಲಿಯ ಪ್ರಭೇದಭಿನ್ನತೆಗಳ ಪರಿಚಯ ಇರದು. ತನಗೂ ಕನ್ನಡ ಗೊತ್ತು ಎಂದುಕೊಂಡು ಬಂದರೆ, ಕೂಲಿಯವನೊಡನೆ, ಹೋಟೆಲ್‌ಗಳಲ್ಲಿ ಅಥವಾ ಇನ್ನಾವುದೇ ಸಂದರ್ಭಗಳಲ್ಲಿ ವ್ಯವಹರಿಸುವಾಗ ತನಗೆ ಗೊತ್ತಿರುವ ಕನ್ನಡವೇ ಬೇರೆ ಎನ್ನುವ ಅರಿವು ಬರುವುದಲ್ಲದೆ ತೀರ ನಿರಾಶೆಯೂ ಉಂಟಾಗುತ್ತದೆ. ಆದುದರಿಂದ ಎರಡನೆಯ ಭಾಷೆಯನ್ನು ಕಲಿಸುವಾಗ ಅಥವ ಕಲಿಯುವಾಗ ಗ್ರಾಂಥಿಕ ರೂಪಕ್ಕಷ್ಟೇ ಅಲ್ಲದೆ ಇತರ ಪ್ರಭೇದಗಳಿಗೂ ಗಮನಕೊಡಬೇಕಾಗುತ್ತದೆ. ಈ ದೃಷ್ಟಿಯಿಂದಲೂ ಸಂಗ್ರಹಿತ ಉಪಭಾಷಾ ರೂಪಗಳ ಅವಶ್ಯಕತೆ ಇದೆ.

ಇತಿಹಾಸ ಮತ್ತು ಉಪಭಾಷೆ :

ಕನ್ನಡದಲ್ಲಿ ಒಂದು ಗಾದೆಯಿದೆ, "ನಾಲಿಗೆ ಕುಲವನ್ನು ಅರುಹಿತು" ಎಂದು. ಒಂದು ಭಾಷೆಯನ್ನು ಕೇಳಿದಾಗ ಅದನ್ನಾಡುವವನ ದೇಶವನ್ನು ತಿಳಿಯುವಂತೆ, ಒಂದು ಉಪಭಾಷೆಯನ್ನು ಕೇಳಿದಾಗ ಆತನ ಹಿನ್ನಲೆಯನ್ನು ಅರಿಯಬಹುದಾಗಿದೆ. ಒಂದು ಉಪಭಾಷೆ ತನ್ನದೇ ಆದ ಅಂಶಗಳನ್ನು, ರಚನೆಗಳನ್ನು ಹೊಂದಿರುತ್ತದೆ. ಅವುಗಳ ಮುಖಾಂತರ ಆ ಉಪಭಾಷಾ ಜನಾಂಗವನ್ನು ಗುರುತಿಸಬಹುದು. ಕೆಲವು ಸಮಯ ಆ ಭಾಷೆಗೆ ಸಂಬಂಧಿಸದ ಕೆಲವು ಅಂಶಗಳು ಆ ಉಪಭಾಷೆಯಲ್ಲಿ ನಮಗೆ ಗೋಚರಿಸಬಹುದು. ಈ ಅಂಶಗಳ ಜಾಡನ್ನು ಹಿಡಿದು ಆ ಉಪಭಾಷೆಯ ಮೇಲೆ ಆದ ಇತರ ಭಾಷೆಗಳ ಪ್ರಭಾವವನ್ನೂ, ಆಡಳಿತ ನಡೆಸಿರಬಹುದಾದ ಭಾಷಾಜನಾಂಗವನ್ನೂ ಗುರುತಿಸಲು ಸಾಧ್ಯವಿದೆ. ಉದಾ : ಗಡಿನಾಡ ಉಪಭಾಷೆಗಳು. ಇವುಗಳನ್ನು ಅಭ್ಯಸಿಸಿದಾಗ ಆ ಕಡೆಯ ನೆರೆಯ ಭಾಷೆ ಬೀರಿರಬಹುದಾದ ಪ್ರಭಾವಿ ಅಂಶಗಳನ್ನು ಗುರುತಿಸಬಹುದು. ಇದೇ ರೀತಿ ಆ ನಾಡಿಗೆ ಹೊಸದಾಗಿ ಸೇರಿದ ಜಿಲ್ಲೆಗಳಲ್ಲಿಯ ಮೂಲದ ಆಡಳಿತ ಭಾಷೆಯ ಅಂಶಗಳನ್ನು ಗುರುತಿಸಬಹುದು. ಇವು ರಾಜಕೀಯ, ಐತಿಹಾಸಿಕ ಹಾಗೂ ಸಾಮಾಜಿಕ ಅಂಶಗಳನ್ನು ತಿಳಿದುಕೊಳ್ಳಲು ಅನುವಾಗುತ್ತವೆ. ಉಪಭಾಷಾ ಅಧ್ಯಯನ ಇಂಥ ಸಂದರ್ಭಗಳಲ್ಲಿ ತೀರ ಅವಶ್ಯವೆನಿಸುತ್ತದೆ.

ಪ್ರಾಚೀನ ಸಾಹಿತ್ಯ ಮತ್ತು ಉಪಭಾಷೆ :

ಕವಿಯ ಕಾಲ, ದೇಶ, ಪರಿಸರಗಳ ಬಗೆಗೆ ವಿವಾದವಿರುವ ಕೃತಿಗಳನ್ನು ಅಭ್ಯಸಿಸಿ ಅವುಗಳಲ್ಲಿ ಹೆಣೆದುಕೊಂಡಿರುವ ಉಪಭಾಷಿಕ ಅಂಶಗಳನ್ನು ಗಮನಿಸಿ ಆ ವಿವಾದಗಳನ್ನು ಪರಿಹರಿಸಲು ಸಾಧ್ಯವಿದೆ. ಉದಾ : ವಡ್ಡಾರಾಧನೆಯಲ್ಲಿ ನೆಲೆನಿಂತ ಉಪಭಾಷೆಯ ಅಂಶಗಳನ್ನು ಗಮನಿಸಿ ಡಾ. ಕುಂದಣಗಾರರು ಇದರ ಕರ್ತೃ ಪಶ್ಚಿಮ ಘಟ್ಟದವನೆಂದು ಮಂಡಿಸಿದ ಅಭಿಪ್ರಾಯವನ್ನೂ, ಕುಮಾರವ್ಯಾಸ ಭಾರತದಲ್ಲಿಯ

ಉರ್ದು ಭಾಷೆಯ ಶಬ್ದಗಳನ್ನು ಗಮನಿಸಿ ಅನೇಕರು ಆತನ ಕಾಲನಿರ್ಣಯಮಾಡಿದುದನ್ನೂ ಇಲ್ಲಿ ನೆನೆಯಬಹುದು. ಹಳಗನ್ನಡದಲ್ಲಿ ಕಾಣುವ ದೀನಾರ, ದ್ರಮ್ಮ ಮೊದಲಾದ ಪದಗಳು ಆ ಕೃತಿಗಳ ಕಾಲ ಮತ್ತು ಪರಿಸರವನ್ನು ತಿಳಿಸುತ್ತವೆ.

ಭಾಷಾಕಂದರ ಮತ್ತು ಉಪಭಾಷೆ :

ಕೆಲವು ಸಲ ಅಸ್ವಾಸ್ಥ್ಯದಿಂದಲೋ, ಆಕಸ್ಮಿಕವಾಗಿಯೋ ವ್ಯಕ್ತಿಯ ಭಾಷಾ ಉತ್ಪಾದನೆಯಲ್ಲಿ ತಡೆ ಉಂಟಾಗಬಹುದು. ಈ ಸಂದರ್ಭದಲ್ಲಿ ಆತನಿಗೆ ವೈದ್ಯಕೀಯ ಉಪಚಾರ ನೀಡುವುದರಿಂದ ಮತ್ತು ಆತನನ್ನು ಸತತ ಉಚ್ಚಾರ ಪ್ರಯತ್ನಕ್ಕೊಳಪಡಿಸುವುದರ ಮೂಲಕ ಪುನಃ ಮಾತನಾಡುವಂತೆ ಮಾಡಬಹುದು. ಈಗ ಸಂಪೂರ್ಣ ಹೊಸದಾದ ಭಾಷಾರೂಪವನ್ನು ಕಲಿಸುವುದಕ್ಕಿಂತ ಆತನದೇ ಆದ ಉಪಭಾಷೆಯ ರೂಪವನ್ನು ಆತನೊಂದಿಗೆ ಬಳಸುವುದು ಸೂಕ್ತ. ಈ ದಿಶೆಯಲ್ಲಿ ದುಡಿಯುವವನಿಗೆ ಉಪಭಾಷಾ ಸಂಗ್ರಹ ಸಂಪೂರ್ಣ ಸಹಾಯಕವಾಗುತ್ತದೆ. ಅಂದರೆ ಒಂದುವೇಳೆ ಪ್ರಮಾಣರೂಪವನ್ನು ಬಳಸುವುದಾದರೆ ಅದರ ಉಚ್ಚಾರ ಮತ್ತು ರಚನೆಗಳನ್ನೂ ಆತ ಕಲಿಯಬೇಕಾಗುತ್ತದೆ. ಅದರ ಬದಲು ಆತನ ಉಪಭಾಷೆಯ ಅಂಶಗಳನ್ನು ಬಳಸಿದಾಗ ಆತನ ಉಚ್ಚಾರಪ್ರಯತ್ನಕ್ಕೆ ಮಾತ್ರ ಗಮನವನ್ನಿಟ್ಟರೆ ಸಾಕು. ಉಳಿದ ಅಂಶಗಳು, ರಚನೆಗಳು ಆತನಿಗೆ ಹಳೆಯವೇ. ಇದರಿಂದ ಕಲಿಯುವುದು ಕಷ್ಟ ಎನಿಸಲಿಕ್ಕಿಲ್ಲ.

ಮನೋರೋಗಿಗಳು ಮತ್ತು ಉಪಭಾಷೆ :

ಮನೋರೋಗಿಗಳನ್ನು ಗುಣಪಡಿಸಲು ಮೊದಲು ಆತನ ಮಾನಸಿಕ ಸ್ಥಿತಿಯನ್ನು; ಮಾನಸಿಕ ಗೊಂದಲಗಳನ್ನು ಅರಿಯಬೇಕಾಗುತ್ತದೆ; ಆ ರೋಗಿಯೊಂದಿಗೆ ಬೆರೆಯಬೇಕಾಗುತ್ತದೆ; ಆತನೊಡನೆ ಸಂಭಾಷಿಸಬೇಕಾಗುತ್ತದೆ. ಹೀಗಾಗಿ ಆತನನ್ನು ಅರ್ಥಮಾಡಿಕೊಳ್ಳಲು ಅವನ ಭಾಷಾರೂಪವನ್ನು ತಿಳಿದಿರಬೇಕು. ಅವನಿಂದ ನಮಗೆ ಅರ್ಥವಾಗಬಹುದಾದ ಪ್ರಮಾಣರೂಪವನ್ನು ಬಯಸುವುದು ತಪ್ಪಾದೀತು. ಇದರ ಬದಲಾಗಿ ವೈದ್ಯಕೀಯ ಸಿಬ್ಬಂದಿಗೆ, ಇತರ ಉಪಭಾಷಾ ಪರಿಚಯವಾಗಲಿ ಅಥವಾ ಸಹಾಯಕವಾಗುವ ಶಬ್ದಾರ್ಥಕೋಶವಾಗಲಿ ಬೇಕೆನಿಸುತ್ತದೆ.

ಪ್ರಸಾರ ಮಾಧ್ಯಮ ಮತ್ತು ಉಪಭಾಷೆ :

ಆಕಾಶವಾಣಿ, ಚಲನಚಿತ್ರ, ಪತ್ರಿಕೆ, ಟೆಲಿವಿಷನ್ ಇತ್ಯಾದಿಗಳು ಇಂದು ಪ್ರಸಾರ ಮಾಧ್ಯಮವಾಗಿ ಪ್ರಚಲಿತವಿವೆ. ಇವುಗಳಲ್ಲಿ ಆಕಾಶವಾಣಿ, ಪತ್ರಿಕೆಗಳಂತಹ ಪ್ರಾದೇಶಿಕ

ಪ್ರಸಾರ ಮಾಧ್ಯಮಗಳು ತಾವು ಪ್ರಮಾಣಭಾಷೆಯನ್ನು ಬಳಸಿದರೆ ಇಚ್ಛಿತ ಪರಿಣಾಮವನ್ನು ಬೀರಲಾರವು. ಇದಕ್ಕೆ ಹೊರತಾಗಿ ಆಯಾ ಪ್ರದೇಶ ಭಾಷೆಯ ಮೂಲಕ ಪ್ರಸಾರ ಕೈಕೊಂಡರೆ ಬಯಸುವ ಪರಿಣಾಮ ಜನರಿಗೆ ತಲುಪುವುದು ಸಾಧ್ಯ. ಗುಲ್ಬರ್ಗ ಆಕಾಶವಾಣಿ ಕೇಂದ್ರದಿಂದ ಗ್ರಾಂಥಿಕ ಕನ್ನಡದ ಮೂಲಕ ಪ್ರಸಾರ ಮಾಡಿದರೆ, ಆ ಪ್ರದೇಶದ ಜನರು ಗುಲ್ಬರ್ಗಾ ಆಕಾಶವಾಣಿ ಕೇಂದ್ರಕ್ಕಿಂತ ಹೈದ್ರಾಬಾದ್ ಆಕಾಶವಾಣಿ ಕೇಂದ್ರಕ್ಕೆ ಹೆಚ್ಚು ಗಮನಕೊಟ್ಟಾರು. ಇದರ ಬದಲು ಅವರದೇ ಆದ ಪ್ರಾದೇಶಿಕ ಭಾಷೆಯಲ್ಲಿಯ ಪ್ರಸಾರ ಅವರ ಕನ್ನಡಪ್ರೇಮವನ್ನು ಉಳಿಸೀತು. ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮತ್ತು ಉದಯವಾಣಿಗಳು ಸುದ್ದಿ ಮತ್ತು ಭಾಷೆಯ ದೃಷ್ಟಿಯಿಂದ ಸಾಮಾನ್ಯವಾಗಿ ಒಂದೊಂದು ಪ್ರದೇಶವನ್ನು ಪ್ರತಿನಿಧಿಸುತ್ತವೆ. ಇಂಥ ಪತ್ರಿಕೆಗಳು ಪ್ರಮಾಣಭಾಷೆಯನ್ನು ಬಳಸುವುದಕ್ಕಿಂತ ಪ್ರದೇಶಭಾಷೆಯನ್ನು ಬಳಸಿದರೆ ಹೆಚ್ಚು ಗುರಿಯನ್ನು ಸಾಧಿಸುತ್ತವೆ. ಉದಾ : ಕನ್ನಡ ಪ್ರಾಧ್ಯಾಪಕರೊಬ್ಬರು (ಧಾರವಾಡದ) ತಮಗೆ ಪ್ರಜಾವಾಣಿಯನ್ನು ಸಂಯುಕ್ತ ಕರ್ನಾಟಕದಷ್ಟು ಸರಾಗವಾಗಿ ಓದಲಾಗದು ಎನ್ನುತ್ತಾರೆ. ಪರಿಸ್ಥಿತಿ ಹೀಗಿದ್ದಾಗ ಪ್ರಮಾಣ ಭಾಷೆಯನ್ನೇ ಬಳಸಿದರೆ ಪತ್ರಿಕೆ ಓದುವ ಅಭಿರುಚಿಯೇ ಕ್ಷಯಿಸೀತು. ಇದನ್ನು ಮನಗಂಡ ಕಾರಣ ಸಂಯುಕ್ತ ಕರ್ನಾಟಕದ ಬೆಂಗಳೂರಿನ ರೂಪವೇ ಬೇರೆ, ಹುಬ್ಬಳ್ಳಿಯ ರೂಪವೇ ಬೇರೆ. ಇನ್ನು ಚಲನಚಿತ್ರಗಳು ಪ್ರಾದೇಶಿಕ ರೂಪವನ್ನು ಬಳಸಿದರೆ ಆ ಪ್ರದೇಶದಲ್ಲಿ ಜಯಶಾಲಿಯಾಗುವುದು ಖಂಡಿತ, ಅವು ಒಂದು ಪ್ರದೇಶದಲ್ಲಿ ಮಾತ್ರ ಜಯಶಾಲಿಯಾಗಿ ಇನ್ನೊಂದು ಪ್ರದೇಶದಲ್ಲಿ ಸೋಲುವುದರಿಂದ ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ. ಉದಾ : ಸಂಗೊಳ್ಳಿ ರಾಯಣ್ಣ. ಮಾಡಿ ಮಡಿದವರು. ಆದರೆ ಒಂದು ಸಂಸ್ಕೃತಿಯನ್ನು, ಒಂದು ಜನಾಂಗವನ್ನು ಬಿಂಬಿಸುವಾಗ ಮಾತ್ರ ಪ್ರಾದೇಶಿಕ ರೂಪವನ್ನು ಬಿಟ್ಟು ಪ್ರಮಾಣರೂಪವನ್ನು ಬಳಸುವುದು ಅಸಹಜವೆನಿಸುತ್ತದೆ. ಉದಾ : ಚೋಮನದುಡಿ, ಕಿತ್ತೂರ ಚೆನ್ನಮ್ಮ. ಆದ್ದರಿಂದ ಪ್ರಸಾರಮಾಧ್ಯಮಗಳಲ್ಲಿ ದುಡಿಯುವವನು. ವ್ಯವಹರಿಸುವವನು ಉಪಭಾಷೆಗಳ ನರ-ನಾಡಿಗಳನ್ನು ತಿಳಿದಿರಬೇಕಾಗುತ್ತದೆ.

ನೌಕರರು ಮತ್ತು ಉಪಭಾಷೆ :

ಸ್ಥಾನಿಕ ಜನಾಂಗದೊಂದಿಗೆ ವ್ಯವಹರಿಸಲು ಅವರನ್ನು ಅರಿತು ನಡೆಯಲು. ಮಧುರ ಬಾಂಧವ್ಯವನ್ನು ಬೆಳೆಸಿಕೊಳ್ಳಲು ನೌಕರರು ಅಲ್ಲಿಯ ಉಪಭಾಷೆಯನ್ನು ತಿಳಿದಿರಬೇಕು. ತಮ್ಮ ಸಂಸ್ಥೆಯ ಅಥವಾ ಕಛೇರಿಯ ವಿಷಯಗಳನ್ನು ಮನದಟ್ಟಾಗುವಂತೆ ತಿಳಿಸಲು ಅಲ್ಲಿಯ ಭಾಷೆಯಲ್ಲಿ ಪಳಗಿರಬೇಕು. ಉದಾ : ''ತಲಾಟಿ ಬರಾಣ ಕುಡ್ಲ್ ಹೇಳ್ತ'' ಎನ್ನುವ ವಾಕ್ಯ ಬೀದರ್‌ನವನಿಗಾಗ್ಲಲಿ ಗುಲರ್ಗದವನಿಗಾಗಲಿ ಅರ್ಥ

ವಾಗುತ್ತದೆ. ಅದೇ ಮೈಸೂರು ಪ್ರದೇಶದ ತಾಲೂಕು ಕಛೇರಿಗಳಲ್ಲಿ ಬಳಸಿದರೆ ಖಂಡಿತ ತಿಳಿಯಲಾರದು. ಇಲ್ಲಿ "Village accountant ಬಂದೊಡನೆ ಕೊಡಲು ಹೇಳುತ್ತೇನೆ" ಎಂದೇ ಹೇಳಬೇಕು. ಅದೇ ರೀತಿ "ನಾಳೆ ರಜಾರಿ" ಎನ್ನುವುದನ್ನು ಧಾರವಾಡದಿಂದ ಮೇಲಕ್ಕೆ "ನಾಳೆ ಸೂಟಿ" ಎಂದೇ ಹೇಳಬೇಕು. ಇಂಥ ಉದಾಹರಣೆಗಳು ನಿಮಿಷ ನಿಮಿಷಕ್ಕೆ ಕಛೇರಿಯಿಂದ ಕಛೇರಿಗೆ ಸಾವಿರಾರು ಸಿಗುತ್ತವೆ. ಇನ್ನು ಜನರು ತಮ್ಮ ಭಾಷೆಯ ನೌಕರರೊಡನೆ ಬೆರೆತಷ್ಟು ಇತರ ಭಾಷಿಕರೊಡನೆ ಬೆರೆಯಲಾರರು. ಅಷ್ಟೇ ಅಲ್ಲ ನಂಬಿಕೆಯನ್ನಾಗಲಿ ವಿಶ್ವಾಸವನ್ನಾಗಲಿ ತಾಳಲಾರರು. ಹೀಗಾಗಿ ನೌಕರನಾದವನಿಗೆ ಪ್ರದೇಶಕ್ಕೆ ತಕ್ಕ ಭಾಷೆಯನ್ನು ಗ್ರಹಿಸುವುದು, ಬಳಸುವುದು ಅವಶ್ಯವಾಗಿರುತ್ತದೆ.

ಪ್ರಚಾರ ಮತ್ತು ಉಪಭಾಷೆ :

ಸಿನಿಮಾದವರು, ನಾಟಕದವರು ಅಥವಾ ಯಾವುದೇ ಪ್ರಚಾರನಿರತರನ್ನು ಉತ್ಸವ, ಸಂತೆ, ಸಮಾರಂಭಗಳಲ್ಲಿ ಕಾಣಬಹುದು. ಇವರು ಒಂದು ಕೇರಿಯಲ್ಲಿ ಮಾತನಾಡಿದಂತೆ ಇನ್ನೊಂದು ಕೇರಿಯಲ್ಲಿ ಮಾತನಾಡಲಾರರು. ಅದೇ ರೀತಿ ಒಂದು ಪ್ರದೇಶದಲ್ಲಿ ಒಂದು ಉಪಭಾಷೆಯನ್ನು ಬಳಸಿದರೆ ಇನ್ನೊಂದು ಪ್ರದೇಶದಲ್ಲಿ ಇನ್ನೊಂದು ಉಪಭಾಷೆಯನ್ನೇ ಬಳಸುತ್ತಾರೆ. ಇದು ನಮ್ಮ ನಿತ್ಯ ಅನುಭವದ ಮಾತು. ನಾಟಕ ಕಂಪನಿ ದಾವಣಗೆರೆಯದೇ ಇರಬಹುದು: ಧಾರವಾಡದಲ್ಲಿ ಧಾರವಾಡ ಕನ್ನಡದ ಮೂಲಕ ಪ್ರಸಾರ, ಮೈಸೂರಿನಲ್ಲಿ ಮೈಸೂರು ಕನ್ನಡ, ಮಂಡ್ಯದಲ್ಲಿ ಮಂಡ್ಯ ಕನ್ನಡ ಈ ರೀತಿ. ಅಂದರೆ ಆಯಾ ಪ್ರದೇಶದಲ್ಲಿ ತಮ್ಮ ಪ್ರಚಾರ, ಜನರನ್ನು ತಟ್ಟಲು ಅವರ ಭಾಷೆಯನ್ನೇ ಬಳಸಬೇಕಾಗುತ್ತದೆ. ಅದಕ್ಕಾಗಿ ಭಿನ್ನರೂಪಗಳನ್ನು ಬಲ್ಲವನನ್ನು ಅಭ್ಯಸಿಸಿರುವವನನ್ನು ನೇಮಿಸಿಕೊಂಡಿರುತ್ತಾರೆ. ಅದರ ಬದಲು ಪ್ರಮಾಣಭಾಷೆಯನ್ನು ಬಳಸಿದರೆ ಅರ್ಥವಾಗುವುದಿಲ್ಲವೆಂದಲ್ಲ. ಆದರೆ ಅಷ್ಟು ಪರಿಣಾಮಕಾರಿಯಾಗಲಾರದು. ಪ್ರಚಾರಕ್ಕಾಗಿಯೇ ತಯಾರಿಸುವ ಸಾಕ್ಷಿ ಚಿತ್ರಗಳನ್ನು ಸಹ ಪ್ರಾದೇಶಿಕ ಭಾಷೆಯಲ್ಲಿಯೇ ತೆಗೆಯಬೇಕಾಗುತ್ತದೆ. ಇದೇ ರೀತಿ ಔಷಧಿ, ಕೈಗಾರಿಕಾ ವಸ್ತುಗಳ ಪ್ರಚಾರ, ಸರಕಾರದ ಧೋರಣೆ-ಸಾಧನೆಗಳ ಪ್ರಚಾರ ಮೊದಲಾದ ಸಾಕ್ಷಿ ಚಿತ್ರಗಳಿಗೆ ಪ್ರಾದೇಶಿಕ ಭಾಷೆಯನ್ನೇ ಬಳಸುವುದು ಲೇಸು.

ಪದನಿರ್ಮಾಣ ಮತ್ತು ಉಪಭಾಷೆ :

ಹೊಸ ಹೊಸ ವಿಷಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಂತೆ ಅವುಗಳಿಗೆ ಬೇಕಾದ ಪದಗಳನ್ನು ಅನ್ಯಭಾಷೆಯಿಂದ ಸ್ವೀಕರಿಸುವುದು ಒಂದು ವಿಧ. ತಮ್ಮ

ಭಾಷೆಯ ಪದಗಳಿಂದಲೇ ಹೊಸ ಪದಗಳನ್ನು ನಿರ್ಮಾಣ ಮಾಡುವುದು ಇನ್ನೊಂದು ವಿಧ. ಈ ಸಂದರ್ಭದಲ್ಲಿ ಉಪಭಾಷಾ ಶಬ್ದಗಳು ಸಹಕಾರಿಯಾಗಬಲ್ಲವು. ಇದರಿಂದಾಗಿಯೇ Foundation stone ಬದಲಾಗಿ ಹಳಗನ್ನಡದಲ್ಲಿ 'ಕೆಸರುಗಲ್ಲು' ರೂಪವಿದೆ. Hand bag ಗೆ ಬದಲಾಗಿ 'ಕೈಚೀಲ' ಬಳಸಿದೆವು. ಇನ್ನೂ ಕೆಲ ಹಳ್ಳಿಗಳಲ್ಲಿ Motor cycle ಗೆ ಬದಲಾಗಿ 'ಪಟ ಪಟಿ' ಶಬ್ದವನ್ನು ಕೇಳುತ್ತೇವೆ. Stool ಗೆ ಬದಲಾಗಿ 'ಕಾಲ್ಮಣೆ' ಕೇಳಿಬರುತ್ತದೆ.

ರಕ್ತಸಂಬಂಧ ಮತ್ತು ಉಪಭಾಷೆ :

ಭಿನ್ನ ಉಪಭಾಷೆಗೆ ಸೇರಿದವರನ್ನು ವಧೂ ವರರನ್ನಾಗಿ ಆರಿಸಬೇಕೊ, ಬೇಡವೊ ಎನ್ನುವ ಪ್ರಶ್ನೆ ಕೆಲವು ದೇಶಗಳಲ್ಲಿ ಪ್ರಮುಖವಾಗಿದೆ. ಅಂದರೆ ಪರಸ್ಪರರು ಉಪಭಾಷೆಯ ಭಿನ್ನ ಅಂಶಗಳನ್ನು ಅರ್ಥ ಮಾಡಿಕೊಳ್ಳದೆ ಮನಸ್ತಾಪ ಹೊಂದಬಹುದು. "ಆತನ ಭಾಷೆ ತನಗೆ ಅರ್ಥವಾಗದು ಆದ್ದರಿಂದ ವಿವಾಹ ವಿಚ್ಛೇದನ ನೀಡಿ'' ಎನ್ನುವ ದೂರುಗಳು ಅಮೇರಿಕದಂತಹ ದೇಶಗಳಲ್ಲಿ ಕೇಳಿಬರುತ್ತವೆ. ಉಪಭಾಷಾ ಅಧ್ಯಯನ ಮತ್ತು ಸಾಮಗ್ರಿ ಸಂಗ್ರಹಗಳು ಇಂಥ ಸಮಸ್ಯೆಗಳನ್ನು ಕೆಲಮಟ್ಟಿಗೆ ಪರಿಹರಿಸಬಹುದು.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದರೆ ಉಪಭಾಷಾ ಅಧ್ಯಯನದ ಅವಶ್ಯಕತೆ ಅನುಭವಕ್ಕೆ ಬರುತ್ತದೆ. ಸಾಮಾಜಿಕ, ವ್ಯಾವಹಾರಿಕ ಸಂದರ್ಭಗಳಲ್ಲಿ ಅದು ನೀಡುವ ನೆರವು ಅದರ ಮಹತ್ವಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಇದಲ್ಲದೆ ಭಾಷೆ ದಿನದಿಂದ ದಿನಕ್ಕೆ ಬದಲಾವಣೆಯನ್ನು ಹೊಂದುತ್ತಿರುವುದರಿಂದ ನಿರ್ದಿಷ್ಟ ಕಾಲದ ಉಪಭಾಷಾ ರೂಪಗಳು ಕೇವಲ ಆಡುರೂಪಗಳಲ್ಲಿಯೇ ಇಂಗಿಹೋಗುವುದು ಸಹಜ. ಆದುದರಿಂದ ಅವುಗಳನ್ನು ಅಕ್ಷರರೂಪದಲ್ಲಿಯೂ ಮತ್ತು ಧ್ವನಿರೂಪದಲ್ಲಿಯೂ ಸಂಗ್ರಹಿಸುವುದು ಅಗತ್ಯ. ಹೀಗೆ ಸಂಗ್ರಹಿಸಿದ ಸಂಪತ್ತು ಇಂದಿನ ಸಾಹಿತ್ಯವನ್ನು, ಭಾಷೆಯನ್ನು ತಿಳಿಯಬಯಸುವ ಮುಂದಿನವರಿಗೆ ಅಥವಾ ಭಾಷೆಯ ಪುನರ್ರಚನೆಯಲ್ಲಿ ಆಸ್ಥೆಯುಳ್ಳವರಿಗೆ, ಅಷ್ಟೇ ಏಕೆ ಸಂಸ್ಕೃತಿಯ ಪುನರ್ರಚನೆಯಲ್ಲಿ ನಿರತರಾಗಿರುವವರಿಗೆ ಸಹಾಯಕವಾಗುವಲ್ಲಿ ಸಂದೇಹವಿಲ್ಲ.

● ●

ಕನ್ನಡ ಭಾಷಾಪ್ರಭೇದಗಳ ನಿರ್ಮಾಣ ಕಾರಣಗಳು

● ಸಂಗಮೇಶ ಸವದತ್ತಿಮಠ

೦.೧ ನಿರಂತರವಾಗಿ ಬೆಳವಣಿಗೆಯ ಲಕ್ಷಣಗಳನ್ನು ತೋರುವ ಯಾವುದೇ ಜೀವಂತಭಾಷೆ ಸದಾವಕಾಲವೂ ಒಂದೇ ತೆರನಾಗಿರುವುದು ಅಸಾಧ್ಯ. ಭಾಷೆ ತನ್ನ ಶಿಷ್ಟತೆಯನ್ನು ಕಾಯ್ದುಕೊಂಡರೂ ತನ್ನ ರಚನೆಯ ಚೌಕಟ್ಟಿನೊಳಗೇ ಅದು ಬೆಳವಣಿಗೆ ಹೊಂದುವುದು. ಒಂದು ಭಾಷೆಯ ಬೆಳವಣಿಗೆಯ ಇತಿಹಾಸವು ಆ ಭಾಷೆ ಬಳಕೆಯಲ್ಲಿರುವ ಪ್ರದೇಶದ ವೈಶಾಲ್ಯ, ರಾಜಕೀಯ–ಸಾಮಾಜಿಕ ಸ್ಥಿತ್ಯಂತರಗಳು ಹಾಗೂ ಅನ್ಯಭಾಷೆಗಳ ಸಂಪರ್ಕ ಮುಂತಾದ ಹಲವು ಬಾಹ್ಯ ಅಂಶಗಳ ಮೇಲೆ ಸಾಮಾನ್ಯವಾಗಿ ನಿಂತಿರುತ್ತದೆ. ಈ ಅಂಶಗಳು ಭಾಷೆಯಲ್ಲಿ ಉಪಭಾಷೆಗಳನ್ನೂ ಭಾಷಾಪ್ರಭೇದಗಳನ್ನೂ ಉಂಟುಮಾಡುತ್ತವೆ. ಭಾಷೆ ಬೆಳೆಯುತ್ತ ಸಾಗಿದಂತೆ ಆಂತರಿಕವಾಗಿ ಅನೇಕ ಬದಲಾವಣೆಗಳು ನಡೆದೇ ಇರುತ್ತವೆ. ಒಂದು ಭಾಷೆಯ ಅಂತಹ ಭಾಷಿಕ ಬದಲಾವಣೆಗಳ ವೈವಿಧ್ಯವನ್ನು ಹಾಗೂ ತಂತ್ರಗಳನ್ನು ವ್ಯವಸ್ಥಿತವಾಗಿ ಐತಿಹಾಸಿಕ ಭಾಷಾವಿಜ್ಞಾನ ವಿವರಿಸುತ್ತದೆ. ಹಲವು ವ್ಯಕ್ತಿಗಳು ಕೆಲವು ವಿಶಿಷ್ಟತೆಗಳೊಡನೆ ಆಡುವ ನುಡಿಯನ್ನು ಆ ವ್ಯಕ್ತಿಗಳು ಆಡುವ ಭಾಷೆಯ ಒಂದು "ಪ್ರಭೇದ" ಎಂದು ಸ್ಥೂಲವಾಗಿ ಹೇಳಬಹುದು. ಬಹುಶಃ ವ್ಯಾಪಕವಾಗಿ ಅಂಥ ಇನ್ನೂ ಕೆಲ ಪ್ರಭೇದಗಳನ್ನೂ ಒಳಗೊಂಡು ಸಾಮಾಜಿಕ ಇಲ್ಲವೆ ಪ್ರಾದೇಶಿಕವಾಗಿ ಎದ್ದುಕಾಣುವ ವಿಶಿಷ್ಟ ಭಾಷಾ ಅಂಶಗಳನ್ನು ಹೊಂದಿ ಪರಸ್ಪರ ಗ್ರಹಿಕೆ (Mutual intelligibility)ಗೆ ಬಾಧೆ ಬರದಂತೆ ಬಳಕೆಗೊಳ್ಳುವ ಪ್ರಭೇದಭಾಷೆಯನ್ನು "ಉಪಭಾಷೆ" ಎಂದು ಹೆಸರಿಸಬಹುದು. ಉಪಭಾಷೆ ಹಾಗೂ ವ್ಯಕ್ತಿಭಾಷೆ ಇವುಗಳ ಮಧ್ಯ ಒಂದು ಹಂತದಲ್ಲಿರುವ 'ಪ್ರಭೇದ ಭಾಷೆ'ಯ ಅಸ್ತಿತ್ವ ಒಂದು ಗ್ರಾಮ ಅಥವಾ ತಾಲೂಕು. ಅತಿ ಹೆಚ್ಚೆಂದರೆ ಒಂದು ಜಿಲ್ಲೆಗೆ ಸಾಮಾನ್ಯವಾಗಿ ಸೀಮಿತವಾಗಿರುತ್ತದೆ. ಗ್ರಾಮವು ವ್ಯಕ್ತಿಭಾಷೆಗಳ ಒಟ್ಟು ಮೊತ್ತದ ಒಂದು ಪ್ರಭೇದದ ಘಟಕವೆಂದು ಸ್ಥೂಲವಾಗಿ ಭಾವಿಸಿ. ತಾಲೂಕು ಸ್ಥಳವು ಅಂತಹ ಹಲವು ಘಟಕಗಳ ಕೇಂದ್ರಸ್ಥಾನ (Focal area) ಎನಿಸುತ್ತದೆ. ಅಂತೆಯೇ ತಾಲೂಕು ಸ್ಥಳದ ಭಾಷೆ ಆ ತಾಲೂಕಿನಲ್ಲಿರುವ ಹಳ್ಳಿಗಳ ಭಾಷೆಗಳ ಪ್ರತಿನಿಧಿಯೆಂದು ಭಾವಿಸಬಹುದಾಗಿದೆ.

ಭೌಗೋಲಿಕವಾಗಿ, ರಾಜಕೀಯವಾಗಿ ತಾಲೂಕು ಮಟ್ಟದ ವರೆಗಿನ ಘಟಕ ಸಾಮಾನ್ಯವಾಗಿ ಬಹಳ ಬದಲಾವಣೆಗೆ ಒಳಪಡುವುದು ಕ್ವಚಿತ್ತಾದ್ದರಿಂದ ತಾಲೂಕು ಮಟ್ಟದವರೆಗಂತೂ ಪ್ರಭೇದಭಾಷೆ ಅಸ್ತಿತ್ವದಲ್ಲಿರುವುದು ಸಹಜ. ಜಿಲ್ಲಾ ಸ್ಥಳ ಇಂತಹ ಹಲವು ತಾಲೂಕು ಪ್ರಭೇದಗಳ ಪ್ರತಿನಿಧಿಯಾಗಿ ನಿಲ್ಲುವುದು. ಜಿಲ್ಲಾ ಪ್ರದೇಶ ವಿಶಾಲವಾಗಿದ್ದರೆ ಭೌಗೋಲಿಕ ಅಡೆತಡೆಗಳು ಹಾಗೂ ಜಿಲ್ಲಾ ಗಡಿಪ್ರದೇಶದ ಸುತ್ತಲೂ ಇರಬಹುದಾದ ಇತರ ಭಾಷೆಗಳ ಪ್ರಭಾವ ಮುಂತಾದ ಕಾರಣಗಳಿಂದ ಒಂದು ಜಿಲ್ಲೆಯ ತುಂಬ ಬಳಕೆಯಲ್ಲಿರುವ ಭಾಷೆ, ಪ್ರಭೇದಭಾಷೆಯ ಘಟ್ಟವನ್ನು ದಾಟಿ ಆ ಜಿಲ್ಲೆಯಲ್ಲಿಯೇ ಉಪಭಾಷೆಯಾಗಿಯೂ ನಿಲ್ಲಬಹುದಾಗಿದೆ.

೦.೨ ಒಂದೊಂದು ಜಿಲ್ಲೆಯ ಘಟಕಗಳನ್ನೇ ಭಾಷಾಪ್ರಭೇದದ ಘಟಕವೆಂದು ಸಧ್ಯದ ಮಟ್ಟಿಗೆ ಗ್ರಹಿಸಿಕೊಂಡು, ಕನ್ನಡ ಭಾಷಾಪ್ರಭೇದಗಳಾಗುವಲ್ಲಿ ಭೌಗೋಲಿಕ, ಸಾಮಾಜಿಕ, ರಾಜಕೀಯ ಹಾಗೂ ಅನ್ಯಭಾಷಾ ಪ್ರಭಾವ ಮುಂತಾದ ಅಂಶಗಳ ಪಾತ್ರ ಎಷ್ಟರಮಟ್ಟಿನದು ಎಂಬುದರ ವಿವೇಚನ ಮಾಡುವುದೇ ಈ ಲೇಖನದ ಉದ್ದೇಶ.

ಭೌಗೋಲಿಕ :

೧.೦ ಭಾಷಾ ಬೆಳವಣಿಗೆಯಲ್ಲಿ ಭೌಗೋಲಿಕತೆ ಮುಖ್ಯವಾದ ಪಾತ್ರವಹಿಸುತ್ತದೆ. ಭಾಷಾ ಬಳಕೆಯ ಪ್ರದೇಶ ಎಷ್ಟೆಷ್ಟು ಹೆಚ್ಚು ವಿಸ್ತಾರವಾಗಿರುತ್ತದೆಯೋ ಅಷ್ಟಷ್ಟು ಭಾಷಾಭಿನ್ನತೆಗಳು ಹೆಚ್ಚುತ್ತ ಹೋಗುತ್ತವೆ. ಇದಕ್ಕೆ ಮೂಲಕಾರಣವೆಂದರೆ ಭೌಗೋಲಿಕ ಪರಿಸರ. ಜನರ ಸಂಪರ್ಕ-ಸಾಧನಗಳು ಹೆಚ್ಚಿದಷ್ಟು ಭೌಗೋಲಿಕ ಅಡೆತಡೆಗಳು ಕಡಿಮೆಯಾಗಿ ಭಾಷೆಯಲ್ಲೂ ಶಿಷ್ಟತೆಯ ಹೊಂದಾಣಿಕೆ ಆರಂಭವಾಗುತ್ತದೆ. ಭಾಷಾಪ್ರಭೇದಗಳನ್ನು ಉಂಟುಮಾಡಲು ಕಾರಣವಾಗುವ ಪ್ರಮುಖ ಭೌಗೋಲಿಕ ಅಂಶಗಳೆಂದರೆ ೧. ಗುಡ್ಡ-ಬೆಟ್ಟ-ಪರ್ವತಗಳು ೨. ನದಿಗಳು ೩. ಮರುಭೂಮಿ.

೧.೧ ಕರ್ನಾಟಕದಲ್ಲಿ ಮರುಭೂಮಿಪ್ರದೇಶವಿಲ್ಲದುದರಿಂದ ಮೊದಲಿನ ಎರಡನ್ನು ಗಮನಿಸಬಹುದು. ಪರ್ವತಗಳು, ನದಿಗಳು ಜನಸಂಪರ್ಕವನ್ನು ಕಡಿಮೆಗೊಳಿಸುವುದರಿಂದ ಅವುಗಳ ಬದಿಗಳಲ್ಲಿ ವಾಸಿಸುವ ಜನರ ಭಾಷೆಯಲ್ಲಿ ಸ್ಥಳೀಯವಾಗಿ ಬೆಳೆಯುವ ಪ್ರಭೇದಗಳ ಪ್ರಸಾರಕ್ಕೆ ತಡೆಯುಂಟಾಗುತ್ತದೆ. ಆದರೆ ಆಧುನಿಕಕಾಲದಲ್ಲಿ ಹೆಚ್ಚುತ್ತಿರುವ ಸಂಪರ್ಕ-ಸಾಧನಗಳಿಂದಾಗಿ ನದಿ-ಪರ್ವತಗಳು ಈ ವಿಷಯದಲ್ಲಿ ಗೌಣವೆನಿಸುತ್ತವೆ. ಕರ್ನಾಟಕದ ಕರಾವಳಿಪ್ರದೇಶದುದ್ದಕ್ಕೂ ಹೊಂದಿಕೊಂಡು ಹಬ್ಬಿರುವ ಪಶ್ಚಿಮಘಟ್ಟಗಳು ಉನ್ನತ ಗಿರಿ-ಶಿಖರಗಳಿಂದ, ಕಾಡುಪ್ರಾಣಿಗಳಿಂದ ತುಂಬಿದ ಹಚ್ಚಹಸುರು ದಟ್ಟಡವಿಗಳಿಂದ, ಕಡಿದಾದ ಕೊಳ್ಳಗಳಿಂದ ಒಡಗೂಡಿವ.

ನೀಲಗಿರಿ, ಕೊಡಚಾದ್ರಿ, ಬ್ರಹ್ಮಗಿರಿ, ಕುದುರೆಮುಖ, ಬಾಬಾಬುಡನ್‌ಗಿರಿ ಮುಂತಾದ ಬೆಟ್ಟಗಳ ಸಾಲು ದಕ್ಷಿಣ ಕರಾವಳಿಯಲ್ಲಿ ಹಬ್ಬಿವೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಇವು ಸಂಪೂರ್ಣ ಆವರಿಸಿದ್ದು; ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಪರ್ವತ ಶಾಖೆಗಳು ಪಸರಿಸಿವೆ. ಈ ಬೆಟ್ಟದ ಸಾಲುಗಳು ಕರಾವಳಿ ಕನ್ನಡ ಹಾಗೂ ಮಲೆನಾಡು ಕನ್ನಡ ಇವುಗಳಲ್ಲಿ ಭಿನ್ನತೆಯನ್ನುಂಟುಮಾಡಿವೆ. ಈ ಭಾಗದಲ್ಲಿ ಹರಿಯುವ ನದಿಗಳೂ ದುರ್ಗಮ ಕೊಳ್ಳಗಳೂ ಸ್ಥಳೀಯ ಭಾಷಾಪ್ರಭೇದಗಳು ಈಗಲೂ ಉಳಿಯುವಂತೆ ಮಾಡಿವೆ. ಕರಾವಳಿಪ್ರದೇಶದ ಕನ್ನಡದ ಮೇಲೆ ಕೊಂಕಣಿ, ತುಳು ಹಾಗೂ ಮಲೆಯಾಳಂ ಭಾಷೆಗಳ ಪ್ರಭಾವವನ್ನು ಸಾಮಾನ್ಯವಾಗಿ ಕಾಣಬಹುದಾದರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಯಾಣಿ, ದಕ್ಷಿಣ ಭಾಗದಲ್ಲಿ ತುಳು–ಮಲೆಯಾಳಂ ಪ್ರಭಾವ ಬಹುಮಟ್ಟಿಗೆ ಇದೆ. ಉತ್ತರ ಭಾಗದಲ್ಲಿ ಇವುಗಳ ಪ್ರಭಾವ ಕಡಿಮೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಂಕಣಿ, ಮರಾಠಿ ಭಾಷೆಗಳ ಪ್ರಭಾವ ಹೆಚ್ಚಿಗಿದೆ. ಕರಾವಳಿ ಕನ್ನಡ ಪ್ರದೇಶಗಳಲ್ಲಿ ಮಧ್ಯಸ್ವರ ಉಚ್ಚಸ್ವರ ಆಗಿಲ್ಲ ಅಂದರೆ ಎ > ಇ, ಒ > ಉ ಪರಿವರ್ತನೆ ನಡೆದಿಲ್ಲ. ಸರ್ವನಾಮಗಳಲ್ಲಿಯ ಸಮಾವೇಶ–ಅಸಮಾವೇಶಕ ವ್ಯತ್ಯಾಸ ಈಗಲೂ ಇದೆ. ಇಂತಹ ಅನೇಕ ವೈಶಿಷ್ಟ್ಯಗಳು ಕರಾವಳಿಪ್ರಭೇದಗಳನ್ನು ಇತರ ಪ್ರಭೇದಗಳಿಗಿಂತ ಭಿನ್ನವಾಗಿರಿಸಿವೆ.

ಕರಾವಳಿಪ್ರದೇಶದಲ್ಲಿಯ ಕನ್ನಡಪ್ರಭೇದಗಳು ಲೆಕ್ಕವಿಲ್ಲದಷ್ಟು. ಸಾಮಾಜಿಕವಾಗಿ ಇಲ್ಲಿ ಒಂದೊಂದು ವಿಶಿಷ್ಟ ಜನಾಂಗದವರಿಗೂ ಒಂದೊಂದು ಪ್ರಭೇದ ಅಥವಾ ಉಪಭಾಷೆ. ಅಷ್ಟೇ ಏಕೆ ಒಂದೊಂದು ಹಳ್ಳಿಗೂ ಒಂದೊಂದು ಪ್ರಭೇದ ಕಂಡರೂ ಆಶ್ಚರ್ಯವಿಲ್ಲ. "ಅಂತೂ ಭಾಷೆಯ ಮಟ್ಟಿಗೆ ದಕ್ಷಿಣ ಕನ್ನಡ ಒಂದು ವಿವಿಧ ವಸ್ತು ಪ್ರದರ್ಶನ ಶಾಲೆಯಂತಿದೆ (Museum) ಅಥವಾ ಮೃಗಶಾಲೆಯಂತಿದೆ (Zoo)" ಎಂಬ ಎಂ. ಮರಿಯಪ್ಪ ಭಟ್ಟರ ಮಾತನ್ನಿಲ್ಲಿ ಸ್ಮರಿಸಬಹುದು. ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಂದೊಂದು ಹಳ್ಳಿ ತೀರ ಚಿಕ್ಕವೂ ಆಗಿರುವುದಲ್ಲದೆ ದೂರದೂರದಲ್ಲಿ ನೆಲಸಿರುವುದರಿಂದ ಬಾಹ್ಯ ಜಗತ್ತಿನೊಂದಿಗೆ ಕಡಿಮೆ ಸಂಪರ್ಕ ಹೊಂದಿರುವುದರಿಂದ ಅವು ತಮ್ಮದೇ ಪ್ರಭೇದಗಳನ್ನು ಬೆಳಸಿಕೊಳ್ಳುತ್ತವೆ. ತಾಲೂಕು ಹಾಗೂ ಜಿಲ್ಲಾ ಸ್ಥಳಗಳಲ್ಲಿ ಕೆಲವುಸಲ ಶಿಷ್ಟಭಾಷೆ ವ್ಯಾವಹಾರಿಕ ಕನ್ನಡವಾಗಿ ಬಳಸಲ್ಪಡುತ್ತದೆ. ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಭಾಗಗಳಲ್ಲಿ ಮಲೆನಾಡು ಆವರಿಸಿದೆ. ಆದರೆ ಉತ್ತರಕನ್ನಡ ಜಿಲ್ಲೆಯ ಭಾಷೆಯಂತೆ ಶಿವಮೊಗ್ಗ ಜಿಲ್ಲೆಯ ಭಾಷೆ ಅಲ್ಲ. ಕೊಡಚಾದ್ರಿ ಇವೆರಡರ ಮಧ್ಯೆಗೋಡೆಯಾಗಿ ನಿಂತಿದೆ.

೧.೨ ಪಶ್ಚಿಮಘಟ್ಟಗಳನ್ನು ಬಿಟ್ಟರೆ ಅಷ್ಟೇನೂ ದಟ್ಟವಲ್ಲದ ಮೈಸೂರು, ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಹಬ್ಬಿರುವ, ಪೂರ್ವಘಟ್ಟಗನ್ನೊಳ

ಗಮನಿಸಬೇಕು. ಪೂರ್ವಘಟ್ಟಗಳು ಬಿಡಿಬಿಡಿಯಾಗಿರುವುದರಿಂದಲೂ ಅಷ್ಟು ದುರ್ಗಮವಾಗಿರುವುದಿಲ್ಲವಾದ್ದರಿಂದಲೂ ಪಶ್ಚಿಮಘಟ್ಟಗಳಂತೆ ಪ್ರಭೇದಗಳನ್ನುಂಟು ಮಾಡುವಲ್ಲಿ ಇಗವುಳ ಪಾತ್ರ ಗೌಣ.

ಬಳ್ಳಾರಿ ಜಿಲ್ಲೆಯಲ್ಲಿ ಸೊಂಡೂರಿನ ಬೆಟ್ಟಗಳು ಜಿಲ್ಲೆಯ ತಾಲೂಕುಗಳನ್ನು ಪ್ರತ್ಯೇಕಿಸಿ ಪ್ರಭೇದಗಳನ್ನುಂಟುಮಾಡಿವೆ. ಹೊಸಪೇಟೆ, ಶಿರಗುಪ್ಪ, ಸಿಂಧನೂರು, ಬಳ್ಳಾರಿ, ಸೊಂಡೂರು ತಾಲೂಕುಗಳು ಒಂದೆಡೆಗೆ ನಿಂತರೆ ಹಡಗಲಿ, ಕೂಡ್ಲಿ, ಹರಪನ ಹಳ್ಳಿ ತಾಲೂಕುಗಳು ಮತ್ತೊಂದೆಡೆ ನಿಲ್ಲುತ್ತವೆ. ತುಮಕೂರು ಜಿಲ್ಲೆಯಲ್ಲಿಯ ಬೆಟ್ಟಗಳು ಚಿಕ್ಕವಾಗಿರುವವುರಿಂದ ಭಾಷಾಪ್ರಭೇದಗಳಿಗೆ ಪೋಷಕವೆನಿಸುವುದಿಲ್ಲ. ದೇವರಾಯನದುರ್ಗ, ಮಧುಗಿರಿದುರ್ಗ ಮುಂತಾದ ಬೆಟ್ಟಗಳು ಜಿಲ್ಲೆಯ ದಕ್ಷಿಣ ಭಾಗದಲ್ಲಿ ದಕ್ಷಿಣ–ಪೂರ್ವ ದಿಕ್ಕಿಗೆ ಹಬ್ಬಿನಿಂತಿವೆ. ಜಿಲ್ಲೆಯ ಇತರ ತಾಲೂಕು ಗಳಲ್ಲಿಯೂ ಚಿಕ್ಕಚಿಕ್ಕ ಬೆಟ್ಟಗಳಿವೆ. ಚಿತ್ರದುರ್ಗ ಜಿಲ್ಲೆಯಲ್ಲಿಯೂ ಪೂರ್ವ ಘಟ್ಟದ ಅನೇಕ ಸಾಲುಗಳು ಹಬ್ಬಿನಿಂತಿವೆ. ಬಿಳಿಗಿರಿರಂಗನ ಬೆಟ್ಟದ ಸಾಲು ಪ್ರಮುಖವಾದವು.

ಭಾಷಾಪ್ರಭೇದಗಳನ್ನುಂಟುಮಾಡುವಲ್ಲಿ ನದಿಗಳೂ ಮುಖ್ಯ ಪಾತ್ರವಹಿಸು ತ್ತವೆ. ಕೃಷ್ಣಾ, ತುಂಗಭದ್ರಾ, ಕಾವೇರಿ, ಭೀಮಾ, ಮಲಪ್ರಭಾ, ಘಟಪ್ರಭಾ, ಹೇಮಾವತಿ, ನೇತ್ರಾವತಿ ಮುಂತಾದ ನದಿಗಳು ಅವು ಹರಿಯುವ ಎರಡೂ ಬದಿಗೆ ಪ್ರಭೇದಗಳನ್ನು ಉಂಟುಮಾಡಿವೆ. ಜಿಲ್ಲೆ, ತಾಲೂಕುಗಳ ಗಡಿಪ್ರದೇಶ ಎಷ್ಟೋ ಸಲ ನದಿಗಳಿಗೆ ಹೊಂದಿ ಇರುವುದರಿಂದ ಪ್ರಭೇದಗಳು ಇನ್ನೂ ಹೆಚ್ಚು ಗಟ್ಟಿಗೊಳ್ಳು ತ್ತವೆ. ಉದಾಹರಣೆಗೆ: ಕೃಷ್ಣಾ, ತುಂಗಭದ್ರಾ ನದಿಗಳ ಮಧ್ಯದಲ್ಲಿರುವ ರಾಯ ಚೂರು ಜಿಲ್ಲೆಯ ಭಾಷೆ ಒಂದು ಪ್ರಭೇದವಾಗಿರುವುದನ್ನಿಲ್ಲಿ ಗಮನಿಸಬಹುದು.

ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರಾ ನದಿಯು ಭದ್ರಾವತಿ, ಚನ್ನಗಿರಿ ತಾಲೂಕು ಗಳನ್ನು ಜಿಲ್ಲೆಯ ಇತರ ತಾಲೂಕುಗಳಿಂದ ಪ್ರತ್ಯೇಕಿಸಿದೆ. ವಿಜಾಪುರ, ಧಾರವಾಡ ಜಿಲ್ಲೆಗಳ ಗಡಿಯಲ್ಲಿ ಸುಮಾರು ೨೦ ಮೈಲುಗಳ ವರೆಗೆ ಹರಿಯುವ ಮಲಪ್ರಭಾ ನದಿ ಅವೆರಡೂ ಜಿಲ್ಲೆಗಳ ಪ್ರಭೇದಗಳನ್ನು ಪ್ರತ್ಯೇಕಿಸುವಲ್ಲಿ ಪಾತ್ರವಹಿಸಿದೆಯೆನ್ನಬಹುದು. ಕಲಬುರ್ಗಿ ಜಿಲ್ಲೆಯಲ್ಲಿ ಭೀಮಾ ನದಿಯು ದಕ್ಷಿಣ–ಉತ್ತರ ಕಡೆಗಳಲ್ಲಿ ಪ್ರಭೇದ ಗಳನ್ನು ನಿರ್ಮಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನದಿ ರಾಯಚೂರು ಹಾಗೂ ಬಳ್ಳಾರಿ ಭಾಷೆಯನ್ನು ಭಿನ್ನವಾಗಿಸಿದೆ. ಅದೇ ನದಿ ಧಾರವಾಡ ಹಾಗೂ ಬಳ್ಳಾರಿ ಭಾಷೆಗಳನ್ನೂ ಪ್ರತ್ಯೇಕವಾಗಿರಿಸಿದೆ. ಒಟ್ಟಿನಲ್ಲಿ ಭೀಮಾ, ಕೃಷ್ಣಾ, ಮಲಪ್ರಭಾ, ತುಂಗಭದ್ರಾ, ಕಾವೇರಿ ಮುಂತಾದ ಮುಖ್ಯ ನದಿಗಳು ತಕ್ಕಮಟ್ಟಿಗಾದರೂ ಪ್ರಭೇದ

ಗಳಾಗುವಲ್ಲಿ ಸಹಾಯಕಾರಿಯಾಗಿವೆ. ಅನೇಕ ನದಿಗಳಿಗೆ ಈಗ ಸೇತುವೆಗಳಾಗಿ ಸಂಪರ್ಕಸಾಧನಗಳ ಅನುಕೂಲತೆ ಉಂಟಾಗಿರುವುದರಿಂದ ಇವುಗಳ ಪಾತ್ರ ಈಗ ಕಡಿಮೆಯಾಗುತ್ತಿದೆ.

ಭೌಗೋಲಿಕ ಅಡೆ-ತಡೆಗಳು (ಭಾಷಾಪ್ರಭೇದಗಳಾಗುವಲ್ಲಿ ಪ್ರಮುಖ ಅಂಶಗಳಾಗಿದ್ದರೂ) ಇಂದಿನ ವೈಜ್ಞಾನಿಕ ಯುಗದಲ್ಲಿ ಅಡೆ-ತಡೆಗಳೇ ಎನಿಸುತ್ತಿಲ್ಲ. ಇದಕ್ಕೆ ಪೂರಕವಾಗಿ ರೇಡಿಯೋ, ಚಲನಚಿತ್ರ, ವೃತ್ತಪತ್ರಿಕೆಗಳು, ಶಿಕ್ಷಣ ಪ್ರಸಾರ ಮುಂತಾದವುಗಳೂ ಭಾಷೆಯ ಪ್ರಭೇದಗಳ ಗೋಡೆಯನ್ನು ಮುರಿದು ಶಿಷ್ಟಭಾಷೆಯಲ್ಲಿ ಲೀನಗೊಳಿಸತೊಡಗಿವೆ. ಆದರೆ ಇನ್ನೂ ಕೆಲವು ಹಳ್ಳಿಗಳ ಪ್ರದೇಶದಲ್ಲಿ ಪ್ರಭೇದಗಳಿಗೆ ಧಕ್ಕೆಯುಂಟಾಗಿಲ್ಲ. ಅದಕ್ಕೆ ಕಾರಣವೆಂದರೆ ಪ್ರಾಂತೀಯತೆ (Provinciation) ವೈಯಕ್ತಿಕತೆ (Individualism) ಹಾಗೂ ಪ್ರತಿಷ್ಠೆ (Prestige) ಅಂಶಗಳು.

ಸಾಮಾಜಿಕ :

೨.೦ ಭೌಗೋಲಿಕ ಅಂಶಗಳಲ್ಲದೆ ಸಾಮಾಜಿಕ ಅಂಶಗಳೂ ಭಾಷಾಪ್ರಭೇದಗಳಾಗುವಲ್ಲಿ ಪ್ರಮುಖ ಕಾರಣಗಳಾಗುತ್ತವೆ. ಅಂತೆಯೇ ಅಂತಸ್ತು, ಜಾತಿ, ವಿದ್ಯೆ ಮುಂತಾದ ಸಾಮಾಜಿಕ ಅಂಶಗಳ ಆಧಾರಗಳ ಮೇಲೆಯೂ ಪ್ರಭೇದಗಳನ್ನು ಗುರುತಿಸುವ ಪದ್ಧತಿಗಳಿವೆ. ಮನುಷ್ಯ, ಸಮಾಜಜೀವಿಯಾದ್ದರಿಂದ ತಾನು ಯಾವ ಸಮಾಜದ ಪರಿಸರದಲ್ಲಿ ಇರುವನೋ ಅಂಥ ಸಾಮಾಜಿಕಪರಿಸರದ ಭಾಷೆಯನ್ನೇ ಅವನು ಅಳವಡಿಸಿಕೊಳ್ಳುತ್ತಾನೆ.

ಜಾತಿ ಅಥವಾ ಜನಾಂಗದ ಆಧಾರದ ಮೇಲೆ ಪ್ರಭೇದಗಳನ್ನಷ್ಟೇ ಏಕೆ ಉಪಭಾಷೆಗಳನ್ನೂ ಸೂಚಿಸುವ ವಾಡಿಕೆ ಇದೆ. ಒಂದು ಜಾತಿಯ ಜನರಲ್ಲಿ ದೇಹಸಂಬಂಧ ಹಾಗೂ ಇನ್ನಿತರ ವ್ಯವಹಾರ ಹೆಚ್ಚು ನಡೆಯುವುದರಿಂದ ಅವರ ನಡುವೆ ಭಾಷಾಸಂಪರ್ಕ ಒಂದೇ ತೆರನಾಗಿರುತ್ತದೆ. ಒಂದು ಜಾತಿಯವರ ಜನಸಂಖ್ಯೆ ಕಡಿಮೆ ಇರಲಿ ಹೆಚ್ಚಿರಲಿ ಅವರ ಆಚಾರ-ವಿಚಾರ, ನಡೆ-ನುಡಿ ಇತ್ಯಾದಿಗಳಿಗೆ ಸಂಬಂಧಿಸಿದ ಅವರದೇ ಆದ ಭಾಷೆ ರೂಪಿತವಾಗಿರುತ್ತದೆ. ಆದರೆ ವಿಶಾಲವಾದ ಪ್ರದೇಶಗಳಲ್ಲಿ ಒಂದೇ ಜಾತಿಯ ಜನರು ವಾಸಿಸುತ್ತಿದ್ದರೆ ಅವರ ಭಾಷೆಯಲ್ಲಿ ಕೂಡ ಪ್ರಭೇದಗಳಾಗುವ ಸಾಧ್ಯತೆ ಇದೆ. ಉದಾಹರಣೆಗಾಗಿ ಕನ್ನಡ ಭಾಷೆಯನ್ನು ಜಾತಿಯ ಆಧಾರದ ಮೇಲೆ ಗುರುತಿಸುವುದಾದರೆ ೧ ವೀರಶೈವರ ಕನ್ನಡ ೨ ಬ್ರಾಹ್ಮಣರ ಕನ್ನಡ ೩ ಇತರ ಜನಾಂಗದವರ ಕನ್ನಡ ಎಂದು ಸ್ಥೂಲವಾಗಿ ಗುರುತಿಸಬಹುದು. ಈ ಮೂರೂ ವರ್ಗದ ಜನರು ಸಮಗ್ರಕರ್ನಾಟಕದಲ್ಲಿ ನೆಲೆಸಿರುವುದರಿಂದ ಅವರವರ ಭಾಷೆಯಲ್ಲಿಯೇ ಪ್ರಭೇದಗಳನ್ನು ಗುರುತಿಸಲು ಸಾಧ್ಯವಿದೆ :

೨.೧ I. ೧ ಧಾರವಾಡ ವೀರಶೈವರ ಕನ್ನಡ ಪ್ರಭೇದ (ಧಾ.ವೀ.ಕ)
೨ ಕಲಬುರ್ಗಿ ವೀರಶೈವರ ಕನ್ನಡ ಪ್ರಭೇದ (ಕ.ವೀ.ಕ)
೩ ಮೈಸೂರು ವೀರಶೈವರ ಕನ್ನಡ ಪ್ರಭೇದ (ಮೈ.ವೀ.ಕ)

II. ೧ ಧಾರವಾಡ ಬ್ರಾಹ್ಮಣರ ಕನ್ನಡ ಪ್ರಭೇದ (ಧಾ.ಬ್ರಾ.ಕ)
೨ ಕಲಬುರ್ಗಿ ಬ್ರಾಹ್ಮಣರ ಕನ್ನಡ ಪ್ರಭೇದ (ಕ.ಬ್ರಾ.ಕ)
೩ ಮೈಸೂರು ಬ್ರಾಹ್ಮಣರ ಕನ್ನಡ ಪ್ರಭೇದ (ಮೈ.ಬ್ರಾ.ಕ)

III. ೧ ಧಾರವಾಡ ಇತರ ಜನಾಂಗದವರ ಕನ್ನಡ ಪ್ರಭೇದ (ಧಾ.ಇ.ಕ)
೨ ಕಲಬುರ್ಗಿ ಇತರ ಜನಾಂಗದವರ ಕನ್ನಡ ಪ್ರಭೇದ (ಕ.ಇ.ಕ)
೩ ಮೈಸೂರು ಇತರ ಜನಾಂಗದವರ ಕನ್ನಡ ಪ್ರಭೇದ (ಮೈ.ಇ.ಕ)

ಧಾ. ವೀ. ವರ್ಗದವರು ಮೈಸೂರಿನಲ್ಲಿ ನೆಲಸಿದರೆ ಅವರ ಭಾಷೆ ಮೈ.ವೀ. ರ ಭಾಷೆಯಂತೆ ಕ್ರಮೇಣ ಬದಲಾಗಿ ಬಿಡುತ್ತದೆ. ಕ. ವೀ. ಕ ದಲ್ಲಿ 'ಹಾನ' 'ಹಾಳ' ಮುಂತಾದ ಪದಗಳು ಧಾ. ವೀ. ಕ ದಲ್ಲಿ ತಪ್ಪಿ ಕೂಡ ಬರುವುದಿಲ್ಲ. ಇದೇರೀತಿ ಧಾ. ಬ್ರಾ. ಕ ಹಾಗೂ ಕ. ಬ್ರಾ. ಕ ಇವುಗಳಲ್ಲಿ ಸ್ಪಷ್ಟ ವ್ಯತ್ಯಾಸ ಗುರುತಿಸಬಹುದು. ಕರಾವಳಿ ಬ್ರಾಹ್ಮಣರ ಕನ್ನಡದಲ್ಲಂತೂ ಅನೇಕ ಭಿನ್ನತೆಗಳನ್ನು ಕಾಣಬಹುದ. ಧಾ. ಬ್ರಾ. ಕ ಹಾಗೂ ಮೈ. ಬ್ರಾ. ಕ ಇವುಗಳಿಗಿಂತ ಕರಾವಳಿ ಬ್ರಾಹ್ಮಣರ ಕನ್ನಡ ಪ್ರಭೇದ ಭಿನ್ನವಾಗಿರುವುದನ್ನು ಗಮನಿಸಬೇಕು. ಆದ್ದರಿಂದ ಜನಾಂಗದೊಡನೆ ಪ್ರದೇಶವೂ ಹೊಯ್‌ಕೈಯಾಗಿ, ಪ್ರಭೇದಗಳ ನಿರ್ಮಾಣ ಕಾರಣಗಳಾಗಿ ನಿಲ್ಲುತ್ತವೆ. ಕೊಡಗು ಜಿಲ್ಲೆಯ ಒಂದೇ ಪ್ರದೇಶದಲ್ಲಿರುವ ಗೌಡಜನಾಂಗದವರು ಮಾತನಾಡುವ ಕನ್ನಡಕ್ಕೂ ಜೇನು ಕುರುಬರು ಮಾತನಾಡುವ ಕನ್ನಡಕ್ಕೂ ವ್ಯತ್ಯಾಸವಿದೆ. ಹಾಸನ ಜಿಲ್ಲೆಯ ಸಂಕೇತಿ ಬ್ರಾಹ್ಮಣರ ಕನ್ನಡಕ್ಕೂ ಸ್ಥಳೀಯ ಬ್ರಾಹ್ಮಣರ ಕನ್ನಡಕ್ಕೂ ಭಿನ್ನತೆಯುಂಟು. ಕರಾವಳಿಪ್ರದೇಶದಲ್ಲಿಯ ಹವ್ಯಕ, ಒಕ್ಕಲಿಗ, ಹರಕಂತ, ಕೊಮಾರಪಂತ, ಬಂಟ, ಮಾಪಿಳ್ಳೆ, ಸೋಲಿಗ ಮೊದಲಾದ ಹಲವಾರು ಜನಾಂಗದವರ ಕನ್ನಡದಲ್ಲಿ ಭಿನ್ನತೆಯನ್ನು ಗಮನಿಸಬಹುದು. ಆದುದರಿಂದ ಕನ್ನಡ ಭಾಷಾಪ್ರಭೇದಗಳ ನಿರ್ಮಾಣ ಕಾರಣಗಳಲ್ಲಿ ಜಾತಿ ಅಥವಾ ಜನಾಂಗ ಒಂದು ಪ್ರಮುಖ ಸಾಮಾಜಿಕ ಅಂಶವಾಗಿರುವುದನ್ನು ಕಡೆಗಣಿಸಲಾಗದು.

ಅಂತಸ್ತು

೨.೨ ಸಾಮಾಜಿಕ ಅಂತಸ್ತು ಕೆಲವುಸಲ ಪ್ರಭೇದಗಳಿಗೆಡೆಮಾಡಿಕೊಡುತ್ತದೆ. ಅಂತಸ್ತಿನಲ್ಲಿ ೧. ಉನ್ನತ ೨. ಮಧ್ಯ ೩. ನಿಮ್ನ ಎಂದು ಮೂರು ಬಗೆಯಾಗಿ ವಿಂಗಡಿಸಬಹುದು. ಆರ್ಥಿಕ ಹಾಗೂ ಸಾಮಾಜಿಕವಾಗಿ ಉನ್ನತವರ್ಗದಲ್ಲಿ ಇರುವ

ಜನರೆಂದರೆ ವಿದ್ಯಾವಂತರು, ರಾಜಕೀಯ ಮುಖಂಡರು, ಅಧಿಕಾರಿಗಳು, ವಾಣಿಜ್ಯ ಪತಿಗಳು, ಶ್ರೀಮಂತರು ಇತ್ಯಾದಿ. ಈ ವರ್ಗದ ಜನರು ಯಾವ ಜಾತಿಯವರೇ ಇರಲಿ ತಾವು ಪ್ರತಿಷ್ಠಿತರೆಂದು ತೋರಿಸಿಕೊಡುವುದಕ್ಕಾಗಿ ಶಿಷ್ಟಕನ್ನಡವನ್ನು ಬಳಸು ತ್ತಾರೆ. ಇವರು ಹೆಚ್ಚಾಗಿ ಉನ್ನತ ಸಾಮಾಜಿಕ–ಆರ್ಥಿಕ ಸ್ಥಿತಿಯಲ್ಲಿ ಇರುವ ಜನ ರೊಂದಿಗೆ ಹೆಚ್ಚು ಸಂಪರ್ಕವಿಟ್ಟುಕೊಂಡಿರುವುದರಿಂದ ಅವರದೇ ಆದ ಒಂದು ಪ್ರಭೇದ ಹುಟ್ಟಲು ಕಾರಣವಾಗುತ್ತದೆ.

ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಸುಶಿಕ್ಷಿತರಲ್ಲದವರ ಭಾಷೆ ಒಂದು ಪ್ರಭೇದವಾಗಿ ನಿಲ್ಲುತ್ತದೆ. ಹೊಟ್ಟೆಪಾಡಿಗಾಗಿ ದಿನಗೂಲಿಯನ್ನು ಅವಲಂಬಿ ಸಿರುವ ಕೂಲಿಯಾಳುಗಳು, ಹಮಾಲರು, ಡ್ರೈವ್ಹರರು, ರಸ್ತೆಯ ಮೇಲೆ ಚಿಕ್ಕ ಪುಟ್ಟ ವ್ಯಾಪಾರ ಮಾಡುವವರು ಮುಂತಾದವರು ಮಾತನಾಡುವ ಭಾಷೆ ಇದರಲ್ಲಿ ಒಳಗೊಳ್ಳುತ್ತದೆ. ಶಿಷ್ಟಭಾಷೆಯಾವುದು. ಶಿಷ್ಟಭಾಷೆಯಾವುದಲ್ಲ ಎಂಬುದರ ಬಗೆಗೆ ತಿಳಿದುಕೊಳ್ಳುವ ಅಥವಾ ಅನುಕರಿಸುವ ಆಸಕ್ತಿಯನ್ನು ಅವರು ತೋರುವುದು ಕ್ವಚಿತ್. ಇವರದು ಹೆಚ್ಚು ವ್ಯಾವಹಾರಿಕವಾದ ಭಾಷೆಯಾದ್ದರಿಂದ ಸನ್ನಿವೇಶ ಸಂದರ್ಭಗಳಿಗೆ ಹೊಂದಿಕೊಂಡು ಹೋಗುತ್ತದೆ. ಉನ್ನತ ಮತ್ತು ನಿಮ್ನ ಈ ಎರಡೂ ಹಂತಗಳ ನಡುವೆ ಮಧ್ಯಮವರ್ಗದವರ ಭಾಷೆ ನಿಲ್ಲುತ್ತದೆ. ಈ ವರ್ಗದ ಜನರು ಮೇಲು ಹಾಗೂ ಕೆಳವರ್ಗಗಳ ಎರಡೂ ತರದ ಜನರೊಂದಿಗೆ ಬೆರೆಯುವುದ ರಿಂದ ಸಂದರ್ಭಕ್ಕೆ ಅನುಗುಣವಾಗಿ ಎರಡೂ ಪ್ರಭೇದಗಳನ್ನು ಇವರು ಬಳಸುತ್ತಾರೆ. ಆದ್ದರಿಂದ ಇವರಾಡುವ ಭಾಷೆ ಪ್ರಭೇದವಾಗಿ ನಿಲ್ಲುವುದು ಸಂದೇಹಾಸ್ಪದವಾಗಿದೆ. ಕಾರಕೂನರು, ಮೇಸ್ತ್ರಿಗಳು, ಸುಪರವಾಯಿಜರುಗಳು. ಪೋಲೀಸರು, ಗ್ರಾಮೀಣ ಶಿಕ್ಷಕರು ಇತ್ಯಾದಿ ಈ ವರ್ಗಕ್ಕೆ ಸೇರುತ್ತಾರೆ.

ಸಾಮಾಜಿಕ ಅಂತಸ್ತು, ಭಾಷೆಯಲ್ಲಿ ಸೂಚಿತವಾಗುತ್ತದೆ. ಉದಾಹರಣೆಗೆ 'ದಾಟು' ಕಾದಂಬರಿಯಲ್ಲಿ ಬರುವ ಈ ಕೆಳಗಿನ ಒಂದು ಚಿಕ್ಕ ಸಂಭಾಷಣೆಯನ್ನು ಗಮ ನಿಸಬಹುದು (ಗ್ರಂಥಸ್ಥವಾದರೂ ಆಡುಮಾತಿನ ಪ್ರಕಾರವೆಂದು ಇದನ್ನಿಲ್ಲಿ ಎತ್ತಿ ಕೊಂಡಿರುವೆನು).

"ಅಷ್ಟರಲ್ಲಿ ನಿಂಗವ್ವ ಬಂದು– 'ನೀರು ಕಾದವೆ. ತಾನ ಮಾಡಕ್ ಬಲ್ಲಿ' ಎಂದಳು."

'ಇದೇನು ಇಷ್ಟು ಹೊತ್ನಲ್ಲಿ ಸ್ನಾನ ?' –ವೆಂಕಟೇಶ ಕೇಳಿದ.

'ಈಗ ದಿನಕ್ಕೆ ಮೂರುಸಲಿ ಮಡಿ ಉಟ್ಕಂತೀವಿ. ಇಲ್ದೆ ಇದ್ರೆ ಮನುಸ್ಗೆ ಹ್ಯಾಂಗ ಹ್ಯಾಂಗೊ ಆಯ್ತದೆ. ಸ್ವಾಮಿ ಉಟ್ಕೊವಾಗ. ನೆತ್ತಿಮ್ಯಾಲೆ ಬಂದಾಗ,

ಮುಣುಗುವಾಗ ಬಿಸಿಬಿಸಿಯಾಗಿ ಸ್ನಾನ ಮಾಡ್ಕಂಡು ಪೂಜೆಗೆ ಕುಂತ್ರೆ ಹಿತವಾಗಿರ್ತದೆ' —ಎಂದು ಅವರು ಮೇಲೆ ಎದ್ದರು."

ಇಲ್ಲಿ 'ಸಿಂಗವ್ವ' ನಿಮ್ನ ವರ್ಗದ ಪ್ರತಿನಿಧಿ. 'ವೆಂಕಟೇಶ' ಮಧ್ಯಮವರ್ಗ ದವ. 'ಅವರು' ಅಂದರೆ ತಿರುಮಲೇಗೌಡರು ಹಳ್ಳಿಯ ಹಿರಿಯ ಪಟೇಲರು. ಇದೇ ಪಟೇಲರ ಮಗ ಬಿ.ಎ.,ಎಲ್‌ಎಲ್.ಬಿ. ಕಲಿತು ಮಂತ್ರಿ ಸ್ಥಾನದಲ್ಲಿದ್ದವನು, ಅವನ ಮಾತಿದು :

"ನಿನ್ನ ಮಾತು ನ್ಯಾಯ. 'ಪುರಾತನ ಕಾಲದಿಂದ ಬಂದ ದೇವಸ್ಥಾನ ಬೀಳೊ ಸ್ಥಿತೀಲದೆ. ಮುಜರಾಯಿ ಇಲಾಖೆಯೋರು ತಕ್ಷಣ ರಿಪೇರಿ ಮಾಡಿಸ್ದೆ ಇದ್ರೆ ಹಾಳಾಗುತ್ತೆ. ತಕ್ಷಣ ಇದರ ಹಿಂದಿನ ಗೋಡೆ ರಿಪೇರಿ ಮಾಡಿಸ್‌ಬೇಕು.' ಅಂತ ನೀನು ಒಂದು ಅರ್ಜಿ ಬರೆದು ಗ್ರಾಮದ ಹತ್ತು ಜನದ ರುಜು ಹಾಕಿಸಿಕೊಡು. ಮುಜ ರಾಯಿ ಮಂತ್ರಿಗಳಿಗೆ ಕೊಡಿಸಿ ನಾನು ಮುಂದಿನ ಕೆಲಸ ಮಾಡುಸ್ತಿನಿ."

೨.೩ ಈ ರೀತಿಯ ಸಾಮಾಜಿಕ ಪ್ರಭೇದಗಳಲ್ಲದೆ ಇನ್ನೂ ಒಂದಿದೆ : ಅದು ಬೇರೆ ರಾಜ್ಯಗಳಿಂದ ವ್ಯಾಪಾರ-ಉದ್ಯೋಗ-ನವಕರಿ ಮುಂತಾದ ಉದ್ದೇಶಗಳಿಗಾಗಿ ಇಲ್ಲಿಗೆ ಬಂದು ನೆಲಸಿದ ಅನ್ಯಪ್ರಾಂತೀಯರ ಕನ್ನಡ. ಗುಜರಾತ, ಮುಂಬೈ ಮುಂತಾ ದೆಡೆಗಳಿಂದ ಬಂದ ಮಾರವಾಡಿಗಳು. ಮರಾಠಿಗರು. ತಮಿಳುನಾಡು, ಆಂಧ್ರಪ್ರದೇಶ ಗಳಿಂದ ಬಂದ ತಮಿಳು-ತೆಲುಗರು. ಕೊಂಕಣದಿಂದ ಬಂದ ಕೊಂಕಣಿಗರು. ಕೇರಳ ದಿಂದ ಬಂದ ಮಲೆಯಾಳಿಗರು. ಇಂಥವರ ಸಂಖ್ಯೆ ಮುಖ್ಯಪಟ್ಟಣಗಳಲ್ಲಿಯೇ ಹೆಚ್ಚಾಗಿ ಇರುವದರಿಂದ ಅಂತಹ ಸ್ಥಳಗಳಲ್ಲಿಯೇ ಇವರು ಬಳಸುವ ಕನ್ನಡ ಭಾಷಾ ಪ್ರಭೇದಗಳನ್ನು ಗುರುತಿಸಬಹುದು. ಲಂಬಾಣಿಗರು. ಗೊಂಡರು, ಮುಂತಾದ ಹೊರನಾಡಿನ ಜನಾಂಗದವರು ಮಾತನಾಡುವ ಕನ್ನಡ ಪ್ರಭೇದವನ್ನೂ ಇಲ್ಲಿ ಗಮನಿಸ ಬಹುದು.

೩.೦ ರಾಜಕೀಯ :

ಭಾಷಾಪ್ರಭೇದಗಳನ್ನುಂಟುಮಾಡುವಲ್ಲಿ ರಾಜಕೀಯ ಕಾರಣವೂ ಒಂದು ಗಮನಾರ್ಹ ಅಂಶವಾಗಿದೆ. ಆಳರಸರು ಆಡಳಿತೆಯ ಕಾರಣಗಳಿಗಾಗಿ ಕೆಲವು ಜಿಲ್ಲೆ ಹಾಗೂ ತಾಲೂಕು ಗಡಿಯನ್ನು ಆಗಾಗ್ಗೆ ಬದಲಿಸಬಹುದು. ಹಾಗೆ ಬದಲಿಸಿದಾಗ ಜನರ ಸಂಪರ್ಕ ಮೊದಲು ಇದ್ದ ತಾಲೂಕು ಅಥವಾ ಜಿಲ್ಲಾಸ್ಥಳದೊಡನೆ ಕಡಿಮೆ ಹೋಗುವುದರಿಂದ ಕ್ರಮೇಣ ಅವರ ಭಾಷಾಪ್ರಭೇದದಲ್ಲಿ ವ್ಯತ್ಯಾಸ ಉಂಟಾಗ ತೊಡಗಬಹುದು. ಆದರೆ ಈ ವ್ಯತ್ಯಾಸದ ಗತಿ ಬಹಳ ಸಾವಧಾನವಾಗಿರುತ್ತದೆ.

ಮೊದಲಿದ್ದ ತಾಲೂಕುಸ್ಥಳ ಅಥವಾ ಜಿಲ್ಲಾಸ್ಥಳ ಹಳ್ಳಿಗೆ ಹೆಚ್ಚು ಸಮೀಪವಾಗಿದ್ದು ಸಂಪರ್ಕ–ಸಾಧನ, ವ್ಯಾಪಾರ ಮುಂತಾದ ದೃಷ್ಟಿಯಿಂದ ಅನುಕೂಲವಾಗಿದ್ದರೆ ಆ ಹಳ್ಳಿಯ ಪ್ರಭೇದದಲ್ಲಿ ಬಹುಕಾಲ ಯಾವ ವ್ಯತ್ಯಾಸವೂ ಆಗದೆ ಉಳಿಯುತ್ತದೆ. ಆಳರಸರು ತಮ್ಮ ಭಾಷೆಯನ್ನು ನಾಡಿನಲ್ಲಿ ಆಡಳಿತ ಭಾಷೆಯಾಗಿ ಹೇರುವುದರಿಂದ ಅನಿವಾರ್ಯವಾಗಿ ಆ ಭಾಷೆಯ ಪ್ರಭಾವ ಸ್ಥಳೀಯ ಭಾಷಾಪ್ರಭೇದಗಳ ಮೇಲಾಗುತ್ತದೆ. ರಾಜ್ಯದ ರಾಜಧಾನಿಯಲ್ಲಿ ಅಂಥ ಭಾಷಾಪ್ರಭೇದ ಇನ್ನೂ ಸ್ಪಷ್ಟವಾಗಿರುತ್ತದೆ. ಪರಭಾಷಾ ಅರಸರ ಆಳ್ವಿಕೆ ಎಷ್ಟು ದೀರ್ಘವಾಗಿರುತ್ತದೆಯೋ ಅಷ್ಟು ಗಾಢವಾಗಿ ಆ ಭಾಷೆ ಸ್ಥಳೀಯ ಪ್ರಭೇದಗಳ ಮೇಲೆ ತನ್ನ ಅಚ್ಚೊತ್ತುತ್ತದೆ. ಆಳ್ವಿಕೆ ಬೇಗ ಕೊನೆಗಂಡರೆ ಪ್ರಭಾವ ತೆಳುವಾಗಿರುತ್ತದೆಯಲ್ಲದೆ ಆಳ್ವಿಕೆ ಮುಗಿದಮೇಲೆ ಕ್ರಮೇಣ ಮರೆಯಾಗಿ ಹೋಗುತ್ತದೆ. ಈ ರೀತಿ ಪ್ರಭೇದಗಳ ಮೇಲೆ ಆಡಳಿತ ಭಾಷೆಯು ಬೀರುವ ಪ್ರಭಾವ ಹೆಚ್ಚು ದಟ್ಟವಾಗಿದ್ದರೆ ಮುಂದೆ ರಾಜಕೀಯ ಬದಲಾವಣೆಯಾಗಿ ಆ ಪ್ರಭಾವಿತ ಪ್ರದೇಶ ಹೊಸ ರಾಜ್ಯದಲ್ಲಿ ಸೇರಿದಾಗ ಆ ಪ್ರಭೇದಗಳೆಲ್ಲ ಒಂದು ಉಪಭಾಷೆಯಾಗಿ ನಿಲ್ಲುತ್ತವೆ.

೩.೧ ಉತ್ತರ ಕರ್ನಾಟಕದ ಬೀದರ, ಕಲಬುರ್ಗಿ ಹಾಗೂ ರಾಯಚೂರು ಪ್ರದೇಶಗಳು ಸುಮಾರು ೬೦೦ ವರ್ಷಗಳ ಸುದೀರ್ಘಕಾಲ ಮಹಮ್ಮದೀಯರ ಆಡಳಿತೆಗೆ ಒಳಪಟ್ಟದ್ದರಿಂದ ಈ ಭಾಗದ ಪ್ರಭೇದಗಳ ಮೇಲೆ ಆಳರಸರ ಭಾಷೆಯಾದ ಉರ್ದು ಪ್ರಭಾವ ದಟ್ಟವಾಯಿತು. ಆದರೆ ಈ ಪ್ರದೇಶದ ವಾಯವ್ಯ ಹಾಗೂ ಉತ್ತರ ಗಡಿ ಭಾಗಗಳಲ್ಲಿ ಕೆಲವು ಪ್ರದೇಶ ಮರಾಠರ ವಶದಲ್ಲಿ ಉಳಿದುದರಿಂದ ಆ ಪ್ರದೇಶ, ಅಂದರೆ ಈಗ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಗಡಿಭಾಗ ಉರ್ದು ಬದಲಾಗಿ ಮರಾಠಿ ಪ್ರಭಾವದಿಂದೊಡಗೂಡಿದೆ. ಬೆಳಗಾವಿ. ವಿಜಾಪುರ ಜಿಲ್ಲೆಯ ಗಡಿಪ್ರದೇಶಗಳಲ್ಲಿಯೂ ಮರಾಠಿ ಪ್ರಭಾವಿತ ಪ್ರಭೇದಗಳನ್ನು ಗುರುತಿಸಬಹುದು. ಈ ರೀತಿ ಒಂದು ಕಾಲಕ್ಕೆ ಅನ್ಯಭಾಷಾ ಆಡಳಿತಗಾರರಿಂದಾಗಿ ಆ ಪ್ರದೇಶದ ಪ್ರಭೇದಗಳಲ್ಲಿ ಆಡಳಿತ ಭಾಷೆಯ ಪ್ರಭಾವವುಂಟಾಗಿ ಅದು ವಿಶಿಷ್ಟವಾಗಿ ನಿಲ್ಲಬಹುದಾಗಿದೆ. ಮೈಸೂರು ಅರಸರ ಆಳಿಕೆಯಲ್ಲಿ ಜಯಚಾಮರಾಜ ಒಡೆಯರ ಅವರ ಆಳಿಕೆಯವರೆಗೂ ಆಡಳಿತೆಯ ಕೆಲವು ಮುಖ್ಯಸ್ಥಾನಗಳು ಅಯ್ಯಂಗಾರ (ತಮಿಳು) ಜನಾಂಗದವರಿಗೆ ದೊರೆತಿದ್ದರಿಂದ ಕೆಲ ಕಾಲದ ವರೆಗಾದರೂ ಆ ಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ತಮಿಳು ಪ್ರಭಾವವುಂಟಾಯಿತು. ಹಾಗೆಯೆ ಮುಧೋಳ. ಜಮಖಂಡಿ. ಸೊಂಡೂರ. ನರಗುಂದ ಮುಂತಾದ ಉತ್ತರ ಕರ್ನಾಟಕದ ಚಿಕ್ಕಪುಟ್ಟ ಸಂಸ್ಥಾನಗಳು ಮರಾಠಾ ಆಡಳಿತಗಾರರ ವಶದಲ್ಲಿದ್ದುದರಿಂದ ಆ ಭಾಗದಲ್ಲಿ ಸ್ಥಳೀಯವಾಗಿ ಮರಾಠಿ ಭಾಷಾ ಪ್ರಭಾವವಾಯಿತು. ಮಹಮ್ಮದೀಯ ಅರಸರ ಕಾಲದಲ್ಲಿ ಕರ್ನಾಟಕದ ಅನೇಕ ಭಾಗಗಳಲ್ಲಿ ಉರ್ದು ಪ್ರಭಾವ ಉಂಟಾಯಿತು. ಕಾಸರಗೋಡು, ನೀಲಗಿರಿ ಪ್ರದೇಶ,

ಅಕ್ಕಲಕೋಟ, ಸೊಲ್ಲಾಪುರ, ಆದವಾನಿ ಮುಂತಾದ ಕನ್ನಡ ಪ್ರದೇಶ ಇಂದು ರಾಜಕೀಯವಾಗಿ ಪರಭಾಷಾಪ್ರಾಂತದಲ್ಲಿ ಸೇರಿಸಲ್ಪಟ್ಟಿರುವುದರಿಂದ ಸಹಜವಾಗಿ ಆಯಾ ರಾಜ್ಯಭಾಷೆಗಳ ಪ್ರಭಾವ ಅಲ್ಲಿಯ ಕನ್ನಡದ ಮೇಲಾಗಿದೆ. ಆಡಳಿತೆಯ ಅನುಕೂಲತೆಗಾಗಿ ಮಾಡುವ ಗಡಿ ಬದಲಾವಣೆಗಳಿಂದ ಆಡಳಿತಗಾರರ ಭಾಷಾ ಪ್ರಭಾವ ಆ ಪ್ರದೇಶದ ಭಾಷೆಯ ಮೇಲೆ ಬೀಳುವುದರಿಂದ ಭಾಷಾಪ್ರಭೇದ ಗಳುಂಟಾಗುತ್ತದೆ. ಆದರೂ ಈ ರಾಜಕೀಯ ಕಾರಣಗಳು ಇಡೀ ಪ್ರದೇಶದ ಮೇಲೆ ಪರಿಣಾಮವನ್ನುಂಟುಮಾಡುವುದರಿಂದ ಅಂಥ ಸ್ಥಳೀಯ ಪ್ರಭೇದಗಳುಂಟಾಗುವುದು ಕ್ವಚಿತ್ತಾಗಿ. ಕನ್ನಡ ಭಾಷೆಯಲ್ಲಿ ರಾಜಕೀಯ ಕಾರಣಗಳಿಂದಲೇ ಆದ ಪ್ರಭೇದ ಗಳನ್ನು ಈಗ ಗುರುತಿಸುವುದು ಕಷ್ಟ.

೪.೦ **ಅನ್ಯಭಾಷಾ ಪ್ರಭಾವ :**

ಯಾವ ಭಾಷೆಯೂ ತನ್ನ ಮಡಿವಂತಿಕೆಯನ್ನು ಬಹಳಕಾಲ ಕಾಯ್ದುಕೊಳ್ಳ ಲಾರದು. ರಾಜಕೀಯ ಕಾರಣದಿಂದಾಗಿ ಈ ಮೊದಲೆ ಹೇಳಿದಂತೆ (೩.೦.) ಆಳರಸರ ಭಾಷೆ ಸ್ಥಳೀಯ ಭಾಷೆಗೆ ಸಂಬಂಧಿಸಿರದಿದ್ದರೆ ಕ್ರಮೇಣ ಆ ಭಾಷೆ ಸ್ಥಳೀಯ ಭಾಷೆಯ ಮೇಲೆ ಪ್ರಭಾವ ಬೀರತೊಡಗುತ್ತದೆ. ಮೊದಲು ರಾಜಧಾನಿ ಹಾಗೂ ಅವರ ಸುತ್ತಮುತ್ತಲಿನ ಪ್ರದೇಶ, ಅನಂತರ ಆಡಳಿತ ಕೇಂದ್ರಗಳು ಅವುಗಳ ಸುತ್ತಲಿನ ಪ್ರದೇಶ ಹೀಗೆ ಪ್ರಭಾವ ಪಸರಿಸುತ್ತ ಹೋಗುತ್ತದೆ. ರಾಜಕೀಯ ಗಡಿ ಗಳನ್ನು ದಾಟಿಯೂ ಒಂದು ಭಾಷೆ ಬಳಕೆಗೊಳ್ಳುತ್ತಿರಬಹುದು. ಭಾಷಾಗಡಿ ಪ್ರದೇಶಗಳಲ್ಲಿಯ ಜನರು ಸ್ಥಳೀಯ ಭಾಷೆ, ಆಡಳಿತ ಭಾಷೆ ಇವುಗಳಲ್ಲಿ ಮಾತೃ ಭಾಷೆಯೊಂದಿಗೆ ಕನಿಷ್ಠಪಕ್ಷ ಒಂದನ್ನಾದರೂ ಬಲ್ಲವರಾಗಿರುತ್ತಾರೆ, ಹೀಗಾಗಿ ಆ ಪ್ರದೇಶ ದ್ವಿಭಾಷಾ ಪ್ರದೇಶ ಇಲ್ಲವೆ ಬಹುಭಾಷಾ ಪ್ರದೇಶವೆನಿಸುತ್ತದೆ. ಯಾವುದೇ ಕಾರಣವಿರಲಿ ಅನ್ಯಭಾಷಾ ಪ್ರಭಾವ ಸುತ್ತಲಿನ ಪರಿಸ್ಥಿತಿಗನುಗುಣವಾಗಿ ಒಂದು ಪ್ರದೇಶದ ಸ್ಥಳೀಯ ಭಾಷೆಯ ಮೇಲೆ ಗಾಢವಾಗಿ ಆಗುತ್ತಹೋದಂತೆ ಅದರದೇ ಆದ ವಿಶಿಷ್ಟಭಾಷೆಗಿಂತ ಭಿನ್ನವಾಗಿ ತೋರಲಾರಂಭಿಸುತ್ತದೆ. ಆಗ ಅದನ್ನು ಪ್ರಾದೇ ಶಿಕ ಪ್ರಭೇದವಾಗಿ ಪರಿಗಣಿಸಲ್ಪಡಬೇಕಾಗುತ್ತದೆ. ಅನ್ಯಭಾಷಾ ಪ್ರಭಾವ ಈ ರೀತಿ ಪ್ರಭೇದಗಳಾಗಲು ಅವಕಾಶ ಮಾಡಿಕೊಡುವ ಪ್ರಧಾನ ಅಂಶವಾಗಿದೆ. ಅನ್ಯಭಾಷಾ ಪ್ರಭಾವ ಎಂದರೆ ಸಾಮಾನ್ಯವಾಗಿ ಸ್ಥಳೀಯ ಭಾಷೆಯಲ್ಲಿ ಹಲವು ಬಗೆಯಲ್ಲಿ ನಡೆ ಯುವ ಸ್ವೀಕರಣ.

೪.೧ ಕನ್ನಡ ಭಾಷೆಯ ಮೇಲೆ ಅನೇಕ ಅನ್ಯಭಾಷೆಗಳು ಪ್ರಭಾವ ಬೀರಿವೆ. ಪ್ರಭೇದಗಳನ್ನುಂಟುಮಾಡುವಲ್ಲಿ ಅನ್ಯಭಾಷೆಗಳು ಯಾವ ಯಾವ ಕನ್ನಡ ಪ್ರದೇಶ ಗಳಲ್ಲಿ ಪ್ರಭಾವ ಬೀರಿವೆಯೆಂಬುದನ್ನು ಕರ್ನಾಟಕದ ಈಗಿನ ರಾಜಕೀಯ ಗಡಿಯನ್ನು

ಆಧಾರವಾಗಿಟ್ಟುಕೊಂಡು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಕನ್ನಡದ ಮೇಲೆ ಪ್ರಭಾವ ಬೀರಿದ ಪ್ರಮುಖ ಅನ್ಯಭಾಷೆಗಳೆಂದರೆ— ೧. ಸಂಸ್ಕೃತ, ೨. ಇಂಗ್ಲಿಷ್, ೩. ಉರ್ದು, ೪. ಮರಾಠಿ, ೫. ತೆಲುಗು, ೬. ತಮಿಳು, ೭. ಮಲೆಯಾಳಂ, ೮. ತುಳು, ೯. ಕೊಂಕಣಿ, ೧೦. ಹಿಂದಿ.

ಇವುಗಳಲ್ಲಿ ಸಂಸ್ಕೃತ, ಇಂಗ್ಲಿಷ್, ಉರ್ದು ಹಾಗೂ ಹಿಂದಿ ಭಾಷೆಗಳ ಪ್ರಭಾವ ಸಾಮಾನ್ಯವಾಗಿ ಕರ್ನಾಟಕದ ತುಂಬ ಆಗಿರುವುದರಿಂದ ಇವುಗಳ ಸಾಕಷ್ಟು ಶಬ್ದಗಳು ಕನ್ನಡದ ಉಡಿಯನ್ನು ತುಂಬಿವೆ. ಸಂಸ್ಕೃತ ಈಗ ಬಹುಕಾಲದಿಂದ ಬಳಕೆಯಲ್ಲಿಲ್ಲದ ಭಾಷೆಯಾಗಿರುವುದರಿಂದ ಪ್ರಭಾವಿತ ಪ್ರದೇಶ ಅಥವಾ ಪ್ರಭೇದವನ್ನು ಗುರುತಿಸುವುದು ಸಾಧ್ಯವಿಲ್ಲ. ಬ್ರಾಹ್ಮಣರ ಕನ್ನಡದಲ್ಲಿ ಸಂಸ್ಕೃತ ಪ್ರಭಾವದ ಹೆಚ್ಚಳವನ್ನು ಗುರುತಿಸಬಹುದು. ಮಹಾಪ್ರಾಣಗಳ ಉಚ್ಚಾರ ಇಡೀ ಕನ್ನಡ ನಾಡಿನ ಬ್ರಾಹ್ಮಣರಲ್ಲಿ ಹೆಚ್ಚು ಉಳಿದಿರುವುದನ್ನಿಲ್ಲಿ ಗಮನಿಸಬಹುದು. ಕರ್ನಾಟಕದ ಬಹು ಪ್ರದೇಶಗಳಲ್ಲಿ ಉರ್ದು ಪ್ರಭಾವ ಬೀರಿದೆಯಾದರೂ ನಾಡಿನ ಉತ್ತರ ಭಾಗದ ಬೀದರ ಕಲಬುರ್ಗಿ, ರಾಯಚೂರ ಹಾಗೂ ವಿಜಾಪುರ ಜಿಲ್ಲೆಗಳಲ್ಲಿ ಇತರ ಪ್ರದೇಶಗಳಿಗಿಂತ ಪ್ರಭಾವ ಹೆಚ್ಚು ದಟ್ಟವಾಗಿದೆ. ಬೀದರ ಹಾಗೂ ಕಲಬುರ್ಗಿ ಜಿಲ್ಲೆಗಳಲ್ಲಂತೂ ಉರ್ದು ಪ್ರಭಾವದ ಆಧಾರದ ಮೇಲೆ ಆ ಜಿಲ್ಲೆಗಳ ಭಾಷೆಯನ್ನು ಕನ್ನಡದ ಉಪಭಾಷೆಯೆಂದು ಪರಿಗಣಿಸಬಹುದಾಗಿದೆ. ಹಿಂದಿ ಭಾಷೆಯು ರಾಷ್ಟ್ರೀಯ ಭಾಷೆಯಾಗಿರುವುದರಿಂದ ಇತ್ತಿತ್ತಲಾಗಿ ಅದರ ಪ್ರಭಾವ ಕಂಡುಬರುತ್ತಿದೆ. ಆದರೆ ಉರ್ದು–ಹಿಂದಿಗಳಲ್ಲಿಯ ಅಂತರ ಕನ್ನಡ ಮಾತನಾಡುವ ಸಾಮಾನ್ಯರ ದೃಷ್ಟಿಯಲ್ಲಿ ಗೌಣ.

೪.೨ ಇಂಗ್ಲಿಷ್ ಪ್ರಭಾವ ಇತ್ತೀಚಿನದಾದರೂ ಹೆಚ್ಚು ವ್ಯಾಪಕವಾದುದು. ಸುಶಿಕ್ಷಿತವರ್ಗದವರ ಪ್ರಭೇದದಲ್ಲಿ ಇದು ಸ್ಪಷ್ಟವಾಗಿರುವುದನ್ನು ಗಮನಿಸಬಹುದು. ಇಂದು ಇಂಗ್ಲಿಷ್ ಜನ ನಮ್ಮ ನಾಡನ್ನು ಬಿಟ್ಟು ಹೋಗಿದ್ದರೂ ವೈಜ್ಞಾನಿಕ–ಸಂಶೋಧನೆಗಳಿಂದ ನಾಗರಿಕತೆ ಹಳ್ಳಿಹಳ್ಳಿಗೂ ಪಸರಿಸುತ್ತಿರುವುದರಿಂದ ಅವಿದ್ಯಾವಂತ ಹಳ್ಳಿಗರಲ್ಲೂ ಇಂಗ್ಲಿಷ್ ಶಬ್ದ ಬಳಕೆ ಹೆಚ್ಚುತ್ತಿದೆ. ಅವಿದ್ಯಾವಂತರು ಇಂಗ್ಲಿಷ್ ಪದಗಳನ್ನು ಕನ್ನಡ ರಚನೆಗನುಗುಣವಾಗಿ ತದ್ಭವೀಕರಿಸಿಕೊಂಡು ಬಳಸುತ್ತಾರೆ. ಇಂಗ್ಲಿಷ್ ಪ್ರಭಾವದ ಆಧಾರದಿಂದ ಪ್ರಭೇದ ಗುರುತಿಸುವುದು ಸುಲಭವಲ್ಲ. ಆದರೂ ಮೈಸೂರು, ಬೆಂಗಳೂರು ಮೊದಲಾದ ಕರ್ನಾಟಕದ ಕೆಲವು ದಕ್ಷಿಣ ಜಿಲ್ಲೆಗಳ ಜನರ ಮಾತಿನಲ್ಲಿ ಇಂಗ್ಲಿಷ್ ಪದಗಳು ಹೆಚ್ಚು ಬಳಕೆಯಲ್ಲಿವೆ. ಕೈಲಾಸಂ ಅವರ ನಾಟಕಗಳಲ್ಲಿ ಬರುವ ಸಂಭಾಷಣೆಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೪.೩ ಕಾರವಾರ. ಬೆಳಗಾವಿ. ವಿಜಾಪುರ, ಕಲಬುರ್ಗಿ ಹಾಗೂ ಬೀದರ ಜಿಲ್ಲೆಗಳ ಗಡಿ ಪ್ರದೇಶಗಳಲ್ಲಿ ಮರಾಠಿ ಪ್ರಭಾವ ಸಾಕಷ್ಟಿದೆ. ಈ ಪ್ರದೇಶವೆಲ್ಲ ದ್ವಿಭಾಷಾ

ಪ್ರದೇಶವಾದ್ದರಿಂದ ಕನ್ನಡ–ಮರಾಠಿ ಎರಡೂ ಭಾಷೆಗಳನ್ನು ಇಲ್ಲಿಯ ಜನ ಬಲ್ಲವರು. ಮರಾಠಿ ಪ್ರಭಾವಿತ ಈ ಪ್ರದೇಶದ ಕನ್ನಡವನ್ನು ಒಂದು ಪ್ರಭೇದವೆಂದು ಪರಿಗಣಿಸಬಹುದಾಗಿದೆ. ಕಾರವಾರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಕೊಂಕಣಿ ಭಾಷೆಯ ಪ್ರಭಾವವೂ ತಕ್ಕಮಟ್ಟಿಗೆ ಕಾಣುತ್ತದೆ. ಆದರೆ ಪ್ರಭೇದವೆಂದು ಗುರುತಿಸುವಷ್ಟರ ಮಟ್ಟಿಗಲ್ಲ.

೪.೨ ಕನ್ನಡ ಭಾಷೆ ತನ್ನ ಸೋದರ ಭಾಷೆಗಳಿಂದಲೂ ಗಡಿ ಭಾಗಗಳಲ್ಲಿ ಸ್ವಾಭಾವಿಕವಾಗಿ ಪ್ರಭಾವಿತಗೊಂಡಿದೆ. ಬೀದರ, ಕಲಬುರ್ಗಿ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಕೋಲಾರ, ಈ ಆರೂ ಜಿಲ್ಲೆಗಳ ಪೂರ್ವ ಗಡಿಭಾಗವೆಲ್ಲ ತೆಲುಗು ಭಾಷೆಯ ಸಂಪರ್ಕ ಹೊಂದಿದೆ. ಬೀದರ, ಕಲಬುರ್ಗಿಗಳಿಗಿಂತ ಬಳ್ಳಾರಿಯಿಂದ ದಕ್ಷಿಣಕ್ಕೆ ಕೋಲಾರದ ವರೆಗಿನ ಗಡಿಭಾಗದಲ್ಲಿ ಹೆಚ್ಚು ಪ್ರಭಾವ ಎದ್ದು ಕಾಣುತ್ತದೆ. ಬೆಂಗಳೂರು ಜಿಲ್ಲೆಯ ತೀರ ಸ್ವಲ್ಪ ಭಾಗ ಮಾತ್ರ ಆಂಧ್ರಗಡಿಗೆ ಹತ್ತಿದ್ದರೂ ಆ ಭಾಗವಲ್ಲಿ ತೆಲುಗಿನ ಪ್ರಭಾವವೇ ಹೆಚ್ಚಿಗಿದೆ. ಈ ಪ್ರದೇಶವನ್ನೆಲ್ಲ ಒಂದು ಪ್ರಭೇದ ಎಂದು ಪರಿಗಣಿಸಬಹುದಾಗಿದೆ.

ಮೈಸೂರುಜಿಲ್ಲೆಯ ದಕ್ಷಿಣ ಪ್ರದೇಶವೆಲ್ಲ ತಮಿಳು ನಾಡಿಗೆ ಹತ್ತಿರುವುದರಿಂದ ಸಹಜವಾಗಿ ತಮಿಳಿನ ಪ್ರಭಾವ ಆ ಭಾಗಗಳಲ್ಲಿ ಆಗಿದೆ. ಬೆಂಗಳೂರು ಜಿಲ್ಲೆಯ ದಕ್ಷಿಣಗಡಿ ಪ್ರದೇಶವೂ ತಮಿಳುನಾಡಿಗೆ ಹೊಂದಿಕೊಂಡಿದ್ದರೂ ಅಲ್ಲಿ ಹೇಳಿಕೊಳ್ಳುವಂಥ ಪ್ರಭಾವ ಉಂಟಾಗಿಲ್ಲ. ತಮಿಳು ಪ್ರಭಾವಿತ ಕನ್ನಡವನ್ನು ಪ್ರಭೇದವೆಂದು ಗಣಿಸುವಷ್ಟರ ಮಟ್ಟಿಗೆ ಆ ಪ್ರದೇಶ ನಿಲ್ಲುತ್ತದೆಯೋ ಎಂಬುದು ಪರಿಶೀಲಿಸಬೇಕಾದ ಅಂಶ.


ಮೈಸೂರು, ಕೊಡಗು ಹಾಗೂ ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಮಲೆಯಾಳಂ ಮತ್ತು ತುಳುಭಾಷೆಗಳ ಪ್ರಭಾವವನ್ನು ಮನಗಾಣಬಹುದು. ಕೇರಳದ ಗಡಿಪ್ರದೇಶ ಈ ಜಿಲ್ಲೆಗಳ ಪಶ್ಚಿಮಗಡಿಗೆ ಹತ್ತಿಕೊಂಡಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ತುಳು, ಮಲೆಯಾಳಂ, ಎರಡೂ ಭಾಷೆಗಳ ಪ್ರಭಾವ ಇದ್ದರೆ ಕೊಡಗು ಜಿಲ್ಲೆಯಲ್ಲಿ ಮಲೆಯಾಳಂ ಹೆಚ್ಚು ಇದೆ. ಮೈಸೂರು ಜಿಲ್ಲೆಯಲ್ಲಿ ಅವೆರಡೂ ಇನ್ನೂ ಕಡಿಮೆ. ತುಳು ಮಲೆಯಾಳಂ ಪ್ರಭಾವವುಳ್ಳ ಪ್ರದೇಶಗಳನ್ನು ಪ್ರಭೇದಗಳೆಂದು ಗುರುತಿಸಬಹುದು.

ಕೊಡಗು, ಇರುಳ, ಕೊರಗ, ಮುಂತಾದ ಸೋದರ ಭಾಷೆಗಳು ಕನ್ನಡದ ಮೇಲೆ ಸ್ಥಳೀಯವಾಗಿ ಕೆಲವು ಜನಾಂಗಗಳ ಮೇಲೆ ಪ್ರಭಾವ ಬೀರಿರಬಹುದಾದರೂ ಅವುಗಳನ್ನು ಪ್ರಭೇದಗಳೆಂದು ಗಣಿಸುವಷ್ಟು ಆಗಿದೆಯೋ ? ಎಂಬುದನ್ನು ಪರಿಶೀಲಿಸಬೇಕು.

೪.೫ ಅನ್ಯಭಾಷಾ ಪ್ರಭಾವದಿಂದಾಗಿ ಎದ್ದುತೋರುವ ಕನ್ನಡಪ್ರಭೇದ ಗಳೆಂದರೆ :

೧. ಉರ್ದು ಪ್ರಭಾವಿತ ಪ್ರಭೇದ
೨. ಮರಾಠಿ ಪ್ರಭಾವಿತ ಪ್ರಭೇದ
೩. ತೆಲುಗು ಪ್ರಭಾವಿತ ಪ್ರಭೇದ
೪. ಮಲೆಯಾಳಂ–ತುಳು ಪ್ರಭಾವಿತ ಪ್ರಭೇದ
೫. ತಮಿಳು ಪ್ರಭಾವಿತ ಪ್ರಭೇದ.

ಅನ್ಯಭಾಷಾ ಪ್ರಭಾವ ಒಂದು ಪ್ರದೇಶದ ಎಲ್ಲ ಜನರ ಮೇಲೂ ಒಂದೇ ಮಟ್ಟದಲ್ಲಿ ಆಗುತ್ತದೆಂದು ಹೇಳಲು ಬರುವುದಿಲ್ಲ. (೧) ಹಳ್ಳಿಗರು–ಪಟ್ಟಣಿಗರು (೨) ವಿದ್ಯಾವಂತರು–ಅವಿದ್ಯಾವಂತರು (೩) ಗಂಡಸರು–ಹೆಂಗಸರು (೪) ವಯಸ್ಕರು–ಮಕ್ಕಳು (೫) ಬ್ರಾಹ್ಮಣರು–ಬ್ರಾಹ್ಮಣೇತರರು— ಇವರ ಭಾಷೆಯಲ್ಲಿ ಪ್ರಭಾವದ ವ್ಯತ್ಯಾಸವನ್ನು ಗುರುತಿಸಬಹುದು, ಇದಕ್ಕೆ ಇನ್ನೊಂದು ಕಾರಣವೆಂದರೆ ದ್ವಿಭಾಷಾ ಪ್ರದೇಶದಲ್ಲಿ ಜನರು ಮಾತನಾಡುವ 'ಸಂದರ್ಭ'ಗಳಲ್ಲಿ ಭಾಷೆಯನ್ನು ಸಂದರ್ಭಕ್ಕೆ ತಕ್ಕಂತೆ 'ಕೋಡ' (Code) ಬದಲಿಸಿ ಮಾತನಾಡಲು ಶಕ್ತರಾಗಿರುತ್ತಾರೆ. ಇದನ್ನು ಸಂಕ್ಷೇಪವಾಗಿ ಹೀಗೆ ಸೂಚಿಸಬಹುದಾಗಿದೆ ;



ಹೀಗೆ ಪ್ರಭೇದಗಳನ್ನು ಗುರುತಿಸುವಾಗ ನಾವು 'ಸಂದರ್ಭ'ಗಳನ್ನೂ ಲಕ್ಷಿಸಬೇಕಾಗುತ್ತದೆ. ಕನ್ನಡ ಮಾತೃಭಾಷೆಯುಳ್ಳವರು ಸಹಜವಾಗಿ ತಮ್ಮ ಭಾಷೆಯ ವಾತಾವರಣದಲ್ಲಿ ಮಾತನಾಡುವಾಗ ಅವರ ಮಾತಿನಲ್ಲಿ ಬರುವ ಅನ್ಯಭಾಷಾ ಪದಪ್ರಯೋಗಗಳ ಆಧಾರದ ಮೇಲೆ, ಪ್ರಭಾವಿತ ಪ್ರಭೇದವನ್ನು ಗುರುತಿಸುವುದು ಹೆಚ್ಚು ಸಮಂಜಸವೆನಿಸುತ್ತದೆ.

ಅನ್ಯಭಾಷಾ ಪ್ರಭಾವದಿಂದಾದ ಪ್ರಭೇದಗಳನ್ನು ಈ ಕೆಳಗಿನ ಮಟ್ಟಗಳಲ್ಲಿ ವಿವರಿಸುತ್ತಾರೆ :

ಅನ್ಯಭಾಷಾ ಪ್ರಭಾವದಿಂದಾದ ಕನ್ನಡ ಪ್ರಭೇದದಲ್ಲಿ—

೧. ಸೇರಿರುವ ಹೊಸ ಧ್ವನಿಮಾಗಳು, ಧ್ವನಿಮಾ ಬದಲಾವಣೆಗಳು, ಉಚ್ಚಾರ ಇತ್ಯಾದಿ
೨. ಸೇರಿರುವ ಆಕೃತಿಮಾಗಳು, ಅವುಗಳ ಕ್ರಮ, ಇತ್ಯಾದಿ
೩. ಅರ್ಥಕ್ಕೆ ಸಂಬಂಧಿಸಿದ ಬದಲಾವಣೆಗಳು
೪. ವಾಕ್ಯಮಟ್ಟದಲ್ಲಾಗುವ ಬದಲಾವಣೆಗಳು.

ಈ ಎಲ್ಲ ಮಟ್ಟಗಳಲ್ಲೂ ವ್ಯತ್ಯಾಸ ಇರಬಹುದು ಅಥವಾ ಕೆಲವು ಮಟ್ಟಗಳಲ್ಲಿ ಇರದೇ ಇರಬಹುದು.

ಪ್ರಭೇದಭಾಷೆಗಳ ಗಡಿಗಳನ್ನು ಗುರುತಿಸುವುದು ಕಷ್ಟಸಾಧ್ಯವಾದ ಕಾರ್ಯ. ಪ್ರಭೇದಭಾಷೆ ಎನ್ನುವುದೇ ಅಸ್ಥಿರ ಸೀಮೆಯ ಘಟಕ. ಉಪಭಾಷೆಯ ಗಡಿಗಳನ್ನೇ ನಿಖರವಾಗಿ ಪತ್ತೆಹಚ್ಚುವುದು ಕಠಿಣವಿರುವಾಗ ಪ್ರಭೇದಗಳನ್ನು ಗೆರೆ ಕೊರೆದು ಹೇಳುವುದಂತೂ ದೂರ ಉಳಿಯಿತು. ಗಡಿ ಪ್ರದೇಶದ ಒಳಭಾಗದಲ್ಲಿ ಬಂದಂತೆ ಅನ್ಯಭಾಷಾ ಪ್ರಭಾವ ಕಡಿಮೆಯಾಗುತ್ತಬರುತ್ತದೆ. ಗಡಿ ತಾಲೂಕು ಸ್ಥಳಗಳನ್ನೂ ಕೆಲವು ಸಲ ಪ್ರಭೇದ ಪ್ರತಿನಿಧಿಯೆಂದು ಪರಿಗಣಿಸುವುದೂ ಕಷ್ಟವಾಗುತ್ತದೆ. ಒಂದೊಂದು ಜಿಲ್ಲೆಯಲ್ಲಿ ಎರಡು ಅಥವಾ ಅದಕ್ಕೂ ಹೆಚ್ಚು ಅನ್ಯಭಾಷಾ ಪ್ರಭಾವವೂ ಆಗಿರುವುದನ್ನು ಗಮನಿಸಬಹುದು. (ಕೋಷ್ಟಕ ನೋಡಿ)

ಈಗಾಗಲೆ ಸೂಚಿಸಿರುವ ಅನ್ಯಭಾಷಾ ಪ್ರಭಾವಿತ ಪ್ರಭೇದಗಳಲ್ಲಿ ಎದ್ದುಕಾಣುವ ಪ್ರಭಾವಿತ ಅಂಶಗಳನ್ನು ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಇಲ್ಲಿ ಕ್ರೋಢೀಕರಿಸಲಾಗಿದೆ. ಇದರಿಂದ ಆ ನಾಲ್ಕೂ ಪ್ರಭೇದಗಳ ಕಲ್ಪನೆ ಉಂಟಾಗುತ್ತದೆ.

೪.೫.೧ **ಉರ್ದು ಪ್ರಭಾವಿತ ಪ್ರಭೇದ :**

ಬೀದರ, ಕಲಬುರ್ಗಿ ಜಿಲ್ಲೆಗಳ ಬಹುಭಾಗ ಹಾಗೂ ರಾಯಚೂರು ಜಿಲ್ಲೆಯ ರಾಯಚೂರು ತಾಲೂಕು, ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಪೂರ್ವ ಭಾಗಗಳು ಸಾಮಾನ್ಯವಾಗಿ ಈ ಪ್ರಭೇದದ ಪ್ರದೇಶವೆನ್ನಬಹುದು. ಈ ಪ್ರದೇಶದಲ್ಲಿ ಉರ್ದು ಪ್ರಭಾವಕ್ಕೆ ಕಾರಣವೆಂದರೆ ಸುಮಾರು ೬೦೦ ವರ್ಷಗಳ ಸುದೀರ್ಘ ಅವಧಿಯ ಮುಸ್ಲಿಮ್ ಅರಸರ ಆಳ್ವಿಕೆ. ಈಗ ಪೂರ್ವ ಗಡಿ ಭಾಗದಲ್ಲಿ ಆಂಧ್ರಪ್ರದೇಶದ ತೆಲುಗು ಗಡಿ ಭಾಗವಾಗಿದೆ. ಇಲ್ಲಿ ಕ್ರಮೇಣ ಉರ್ದುಪ್ರಭಾವ ಕಡಿಮೆಯಾಗುತ್ತಿದೆ.

ಈ ಪ್ರಭೇದದಲ್ಲಿ ವಸ್ತುವಾಚಕಗಳು. ಭಾವನಾಮಗಳು. ಆಡಳಿತೆಗೆ ಸಂಬಂಧಿಸಿವ ಪದಗಳು, ಸಂಖ್ಯಾವಾಚಿಗಳು, ವಿಶೇಷಣಗಳು ಮುಂತಾದ ಲೆಕ್ಕವಿಲ್ಲದಷ್ಟು ಉರ್ದು ಪದಗಳು ಸಹಜವಾಗಿ ಸೇರಿವೆ.

ಕಿಲಾ, ಸವಾರಿ, ಜಲಸಾ, ಧೋಬಿ, ರಜಾಯಿ, ಟಿಪ್ಪಾಖಾನಾ, ದುಕಾನ, ಖಾರಿಫ್, ರಬ್ಬಿ, ಒಕವುತ್, ಅಮೀನಸಾಬ, ಮೋತ್ಮೀನಸಾಬ, ನಜರ, ಓಹದಾ, ನುಜುಲ್, ತಪಸೀಸ, ಬಯಾನ, ಗರಂ, ಸರ್ದಿ, ಬಾರೀಕ್. ಕಿರಾಯ್, ತೇಜ, ಬತಾಯಿ, ಖರಾಬ್, ದುನಿಯಾದ್, ಗುಂಜಾಯಿಷ್. ಮುಷ್ಕಿಲ್. ಮಜಬೂರ, ಶಿಕಾಯತ್, ಇಜ್ಜತ್, ಏಕ್, ದೋ, ತೀನ, ಅಸ್ಸಿ, ನವ್ವದ......

ಇಂತಹ ಸಾವಿರಾರು ಪದಗಳಲ್ಲಿ ಕೋರ್ಟುಕಚೇರಿ. ದಿನನಿತ್ಯದ ವ್ಯವಹಾರ. ಆಡಳಿತ ಇವುಗಳಿಗೆ ಸಂಬಂಧಿಸಿದವುಗಳಲ್ಲದೆ ಆಟ ಪಾಠ, ವನಸ್ಪತಿ, ಹೂ-ಹಣ್ಣು. ಪಕ್ಷಿ-ಪ್ರಾಣಿಗಳ ಹೆಸರುಗಳೂ, ತಿಂಡಿ ತಿನಿಸು, ಅಡಿಗೆಯ ಹೆಸರುಗಳೂ, ನಿತ್ಯ ಬಳಕೆಯ ವಸ್ತುನಾಮಗಳೂ, ಆಭರಣ, ಬಟ್ಟೆ-ಬರೆ. ಸಂಗೀತ, ಪಂಚಾಂಗ ಇತ್ಯಾದಿ ಅನೇಕ ಬಗೆಯ ಉರ್ದು ಪದಗಳೂ ಇಂದಿಗೂ ಈ ಭಾಗದ ಜನರ ಆಡುನುಡಿಯಲ್ಲಿ ಹಾಸುಹೊಕ್ಕಾಗಿವೆ.

ಕ್ರಿಯಾಪದ, ಅಂಗಾಂಗಗಳ ಹೆಸರುಗಳು, ಸಂಬಂಧಕಾವ್ಯಯಗಳು. ದ್ವಿರುಕ್ತಿಗಳು, ಜೋಡು ನುಡಿಗಳು, ಗಾದೆಗಳು, ಮುಕ್ಕಳಾಟದ ಮಾತುಗಳು. ಸಂಬೋಧನೆ, ಎಚ್ಚರಿಕೆ, ಉದ್ಗಾರ, ಅವಧಾರಣೆ. ಮುಂತಾದವುಗಳಿಗೆ ಸಂಬಂಧಿಸಿದ ಪದಗಳು ಬೈಗುಳಗಳು ನಿಷೇಧಾರ್ಥಕಗಳು, ಉರ್ದು ಸಂಸ್ಕೃತಿಗೆ ಸಂಬಂಧಿಸಿದ ಪದಗಳು, ಸ್ಥಳ ನಾಮಗಳು. ಹೀಗೆ ಬದುಕಿನ ಎಲ್ಲ ಹಂತಗಳಲ್ಲಿ ಬಳಕೆಗೊಳ್ಳುವ ಉರ್ದು ಪದಗಳನ್ನು ಈ ಪ್ರಭೇದದಲ್ಲಿ ಗಮನಿಸಬಹುದು. ಇಲ್ಲಿ ಕೆಲವು ಉದಾಹರಣೆಗಳು :

ಉದಾಸು, ಗುಜರಾಯಿಸು, ಉಂಗಲಿ, ಗರ್ದನ್, ನಾಚಿಗಿ-ಶರ್ಮಾ, ದೇಖ್ ರೇಖ್. ಭೋಲಾ-ಭಾಲಾ, 'ಊಪರ ಶೇರವಾನಿ ಅಂದರ ಪರೇಶಾನಿ,' 'ಚಾರ ಪತ್ಥರ ಚಾರ', ಹುಜೂರ. ಸಾಹೇಬ, ಹುಶ್ಯಾರ, ಖಬರದಾರ. ಠೀಕ, ಬದಮಾಶ್, ಹರಾಮ್, ನಾಲಾಯಕ್, ಶೈತಾನ. ಬೇಶರ್ಮ. ಜುಲೂಸ. ಮಜಮಾಮೊಹಂದಿ. ಉಸ್ತಾದ, ಹುಮ್ನಾಬಾದ್......ಇತ್ಯಾದಿ.

ಈ ರೀತಿ ವ್ಯಾಪಕವಾಗಿ ಉರ್ದು ಬಳಕೆ ಈ ಪ್ರಭೇದದ ಮೇಲಾಗಿರುವುದರಿಂದ ಖ್, ಝ್, ಫ್, ಮುಂತಾದ ಧ್ವನಿಮಾಗಳು ಕನ್ನಡಕ್ಕೆ ಸೇರಿವೆ. ಈ ಪ್ರಭೇದದಲ್ಲಿ ಉರ್ದುವಿನೊಡನೆ ಬಂದಿ ಪದಗಳೂ ತಮ್ಮ ಕಾಣಿಕೆ ಸಲ್ಲಿಸಿವೆ.

ಕರ್ನಾಟಕದ ಉತ್ತರಭಾಗದಲ್ಲಿ ಉರ್ದುಪ್ರಭಾವಿತ ಪ್ರಭೇದವನ್ನು ಬಿಟ್ಟರೆ ಮೈಸೂರು, ಕೆಲವುಕಾಲ ಟಿಪ್ಪುಸುಲ್ತಾನ ಮುಂತಾದ ಮುಸಲ್ಮಾನ ಅರಸರ ಆಳಿಕೆಗೆ ಒಳಪಟ್ಟಿದುದರಿಂದ ಬಹುಕಾಲದವರೆಗೆ ಮಹಮ್ಮದೀಯ ಅಧಿಕಾರಿಗಳು ಅಧಿಕಾರಸ್ಥಾನಗಳಲ್ಲಿದ್ದುದರಿಂದ ಮೈಸೂರು, ಕೊಡಗು, ಮಂಡ್ಯ ಮುಂತಾದ ಜಿಲ್ಲೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಉರ್ದು ಪ್ರಭಾವ ಬೀರಿದೆ. ಆಡಳಿತಕ್ಕೆ ಸಂಬಂಧಿಸಿದ ಅನೇಕ ಪದಗಳು ಕನ್ನಡಕ್ಕೆ ಸೇರಿವೆ. ಆದರೂ ಬೀದರ, ಕಲಬುರ್ಗಿ ಪ್ರದೇಶದಲ್ಲಿಯಷ್ಟು ದಟ್ಟವಾದ ಪ್ರಭಾವ ಅಲ್ಲಿ ಕಾಣುವುದಿಲ್ಲ. ಬೀದರ, ಕಲಬುರ್ಗಿ ಪ್ರದೇಶದ ಉರ್ದು ಪ್ರಭಾವಿತ ಪ್ರಭೇದದಲ್ಲಿ ವಾಕ್ಯಮಟ್ಟದಲ್ಲೂ ಪ್ರಭಾವ ಗಮನಾರ್ಹವಾಗಿದೆ :

"ನಾನೂ ನಿಮ್ಮೊಡನೆ ಬರುತ್ತೇನೆ'' ಎಂದು ಅವನು ಅಂದನು.

ಈ ಬಗೆಯ ಕನ್ನಡ ವಾಕ್ಯಗಳು ಉರ್ದುವಿನ ಪ್ರಭಾವದಿಂದ ತಿರುವುಮುರುವಾಗಿವೆ :

ಉದಾ : (೧) ಅಂವ ಅಂದಾ ಕಿ ನಾಭೀ ನಿವ್ ಸರಿ ಬರ್ತೆ.
(ಅವನು ಅಂದನಲ್ಲಾ ಏನಂದರೆ ನಾನೂ ಕೂಡ ನಿಮ್ಮೊಡನೆ ಬರುತ್ತೇನೆ)

(೨) ದುನಿಯಾದ್ ಮಂದಿ ಹೇಳ್ತಾರಕಿ ಅಂವಾ ಥೋಲ್ ಚಂದ ಹಾನ.
(ಬಹಳಷ್ಟು ಜನ ಹೇಳುತ್ತಾರಲ್ಲಾ ಏನಂದರೆ ಅವನು ಬಹಳ ಚಲುವನಿದ್ದಾನೆ)

ಕನ್ನಡದ ಕ್ರಿಯಾಧಾತುಗಳನ್ನು ಉರ್ದು ಪದಗಳಿಗೆ ಹತ್ತಿಸಿ ವಾಕ್ಯರಚಿಸುವ ವೈಶಿಷ್ಟ್ಯವನ್ನೂ ಈ ಪ್ರಭೇದದಲ್ಲಿ ಕಾಣಬಹುದಾಗಿದೆ : ಖ್ಯಾಲಮಾಡು, ಸಫರ್ ಮಾಡು, ಖತಲ್‌ಮಾಡು, ಖೂನ್‌ಹತ್ತು, ಖರಾಬ್‌ಮಾಡು. ಕ್ರಿಯಾವಿಶೇಷಣ ಹಾಗೂ ವಿಶೇಷಣಗಳಿಂದ ಒಡಗೂಡಿದ ಅನೇಕ ಪದಗಳಲ್ಲಿ ಉರ್ದು–ಕನ್ನಡ ಪದಗಳು ಸಮ್ಮಿಶ್ರಗೊಂಡು ಬಳಕೆಗೊಳ್ಳುವುದಂತೂ ವಿಪುಲವಾಗಿ ಕಂಡುಬರುತ್ತದೆ : ಕಿರಾಯ್ದ ಮನಿ, ಖುದ್ದ (ಖಾಸ) ಊರು, ಜವಾನ ಹುಡುಗ, ಮುಷ್ಕಿಲ್ ಕೆಲ್ಸ. ಹೀಗೆಯೆ ಪದೋತ್ತರ ಹಾಗೂ ಪದಪೂರ್ವ ಉರ್ದುಪದಗಳಿಂದೊಡಗೂಡಿದ ಕನ್ನಡ ರೂಪಗಳೂ ಹೇರಳವಾಗಿ ದೊರೆಯುತ್ತವೆ : ಸಿರ್ಫ್ ಒಂದು, ಹರ್ ಮಾತು, ಅವನವಾಸ್ತಾ, ತಾನುಭೀ ಇತ್ಯಾದಿ. ಉರ್ದುಪ್ರಭಾವಿತ ಪ್ರಭೇದದಲ್ಲಿ ಉರ್ದು ಷಷ್ಠಿ ವಿಭಕ್ತಿ ಪ್ರತ್ಯಯ ನೇರವಾಗಿ ಎತ್ತಿಕೊಳ್ಳಲ್ಪಟ್ಟಿದ್ದರೆ, ಚತುರ್ಥಿವಿಭಕ್ತಿ ಪ್ರತ್ಯಯವೇ ದ್ವಿತಿಯಾರ್ಥದಲ್ಲೂ ಬಳಕೆಯಾಗುತ್ತದೆ :

ಘುರಬರ ಕಾ ಮುಂದಿ, ರಾಮುಗ್ ಹೊಡಿ.

ಇಷ್ಟೆಲ್ಲ ಬಗೆಯಲ್ಲಿ ಉರ್ದು ಪ್ರಭಾವ ಗಾಢವಾಗಿದ್ದರೂ ಈ ಭಾಗದಲ್ಲಿ ಅಚ್ಚ ಗನ್ನಡದ ಹಲವಾರು ಪದಗಳೂ ದೊರೆಯುತ್ತವೆಯೆನ್ನುವುದನ್ನು ಮರೆಯಲಾಗದು.

೪.೫.೨ ಮರಾಠಿ ಪ್ರಭಾವಿತ ಪ್ರಭೇದ :

ಬೆಳಗಾವಿ ಜಿಲ್ಲೆಯ ಖಾನಾಪುರ, ಬೆಳಗಾವಿ, ಹುಕ್ಕೇರಿ, ಚಿಕ್ಕೋಡಿ, ರಾಯ ಬಾಗ ಹಾಗೂ ಅಥಣಿ– ಈ ತಾಲೂಕುಗಳಲ್ಲಿ, ವಿಜಾಪುರ ಜಿಲ್ಲೆಯ ಜಮಖಂಡಿ, ಹಾಗೂ ವಿಜಾಪುರ ತಾಲೂಕುಗಳ ಉತ್ತರಭಾಗ ಇಂಡಿ ತಾಲೂಕು; ಕಲಬುರ್ಗಿ ಜಿಲ್ಲೆಯ ಅಫಜಲಪುರ, ಆಳಂದ ತಾಲೂಕುಗಳು; ಬೀದರ ಜಿಲ್ಲೆಯ ಬಸವಕಲ್ಯಾಣ, ಭಾಲ್ಕಿ, ಔರಾದ ತಾಲೂಕುಗಳು ಹಾಗೂ ಕಾರವಾರ ಜಿಲ್ಲೆಯ ಸೂಪಾ ತಾಲೂಕು ಇಷ್ಟು ಪ್ರದೇಶ ಈ ಪ್ರಭೇದದಲ್ಲಿ ಸಾಮಾನ್ಯವಾಗಿ ಒಳಗೊಳ್ಳುತ್ತದೆ. ಐದೂ ಜಿಲ್ಲೆ ಗಳ ಗಡಿಪ್ರದೇಶವೆಲ್ಲ ಮರಾಠಿ ಪ್ರದೇಶಕ್ಕೆ ಹೊಂದಿಕೊಂಡಿದೆ. ಆದರೆ ಎಲ್ಲಾ ಪ್ರದೇಶ ದಲ್ಲಿಯೂ ಪ್ರಭಾವ ಒಂದೇ ತೆರನಾಗಿಲ್ಲ. ಬೆಳಗಾವಿ ಜಿಲ್ಲೆಯ ಪಶ್ಚಿಮ ಹಾಗೂ ಉತ್ತರ ಗಡಿಭಾಗಗಳಲ್ಲಿ, ಕಾರವಾರ ಜಿಲ್ಲೆಯ ಸೂಪಾ ತಾಲೂಕಿನಲ್ಲಿ ಮರಾಠಿ ಮಾತ ನಾಡುವವರ ಸಂಖ್ಯೆಯೂ ಗಮನಾರ್ಹವಾಗಿದೆ. ಮಾಂವಸಿ, ಪಾವಣ್ಯಾ, ಅಬಚಿ, ವೈನಿ, ಅಗಾವ್, ಘಾರಜಾಚ, ಧಡಧಡೀತ, ಗರ್ದಿ, ಜರಾ, ಜ಼ರ, ಹರಕತ್, ಝುಕಾಸ, ಬಾತ್ಮಿ, ಅಮಟಿ, ಲಗುಟ, ತಾಬಡತೋಬ, ದಗದ, ಶ್ಯಾಯಿ, ವಹಿ, ಪಾರ, ಪೋರಿ, ವರಾತ, ಅಟಾಪ, ಹಳು–ಹಳು, ಝುಣಕ, ಅಗದೀ, ರಗಡ, ಠಿಕಾಣಿ, ಖರೆ, ಖಿಚಡಿ– ಈ ರೀತಿ ಹೇರಳ ಪದಗಳು ಈ ಪ್ರಭೇದದಲ್ಲಿ ತುಂಬಿ ಕೊಂಡಿವೆ.

ಮರಾಠಿ ಪ್ರಭಾವಿತ ಪ್ರಭೇದದಲ್ಲಿ ಶಬ್ದಾದಿಯಲ್ಲಿ ಮಹಾಪ್ರಾಣ ಉಚ್ಚಾರ ಸಾಕಷ್ಟು ಕಂಡುಬರುತ್ತದೆ.

ಖರೆ, ಝಿಪ್ಪರಿ, ಭಿಗಿಭಿಗಿ, ಧಾ.

ಪದಗಳಲ್ಲದೆ ಪದಸಮುಚ್ಚಯಗಳೂ ಇದ್ದುದಿದ್ದಂತೆ ಕನ್ನಡಿಗರಿಂದ ಉಚ್ಚರಿ ಸಲ್ಪಡುತ್ತವೆ : ಕಮೀತಕಮಿ, ಘಾರ ನಾಜೂಕ.

ಉರ್ದು ಪ್ರಭಾವಿತ ಪ್ರಭೇದದಲ್ಲಿಯಂತೆ ಮರಾಠಿ ಪ್ರಭಾವಿತ ಪ್ರಭೇದ ದಲ್ಲಿಯೂ ಎಲ್ಲ ಸಾಮಾಜಿಕ. ರಾಜಕೀಯ, ಧಾರ್ಮಿಕ ವ್ಯವಹಾರಗಳಿಗೆ ಸಂಬಂಧಿಸಿದ ಲೆಕ್ಕವಿಲ್ಲದಷ್ಟು ಮರಾಠಿ ಪದಗಳು ಬಳಕೆಯಲ್ಲಿವೆ. ಸಂಖ್ಯಾವಾಚಕ, ಪ್ರಮಾಣ ವಾಚಕಗಳಂತೂ ಈ ಭಾಗದಲ್ಲಿ ಬಹು ಬಳಕೆಯ ಪದಗಳಾಗಿವೆ : **ಪೌಣೆ, ದೀಡ,**

ಸವ್ವಾ, ಅಡೀಚ, ಪಾವ್, ಏಕಸೆ, ದೋನಸೆ, ಶಂಬರ, ಪನ್ನಾಸ, ವೀಸ, ಬಾರಾ, ಪಯಿಲಾ.

ದ್ವಿತಿಯಾ ವಿಭಕ್ತಿ ಪ್ರತ್ಯಯ ಉಪಯೋಗಿಸದೆ ವಾಕ್ಯ ರಚಿಸುವ ಹಾಗೂ ಕೆಲವೆಡೆ ಅದರ ಬದಲಾಗಿ ಚತುರ್ಥಿ ವಿಭಕ್ತಿ ಪ್ರತ್ಯಯ ಪ್ರಯೋಗಿಸಿ ವಾಕ್ಯ ರಚಿಸುವ ವಾಡಿಕೆ ಈ ಪ್ರಭೇದದಲ್ಲಿದೆ. ಉದಾ : ಅವನಿಗ್ ಒಳಖಾಸ, ಹಣ್ಣಿಗ್ ಕಡಿ, ಅವಕ್ ನೋಡ್ದ. ಈ ಬಗೆಯ ರಚನೆ ಕಲಬುರ್ಗಿ, ಬೀದರ ಜಿಲ್ಲೆಯ ಮರಾಠಿ ಪ್ರಭಾವಿತ ಪ್ರಭೇದದಲ್ಲಿ ಹೆಚ್ಚಿಗಿದೆ. ಆದ್ದರಿಂದ ಉರ್ದು ಹಾಗೂ ಮರಾಠಿ ಎರಡೂ ಭಾಷೆಗಳ ಪ್ರಭಾವಕ್ಕೊಳಗಾದ ಕಲಬುರ್ಗಿ, ಬೀದರ ಜಿಲ್ಲೆಯ ಗಡಿ ತಾಲೂಕುಗಳ ಪ್ರದೇಶವನ್ನು ಬೇರೆಯಾಗಿ ಗುರುತಿಸಬಹುದಾಗಿದೆ. 'ಇಸು' ಪ್ರೇರಣಾರ್ಥಕ ಪ್ರತ್ಯಯವನ್ನು ಮರಾಠಿ ಪದಗಳಗೆ ಸೇರಿಸಿ ಕನ್ನಡದಲ್ಲಿ ಬಳಸುವ ರೂಢಿ ಈ ಪ್ರಭೇದದಲ್ಲಿಯೂ ಕಾಣುತ್ತದೆ. ವಾಚಾಸು (ಮಾತಾಡಿಸು), ಲಾಜಾಸು (ನಾಚಿಸು), ಪಿಂಗಾಳ್ಸು (ತೂಕಡಿಸು), ಹರಾಸ (ಸೋಲಿಸು), ಚಿಡಾಸ (ಸತಾಯಿಸು).

ಸ್ಥಳನಾಮಗಳ ಮೇಲೆ ಪ್ರಭಾವ ಅಷ್ಟಾಗಿ ಇಲ್ಲ. ಮರಾಠಿ ಪ್ರಭಾವದಿಂದಾಗಿ ಈ ಪ್ರಭೇದದಲ್ಲಿ ಕೆಲವು ಕನ್ನಡ ಶಬ್ದಗಳ ಉಚ್ಚಾರದಲ್ಲಿ ಬದಲಾವಣೆಯುಂಟಾಗಿರುವುದನ್ನೂ ಗಮನಿಸಬಹುದು :

ಬ್ಯೆಂದಾನ (ಬಂದಿದ್ದಾನೆ), ಹೊಂದ (ಹೌದು), ಹೊಯ್ಂದಾನ (ಹೋಗಿದ್ದಾನೆ), ಯಾನು (ಏನು?), ಖೈ (ಕಹಿ).

ಮರಾಠಾ ಸಂಸ್ಥಾನಿಕರು ಧಾರವಾಡ, ಬೆಳಗಾವ, ವಿಜಾಪುರ ಜಿಲ್ಲೆಗಳ ಅನೇಕ ಭಾಗಗಳನ್ನು ಅಲ್ಲಲ್ಲಿ ಸ್ಥಳೀಯವಾಗಿ ಬಹುಕಾಲದ ವರೆಗೆ ಆಳಿದರೂ ತಮ್ಮ ಭಾಷೆಯ ಪ್ರಭಾವವನ್ನು ಅವರು ಗಡಿಭಾಗಗಳನ್ನುಳಿದು ಬೀರಲು ಸಾಧ್ಯವಾಗಲಿಲ್ಲ. ಮರಾಠಿ ಅರಸರ ಪ್ರಭಾವದಿಂದಾಗಿ ಲೆಕ್ಕಪತ್ರಗಳನ್ನು ಸಾಮಾನ್ಯ ವ್ಯಾಪಾರಸ್ಥರೂ ಮರಾಠಿ ಇಲ್ಲವೆ ಮೋಡಿ ಲಿಪಿಯಲ್ಲಿಡುತ್ತಿದ್ದುದು ಇತ್ತೀಚಿನ ವರೆಗೂ ಪ್ರಚಲಿತವಾಗಿತ್ತು.

೪.೫.೩ **ತೆಲುಗು ಪ್ರಭಾವಿತ ಪ್ರಭೇದ :**

ಕನ್ನಡದ ಮೇಲೆ ಉರ್ದು ಹಾಗೂ ಮರಾಠಿ ಭಾಷೆಗಳು ಬೀರಿದಷ್ಟು ವ್ಯಾಪಕವಾದ ಪ್ರಭಾವವನ್ನು ತೆಲುಗು ಬೀರಿಲ್ಲ. ತಮಿಳಿನದಂತೂ ಇನ್ನೂ ಕಡಿಮೆ. ಆದರೂ ತೆಲುಗು ಪ್ರಭಾವಿತ ಪ್ರಭೇದವನ್ನು ಗುರುತಿಸುವಷ್ಟು ಪ್ರದೇಶ ಕನ್ನಡದಲ್ಲಿ ದೊರೆಯುತ್ತದೆ. ಬೀದರ, ಕಲಬುರ್ಗಿ, ರಾಯಚೂರ, ಬಳ್ಳಾರಿ, ಚಿತ್ರದುರ್ಗ, ತುಮಕೂರ

ಹಾಗೂ ಕೋಲಾರಜಿಲ್ಲೆಗಳ ಪೂರ್ವ ಭಾಗವೆಲ್ಲ ಆಂಧ್ರಪ್ರದೇಶಕ್ಕೆ ಹತ್ತಿಕೊಂಡಿರುವುದರಿಂದ ಬೀದರ ಜಿಲ್ಲೆಯ ಔರಾದ, ಬೀದರ ತಾಲೂಕುಗಳು; ಕಲಬುರ್ಗಿ ಜಿಲ್ಲೆಯ ಚಿಂಚೋಳಿ, ಸೇಡಂ ಹಾಗೂ ಯಾದಗಿರಿ ತಾಲೂಕುಗಳು; ರಾಯಚೂರ ಜಿಲ್ಲೆಯ ರಾಯಚೂರು ತಾಲೂಕು, ಬಳ್ಳಾರಿ ಜಿಲ್ಲೆಯ ಸಿರಗುಪ್ಪ ಹಾಗೂ ಬಳ್ಳಾರಿ ತಾಲೂಕುಗಳು; ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ ತಾಲೂಕುಗಳು; ತುಮಕೂರು ಜಿಲ್ಲೆಯ ಸಿರಾ, ಪಾವಗಡ ಹಾಗೂ ಮಧುಗಿರಿ ತಾಲೂಕುಗಳು; ಕೋಲಾರ ಜಿಲ್ಲೆಯ ಬಾಗೇಪಲ್ಲಿ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು ಹಾಗೂ ಬಂಗಾರಪೇಟೆ ತಾಲೂಕುಗಳ ಪ್ರದೇಶದಲ್ಲಿ ತೆಲುಗು ಪ್ರಭಾವ ಒಂದೇ ಮಟ್ಟದಲ್ಲಾಗಿಲ್ಲ. ಆಯಾ ಜಿಲ್ಲಾ ಪ್ರಭೇದಗಳಿಗನುಗುಣವಾಗಿ, ಭೌಗೋಲಿಕ, ರಾಜಕೀಯ, ಸಾಮಾಜಿಕ ಕಾರಣಗಳಿದಗಿಂಾ ಪ್ರಭಾವ ಹೆಚ್ಚುಕಡಿಮೆಯಾಗಿದೆ. ಸಂಪೂರ್ಣ ಪಾವಗಡ ತಾಲೂಕು ಇದಕ್ಕೆ ತಕ್ಕ ಉದಾಹರಣೆಯಾಗಬಲ್ಲುದು. ಇಡೀ ತಾಲೂಕು ಆಂಧ್ರ ನಾಡಿನಲ್ಲಿಯೇ ವಿಸ್ತರಿಸಿದೆ. ಜಿಲ್ಲಾ ಸ್ಥಳದಿಂದ ಈ ತಾಲೂಕಿಗೆ ಪ್ರವೇಶಿಸಬೇಕಾದರೆ ಆಂಧ್ರನಾಡಿನಲ್ಲಿ ದಾಟಲೇಬೇಕಾಗುತ್ತದೆ. ಆದ್ದರಿಂದ ಭೌಗೋಲಿಕವಾಗಿ ಬಹು ವಿಚಿತ್ರ ಪರಿಸರದಲ್ಲಿ ಈ ತಾಲೂಕಿದೆ. ನಾಲ್ಕೂ ದಿಕ್ಕಿಗಿರುವ ತೆಲುಗು ಪರಿಸರದಲ್ಲಿ ಕನ್ನಡದ ಈ ಪ್ರದೇಶ ನೆಲೆಸಿದೆ. ಅಂತೆಯೇ ಅತಿ ಹೆಚ್ಚು ತೆಲುಗು ಪ್ರಭಾವಿತ ಪ್ರದೇಶವೆಂದರೆ ಪಾವಗಡ ತಾಲೂಕು. ಇಲ್ಲಿರುವ ಪ್ರತಿಯೊಬ್ಬ ಕನ್ನಡಿಗನಿಗೂ ತೆಲುಗು ಬರುತ್ತದೆ. ವಿಪರೀತ ತೆಲುಗು ಮಿಶ್ರಿತ ಕನ್ನಡ, ಒಂದು ಉಪಭಾಷೆಯಾಗುವಷ್ಟರಮಟ್ಟಿಗೆ ವಿಶಿಷ್ಟವೆನಿಸುತ್ತದೆ. ಇಲ್ಲಿಯ ಕನ್ನಡಿಗರು ತೆಲುಗು ಶಬ್ದಗಳನ್ನು ಬೇಕಾದ ಹಾಗೆ ಕನ್ನಡದಲ್ಲಿ ಬೆರಸಿ ಮಾತನಾಡುತ್ತಾರೆ :

ಗೊರ್‍ರೊಡೆಯೋದು (ಗೋರು ಹೊಡೆಯುವುದು)
ನೆಗಡಾಯಿಂದ (ನೆಗಡಿ ಆಗಿದೆ)
ಕೂದಲು ದುಬ್ಬಾಕರಾ (ಕೂದಲು ಬಾಚಿಕೊಂಡು ಬಾ)

ಗಾಡಿದಿ (ಕತ್ತೆ), ನೀಳ್ಳು (ನೀರು), ಪಾಂಬು (ಹಾವು), ಸೇಳ್‌ಕುಟ್ರಿ (ಕಟ್ಟಿರುವೆ), ಶಿಲ್ಕೋಲ್ (ಬಾರುಕೋಲು) ಇತ್ಯಾದಿ ಅಸಂಖ್ಯ ತೆಲುಗು ಪದಪುಂಜ, ವಾಕ್ಯಗಳು ಈ ಪ್ರಭೇದದಲ್ಲಿ ಬಳಕೆಯಲ್ಲಿವೆ.

ಪಾವಗಡ ಬಿಟ್ಟರೆ ತುಮಕೂರು ಜಿಲ್ಲೆಯ ಸಿರಾ ಮತ್ತು ಮಧುಗಿರಿ ಪ್ರದೇಶಗಳಲ್ಲಿ, ತೆಲುಗು ಪ್ರಭಾವ ಕಂಡುಬರುತ್ತದೆ. ಮಧುಗಿರಿಗೆ ಹೊಂದಿಕೊಂಡೇ ಇರುವ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕು ಹಾಗೂ ಆಂಧ್ರಗಡಿಗೆ ಹೊಂದಿಕೊಂಡಿರುವ ಕೋಲಾರ ಜಿಲ್ಲೆಯ ಎಲ್ಲ ತಾಲೂಕು ಪ್ರದೇಶಗಳಲ್ಲೂ ತೆಲುಗು ಪ್ರಭಾವ

ಸಾಕಷ್ಟಿದೆ. ಕನ್ನಡ ಆಡಳಿತ ಭಾಷೆಯಾಗಿರುವುದರಿಂದ ಎಷ್ಟು ಬೇಕು ಅಷ್ಟು ಕನ್ನಡ ಮಾತನಾಡಿದರೂ ವ್ಯವಹಾರಕ್ಕಾಗಿ ಹೆಚ್ಚಾಗಿ ತೆಲುಗನ್ನು ಮಾತನಾಡುತ್ತಾರೆ.

ಈ ಭಾಗದಲ್ಲಿ ಚದುವು (ಓದು), ರಾಗಿಮ್ರಾನು (ಅರಳಿಮರ), ಅಗ್ಗಿ (ಬೆಂಕಿ), ಓಚ್ (ಅಧ್ಯಾಪಕ), ಕೋಯಿಲ್‌ಗುಡಿ (ಚರ್ಚ), ಎರಗಡ್ಡೆ (ಈರುಳ್ಳಿ) ಮುಂತಾದ ಅಸಂಖ್ಯ ತೆಲುಗು ಪದಗಳು ಬಳಕೆಯಲ್ಲಿವೆ.

ಕೋಲಾರ ಜಿಲ್ಲೆಯ ಮಾಲೂರು, ಬಂಗಾರಪೇಟ ತಾಲೂಕುಗಳು ಬೆಂಗಳೂರಿಗೆ ತೀರ ಸನಿಹದಲ್ಲಿರುವುದಲ್ಲದೆ ಸಂಪರ್ಕ–ಸಾಧನದ ಹೆಚ್ಚಿನ ಅನುಕೂಲತೆ ಇರುವುದರಿಂದ ಬೆಂಗಳೂರ ಜಿಲ್ಲೆಯ ಹೊಸಕೋಟೆ ತಾಲೂಕಿನ ದಕ್ಷಿಣಭಾಗ, ಆನೇಕಲ್ ತಾಲೂಕು ಹಾಗೂ ದಕ್ಷಿಣ ಬೆಂಗಳೂರು ಈ ಪ್ರದೇಶದಲ್ಲಿ ತೆಲುಗು ಪ್ರಭಾವವೇ ಹೆಚ್ಚಿಗಿದೆ. ಬೆಂಗಳೂರು ಜಿಲ್ಲೆಯ ದಕ್ಷಿಣಗಡಿ, ತಮಿಳುನಾಡಿಗೆ ಹೊಂದಿ ಇದ್ದರೂ ತಮಿಳುನಾಡಿನ ಹೊಸೂರು ತಾಲೂಕಿನ ಪ್ರದೇಶದಲ್ಲೂ ತೆಲುಗಿನ ಪ್ರಭಾವವೇ ಇದೆ. ಬೆಂಗಳೂರು ಜಿಲ್ಲೆಯಲ್ಲಿ ತಮಿಳಿಗಿಂತ ತೆಲುಗು ಭಾಷೆಯ ಪ್ರಭಾವವೇ ಹೆಚ್ಚಿರುವುದು ಗಮನಾರ್ಹ ವಾಗಿದೆ. ಬೆಂಗಳೂರು ಜಿಲ್ಲೆಯ ಉತ್ತರದಿಕ್ಕಿನಲ್ಲಿರುವ ದೊಡ್ಡಬಳ್ಳಾಪುರ, ದೇವನ ಹಳ್ಳಿ ತಾಲೂಕುಗಳಲ್ಲಿಯೂ ತೆಲುಗು ಪ್ರಭಾವ ಕಂಡುಬರುತ್ತದೆ. ಆದ್ದರಿಂದ ಬೆಂಗ ಳೂರು ಜಿಲ್ಲೆಯ ಪಶ್ಚಿಮ ತಾಲೂಕುಗಳಾದ ನೆಲಮಂಗಲ, ಮಾಗಡಿ, ರಾಮನಗರ, ಚನ್ನಪಟ್ಟಣ ಹಾಗೂ ಕನಕಪುರ ತಾಲೂಕಿನ ಪಶ್ಚಿಮಭಾಗ– ಇವು ತೆಲುಗು ಪ್ರಭಾವದಿಂದ ದೂರವಿರುವ ಪ್ರದೇಶವೆನ್ನಬಹುದು.

ಅಳ್ಳುವ ಅಥವಾ ಉಡ್ತೆ (ಅಳಿಲು), ಊನಿ ಅಥವಾ ಶೀಬಿ (ಬೆಕ್ಕು), ಕಡಾಣಿ (ಕೀಲು), ಸೀಮೆ (ಇರುವೆ), ಪಾಪ್ಡಿ (ಬೈತಲೆ), ಗುಡ್ಡೋನು (ಕುರುಡನು), ಚೌಟ್ಲು ಅಥವಾ ಶೌಟ್ಲು (ಕಿವುಡ) ಇಂತಹ ಹಲವಾರು ಪದಗಳು ಈ ಪ್ರದೇಶದಲ್ಲಿ ತೆಲುಗಿ ನಿಂದ ಸ್ವೀಕರಿಸಲ್ಪಟ್ಟಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ವೇದಾವತಿ ನದಿಯ ಪೂರ್ವಭಾಗ ತೆಲುಗು ಪ್ರಭಾವಿತ ಪ್ರದೇಶ. ಮೊಳಕಾಲ್ಮೂರು, ಚಳ್ಳಕೆರೆ ಹಾಗೂ ಹಿರಿಯೂರ ತಾಲೂಕಿನ ಪೂರ್ವ ಭಾಗ– ಈ ಪ್ರದೇಶದಲ್ಲಿ ತೆಲುಗು ಮಾತನಾಡುವವರ ಸಂಖ್ಯೆ ಗಮನಾರ್ಹವಾಗಿರುವುದ ರಿಂದ ಸಹಜವಾಗಿ ಆ ಭಾಷೆಯ ಹಲವಾರು ಪದಗಳು ಕನ್ನಡದಲ್ಲಿ ಸೇರಿವೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕು ಹಾಗೂ ಶಿರಗುಪ್ಪ ತಾಲೂಕು ಸಂಪೂರ್ಣವಾಗಿ ತೆಲುಗು ಪ್ರಭಾವಕ್ಕೊಳಪಟ್ಟಿವೆ. ಆಂಧ್ರದ ಜನತೆಯೊಡನೆ ಬಹುಕಾಲದಿಂದ ಇವರ ಸಂಪರ್ಕ ಇದ್ದುದರಿಂದ ಈ ಪ್ರದೇಶದಲ್ಲಿ ಸಾಕಷ್ಟು ಜನ ತೆಲುಗರು ನೆಲಸಿದ್ದಾರೆ. ಒಕ ರೂಪಾಯಿ, ಒಕಟಿ, ಚೇಯಿ, ಪೋ, ಚೂಡು, ಡಬ್ಬು, ದೊಂಗಲು, ಚಪ್ಪು, ಪಾಮು ಇಂತಹ ಬಹುಸಂಖ್ಯೆ ತೆಲುಗುಪದಗಳು ಕನ್ನಡದಲ್ಲಿ ಸೇರಿವೆ.

ರಾಯಚೂರ, ಬೀದರ ಹಾಗೂ ಕಲಬುರ್ಗಿ ಜಿಲ್ಲೆಯ ಪೂರ್ವ ಗಡಿಭಾಗದಲ್ಲಿ ತೆಲುಗು ಪ್ರಭಾವವಿದ್ದರೂ ಕೋಲಾರ, ಬೆಂಗಳೂರು ಜಿಲ್ಲೆಯ ಪ್ರದೇಶಗಳಲ್ಲಿದ್ದಷ್ಟು ದಟ್ಟವಾಗಿಲ್ಲ. ಆದ್ದರಿಂದ ತೆಲುಗು ಪ್ರಭಾವಿತ ಕನ್ನಡ ಪ್ರಭೇದವನ್ನು

(೧) ಹೆಚ್ಚು ದಟ್ಟ ಪ್ರಭಾವವುಳ್ಳ ಪಾವಗಡ, ಮಧುಗಿರಿ, ಕೋಲಾರ ಪ್ರದೇಶಗಳು

(೨) ಕಡಿಮೆ ಪ್ರಭಾವವುಳ್ಳ ಬೀದರ, ಕಲಬುರ್ಗಿ, ರಾಯಚೂರ ಪ್ರದೇಶಗಳು

(೩) ಮಧ್ಯಮ ಪ್ರಭಾವವುಳ್ಳ ಬಳ್ಳಾರಿ, ಚಿತ್ರದುರ್ಗ ಪ್ರದೇಶಗಳು ಎಂಬ ಮೂರು ಮಟ್ಟಗಳಲ್ಲಿ ಗುರುತಿಸಬಹುದು.

೪.೫.೪ ಮಲೆಯಾಳಂ–ತುಳು ಪ್ರಭಾವಿತ ಪ್ರದೇಶ :

ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಕೊಡಗು ಈ ಎರಡು ಜಿಲ್ಲೆಗಳಲ್ಲಿ ಈ ಪ್ರಭೇದವನ್ನು ಕಾಣಬಹುದು. ವಾಸ್ತವವಾಗಿ ಮಲೆಯಾಳಂ ಪ್ರಭಾವಿತ ಪ್ರಭೇದ ಹಾಗೂ ತುಳು ಪ್ರಭಾವಿತ ಪ್ರಭೇದ ಇವೆರಡನ್ನೂ ಪ್ರತ್ಯೇಕವಾಗಿಯೇ ಪರಿಗಣಿಸ ಬೇಕಾಗುತ್ತದೆ. ಈ ಪ್ರಭೇದಗಳನ್ನು ಪಶ್ಚಿಮಘಟ್ಟದ ಪಶ್ಚಿಮ ಭಾಗದಲ್ಲಿ ಕಡಲ ತೀರ ಪ್ರದೇಶ ಹಾಗೂ ಕೇರಳ ರಾಜ್ಯ ಗಡಿಗೆ ಹತ್ತಿರುವ ಪ್ರದೇಶದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಈ ಪ್ರದೇಶದ ಕನ್ನಡದ ಮೇಲೆ ಕೊಂಕಣಿ, ತುಳು ಹಾಗೂ ಮಲೆಯಾಳಂ ಭಾಷೆಗಳ ಪ್ರಭಾವವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಂಕಣಿ ಹಾಗೂ ತುಳು ಹೆಚ್ಚು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಹಾಗೂ ಮಲೆಯಾಳಂ ಹೆಚ್ಚು. ಕೊಂಕಣಿ ಭಾಷೆಯನ್ನು ಚಿತ್ಪಾವನ ಹಾಗೂ ಕರ್ಹಾಡಸ್ಥ ಮರಾಠರು ಮಾತನಾಡುವುದರಿಂದ ಇದು ವಿಶಿಷ್ಟ ಜನಾಂಗದವರ ಭಾಷೆ ಮಾತ್ರ. ಅಂತೆಯೇ ಕೊಂಕಣಿಗಿಂತ ತುಳು ಭಾಷೆಯ ಪ್ರಭಾವವೇ ಒಡೆದು ಕಾಣುತ್ತದೆ. ಕಲ್ಯಾಣಪುರದ ದಕ್ಷಿಣ ಭಾಗದಲ್ಲೆಲ್ಲ ತುಳು ಹೆಚ್ಚು ಬಳಕೆಗೊಳ್ಳುತ್ತಿದೆ. ಈ ಪ್ರದೇಶದಲ್ಲಿ ಗೌಡ ಹಾಗೂ ಹವ್ಯಕ ಜನಾಂಗದವರನ್ನುಳಿದು ಎಲ್ಲ ಜನರ ಮಾತೃಭಾಷೆ ತುಳು ಆಗಿರುವುದರಿಂದ ಅವರ ವ್ಯಾವಹಾರಿಕ ಕನ್ನಡದಲ್ಲಿ ತುಳುವಿನ ಪ್ರಭಾವ ಹೆಚ್ಚು ಸ್ಪಷ್ಟವಾಗಿರುತ್ತದೆ.

ತುಳು ಪ್ರಭಾವಿತ ಪ್ರಭೇದದಲ್ಲಿ, ಪುಚ್ಚೆ (ಬೆಕ್ಕು), ಪಿಜಿನ್ (ಇರುವೆ), ಉರೆ (ಚಿಗರೆ) ಇತ್ಯಾದಿ ಹಲವಾರು ತುಳು ಶಬ್ದಗಳು ಪ್ರವೇಶ ಪಡೆದಿರುವುದಲ್ಲದೆ ಕೆಲವು ಧ್ವನಿಮಾತ್ಮಕ ಬದಲಾವಣೆಗಳಿಗೂ ಅವಕಾಶವಾಗಿದೆ. ಈ ಪ್ರಭೇದದಲ್ಲಿ ಶಬ್ದಾಂತ್ಯದಲ್ಲಿ ಅನುನಾಸಿಕತೆ, ತುಳು ಪ್ರಭಾವದಿಂದ ಬಂದಿರಬೇಕು.

ಉದಾ : ಅಕ್ಕನ್, ಅಜ್ಜನ್, ಅಳಿಯನ್, ಹೆಗ್ಗನ್, ಪಗೆಲನ್, ನಾಯೆನ್, ಕಲ್ಪೊವನ್ ಇತ್ಯಾದಿ.

ಈ ಪ್ರಭೇದದಲ್ಲಿ ಞ, ಙ ವರ್ಣಗಳು ಸ್ವತಂತ್ರವಾಗಿ ಬಳಕೆಗೊಳ್ಳುತ್ತವೆ :

ಞಗ್ಗ (ಜಗ್ಗ), ಒಙ್ಙ (ತೊಂದರೆ), ಕೊಞ್ಞ (ತೊದಲು), ಮಙ್ಙ (ಮಗ), ನೊಙ್ಙ (ನೊಗ), ಹಞ್ಞ (ಸ್ವಲ್ಪ).

ಇ > ಎ, ಉ > ಒ ಬದಲಾವಣೆಯನ್ನು ಗಮನಿಸಬಹುದು :

ಕೆಮಿ < ಕಿವಿ. ಎಲಿ < ಇಲಿ, ಬೆಳಿ < ಬಿಳಿ, ಸೆಡ್ಲು < ಸಿಡಿಲು,
ಸೊರಿ < ಸುರಿ, ಒಳಿ < ಉಳಿ. ಕೊಣೆ < ಕುಣೆ, ತೊಟಿ < ತುಟಿ.

ಮಂಗಳೂರು, ಪುತ್ತೂರು ತಾಲೂಕುಗಳಲ್ಲಿ ಹಾಗೂ ಕೊಡಗಿನ ಭಾಗಮಂಡಲ ತಾಲೂಕಿನಲ್ಲಿ ಮಲೆಯಾಳಂ ಹೆಚ್ಚಿದೆ. ಮಾಪಿಳ್ಳೆ ಜನಾಂಗದವರ ಮಾತೃಭಾಷೆ ಮಲೆಯಾಳಂ ಆಗಿದ್ದು ಅವರ ಭಾಷೆಯ ಪ್ರಭಾವ ಇಲ್ಲಿ ಕಾಣುತ್ತದೆ. ಕೇರಳದ ಕಾಸರಗೋಡಿನಲ್ಲಿರುವ ಬಂಟರು, ತುಳು ಮಾತನಾಡುತ್ತಾರೆ. ಕೇರಳದ ಗಡಿಭಾಗ ಗಳಿಂದ ಕೊಡಗು ಹಾಗೂ ಮಂಗಳೂರು ಜಿಲ್ಲೆಗೆ ಬಂದ ಕುಶಲಿಗ, ಕೆಲಸಗಾರರ ಭಾಷೆ ಮಲೆಯಾಳಂ. ಹೀಗಾಗಿ ಈ ಜಿಲ್ಲೆಗಳಲ್ಲಿ ಕನ್ನಡದೊಡನೆ ಕೊಂಕಣಿ, ತುಳು, ಮಲೆಯಾಳಂ, ಕೊಡಗು ಭಾಷೆಗಳು ಬಳಕೆಗೊಳ್ಳುತ್ತಿರುವುದರಿಂದ ಈ ಪ್ರದೇಶವೆಲ್ಲ ಬಹುಭಾಷಾಪ್ರದೇಶವೆನಿಸುತ್ತದೆ. ಇದಲ್ಲದೆ ಒಂದೊಂದು ಜನಾಂಗ ದವರ ಕನ್ನಡವೂ ಒಂದೊಂದು ಪ್ರಭೇದ ಇಲ್ಲವೆ ಉಪಭಾಷೆ ಆಗುವುದು (ಹವ್ಯಕ, ಗೌಡ, ಬಂಟ, ಸೋಲಿಗ, ಮಾಪಿಳ್ಳೆ, ಕೊಂಕಣಿ ಇತ್ಯಾದಿ). ಆದುದರಿಂದ ಈ ಪ್ರದೇಶದ ಪ್ರಭೇದಗಳನ್ನು ಹೆಚ್ಚು ವ್ಯವಸ್ಥಿತವಾಗಿ ಅಭ್ಯಸಿಸುವ ಆವಶ್ಯಕತೆ ಇದೆ.

೪.೫.೫ ತಮಿಳು ಪ್ರಭಾವಿತ ಪ್ರಭೇದ :

ಮೈಸೂರು ಜಿಲ್ಲೆಯ ಕೊಳ್ಳೆಗಾಲ, ಚಾಮರಾಜನಗರ, ಗುಂಡ್ಲುಪೇಟ ತಾಲೂಕುಗಳ ಗಡಿ ಪ್ರದೇಶವೆಲ್ಲ ತಮಿಳುನಾಡಿಗೆ ಹತ್ತಿಕೊಂಡಿರುವುದರಿಂದ ಈ ಭಾಗ ದಲ್ಲಿ ತಮಿಳಿನ ಪ್ರಭಾವ ಕಂಡುಬರುತ್ತದೆ. ನೀಲಗಿರಿಬೆಟ್ಟ, ಉದಕಮಂಡಲ, ವೀರ ರಾಜಪೇಟೆ (ಕೊಡಗು) ಪ್ರದೇಶದಲ್ಲೂ ತಮಿಳು ಪ್ರಭಾವವಿದೆ. ಈ ಪ್ರಭೇದದ ಪ್ರದೇಶವೆಲ್ಲ ಕೆಲಕಾಲ ತಮಿಳು ಅಧಿಕಾರಿಗಳ ಆಡಳಿತದಲ್ಲಿದ್ದುದರಿಂದಲೂ ಸಾಕಷ್ಟು ಕೆಲಸಗಾರರು ತಮಿಳುನಾಡಿನಿಂದ ಇಲ್ಲಿಗೆ ಬಂದು ನೆಲಸಿರುವುದರಿಂದಲೂ ತಮಿಳಿನ ಪ್ರಭಾವ ಸಹಜವಾಗಿದೆ. ನೀಲಗಿರಿ ಬೆಟ್ಟಗಳಲ್ಲಿ ವಾಸಿಸುವ ಕನ್ನಡಿಗರ ಭಾಷೆ ತಮಿಳಿನ ವಿಪರೀತ ಪ್ರಭಾವದಿಂದ ಕೂಡಿದೆ. ಇಲ್ಲಿಯ ಬಡಗರು ಮಾತನಾಡುವ ಕನ್ನಡ ಒಂದು ಉಪಭಾಷೆಯೇ ಆಗಿದೆ.

ಮೈಸೂರು ಜಿಲ್ಲೆಯ ಗಡಿ ತಾಲೂಕುಗಳಲ್ಲಿ ನಾಮಪದಗಳ ಅಂತ್ಯದಲ್ಲಿ ಬರುವ 'ಎ' ಕಾರವು 'ಅಯ್' ಎಂದು ಉಚ್ಚರಿಸಲ್ಪಡುವುದು ವಿಶೇಷ.

ಉದಾ : ಎಲೆ > ಎಲೈ, ಕಲೆ > ಕಲೈ, ಮನೆ > ಮನೈ.

ಇ > ಎ, ಉ > ಒ ಪರಿವರ್ತನೆಯಲ್ಲಿ ತಮಿಳನ್ನು ಅನುಸರಿಸುವುದು ಈ ಪ್ರಭೇದದ ಒಂದು ಗಮನಾರ್ಹ ಅಂಶ :

ಪಿರಿ > ಪೆರಿ, ಇದಿರು > ಎದಿರು, ತುರು > ತೊರು, ಕುದಿ > ಕೊದಿ, ತಮಿಳು, ತುಳು ಭಾಷೆಗಳಲ್ಲಿಯ ಸ್ವರವ್ಯವಸ್ಥೆಯನ್ನು ಕರಾವಳಿ, ಕೊಡಗು, ಮೈಸೂರು ಗಡಿಭಾಗಗಳಲ್ಲಿಯ ಪ್ರಭೇದಗಳಲ್ಲಿ ಕಾಣಬಹುದು. ಈ ಪ್ರಭೇದಗಳ ಮೇಲಿನ ತಮಿಳು ಪ್ರಭಾವದ ವಿವರವಾದ ಅಧ್ಯಯನ ಮಾಡುವ ಆವಶ್ಯಕತೆ ಇದೆ. ಕನ್ನಡ–ತಮಿಳು ಜನರ ಪರಸ್ಪರ ಸಂಪರ್ಕ, ವಿಶೇಷವಾಗಿ ಇತಿಹಾಸಕಾಲದಿಂದಲೂ ಕಡಿಮೆ. ಹೀಗಾಗಿ ತೆಲುಗಿ ನಂತೆ ತಮಿಳಿನ ಪ್ರಭಾವ ವ್ಯಾಪಕವಾಗಿ ಕನ್ನಡದ ಮೇಲೆ ಆಗಿಲ್ಲ.

ತಮಿಳು, ತೆಲುಗು, ಮಲೆಯಾಳಂ, ತುಳು, ಕೊಡಗು ಭಾಷೆಗಳು ಕನ್ನಡದ ಸಹೋದರ ಭಾಷೆಗಳೇ ಆಗಿರುವುದರಿಂದ ಅವುಗಳ ಪರಸ್ಪರ ಪ್ರಭಾವ ಬಹು ಬೇಗ ಹೊಂದಿಕೊಳ್ಳುತ್ತದೆ. ಈ ವಿಷಯದಲ್ಲಿ ನಾವು ಎರಡು ಸಂಗತಿಗಳನ್ನು ಲಕ್ಷಿಸ ಬೇಕಾಗುತ್ತದೆ :

೧. ಎರಡೂ ಭಾಷೆಗಳ ರಚನೆಯ ಸಾಮಿಪ್ಯ.

೨. ಅವುಗಳ ಸಂಪರ್ಕದ ಕಾಲದ ಗಡುವು.

ಇವುಗಳಲ್ಲದೆ, ಸಾಮಾಜಿಕ, ಸಾಂಸ್ಕೃತಿಕ ಮುಂತಾದ ಅನೇಕ ಅಂಶಗಳೂ ಪ್ರಭೇದ ಗಳನ್ನುಂಟುಮಾಡುವಲ್ಲಿ ವಹಿಸುವ ಪಾತ್ರವನ್ನೂ ಗಮನಿಸಬೇಕಾಗುತ್ತದೆ.

೫.೦ ಅನ್ಯಭಾಷಾ ಪ್ರಭಾವದಿಂದುಂಟಾದ ಪ್ರಭೇದಗಳಲ್ಲಿ ಒಂದೇ ಭಾಷೆಯ ಪ್ರಭಾವವಾದರೂ ಇರಬಹುದು ಅಥವಾ ಹಲವು ಭಾಷೆಗಳ ಪ್ರಭಾವವೂ ಏಕಕಾಲಕ್ಕೆ ಆಗಲೂಬಹುದು. ಆದರೆ ಎಲ್ಲ ಅನ್ಯಭಾಷೆಗಳ ಪ್ರಭಾವ ಒಂದೇ ಪ್ರಮಾಣದಲ್ಲಿರುವು ದಿಲ್ಲ. ಇದಕ್ಕೆ ಭೌಗೋಲಿಕ, ಸಾಮಾಜಿಕ, ರಾಜಕೀಯ ಮುಂತಾದ ಬೇರೆ ಕಾರಣ ಗಳೂ ಇರುತ್ತವೆ.

ಈ ವರೆಗೆ ಕನ್ನಡ ಭಾಷೆಯ ಪ್ರಾದೇಶಿಕಪ್ರಭೇದಗಳ ಪ್ರಮುಖ ನಿರ್ಮಾಣ ಕಾರಣಗಳನ್ನು ಸ್ಥೂಲವಾಗಿ ವಿವೇಚಿಸಲು ಪ್ರಯತ್ನಿಸಲಾಗಿದೆ. ಇಲ್ಲಿಯ ವಿಶದೀಕರಣ ಪರಿಪೂರ್ಣವಾಗಿದೆಯೆಂದು ನಾನು ಹೇಳಲಾರೆ. ಒಂದೊಂದೇ ಕಾರಣಗಳನ್ನು ಎದುರಿಗಿಟ್ಟುಕೊಂಡು ಹೆಚ್ಚು ವ್ಯವಸ್ಥಿತವಾದ, ವಿವರವಾದ ಸಮಗ್ರ ಕನ್ನಡ ಭಾಷೆಯ ಪ್ರಾದೇಶಿಕಪ್ರಭೇದಗಳ ಅಧ್ಯಯನ, ಸಂಶೋಧನ ನಡೆಯಬೇಕಾಗಿದೆ.

* ಲೇಖನವನ್ನು ಸಿದ್ಧಪಡಿಸುವಲ್ಲಿ ಅನೇಕ ಮೌಲಿಕ ಸಲಹೆ–ಸೂಚನೆಗಳನ್ನಿತ್ತುದಲ್ಲದೆ ಈ ಸಂಚಿಕೆಗೆ ಬಂದ ಬಹಳಷ್ಟು ಲೇಖನಗಳನ್ನು ಮುಂಚಿತವಾಗಿಯೇ ಓದಿ ಬಳಸಿಕೊಳ್ಳುವ ಸದವಕಾಶ ವನ್ನಿತ್ತ ನನ್ನ ಗುರುದ್ವಯರಾದ ಡಾ. ಎಂ. ಎಂ. ಕಲಬುರ್ಗಿ ಹಾಗೂ ಡಾ. ಜೆ. ಎಸ್. ಕುಳ್ಳಿ ಅವರಿಗೆ, ಹಲವಂದದಲ್ಲಿ ನೆರವಾದ ಮಿತ್ರದ್ವಯರಾದ ಶ್ರೀ ಎ. ಮುರಿಗೆಪ್ಪ ಹಾಗೂ ಶ್ರೀ ಬಿ. ಆರ್. ಹಿರೇಮಠ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಕನ್ನಡ ಭಾಷಾಪ್ರಭೇದಗಳ ಮೇಲೆ ಅನ್ಯಭಾಷಾ ಪ್ರಭಾವ

ಪ್ರದೇಶ (ಜಿಲ್ಲಾವಾರು)	ಉರ್ದು	ಮರಾಠಿ	ತೆಲುಗು	ತಮಿಳು	ಮಲೆ-ಯಾಳಂ	ತುಳು	ಕೊಂಕಣಿ
ಬೀದರ	+ + +	+ +	+				
ಕಲಬುರ್ಗಿ	+ + +	+ +	+				
ವಿಜಾಪುರ	+ +	+ +					
ಬೆಳಗಾವಿ		+ + +					+
ರಾಯಚೂರು	+ +	+	+				
ಬಳ್ಳಾರಿ	+		+ +				
ಚಿತ್ರದುರ್ಗ			+ +				
ತುಮಕೂರು			+ +				
ಕೋಲಾರ			+ + +	+ +			
ಬೆಂಗಳೂರು			+ +	+			
ಮೈಸೂರು	+ +		+	+	+		
ಕೊಡಗು	+			+	+ +	+	
ದ. ಕನ್ನಡ					+ + +	+ +	+
ಉ. ಕನ್ನಡ		+ +			+	+ + +	+ +
ಶಿವಮೊಗ್ಗ						+ +	+
ಮಂಡ್ಯ	+		+				
ಹಾಸನ					+	+	
ಚಿಕ್ಕಮಗಳೂರು						+	
ಧಾರವಾಡ		+					

+ + + ಹೆಚ್ಚು. + + ಸಾಧಾರಣ. + ಕಡಿಮೆ.

ಗ್ರಂಥ/ಲೇಖನ ಋಣ

Weinreich Uriel : *Languages in Contact findings & Problems*

Longacker : *Language & its Structure*

ಕುಳ್ಳಿ, ಜಿ. ಎಸ್. : ಐತಿಹಾಸಿಕ ಭಾಷಾವಿಜ್ಞಾನ

ಶಂಕರಭಟ್ ಡಿ. ಎನ್. : ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ

ನಾಗರಾಜಯ್ಯ ಹಂಪ : ದ್ರಾವಿಡಭಾಷಾ ವಿಜ್ಞಾನ

ಧಾರವಾಡಕರ ಆರ್. ವಾಯ್. : ಕನ್ನಡ ಭಾಷಾಶಾಸ್ತ್ರ

Upadhyaya U.P. : *Effects of Bilingualism on Bidar Kannada*— Indian Linguistics Vol. 32. No. 1

Fischer J.C. : *Social Influence in the Choice of a linguistic varient*— Word Vol. 14

ಚಿದಾನಂದಮೂರ್ತಿ ಎಂ. : ಹಳೆಯ ಮೈಸೂರಿನ ಕನ್ನಡ— ಸುವರ್ಣ ಸಂಪುಟ

ಮರಿಯಪ್ಪ ಭಟ್ ಎಂ. : ದಕ್ಷಿಣ ಕನ್ನಡದ ಕನ್ನಡ— ಸುವರ್ಣ ಸಂಪುಟ

ಮಿರ್ಜಿ ಅಣ್ಣಾರಾಯ : ಮಹಾರಾಷ್ಟ್ರ ಗಡಿನಾಡಿನ ಕನ್ನಡ— ಸುವರ್ಣ ಸಂಪುಟ

ಭೀಮಸೇನರಾವ ಡಿ. ಕೆ. : ಗುಲ್ಬರ್ಗ ರಾಯಚೂರುಗಳ ಕನ್ನಡ— ಸುವರ್ಣ ಸಂಪುಟ

ಸಮತ್ತಿಮಠ ಎಸ್.ಡಿ. : ಹೈದ್ರಾಬಾದ ಕರ್ನಾಟಕದ ಕನ್ನಡ ಭಾಷೆಯಲ್ಲಿ ಉರ್ದು ಬಳಕೆ— ಗಮಿದೀಪ್ತಿ (ಸ್ಮರಣ ಸಂಚಿಕೆ)

ಗುಂಡಪ್ಪ ವೀ. ರ. : ಕನ್ನಡಕ್ಕೆ ತಮಿಳಿನ ಎರವಲು ಮತ್ತು ಪ್ರಭಾವ— ಪ್ರಬುದ್ಧ ಕರ್ನಾಟಕ ಸಂ. ೬೦–೪

ಬ್ರೈಟ ವಿಲ್ಯಂ : ಮೈಸೂರು ಕನ್ನಡದ ಸಾಮಾಜಿಕ ಭಾಷಾಪ್ರಭೇದಗಳು ಅನು— ಬಿ.ವಿ. ವೀರಭದ್ರಪ್ಪ –ಪ್ರಬುದ್ಧ ಕರ್ನಾಟಕ ಸಂ. ೫೦–೩

ವಾಯಕರ ಎಸ್.ಬಿ. : ಕರಾವಳಿ ಕನ್ನಡ ಬಳಕೆಯ ಶಬ್ದಗಳು— ಕರ್ನಾಟಕ ಭಾರತಿ ಸಂ. ೧–೧

ಕರ್ನಾಟಕ ಸರಕಾರದ ಗೆಜೆಟಿಯರುಗಳು— (ಜಿಲ್ಲಾವಾರು)

ಕನ್ನಡ ಭಾಷಾಪ್ರಭೇದಗಳ ಅಧ್ಯಯನ: ಒಂದು ಸಮೀಕ್ಷೆ

• ಮಹಿಮ

ಪ್ರಪಂಚದ ಅನೇಕ ಕಡೆಗಳಲ್ಲಿ ಇಂದು ತೀವ್ರಗತಿಯಿಂದ ನಡೆದ ಮತ್ತು ನಡೆಯುತ್ತಿರುವ ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷಾ ಅಧ್ಯಯನವನ್ನು ಗಮನಿಸುತ್ತಿರುವ ನಾವು ಕನ್ನಡದಲ್ಲಿ ನಡೆದಿರುವ ಕೆಲಸಗಳನ್ನು ವಿವರಿಸುವುದೇ ಈ ಲೇಖನದ ಉದ್ದೇಶವಾಗಿದೆ. ಪ್ರಾದೇಶಿಕ ಪ್ರಭೇದವನ್ನು ಗುರುತಿಸುವ ಭಾಷಾವಿಜ್ಞಾನಿ ಸಾಮಾಜಿಕ ಪ್ರಭೇದವನ್ನೂ ಗುರುತಿಸಬೇಕಾಗುತ್ತದೆ. ಅವೆರಡು ಅಧ್ಯಯನಗಳೂ ಒಂದಕ್ಕೊಂದು ಪೂರಕವಾದುವು. ಕನ್ನಡದ ಪ್ರಾದೇಶಿಕ ಪ್ರಭೇದದ ಅಧ್ಯಯನದೊಂದಿಗೆ ಇಲ್ಲಿ ನಡೆದಿರುವ ಸಾಮಾಜಿಕ ಪ್ರಭೇದದ ಅಧ್ಯಯನವನ್ನೂ ಸೀಮಿತ ಕಕ್ಷೆಯಲ್ಲಿ ಗುರುತಿಸುವ ಯತ್ನ ಮಾಡಲಾಗಿದೆ.

ಕನ್ನಡದಲ್ಲಿ ವಿವಿಧ ಪ್ರಾದೇಶಿಕ ಪ್ರಭೇದಗಳು ಹಿಂದಿನಿಂದಲೂ ಇದ್ದರೂ ಇದರ ಬಗ್ಗೆ ಉಲ್ಲೇಖಗಳಾಗಲೀ, ಅಧ್ಯಯನಗಳಾಗಲೀ ಕಂಡು ಬರುತ್ತಿಲ್ಲ. ೯ನೆಯ ಶತಮಾನದ 'ಕವಿರಾಜಮಾರ್ಗ' ಎಂಬ ಗ್ರಂಥದಲ್ಲಿಯ "ಪಾಸುಗಿಯುಂ ಮಱಿಯಲಾಱದೆ । ದೇಸಿಯುಂಗುಂ ದೇಸಿ ಬೇಱೆವೇಱಪ್ಪುದಱಿಂ", "ದಕ್ಷಿಣಮಾರ್ಗ–ಉತ್ತರಮಾರ್ಗ" ಮತ್ತು "ಕನ್ನಡಂಗಳ್" ಎಂಬ ಹೇಳಿಕೆಗಳನ್ನು ಅನೇಕ ವಿದ್ವಾಂಸರು ಗಮನಿಸಿದ್ದಾರೆ. ಇವು ಕನ್ನಡ ಭಾಷೆಯ "ಪ್ರಾಂತಭೇದ"ಗಳನ್ನು ಸೂಚಿಸುತ್ತವೆ ಎಂದು ಕೆಲವರು, ಶಾಬ್ದಿಕ ವಿಕಲ್ಪ ಮತ್ತು ಕಾವ್ಯಶೈಲಿಗಳನ್ನು ಸೂಚಿಸುತ್ತವೆ ಎಂದು ಕೆಲವರು ವಾದಿಸುತ್ತಾರೆ.[೧] ಒಟ್ಟಿನಲ್ಲಿ ಕವಿರಾಜಮಾರ್ಗಕಾರನ ಈ ಹೇಳಿಕೆಯನ್ನು ಬಿಟ್ಟರೆ ಬೇರೆ ಎಲ್ಲಿಯೂ ಉಪಭಾಷೆಗಳ ಬಗ್ಗೆ ಪ್ರಸ್ತಾಪ ಬರುವುದಿಲ್ಲ.

---

೧ ಪಳಗನ್ನಡ, ದಕ್ಷಿಣಮಾರ್ಗ, ಉತ್ತರಮಾರ್ಗಗಳು ಉಪಭಾಷಾ ಪ್ರಭೇದ ಸೂಚಿಗಳೆಂದು ಆರ್. ರಘುನಾಥರಾಯ, ಡಾ. ಆರ್. ನರಸಿಂಹಾಚಾರ್ ಮೊದಲುಗೊಂಡು ಡಾ. ಜಿ. ಎಸ್. ಕುಳ್ಳಿ ಮೊದಲಾದವರು ಹೇಳುತ್ತಾರೆ. ಆದರೆ ಇವು ಕಾವ್ಯಶೈಲಿಯ ಪ್ರಭೇದ ಮತ್ತು ಶಾಬ್ದಿಕ ವಿಕಲ್ಪ ಸೂಚಿಗಳೆಂದು ಶ್ರೀ ಕಪಟಾಳ ಕೃಷ್ಣರಾಯ, ಡಾ. ಎಂ. ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ.

ವಾದವಿವಾದಗಳೇನೇ ಇರಲಿ, ಕವಿರಾಜಮಾರ್ಗಕಾರನ ಈ ಹೇಳಿಕೆಯನ್ನು ಪರಿಗಣಿಸ ಬೇಕಾಗುತ್ತದೆ.

ಜಾರ್ಜ ಅಬ್ರಾಹಿಮ್ ಗ್ರಿಯರ್ಸ್‌ನ್‌ರ ಭಾರತೀಯ ಭಾಷೆಗಳ ಪರಿವೀಕ್ಷಣೆ :

ಕವಿರಾಜ ಮಾರ್ಗಕಾರನ ಉಲ್ಲೇಖದ ನಂತರ ಕನ್ನಡ ಉಪಭಾಷೆಗಳ ಬಗ್ಗೆ ವಿವರ ದೊರೆಯುವುದು ಗ್ರಿಯರ್ಸ್ನನ್ನರ Linguistic survey of India ದಲ್ಲಿ. ೧೯–೨೦ನೆಯ ಶತಮಾನದ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಉಪಭಾಷಾ ಅಧ್ಯಯನ ಪ್ರಾರಂಭವಾಯಿತು. ಭಾರತ ಸರ್ಕಾರದಿಂದ ನೇಮಿಸಲ್ಪಟ್ಟ ಜಾರ್ಜ ಅಬ್ರಾಹಿಮ್ ಗ್ರಿಯರ್ಸ್‌ನ್‌ರವರ ಈ ಬೃಹದ್ಗ್ರಂಥ ಭಾರತೀಯ ಭಾಷೆಗಳ ಅಧ್ಯಯನದ ಮೈಲಿಗಲ್ಲು. ಏಷ್ಯಾ ಖಂಡದಲ್ಲಿಯೇ ಅಪೂರ್ವ ಕೃತಿ ಎನ್ನುವುದಕ್ಕೆ Charles A. Ferguson ಮತ್ತು John J. Gumperz ರವರ ಈ ಮಾತುಗಳು ಸಾಕು.

In South Asia surprisingly enough, there has been very little work of this kind. In the monumental Linguistic Survey of India Grierson offered sample texts and breif descriptions of many dialects...... Almost all the work in south Asian dialectology published .... and Grierson's volume remains by far the most important source of data for the social scientists concerned with the distribution and dialect diversity of south Asian languages.[1]

ದಕ್ಷಿಣ ಭಾರತದ ಭಾಷೆಗಳ ಬಗ್ಗೆ LSI ಮಲತಾಯಿ ಧೋರಣೆ ತೋರಿದೆ ಎಂದರೂ ಕೆಲವು ಉಪಭಾಷೆಗಳನ್ನಾದರೂ ಗಮನಿಸಿದೆ ಎಂಬುದನ್ನು ಮರೆಯುವಂತಿಲ್ಲ. ಕನ್ನಡದ ಭಾಷೆ ಮತ್ತು ಉಪಭಾಷೆಗಳನ್ನು ವಿವರಿಸಲು ತಮಗಿರುವ ಅಸಹಾಯಕತೆಯನ್ನು ನುಡಿದಿದ್ದಾರೆ.

The dialect differences within Kanarese territory are to judge from the materials available, comparatively small.[2]

ಕನ್ನಡ ಭಾಷೆಯ ಬಗ್ಗೆ ಬರೆಯುತ್ತಾ ನಿಲಗಿರಿ ಜನಾಂಗದ **ಬಡಗ** ಭಾಷೆಯನ್ನು ಕನ್ನಡದ ಉಪಭಾಷೆಯೆಂದು ಪರಿಗಣಿಸಿದ್ದಾರೆ.

1 IJAL. Vol. 26.

2 *Linguistic Survey of India*, Vol. IV. Page No. 363.

The most important dialect is Badaga, spoken in Nilgiris by the so called Baḍagas or Burghers. It is more ancient from the ordinary Kanarese dialect of the Nilgiri Hills is that spoken by the Kurumbas.

ಬಡಗಭಾಷೆಯನ್ನು ಉಪಭಾಷೆಯೆಂದು ಪರಿಗಣಿಸುವುದರಲ್ಲಿ ಭಿನ್ನಾಭಿಪ್ರಾಯಗಳಿವೆ. 'ಕುರುಂಬ' ಭಾಷೆಯೂ ಕನ್ನಡದ ಉಪಭಾಷೆಯೆಂದು ಪರಿಗಣಿಸಿದ್ದಾರೆ. ಬೇರೆಯ ಕನ್ನಡದ ಉಚ್ಚಾರಣ ರೀತಿಗೂ ಬಿಜಾಪುರದ ಕನ್ನಡ ರೀತಿಗೂ ಇರುವ ವ್ಯತ್ಯಾಸವನ್ನು ಗಮನಿಸಿ ಗ್ರಿಯರ್ಸನ್ ಕೆಳಗಿನ ಮಾತುಗಳನ್ನಾಡುತ್ತಾರೆ.

The kanarese spoken in Bijapur is locally known as Bijapuri. It does not, however differ from the (Kannada) language to such an extent that it deserves to be considered as seperate dialect. The difference is chiefly one of pronun ciation.

ಕನ್ನಡದ ಸಮಗ್ರ ಅಧ್ಯಯನ ಮಾಡದೆ ಬೇರೆ ಬೇರೆ ಉಪಭಾಷೆಗಳನ್ನು ನೋಡದೆ ಗ್ರಿಯರ್ಸನ್ ಮುಂದೆ ಸಾಗಿದ್ದಾರೆ.

ಪೂನಾ ಡೆಕ್ಕನ್ ಕಾಲೇಜು ಮತ್ತು ಕನ್ನಡ ಉಪಭಾಷೆಗಳು :

Linguistic Survey of India ದಲ್ಲಿ ಕನ್ನಡದ ಬಗ್ಗೆ ಜಾರ್ಜ ಗ್ರಿಯರ್ಸನ್‌ರು ಏನು ಕೆಲಸ ಮಾಡಬೇಕಿತ್ತೋ ಆ ಬಹುಪಾಲು ಕೆಲಸ ಮಾಡಿದ ಕೀರ್ತಿ ಡೆಕ್ಕನ್ ಕಾಲೇಜಿನ ವಿದ್ವಾಂಸರಿಗೆ ಸಲ್ಲುತ್ತದೆ. ಡೆಕ್ಕನ್ ಕಾಲೇಜಿನಲ್ಲಿ ಮೇ ೧೯೫೩ ರಂದು ಸೇರಿದ ಶಿಕ್ಷಣ ಶಾಸ್ತ್ರಜ್ಞರು ಮತ್ತು ಭಾಷಾವಿಜ್ಞಾನಿಗಳ ಸಮ್ಮೇಳನದಲ್ಲಿ ಹೊಸದಾಗಿ ಭಾರತೀಯ ಭಾಷೆಗಳ ಪರಿವೀಕ್ಷಣೆ ಆದಷ್ಟು ಬೇಗ ನಡೆಸಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು. ೧೯೫೮ ರಲ್ಲಿ ನಡೆದ ವಿಶ್ವವಿದ್ಯಾಲಯದ ಉಪಕುಲಪತಿಗಳ ಸಮ್ಮೇಳನದ ಶಿಫಾರಸನ್ನು ವಿಶ್ವವಿದ್ಯಾಲಯದ ಧನಸಹಾಯ ಆಯೋಗ ಒಪ್ಪಿಕೊಂಡಿತು. ೧೯೬೪ ರಲ್ಲಿ ಕೇಂದ್ರ ಸರ್ಕಾರದ ವಿದ್ಯಾಶಾಖೆಯು ದಕ್ಷಿಣ ಭಾರತದ ಭಾಷೆಗಳ ಪರಿವೀಕ್ಷಣೆ ನಡೆಸಲು ಒಪ್ಪಿಕೊಂಡು ಮೊದಲ ಹಂತವಾಗಿ ೧,೦೦,೦೦೦ ರೂ. ಗಳನ್ನು ಕೊಟ್ಟಿತು. ಡಾ॥ ಡಿ. ಎನ್. ಎಸ್. ಭಟ್ಟ ಮತ್ತು ಡಾ॥ ಹೆಚ್. ಎಸ್. ಬಿಳಿಗಿರಿಯವರ ನೇತೃತ್ವದಲ್ಲಿ ಕನ್ನಡ ಉಪಭಾಷೆಗಳ

ಪರಿವೀಕ್ಷಣಾ ಕಾರ್ಯ ಪೂನಾದಿಂದ ಪ್ರಾರಂಭವಾಯಿತು. ಮುಂತ್ರಾಗಳ ಬಳಿಕ ಮತ್ತು ಪರಿಣತ ಭಾಷಾವಿಜ್ಞಾನಿಗಳಿಂದ ಕೈಕೊಂಡ ಈ ಕಾರ್ಯ ಉಪಯುಕ್ತವಾಯಿತು. ಅವರ ಪರಿಶ್ರಮದಿಂದ ಕೆಲವು ಪುಸ್ತಕಗಳು ಪ್ರಕಟವಾದವು.

ಪ್ರಾದೇಶಿಕ ಉಪಭಾಷೆಗಳು :

ನಂಜನಗೂಡು ಕನ್ನಡ (ಒಕ್ಕಲಿಗರ ಉಪಭಾಷೆ) ಯು.ಪಿ.ಉಪಾಧ್ಯಾಯ
ಗುಲ್ಬರ್ಗ ಕನ್ನಡ (ಬ್ರಾಹ್ಮಣರ ..) ಆರ್. ಮಹಾದೇವನ್
ತಿಪಟೂರು ಕನ್ನಡ (ಲಿಂಗಾಯತರ ..) ಎ. ಎಸ್. ಆಚಾರ್ಯ
ಕೂರ್ಗ್ ಕನ್ನಡ (ಜೇನುಕುರುಬ ..) ಯು.ಪಿ.ಉಪಾಧ್ಯಾಯ
ಬಿಳೂರ ಕನ್ನಡ (ಶಿವಳ್ಳಿ ..) ಎ. ಎಸ್. ಆಚಾರ್ಯ
ಬಳ್ಳಾರಿ ಕನ್ನಡ (ಕುರುಬರ ..) ಯು.ಪಿ.ಉಪಾಧ್ಯಾಯ (ಅ. ಪ್ರ.)
ಗುಲ್ಬರ್ಗ ಕನ್ನಡ (ಕಬ್ಬಿಗರ ..) ಯು.ಪಿ.ಉಪಾಧ್ಯಾಯ (..)
ನಂಜನಗೂಡು ಕನ್ನಡ (ಬ್ರಾಹ್ಮಣರ ..) ಆರ್. ಮಹಾದೇವನ್ (..)
ಕೊಯಂಬತ್ತೂರು ಕನ್ನಡ (ಹಾಲುಕುರುಬ ..) ಆರ್. ಮಹಾದೇವನ್ (..)
ಕೋಟ ಕನ್ನಡ ಎ. ಎಸ್. ಆಚಾರ್ಯ (..)
ಮಧುರೈ ಕನ್ನಡ (..)
ಬಿಜಾಪುರ ಕನ್ನಡ (..)
ಶಿವಮೊಗ್ಗ ಕನ್ನಡ (..)

ಸಾಮಾಜಿಕ ಉಪಭಾಷೆಗಳು :

ಹಾಲಕ್ಕಿ ಕನ್ನಡ (ಹಾಲಕ್ಕಿ) ಎ. ಎಸ್. ಆಚಾರ್ಯ
ಹವ್ಯಕ ಕನ್ನಡ (ದ. ಕನ್ನಡ) ಡಿ. ಎನ್. ಎಸ್. ಭಟ್ಟ

ಇವುಗಳನ್ನು ಗಮನಿಸಿದ ಡಾ. ಕೆ. ಕುಶಾಲಪ್ಪಗೌಡರು— "ಈ ಎಲ್ಲ ವಿವರಣಾತ್ಮಕ ವ್ಯಾಕರಣಗಳಿಂದ ಕನ್ನಡದ ವ್ಯಾಕರಣ ರಚನೆಯು ಸಂಪೂರ್ಣ ಮಾಹಿತಿ ದೊರೆಯುವಂತಾಗಿದೆ. ಅದೂ ಉಪಭಾಷೆಗಳ ಧ್ವನಿಮಾ, ರೂಪಿಮಾಗಳ ವಿವರಣೆಗಳನ್ನು, ಪದಕೋಶಗಳನ್ನು, ಮಾದರಿ ವಾಕ್ಯಗಳನ್ನು ಕೊಟ್ಟಿರುವ ಈ ಪುಸ್ತಕಗಳು ಅಮೇರಿಕನ್ ಸ್ಟ್ರಕ್ಚರಲಿಸಮಿನ ಇವು ಹಲಕೆಲವು ಲೋಪ ದೋಷಗಳಿಂದ ಕೂಡಿದ್ದರೂ ದಾವಿಡ ಕನ್ನಡದ ಸಮಗ್ರ ಅಧ್ಯಯನಕ್ಕೆ ಮೂಲ ಸಾಮಗ್ರಿಗಳೆಲ್ಲವನ್ನೂ (Basic-

information) ಒದಗಿಸುವವನಿಂದ ಬೇರೆ ಇರಬೇಕಾಗಿಲ್ಲ."[1] ಎಂದು ಮಂಡ್ಯದಲ್ಲಿ ನಡೆದ ೪೮ ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹೇಳಿದ್ದಾರೆ.

ಇವು ಒಬ್ಬ ವ್ಯಕ್ತಿಯಿಂದ (informant) ಸಂಗ್ರಹಿಸಿದ ಭಾಷಾ ಸಾಮಗ್ರಿಯಿಂದ ರಚಿತವಾದ ವ್ಯಾಕರಣಗಳು. ಇವುಗಳಿಗೆ ಆಯಾ ಪ್ರದೇಶದ ಉಪಭಾಷೆಗಳೆಂದು ಕರೆಯುವುದು ಸರಿಯಲ್ಲವಾದರೂ ಆ ಪ್ರದೇಶದ ಉಪಭಾಷೆಯ ಬಗ್ಗೆ ಕೆಲವು ಮಾಹಿತಿ ನೀಡುವುದರಿಂದ ಇವುಗಳ ಉಪಯೋಗವನ್ನು ಪ್ರಾದೇಶಿಕ ಉಪಭಾಷಾ ಅಧ್ಯಯನದಲ್ಲಿ ಅಲ್ಲಗಳೆಯುವಂತಿಲ್ಲ. ಮತ್ತೊಂದು ಪ್ರಮುಖವಾದ ಅಂಶವನ್ನು ಇಲ್ಲಿ ಗಮನಿಸಬೇಕಾದುದು ಅಗತ್ಯ. ಶಿವಮೊಗ್ಗದ ಉಪಭಾಷೆ ಎಂದಾಕ್ಷಣ ಅದರೊಳಗೆ ಅಡಗಿರುವ ಬೇರೆ ಸಾಮಾಜಿಕ ವರ್ಗಗಳ ಉಪಭಾಷೆ? ಎಂದು ಗುರುತಿಸಬೇಕಾಗುತ್ತದೆ. ಅನೇಕ ವರ್ಗಗಳಲ್ಲಿನ ಒಂದು ಸಾಮಾಜಿಕ ವರ್ಗದ ಭಾಷೆಯೇ ಆ ಪ್ರದೇಶದ ಉಪಭಾಷೆಯಾಗುತ್ತದೆ ಎಂದು ತಿಳಿಯುವುದು ಸರಿಯಾಗಲಾರದು. ಡೆಕ್ಕನ್ ಕಾಲೇಜಿನಿಂದ ಪ್ರಕಟಗೊಂಡ ಈ ವರ್ಣನಾತ್ಮಕ ವ್ಯಾಕರಣಗಳು ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳನ್ನು ಸೂಚಿಸುತ್ತವೆ. ಪ್ರಾದೇಶಿಕ ಉಪಭಾಷೆಗೆ ಉದಾಹರಣೆ: ಬಿಜಾಪುರದ (ಲಿಂಗಾಯತ) ಕನ್ನಡ. ನಂಜನಗೂಡಿನ (ಒಕ್ಕಲಿಗರ) ಕನ್ನಡ. ಸಾಮಾಜಿಕ ಉಪಭಾಷೆಗಳಿಗೆ ಉದಾಹರಣೆ: ಹವ್ಯಕ (ದಕ್ಷಿಣ ಕನ್ನಡ). ಹಾಲಕ್ಕಿ ಕನ್ನಡಗಳು. ಗ್ರಿಯರ್ಸನ್ನರ ಕಾಲಾನಂತರ ನಡೆದ ಈ ಅಧ್ಯಯನ ಮಹತ್ವಪೂರ್ಣವಾದದ್ದು.

ಪತ್ರಿಕೆಗಳು
ಮತ್ತು ಪ್ರಾದೇಶಿಕ ಪ್ರಭೇದದ ಲೇಖನಗಳು :

ಪ್ರಬುದ್ಧ ಕರ್ನಾಟಕ. ಕನ್ನಡ ನುಡಿ. ಸಾಹಿತ್ಯ ಪರಿಷತ್ ಪತ್ರಿಕೆ. ಕರ್ನಾಟಕ ಭಾರತಿ. Indian Linguistics, Journal of Karnatak University, Kannada Studies, International Journal of Dravidian Linguistics International Journal of American Linguistics. ಮುಂತಾದವುಗಳಲ್ಲಿ ಲೇಖನಗಳು ಪ್ರಕಟಗೊಂಡಿವೆ.

ಟಿ. ಎಸ್. ಶ್ರೀಧರರವರ 'ಕುಂದಗನ್ನಡ'[2] ಪ್ರೊ. ಮರಿಯಪ್ಪಭಟ್ಟರ 'ದಕ್ಷಿಣ ಕನ್ನಡದ ಕನ್ನಡ' ಮತ್ತು ನವಲಗುಂದರವರ 'ರಾಯಚೂರು ಕನ್ನಡ'[3] ಮುಂತಾದ

---

೧ ಕನ್ನಡ ನುಡಿ. ಸಂಪುಟ ೩೭. ಸಂಚಿಕೆ ೨೨. ಪುಟ ೧೧. ಮಾರ್ಚ್ ೧೯೭೪.

೨ ಕುಂದಗನ್ನಡ - ಟಿ. ಎಸ್. ಶ್ರೀಧರ ಕ. ಸಾ. ಪರಿಷತ್ ಪತ್ರಿಕೆ : ೪೧. ೧–೨ ಪು ೫೯–೬೧
೪೨. ೨ ಪುಟ. ೫೯–೬೨
೪೩. ೧ ಪುಟ. ೨೨–೨೮

೩ ರಾಯಚೂರು ಕನ್ನಡ – ನವಲಗುಂದ ಪ್ರ. ಕರ್ನಾಟಕ ೧೭–೪ ಪು. ೩೬–೪೭

"ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ವಾಸಿಸುವ ಪಂಗಡಗಳ ಮನೆಮಾತು",[೧] ಚಿದಾನಂದ ಮೂರ್ತಿಯವರ– ಗೋದಾವರಿ ತೀರದ ಕನ್ನಡ,[೨] ಹಳೇ ಮೈಸೂರಿನ ಕನ್ನಡ. ವಿಲಿಯಂ ಬ್ರೈಟ್‌ರವರ Standard Colloquial Kannada (ಹಳೇ ಮೈಸೂರಿನ ಕನ್ನಡ), ಡಿ. ಕೆ. ಭೀಮಸೇನರಾಯರ 'ಗುಲ್ಬರ್ಗ ರಾಯಚೂರುಗಳ ಕನ್ನಡ' ಡಾ. ಆರ್. ಸಿ. ಹಿರೇಮಠರ 'ಧಾರವಾಡ ವಿಜಾಪುರಗಳ ಕನ್ನಡ' ಮಿರ್ಜಿ ಅಣ್ಣಾರಾಯರ 'ಮಹರಾಷ್ಟ್ರ ಗಡಿನಾಡು ಕನ್ನಡ' ಎಂ. ಬಿ. ಭೋಯಿಯವರ 'ಬೆಳಗಾವಿ ಜಿಲ್ಲೆಯ ಉಪಭಾಷೆಗಳು'[೩] ಮುಂತಾದವು.

ಡಿಶೆಂಬರ್ ೧೯೬೬ ರಲ್ಲಿ ನಡೆದ
ಮೈಸೂರಿನ ಪ್ರಾದೇಶಿಕ ಭಾಷಾಸ್ವರೂಪದ ಗೋಷ್ಠಿ :

ಮೈಸೂರು ವಿಶ್ವವಿದ್ಯಾಲಯದ ರಜತಮಹೋತ್ಸವ ಸಮಾರಂಭದಲ್ಲಿ ನಡೆದ ಪ್ರಾದೇಶಿಕ ಭಾಷಾಸ್ವರೂಪದ ಗೋಷ್ಠಿ ಉಪಯುಕ್ತವಾದುದು. ಡಿಶೆಂಬರ್ ೧೦, ೧೯೬೬ರಂದು ಪ್ರೊ. ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆದ "ಇಂದಿನ ಕನ್ನಡ ಪ್ರಾದೇಶಿಕ ಸ್ವರೂಪಗಳು" ಎನ್ನುವ ಗೋಷ್ಠಿಯಲ್ಲಿ ಸಾದರಪಡಿಸಿದ ಪ್ರಬಂಧಗಳು ಕೆಳಗಿನಂತಿವೆ :

೧. [೪]ಕನ್ನಡ ಭಾಷೆ ಇಂದು– ದೇ. ಜವರೇಗೌಡ
೨. ಹಳೇಮೈಸೂರಿನ ಕನ್ನಡ– ಡಾ. ಎಂ. ಚಿದಾನಂದಮೂರ್ತಿ
೩. ಧಾರವಾಡ ವಿಜಾಪುರಗಳ ಕನ್ನಡ– ಡಾ. ಆರ್. ಸಿ. ಹಿರೆಮಠ
೪. ದಕ್ಷಿಣ ಕನ್ನಡದ ಕನ್ನಡ– ಎಂ. ಮರಿಯಪ್ಪ ಭಟ್ಟ
೫. ಗುಲ್ಬರ್ಗ ರಾಯಚೂರಗಳ ಕನ್ನಡ– ಡಿ. ಕೆ. ಭೀಮಸೇನರಾವ್
೬. ಮಹಾರಾಷ್ಟ್ರ ಗಡಿನಾಡ ಕನ್ನಡ– ಮಿರ್ಜಿ ಅಣ್ಣಾರಾಯ
೭. ಕನ್ನಡದ ಈಗಿನ ಪ್ರಾದೇಶಿಕ ಪ್ರಭೇದಗಳು– ಕೆ. ಕುಶಾಲಪ್ಪಗೌಡ

---

೧ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ವಾಸಿಸುವ ಪಂಗಡಗಳ ಮನೆಮಾತು– ಉಮರ್ಜಿ (ವರದರಾಜ) ಕ. ಸಾ. ಪರಿಷತ್ ಪತ್ರಿಕೆ. ೩೮. ೧–೨, ಪುಟ ೩೮–೪೮

೨ ಗೋದಾವರಿ ತೀರದ ಕನ್ನಡ – ಡಾ. ಎಂ. ಚಿದಾನಂದ ಮೂರ್ತಿ, ಸಂಶೋಧನತರಂಗ ೨ ಪುಟ. ೩೦–೩೩.

೩ ಬೆಳಗಾವಿ ಜಿಲ್ಲೆಯ ಉಪಭಾಷೆ ಎಂ. ಬಿ. ಭೋಯಿ, ಕರ್ನಾಟಕ ಭಾರತಿ ೬, ೪, ಪು.೫೮–೮೪

೪ ಸುವರ್ಣ ಸಂಚಯ, ಪುಟ ೨೪೩ – ೩೪೯.
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ೧೯೬೭.

ದೇ. ಜವರೇಗೌಡ ಅವರು ಕನ್ನಡ ಭಾಷೆಯ ಇತಿಹಾಸ ಕುರಿತು ಮಾತನಾಡುತ್ತ ಉಪಭಾಷೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅವರ ಲೇಖನವು ಒಬ್ಬ ಸಾಹಿತಿಯ ಮಾತುಗಳನ್ನು ಪ್ರತಿನಿಧಿಸುತ್ತವೇ ವಿನಃ ಒಬ್ಬ ಭಾಷಾವಿಜ್ಞಾನಿಯ ಭಾಷಾಧ್ಯಾಯದ ದೃಷ್ಟಿಯನ್ನಲ್ಲ.

ಡಾ. ಎಂ. ಚಿದಾನಂದ ಮೂರ್ತಿಯವರು ಹಳೇಮೈಸೂರಿನ ಕನ್ನಡದ ಬಗ್ಗೆ ಬರೆಯುತ್ತಾ "ಹಳೇಮೈಸೂರು ಪ್ರದೇಶದಲ್ಲಿ ಕಾಣಿಸಿಕೊಳ್ಳುವ ಉಪಭಾಷೆಗಳ ಸಂಖ್ಯೆ ಸಾಕಷ್ಟು ದೊಡ್ಡದೇ ಆಗಿದೆ ಎನ್ನುತ್ತಾರೆ. ಅನೇಕ ಜಿಲ್ಲೆಗಳಲ್ಲಿ ಆಡುವ ಕನ್ನಡದ ಪ್ರಭೇದವನ್ನು ಹಳೇಮೈಸೂರಿನ ಕನ್ನಡ ಎಂದು ಕರೆಯಲು ಸಂಶಯ ತೋರುತ್ತ "ಹಳೇಮೈಸೂರಿನ ಕನ್ನಡ ಎಂದಾಗ ಯಾವುದನ್ನು ಆರಿಸಿಕೊಳ್ಳಬೇಕೆಂಬ ಪ್ರಶ್ನೆ ನಿಲ್ಲುತ್ತದೆ" ಎಂದಿದ್ದಾರೆ. ಇವರ ಲೇಖನವು ಯಾವ ಆಳವಾದ ಅಧ್ಯಯನವನ್ನೂ ಮಾಡದೆ ಮೇಲುನೋಟಕ್ಕೆ ಕಂಡ ಬೇರೆ ಬೇರೆ ಕಡೆ ಬಳಸುವ ಪದಗಳಷ್ಟನ್ನೇ ಹೇಳಿದೆ. ಭಾಷಾವಿಜ್ಞಾನಿಯ ಸೂಕ್ಷ್ಮದೃಷ್ಟಿಯಾಗಲಿ, ಆ ಪ್ರದೇಶಗಳ ಭಾಷೆಯ ಸೂಕ್ಷ್ಮ ವ್ಯತ್ಯಾಸಗಳ ಅವಲೋಕನವಾಗಲಿ ಇಲ್ಲ.

ಧಾರವಾಡ–ವಿಜಾಪುರಗಳ ಕನ್ನಡದ ಬಗ್ಗೆ ಬರೆಯುತ್ತಾ ಡಾ. ಆರ್. ಸಿ. ಹಿರೇಮಠರು ಪ್ರಾದೇಶಿಕ (Regional) ಮತ್ತು ಸಾಮಾಜಿಕ (Social) ಪ್ರಭೇದಗಳ ಪ್ರಾಮುಖ್ಯತೆಯನ್ನು ವಿವರಿಸಿದ್ದಾರೆ. ಇವರ ಲೇಖನವು ಭಾಷಾಶಾಸ್ತ್ರಜ್ಞನ ಭಾಷೆಯ ವಿಶ್ಲೇಷಣೆಯ ಅಂಶಗಳನ್ನೊಳಗೊಂಡಿದೆ. ಧಾರವಾಡ–ವಿಜಾಪುರಗಳ ಜೊತೆಗೆ ಬೆಳಗಾವಿ ಕನ್ನಡದ ಬಗ್ಗೆಯೂ ವಿವರಿಸುತ್ತಾರೆ. ಮುಂದೆ ಸಾಗಿ "ಧಾರವಾಡ–ಬೆಳಗಾವಿ, ವಿಜಾಪುರಗಳ ಕನ್ನಡವನ್ನು ಒಂದು ಪ್ರಾದೇಶಿಕ ಪ್ರಭೇದವೆಂದು ಪರಿಗಣಿಸಿದರೂ ಸಾಮಾನ್ಯವಾಗಿ ಪ್ರತಿ ೫೦ ಮೈಲಿಗಳ ಅಂತರದಲ್ಲಿ ಭಾಷಿಕ ವ್ಯತ್ಯಾಸಗಳು ಕಂಡುಬರುತ್ತವೆ" ಎಂದಿರುವರು. ಸ್ವರ, ವ್ಯಂಜನ ಮತ್ತು ಶಬ್ದಗಳ ವ್ಯತ್ಯಾಸಗಳನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಈ ಲೇಖನವು ಪ್ರಾದೇಶಿಕ ಉಪಭಾಷೆಗಳನ್ನು ಗುರಿತಿಸುವಲ್ಲಿ ಸಹಕಾರಿಯಾಗಿದೆ ಮತ್ತು ಆ ದಿಕ್ಕಿನಲ್ಲಿ ಯೋಚಿಸಲು ಹಚ್ಚುತ್ತದೆ.

ಪ್ರೊ. ಎಂ. ಮರಿಯಪ್ಪ ಭಟ್ಟರು 'ದಕ್ಷಿಣ ಕನ್ನಡದ ಕನ್ನಡ' ಎಂಬ ತಮ್ಮ ಲೇಖನದಲ್ಲಿ ದಕ್ಷಿಣ ಕನ್ನಡದ ಭಾಷಾಸ್ಥಿತಿಯನ್ನು ಚೆನ್ನಾಗಿ ವಿವೇಚಿಸುತ್ತಾರೆ. ಮಲೆಯಾಳಂ, ಕೊಂಕಣಿ, ತುಳುಗಳ ಮಧ್ಯೆ ಬದುಕಿರುವ ಕನ್ನಡದ ವಿಚಿತ್ರ ಸ್ಥಿತಿಯನ್ನು ವಿವರಿಸುತ್ತ "ಅಂತು ಭಾಷೆಯಮಟ್ಟಿಗೆ ದಕ್ಷಿಣ ಕನ್ನಡ ಒಂದು ವಿವಿಧ ವಸ್ತು ಪ್ರದರ್ಶನದ ಶಾಲೆಯಂತಿದೆ (Museum) ಅಥವಾ ಮೃಗಶಾಲೆಯೋ (Zoo) ?" ಎನ್ನುತ್ತಾರೆ. ಅಲ್ಲಿರುವ ಬಹುಭಾಷಾ ಸ್ಥಿತಿ ಮತ್ತು ಅನೇಕ ಜಾತಿಗಳನ್ನು ಗಮನಿಸುತ್ತ "ಭಾಷೆಗಳಲ್ಲಿ ಒಳಪ್ರಭೇದಗಳುಂಟು, ಜಾತಿಗೊಂದು ಭಾಷೆ. ಊರಿಗೊಂದು

ಭಾಷೆ, ಎಂಬಂತಿದೆ," ಕನ್ನಡವನ್ನೇ ತಾಯ್ನುಡಿಯಾಗಿ ಆಡುವ ಗೌಡ, ನಾಡವ, ಪ್ರೊಟೆಸ್ಟೆಂಟ್ ಕ್ರೈಸ್ತ, ಹರಿಜನಬೈರ, ಕೋಟ, ಕೋಟೇಶ್ವರ, ಹವ್ಯಕ ಮೊದಲಾದ ಪಂಗಡದವರು ಇದ್ದಾರೆ" ಎಂದಿದ್ದಾರೆ. ಪ್ರಾದೇಶಿಕ ಪ್ರಭೇದದ ಜೊತೆಗೆ ಅದಕ್ಕೆ ಹೊಯ್‌ಕೈಯಾಗಿ ನಿಂತಿರುವ ದಕ್ಷಿಣ ಕನ್ನಡದ ಸಾಮಾಜಿಕ ಪದ್ಧತಿಯನ್ನೂ ವಿವರಿಸಿದ್ದಾರೆ. ಈ ಲೇಖನದ ಉಪಯುಕ್ತತೆ ಅಲ್ಲಿಯ ಭಾಷೆಯ ಭಾಷಾವೈಜ್ಞಾನಿಕ ವಿಶ್ಲೇಷಣೆಯ ದೃಷ್ಟಿಯಿಂದ ಅಲ್ಪವಾದರೂ ಆ ಭಾಷೆಯ ಸಾಮಾನ್ಯ ಸಮಸ್ಯೆಗಳನ್ನು ಕುರಿತು ಚಿಂತಿಸಿದ್ದರಿಂದ ಉಪಯುಕ್ತವಾಗಿದೆ ಎಂದು ಭಾವಿಸಬೇಕಾಗುತ್ತದೆ.

ಗುಲ್ಬರ್ಗ–ರಾಯಚೂರು ಕನ್ನಡಗಳ ಬಗ್ಗೆ ಶ್ರೀ ಡಿ. ಕೆ. ಭೀಮಸೇನರಾಯರು ಬರೆಯುತ್ತ ಗುಲ್ಬರ್ಗ–ರಾಯಚೂರುಗಳ ಇತಿಹಾಸ ಮತ್ತು ಅಲ್ಲಿಯ ರಾಜಕೀಯ ಪರಿಸ್ಥಿತಿ ಕುರಿತು ಚಿಂತಿಸುತ್ತಾರೆ. ಗುಲ್ಬರ್ಗ–ರಾಯಚೂರು ಕನ್ನಡಗಳೊಂದಿಗೆ ಬೀದರಿನ ಕನ್ನಡವನ್ನೂ ಸೇರಿಸಿಕೊಂಡು ವಿಚಾರ ಮಾಡಿದ್ದಾರೆ. ಅನೇಕ ಶಬ್ದಗಳ ವ್ಯತ್ಯಾಸ ಮತ್ತು ವಾಕ್ಯಗಳ ವ್ಯತ್ಯಾಸವನ್ನು ವಿವರಿಸಿದ್ದಾರೆ. ಉರ್ದು ಇತರ ಭಾಷೆಗಳ ಪ್ರಭಾವವನ್ನು, ಅದು ಕನ್ನಡದ ಮೇಲೆ ಮಾಡಿದ ಪರಿಣಾಮವನ್ನೂ ವಿವೇಚಿಸಿದ್ದಾರೆ. ಪ್ರಾದೇಶಿಕ ಉಪಭಾಷೆಯ ಗಾದೆ, ಹಂತಿಯಪದ, ಜಾನಪದದ ಹಾಡುಗಳನ್ನು ಸ್ವಲ್ಪ ಸಂಗ್ರಹಿಸಿ ಮುಂದಿನ ವಿಸ್ತಾರವಾದ ಅಧ್ಯಯನಕ್ಕೆ ಅಡಿಗಲ್ಲಾಗಲಿ –ಎಂದಿದ್ದಾರೆ. ಡಿ. ಕೆ. ಭೀಮಸೇನರಾಯರ ಲೇಖನ ಭಾಷಾವಿಜ್ಞಾನದ ಚೌಕಟ್ಟಿನಲ್ಲಿ ಆ ಭಾಷೆಯನ್ನು ನೋಡದೆ ಕೇವಲ ಐತಿಹಾಸಿಕ, ರಾಜಕೀಯ ವಿಶ್ಲೇಷಣೆಗಷ್ಟೇ ಗಮನಕೊಟ್ಟಿದೆ. ಇದನ್ನು ವ್ಯವಸ್ಥಿತವಾದ ಭಾಷಾವಿಜ್ಞಾನದಿಂದ ಬರೆಯಬೇಕಿತ್ತು ಎನ್ನುವ ಕೊರತೆ ಓದಿದವರಿಗೆ ಅನ್ನಿಸುತ್ತದೆ.

ಮಿರ್ಜಿ ಅಣ್ಣಾರಾಯರು "ಮಹಾರಾಷ್ಟ್ರ ಗಡಿನಾಡ ಕನ್ನಡ" ಎನ್ನುವ ತಮ್ಮ ಲೇಖನದಲ್ಲಿ ಮರಾಠಿ ಪ್ರಭಾವಕ್ಕೆ ಒಳಗಾಗಿರುವ ಕನ್ನಡದ ಸ್ಥಿತಿಯನ್ನು ವಿವರಿಸಿದ್ದಾರೆ. ಅಲ್ಲಿರುವ ದ್ವಿಭಾಷಾ ಸ್ಥಿತಿ(Bilingual situation)ಯನ್ನು; ಮನೆಯೊಳಗೆ ಕನ್ನಡ ಮಾತನಾಡಿ, ಹೊರಗೆ ವ್ಯವಹಾರಕ್ಕಾಗಿ ಮರಾಠಿ ಮಾತನಾಡುವ ಅಲ್ಲಿಯ ಜನಗಳ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಅಲ್ಲಿ ಶಬ್ದ ಮತ್ತು ವ್ಯಾಕರಣ ರೂಪಗಳ ವಿಶಿಷ್ಟತೆಯನ್ನು ವಿವರಿಸಿ ಮರಾಠಿ ಶಬ್ದಗಳಿಗೆ ಹಚ್ಚುವ ಕನ್ನಡ ಪ್ರತ್ಯಯ ಉದಾಹರಣೆಗಳ ಪಟ್ಟಿಯನ್ನೇ ಕೊಟ್ಟಿದ್ದಾರೆ. ಇವರ ಈ ಲೇಖನವೂ ಭಾಷಾವಿಜ್ಞಾನದ ಅಚ್ಚುಕಟ್ಟಿನಲ್ಲಿ ನಿಖರವಾದ ವಿಶ್ಲೇಷಣೆ ಹೊಂದದಿರುವುದು ಒಂದು ಕೊರತೆಯಾಗಿದೆ.

ಡಾ. ಕೆ. ಕುಶಾಲಪ್ಪಗೌಡರು "ಕನ್ನಡದ ಈಗಿನ ಪ್ರಾದೇಶಿಕ ಪ್ರಭೇದಗಳು" ಎನ್ನುವ ಲೇಖನ ಬರೆದಿದ್ದಾರೆ. (೧) ಮೈಸೂರಿನ ಕನ್ನಡ (೨) ಮಂಗಳೂರು

ಕನ್ನಡ (೩) ಧಾರವಾಡ ಕನ್ನಡ. ಈ ಮೂರು ಪ್ರಭೇದಗಳನ್ನು ಉದಾಹರಣೆಗಳೊಂದಿಗೆ ಭಾಷಾವೈಜ್ಞಾನಿಕವಾಗಿ ವಿವರಿಸಿದ್ದಾರೆ. ಪ್ರಾಂತಿಕ ಭಾಷೆಗಳ ಜೊತೆಗೆ ಕೆಲವು ಜನಾಂಗ ವಿಶಿಷ್ಟ ಭಾಷೆಗಳೂ ಇವೆ (Social dialects) ಎಂಬುದನ್ನು ಗಮನಿಸಿದ್ದಾರೆ. ಡಾ. ಕೆ. ಕುಶಾಲಪ್ಪಗೌಡರು ಗುರುತಿಸಿದ ಪ್ರಮುಖ ಮೂರು ಭಾಷಾ ಪ್ರಭೇದಗಳ ಜೊತೆಗೆ ಇನ್ನೂ ಕೆಲವನ್ನು ಸೇರಿಸುವ ಕಾಲ ಈಗ ಒದಗಿದೆ.

ಮೈಸೂರಿನಲ್ಲಿ ನಡೆದ ಈ "ಇಂದಿನ ಕನ್ನಡ ಪ್ರಾದೇಶಿಕ ಸ್ವರೂಪಗಳು"[೧] ಎನ್ನುವ ಗೋಷ್ಠಿ ಕನ್ನಡ ಭಾಷೆ, ಉಪಭಾಷೆಗಳ ಬಗ್ಗೆ ನಮ್ಮ ವಿದ್ವಾಂಸರಿಗೆ ಗಮನ ಇದೆ ಎಂಬುದನ್ನು ತೋರಿಸಿಕೊಟ್ಟಿದೆ. ಪೂನಾದ ಡೆಕ್ಕನ್ ಕಾಲೇಜಿನಲ್ಲಿ ನಡೆದ ಸಂಶೋಧನೆಯ ಫಲಗಳು ಹೊರಬರುವುದಕ್ಕೆ ಮುಂಚೆಯೇ ಈ ನಿಟ್ಟಿನಲ್ಲಿ ವಿಚಾರ ಮಾಡಿದ ಯಶಸ್ಸು ಮೇಲೆ ಹೆಸರಿಸಿದ ವಿದ್ವಾಂಸರಿಗೆ ಸೇರಿದೆ.

ಉಪಭಾಷೆಗಳ ಮಹಾಪ್ರಬಂಧಗಳು ಮತ್ತು ಪುಸ್ತಕಗಳು :

ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆಗಳ ಭಾಷಾವೈಜ್ಞಾನಿಕ ಅಧ್ಯಯನ ನಡೆಯುತ್ತಿದೆ. ಡಾ. ಆರ್. ಸಿ. ಹಿರೇಮಠರು ೧೯೬೬ ರಲ್ಲಿ ಪ್ರಕಟಿಸಿದ 'Structure of Kannada' ಧಾರವಾಡದ ಲಿಂಗಾಯತರ ಕನ್ನಡದ ಭಾಷೆಯ ವಿಶ್ಲೇಷಣೆಯಾಗಿದೆ. ೧೯೭೧ ರಲ್ಲಿ ಪ್ರಕಟಿಸಿದ ಡಾ. ಕೆ. ಜಿ. ಶಾಸ್ತ್ರಿಯವರ "The Havyaka Dialect of North Kanara" ಉತ್ತರಕನ್ನಡದ ಹವ್ಯಕರ ಉಪಭಾಷೆಯನ್ನು ವಿವರಿಸುತ್ತದೆ. ಡಾ. ಹಾ. ಮಾ. ನಾಯಕರು ಪ್ರಕಟಿಸಿದ Kannada Literary and Colloquial-study of two styles ಪುಸ್ತಕವು ಹಳೇ ಮೈಸೂರಿನ ಕನ್ನಡವನ್ನು ವಿವರಿಸುತ್ತದೆ. ಶ್ರೀ ಎಂ. ಆರ್. ರಂಗನಾಥ್ ಅವರು ಕರ್ನಾಟಕ ವಿಶ್ವವಿದ್ಯಾಲಯದ ಪಿಹೆಚ್. ಡಿ. ಪದವಿಗೆ ಸಾದರಪಡಿಸಿದ ಪ್ರಬಂಧ "ಧಾರವಾಡ ಮತ್ತು ಮೈಸೂರು ಕನ್ನಡಗಳ ತುಲನಾತ್ಮಕ ಅಧ್ಯಯನ"ಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶ್ರೀ ಎ. ಮುರಿಗೆಪ್ಪನವರು ಡಾ. ಆರ್. ಸಿ. ಹಿರೇಮಠರ ಮಾರ್ಗದರ್ಶನದಲ್ಲಿ 'ಬೀದರ್ ಕನ್ನಡದ ಭಾಷಾವೈಜ್ಞಾನಿಕ ಅಧ್ಯಯನ'ವನ್ನು ಮಾಡುತ್ತಿದ್ದಾರೆ. ಡಾ. ಜೆ. ಎಸ್. ಕುಳ್ಳಿಯವರ ಮಾರ್ಗದರ್ಶನದಲ್ಲಿ ಕೆ. ಎಂ. ವೀರಭದ್ರಶರ್ಮ ಬಳ್ಳಾರಿ ಕನ್ನಡದ ಅಧ್ಯಯನ ಮಾಡುತ್ತಿದ್ದಾರೆ. ಬಿಳಿಗಿರಿ ರಂಗನ ಬೆಟ್ಟದ 'ಸೋಲಿಗರ ಕನ್ನಡ'ವನ್ನು ಡಾ. ಹೆಚ್. ಎಸ್.

---

೧ ಇಂದಿನ ಕನ್ನಡ ಪ್ರಾದೇಶಿಕ ಸ್ವರೂಪಗಳು– ಸುವರ್ಣ ಸಂಚಯ, ಪುಟ ೨೪೩–೩೪೯.
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ೧೯೬೭.

ಬಿಳಿಗಿರಿಯವರ ಮಾರ್ಗದರ್ಶನದಲ್ಲಿ ಕೆ. ಎಸ್. ಗುರುಬಸವೇಗೌಡ ವಿಶ್ಲೇಷಿಸಿದ್ದಾರೆ. ಸಂಕೇತಿ ಕನ್ನಡವನ್ನು ಕುರಿತು ಡಾ. ಕೆಂಪೇಗೌಡ ಮೈಸೂರಿನಲ್ಲಿ ಸಂಶೋಧನೆ ನಡೆಸಿದ್ದಾರೆ. ಶಿವಮೊಗ್ಗ, ಉತ್ತರ, ದಕ್ಷಿಣ ಕನ್ನಡದಲ್ಲಿರುವ 'ದೀವರ ಕನ್ನಡ'ದ ಭಾಷಾ ವೈಜ್ಞಾನಿಕ ಅಧ್ಯಯನವನ್ನು ಡಾ. ಜೆ. ಎಸ್. ಕುಳ್ಳಿಯವರ ಮಾರ್ಗದರ್ಶನದಲ್ಲಿ ನಾನು ಸಂಶೋಧನ ನಡೆಸುತ್ತಿದ್ದೇನೆ. ಕೊಡಗಿನ ಗೌಡಸಮಾಜದ ಕನ್ನಡವನ್ನು 'ಗೌಡ ಕನ್ನಡ' ಎಂಬ ಪುಸ್ತಕರೂಪದಲ್ಲಿ ಡಾ. ಕೆ. ಕುಶಾಲಪ್ಪಗೌಡರು ೧೯೭೧ ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಶ್ರೀಮತಿ ಶಾಲಿನಿ ಹೆಗ್ಗಡೆಯವರು ಡಾ. ಜೆ. ಎಸ್. ಕುಳ್ಳಿಯವರ ಮಾರ್ಗದರ್ಶನದಲ್ಲಿ ಉತ್ತರಕನ್ನಡದ ಹಾಲಕ್ಕಿ ಮತ್ತು ಹವ್ಯಕ ಕನ್ನಡ ಉಪಭಾಷೆಗಳ ಸಾಮಾಜಿಕ ಅಧ್ಯಯನ ನಡೆಸುತ್ತಿದ್ದಾರೆ. ಸುಶೀಲಾ ಥಾಮಸ್, ಡಾ. ಬಿ. ಜಿ. ಮಿಶ್ರಾರವರ ಮಾರ್ಗದರ್ಶನದಲ್ಲಿ ಕಾಸರಗೋಡಿನ ಕನ್ನಡ ಮತ್ತು ಮಲೆಯಾಳಂಗಳ ಸಾಮಾಜಿಕ ಅಧ್ಯಯನ ಮಾಡುತ್ತಿದ್ದಾರೆ (CIIL, ಮೈಸೂರು).

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದವರೂ (Central Institute of Indian Languages) ಗಡಿನಾಡು ಕನ್ನಡಗಳ ಭಾಷಾ ಸಾಮಗ್ರಿಯನ್ನು ಸಂಗ್ರಹಿಸಿದ್ದಾರೆ. ಅದರ ಬಗ್ಗೆ ಪುಸ್ತಕಗಳಾವುವೂ ಇನ್ನೂ ಪ್ರಕಟವಾಗಿಲ್ಲ.

ಕನ್ನಡದಲ್ಲಿ, ಮೇಲೆ ವಿವರಿಸಿದ ಎಲ್ಲ ಪ್ರಾದೇಶಿಕ ಅಧ್ಯಯನವನ್ನು ಗಮನಿಸಿಯೂ ಇನ್ನೂ ನಡೆಯಬೇಕಾದ ಕೆಲಸದ ಬಗ್ಗೆ ವಿಚಾರ ಮಾಡುತ್ತದೆ. ವಿಸ್ತಾರವಾದ ಕನ್ನಡನಾಡಿನ ಜಿಲ್ಲೆಜಿಲ್ಲೆಗಳಲ್ಲಿ ಇರುವ ಅನೇಕ ಪ್ರಾದೇಶಿಕ ಹಾಗೂ ಸಾಮಾಜಿಕ ಪ್ರಭೇದವನ್ನು ಗುರುತಿಸುವ ಕಾರ್ಯ ನಡೆಯಬೇಕಾಗಿದೆ. ಅನೇಕ ವಿದ್ವಾಂಸರು ಪದೇ ಪದೇ ಕನ್ನಡದಲ್ಲಿ ನಡೆಯಬೇಕಾಗಿರುವ ಉಪಭಾಷೆಗಳ ಪರಿವೀಕ್ಷಣೆಯ ಬಗ್ಗೆ ಪ್ರಸ್ತಾಪಿಸಿದರೂ ರಾಜ್ಯ ಮತ್ತು ಕೇಂದ್ರಸರ್ಕಾರಗಳು ಮೂಕವಾಗಿವೆ. ಅನೇಕ ವರ್ಷಗಳ ಹಿಂದೆಯೇ ಕಲ್ಪಿಸಿದ ಕರ್ನಾಟಕ ವಿಶ್ವವಿದ್ಯಾಲಯದ "ಕರ್ನಾಟಕ ಉಪಭಾಷಾ ಪರಿವೀಕ್ಷಣಾ ಯೋಜನೆ" ರಾಜ್ಯ ಸರ್ಕಾರದ ಹತ್ತಿರ ಉಳಿದಿದೆ. ನಡೆದಿರುವ ಸ್ವಲ್ಪ ಕೆಲಸದಿಂದಲೇ ತೃಪ್ತಿಯ ಉಸಿರುಬಿಟ್ಟರೆ ಪ್ರಚಲಿತ ಅನೇಕ ಉಪಭಾಷೆಗಳ ಫಲದೊರೆಯದೆ ಪೂರ್ಣ ನಿಟ್ಟುಸಿರುಬಿಡಬೇಕಾಗುತ್ತದೆ. ಮಲಯಾಳಂ, ತೆಲುಗು, ತಮಿಳು, ಪಂಜಾಬಿ ಭಾಷೆಗಳಲ್ಲಿ ನಡೆಯುತ್ತಿರುವಂತೆ ಭಾಷಾಪರಿವೀಕ್ಷಣಾ ಕಾರ್ಯ ಕನ್ನಡದಲ್ಲಿಯೂ ನಡೆಯಬೇಕಾಗಿದೆ.

ಸಹಾಯಕ ಗ್ರಂಥಗಳು

ಕನ್ನಡ ಸಾಹಿತ್ಯ ಲೇಖನ ಸೂಚಿ ಟಿ. ವಿ. ವೆಂಕಟರಮಣಯ್ಯ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೩.

ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಡಾ. ಎಂ. ಎಂ. ಕಲಬುರ್ಗಿ, ೧೯೭೩.

ದ್ರಾವಿಡ ಭಾಷಾವಿಜ್ಞಾನ ಹಂಪನಾ, ೧೯೬೬

ಸುವರ್ಣ ಸಂಚಯ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೬೭.

An outline of colloquial Kannada William Bright.

Deccan College Monographs (LSI series)

Gowda Kannada Dr. K. Kushalappa Gowda

Havyaka Dialect of North Kanara Dr. K. G. Shastri, 1971.

Kannada Literary & Colloquial A study of two styles Dr. H. M. Nayak.

Keśiraja's Śabdamaṇi Darpaṇa Linguistic Analysis, Dr. J. S. Kulli.

Linguistic Survey of India George A. Grierson, Vol. iv.

Seminar on Dialectology Ed. V. I. Subramoniam, 1973.

Structure of Kannada Dr. R. C. Hiremath, 1966.

ಸಹಾಯಕ ಲೇಖನಗಳು

ಕನ್ನಡ ಅಧ್ಯಯನ ಸಿ. ರಾಮಸ್ವಾಮಿ, ಕರ್ನಾಟಕ ಭಾರತಿ.

ಕುಂದಗನ್ನಡ ಬಿ. ಎಚ್. ಶ್ರೀಧರ, ಕನ್ನಡಸಾಹಿತ್ಯ ಪರಿಷತ್ ಪತ್ರಿಕೆ, ೪೧, ೧೨
೪೨, ೨
೪೩, ೧

ಗೋದಾವರಿ ತೀರದ ಕನ್ನಡ ಡಾ. ಎಂ. ಚಿದಾನಂದಮೂರ್ತಿ, ಸಂಶೋಧನ ತರಂಗ ೨.

ಬೆಳಗಾವಿ ಜಿಲ್ಲೆಯ ಉಪಭಾಷೆಗಳು ಎಂ. ಬಿ. ಘೋಯಿ, ಕರ್ನಾಟಕ ಭಾರತಿ, ಸಂ. ೬, ೪/೧೯೭೪.

ಭಾಷಾವಿಜ್ಞಾನ ಕ್ಷೇತ್ರದ ಸಾಧನೆ– ಡಾ. ಕೆ. ಕುಶಾಲಪ್ಪಗೌಡ, ಕನ್ನಡನುಡಿ, ೩೭, ೨೨, ೧೯೭೪.

ರಾಯಚೂರು ಕನ್ನಡ ಮಾಸ್ತಿ ನರಸಿಂಗರಾವ್, ಪ್ರಬುದ್ಧ ಕರ್ನಾಟಕ, ೧೭–೪.

Dialects of Kannada in Mysore D.N.S. Bhat, Bulletin of the Deccan College, 28, 66, 67, 1969.

Kannada Dr. H. S. Biligiri, Current Trends in Linguistics Vol. 5.

Linguistic Diversity in South Asia IJAL Vol. 26, No. 3, July 1960.

Souvenir 1971, 150th Anniversary year Bulletin of the Deccan College, Vol. xxx.

• •

• ಮಧ್ಯಶಿಲ್ಪ •

ಬೀದರ್ ಜಿಲ್ಲೆಯ ಕನ್ನಡ

• ಎ. ಮುರಿಗೆಪ್ಪ

ಬೀದರ್ ಜಿಲ್ಲೆಯ ಕನ್ನಡ, ತನ್ನ ಮೇಲೆ ಆಳಿಕೆ ನಡೆಸಿದ ರಾಜ್ಯಭಾಷೆ ಹಾಗೂ ನೆರೆಯ ಭಾಷೆಯ ಅಂಶಗಳನ್ನು ಚೆನ್ನಾಗಿಯೇ ಒಳಗುಮಾಡಿಕೊಂಡು, ಅಧಿಕೃತ ಭಾಷೆ (Standard Kannada) ಅಥವಾ ಕನ್ನಡದ ಇನ್ನಾವುದೇ ಉಪಭಾಷೆಯಿಂದ ಭಿನ್ನವಾಗಿ ನಿಲ್ಲುತ್ತದೆ. ಪ್ರಸ್ತುತ ಪ್ರಬಂಧದಲ್ಲಿ ಬೀದರ್ ಉಪಭಾಷೆಯ ಸಂಪೂರ್ಣ ಸ್ವರೂಪ ಅಸಾಧ್ಯ. ಕಾರಣ ಅಲ್ಲಿಯ ಜೊನ್ನಿಕೇರಿ ಗ್ರಾಮದಲ್ಲಿ ಸಂಗ್ರಹಿಸಿದ ಕೆಲವು ಸಾಮಗ್ರಿಗಳನ್ನು ಮಾತ್ರ ಉಪಯೋಗಿಸಿ ಬೀದರ್ ಜಿಲ್ಲೆಯ ಕನ್ನಡದ ಪರಿಚಯ ನೀಡುವ ಪ್ರಯತ್ನ ಮಾಡುತ್ತೇನೆ.

ಬೀದರ್ ಜಿಲ್ಲೆ, ಕನ್ನಡನಾಡಿನ ತೀರ ಉತ್ತರದಲ್ಲಿರುವ ರಾಜ್ಯಘಟಕ. ಪಶ್ಚಿಮೋತ್ತರಗಳಲ್ಲಿ ಮಹಾರಾಷ್ಟ್ರ, ಪೂರ್ವೋತ್ತರಗಳಲ್ಲಿ ಆಂಧ್ರಪ್ರದೇಶ, ದಕ್ಷಿಣದಲ್ಲಿ ಕರ್ನಾಟಕದ ಕಲಬುರ್ಗಿ ಜಿಲ್ಲೆಯಿಂದ ಆವೃತವಾದ ಈ ಜಿಲ್ಲೆಯ ಕನ್ನಡ ಸಹಜವಾಗಿಯೇ ಮರಾಠಿ, ತೆಲುಗು ಭಾಷೆಗಳಿಂದ ಪ್ರಭಾವಿತವಾಗಿದೆ. ಹೆಚ್ಚಿನದಾಗಿ ಬಹುಕಾಲದಿಂದಲೂ ಆಳಿಕೆ ನಡೆಸಿದ ಉರ್ದುವಿನ ಪ್ರಭಾವವೂ ದಟ್ಟವಾಗಿದೆ.

ಬೀದರ್ ಕನ್ನಡ ಉಪಭಾಷೆಯಲ್ಲಿ ಇತರ ಕನ್ನಡ ಪ್ರಭೇದಗಳಲ್ಲಿ ಕಂಡುಬರುವ ಎಲ್ಲ ಧ್ವನಿಗಳಿವೆ. ಈ ಭಾಷೆ ಬೇರೆ ಭಾಷೆಗಳಿಂದ f, z, q ಘರ್ಷಧ್ವನಿಗಳನ್ನು ಸ್ವೀಕರಿಸಿದೆ. ಬೀದರ್ ಜಿಲ್ಲೆಯ ಕನ್ನಡದ ಧ್ವನಿಮಾಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು.

i, e, æ, a, ə, ʌ, u. o ಸ್ವರಗಳು. ಇವುಗಳಲ್ಲಿ i, e, a, u ಮತ್ತು o ಸ್ವರಗಳಿಗೆ ದೀರ್ಘ ಉಚ್ಚಾರ ಕಂಡುಬರುತ್ತದೆ.

p, b, t, d, ṭ, ḍ, c. j, k, g, f, v, s, z, ś, q, m, n, ṇ. h, l, ḷ ಮತ್ತು r ವ್ಯಂಜನಗಳು. ಇವುಗಳಲ್ಲಿ f, z, q ಮತ್ತು v ಗಳು ಇತರ ಭಾಷೆಯಿಂದ ಸ್ವೀಕರಿಸಿದ ಶಬ್ದಗಳಲ್ಲಿ ಮಾತ್ರ ಕಂಡುಬರುತ್ತವೆ.

y ಮತ್ತು w **ಅರೆಸ್ವರ**ಗಳು.

ಧ್ವನಿಮಾ ನಿರ್ಣಯಕ್ಕಾಗಿ ಕೆಳಗಿನ ಕನಿಷ್ಠ ಯುಗ್ಮಗಳನ್ನು ನೋಡಬಹುದು.

ಇಲ್ಲ	illa	'no'	ಕಡಿ	kʌḍi	'to cut'
ಎಲ್ಲ	yella	'all'	ಕಡಿ	kaḍi	'last'
ಅಲ್ಲ	alla	'not'	ಕಡಿ	kəḍi	'side'
ಮರಿ	məri	'yong one'	ಕಿಡಿ	kiḍi	'spark'
ಮುರಿ	muri	'to cut'	ಕುಡಿ	kuḍi	'to drink'
ಮರಿ	mari	'to forget'	ಕೊಡಿ	koḍi	'umbrella'

ಬಿಳಿ	/ biḷi /	'white'	ಹುಗಿ	hugi	'to hide in the pit'
ಬೆಳಿ			ಹೊಗಿ	hogi	'smoke'
ಬಳಿ	/ baḷi /	'bangles'			
ಬಳಿ	/ bəḷi /	'to smear'			

ಮಬುರ್	ಪರಿ	ಕಟ್ತ	ಮಟ್ಟಿ	ಸತ್ತ	ಸಾತ್
ಪಬುರ್	ಬರಿ	ಕಟ್ದ	ಮಡ್ಡಿ	ಸಟ್ಟ	ಸಾಟ್

ಕುಂಡಿ	ಕುಡಿ	ರಸ	ಹೊಯ್	ತಮ್ಮ	ಪರಿ	ಕಟ್ಟು	ನರಿ
ಗುಂಡಿ	ಗುಡಿ	ರಜ	ಕೊಯ್	ನಮ್ಮ	ಮರಿ	ಕಣ್ಣು	ಮರಿ

ಮನಿ	ಮಾಡಿ	ಹಲ್ಲು	ಮಳಿ	ಇದು	ಕುಡು	ಬಲ
ಮಣಿ	ನಾಡಿ	ಹಳ್ಳು	ಮಣಿ	ಇಡು	ಕೊಡು	ಬಾಲ

ಉಳಿದ ಧ್ವನಿಮಾಗಳಿಗೆ ಕನಿಷ್ಠಯುಗ್ಮ ದೊರೆತಿಲ್ಲ. ಆದರೆ ಯಾವುದೇ ನಿರ್ದಿಷ್ಟ ಪರಿಸರಕ್ಕೆ ಸೀಮಿತವಾಗದಿರುವುದರಿಂದ ಅವುಗಳಿಗೂ ಧ್ವನಿಮಾರೂಪವನ್ನು ನೀಡಬೇಕಾಗುತ್ತದೆ. ಸಾಮಾನ್ಯವಾಗಿ ನಾಸಿಕ ಮತ್ತು ಸ್ಪರ್ಶಗಳು ಒತ್ತಕ್ಷರಗಳಾಗಿ ಬಂದಾಗ ಆಯಾ ಸ್ಪರ್ಶಧ್ವನಿಯ ಹಿಂದೆ ವರ್ಗ ನಾಸಿಕವೇ ಬರುತ್ತದೆ.

f, v, z ಘರ್ಷಧ್ವನಿಗಳು ಕನ್ನಡಕ್ಕೇ ಎರವಲು ಅಥವಾ ಸ್ವೀಕೃತ ಧ್ವನಿಗಳಾಗಿದ್ದು, ಬೀದರ್ ಜಿಲ್ಲೆಯ ಕನ್ನಡ ಈ ಧ್ವನಿಗಳನ್ನು ಉರ್ದು ಅಥವಾ ಮರಾಠಿ ಭಾಷೆಯಿಂದ ಸ್ವೀಕರಿಸಿದೆ. ಈ ಧ್ವನಿಗಳನ್ನು ಅವು ಇರುವ ಶಬ್ದದೊಂದಿಗೆ ಸ್ವೀಕರಿಸಿದ್ದು, ಕೆಲವೊಂದು ಸಮಯ ಈ ಧ್ವನಿಗಳು ಐಚ್ಛಿಕವಾಗಿ. ಸಮಾನ ಉಚ್ಚಾರ ಸ್ಥಳ ಸ್ಪರ್ಶವಾಗಿ ಉಚ್ಚರಿಸುತ್ತಿರಬಹುದು.

ಉದಾ :	ಫಾಯಿದೆ	ಅಥವಾ	ಪಾಯಿದೆ
	ಸಿಫ್ರ್		ಸಿಪ್ರು
	ಬಜಾರ್		ಬಜಾರು
	ದವಾಖಾನ		ದವಾಕಾನ

ಬೀದರ್ ಜಿಲ್ಲೆಯ ಉಪಭಾಷೆಯಲ್ಲಿ ಕಂಡುಬರುವ ಪದಾದಿ ವ್ಯಂಜನದ ಮಹಾಪ್ರಾಣ ಉಚ್ಚಾರ ಮರಾಠಿಭಾಷೆಯಿಂದ ಸ್ವೀಕೃತವಾದುದು. ಇಲ್ಲಿಯೂ ಪದಾದಿ ವ್ಯಂಜನ ಮಹಾಪ್ರಾಣವಿರುವ ಶಬ್ದಗಳನ್ನು ಸ್ವೀಕರಿಸಿ ಅದರೊಂದಿಗೆ ಈ ಮಹಾಪ್ರಾಣಾಂಶವನ್ನು ಸ್ವೀಕರಿಸಲಾಗಿದೆ. ಮರಾಠಿ ಶಬ್ದಗಳಲ್ಲಿ ಕಂಡುಬರುವ ಈ ಮಹಾಪ್ರಾಣಾಂಶ ಮುಂದೆ ದೇಶೀಯ ಶಬ್ದಗಳಿಗೂ ಪಸರಿಸಿದೆ.

ಉದಾ : ಖಪ್ಪರ್	'ಹಂಚು'		ಖೆಂಡ ← ಕೆಂಡ	
ಘಂಟಿ	'ಕೊಂಬೆ'	→	ಧೊಡ್ಡ ← ದೊಡ್ಡ	
ಫೂರೆ	'ಪೂರ್ತಿ'		ಖಿಂಡಿ ← ಕಿಂಡಿ	

ಕನ್ನಡದ ಅನೇಕ ಶಬ್ದಗಳು ಬೀದರ್ ಉಪಭಾಷೆಯಲ್ಲಿ ಧ್ವನಿಮಾರೂಪದಲ್ಲಿ ಕೆಲ ಭಿನ್ನತೆಯನ್ನು ಪಡೆಯುತ್ತವೆ. ಅವುಗಳನ್ನು ಕೆಳಗಿನಂತೆ ತಿಳಿಸಬಹುದು.

ಸ್ವರದಿಂದ ಪ್ರಾರಂಭವಾಗುವ ನಿರ್ದೇಶಕ ಸರ್ವನಾಮಗಳು 'ಕ' ಕಾರ ವ್ಯಂಜನದಿಂದ ಪ್ರಾರಂಭವಾಗುವುದೊಂದು ವಿಶೇಷ. ಈ ಒಂದು ಗುಣ ಉತ್ತರ ಕರ್ನಾಟಕದ ಎಲ್ಲ ಉಪಭಾಷೆಗಳಲ್ಲಿ ಕಂಡುಬರುತ್ತದೆ.

ಉದಾ : ಅವ — ಕವ ಇವ — ಕಿವ ಇದು — ಕಿದು
ಅಲ್ಲಿ — ಕಲ್ಲಿ ಇಲ್ಲಿ — ಕಿಲ್ಲಿ ಅದು — ಕದು

ಡಾ. ಎಂ. ಎಂ. ಕಲ್ಬುರ್ಗಿಯವರು ಹೇಳುವಂತೆ ಅಕೊ + ಅವ > ಕೋ + ಅವ ಎಂದು ದರ್ಶಕ ಸರ್ವನಾಮ ಕಾರಣವಾಗಿ ಕವ ಎಂದಾಗಿದೆ ಎನ್ನುವುದನ್ನು ಒಪ್ಪಬೇಕಾಗುತ್ತದೆ.

ಸಾಮಾನ್ಯವಾಗಿ 'ಎ' ಕಾರಾಂತ ಪದಗಳು 'ಇ' ಕಾರಾಂತವಾಗುತ್ತವೆ.

ಮನೆ — ಮನಿ ಕೆರೆ — ಕ್ಯರಿ ಒಲೆ — ವಲಿ ಎಲೆ — ಯಲಿ

ನಿರ್ದಿಷ್ಟ ಶಬ್ದಗಳಲ್ಲಿ ಕಂಡುಬರುವ ಧ್ವನಿಮಾ ವ್ಯತ್ಯಾಸವನ್ನು ಕೆಳಗಿನ ಶಬ್ದಗಳಲ್ಲಿ ಗುರುತಿಸಬಹುದು.

ಬಳ್ಳಿ — ಜೆಳ್ಳಿ	ಮುಂಜಾನೆ — ಮುಂಜಾಳೆ	ಮೊಗ್ಗು — ಮೊಗ್ಗಿ
ಬಾಗಿಲು — ಬಾಕಿಲು	ನಗು — ನೊಗು	ಸಿಪ್ಪೆ — ಸೊಪ್ಪಿ
ಹುಣಸೆ — ಹುಣಚೆ	ಮುಳುಗು — ಮುಣುಗು	ಸಂಜೆ — ಚಂಜೆ
ಸೇಬು — ಸೇಪು		

ಸಾಮಾನ್ಯವಾಗಿ 'ಎ' ಕಾರದಿಂದ ಪ್ರಾರಂಭವಾಗುವ ಪದಗಳು 'ಯ' ಕಾರವಾಗಿ ಮಾರ್ಪಡುತ್ತವೆ.

ಏನು — ಯಾನು ವೇಳೆ — ಯಾಳಿ
ಕೆರೆ — ಕ್ಯರಿ ಬೆಳೆ — ಬ್ಯಳಿ ಇತ್ಯಾದಿ.

'ಹಿಪ್ಪೆ' ಪದದ 'ಹ' ಕಾರ ಲೋಪವಾಗಿ 'ಇಪ್ಪೆ'ಯಾದರೆ,
'ಇನ್ನ' ಪದದಲ್ಲಿ 'ಹ' ಕಾರ ಆಗಮವಾಗಿ 'ಹಿನ್ನ' ಆಗುತ್ತದೆ.
ಕೆಲವೊಂದು ಪದಗಳು ಅಂತ್ಯಾಕ್ಷರವನ್ನು ಕಳೆದುಕೊಳ್ಳುತ್ತವೆ.

ಉದಾ : ಎಲುಬು — ಎಲು ಮಡಬೆ — ಮಡಿ
ಅಡವಿ — ಅಡಿ ಬಳಲಿಕೆ — ಬಳ್‌ಕೆ (ಮಧ್ಯಾಕ್ಷರ ಲೋಪ)
ಸಲಹು — ಸಲ್

Standard Colloquialನ ವಿಜಾತಿಯ ಒತ್ತಕ್ಷರಗಳು ಸಜಾತೀಯ ಒತ್ತಕ್ಷರಗಳಾಗಿ ಮಾರ್ಪಡುತ್ತವೆ.

ಉದಾ : ಕುರ್ಡ — ಕುಡ್ಡ ಕೊಡ್ಲಿ — ಕೊಡ್ಡಿ
ಮುಷ್ಟಿ — ಮುಟ್ಟಿ ಮತ್ ನಿ — ಮನ್ನಿ
ಯರ್ಡು — ಯಡ್ಡು ನೆನ್ಪು — ನೆಪ್ಪು ಇತ್ಯಾದಿ.

ಒ, ಓ ಕಾರಾದಿಅಕ್ಷರ ಪದಗಳು 'ವ' ಕಾರವಾಗಿ ಪರಿವರ್ತಿಸಲ್ಪಟ್ಟಿವೆ.

ತೊರೆ — ತ್ವರಿ ತೋಳ — ತ್ವಾಳ
ಜೋಳ — ಜ್ವಾಳ ಹೋತ — ಹ್ವಾತ

ಅ ಕಾರಾದಿ ನಂಟುಪದಗಳು (ಸಂಬಂಧಿ ವಾಚಕಗಳು) 'ಯ' ಕಾರಾದಿಯಾಗಿ ಐಚ್ಛಿಕವಾಗಿ ಬಳಸಲ್ಪಟ್ಟಿವೆ.

ಅಣ್ಣ — ಯಣ್ಣ/ಅಣ್ಣ ಅಕ್ಕ — ಯಕ್ಕ/ಅಕ್ಕ
ಅಪ್ಪ — ಯಪ್ಪ/ಅಪ್ಪ ಅಜ್ಜ — ಯಜ್ಜ/ಅಜ್ಜ

ಗಂಡಸು ಪದದ ಪರಿವೇಷ್ಟಿತ ಸ್ಪರ್ಶ ಲೋಪವಾಗುತ್ತದೆ.

ಗಂಡಸು — ಗಣಸು

ಸಾದೃಶ್ಯ ಸೃಷ್ಟಿಯಿಂದಾಗಿ

ಸುಮ್ಮನೆ ಪದ — ಸುಳ್ಳೆ ಆದರೆ
ಖರೇನೆ ಪದ — ಖರ್ರೆ ಆಗುತ್ತದೆ.

ಈ ಉಪಭಾಷೆಯಲ್ಲಿ ಪದಾದಿ ದ್ವಿತ್ವ ಇಲ್ಲ ಎನ್ನಬಹುದು. ಇದರಿಂದಾಗಿ ಸ್ವೀಕೃತ ಆದಿ ದ್ವಿತ್ವ ಪದಗಳು, ದ್ವಿತ್ವಾಕ್ಷರದ ಸ್ವರವನ್ನು ಆದಿವ್ಯಂಜನಕ್ಕೆ ವರ್ಗಾಯಿಸಿ ಅಂತ್ಯವ್ಯಂಜನ ಸ್ವರವಿಲ್ಲದೆ ಅಲ್ಪವಿರಾಮವನ್ನು ಪಡೆಯುತ್ತದೆ.

ಉದಾ : ಪ್ರಭು — ಪರ್‌ಬು ಪ್ರಸಾದ — ಪರ್‌ಸಾದ

ಕೇವಲ 'ದೃಷ್ಟಿ' ಪದದಲ್ಲಿ ಮಾತ್ರ ಪದಾದಿ ದ್ವಿತ್ವ ಕಂಡುಬಂದಿದೆ.

ಉತ್ತರ ಕರ್ನಾಟಕ ಉಪಭಾಷೆಗಳ ಹಾನ, ಹಾಳ ಇಲ್ಲಿಯೂ ಬಳಕೆಯಲ್ಲಿವೆ. ಹಳಗನ್ನಡದ ಅಹನ್ ಶಬ್ದ ಹಾನವಾಗಿದೆಯೆಂದು ಡಾ. ಎಂ. ಎಂ. ಕಲಬುರ್ಗಿಯವರ ವಾದ. ಪ್ರಮಾಣ ಕನ್ನಡ (Standard Kannada) ದ ಮುಹೂರ್ತ ಮೋತ್ರವಾಗಿ ಧ್ವನಿಮಾ ಸ್ಥಾನಪಲ್ಲಟ ಕಂಡುಬರುತ್ತದೆ. ಬೀದರ್ ಕನ್ನಡದ ಮೇಲೆ ಇತರ ಭಾಷೆಯ ಪ್ರಭಾವವಿದ್ದು ಕಾಣುತ್ತದೆ. ಮರಾಠಿ, ಉರ್ದು, ಹಿಂದೂಸ್ತಾನಿ, ತೆಲುಗು ಭಾಷೆಗಳಿಂದ ಶಬ್ದಸಂಪತ್ತನ್ನು ಈ ಉಪಭಾಷೆ ವಿಪುಲವಾಗಿ ಸ್ವೀಕರಿಸಿದೆ,

ಉದಾ :	ಉರ್ದು	ಮರಾಠಿ	ಹಿಂದಿ / ಉರ್ದು
	ಸಿರ್ಪ್	ಖಪ್ಪರ್	ನಾಚ್
	ಬಜಾರ್	ಘಂಟಿ	ಗಿನ್
	ದವಾಕಾನ	ಗೊಳ್	ದಬಾನ
	ಹಿಂದಿ	ತೆಲುಗು	ಇಂಗ್ಲೀಷ್
	ಜಲ್ದಿ	ಬೋಗ್ಣೆ	ಇಸ್ಪ್ರಿಂಗು
	ಖುಲ್ಲಾ	ಚಿಕ್ಕ	ಸಿಮೇಟು
	ರೋಜು		ಪಬ್ಲಿಕ್
			ಅಂಡ್ರಾಲು ಇತ್ಯಾದಿ.

ಪ್ರಮಾಣ ಕನ್ನಡದಲ್ಲಿ (Standard Kannada) ಬಳಕೆಯಲ್ಲಿಲ್ಲದ ಹಳಗನ್ನಡ ರೂಪಗಳು ಇಲ್ಲಿ ಇನ್ನೂ ಬಳಕೆಯಲ್ಲಿವೆ.

ಉದಾ :	ಬಾನ	ಹರಿ	ಹೈನು
	ಖುರ	ಹೆಂಡಿ	ಕುಡು ಇತ್ಯಾದಿ.

ಇತರ ಕೆಲವು ಉಪಭಾಷೆಗಳಲ್ಲಿ ಬಳಸುವ 'ಗೊಂಟ' (ಹೊಂದಿಕೊಂಡ ಎಂಬರ್ಥದಲ್ಲಿ) ಪದವನ್ನು ಇಲ್ಲಿಯೂ ಬಳಸುತ್ತಾರೆ.

ಉದಾ : ತ್ವರೆಗೊಂಟ.

ಪ್ರಮಾಣ ಕನ್ನಡ (Standard Kannada) ಮತ್ತು ಜಿಲ್ಲೆಯ ಉಪಭಾಷೆಯಲ್ಲಿರುವ ಧ್ವನಿಸಾಮ್ಯ ಪದಗಳು ಉಪ ಆಕೃತಿಮಾಘಟ್ಟದಲ್ಲಿ ಬದಲಾವಣೆಯನ್ನು ತೋರಿಸುತ್ತವೆ.

ಉದಾ :

	S. K.		ಬೀದರ್ ಕನ್ನಡ	
{ ಕೀಳು }	/ಕೀಳ್/	ಕೀಳು	/ಕಿತ್/	ಕಿತ್ತು
	/ಕಿತ್/	ಕಿತ್ತ		ಕಿತ್ತ
{ ಉಣ್ಣು }	/ಉಣ್/	ಉಂಡ	/ಉಣ್/	ಉಂಡ
	/ಉಣ್ಣ್/	ಉಣ್ಣು	/ಉಣ್ಣ್/	ಉಣ್ಣು
		ಉಣ್ಣಾಕೆ	/ಉಳ್/	ಉಳ್ಳಾಕೆ
			/ಉವ್/	ಉಂಬಲ್ಲ
{ ಕುಡಿ }	/ಕುಡ್/	ಕುಡಿತಾನೆ	/ಕುಡ್/	ಕುಡೀತ
		ಕುಡ್ದೆ	/ಕೊಣ್/	ಕೊಂಡ
{ ಹೋಗು }	/ಹೊಗ್/	ಹೋಗು	/ಹೊಗ್/	ಹೋಗು
	/ಹೊ/	ಹೋದ	/ಹೊಯ್/	ಹೊಯ್ತು
{ ತಿನ್ನು }	/ತಿನ್/	ತಿಂದೆ	/ತಿನ್/	ತಿಂದ
	/ತಿನ್ನ್/	ತಿನ್ನಲ್ಲ	/ತಿಲ್/	ತಿಲ್ಲಾಕೆ
			/ತಿವ್/	ತಿಂಬಲ್ಲ

ಕ್ರಿಯಾಪದಗಳು ಕಾಲ, ಪುರುಷ, ವಚನಪ್ರತ್ಯಯವನ್ನು ತೆಗೆದುಕೊಂಡು ಸ್ವತಂತ್ರವಾಗಿ ವರ್ತಿಸುವುದರ ಜೊತೆಗೆ ಪ್ರಧಾನ ಕ್ರಿಯಾಪದ ಇನ್ನೊಂದು ಕ್ರಿಯಾ ಧಾತುವನ್ನು ಪಡೆಯುತ್ತದೆ, ಅಲ್ಲದೆ ಕಾಲಾದಿ ಪ್ರತ್ಯಯಗಳು ಅಪೇಕ್ಷಿತ ಧಾತುವಿಗೆ ಸೇರಿಸಲ್ಪಟ್ಟಿರುತ್ತವೆ.

ಉದಾ : ಕೊಡು — ಕೊಟ್ ಹಾಕು   ಹರಡು — ಹರಂಚಿ ಹಾಕು
ಹಣ್ಕು — ಹಣ್ಕ್ ಹಾಕು   — ಹಾರ್ ಹೊಡಿ

ನಕಾರ ಕ್ರಿಯಾಪದವೂ ಇದೇ ರೀತಿ ವರ್ತಿಸುತ್ತದೆ.

ಉದಾ : ಆಗಲ್ಲ — ಆಗಲ್ದ ಹೋಯ್ತು.
ಕೊಡಲಿಲ್ಲ — ಕುಡಲ್ದ ಹೋದ.

ನಾಮಪದಗಳಿಗೆ –ಹಾಕಿ ಕ್ರಿಯಾರೂಪವನ್ನು ಸೇರಿಸುವುದರ ಮೂಲಕ ಕ್ರಿಯಾವಿಶೇಷಣ ಸಮುಚ್ಚಯಗಳು ಉತ್ಪತ್ತಿಯಾಗುತ್ತವೆ.

ಉದಾ : ಬಗ್ಗಿ ನೋಡು — ತ್ಯಲಿ ಹಾಕಿ ನೋಡು.
ಹಣ್ಕು — ಹಣ್ಕ್ ಹಾಕಿ ನೋಡು.

ತೃತೀಯಾವಿಭಕ್ತಿಗೋಸ್ಕರವಾಗಿ -ಇಂದ ಪ್ರತ್ಯಯವನ್ನು ಸೇರಿಸುವುದರ ಬದಲು -ಹಚ್ಚಿ ಕ್ರಿಯಾರೂಪವನ್ನು ಸೇರಿಸುವುದರ ಮೂಲಕ ಪದಸಮುಚ್ಚಯ ಮಾಡಿ ಬಳಸಲಾಗಿದೆ.

ಉದಾ : ಕೊಡ್ಲಿಯಿಂದ — ಕೊಡ್ಡಿ ಹಚ್ಚಿ
ಹಾರೆಯಿಂದ — ಗುಸಿ ಹಚ್ಚಿ
ಕೊಡದಿಂದ — ಕೊಡ ಹಚ್ಚಿ

ಮರಿ ಎಂಬರ್ಥದಲ್ಲಿ ಪೆಟ್ಟಿ, ಪಿಲ್ಲೆ ಪದಗಳನ್ನು ಬಳಸುತ್ತಾರೆ. ಪೆಟ್ಟಿ ಎಂಬುದು ಕೋಳಿಯೊಂದಿಗೂ, ಪಿಲ್ಲೆ ಎಂಬುದು ಆಡು, ಹಂದಿಯೊಂದಿಗೂ ಬಳಕೆಯಾಗುತ್ತದೆ.

ಉದಾ : ಕೋಳಿಮರಿ — ಕೋಳಿಪೆಟ್ಟಿ
ಆಡಿನ ಮರಿ — ಆಡಪಿಲ್ಲೆ
ಹಂದಿಮರಿ — ಹಂದಿಪಿಲ್ಲೆ.

ಇಲ್ಲಿ ಬಳಸುವ ಕಾಯಿಲೆಯ ಹೆಸರುಗಳು ಪ್ರಮಾಣಕನ್ನಡ (S. K.) ಯಿಂದ ಭಿನ್ನವಾಗಿದ್ದು ಉತ್ತರಕರ್ನಾಟಕದಲ್ಲೂ ಅವೇ ಹೆಸರು ಕಂಡುಬರುತ್ತದೆ.

ಉದಾ : ಜ್ವರ ಬಂದಿದೆ — ಉರಿ ಹೊಂಟದ
ಕಣ್ಣಿನ ಕಾಯಿಲೆ — ಕಣ್ಣು ಬಂದದ

ಇವಲ್ಲದೆ, ಜಟ್ಕ್ಯ ಬ್ಯಾನಿ, ಡಬ್ಬಿಬ್ಯಾನಿ ಮೊದಲಾದವು ಇಲ್ಲಿ ಕೇಳಿಬರುತ್ತವೆ. ಇದಕ್ಕಾಗಿ ಇವರು ಬಳಸುವ ಔಷಧಿ :

ಗೋಲಿ = Tablets
ದವ = Medicine
ಮದ್ದು = Medicine

ಅಕ್ಕಿ ಎಂಬುದು ಇಲ್ಲಿ ಸಾಮಾನ್ಯ ಪದವಾಗಿ ಬಳಕೆಯಾಗುತ್ತದೆ. ಅಕ್ಕಿ ಪದದ ಒಂದೆ ನಿರ್ದಿಷ್ಟ ಕಾಳಿನ ಹೆಸರನ್ನು ವಿಶೇಷಣವಾಗಿ ಬಳಸುವುದರ ಮೂಲಕ ಧಾನ್ಯವನ್ನು ಗುರುತಿಸಲಾಗುತ್ತದೆ :

ಉದಾ : ಹಾರ್ಕಿನ ಅಕ್ಕಿ ನವಣೆ ಅಕ್ಕಿ
ಬರಗಿನ ಅಕ್ಕಿ ಕಳವಿ ಅಕ್ಕಿ

ಸಹಜ ಅಭ್ಯಾಸರೂಢಿ ಪದಗಳಾಗಿ ಕೆಳಗಿನ ಪದಗಳನ್ನು ಬಳಸಲಾಗುತ್ತದೆ.

ಅಕ್ಕೊ ಅಡೆ ಕಸಿ
ಕೇಸಿ ಏನದ ಇತ್ಯಾದಿ

ಬೇರೆ ಉಪಭಾಷೆಗಳಲ್ಲಿ ಕಾಣಸಿಗದ ಬೀದರ್ ಜಿಲ್ಲೆಯ ಕೆಲವು ಪದಸಮುಚ್ಚಯ ಗಳನ್ನು ನೋಡಬಹುದು.

ಉದಾ : ಜೈಟಿಗೆ ಬಂದ : ಯೌವನ ಕಳೆದು ವೃದ್ಧಾವಸ್ಥೆಗೆ ತಲುಪಿದ.
ಕೂಡಿ ಬಿದ್ದ : ವಯಸ್ಸಾಗಿ ತನ್ನ ಕೈಯಲ್ಲಿ ಏನೂ ಆಗದೆ ಇನ್ನೊಬ್ಬರ ಆಶ್ರಯಕ್ಕೆ ಬಿದ್ದ.
ಉಮರ್ಕ್ ಬಂದ : ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬಂದ.
ಗುಗ್ರಿ ಹಾಕು : ಕಾಳನ್ನು ಉಪ್ಪು ಹಾಕಿ ಬೇಯಿಸು.
ಬೋಳ್ ಗಡ್ಗಿ ಹಾಕು : ಕಾಳನ್ನು ತಿರುವಿ ಅದೇ ಕಾಳಿನ ಸಿಪ್ಪೆಯನ್ನ ಮೇಲಿಟ್ಟು ಸಿಪ್ಪೆಯನ್ನು ಸುಡುವುದರ ಮೂಲಕ ಕಾಳನ್ನು ಬೇಯಿಸುವುದು.
ಜೀವ ಹೊಡಿ : ಕೊಲೆ ಮಾಡು.
ಕೊಲ್ಲಿ ಹಾಕು : ಕೊಲೆ ಮಾಡು.
ಜಾನ್ ಹಾಕು : ಅನ್ನ ಬಸಿ.

ಬೀದರ್ ಉಪಭಾಷೆಯಲ್ಲಿ ವರ್ಣಸೂಚಿಯಾಗಿ ಅಥವಾ ವೃತ್ತಿಸೂಚಿಯಾಗಿ ಕೆಳಗಿನ ಹೆಸರುಗಳನ್ನು ಬಳಸುತ್ತಾರೆ.

ಬ್ರಾಹ್ಮಣರು — ಹಾರರು   ಗಾರೆ ಕೆಲಸದವರು — ಉಪ್ಪಾರ್ಗ್ರು
ಹೊಲಿಗೆ ಕೆಲಸದವ — ಶೇಣ್ಗ್ರು   ಅಕ್ಕಸಾಲಿಗರು — ಅಗಸಾಲರು
ಪಾತ್ರೆ ಸರಿ ಮಾಡುವವ — ಗಿಸ್ಡ್ರು.

ಕನ್ನಡ ನಾಡಿನಲ್ಲಿ ಪ್ರಚಲಿತವಿರುವಂತೆ ಋತುಗಳನ್ನು ಹೀಗೆ ಕರೆಯುತ್ತಾರೆ.

ಉದಾ : ಮಿರ್ಗ, ಪುಷ್ಯ, ಕಾರುಣ್ಣಿ.

'ಪರಿ' ಪದವನ್ನು ಹೊತ್ತು ಎಂಬರ್ಥದಲ್ಲೂ 'ಫಕಿ' ಪದವನ್ನು ಸಾರಿ, ಸಲ ಎಂಬರ್ಥದಲ್ಲೂ ಬಳಸುತ್ತಾರೆ.

ಉದಾ : ಚಂಜಿ ಪರಿ ಬಂದಿದ
ಐದು ಫಕಿ ಬಂದಿದ   ಇತ್ಯಾದಿ.

ಬೀದರ್ ಉಪಭಾಷೆ ಇತರ ಭಾಷೆಯಿಂದ ಪ್ರಭಾವಿತವಾದರೂ ಕನ್ನಡದ ಸಾರವನ್ನು ಸತ್ವವನ್ನು ಕಳೆದುಕೊಂಡಿಲ್ಲ ಎಂಬುದನ್ನು ಕೆಳಗಿನ ಶಬ್ದಗಳಲ್ಲಿ ಕಾಣಬಹುದು.

ಉದಾ : ಹುಗ್ಗಿ, ಗುಗಾಳ, ಅಡ್ಡಣಿಗಿ, ಕಷಾಯಿ, ಅಂಬ್ಲಿ, ಜಿಬಲಿಕೆ, ಕವ್‌ದಿ, ಕುಳ್ಳು, ಗ್ಯಾತ, ಮಿಳಿ, ಮಡಿ, ಹಿಂಡ್ಲು, ಮಯುರು, ನತ್ತು, ನೆಲು, ತೊರೆ ಇತ್ಯಾದಿ.

ಬೀದರ್ ಉಪಭಾಷೆಯಲ್ಲಿ ಕೆಲವು ಶಬ್ದಗಳು ಮೂಲಾರ್ಥವನ್ನು ಕಳೆದು ಕೊಂಡುದನ್ನು ಕೆಳಗಿನ ಉದಾಹರಣೆಗಳಲ್ಲಿ ಗುರುತಿಸಬಹುದು.

ಮುಚ್ಚಳ : ಮಡಿಕೆಯ ಮೇಲೆ ಮುಚ್ಚುವ ಮಣ್ಣಿನ ಮುಚ್ಚಳ.
ದೊಡ್ಡಿ : ಮೂರು, ನಾಲ್ಕು ಮನೆಗಳನ್ನು ಒಳಗೊಂಡ ಒಂದು ವಠಾರ. ಮನೆ ಎಂಬರ್ಥದಲ್ಲೂ ಬಳಸಲಾಗುತ್ತದೆ.
ದರವಜ : ಮನೆಯ ಮುಂದಿನ ಮುಖ್ಯದ್ವಾರ.

ಇಲ್ಲಿಯ ಜನರಿಗೆ ಹೂಗಳ ಪರಿಚಯ ಕಡಿಮೆ. ನೀವು ಕೇಳಿದರೆ ಸಾಮಾನ್ಯ ವಾಗಿ ಕೇಳಿಬರುವ ಹೆಸರು ಮಲ್ಲಿಯದು ಮಾತ್ರ.

ಹಣ್ಣುಗಳಲ್ಲಿ : ಸೇಪು, ಮೂಸಂಬಿ, ಮಳ್ಳಿಹಣ್ಣು, ಸೀತಾಫಳ, ಸಿಂಬೆ, ಬಾಳೆ ಹಣ್ಣು, ಮತ್ತು ಸಂತ್ರ್ಯ (ಕಿತ್ತಳೆ) ಇಲ್ಲಿಯ ಜನರಿಗೆ ಪರಿಚಯವಿವೆ.

ಬೀದರ್ ಉಪಭಾಷೆಯ ಕೆಲವೊಂದು ಅನುಕರಣ ಪದಗಳು ಇತರ ಉಪಭಾಷೆಗೆ ಭಿನ್ನವಾಗಿವೆ.

ಘುಡುಡು ಘುಡುಡು	— ಗುಡುಗಿನ ಸದ್ದು
ಧನನನನನ	— ನೀರು ಹರಿಯುವ ಶಬ್ದ
ಖನನನನನ	— ಮಿಂಚಿನ ಆರ್ಭಟ
ಭರ‍್ರರ‍್ರರ	— ಸುಡುವ ಶಬ್ದ
ಭರ‍್ರರ‍್ರರ	— ನಡಿಗೆ
ಧಡ ಧಡ	— ಅಂಜಿಕೆ
ಥರ್ ಥರ್ ಥರ್	— ಅಂಜಿಕೆ
ಫಟ್ ಫಟ್ ಫಟ್	— ಹೊಡೆತ
ರಪ್ ರಪ್ ರಪ್	— ಹೊಡೆತ
ಗುರ್ ಗುರ್	— ನಿದ್ದೆ
ಫಟ್ ಫಟ್	— ಕೇರುವಿಕೆ
ವಡಂಗ್ ವಡಂಗ್	— ಮಜ್ಜಿಗೆ ಕಡೆತ
ಲೊಡಂಗ್ ಲೊಡಂಗ್	— ಬತ್ತಲೆ ನಡಿಗೆ
ಗಟ್ ಗಟ್	— ಕುಡಿತ
ಗರ್ ಗರ್	— ಬರವಣಿಗೆ
ಥೈ ಥೈ	— ಕುಣಿತ
ಪರ್ರ್	— ಹಾರಿಕೆ
ಟರ್	— ಹರಿಯುವಿಕೆ
ಭಗ್ಗ್	— ಉರಿಯುವಿಕೆ
ಧುಮ್	— ನೀರಿಗೆ ಹಾರುವಿಕೆ

ವಿಭಕ್ತಿ :

ಪ್ರಥಮಾ ವಿಭಕ್ತಿ ಪ್ರತ್ಯಯ -ಉ. ಉದಾ : ನಾನು, ನೀನು, ಅದು, ದ್ವಿತೀಯಾ ವಿಭಕ್ತಿಪ್ರತ್ಯಯ -ಅನ್ನು ಗೆ ಬದಲಾಗಿ ಚತುರ್ಥಿ ವಿಭಕ್ತಿ -ಗಿ ಬಳಸುತ್ತಾರೆ; ಅಥವ ಶೂನ್ಯಪ್ರತ್ಯಯವಿರುತ್ತದೆ.

ಉದಾ : ಕರೀಗಿ ದವಖಾನಿಗ್ ಒಯ್ದಿದ
ಮಗ್ಳೀಗ್ ಸಾಲೀಗ್ ಕಳ್ಸಿದ
ಎಮ್ಮಿ ಕಟ್ಟಿದ
ಇತ್ಯಾದಿ

ತೃತಿಯಾ ವಿಭಕ್ತಿ ಪ್ರತ್ಯಯಗಳಾಗಿ -ಇಂದ, -ಲೀದ, -ಸಿಂದ, -ದಿಂದ, -ಲೆ ಬಳಕೆಯಾಗುತ್ತವೆ.

ರೇಪ್ಗಿಲಿಂದು ಮಚ್ಗಿ ಕಡ್ದಿದ.
ಮುಗುಲ್ನಿಂದು ಮಳಿ ಬಿದ್ದದ.
ಮಟ್ಟೀಲಿ ನೀರು ತಗ್ದ.
ಕೈಲೆ ಹೊಡ್ದ
ದುಕಾನ್‌ದಿಂದ ಬಂದಿದ.

ತೃತೀಯಾ ವಿಭಕ್ತಿಯ -ಇಂದ ಪ್ರತ್ಯಯ ಎರಡರ್ಥವನ್ನು ನೀಡುತ್ತದೆ : ೧) ಮೂಲವನ್ನು ಸೂಚಿಸುತ್ತದೆ. ಅಂದರೆ ಯಾವ ಮೂಲದಿಂದ ಆ ಕಾರ್ಯ ನಡೆಯಲ್ಪಟ್ಟಿತು ಎಂಬುದನ್ನು ತಿಳಿಸುತ್ತದೆ. ಇದಕ್ಕೆ ಸಮಾನವಾಗಿ ಇಂಗ್ಲೀಷಿನ Ablative case ನಿಲ್ಲುತ್ತದೆ. ೨) ಕಾರ್ಯನಿರ್ವಹಣೆಗೆ ಸಹಾಯಕ ವಸ್ತುವನ್ನು ತಿಳಿಸುತ್ತದೆ. ಅಂದರೆ ಏನನ್ನು ಉಪಯೋಗಿಸಿ ಆ ಕೆಲಸ ನಡೆಯಿತು ಎಂಬರ್ಥದಲ್ಲಿ. ಇದನ್ನೆ ಇಂಗ್ಲೀಷಿನ Instruemental case ಗೆ ಹೋಲಿಸಬಹುದು. ಮೇಲಿನ ಉದಾಹರಣೆಗಳಲ್ಲಿ ೨ ಮತ್ತು ೫ ರ ನಾಮಪ್ರತ್ಯಯಗಳು ಮೊದಲಿನ ರೀತಿಯ ಕಾರ್ಯ ಮಾಡಿದರೆ, ೧, ೩ ಮತ್ತು ೪ ಎರಡನೆಯ ರೀತಿಯ ಕಾರ್ಯ ಮಾಡುತ್ತವೆ.

ಚತುರ್ಥಿವಿಭಕ್ತಿ ಪ್ರತ್ಯಯಗಳಾಗಿ ಗs/ಗೆ/ಗಿ/ಕ್ಕs/ಕ ಬಳಸುತ್ತಾರೆ.

ಉದಾ : ಕೊಳ್ಳಿಗಿ, ಕೊಳ್ಳಿಗs, ಕೊಳ್ಳಿಗೆ
ಹಮೇಷಕ್ಕ, ಯಾಳ್ಯಾಕ

ಪಂಚಮಿವಿಭಕ್ತಿ ಪ್ರತ್ಯಯಗಳು -ಆಗೆ, -ಅಲ್ಲಿ.

ಉದಾ : ಮುಚ್ಚಳದಾಗೆ ಹೊರಸ್ನಲ್ಲಿ.

ಷಷ್ಠಿವಿಭಕ್ತಿ ಪ್ರತ್ಯಯ -ಅದ್, -ಇನ್, -ಅನ್

ಉದಾ : ತಾಮ್ರದ್ ಕೊಡ, ಗಿಡದ್ ಪಂಟಿ.
ತಗ್ಡಿನ್ ಬಾಗ್ಲ, ತಮ್ಮನ್ ಮನಿ

ತರವಾಚಕ ಪ್ರತ್ಯಯ : –ಕ/–ಕಿನ್ನ/–ಕಿನ

ಉದಾ : ನನ್ಕ ದೊಡ್ಡವ ನನ್ಕಿನ್ನ ದೊಡ್ಡವ ನನ್ಕಿನ ದೊಡ್ಡವ

ವಚನ ಪ್ರತ್ಯಯಗಳು : ಪುರುಷ ಬಹುವಚನ ಪ್ರತ್ಯಯವಾಗಿ –ರು ಮತ್ತು –ದೇರು ಬಳಸಲಾಗುತ್ತದೆ. ಪ್ರಾಣಿ ಮತ್ತು ವಸ್ತು ಬಹುವಚನ ಪ್ರತ್ಯಯವಾಗಿ ಗೋಳು/ಗುಳು ಬಳಸಲಾಗುತ್ತದೆ.

ಉದಾ : ಅವ — ಅವರು ಅತ್ತಿ — ಅತ್ತಿದೇರು
ಕರು — ಕರುಗೋಳು/ಕರುಗುಳು

ಪುರುಷವಾಚಕ ಪ್ರತ್ಯಯ :

–ಅ. ನಾ ತಿಂತ ಅವ ತಿಂತ ಅವರು ತಿಂತಾರ ಅದು ತಿಂತದ
–ವು. ನಾವು ತಿಂತ್ಯೆವು
–ಎ. ನಿ ತಿಂತೆ
–ಇ. ನೀವು ತಿಂತೀರಿ
–ವ. ಅವರು ತಿಂತಾವ
ಅವು ತಿಂತಾವ

ಅಂಕೆಗಳು : ಎಣಿಕೆಗಾಗಿ ಬೀದರ್ ಉಪಭಾಷೆಯಲ್ಲಿ ಮರಾಠಿ ಅಂಕೆಗಳನ್ನು ಬಳಸುತ್ತಾರೆ. ಉದ್ದೇಶಪೂರ್ವಕವಾಗಿ ಕೇಳಿದಲ್ಲಿ ಕನ್ನಡದ ಸಂಖ್ಯೆಗಳನ್ನು ಒಂಬತ್ತರ ವರೆಗೆ ಹೇಳಬಲ್ಲರು. ಮುಂದೆ ಸಹಜವಾಗಿ ಮರಾಠಿ ಸಂಖ್ಯೆಗಳನ್ನು ಮುಂದು ವರಿಸುತ್ತಾರೆ.

ಉದಾ : ಒಂದು, ಯಡ್ಡು, ಮೂರು,...... ವಂಬತ್ತು, ಧ, ಅಕ್ರ, ಬಾರ ಇತ್ಯಾದಿ.

ಸೂರರ ಎಣಿಕೆಗಾಗಿ ಮರಾಠಿ ಪದರಚನೆಗಳನ್ನು ಬಳಸುತ್ತಾರೆ.

ಉದಾ : ಏಕಷೆ, ದೋನಷೆ, ತೀನಷೆ ಇತ್ಯಾದಿ.

ಸಾವಿರದ ಎಣಿಕೆಗಾಗಿ ಕನ್ನಡ ಮತ್ತು ಮರಾಠಿ ಸಂಖ್ಯಾರಚನೆಗಳನ್ನು/ಪದ ಸಮುಚ್ಚಯವನ್ನು/ಬಳಸುತ್ತಾರೆ–

ಉದಾ : ಒಂದ್ ಹಜಾರ್, ಯಡ್ ಹಜಾರ್ ಇತ್ಯಾದಿ.

ನಿರ್ದೇಶಕ ಪದಸಮುಚ್ಚಯವಾಗಿ ಸಂಖ್ಯೆಗಳನ್ನು ಬಳಸುವಲ್ಲಿ ಮರಾಠಿ ಸಂಖ್ಯೆ ಗಳಿಗೆ ಕನ್ನಡ ಪ್ರತ್ಯಯದ ಜೋಡಣೆ ಕಂಡುಬರುತ್ತದೆ.

ಉದಾ : ಪಯಿಲಾದವ ದೂಸ್ರಾದವ ಇತ್ಯಾದಿ.

ಕ್ರಿಯಾಪದಗಳನ್ನು ಮೂಲ ಕನ್ನಡ ಕ್ರಿಯಾರೂಪ ಮತ್ತು ಸ್ವೀಕೃತ ಕ್ರಿಯಾ ರೂಪ ಎಂದು ವಿಂಗಡಿಸಬಹುದು. ಸ್ವೀಕೃತ ರೂಪಗಳನ್ನು ಮೂಲ ರೂಪದಲ್ಲಿ ಕೆಲವನ್ನು ಬಳಸಿದರೆ ಕೆಲವನ್ನು ಕನ್ನಡದ ಕ್ರಿಯಾಪ್ರತ್ಯಯ –ಇಸು ಸೇರಿಸಿ ಬಳಸ ಲಾಗಿದೆ.

ಉದಾ : ತಿನ್ನು ನಾಚ್ ದಬಾಯ್ಸು
ಉಣ್ಣು ಗಿನ್ ಮಿಲಾಯ್ಸು
ಬಾ ಚಿಡಿ ಜುಕಾಸು

ಮರಾಠಿ ಹಾಗೂ ಹಿಂದಿ ಕ್ರಿಯಾಸಮುಚ್ಚಯಕ್ಕೆ ಸಂವಾದಿಯಾಗಿ ಕನ್ನಡ ಕ್ರಿಯಾ ಸಮುಚ್ಚಯ ನಿರ್ಮಾಣವನ್ನು ಇಲ್ಲಿ ಗುರುತಿಸಬಹುದು.

ಉದಾ : ಸಾಕ್ ಮಾಡು ಬಸ್ ಕರೊ
ಕೊಳ್ಳಿ ಹಾಕು ಮಾರ್ ಡಾಲೊ
ಗಿಡ ಹಚ್ಚು ಝಾಡ್ ಲಗಾವ್

ಕಾಲಪ್ರತ್ಯಯಗಳನ್ನು ಭೂತಕಾಲಪ್ರತ್ಯಯಗಳು ಮತ್ತು ಭವಿಷ್ಯತ್‌ಕಾಲ ಪ್ರತ್ಯಯಗಳೆಂದು ವಿಂಗಡಿಸಬಹುದು.

ಭೂತಕಾಲಪ್ರತ್ಯಯಗಳು : –ದ–, –ಡ–, –ತ–

ನಾ ತಿಂದ
ಅದು ತಿಂತು
ನಾ ಕಂಡಿದ

ಭವಿಷ್ಯತ್ ಪ್ರತ್ಯಯ : –ತ–

ನಾ ತಿಂತ
ನಿ ತಿಂತೆ ಇತ್ಯಾದಿ—

ಬೀದರ್ ಜಿಲ್ಲೆ ಕನ್ನಡದೇಶದಿಂದ ಬಹಳಕಾಲದವರೆಗೆ ಹೊರಗೆ ನಿಂತುದು ದರಿಂದ ಮತ್ತು ದ್ರಾವಿಡ ಭಾಷೆಯಾದ ತೆಲುಗಿನ ಜೊತೆ ಹೆಚ್ಚಿನ ಸಂಪರ್ಕ ಉಳಿಸಿ ಕೊಂಡುದುದರಿಂದ ಕನ್ನಡದ ಇತರ ಪ್ರಭೇದಗಳು ಬದಲಾಯಿಸಿಕೊಂಡ ಮತ್ತು ಇತರ ದ್ರಾವಿಡ ಭಾಷೆಗಳಲ್ಲಿ ಬಳಸುತ್ತಿರುವ ಶಬ್ದಗಳನ್ನು ಉಳಿಸಿಕೊಂಡಿದೆ.

	ಬೀದರ್	ಇತರ ಕನ್ನಡ	ತೆಲುಗು	ತಮಿಳು	ತುಳು	ಕೊಂಡ
ಉದಾ ;	ಹಂದ್ರು	ಚಪ್ಪರ	ಪಂದಲ್			
	ಗುಂಜಿ	ಕಂಭ		ಕುಚ್ಚವ್	ಗುಜ್ಜಿ	
	ದ್ವಾಮಿ	ಸೊಳ್ಳೆ	ದೋಮ			ದೋಮೆ
	ನಾನು	(ಒಂದು ಆಭರಣ)	ನಾನ್	ನಾನಲ್		
	ಕಂಟಿ ಇರು			ಕಟ್ಟೆರುಂಬು		

ಇತ್ಯಾದಿ.

ಬೀದರ್ ಜಿಲ್ಲೆ ಈಗ ಕರ್ನಾಟಕಕ್ಕೇ ಸೇರಿದ್ದು, ಶಿಕ್ಷಣದಿಂದಾಗಿ ಸಂಪೂರ್ಣವಲ್ಲದಿದ್ದರೂ ಕೆಲವೊಂದು ದೃಷ್ಟಿಯಿಂದಲಾದರೂ ಪುನಃ ಬದಲಾವಣೆಯನ್ನು ಪಡೆಯುತ್ತಿದೆ ಎನ್ನಬಹುದು. ಈಗಿನ ಪೀಳಿಗೆ ಕಳೆದಂತೆ ಮುಂದಿನ ಪೀಳಿಗೆ ವ್ಯವಹಾರಕ್ಕಾಗಿ ಕನ್ನಡವನ್ನೇ ಬಳಸುವ ಪ್ರಮೇಯವನ್ನು ನಾವು ನಿರೀಕ್ಷಿಸಬಹುದು.

• •

* (ಶ್ರೀಯುತ ಗಿರಿಧರ ಅವರು ತಿಳಿಸಿದಂತೆ ಬೀದರ್ ಕನ್ನಡವನ್ನು Pidginized ಕನ್ನಡ ಎನ್ನುವಂತಹ ಕಲ್ಪನೆ ಮೇಲ್ನೋಟಕ್ಕೆ ಕಂಡರೂ ಅದರ ಒಟ್ಟು ರಚನೆಗಳನ್ನು ಗಮನಿಸಿದಾಗ pidgin ಭಾಷೆ ಹುಟ್ಟಬಹುದಾದ ಬೆಳೆದಿರಬಹುದಾದ ಅವಸ್ಥೆಗಳನ್ನು ಸಂಪೂರ್ಣವಾಗಿ ಹೊಂದಿಲ್ಲವಾದ್ದರಿಂದ ಕೈ ಬಿಡಬೇಕಾಗುತ್ತದೆ. ಬೀದರ್ ಕನ್ನಡ ಮತ್ತು ಇತರೆ ಕನ್ನಡ ಉಪಭಾಷಾ ಜನರಲ್ಲಿ ಪರಸ್ಪರ ಗ್ರಹಿಕೆಶೂನ್ಯತೆಗೆ ಕಾರಣವಾಗಿ ಅತಿಯಾದ ಇತರ ಭಾಷಾ ಪ್ರಭಾವವೇ ಕಾರಣ. ಇನ್ನು ವಿಷಯ ಸಂಗ್ರಹಣೆಯಲ್ಲಿ ನೆರವಾದ ಶಿವರಾಯ ಪಾಟೀಲ, ಪುಂಡ್ಲೀಕ ಪಾಟೀಲ, ವೈಜನಾಥ ಪಾಟೀಲ, ಶಂಕರಪ್ಪ ಸಸ್ನಾಪುರ ಮತ್ತು ಇತರರಿಗೆ ನನ್ನ ಕೃತಜ್ಞತೆಗಳು).

ಕಲಬುರ್ಗಿ ಜಿಲ್ಲೆಯ ಕನ್ನಡ

• ಬಿ. ಮಲ್ಲಿಕಾರ್ಜುನ

೧.೧.೧ ಈ ಲೇಖನದ ಮುಖ್ಯ ಉದ್ದೇಶ ಕಲಬುರ್ಗಿ ಕನ್ನಡದ ರೂಪರೇಷೆಗಳನ್ನು ಸಂಕ್ಷಿಪ್ತವಾಗಿ ಕೊಡುವುದು ಮತ್ತು ಕಲಬುರ್ಗಿ ಕನ್ನಡಕ್ಕೆ ಮತ್ತು ಶಿಷ್ಟಕನ್ನಡಕ್ಕೆ ಇರುವ ಮುಖ್ಯ ಭಿನ್ನತೆಗಳನ್ನು ತೋರಿಸುವುದು.

೧.೧.೨ ಕಲಬುರ್ಗಿ ಜಿಲ್ಲೆಯ ಉತ್ತರಕ್ಕೆ ಕರ್ನಾಟಕದ ಬೀದರ್ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಗಳೂ, ಪೂರ್ವಕ್ಕೆ ಆಂಧ್ರಪ್ರದೇಶದ ಮೇಡಕ್ ಮತ್ತು ಮೆಹಬೂಬ್ ನಗರ ಜಿಲ್ಲೆಗಳೂ ಪಶ್ಚಿಮಕ್ಕೆ ಕರ್ನಾಟಕದ ಬಿಜಾಪುರ ಮತ್ತು ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಗಳೂ ಮತ್ತು ದಕ್ಷಿಣಕ್ಕೆ ಕರ್ನಾಟಕದ ರಾಯಚೂರು ಜಿಲ್ಲೆಗಳೂ ಇವೆ.

೧,೨.೧ ಕಲಬುರ್ಗಿ ಜಿಲ್ಲೆಯು ಸುಮಾರು ಹತ್ತನೆಯ ಶತಮಾನದಿಂದ ಮರಾಠಿ ಮತ್ತು ೧೩ ನೇ ಶತಮಾನದ ಕಡೆಯಭಾಗದಿಂದ ಉರ್ದುವಿನ ಸಂಪರ್ಕದಲ್ಲಿರುವುದರಿಂದ ಈ ಭಾಷೆಗಳ ಪ್ರಭಾವವು ಕಲಬುರ್ಗಿ ಕನ್ನಡದ ಮೇಲೆ ವಿಶೇಷವಾಗಿ ಆಗಿರುವುದು ಕಂಡುಬರುತ್ತದೆ.

೧.೨.೨ ಕಲಬುರ್ಗಿ ಜಿಲ್ಲೆಯಲ್ಲಿ ೧೯೬೧ರ ಜನಗಣತಿಯ ಪ್ರಕಾರ ೯,೨೬,೪೨೨ ಜನ ಕನ್ನಡ ಮಾತನಾಡುವವರೂ ೨,೩೯,೯೦೦ ಜನ ಉರ್ದು ಮಾತನಾಡುವವರೂ ೧,೦೮,೯೨೦ ಜನ ತೆಲುಗು ಮಾತನಾಡುವವರೂ ೪೪,೫೪೧ ಜನ ಮರಾಠಿ ಮಾತನಾಡುವವರೂ ೬೩,೦೯೭ ಜನ ಲಂಬಾಣಿ ಮಾತನಾಡುವವರೂ ೧೦,೮೯೨ ಜನ ಹಿಂದಿ ಮಾತನಾಡುವವರೂ ೨,೦೧೨ ಜನ ಗುಜರಾತಿ ಮಾತನಾಡುವವರೂ ೧.೫೧೧ ಮೇವಾರಿ ಮಾತನಾಡುವವರೂ ೧,೦೪೮ ಜನ ತಮಿಳು ಮಾತನಾಡುವವರೂ ೫೪೪ ಜನ ಕೊರವ ಭಾಷೆಯನ್ನಾಡುವವರೂ ೧೩೬೦ ಜನ ಇತರ ಭಾಷೆಗಳನ್ನಾಡುವವರೂ ಇದ್ದಾರೆ.

೧.೨.೩ ಉರ್ದುವನ್ನು ಮಾತೃಭಾಷೆಯನ್ನಾಗಿ ಉಳ್ಳ ಜನರು ಕಥಿಅ ಸಂಖ್ಯೆಯಲ್ಲಿ ಇರುವುದರಿಂದ ಕಲಬುರ್ಗಿ ಜಿಲ್ಲೆಯಲ್ಲಿ ಹೆಚ್ಚು ಜನ ದ್ವಿಭಾಷಿಗಳು ಅಂದರೆ ಹೆಚ್ಚು ಜನ ಕನ್ನಡ ಮತ್ತು ಉರ್ದು ಭಾಷೆಗಳೆರಡನ್ನೂ ಉಪಯೋಗಿಸುವವರು.

ಆದರೆ ಅವುಗಳನ್ನು ಉಪಯೋಗಿಸುವ ಸಾಮಾಜಿಕ ಸಂದರ್ಭ ಬೇರೆಯಾಗಿರಬಹುದು. ಅಂತೆಯೇ ಮರಾಠಿ ಕನ್ನಡ ದ್ವಿಭಾಷಿಗಳ ಸಂಖ್ಯೆಯೂ ಸಹ ಗಣನೀಯವಾಗಿಯೇ ಇದೆ.

೨.೧.೧ ಕಲಬುರ್ಗಿ ಕನ್ನಡದ ಒಟ್ಟು ಧ್ವನಿಮಾ ಸಂಖ್ಯೆ ೩೯. ಹನ್ನೊಂದು ಸ್ವರಗಳು ಇಪ್ಪತ್ತೇಳು ವ್ಯಂಜನಗಳು ಮತ್ತು ನಾಸಿಕ್ಯತೆ (Nasalization).

೨.೨.೧ ಕಲಬುರ್ಗಿ ಕನ್ನಡದ ಹನ್ನೊಂದು ಸ್ವರಗಳಲ್ಲಿ ಆರು ಹ್ರಸ್ವಸ್ವರಗಳಾಗಿಯೂ ಮತ್ತು ಐದು ದೀರ್ಘಸ್ವರಗಳಾಗಿಯೂ ಇವೆ.

೨.೨.೨ ಹ್ರಸ್ವಸ್ವರಗಳು :

i		u
e	ə	o
	a	

೨.೨.೩ ದೀರ್ಘಸ್ವರಗಳು :

i:		u:
e:		o:
	a:	

೨.೨.೪ ಅವನತ ಮಧ್ಯಧ್ವನಿಮಾ / a /, ಅವನತ ಮಧ್ಯಧ್ವನಿಮಾ / a / ಮತ್ತು ನಡುಮಧ್ಯ ಮಧ್ಯಧ್ವನಿಮಾ / ə / ಆಗಿ ಒಡೆದಿದೆ. ಆದರೆ ನಡುಮಧ್ಯ ಮಧ್ಯಧ್ವನಿಮಾ / ə / ದ ದೀರ್ಘ ಧ್ವನಿಮಾ / ə: / ಕಲಬುರ್ಗಿ ಕನ್ನಡದಲ್ಲಿಲ್ಲ.

೨.೩.೧ ವ್ಯಂಜನಗಳು :

p	t	ṭ	c	č	k
p	d	ḍ	j	ǰ	g
m	n	ṇ			n
f	s			š	x
v	z			y	h
	l	ḷ			
	r				

೨.೩.೨ ಮೊದಲೇ ಹೇಳಿದಂತೆ ಉರ್ದು ಮತ್ತು ಮರಾಠಿಯ ಸಂಪರ್ಕದಲ್ಲಿ ಕಲಬುರ್ಗಿ ಕನ್ನಡವು ಶತಮಾನಗಳ ಕಾಲದಿಂದ ಇರುವುದರಿಂದ x z c j ಧ್ವನಿಮಾಗಳು ಕಲಬುರ್ಗಿ ಕನ್ನಡದಲ್ಲಿವೆ.

೩.೧.೧ ಶಿಷ್ಟಕನ್ನಡದಲ್ಲಿ 'ಎ'ಕಾರಾಂತ್ಯ ಆಗಿರುವ ನಾಮಪದಗಳು ಕಲಬುರ್ಗಿ ಕನ್ನಡದಲ್ಲಿ 'ಇ'ಕಾರಾಂತ್ಯವಾಗಿವೆ.

ಶಿಷ್ಟಕನ್ನಡ	ಗುಲ್ಬರ್ಗ ಕನ್ನಡ
ಉಣ್ಣೆ	ಉಣ್ಣಿ
ಕಡಲೆ	ಕಡ್ಲಿ
ಕಟ್ಟೆ	ಕಟ್ಟಿ

೩.೧.೨ ಶಿಷ್ಟಕನ್ನಡದಲ್ಲಿ 'ಉ'ಕಾರಾಂತ್ಯ ಆಗಿರುವ ನಾಮಪದಗಳು ಕಲಬುರ್ಗಿ ಕನ್ನಡದಲ್ಲಿ 'ಅ' [ə]ಕಾರಾಂತ್ಯವಾಗಿವೆ.

ಶಿಷ್ಟಕನ್ನಡ	ಗುಲ್ಬರ್ಗ ಕನ್ನಡ
ಮುಳ್ಳು	ಮುಳ್ಳ
ಆಳು	ಆಳ
ಇವತ್ತು	ಇವತ್ತ

೩.೧.೩ ಶಿಷ್ಟಕನ್ನಡದ ನಾಮಪದ ಮಧ್ಯದಲ್ಲಿರುವ 'ಏ' 'ಯಾ' ಆಗಿ ಕಲಬುರ್ಗಿ ಕನ್ನಡದಲ್ಲಿ ಬಳಕೆಯಾಗುತ್ತಿದೆ.

ಶಿಷ್ಟಕನ್ನಡ	ಗುಲ್ಬರ್ಗ ಕನ್ನಡ
ಬೇಟೆ	ಬ್ಯಾಟಿ
ಬೇಸಿಗೆ	ಬ್ಯಾಸಗಿ

೩.೧.೪ ಪಾರ್ಶ್ವಿಕ ವ್ಯಂಜನಗಳ ಮುಂದೆ ಉನ್ನತಸ್ವರ ಇರುವ ನಾಮಪದಗಳನ್ನುಳಿದು ಇತರ ನಾಮಪದಗಳ ಮಧ್ಯದಲ್ಲಿರುವ 'ಒ' 'ವ' ಆಗಿಯೂ 'ಓ' 'ವ' ಆಗಿಯೂ ಕಲಬುರ್ಗಿ ಕನ್ನಡದಲ್ಲಿ ಪರಿವರ್ತಿತವಾಗಿವೆ.

ಶಿಷ್ಟಕನ್ನಡ	ಗುಲ್ಬರ್ಗ ಕನ್ನಡ
ಹೊಲ	ಹ್ವಲ
ಕೋಣ	ಕ್ವಾಣ

೪.೧.೧ ಸಾಧಿತ ನಾಮಪ್ರಕೃತಿ :

ಶಿಷ್ಟಕನ್ನಡದಲ್ಲಿ : ನೋಡು, ಆಡು, ಓಡು ಇತ್ಯಾದಿ ಕ್ರಿಯಾಪದಗಳಿಂದ ನೋಟ, ಆಟ, ಓಟ ಇತ್ಯಾದಿ ನಾಮಪ್ರಕೃತಿಗಳು ಸಿದ್ಧಿಸುತ್ತವೆ. ಆದರೆ ನಗು, ಉಗುಳು, ನಡುಗು ಗುಡುಗು ಇತ್ಯಾದಿ ಪದಗಳು ಶಿಷ್ಟಕನ್ನಡದಲ್ಲಿ ನಾಮಪ್ರಕೃತಿಗಳಾಗಿ ವಿಭಕ್ತಿ ಪ್ರತ್ಯಯಗಳನ್ನು ಕ್ರಿಯಾಪ್ರಕೃತಿಗಳಾಗಿ ಕಾಲಪ್ರತ್ಯಯಗಳನ್ನೂ ಸ್ವೀಕರಿಸುತ್ತವೆ.

ಕಲಬುರ್ಗಿ ಕನ್ನಡದಲ್ಲಿ ಉಗುಳು, ಗುಡುಗು, ನೆಗು, ನಡಗು ಇತ್ಯಾದಿಗಳು ಕ್ರಿಯಾಪ್ರಕೃತಿಗಳು ಮಾತ್ರವಾಗಿದ್ದು ಕಾಲಪ್ರತ್ಯಯಗಳನ್ನು ಮಾತ್ರ ಸ್ವೀಕರಿಸುತ್ತವೆ. ಈ ಕ್ರಿಯಾಪ್ರಕೃತಿಗಳ ಅಂತ್ಯದ [–ಉ] ಬಿದ್ದುಹೋಗಿ –ಅ [–ಂ ಅಥವಾ]'–ಇ' ಸೇರಿ ನಾಮಪ್ರತ್ಯಯ ಸಿದ್ಧಿಸುತ್ತವೆ ಮತ್ತು ಉಗ್ಳ, ಗುಡ್ಗ, ನಡ್ಗ, ನಗಿ ಇತ್ಯಾದಿ ಸಾಧಿತನಾಮಪ್ರಕೃತಿಗಳು ವಿಭಕ್ತಿಪ್ರತ್ಯಯಗಳನ್ನು ಸ್ವೀಕರಿಸುತ್ತವೆ.

೪.೨.೧ ಸರ್ವನಾಮಗಳು :

ಏಕವಚನ

ಪ್ರಥಮ ಪುರುಷ		ನಾ̅ [nā:]	ನಾ [nā]
ದ್ವಿತೀಯ ಪುರುಷ		ನಿ [ni]	
ತೃತೀಯ ಪುರುಷ	[ಪು]	ಅವ̅ [avā]	ಇವ̅ [ivā]
	[ಸ್ತ್ರೀ]	ಅಕಿ [aki]	ಇಕಿ [iki]
	[ನ]	ಅದು [adu]	ಇದು [idu]

ಬಹುವಚನ

ಪ್ರಥಮ ಪುರುಷ	ನಾವು
ದ್ವಿತೀಯ ಪುರುಷ	ನೀವು
ತೃತೀಯ ಪುರುಷ	ಅವ್ರು
	ಇವ್ರು
	ಅವು
	ಇವು

ಆತ್ಮಾರ್ಥಕ ಸರ್ವನಾಮ : ಏಕವಚನ : ತಾ̅ [tā]
ಬಹುವಚನ : ತಾವು [ta:vu]

೪.೨.೨ ಕಲಬುರ್ಗಿ ಕನ್ನಡದಲ್ಲಿ ಶಿಷ್ಟಕನ್ನಡದ ನಾನು ಅವ್‌ನು, ಇವ್‌ನು ತಾನು, ಸರ್ವನಾಮಗಳ ಕೊನೆಯ ಅಕ್ಷರಗಳು ಬಿದ್ದುಹೋಗಿ ಅವುಗಳ ಹಿಂದಿನ ಅಕ್ಷರ ಗಳು ಅನುನಾಸಿಕರಣ ಹೊಂದಿ, ನಾ̅, ಅವ̅, ಇವ̅, ತಾ̅, ಆಗಿವೆ.

ಶಿಷ್ಟಕನ್ನಡದ ತೃತೀಯಪುರುಷ ಏಕವಚನ ಸ್ತ್ರೀಲಿಂಗ ಸರ್ವನಾಮ ಅವ್‌ಳು / ಇವ್‌ಳು ಗಳಿಗೆ ಬದಲಾಗಿ ಗುಲ್ಬರ್ಗ ಕನ್ನಡದಲ್ಲಿ ಅಕಿ / ಇಕಿ ಇವೆ.

೪.೩.೧ ಬಹುವಚನ :

ಕಲಬುರ್ಗಿ ಕನ್ನಡದಲ್ಲಿ ಬಹುವಚನ ಪ್ರತ್ಯಯಗಳು ಐದು : –ರು, –ಗೊಳು, –ಳ್ಳು, –ದರು, –ಅನ್‌ದ್ರು. ಮಾನವ ವಾಚಕಗಳಿಗೆ [Rational nouns] –ರು ಪ್ರತ್ಯ

ಯವೂ [ಉದಾ : ಕುಣ್‌ಟ್ರು] ಬಂಧುವಾಚಕಗಳಿಗೆ –ದೆರು ಹಾಗೂ ಅನ್‌ದ್ರು ಪ್ರತ್ಯಯಗಳೂ [ಉದಾ : ಅಣ್‌ದೆರು, ಅಣ್ಣನ್‌ದ್ರು] ಮಗು ಇತ್ಯಾದಿ ನಾಮಪದ ಗಳಿಗೆ –ಕ್ಳು ಪ್ರತ್ಯಯವೂ [ಉದಾ : ಮಕ್ಳು] ಮಾನವೇತರವಾಚಕಗಳಿಗೆ [Irrational nouns] –ಗೊಳು ಪ್ರತ್ಯಯವೂ ಹತ್ತುತ್ತವೆ. [ಈ ಲೇಖನದುದ್ದಕ್ಕೂ ತಿಳಿಸುವ ನಿಯಮಗಳಿಗೆ ಇರುವ ಅಪವಾದಗಳ ವಿವರಣೆಯನ್ನಾಗಲಿ ಅವುಗಳಿಗೆ ಉದಾಹರಣೆ ಗಳನ್ನಾಗಲಿ ಕೊಟ್ಟಿಲ್ಲ].

೪.೩.೨ ಶಿಷ್ಟಕನ್ನಡದಲ್ಲಿ, –ಅನ್ ದ್ರು ಪ್ರತ್ಯಯವು ಬಂಧುವಾಚಕಗಳಿಗೆ ಹತ್ತುತ್ತದೆ; ಆದರೆ ಕಲಬುರ್ಗಿ ಕನ್ನಡದಲ್ಲಿ ಬಂಧುವಾಚಕಗಳಿಗೆ ಎರಡು ಪ್ರತ್ಯಯಗಳಿವೆ. –ಅನ್‌ದ್ರು, –ದೆರು.

೪.೩.೩ ಶಿಷ್ಟಕನ್ನಡದಲ್ಲಿ –ಗಳು ಪ್ರತ್ಯಯವು ಮಾನವೇತರ ವಾಚಕಗಳಿಗೆ ಹತ್ತುತ್ತದೆ. ಆದರೆ ಕಲಬುರ್ಗಿ ಕನ್ನಡದಲ್ಲಿ –ಗಳು ಗೆ ಬದಲಾಗಿ –ಗೊಳು ಪ್ರತ್ಯಯವು ಮಾನವೇತರ ವಾಚಕಗಳಿಗೆ ಹತ್ತುತ್ತದೆ.

೪.೪.೦ ವಿಭಕ್ತಿ ಪ್ರತ್ಯಯಗಳು :

೪.೪.೧ ಪ್ರಥಮಾ ವಿಭಕ್ತಿ : Φ

೪.೪.೨ ದ್ವಿತೀಯಾ ವಿಭಕ್ತಿ :

ಗ್	/	ಮಾನವ ವಾಚಕಗಳು	ಪ್ರಕೃತಿ
ಕ್		ಐಚ್ಛಿಕವಾಗಿ ತೃತೀಯ ಪುರುಷ ನಪುಂಸಕ ಸರ್ವನಾಮಗಳು ಮತ್ತು ಪ್ರಶ್ನಾರ್ಥಕ ಸರ್ವನಾಮಗಳು ಯದು, ಯಲ್ಲ	
≀≀			
Φ		ಇತರೆ	

ಉದಾ : ಅವನ್ಗ ನೋಡಿನಿ (ಗು. ಕ.)
ಅವನನ್ನ ನೋಡಿದ್ದೀನಿ (ಶಿ. ಕ.)

೪.೪.೨ ತೃತೀಯಾ ವಿಭಕ್ತಿ :

–ಲಿಂದ [lində] ಇಂದ [ində] ಮತ್ತು ಆಂದ [a:ndə]ಗಳು ತೃತೀಯಾ ವಿಭಕ್ತಿ ಪ್ರತ್ಯಯಗಳು.

ಉದಾ : ಅವ್ನ ಮ್ಯಾಲಿನ್ ಪ್ರೀತಿಲಿಂದ (ಗು. ಕ.)
ಅವನ ಮೇಲಿನ ಪ್ರೀತಿಯಿಂದ (ಶಿ. ಕ.)
ಹ್ವಲ್‌ದಿಂದ (ಗು. ಕ.)
ಗಡಿಗ್ಯಾಂದ (ಗು. ಕ.)
ಗಡಿಗೆಯಿಂದ (ಶಿ. ಕ.)

೪.೪.೪ ಚತುರ್ಥಿ ವಿಭಕ್ತಿ :

ಗ್	/	ಅಕಾರಾಂತ ಮಾನವ ವಾಚಕಗಳು, ಇ, ಉ, ಅ ಮತ್ತು ವ್ಯಂಜನಾಂತ ನಾಮಪದಗಳು.	ಪ್ರಕೃತಿ
ಕ್		ಅಕಾರಾಂತ ಮಾನವೇತರ ವಾಚಕ ಮತ್ತು ಸಂಖ್ಯಾವಾಚಕಗಳು.	

ಉದಾ : ಅಡ್‌ವಿಗ್ ಹೋಗಿ [ಗು. ಕ.]
ಅಡವಿಗೆ ಹೋಗಿ [ಶಿ. ಕ.]
ನೀರಿಗ್ [ಗು. ಕ.]
ನೀರಿಗೆ [ಶಿ. ಕ.]
ನಾಟಕಕ್ [ಗು. ಕ.]
ನಾಟಕಕ್ಕೆ [ಶಿ. ಕ.]

೪.೪.೫ ಸಪ್ತಮೀ ವಿಭಕ್ತಿ :

–ಆಗ [a:gə] ಕಲಬುರ್ಗಿ ಕನ್ನಡದಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯವಾಗಿದೆ.

೪.೪.೬ ಶಿಷ್ಟಕನ್ನಡದಲ್ಲಿ –ಗೆ, –ಇಗೆ, –ಕ್ಕೆ, –ಅಕ್ಕೆ ಚತುರ್ಥಿ ವಿಭಕ್ತಿ ಪ್ರತ್ಯಯಗಳೂ –ಅನ್ನ, –ಅನ್ನು ದ್ವಿತೀಯಾ ವಿಭಕ್ತಿ ಪ್ರತ್ಯಯಗಳೂ, ಮತ್ತು –ಅಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯವೂ ಇದೆ. ಆದರೆ ಗುಲ್ಬರ್ಗ ಕನ್ನಡದಲ್ಲಿ –ಗ್ ಮತ್ತು –ಕ್ ಚತುರ್ಥಿ ವಿಭಕ್ತಿ ಪ್ರತ್ಯಯಗಳೂ, –ಗ್, –ಕ್ ದ್ವಿತೀಯಾ ವಿಭಕ್ತಿ ಪ್ರತ್ಯಯಗಳೂ –ಆಗ ಸಪ್ತಮೀ ವಿಭಕ್ತ ಪ್ರತ್ಯಯವೂ ಇದೆ.

ಶಿಷ್ಟ ಕನ್ನಡದಂತೆ ಕಲಬುರ್ಗಿ ಕನ್ನಡದಲ್ಲಿಯೂ ದ್ವಿತೀಯಾ ವಿಭಕ್ತಿ ಪ್ರತ್ಯಯವನ್ನು ಉಪಯೋಗಿಸಬೇಕಾದ ಎಡೆಯಲ್ಲಿ ಚತುರ್ಥಿ ವಿಭಕ್ತಿ ಪ್ರತ್ಯಯವನ್ನು ಉಪಯೋಗಿಸುವುದುಂಟು.

ಉದಾ : ಶಿ. ಕ. ನಾಳೆ ಸಂಜೆ ಅವನನ್ನು ನಮ್ಮ ಮನೆಗೆ ಕರೀಬೇಕು.
ಗು.ಕ. ನಾಳಿ ಸಂಜಿ ಅವಗ್ಗ ನಮ್ ಮನಿಕ ಕರೀಬೇಕು.
ಶಿ. ಕ. ನಾಳೆ ಸಂಜೆ ಅವನಿಗೆ ನಮ್ಮ ಮನೆಗೆ ಕರೀಬೇಕು.

ಆದರೆ ಶಿಷ್ಟ ಕನ್ನಡದಂತೆ ಚತುರ್ಥಿ ವಿಭಕ್ತಿ ಪ್ರತ್ಯಯಗಳು [–ಗೆ, –ಕೆ, –ಅಕ್ಕೆ, –ಇಗೆ] ಮತ್ತು ದ್ವಿತೀಯಾ ವಿಭಕ್ತಿ ಪ್ರತ್ಯಯಗಳು ಬೇರೆ ಬೇರೆ ಆಗಿಲ್ಲ, ಗುಲ್ಬರ್ಗ ಕನ್ನಡದಲ್ಲಿ. ಗುಲ್ಬರ್ಗ ಕನ್ನಡದಲ್ಲಿ –ಕ್ ಮತ್ತು –ಗ್ ದ್ವಿತೀಯಾ ಹಾಗೂ ಚತುರ್ಥಿ ವಿಭಕ್ತಿ ಪ್ರತ್ಯಯಗಳಾಗಿವೆ. ಶಿಷ್ಟ ಕನ್ನಡದಲ್ಲಿ –ಅಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯವಾಗಿದ್ದಂತೆ ಕಲಬುರ್ಗಿ ಕನ್ನಡದಲ್ಲಿ –ಆಗ ಸಪ್ತಮಿ ವಿಭಕ್ತಿ ಪ್ರತ್ಯಯವಾಗಿದೆ.

೪.೫.೧ ಗುಣವಾಚಕಗಳು :

ಶಿಷ್ಟಕನ್ನಡದಲ್ಲಿ ಬಳಕೆಯಲ್ಲಿರುವ ದೊಡ್ಡ, ಇಷ್ಟು ಇತ್ಯಾದಿ ಗುಣವಾಚಕಗಳ ಜೊತೆಗೆ ಗುಲ್ಬರ್ಗ ಕನ್ನಡದಲ್ಲಿ ಭಲೋ, ಥ್ವಾಡೆ ಇತ್ಯಾದಿ ಶಿಷ್ಟ ಕನ್ನಡದಲ್ಲಿ ಬಳಕೆಯಲ್ಲಿ ಇಲ್ಲದ ಗುಣವಾಚಕಗಳು ಬಳಕೆಯಲ್ಲಿ ಇವೆ.

೪.೬.೧ ಸಂಖ್ಯಾ ವಾಚಕಗಳು :

ಉರ್ದು ಅಥವಾ ಮರಾಠಿಯ ಸಂಖ್ಯಾ ವಾಚಕಗಳಾದ ಪೌಣೆ [¾], ಅಯತ್ ಪಾವ್ [೧¼], ಅಡೀಚ್ [೨½], ದೀಡ್ [೧½], ಬಾರ [೧೨], ಧಾ [೧೦] ಇತ್ಯಾದಿ ಸಂಖ್ಯಾ ವಾಚಕಗಳು ಮತ್ತು ಶಿಷ್ಟಕನ್ನಡದಲ್ಲಿ ಬಳಕೆಯಲ್ಲಿ ಇರುವ ಮುಕ್ಕಾಲು, ಒಂದೂ ಕಾಲು, ಎರಡೂವರೇ, ಒಂದೂವರೆ, ಹನ್ನೆರಡು, ಹತ್ತು ಇತ್ಯಾದಿಗಳಿಗಿಂತ ಹೆಚ್ಚು ಬಳಕೆಯಲ್ಲಿ ಇವೆ.

೫.೧.೧ ವರ್ತಮಾನ ಕಾಲ :

ಕಲಬುರ್ಗಿ ಕನ್ನಡದಲ್ಲಿಯೂ ವರ್ತಮಾನ ಕಾಲ ಪ್ರತ್ಯಯವು ಶಿಷ್ಟಕನ್ನಡದಲ್ಲಿ ನಂತೆ –ತ್ ಆಗಿದೆ. ಆದರೆ ವರ್ತಮಾನ ಕಾಲ ಪ್ರತ್ಯಯವು ಕ್ರಿಯಾಪದಕ್ಕೆ ಹತ್ತಿದ ನಂತರ ಹತ್ತುವ ಆಖ್ಯಾತ ಪ್ರತ್ಯಯಗಳು ಬೇರೆಯಾಗಿವೆ. [ಶಿಷ್ಟ ಕನ್ನಡದ ಆಖ್ಯಾತ ಪ್ರತ್ಯಯಗಳನ್ನು ಆವರಣದಲ್ಲಿ ಕೊಡಲಾಗಿದೆ.]

		ಏಕವಚನ	ಬಹುವಚನ
ಪ್ರಥಮ ಪುರುಷ		–ಇನಿ [–ಈನಿ]	–ಎವು [–ಏವೆ, ಈವಿ]
ದ್ವಿತೀಯ ಪುರುಷ		–ಇ [–ಈಯೆ]	–ಇರಿ [–ಈರಿ]
ತೃತೀಯ ಪುರುಷ	(ಪು.)	–ಅನ [–ಆನೆ]	–ಅರ [–ಆರೆ]
	(ಸ್ತ್ರೀ)	–ಅಳ [–ಆಳೆ]	
	(ನ.)	–ಅದ [–ಅದೆ]	–ಅವ [–ಅವೆ]

ಉದಾ : [ಗು. ಕ.] ಇಲ್ಲಿ ಸೋಯ್ ಸಿಕ್ತವ
,, ವಂದ್ ಕಾಗ್ದ ಕುಡ್ತಿನಿ
,, ಊರಿಗೆ ಖಳುಸ್ತರ
[ಶಿ. ಕ.] ಇಲ್ಲಿ ಕಡಿಮೆ ಬೆಲೆಗೆ ಸಿಕ್ಕುತ್ವೆ
,, ಒಂದು ಕಾಗದ ಕೊಡ್ತೀನಿ
,, ಊರಿಗೆ ಕಳುಹಿಸುತ್ತಾರೆ.

೫.೧.೨ ವರ್ತಮಾನ ನ್ಯೂನಕ್ರಿಯಾರೂಪ :

ಕಡಿಯುತ್ತಾ ತುದಿಗ ಬರುತ್ತಾನೆ, ಹುಡುಕುತ್ತ ಮನೆಯ ಪತ್ತೆ ಹಚ್ಚಿದ ಇತ್ಯಾದಿ ಶಿಷ್ಟಕನ್ನಡದ ವಾಕ್ಯಗಳಲ್ಲಿ ವರ್ತಮಾನ ನ್ಯೂನಕ್ರಿಯಾರೂಪವು -ಉತ್ತಾ ಪ್ರತ್ಯಯವು ಕ್ರಿಯಾಪ್ರಕೃತಿಗೆ ಸೇರುವುದರಿಂದ ಸಿದ್ಧವಾಗಿದೆ. ಆದರೆ ಗುಲ್ಬರ್ಗ ಕನ್ನಡದಲ್ಲಿ ಆತ್ಮಾರ್ಥಕ ಕ್ರಿಯಾಪ್ರಕೃತಿಗೆ [ನೋಡಿ : ೫.೪.೨] ತ್ ಪ್ರತ್ಯಯ ಹತ್ತುವುದರಿಂದ ಸಿದ್ಧಿಸುತ್ತದೆ.

ಉದಾ : (ಗು. ಕ.) ಕಡ್ಕೋತ್ ತುದಿಗ್ ಬರ್ತಾನ
ಹುಡುಕ್ಕೋತ್ ಮನಿ ಪತ್ತಾ ಹಚ್ದ

೫.೧.೩. ಪೂರ್ಣ ವರ್ತಮಾನಕಾಲ [Present perfect] :

ಪೂರ್ಣ ವರ್ತಮಾನಕಾಲದ ಆಖ್ಯಾತ ಪ್ರತ್ಯಯಗಳನ್ನು ಕ್ರಿಯಾಪ್ರಕೃತಿಗೆ ಹಚ್ಚುವುದರಿಂದ ಪೂರ್ಣ ವರ್ತಮಾನಕಾಲರೂಪವು ಸಿದ್ಧಿಸುತ್ತದೆ. ಪೂರ್ಣ ವರ್ತಮಾನ ಕಾಲದ ಆಖ್ಯಾತ ಪ್ರತ್ಯಯಗಳಿವು :

ಪ್ರಥಮ ಪುರುಷ		-ಈನಿ	-ಈವಿ
ದ್ವಿತೀಯ ಪುರುಷ		-ಈದಿ	-ಈರಿ
ತೃತೀಯ ಪುರುಷ	(ಪು)	-ಆನ	-ಆರ
	(ಸ್ತ್ರೀ)	-ಆಳ	
	(ನ)	-ಅದ	-ಆವ

ಪೂರ್ಣಪವರ್ತಮಾನಕಾಲವು ಶಿಷ್ಟಕನ್ನಡದಲ್ಲಿ ಭೂತನ್ಯೂನ ಕ್ರಿಯಾರೂಪಕ್ಕೆ ಇರು ಕ್ರಿಯಾಪದದ ಇದ್ದಾನೆ, ಇದ್ದಾನೆ, ಇದೆ ಇತ್ಯಾದಿ ರೂಪಗಳು ಸೇರುವುದರಿಂದ ಉಂಟಾಗುತ್ತದೆ.

ಉದಾ : (ಗು. ಕ.) ತಲ್ಯಂಬ್ಗಿ ತಳಗ ವಂದ್ ಕಾಗ್ದ ಇಟ್ಟೀನಿ
(ಶಿ, ಕ,) ತಲೆದಿಂಬಿನ ಕೆಳಗೆ ಒಂದು ಕಾಗದ ಇಟ್ಟಿದ್ದೀನಿ
(ಗು. ಕ.) ಅವ್ನ್ಗ ನೀವು ಯಾವಾಗ ನೋಡೀರಿ
(ಶಿ. ಕ.) ಅವನನ್ನು ನೀವು ಯಾವಾಗ ನೋಡಿದ್ದೀರಿ.

೫.೧.೪ ಇರು ಕ್ರಿಯಾಪದ :

	ಏಕವಚನ		ಬಹುವಚನ	
ಪ್ರಥಮ ಪುರುಷ	ಇದ್ದೀನಿ	[ಇದ್ದೀನಿ]	ಇದ್ದೇವು	[ಇದ್ದೀವಿ]
ದ್ವಿತೀಯ ಪುರುಷ	ಇದ್ದಿ	[ಇದ್ದೀಯೆ]	ಇದ್ದೀರಿ	[ಇದ್ದೀರಿ]
ತೃತೀಯ ಪುರುಷ (ಪು.)	ಹನ	[ಇದ್ದಾನೆ]	ಹರ	[ಇದ್ದಾರೆ]
(ಸ್ತ್ರೀ.)	ಹಳ	[ಇದ್ದಾಳ]		
(ನ.)	ಅದ	[ಇದೆ]	ಅವ	[ಇವೆ]

ಇರು ಕ್ರಿಯಾಪದದ [Non past certain] ವರ್ತಮಾನಖಚಿತರೂಪಗಳು ತೃತೀಯ ಪುರುಷದಲ್ಲಿ ಸಂಪೂರ್ಣವಾಗಿ ಶಿಷ್ಟಕನ್ನಡ ಮತ್ತು ಗುಲ್ಬರ್ಗ ಕನ್ನಡದಲ್ಲಿ ಭಿನ್ನವಾಗಿವೆ ಎಂಬುದನ್ನು ಮೇಲೆ ನೋಡಬಹುದು. ಶಿಷ್ಟಕನ್ನಡದ ರೂಪಗಳನ್ನು ಆವರಣದಲ್ಲಿ ಕೊಡಲಾಗಿದೆ.

೫.೨.೧ ಭೂತಕಾಲ :

ಶಿಷ್ಟಕನ್ನಡದಂತೆ ಗುಲ್ಬರ್ಗ ಕನ್ನಡದಲ್ಲಿಯೂ –ದ್–, –ತ್–, –ಟ್–, –ಡ್–, –ಕ್–, ಭೂತಕಾಲಪ್ರತ್ಯಯಗಳಿವೆ. ಗುಲ್ಬರ್ಗ ಕನ್ನಡದಲ್ಲಿ ಶಿಷ್ಟಕನ್ನಡದಲ್ಲಿ ಇರುವ –ಇದ್– ಭೂತಕಾಲಪ್ರತ್ಯಯವಿಲ್ಲ. ಭೂತಕಾಲದಲ್ಲಿ ಕಾಲಪ್ರತ್ಯಯವು ಕ್ರಿಯಾಪದಕ್ಕೆ ಹತ್ತಿದ ನಂತರ ಹತ್ತುವ ಆಖ್ಯಾತ ಪ್ರತ್ಯಯಗಳು ಶಿಷ್ಟಕನ್ನಡದಲ್ಲಿನ ಭೂತಕಾಲದ ಆಖ್ಯಾತ ಪ್ರತ್ಯಯಗಳಿಂದ ಭಿನ್ನವಾಗಿವೆ. [ಶಿಷ್ಟಕನ್ನಡದ ಆಖ್ಯಾತ ಪ್ರತ್ಯಯಗಳನ್ನು ಆವರಣದಲ್ಲಿ ಕೊಟ್ಟಾಗಿದೆ].

	ಏಕವಚನ	ಬಹುವಚನ
ಪ್ರಥಮ ಪುರುಷ	–ಅ [–ಎ]	–ಎವು [ವಿ]
ದ್ವಿತೀಯ ಪುರುಷ	–ಇ [–ಎ]	–ರಿ [ರಿ]
ತೃತೀಯ ಪುರುಷ (ಪು.)	–ಅ [–ಅನು, –ಅ]	–ರು [ರು]
(ಸ್ತ್ರೀ.)	–ಉ ~ –ಳು [ಅಳು]	
(ನ.)	–ಉ [ಉ]	–ಉವ್ [–ಅವು]

೫.೨.೨ ಭೂತನ್ಯೂನ ಕ್ರಿಯಾರೂಪ :

ಶಿಷ್ಟಕನ್ನಡದಲ್ಲಿಯಂತೆ ಗುಲ್ಬರ್ಗಕನ್ನಡದಲ್ಲಿಯೂ –ಇ ಮತ್ತು –ಉ ಪ್ರತ್ಯಯಗಳು ಭೂತಕಾಲನ್ಯೂನ ಕ್ರಿಯಾಪ್ರತ್ಯಯಗಳಾಗಿವೆ.

ನಿಷೇಧ ನ್ಯೂನಕ್ರಿಯಾರೂಪವು ಶಿಷ್ಟಕನ್ನಡದಲ್ಲಿ –ಅದೆ ಪ್ರತ್ಯಯವು ಕ್ರಿಯಾಪ್ರಕೃತಿಗೆ ಹತ್ತಿ ಸಿದ್ಧಿಸುತ್ತದೆ. ಆದರೆ ಗುಲ್ಬರ್ಗಕನ್ನಡದಲ್ಲಿ –ಎ ಪ್ರತ್ಯಯವು ನಿಷೇಧ

ಕೃದಂತನಾಮ ಪ್ರಕೃತಿಗೆ [Negative relative participle ನೋಡಿ : 5.6.1] ಹತ್ತುವುದರಿಂದ ಸಿದ್ಧಿಸುತ್ತದೆ.

	ಗುಲ್ಬರ್ಗಕನ್ನಡ	ಶಿಷ್ಟಕನ್ನಡ
ಉದಾ :	ದುಃಖ ಆಗಿ	ದುಃಖ ಆಗಿ
	ಕ್ವಡ್ಲಿ ತಂದು	ಕೊಡಲಿ ತಂದು
	ಯಾರೂ ಕೇಳ್ಯಾರ್‌ದೆ	ಯಾರೂ ಕೇಳದೆ

೫.೩.೧ ವಿಧ್ಯರ್ಥದ ಪ್ರತ್ಯಯಗಳು :

ಪ್ರಥಮ ಪುರುಷ	–ಲಿ ~ –ಳಿ	[ಲಿ]	–ಅಮು –ಮು	[–ಓಣ]
ದ್ವಿತೀಯ ಪುರುಷ		[φ]	–ರಿ	[–ರಿ –ಇ]
ತೃತೀಯ ಪುರುಷ	–ಲಿ ~ –ಳಿ	[ಲಿ]	–ಲಿ ~ –ಳಿ	[–ಲಿ]

ಶಿಷ್ಟಕನ್ನಡದಲ್ಲಿ ಪ್ರಥಮ ಪುರುಷ ಬಹುವಚನ ವಿಧ್ಯರ್ಥದ ಪ್ರತ್ಯಯ –ಓಣ. ಆದರೆ ಗುಲ್ಬರ್ಗ ಕನ್ನಡದಲ್ಲಿ ಅಮು ಮತ್ತು –ಮುಗಳು ಪ್ರಥಮ ಪುರುಷ ಬಹು ವಚನ ವಿಧ್ಯರ್ಥದ ಪ್ರತ್ಯಯಗಳಾಗಿವೆ. [ಆವರಣದಲ್ಲಿ ಶಿಷ್ಟಕನ್ನಡದ ವಿಧ್ಯರ್ಥದ ಪ್ರತ್ಯಯಗಳಿವೆ.]

ಉದಾ : (ಗು. ಕ.) ಸಂಜಿಗಿ ನಾವ್ ಎಲ್‌ರು ಹ್ವಲಕ್ ಹೋಗಮು
(ಶಿ. ಕ.) ಸಂಜೆಗೆ ನಾವೆಲ್ಲ ಹೊಲಕ್ ಹೋಗೋಣ.

೫.೪.೧ ಭಾವಾರ್ಥ ಪ್ರತ್ಯಯಗಳು :

ಶಿಷ್ಟಕನ್ನಡದಲ್ಲಿ –ಲು, –ಅಕ್ಕೆ, –ಒಕ್ಕೆ ಗಳು ಭಾವಾರ್ಥ ಪ್ರತ್ಯಯಗಳಾಗಿವೆ. ಗುಲ್ಬರ್ಗ ಕನ್ನಡದಲ್ಲಿ –ಲಿಕ್, –ಲಿಕಿ ~ –ಳಿಕ್, –ಳಿಕಿ ಗಳು ಭಾವಾರ್ಥ ಪ್ರತ್ಯಯ ಗಳಾಗಿವೆ.

ಉದಾ : (ಗು. ಕ.) ನಾಟಕ್ ನೋಡ್‌ಳಿಕಿ ಮಂದಿ ಬಂದ್ರು
(ಶಿ. ಕ.) ನಾಟಕ ನೋಡಲು ಜನ ಬಂದರು
(,,) ನಾಟಕ ನೋಡಕ್ಕೆ/ನೋಡೊಕ್ಕೆ ಜನ ಬಂದರು
(ಗು. ಕ.) ಆ ಕೆಲ್ಸ ಮಾಡ್‌ಳಿಕ್ ಹೋಗಿ
(ಶಿ. ಕ.) ಆ ಕೆಲಸ ಮಾಡಲು ಹೋಗಿ
(,,) ಆ ಕೆಲಸ ಮಾಡಕ್ಕೆ/ಮಾಡೊಕ್ಕೆ ಹೋಗಿ
(ಗು. ಕ.) ಅವ ಕಲಿಲಿಕಿ ಬರ್‍ತನ
(ಶಿ. ಕ.) ಅವನು ಕಲಿಯಲು ಬರುತ್ತಾನೆ
(,,) ಅವನು ಕಲಿಯಲಿಕ್ಕೆ/ಕಲಿಯೊಕೆ ಬರುತ್ತಾನೆ

೫.೪.೨ ಆತ್ಮಾರ್ಥಕ ಪ್ರತ್ಯಯ :

ಗುಲ್ಬರ್ಗ ಕನ್ನಡದಲ್ಲಿ –ಗೊ ಮತ್ತು -ಕೊ ಪ್ರತ್ಯಯಗಳು ಆತ್ಮಾರ್ಥಕ ಪ್ರತ್ಯಯಗಳಾಗಿವೆ. ಶಿಷ್ಟ ಕನ್ನಡದಲ್ಲಿ –ಕೊಳ್ಳು ಆತ್ಮಾರ್ಥಕ ಪ್ರತ್ಯಯ.

ಉದಾ : (ಗು. ಕ.) ಇವ ತನ್ ಬಟ್ಟಿ ತಾ ಒಕ್ಕೊಂತನ
(ಶಿ. ಕ.) ಇವನು ತನ್ನ ಬಟ್ಟೆ ತಾನೇ ಒಗೆದುಕೊಳ್ಳುತ್ತಾನೆ.

–ಗೊ ಪ್ರತ್ಯಯವು 'ಕ' ವನ್ನುಳಿದು ಇತರ ಅಘೋಷ ವ್ಯಂಜನಾಂತ ಕ್ರಿಯಾ ಪದಗಳಿಗೆ ಹತ್ತುತ್ತದೆ. –ಕೊ ಇತರ ಕ್ರಿಯಾಪದಗಳಿಗೆ ಹತ್ತುತ್ತದೆ.

೫.೪.೩ ಸಂಭಾವನ ಪ್ರತ್ಯಯ :

ಗುಲ್ಬರ್ಗ ಕನ್ನಡದಲ್ಲಿ –ರ [rə] ಸಂಭಾವನ ಪ್ರತ್ಯಯವು ಭೂತಕಾಲ ಕ್ರಿಯಾ ಪ್ರಕೃತಿಗೆ ಹತ್ತಿ ಸಂಭಾವನ ರೂಪ ಸಿದ್ಧಿಸುವುದು. ಶಿಷ್ಟಕನ್ನಡದಲ್ಲಿ –ರೆ [re] ನ ಸಂಭಾವನ ಪ್ರತ್ಯಯವು ಭೂತಕಾಲ ಕ್ರಿಯಾಪ್ರಕೃತಿಗೆ ಹತ್ತಿ ಸಂಭಾವನ ರೂಪ ಸಿದ್ಧಿಸುತ್ತದೆ.

ಉದಾ : (ಗು. ಕ.) ಆ ಕಡಿಗ್ ಹ್ವಾದ್ರ ಅವ ತೆಗ್ಗಿಗ್ ಬೀಳ್ತನ
(ಶಿ. ಕ) ಆ ಕಡೆಗೆ ಹೋದರೆ ಅವನು ತಗ್ಗಿಗೆ ಬೀಳ್ತಾನೆ
(ಗು. ಕ.) ನಿನ್ ಮಂದಿ ನೋಡ್‌ದ್ರ ನಕ್ಕರ
(ಶಿ. ಕ.) ನಿನ್ನನ್ನು ಜನ ನೋಡಿದರೆ ನಗುತ್ತಾರೆ.

೫.೫.೧ ಕ್ರಿಯಾವಿಶೇಷಣಗಳು :

ತಕ್ಷಣ, ಬೇಗ ಇತ್ಯಾದಿ ಕ್ರಿಯಾವಿಶೇಷಣಗಳ ಜೊತೆ ಶಿಷ್ಟಕನ್ನಡದಲ್ಲಿ ಬಳಕೆಯಲ್ಲಿ ಇಲ್ಲದ ಅಚಾನಕ್, ದೌಡ್ ಇತ್ಯಾದಿ ಕ್ರಿಯಾವಿಶೇಷಣಗಳು ವಿಶೇಷವಾಗಿ ಗುಲ್ಬರ್ಗ ಕನ್ನಡದಲ್ಲಿ ಬಳಕೆಯಲ್ಲಿ ಇವೆ.

೫.೬.೧ ಕೃದಂತ ನಾಮಪ್ರತ್ಯಯ :

ಗುಲ್ಬರ್ಗ ಕನ್ನಡದ ಕೃದಂತನಾಮ ಪ್ರತ್ಯಯಗಳನ್ನು ಕೆಳಗೆ ಕೊಡಲಾಗಿದೆ.

ಯು ಅ ಬ ವ್ಪ ಅ ಲಾರ್ದ್	/	ವರ್ತಮಾನ ಭೂತ ನಿಷೇಧ	ಕ್ರಿಯಾಪ್ರಕೃತಿ

ಉದಾ : (ಗು. ಕ.) ಬರೆ
,, ಹ್ವಾದ
,, ಹ್ವಾಗ್‌ಲಾರ್ದ್

ಶಿಷ್ಟಕನ್ನಡದ ಕೃದಂತನಾಮಪ್ರತ್ಯಯನ್ನು ಕೆಳಗೆ ಕೊಡಲಾಗಿದೆ.

ಉವ್		ವರ್ತಮಾನ	
ಅ	/	ಭೂತ	ಕ್ರಿಯಾಪ್ರಕೃತಿ
ಅದ		ನಿಷೇಧ	

ಉದಾ : (ಶಿ. ಕ.) ಬರುವ
,, ಹೋದ
,, ಹೋಗದ

೫.೭.೧ ಸಂಯುಕ್ತಕ್ರಿಯಾ ಕ್ರಿಯಾವಿಶೇಷಣ (Adverbs of Concomitant action) :

ಸಂಯುಕ್ತಕ್ರಿಯಾ ಕ್ರಿಯಾವಿಶೇಷಣಪ್ರತ್ಯಯಗಳು ಕಲಬುರ್ಗಿ ಕನ್ನಡದಲ್ಲಿ ಎರಡು. –ಅಣ [aṇə] ಮತ್ತು –ಮಣ [maṇə]. ಆತ್ಮಾರ್ಥಕ ಕ್ರಿಯಾಪ್ರಕೃತಿಗೆ –ಮಣ ಮತ್ತು ಇತರ ಕ್ರಿಯಾಪ್ರಕೃತಿಗಳಿಗೆ –ಅಣ ಹತ್ತುತ್ತದೆ.

ಉದಾ : (ಗು. ಕ.) ಹಪ್ಪಳ ಕರಿಲಿಕ್ ಸುರು ಮಾಡಣ ಥ್ವಾಡೆ ಯಣ್ಣಿ ಕಡಿವ್ ಬಿತ್ತು.
(ಗು. ಕ.) ನದಿ ಬಲ್ಲಿ ಹೊಗಣ ಅದು ಬೀಳ್ತದ.

೫.೭.೨ –ಅಪ್ಲೆ, –ರುಪ್ಲೆ ಪ್ರತ್ಯಯಗಳು

ಶಿಷ್ಟಕನ್ನಡದ 'ಹೋಗುವ ಹಾಗೆ', 'ಹೋದ ಹಾಗೆ', 'ಹೋದ ನಂತರ' ಗಳಿಗೆ ಸಮಾನಾರ್ಥದಲ್ಲಿ ಕಲಬುರ್ಗಿ ಕನ್ನಡದಲ್ಲಿ ಹೋಗಪ್ಲೆ, ಹೋದಪ್ಲೆ, ಹೋದ್ರುಪ್ಲೆಗಳು ಬಳಕೆಯಲ್ಲಿವೆ.

ಉದಾ : (ಗು. ಕ.) ಅವನಿಗ್ ಎಲ್ಯೋ ನೋಡ್ದಪ್ಲೆ ಆಗ್ಯದ.
(ಶಿ. ಕ.) ಅವನನ್ನು ಎಲ್ಲಿಯೋ ನೋಡಿದ ಹಾಗಿದೆ.
(ಗು. ಕ.) ಅವ ಉಂಡ್ರುಪ್ಲೆ ಹ್ವಾದ.
(ಶಿ. ಕ.) ಅವನು ಊಟ ಮಾಡಿದ ನಂತರ ಹೋದ.

೬.೧.೧ ಮೇಲೆ ೧.೨.೧ ರಲ್ಲಿ ಹೇಳಿದಂತೆ ಉರ್ದು ಮತ್ತು ಮರಾಠಿ ಭಾಷೆಗಳು ಕಲಬುರ್ಗಿ ಕನ್ನಡದ ಪದಸಂಪತ್ತಿಗೆ ಹೆಚ್ಚಿನ ಕೊಡುಗೆಯನ್ನು ಇತ್ತಿವೆ ಎನ್ನುವುದಕ್ಕೆ ಈ ಕೆಲವು ಪದಗಳೇ ಉದಾಹರಣೆಗಳಾಗಿವೆ :

ಆನಾಜ್, ಕೀಮತ್, ಬಾಗ್, ಅಮೇಶ

೬.೧.೨ ಒಂದೇ ವಸ್ತುವನ್ನು ಅಥವಾ ಒಂದೇ ಕ್ರಿಯೆಯನ್ನು ನಿರ್ದೇಶಿಸಲು ಕಲಬುರ್ಗಿ ಕನ್ನಡದಲ್ಲಿ ಮತ್ತು ಶಿಷ್ಟದಲ್ಲಿ ಬೇರೆಬೇರೆ ಪದಗಳು ಬಳಕೆಯಲ್ಲಿವೆ ಎನ್ನುವುದಕ್ಕೆ ಕೆಲವು ಉದಾಹರಣೆಗಳು :

(ಗು. ಕ.) ಕವ್ಳಿ (ಶಿ. ಕ.) ಭತ್ತ
(ಗು. ಕ.) ದ್ವಾಮಿ (ಶಿ. ಕ.) ಸೊಳ್ಳೆ
(ಗು. ಕ.) ಉಡ್ಗು (ಶಿ. ಕ.) ಗುಡಿಸು

೬.೧.೩ ಬೇರೆಬೇರೆ ಕ್ರಿಯೆಯನ್ನು ಅಥವಾ ವಸ್ತುವನ್ನು ಕಲಬುರ್ಗಿ ಕನ್ನಡದಲ್ಲಿ ಮತ್ತು ಶಿಷ್ಟಕನ್ನಡದಲ್ಲಿ ಒಂದೇ ಪದವು ನಿರ್ದೇಶಿಸುವುದಕ್ಕೆ ಉದಾಹರಣೆಗಳಿವು :

(ಗು. ಕ.) ಅಯ್ಬು [Doubt, suspecion]
(ಗು. ಕ.) ಅಗ್ಳು [To dig]
(ಶಿ. ಕ.) ಅಯ್ಬು [ಊನ deficiency]
(ಶಿ. ಕ.) ಅಗ್ಳು [ಬೇಯಿಸಿದ ಅಕ್ಕಿ, Backed rice]

ಈ ಲೇಖನದ ಹರವು ಬಹಳ ಸೀಮಿತವಾದದ್ದು. ಏಕೆಂದರೆ ಇದು ಮುಖ್ಯವಾಗಿ ಭಾರತೀಯ ಭಾಷಾಸಂಸ್ಥಾನವು Audience profile ಗಾಗಿ ಕಲಬುರ್ಗಿ ಜಿಲ್ಲೆಯಲ್ಲಿ ಸಂಗ್ರಹಿಸಿದ ಮತ್ತು ಡಾ. ಆರ್. ಮಹಾದೇವನ್‌ರವರು ತಮ್ಮ ಕಲಬುರ್ಗಿ ಕನ್ನಡ ಗ್ರಂಥಕ್ಕಾಗಿ ಸಂಗ್ರಹಿಸಿದ ಭಾಷಾಸಾಮಗ್ರಿಯ ಮೇಲೆ ನಿಂತಿದೆ.

ಈ ಚಿಕ್ಕ ಹರವಿನಿಂದಲೇ ನಮಗೆ ಅರ್ಥವಾಗುವ ಮುಖ್ಯ ಅಂಶವೆಂದರೆ ಕಲಬುರ್ಗಿ ಕನ್ನಡವು ಶಿಷ್ಟಕನ್ನಡದಿಂದ ಬಹಳ ಭಿನ್ನವಾಗಿದೆ.

ಕಲಬುರ್ಗಿ ಜಿಲ್ಲೆಯ ಕನ್ನಡದ ವೈಜ್ಞಾನಿಕ ಭಾಷಾಪರಿವೀಕ್ಷಣೆ ಸಮಗ್ರವಾಗಿ ನಡೆದದ್ದೇ ಆದರೆ ಇನ್ನೂ ಹಲವಾರು ಮುಖ್ಯ ಅಂಶಗಳು ಬೆಳಕಿಗೆ ಬರುವುದು ಸ್ಪಷ್ಟ.

BIBLIOGRAPHY

Mahadevan. R. : *Gulburga Kannada*

ವಿಲ್ಯಂ ಮಾಡ್ತ : ಕನ್ನಡ ಭಾಷೆಯ ರೂಪರೇಷೆಗಳು

Karnataka through the Ages

C. I. I. L. Mysore-6 : *Audience Profile*

Colophon

• •

* ಈ ಲೇಖನದ ಬರೆವಣಿಗೆಗೆ ಅನೇಕ ಅನುಕೂಲತೆಗಳನ್ನು, ಸಲಹೆ–ಸೂಚನೆಗಳನ್ನು ನೀಡಿದ ಡಾ. ಡಿ. ಪಿ. ಪಟ್ನಾಯಿಕ್, ಡಾ. ಆರ್. ಮಹಾದೇವನ್ ಮತ್ತು ಡಾ. ಕೆ. ಪಿ. ಆಚಾರ್ ಅವರಿಗೆ ಕೃತಜ್ಞತೆಗಳು.

* ಈ ಲೇಖನದಲ್ಲಿ ಬಳಕೆಯಾದ ಕಲಬುರ್ಗಿ ಕನ್ನಡ = ಗುಲ್ಬರ್ಗಾ ಕನ್ನಡ ಎಂಬಿವು ಒಂದೇ ಅರ್ಥದವುಗಳೆಂದು ಭಾವಿಸಬೇಕು.

—ಸಂಪಾದಕ

ರಾಯಚೂರು ಜಿಲ್ಲೆಯ ಕನ್ನಡ

ಪಿ. ಪಿ. ಗಿರಿಧರ

ಸಾಮಾನ್ಯವಾಗಿ, ಕನ್ನಡದಲ್ಲಿ ಮೂರು ಉಪಭಾಷೆಗಳಿವೆಯೆಂದು ತಿಳಿಯಲ್ಪಡುತ್ತದೆ. ಮೈಸೂರು ಅಥವಾ ಬೆಂಗಳೂರು ಕನ್ನಡ, ಮಂಗಳೂರು ಕನ್ನಡ ಮತ್ತು ಧಾರವಾಡ ಕನ್ನಡ. ಇದು ಬಹಳ ಸ್ಥೂಲವಾದ ವರ್ಗೀಕರಣ. ರಾಣೇಬೆನ್ನೂರಿನಲ್ಲಿರುವ ಕನ್ನಡಿಗನ ಮತ್ತು ಕಲಬುರ್ಗಿ ಅಥವಾ ಬೀದರ್ ಕನ್ನಡಿಗನ ಕನ್ನಡ ಒಂದೇ ಅಲ್ಲ ಅನ್ನುವುದು ಸ್ಪಷ್ಟವಾಗಿದೆ. ಪ್ರಾಯಶಃ ಬೀದರ್ ಕನ್ನಡವನ್ನು ಕನ್ನಡವೆಂದು ಕರೆಯುವುದೂ ತಪ್ಪಾದೀತು. ಏಕೆಂದರೆ ಅದೊಂದು ಮಿಶ್ರಭಾಷೆ (Pidgin). ಕನಿಷ್ಠಪಕ್ಷ ಅದನ್ನು ಪಿಜನೈಜ್ಡ್ ಕನ್ನಡ(Pidgnized Kannada)ವೆಂದು ಕರೆಯಬೇಕು. ಬೀದರ್ ಕನ್ನಡ ಮತ್ತು ಉಳಿದ ಯಾವುದೇ ಉಪಭಾಷೆಗಳಿಗಿರುವ ಪರಸ್ಪರ ಗ್ರಹಿಕೆ (mutual intelligibility) ಉಳಿದ ಯಾವುದೇ ಎರಡು ಉಪಭಾಷೆಗಳಿಗಿರುವುದಕ್ಕಿಂತ ಬಹಳ ಕಡಿಮೆ. ಈ ಕಾರಣಗಳಿಂದ ಈ ಪಿಜನೈಜ್ಡ್ ಕನ್ನಡವನ್ನೂ ಒಂದು ಉಪಭಾಷೆಯೆಂದು ಪರಿಗಣಿಸುವುದು ಸಮಂಜಸವೇ ಸರಿ. ಕಲಬುರ್ಗಿ ಕನ್ನಡ ಮೂಲತಃ ಧಾರವಾಡ ಕನ್ನಡವೇ ಆದರೂ, ಅದು ಸಾಕಷ್ಟು ತನ್ನದೇ ಆದ ವೈಶಿಷ್ಟ್ಯಗಳನ್ನು ಬೆಳೆಸಿಕೊಂಡಿರುವುದರಿಂದ, ಅದನ್ನು ಒಂದು ಉಪಭಾಷೆಯೆಂದು ಗುರುತಿಸಬಹುದು. ಇನ್ನೊಂದು ತುದಿಗೆ (extreme) ಹೋಗಿ, ಕರ್ನಾಟಕದ ಒಂದೊಂದು ಜಿಲ್ಲೆಯ ಕನ್ನಡವನ್ನು ಒಂದೊಂದು ಉಪಭಾಷೆಯೆಂದು ಹೇಳಬಹುದು. ಇದು ಬಹಳ ಸೂಕ್ಷ್ಮವಾದ ಮತ್ತು ಪರಿಸ್ಥಿತಿಗೆ ಪ್ರಾಮಾಣಿಕವಲ್ಲದ ಒಂದು ವರ್ಗೀಕರಣ. ಕನ್ನಡ ಭಾಷೆಯಲ್ಲಿ ಐದು ಉಪಭಾಷೆಗಳಿವೆಯೆಂದೂ ಹೇಳಬಹುದು : ಮೈಸೂರು, ಮಂಗಳೂರು, ಧಾರವಾಡ, ಕಲಬುರ್ಗಿ ಮತ್ತು ಬೀದರ್ ಅಥವಾ ಪಿಜಿನೈಜ್ಡ್ ಕನ್ನಡ. ಈ ಮೂಲವರ್ಗೀಕರಣದೊಳಗೆ ಮತ್ತೆ ಪ್ರಭೇದಗಳಿರಬಹುದು.

'ಧಾರವಾಡ ಕನ್ನಡ' ಎಂಬ ನಾಮಧೇಯದಲ್ಲಿ ರಾಯಚೂರು ಮತ್ತು ವಿಜಾಪುರ ಕನ್ನಡಗಳನ್ನು ಧಾರಾಳವಾಗಿ ಸೇರಿಸಿಕೊಳ್ಳಬಹುದು. ಈ ಲೇಖನ ರಾಯಚೂರು ಕನ್ನಡದ ಕೆಲವು ವೈಶಿಷ್ಟ್ಯಗಳ ಮೇಲೆ ಬೆಳಕು ಚೆಲ್ಲುವುದರ ಜೊತೆಗೆ, ರಾಯಚೂರು ಜಿಲ್ಲೆಯ ಸಾಮಾಜಿಕಪ್ರಭೇದಗಳ ಬಗ್ಗೆ ಚರ್ಚಿಸುತ್ತದೆ. ಒಂದು ಪ್ರಾದೇಶಿಕ ಪ್ರಭೇದದೊಳಗಿರುವ ಸಾಮಾಜಿಕಪ್ರಭೇದಗಳಿಗೂ, ಇನ್ನೊಂದು ಪ್ರಾದೇಶಿಕಪ್ರಭೇದ

ದೊಳಗಿರುವ ಸಾಮಾಜಿಕಪ್ರಭೇದಗಳಿಗೂ ವ್ಯತ್ಯಾಸ ಬಹಳವಿರುವುದಿಲ್ಲವಾದ್ದರಿಂದ, ರಾಯಚೂರಿನ ಸಾಮಾಜಿಕಪ್ರಭೇದಗಳ ಬಗೆಗಿನ ಚರ್ಚೆ ಇನ್ನೊಂದು ಪ್ರಾದೇಶಿಕ ಪ್ರಭೇದದ ಸಾಮಾಜಿಕಪ್ರಭೇದಗಳಿಗೂ ಅನ್ವಯಿಸಬಹುದು. ಉದಾಹರಣೆಗೆ ಪದದಾರಂಭದ ಹ– ವಿನ ಲೋಪ ಸಾಮಾನ್ಯವಾಗಿ ಎಲ್ಲ ಹರಿಜನರ ಅಥವಾ ಅಶಿಕ್ಷಿತ ಬ್ರಾಹ್ಮಣೇತರರ ಭಾಷೆಯ ವೈಶಿಷ್ಟ್ಯವೆಂದು ಹೇಳಬಹುದು.

ರಾಯಚೂರು ಕನ್ನಡದ ಬಗ್ಗೆ ಮಾತನಾಡುವಾಗ ಧಾರವಾಡ ಕನ್ನಡದ ಕೆಲವು ಗುಣಗಳನ್ನು ನಾನು ಪ್ರತಿಧ್ವನಿಸುತ್ತಿರಬಹುದು. ಇದಕ್ಕೆ ಕಾರಣ ರಾಯಚೂರು ಮತ್ತು ಧಾರವಾಡ ಕನ್ನಡಗಳ ಮೂಲ ಹೋಲಿಕೆ.

ಉತ್ತರದಲ್ಲಿ ಕಲಬುರ್ಗಿ ಜಿಲ್ಲೆ, ವಾಯುವ್ಯದಲ್ಲಿ ವಿಜಾಪುರ ಜಿಲ್ಲೆ, ದಕ್ಷಿಣದಲ್ಲಿ ಬಳ್ಳಾರಿ ಜಿಲ್ಲೆ, ಪಶ್ಚಿಮದಲ್ಲಿ ಧಾರವಾಡ ಜಿಲ್ಲೆ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶ ರಾಜ್ಯಗಳಿಂದ ರಾಯಚೂರು ಜಿಲ್ಲೆಯು ಸುತ್ತುವರಿಯಲ್ಪಟ್ಟಿದೆ. ಸ್ವಾಭಾವಿಕವಾಗಿ ಆಂಧ್ರಪ್ರದೇಶ ರಾಜ್ಯದ ಗಡಿಗೆ ಹತ್ತಿರವಿರುವ ರಾಯಚೂರಿನ ತಾಲೂಕುಗಳಲ್ಲಿ ತೆಲುಗಿನ ಪ್ರಭಾವ ಸಾಕಷ್ಟಿದೆ.

ಈ ಲೇಖನ ರಾಯಚೂರು ಕನ್ನಡವನ್ನು Standard Kannada (stk) ದೃಷ್ಟಿಯಿಂದ ಪರಿಶೀಲಿಸುತ್ತದೆ.

ಧ್ವನ್ಯಾತ್ಮಕ (Phonological) :

(ಅ) /æ/ ರಾಯಚೂರು ಜಿಲ್ಲೆಯ ಕನ್ನಡದಲ್ಲಿ ಒಂದು ಧ್ವನಿಮಾ. ಈ ಧ್ವನಿ ಮೈಸೂರು ಕನ್ನಡದಲ್ಲಿದ್ದರೂ ಅದಕ್ಕೆ ಧ್ವನಿಮಾದ ಸ್ಥಾನ ಕೊಡಲ್ಪಡುವುದಿಲ್ಲ. ರಾಯಚೂರು ಕನ್ನಡದಲ್ಲಿ / e / ಮತ್ತು /æ/ ದ ಅಂತರ (functional load of contrast) ಹೆಚ್ಚು.

(ಅ) Standard Kannada (stk) ದ ನಾಮಪದದಂತ್ಯದ / ಎ /, / ಇ / ಯಾಗಿ ಬದಲಾಯಿಸುತ್ತದೆ.

ತಲೆ > ತೆಲಿ	ಮನೆ > ಮನಿ
ಶಾಲೆ > ಸಾಲಿ	ಕೋಟೆ > ಕ್ವಾಟಿ

(ಇ) stk ದ ನಾಮಪದದಂತ್ಯದ / ಉ /, / ಅ / ಆಗಿ ಬದಲಾಯಿಸುತ್ತದೆ.

ಮೀನು > ಮೀನ	ಬಾಗಿಲು > ಬಾಗ್ಲ
ಬುಕ್ಕು > ಬುಕ್ಕ	ಕೆಚ್ಚಲು > ಕೆಚ್ಲ

ಮೈಸೂರು ಕನ್ನಡದಲ್ಲಿ ಈ ಪದದಂತ್ಯದ / ಉ / ಲೋಪವಾಗುತ್ತದೆ. ಆದರೆ ರಾಯಚೂರು ಕನ್ನಡದಲ್ಲಿ / ಅ / ದಿಂದ ಅಂತ್ಯವಾಗುತ್ತದೆ.

ಮೈ. ಕ. : ಕಲ್ ತಗಿ ರಾ. ಕ. : ಕಲ್ಲ ತಗಿ

ಮೈ. ಕ. : ಬಾಗಿಲ್ ತಗಿ ರಾ. ಕ. : ಬಾಗ್ಲ ತಗಿ

(ಈ) ಅನುನಾಸಿಕತೆ (nasalization) ವಿಜಾಪುರ ಮತ್ತು ಕಲಬುರ್ಗಿಗಳಲ್ಲಿ ಒಂದು ಧ್ವನಿಮಾ. ಆದರೆ ರಾಯಚೂರ ಕನ್ನಡದಲ್ಲಿ ಇದು ಧ್ವನಿಮಾ ಅಲ್ಲ. ಇದು ರಾಯಚೂರು ಕನ್ನಡವನ್ನು ವಿಜಾಪುರ ಮತ್ತು ಕಲಬುರ್ಗಿ ಕನ್ನಡಗಳಿಂದ ಪ್ರತ್ಯೇಕಿಸುವ ಒಂದು ಗಮನಾರ್ಹ ವೈಶಿಷ್ಟ್ಯ.

(ಉ) / z / ಇದು ರಾಯಚೂರು ಕನ್ನಡದಲ್ಲಿ ಕಂಡುಬರುವ ಒಂದು ಧ್ವನಿ. stk ದ / j / ವನ್ನು ಇದು ಕೆಲವೊಮ್ಮೆ ಸ್ಥಳಾಂತರಿಸುತ್ತದೆ (Replace).

(biija) ಬೀಜ > ಬೀಜ (biiza)

(ಊ) /ಅs/ ಮತ್ತು /ಅ/ ಧ್ವನಿಮಾಗಳು[೧] :

ಅಟ್ಟಿ — ಚರ್ಮದ ಅಟ್ಟಿಯ ಕೆಳಭಾಗ

ಅsಟ್ಟಿ — ದನಗಳನ್ನಿಡುವ ಸ್ಥಳ

ಅಗಸಿ — ಒಂದು ಜಾತಿಯ ಗಿಡ

ಅsಗಸಿ — ಕೋಟೆಯ ಮುಖ್ಯದ್ವಾರ

/ಅs/ stk ದಲ್ಲಿ ಕಂಡುಬರುವುದಿಲ್ಲ.

(ಋ) stk ದ ಪದಮಧ್ಯದ /ಏ/ /ಯಾ/ ಆಗಿಯೂ, /ಓ/ /ವಾ/ ಆಗಿಯೂ ಪರಿವರ್ತನೆಹೊಂದಿವೆ.

ಉದಾ : ಬೇಟೆ > ಬ್ಯಾಟಿ
ಬೇಸರ > ಬ್ಯಾಸ್ರ
ಬೇಳೆ > ಬ್ಯಾಳಿ
ಬೇನೆ > ಬ್ಯಾನಿ

ಓಲೆ > ವಾಲಿ
ತೋಟ > ತ್ವಾಟ
ಗೋಡೆ > ಗ್ವಾಡಿ

---

೧ ಸ್ವರದ ಅಥವಾ ವ್ಯಂಜನದ ಕೆಳಗೆ ಬಲತುದಿಯಲ್ಲಿರುವ ಒಂದು s ಚಿಹ್ನೆಯನ್ನು /ə/ ಎಂದೂ ಎರಡು s ಚಿಹ್ನೆಗಳನ್ನು /ə:/ ಎಂದೂ ತಿಳಿಯಬೇಕು.

ಈ ಎರಡನೆಯ ಧ್ವನಿಬದಲಾವಣೆ (ಓ > ವಾ) ಯು /ಲ/ ಅಥವಾ /ಳ/ ಮುಂದೆ /ಇ/ ಅಂಥ ಉನ್ನತಸ್ವರ (High vowel) ಬಂದಾಗ ಆಗುವುದಿಲ್ಲ.

ಉದಾ : ಗೋಲಿ > ಗೋಲಿ
ಹೋಳಿಗೆ > ಹೋಳ್ಗಿ

ಆಕೃತಿವಮಾತ್ಮಕ (Morphological) :

(ಅ) ಬಹುವಚನ ಪ್ರತ್ಯಯ ಸಾಮಾನ್ಯವಾಗಿ ಉಪಯೋಗಿಸಲ್ಪಡುವುದೇ ಇಲ್ಲ.

ನನ್ನತ್ರ ನೂರು ರೂಪಾಯಿ ಅವ್ಸ
ಅವ್ರು ದೊಡ್ಡ್ ದೊಡ್ಡ್ ದಾರಿ ಮಾಡ್ಯಾರ್ಸ

ಆದರೆ ಉಪಯೋಗಿಸಲ್ಪಟ್ಟಾಗ, ಬಹುವಚನ ಪ್ರತ್ಯಯ /-ಗೊಳು/; /-ಗಳು/ ಅಲ್ಲ.

ಉದಾ : ನಾಯಿಗೊಳು
ಸಾಲಿಗೊಳು

(ಆ) ಕೆಲವು ವಿಭಕ್ತಿಪ್ರತ್ಯಯಗಳು stk ಕ್ಕಿಂತ ಬೇರೆಯಾಗಿವೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಉರ್ದು ಮಾತೃಭಾಷೆಯಾದ ಎಲ್ಲರೂ ತಮ್ಮ ಕನ್ನಡದಲ್ಲಿ ದ್ವಿತೀಯಾ ವಿಭಕ್ತಿಯ ಬದಲು ಚತುರ್ಥಿ ವಿಭಕ್ತಿಪ್ರತ್ಯಯವನ್ನು ಉಪಯೋಗಿಸುವರು.

ರಾಮುನನ್ನು ಕರಿ > ರಾಮುಗ್ ಕರಿ
ಅವನನ್ನು ಕೊಲ್ಲು > ಆತಗ್ ಕೊಲ್ಲು

ರಾಯಚೂರಿನಲ್ಲಿ ಕನ್ನಡಿಗರೂ ಈ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ.

(ಇ) ದ್ವಿತೀಯಾ ವಿಭಕ್ತಿಪ್ರತ್ಯಯವು ಉಪಯೋಗಿಸಲ್ಪಡುವುದಿಲ್ಲ.

ಬಾಳೆ ಹಣ್ಣನ್ನು ತಿನ್ನು > ಬಾಳೆ ಹಣ್ಣು ತಿನ್ನು

(ಈ) stk ಯಲ್ಲಿ ತೃತೀಯಾ ವಿಭಕ್ತಿ (Instrumental) ಮತ್ತು ಪಂಚಮ ವಿಭಕ್ತಿ (Ablative)ಗೂ ವ್ಯತ್ಯಾಸವಿಲ್ಲ.

ಉದಾ : ಬೆಂಗಳೂರಿನಿಂದ ಬಂದೆ
ಚಾಕುನಿಂದ ಕೊಂದೆ

ಸಪ್ತಮಿ ವಿಭಕ್ತಿಪ್ರತ್ಯಯ /ಅಲ್ಲಿ/, ತೃತೀಯಾವಿಭಕ್ತಿ ಅರ್ಥದಲ್ಲಿ ಉಪಯೋಗಿಸಲ್ಪಟ್ಟಾಗ ಮಾತ್ರ ವ್ಯತ್ಯಾಸವಿದೆ.

ನಾನು ಬೆಂಗಳೂರಿನಿಂದ ಬಂದೆ
ನಾನು ಬಸ್ಸಿನಲ್ಲಿ ಬಂದೆ

ರಾಯಚೂರು ಜಿಲ್ಲೆಯ ಕನ್ನಡದಲ್ಲಿ ತೃತೀಯಾ ವಿಭಕ್ತಿಪ್ರತ್ಯಯ /–ಲೆ/ stk ದ /–ಇಂದ/ ದ ಉಪಯೋಗ ಬಹಳ ಕಡಿಮೆ.

ಆತ ನಾಯಿಗ್ ಕಲ್ಲೀಲೆ ಹೊಡ್ದ
ನಾವು ಊಟ ಕೈಲೆ ಮಾಡ್ತವಿ.

/ –ಇಂದ / ಉಪಯೋಗಿಸಲ್ಪಟ್ಟಾಗ, ಸಂಧಿನಿಯಮಗಳು stk ಕ್ಕಿಂತ ಭಿನ್ನ ವಾಗಿವೆ (ನೋಡಿ : 'ಸಂಧಿ')

(ಉ) ಸಪ್ತಮೀ ವಿಭಕ್ತಿಪ್ರತ್ಯಯ / –ಆಗ$_s$ /

ಅದರಾಗ್ ಏನೈತಿ ?
ಆತ ಮನ್ಯಾಗ್ ಅ$_s$ದಾನ$_s$.

(ಊ) ಮೂರನೆಯ ಪುರುಷ ಸರ್ವನಾಮ ರೂಪಗಳು :

ಪುಲ್ಲಿಂಗ ಅತ / ಆತ ಮತ್ತು ಸ್ತ್ರೀಲಿಂಗ ಅಕಿ / ಆಕಿ, ಇದು ರಾಯಚೂರು ಕನ್ನಡದ ಇನ್ನೊಂದು ವೈಶಿಷ್ಟ್ಯ. ಕಾರಣ ವಿಜಾಪುರ ಮತ್ತು ಕಲಬುರ್ಗಿಗಳಲ್ಲಿ ಮೂರನೆಯ ಪುರುಷ ಪುಲ್ಲಿಂಗ ಸರ್ವನಾಮ ರೂಪ /ಅಪ್ಪಿ/ ಅವ(ನು) ರಾಯಚೂರು ಕನ್ನಡದಲ್ಲಿ ವಯಸ್ಕರಿಗೆ ಅನ್ವಯಿಸುವುದೇ ಇಲ್ಲ. ಅದು ಹತ್ತುವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗರಿಗೆ ಮಾತ್ರ ಉಪಯೋಗಿಸಲ್ಪಡುತ್ತದೆ. stkದ / ಅವಳು / ರಾಯಚೂರು ಕನ್ನಡದಲ್ಲಿ ನಿಷೇಧ (taboo) ಶಬ್ದ. ಅದು ಸಾಮಾನ್ಯವಾಗಿ ಸೂಳೆಯ ರಂಥ ಹೆಂಗಸರಿಗೆ ಉಪಯೋಗಿಸಲ್ಪಡುತ್ತದೆ. / ಅವಳು / ರೂಪ ಉಪಯೋಗಿಸಲ್ಪ ಟ್ಟರೆ, ಮಾತನಾಡುವವನು ಆ ವ್ಯಕ್ತಿಯನ್ನು ತುಚ್ಛವಾಗಿ ಕಾಣುತ್ತಾನೆ ಎಂದು ತಿಳಿಯ ಬಹುದು. ಕೊಪ್ಪಳ ತಾಲೂಕಿನ ಹರಿಜನನಿಗೆ / ಆಕಿ / ಯೂ taboo ಒಂದು ಶಬ್ದ. ಕೆಲವರು / ಆಕಿ /ಯನ್ನು ಹೆಂಡತಿಗೆ ಮಾತ್ರ ಉಪಯೋಗಿಸುತ್ತಾರೆ.

(ಎ) 'ಇರು' ಧಾತುವಿನ ರೂಪಗಳಲ್ಲಿಯೂ ರಾಯಚೂರು ಜಿಲ್ಲೆಯ ಕನ್ನಡ ತನ್ನದೇ ಆದ ವೈವಿಧ್ಯತೆಯನ್ನು ಪಡೆದಿದೆ.

ಉತ್ತಮ ಪುರುಷ :	ಅ$_s$ದಿನಿ / ಅ$_s$ದೇನಿ	ಅ$_s$ದಿವಿ / ಅ$_s$ದೇವಿ
ಎರಡನೆಯ ಪುರುಷ :	ಅ$_s$ದಿ	ಅ$_s$ದಿರಿ
ಮೂರನೆಯ ಪುರುಷ :	ಐದಾನ$_s$ / ಐದಾಳ$_s$	ಐದಾರ$_s$
	ಅ$_s$ದಾನ$_s$ / ಅ$_s$ದಾಳ$_s$	ಅ$_s$ದಾರ$_s$
	ಅ$_s$ದ್ಯಾನ ಅ$_s$ದ್ಯಾಳ	ಅ$_s$ದ್ಯಾರ$_s$

ಐದಽ ಅದಽ ಐತಿ	ಐದಾವು ಅಽದಾವಽ

/ ಐದಾರ್ಽ / ರೂಪ, ಮಾನ್ವಿ ಮತ್ತು ಲಿಂಗಸಗೂರು ತಾಲೂಕುಗಳ ಸಾಮಾಜಿಕ, ಆರ್ಥಿಕ ನಿಮ್ನವರ್ಗಗಳ ಗುರುತು.

ಹಾನ / ಆನ, ಈನಿ / ಹೀನಿ ಕಲಬುರ್ಗಿ ಜಿಲ್ಲೆಗೆ ಸಮೀಪವಿರುವ ರಾಯಚೂರು ಜಿಲ್ಲೆಯ ತಾಲೂಕುಗಳಲ್ಲಿ ಉಪಯೋಗಿಸಲ್ಪಡುತ್ತವೆ.

ಉದಾ : ದಿಯೋದುರ್ಗ ತಾಲೂಕು. ವಸ್ತುತಃ ಈ ಧಾತುರೂಪಗಳು ಕಲಬುರ್ಗಿ ಕನ್ನಡದ ವೈಶಿಷ್ಟ್ಯಗಳು.

(ಏ) ' ಆಗು ' ಧಾತುವಿನ ಮೂರನೆಯ ಪುರುಷ ಏಕವಚನ ನಪುಂಸಕಲಿಂಗದ ಸಾಮಾನ್ಯಭೂತಕಾಲದ ರೂಪಗಳು ದಕ್ಷಿಣ ರಾಯಚೂರಿನಲ್ಲಿ ಆತು / ಆತಿ[೧]. ಆದರೆ ಕಲಬುರ್ಗಿ ಜಿಲ್ಲೆಗೆ ಸಮೀಪವಿರುವ ರಾಯಚೂರಿನಲ್ಲಿ 'ಆಯ್ತು'.

(ಐ) ವಿಧ್ಯರ್ಥ(Optative) ದಲ್ಲಿ stk ಯಲ್ಲಿ ಸಾಮಾನ್ಯವಾಗಿ ಎರಡು ಪ್ರತ್ಯಯಗಳು ಬಳಕೆಯಲ್ಲಿವೆ : –ಅಲಿ ಮತ್ತು –ಆ. ಮೊದಲನೆಯದು ಸುಖವನ್ನು ಬಯಸುವಾಗಲೂ ಎರಡನೆಯದು ಕೇಡನ್ನು ಹಾರೈಸುವಾಗಲೂ ಬಳಸಲ್ಪಡುತ್ತವೆ.

ನಿನ್ನ ಮನೆ ಹಾಳಾಗಾ !
ನಿನಗೆ ಕಲ್ಯಾಣವಾಗಲಿ !

ರಾಯಚೂರು ಕನ್ನಡದಲ್ಲಿ ಸುಖದ ಹಾರೈಕೆಗಾಗಲಿ ಅಥವಾ ಕೇಡಿನ ಹಾರೈಕೆಗಾಗಲಿ /–ಅಲಿ/ ಮಾತ್ರ ಉಪಯೋಗಿಸಲ್ಪಡುತ್ತದೆ.

(ಒ) ನಿಷೇದಾರ್ಥದಲ್ಲಿ stk ಗೂ ರಾಯಚೂರು ಕನ್ನಡಕ್ಕೂ ವ್ಯತ್ಯಾಸವಿದೆ. stk ಬರುವುದಿಲ್ಲ > ಬರಂಗಿಲ್ಲ / ಬರದಿಲ್ಲ / ಬರಗಿಲ್ಲ. ರಾಯಚೂರು ಕನ್ನಡದ 'ಬರಂಗಿಲ್ಲ' ಎಂಬ ರೂಪ stk ದ 'ಬರುವ ಹಾಗಿಲ್ಲ' ಎಂಬುದರ ಸಂಕ್ಷಿಪ್ತ ರೂಪ

ಬರುವಹಾಗಿಲ್ಲ > ಬರೋಹಾಗಿಲ್ಲ > ಬರೋಹಾಂಗಿಲ್ಲ > ಬರೋಂಗಿಲ್ಲ>
ಬರಂಗಿಲ್ಲ > ಬರಗಿಲ್ಲ.[೨]

---

೧ ಈ ರೂಪ ಲಿಂಗಸಗೂರು ತಾಲೂಕಿನಲ್ಲಿ ಕಂಡುಬರುತ್ತದೆ.

೨ ಬರಗಿಲ್ಲ, ಆಗಗಿಲ್ಲ ಮೊದಲಾದ ರೂಪಗಳು ಲಿಂಗಸಗೂರು, ಸಿಂಧನೂರು ತಾಲೂಕುಗಳಲ್ಲಿ ಸಿಗುತ್ತವೆ. ಹೊರತಾಲೂಕುಗಳಾದ ಕೊಪ್ಪಳ, ರಾಯಚೂರು, ದಿಯೋದುರ್ಗ ಮುಂತಾದವುಗಳಲ್ಲಿ ಬರಂಗಿಲ್ಲ ಕಾಣಂಗಿಲ್ಲ ರೂಪಗಳೇ ಬಳಕೆಯಲ್ಲಿವೆ.

ಈ ರೂಪ ಬದಲಾವಣೆ ಜೊತೆಗೆ ಅರ್ಥ ಬದಲಾವಣೆಯೂ ಆಗಿದೆ. stk ದಲ್ಲಿ 'ಬರುವ ಹಾಗಿಲ್ಲ' ಎಂದರೆ ಯಾವುದೋ ಕಾರಣದಿಂದ ವ್ಯಕ್ತಿಯು ಬರಲಿಕ್ಕಾಗುವುದಿಲ್ಲ ಎಂದು ಅರ್ಥ. 'I cannot come' ಇದರ ಸಂಕ್ಷಿಪ್ತರೂಪವಾದ ರಾಯಚೂರಿನ ಬರಂಗಿಲ್ಲ / ಬರಗಿಲ್ಲ ಎಂಬುದರ ಅರ್ಥ '(ನಾನು) ಬರುವುದಿಲ್ಲ' (I will not come).

(ಔ) ವರ್ತಮಾನನ್ಯೂನಸಾಪೇಕ್ಷ ಕ್ರಿಯಾಪದ (continuous participial) ಪ್ರತ್ಯಯ stk ಯಲ್ಲಿ –ಉತ್ತ. ಇದು ಕ್ರಿಯಾಪ್ರಕೃತಿಗೆ ಸೇರುತ್ತದೆ. ಆದರೆ ರಾಯಚೂರು ಕನ್ನಡದಲ್ಲಿ ಆತ್ಮಾರ್ಥಕಕ್ರಿಯಾಪದರೂಪ (reflexive base) ಸೇರುತ್ತದೆಯೇ ಹೊರತು ವರ್ತಮಾನನ್ಯೂನಸಾಪೇಕ್ಷ ಕ್ರಿಯಾಪ್ರತ್ಯಯವಲ್ಲ.

ಉದಾ : ಅವಳು ಕುಣಿಯುತ್ತಾ ಹೋದಳು > ಆಕಿ ಕುಣ್ಕ್ಯಂತ ಹೋದ್ಳು
ಅವನು ನಗುತ್ತ ಮಾತನಾಡಿದನು > ಆತ ನಕ್ಕ್ಯಂತ ಮಾತಾಡಿದ

(ಅಂ) stk ಯಲ್ಲಿ ನಿಷೇಧನ್ಯೂನರೂಪ (negative participial) ಗಳಾದ 'ಉಣ್ಣಲಾರದೆ' ಮತ್ತು 'ಉಣ್ಣದೆ' ಗಳಲ್ಲಿ ನಡುವೆ ಅರ್ಥವ್ಯತ್ಯಾಸವಿದೆ. 'ಉಣ್ಣಲಾರದೆ ಹೋದ' ಎಂಬ ವಾಕ್ಯದಲ್ಲಿ ಯಾವುದೋ ಕಾರಣದಿಂದ ಉಣ್ಣಲಿಕ್ಕಾಗಲಿಲ್ಲ ಎಂಬ ಅರ್ಥವಿದೆ. ಆದರೆ 'ಉಣ್ಣದೆ ಹೋದ' ಎಂಬ ವಾಕ್ಯದಲ್ಲಿ ಆ ಅರ್ಥವಿಲ್ಲ. ಎರಡನೇ ವಾಕ್ಯ ಏನು ಆಯಿತು ಎಂಬುದನ್ನು ಮಾತ್ರ ಹೇಳುತ್ತದೆ. It just states a fact. 'ಉಣ್ಣಲಿಕ್ಕಾಗಲಿಲ್ಲ' ಎಂಬ ಅರ್ಥವನ್ನು ಅದು ಸೂಚಿಸುವುದಿಲ್ಲ. ಆದರೆ ರಾಯಚೂರು ಕನ್ನಡದಲ್ಲಿ ಈ ಅರ್ಥವ್ಯತ್ಯಾಸವಿಲ್ಲ.

೧ ಪರಮೇಶಿ ಉಣ್ಣಲಾರದ್ಸ ಹೋದ
೨ ಪರಮೇಶಿ ಉಣ್ಣದ್ಸ ಹೋದ
೩ ಪರಮೇಶಿ ಉಣ್ಣದಂಗs ಹೋದ

ಈ ಮೂರು ವಾಕ್ಯಗಳು ಸಮಾನಾರ್ಥವನ್ನು ಸೂಚಿಸುತ್ತವೆ.

/ –ರೇ / stk ದ ಪಕ್ಷಾರ್ಥಪ್ರತ್ಯಯ. ರಾಯಚೂರು ಕನ್ನಡದಲ್ಲಿ ಇದು, / –ರs /.

ಹೋದರೆ > ಹೋದರs
ಬಂದರೆ > ಬಂದರs
ಇದ್ದರೆ > ಇದ್ದರs

(ಅಃ) stk ದ ಅವಧಾರಣೆಪ್ರತ್ಯಯ / –ಲೇ /: ರಾಯಚೂರು ಕನ್ನಡದಲ್ಲಿ ಇದು / –ಅss /.

ಇರಲೇ ಬೇಕು > ಇರ್ₛₛಬೇಕು > ಇರ್ₛₛಬ್ₛಕು
ಮಾಡಲೇ ಬೇಕು > ಮಾಡ್ₛₛಬೇಕು > ಮಾಡ್ₛₛಬ್ₛಕು

(ಕ) ಅದರಂತೆ ಸಾಪೇಕ್ಷಕ್ರಿಯಾಪದ (relative participial suffix) ಪ್ರತ್ಯಯವೂ /–ಅs / ಅಥವಾ /- ಉ / ಆದರೆ, stk ಯಲ್ಲಿ ಅದು /–ಓ /.

stk ಯಲ್ಲಿ : ಓದೋ ಹುಡುಗ > ಓದ್ₛ ಹುಡುಗ
ಓದು ಹುಡುಗ

(ಖ) ವಿದ್ಯರ್ಥರೂಪದ ಉತ್ತಮಪುರುಷ ಬಹುವಚನ (hortative) ರೂಪ ಗಳು ಈ ರೀತಿ ಇವೆ :

ನಾವು ಹೋಗೋಣ
ಹೋಗೋನ್
ಹೋಗನ
ಹೋಗ್ₛನ
ಹೋಗವ್

ಹಳಗನ್ನಡವನ್ನು ನೆನಪಿಗೆ ತರುವಂಥ / ಹೋಗವ್ / ಎಂಬ ರೂಪ ಲಿಂಗಸಗೂರು ಮತ್ತು ದಿಯೋದುರ್ಗ ತಾಲೂಕುಗಳಲ್ಲಿ ದೊರೆಯುತ್ತದೆ. stk ದ 'ಹೋಗೋಣ' ಎಂಬ ರೂಪದ ಬಳಕೆ ಕಡಿಮೆ.

(ಗ) 'ನೀರು' stk ಯಲ್ಲಿ ಸಾಮಾನ್ಯವಾಗಿ ವಾಕ್ಯರಚನೆಯಲ್ಲಿ (syntax) ಏಕವಚನದಂತೆ ಉಪಯೋಗಿಸಲ್ಪಡುತ್ತದೆ. ಆದರೆ ರಾಯಚೂರಿನಲ್ಲಿ ಅದು ಬಹು ವಚನದಂತೆ ಉಪಯೋಗಿಸಲ್ಪಡುತ್ತದೆ.

stk. ನೀರು ಇದೆ.
ರಾ. ಕ. ನೀರು ಅವ್ₛ

(ಘ) stk ಯಲ್ಲಿ ವಸ್ತುಗಳನ್ನು ಗುರುತಿಸುವಾಗ / –ಓ / ಮತ್ತು ಸಾಮಾನ್ಯ ಪ್ರಶ್ನೆಗಳಲ್ಲಿ / –ಆ / ಪ್ರಶ್ನಾರ್ಥಕ ಪ್ರತ್ಯಯಗಳಾಗಿ ಉಪಯೋಗಿಸಲ್ಪಡು ತ್ತವೆ.

ಉದಾ : ೧. ಅದು ಗಂಡೊ ಹೆಣ್ಣೋ ?
೨. ರೈಲು ಬಂತಾ ?

ರಾಯಚೂರು ಕನ್ನಡದಲ್ಲಿ /–ಓ/ ದ ಬಳಕೆಯೇ ಇಲ್ಲ. /–ಆ/ ಬದಲು /–ಅₛ/ ಬಳಕೆಯಾಗುತ್ತದೆ.

ಉದಾ : (೧) ಅದು ಗಂಡ$_{ss}$ ಹೆಣ್ಣ$_{ss}$?

ಅಥವಾ

ಅದು ಗಂಡೈತ$_{ss}$, ಹೆಣ್ಣೈತ$_{ss}$?

(೨) ಗಾಡಿ ಬತ್ತ$_{ss}$?

(ಜ) ಕೆಲವು ಅನುಸರ್ಗಾವ್ಯಗಳು :

(೧) ಎಲ್ಲೆ, ಅವಧಿ ಸೂಚಿಸಲು ರಾಯಚೂರು ಕನ್ನಡ / –ತನ / ಎಂಬ ಅನುಸರ್ಗಾವ್ಯಯವನ್ನು ಬಳಸುತ್ತದೆ.

(೨) ಯಾವುದಾದರೊಂದು ವಸ್ತು, ವ್ಯಕ್ತಿಯು ವಶದಲ್ಲಿದೆಯೆಂದು ಸೂಚಿಸಲು ರಾಯಚೂರು ಕನ್ನಡ ಬಳಸುವ ಅನುಸರ್ಗಾವ್ಯಯಗಳು :

ಅತ್ತೆಲೆ / ತಾಕ್$_{s}$ / ಬತೆಕ್ / ಕಡೆ

ಉದಾ : ಆತನ್ ಬತೆಕ್ ಐದು ರೂಪಾಯಿ ಅವ್$_{s}$
ಆಕಿ ಕಡೆ ಎರಡು ಪೆನ್ನು ಅವ್$_{s}$
ನಿನ್ನತ್ತೆಲೆ ಏಸವ್$_{s}$?
ಆತನ್‌ತಾಕ್ ಐತ್$_{s}$ ನೋಡು.

(೩) stk ದ 'ಸಹಿತ'ದ ಸಮಾನಾರ್ಥ ಕೊಡುವ ಅನುಸರ್ಗಾವ್ಯಯ :

ಸೈತ / ಸತೆಗ್ / ಸತೆಕ್.

ಸಂಧಿ (Morphophonemics) :

(i) ಪ್ರತ್ಯಯಗಳು ಪ್ರಕೃತಿಯನ್ನು ಸೇರುವಾಗ ಅಥವಾ ಪ್ರಕೃತಿ ಪ್ರಕೃತಿ ಸೇರುವಾಗ, ವರ್ಣಗಳು ಕೂಡುವುದೂ ಸಂಧಿಯಾಗುವಾಗ ಮೊದಲು ಇದ್ದ ಧ್ವನಿ ಲೋಪವಾಗುವುದೂ ಹೊಸದೊಂದು ಧ್ವನಿ ಬಂದು ಸೇರುವುದೂ ಮೊದಲಾದ ವ್ಯತ್ಯಾಸಗಳಿಗೆ ಸಂಧಿಕ್ರಿಯೆಗಳೆಂದು ಹೆಸರು. ಸಂಧಿ ವಿಷಯದಲ್ಲೂ ರಾಯಚೂರು ಕನ್ನಡ stk ಕ್ಕಿಂತ ಕೆಲವೆಡೆ ಬೇರೆಯಾಗಿದೆ. ಇಲ್ಲಿ ಕೆಲವು ವ್ಯತ್ಯಾಸಗಳನ್ನು ಕೊಡಲಾಗಿದೆ.

ಹಿಂದೆ ಹೇಳಿದಂತೆ stk ದ ತೃತೀಯಾ ವಿಭಕ್ತಿ /–ಇಂದ / ರಾಯಚೂರು ಕನ್ನಡದಲ್ಲಿ ಕಡಿಮೆ ಬಳಕೆಯಾಗುತ್ತದೆ. ಆದರೆ ಬಳಕೆಯಾದಾಗ ಈ ಕೆಳಗಿನ ಸಂಧಿ ಕಾರ್ಯ ನಡೆಯುತ್ತದೆ.

ಬಿಲ್ಲು	+	ಇಂದ	>	ಬಿಲ್ಲಿನಿಂದ	>	ಬಿಲ್ಲಿಲಿಂದ
ಕಲ್ಲು	+	ಇಂದ	>	ಕಲ್ಲಿನಿಂದ	>	ಕಲ್ಲಿಲಿಂದ
ಕೈ	+	ಇಂದ	>	ಕೈಯಿಂದ	>	ಕೈಲಿಂದ
ಬಾಣ	+	ಇಂದ	>	ಬಾಣದಿಂದ	>	ಬಾಣದ್ಲಿಂದ

ಈ ಎಲ್ಲ ಉದಾಹರಣೆಗಳಲ್ಲೂ ರಾಯಚೂರು ಕನ್ನಡದಲ್ಲಿ ಲಕಾರಾಗಮವಾಗಿದೆ. ಕೊನೆಗೆ ಉದಾಹರಣೆಯಲ್ಲಿ ಲಕಾರದ ಜೊತೆಗೆ ದಕಾರಾಗಮವೂ ಆಗಿದೆ. ಆದರೆ stk ದಲ್ಲಿ ನ, ಯ ಮತ್ತು ದಕಾರಾಗಮವಾಗಿವೆ.

(ii) ಇಪ್ಪತ್ತಾದ ಮೇಲೆ ಪ್ರತಿ ಒಂಭತ್ತನೆಯ ಸಂಖ್ಯಾವಾಚಕ, ಇನ್ನೊಂದು ದಶಕ ಸಂಖ್ಯಾವಾಚಕ ಪ್ರಕೃತಿಯೊಡನೆ ಸೇರಿ ಸಂಯುಕ್ತಸಂಖ್ಯಾವಾಚಕ (compound numeral) ಆಗುವಾಗ ರಕಾರವಾಗುತ್ತದೆ.

ಇಪ್ಪತ್ತು + ಒಂಭತ್ತು => ಇಪ್ಪತ್ತೊಂಭತ್ತು => ಇಪ್ಪತ್ರೊಂಭತ್ತು
ನಲವತ್ತು + ಒಂಭತ್ತು => ನಲವತ್ತೊಂಭತ್ತು => ನಲವತ್ರೊಂಭತ್ತು

stk ದಲ್ಲಿ ಮೊದಲನೆಯ ಪ್ರಕೃತಿಯ ಪದದಂತ್ಯದ ಸ್ವರ ಲೋಪವಾಗಿದೆ. ಆದರೆ ರಾಯಚೂರು ಕನ್ನಡದಲ್ಲಿ ಈ ಲೋಪದ ಜೊತೆಗೆ ರಕಾರಾಗಮವಾಗಿದೆ.

(iii) 'ಕೊಲ್ಲಿದ' ಎಂಬ ರೂಪ stk ದಲ್ಲಿ ವ್ಯಾಕರಣಬದ್ಧವಾದ ರೂಪವಲ್ಲ. stk ದಲ್ಲಿ ಕ್ರಿಯಾಪ್ರಕೃತಿ ಕಾಲಪ್ರತ್ಯಯಗಳನ್ನು ತೆಗೆದುಕೊಳ್ಳುವಾಗ 'ಕೊನ್' ಕೊನ್ ಆಗೇ ಉಳಿಯುತ್ತದೆ.

ಕೊನ್ + ದ + ಅನು => ಕೊಂದನು.

ಆದರೆ ಬೇಕು–ಬೇಡ ಎಂಬ ಕ್ರಿಯಾರ್ಥಕಾವ್ಯಯಗಳನ್ನು ತೆಗೆದುಕೊಳ್ಳುವಾಗ 'ಕೊನ್' 'ಕೊಲ್' ಆಗಿ ಬದಲಾಗುತ್ತದೆ.

ಕೊನ್ + ಬೇಕು => ಕೊಲ್ಲಬೇಕು
ಕೊನ್ + ಬಾರದು => ಕೊಲ್ಲಬಾರದು

ಆದರೆ ರಾಯಚೂರು ಕನ್ನಡದಲ್ಲಿ ಕ್ರಿಯಾಪ್ರಕೃತಿಗೆ ಕಾಲಪ್ರತ್ಯಯಗಳನ್ನು ಸೇರಿಸುವಾಗ /ಕೊಲ್/ ಕ್ರಿಯಾಪ್ರಕೃತಿಯಾಗುತ್ತದೆ. ಆಗ 'ಕೊಲ್ಲಿದ' ಎಂಬ ರೂಪ ರಾಯಚೂರು ಕನ್ನಡದಲ್ಲಿ ವ್ಯಾಕರಣಬದ್ಧ ರೂಪವಾಗುತ್ತದೆ.

ಅದೇ ರೀತಿ stk ದಲ್ಲಿ ಬೇಕು, ಬೇಡ ಕ್ರಿಯಾರ್ಥಕಾವ್ಯಯಗಳು ಸೇರುವಾಗ 'ಕೀಳು' ಧಾತು ಏನೂ ಬದಲಾವಣೆ ಹೊಂದುವುದಿಲ್ಲ. ಆದರೆ ಕಾಲಪ್ರತ್ಯಯಗಳು ಸೇರುವಾಗ ಮಾತ್ರ ಧಾತು ರೂಪ ಬದಲಾಯಿಸುತ್ತದೆ.

ಕೀಳ್ + ಬೇಕು => ಕೀಳ್ಬೇಕು
ಆದರೆ ಕೀಳ್ + ತ್ => ಕಿತ್

ಉದಾ : ಕಿತ್ತನು, ಕಿತ್ತಳು

ರಾಯಚೂರು ಕನ್ನಡದಲ್ಲಿ 'ಕಿತ್' ಎಂಬುದನ್ನೇ ಪ್ರಕೃತಿಯಾಗಿ ಪರಿಗಣಿಸ ಬಹುದು ಅಥವಾ 'ಕೀಳ್' ಎಂಬ ಪ್ರಕೃತಿ ಕ್ರಿಯಾರ್ಥಕಾವ್ಯಯಗಳ ಜೊತೆಗೆ 'ಕಿತ್'

ಆಗಿ ಮಾರ್ಪಾಡಾಗುತ್ತದೆ ಎಂದು ಹೇಳಬಹುದು. ಆಗ ಕಿತ್ತಬೇಕು, ಕಿತ್ತಬಾರದು ಎಂಬ ರೂಪಗಳು ಪರಿಣಮಿಸುತ್ತವೆ.

(iv) ಅಂತರ್ಪದ ಸಂಧಿ (external sandhi) ಯಲ್ಲಿ ಧ್ವನಿಪಲ್ಲಟ (metathesis) ವಾಗುತ್ತದೆ.

ಸಂಜಿಗಿ ಬಾ => ಸಂಜೀಗ್ ಬಾ
ಅಂಜಿಕಿ ಬಂದು => ಅಂಜೀಕ್ ಬಂದು

(v) /ಇ/ ಸ್ವರಾಂತ್ಯದ ಕ್ರಿಯಾಪ್ರಕೃತಿಗೆ ಗೌರವಾರ್ಥ (honorific) 'ರಿ' ಸೇರಿದಾಗ /ಇ/ ಲೋಪವಾಗುತ್ತದೆ.

stk. ನಡಿ + ರಿ => ನಡಿರಿ
ರಾ. ಕ. ನಡಿ + ರಿ => ನಡ್ರಿ

ಅರ್ಥಾತ್ಮಕ (Semantic) :

stk ಗೂ ರಾಯಚೂರು ಕನ್ನಡಕ್ಕೂ ಅರ್ಥವ್ಯತ್ಯಾಸಗಳು ಸಾಕಷ್ಟಿವೆ. ಕೆಲವು ವಿಶಿಷ್ಟ ಅರ್ಥವ್ಯತ್ಯಾಸಗಳನ್ನು ಕೆಳಗೆ ಕೊಡಲಾಗಿದೆ.

(i) 'ಗುದ್ದಲಿ' ಅಂದರೆ stk ಯಲ್ಲಿ ಇಂಗ್ಲಿಷಿನ 'spade'. ಆದರೆ ರಾಯಚೂರು ಕನ್ನಡದಲ್ಲಿ ಅದು 'pickaxe' ಎಂಬ ಅರ್ಥವನ್ನು ಕೊಡುತ್ತದೆ.

(ii) 'ಕಾರಣ' ಎಂಬ ಪದ ರಾಯಚೂರು formal ಕನ್ನಡದಲ್ಲಿ 'ಆದ್ದರಿಂದ' ಎಂಬ ಅರ್ಥವನ್ನೂ ಕೊಡುತ್ತದೆ.

(iii) ಮರ ಮತ್ತು ಗಿಡ ಸಮಾನಾರ್ಥವನ್ನು ಸೂಚಿಸುತ್ತವೆ (synonymus)

(iv) 'ಕುರಿ' ದಕ್ಷಿಣರಾಯಚೂರಿನಲ್ಲಿ 'ಕುರಿಮಾಂಸ' derived ಅರ್ಥವನ್ನು ಕೊಡುತ್ತದೆ. ಅದು ಪ್ರಾಣಿಗೆ ಅನ್ವಯಿಸುವುದಿಲ್ಲ.

(v) 'ಅಗ್ಗ' ಎಂಬ ಪದ 'cheap' ಅಥವಾ 'ತುಟ್ಟಿಯಲ್ಲಿ' ಎಂಬ ಅರ್ಥವನ್ನು ಕಳೆದುಕೊಂಡಿದೆ. ಅದು ಹಗ್ಗವನ್ನು ಮಾತ್ರ ಸೂಚಿಸುತ್ತದೆ.

(vi) stk ಯ 'ಸಾಲ' ಎಂಬ ಪದ ರಾಯಚೂರು ಕನ್ನಡದಲ್ಲಿ ಈ ಕೆಳಗಿನ ಅರ್ಥವ್ಯತ್ಯಾಸ (Conceptual distinctions) ಗಳನ್ನು ಹೊಂದಿದೆ.

'ಸಾಲ' (i) ಸಾಲ– ಬಡ್ಡಿಯೊಂದಿಗೆ ಒಂದು ದೊಡ್ಡ ಅವಧಿಯ ವರೆಗೆ ಕೊಡುವ ಸಾಲ.

(ii) ಉದ್ರಿ– ಪಶು, ದವಸಧಾನ್ಯ ಇತ್ಯಾದಿ ವಸ್ತುಗಳ ಬಡ್ಡಿ ರಹಿತ ಸಾಲ.

(iii) ಕೈಗಡ– ಸ್ವಲ್ಪ ಸಮಯದ ವರೆಗೆ ಬಡ್ಡಿರಹಿತವಾಗಿ ಕೊಡುವ ಸಣ್ಣ ಮೊತ್ತ.

(vii) stk ಯ 'ಅಗುಳಿ' ಎಂಬ ಪದ, ರಾಯಚೂರು ಜಿಲ್ಲೆಯ ದಕ್ಷಿಣ ತುದಿಯಲ್ಲಿ ಉಪಯೋಗಿಸಲ್ಪಟ್ಟರೂ ರಾಯಚೂರು ಕನ್ನಡದ ವಿಶಿಷ್ಟ ಪದ 'ಲಾಳಗುಂಡಗಿ'. ಲಾಳಗುಂಡಗಿ ಅಂದರೆ ಬಾಗಿಲಿಗೆ ಒಳಗಿನಿಂದ ಅಡ್ಡಹಾಕುವ ಮರದ ತುಂಡು. 'ಚಿಲಕ' stk ದ ಅರ್ಥವನ್ನೇ ಉಳಿಸಿಕೊಂಡಿದೆ (ಕಬ್ಬಿಣದಿಂದ ಮಾಡಲ್ಪಟ್ಟ ಸರಪಳಿ). ಕೆಲವು ಕಡೆ (ಉದಾ : ಸಿಂಧನೂರು) ಲಾಳಗುಂಡಗಿಗೆ 'ಲಾಳ' ವೆಂದೂ ಅನ್ನುತ್ತಾರೆ.

(viii) 'ಕರ್ಚಿಕಾಯಿ' stk ದಲ್ಲಿ ಒಂದು ಸಿಹಿ ಅಡಿಗೆ. ರಾಯಚೂರು ಕನ್ನಡದಲ್ಲಿ ಅದಕ್ಕೆ ಕಾಡಿನಲ್ಲಿ ಬೆಳೆಯುವ ಸಾರು ಮಾಡಬಹುದಾದಂಥ ಒಂದು ಸೊಪ್ಪು ಎಂಬ ಅರ್ಥವೂ ಇದೆ.

(ix) 'ಕಾಡಿಗೆ' ಅಂದರೆ ಕಣ್ಣಿಗೆ ಹಾಕುವ 'ಕಾಡಿಗೆ' ಅಲ್ಲದೆ ದವಸಧಾನ್ಯಗಳನ್ನು ನಿಷ್ಪ್ರಯೋಜಕಗೊಳಿಸುವ ಅವುಗಳ ಮೇಲೆ ಶೇಖರಿಸುವ ಒಂದು ಕಪ್ಪು ಪದಾರ್ಥವನ್ನೂ ಸೂಚಿಸುತ್ತದೆ.

(x) 'ಹೆಂಗಸು' ಅಂದರೆ ಸಾಮಾನ್ಯವಾಗಿ 'ಸೂಳೆ' ಎಂಬ ಅರ್ಥ ಸೂಚಿಸುತ್ತದೆ. ರಾಯಚೂರಿನವರು ಹೆಣ್ಣುಮಕ್ಕಳನ್ನು 'ಆಯವ್ವ', 'ಆಯಮ್ಮ' ಎಂದು ಕರೆಯುವರು.

(xi) 'ಬತ್ತ' ಅಂದರೆ ಅಕ್ಕಿಯನ್ನು ಕೊಡುವ ಧಾನ್ಯ (Paddy) ಎಂಬ ಅರ್ಥವಿಲ್ಲ. ಅದು ಎಲ್ಲ ಧಾನ್ಯಗಳಿಗೂ ಅನ್ವಯಿಸುವ ಸಾಮಾನ್ಯ ಪದ (a generic concept). stk 'ಬತ್ತ'ದ ಸಮಾನಾರ್ಥ ಪದ ರಾಯಚೂರು ಕನ್ನಡದಲ್ಲಿ 'ನೆಲ್ಲು'.

ಪದರೂಪ (Lexical) :

ರಾಯಚೂರು ಕನ್ನಡದ ಮೇಲೆ ಉರ್ದು ಪ್ರಭಾವ ಆಗಿದ್ದರೂ ಅದು ಕಲಬುರ್ಗಿ ಕನ್ನಡದ ಮೇಲಿದ್ದಷ್ಟು ಇಲ್ಲ. ಈ ಪ್ರಭಾವ ಹೆಚ್ಚುಕಡಿಮೆ lexisಗೆ ಸೀಮಿತವಾಗಿದೆ. ರಾಯಚೂರು ಕನ್ನಡದ ಕೆಲವು ಸಾಮಾನ್ಯ ಉರ್ದು ಶಬ್ದಗಳು :

ರಾ. ಕ.	stk	ರಾ. ಕ.	stk
ಸಡಕ್	ರಸ್ತೆ	ಪೇಲೆ	ಮೊದಲು
ಪರೇಶಾನ್	ಬೇಜಾರು	ಆವಾಜ್	ಶಬ್ದ
ನದರ್(ನಜರ್)	ದೃಷ್ಟಿ	ಮೇನತ್/ಜೀತ	ಕೆಲಸ

ಜಿಮ್ಮೇದಾರ್	ಜವಾಬ್ದಾರ	ಹಮೇಶ	ಯಾವಾಗಲೂ
ಮದದ್	ಸಹಾಯ	ಜರ	ಸ್ವಲ್ಪ
ಅಚಾನಕ್	ಅಕಸ್ಮಾತ್	ತರಿಕಾ	ಸಂಬಳ
ದೂಕಾನ್	ಅಂಗಡಿ	ವಜಾ	ಕಳೆ (ಕ್ರಿ)
ತಾರೀಫ್	ಹೊಗಳಿಕೆ	ದೋಸ್ತ್	ಗೆಳೆಯ
ಆರಾಮ್	ವಿಶ್ರಾಂತಿ	ಕಿಮ್ಮತ್	ಬೆಲೆ
ಸಸ್ತಾ	ಅಗ್ಗ	ಬಜಾರ್	ಮಾರ್ಕೆಟ್
ದೀಡ್	ಒಂದೂವರೆ	ಸವಾ	ಒಂದೂಕಾಲು
ಪೌನೆ ದೋ	ಒಂದೂಮುಕ್ಕಾಲು	ಬಾರಾ	ಹನ್ನೆರಡು
ದೋನಸೆ(ಮರಾಠಿ)	ಇನ್ನೂರು	ಸಂಬೂರಿ(ಮರಾಠಿ)	ಒಂದುನೂರು

ಹಳೆಪೀಳಿಗೆಯವರು ಉರ್ದು ಶಬ್ದಗಳನ್ನು ಅದರಲ್ಲೂ ಉರ್ದು ಸಂಖ್ಯಾವಾಚಕಗಳನ್ನು ಧಾರಾಳವಾಗಿ ಉಪಯೋಗಿಸುತ್ತಾರೆ. ಆದರೆ ಇಂದಿನ ಯುವ ಜನಾಂಗ (ಪ್ರಾಯಶಃ ನಿಜಾಮರ ಆಳ್ವಿಕೆಯಲ್ಲಿ ಇವರು ಬರಲಿಲ್ಲವಾದ್ದರಿಂದ) ಮೇಲೆ ಕೊಟ್ಟ ಸಂಖ್ಯಾವಾಚಕಗಳನ್ನು ಬಿಟ್ಟರೆ, ಕನ್ನಡ ಸಂಖ್ಯಾವಾಚಕಗಳನ್ನೇ ಉಪಯೋಗಿಸುತ್ತಾರೆ.

ಈ ಅನ್ಯದೇಶ್ಯ (loan words) ಶಬ್ದಗಳಲ್ಲದೆ, ರಾಯಚೂರು ಕನ್ನಡ lexisನಲ್ಲಿ ತನ್ನದೇ ಆದ ಪದಗಳನ್ನೂ ಬಳಸುತ್ತದೆ.

ರಾ. ಕ	stk	ರಾ. ಕ.	stk
ಜಂಗು	ತುಕ್ಕು	ಮಾರಿ	ಮುಖ
ಕಾಳಜಿ	ಚಿಂತೆ (care)	ಅ್ಯರಿವಿ	ಬಟ್ಟೆ
ಬ್ಯಾನಿ	ನೋವು	ಜಡ್ಡು	ರೋಗ[೧]
ತಾಸು	ಗಂಟೆ	ಮ್ಯಂದಿ	ಜನರು
ತ್ಯತ್ತಿ	ಮೊಟ್ಟೆ	ಕಡಾಯಿ[೨]	ಬಾಣಲೆ
ಕಟ್ಗಿ	ಸೌದೆ	ದೌಡ್	ಬೇಗ
ಬ/ಬೊಕ್ಕಣ	ಕಿಸೆ/ಜೇಬು	ರಗಡ್	ಬಹಳ
ಅಡ್ವಿ	ಕಾಡು	ಕಾಪಿ	ಒಂದು ಸಣ್ಣ
ಕಾಯಿಪಲ್ಲೆ	ತರಕಾರಿ		ನೋಟ್ ಬುಕ್
ಹೆಂಡಿ/ಯಂಡಿ	ಸೆಗಣಿ	ತ್ರಾಸ	ತೊಂದರೆ

೧ 'ರೋಗ' ಅಂದರೆ ಗುಣಪಡಿಸಲಾರದ ಒಂದು ಭಯಂಕರ ರೋಗ.

೨ stk ದಲ್ಲಿ 'ಕಡಾಯಿ' ಅಂದರೆ ನೀರು ಕಾಯಿಸುವ ಒಂದು ದೊಡ್ಡ ಪಾತ್ರೆ.

ತುಟ್ಟಿ	ದುಬಾರಿ	ಚತ್ರಿ	ಕೊಡೆ[೧]
ಪಟ್ಟಿ	ಚಂದಾ	ಚಾಳೀಸ್	ಕನ್ನಡಕ
ಗಾಸಲೆಣ್ಣೆ/ಚಿಮಣೆಣ್ಣೆ	ಸೀಮೆ ಎಣ್ಣೆ	ಕೂನ	ಪರಿಚಯ

ಪಾರ (ಹುಡುಗ), ಪೋರಿ (ಹುಡುಗಿ) ದಿಯೋದುರ್ಗ ತಾಲೂಕಿನಲ್ಲಿ ಉಪಯೋಗಿಸಲ್ಪಡುತ್ತವೆ. ವಸ್ತುತಃ ಈ ಪದಗಳು ಕಲಬುರ್ಗಿ ಕನ್ನಡದ ವೈಶಿಷ್ಟ್ಯಗಳು.

ಕೆಲವು ಪದಬಳಕೆಯ (Stylistic) ವ್ಯತ್ಯಾಸಗಳು :

(೧) ಮೈಸೂರು ಕನ್ನಡದಲ್ಲಿ 'ಏನ್ರಿ' ಎಂಬುದನ್ನು ಒಬ್ಬ ವ್ಯಕ್ತಿಯು ಸಂಭಾಷಣೆಯ ವಿಷಯದ ಬಗ್ಗೆ ಇನ್ನೊಬ್ಬ ವ್ಯಕ್ತಿಯ ಅಭಿಪ್ರಾಯ ಪಡೆಯಲು ಪ್ರಚೋದನಾರೂಪ (Stimulus) ವಾಗಿ ಉಪಯೋಗಿಸುತ್ತಾನೆ. ರಾಯಚೂರು ಕನ್ನಡದಲ್ಲಿ ಅದು 'ಏನ್ರಿ' ಅಲ್ಲ, 'ಯಾಕ್ರಿ'.

(೨) stk ಯ 'ಹಾಗೇ ಆಗಲಿ' ಎಂಬುದಕ್ಕೆ ಸಮಾನವಾಗಿ ರಾಯಚೂರ ಕನ್ನಡದಲ್ಲಿ 'ಅಷ್ಟೇ ಮಾಡ್ರಿ' ಎಂದು ಹೇಳುತ್ತಾರೆ.

(೩) ವಿಷಯವನ್ನು ಮೊದಲಬಾರಿಗೆ ಅರಿತ ವ್ಯಕ್ತಿಯು 'ಹೀಂಗಾ' ಎನ್ನುತ್ತಾನೆ. ಇದು ಇಂಗ್ಲಿಷಿನ 'I see' ಎಂಬ ಪ್ರತಿಕ್ರಿಯೆಗೆ ಸಮ.

ಹಳೆಯ ಪೀಳಿಗೆಯವರು ಕಾಲ ಮತ್ತು ದೂರವನ್ನು ಅಳೆಯುವ ಹಿಂದಿನ ಪದ್ಧತಿಗಳನ್ನೇ ಉಪಯೋಗಿಸುತ್ತಾರೆ.

'ಅರದಾರಿ'– ದೂರಮಾಪನದ ಒಂದು ಪ್ರಮಾಣ (Unit).

ದಿನದ ಸಮಯವನ್ನು ಸೂರ್ಯನಿರುವ ಸ್ಥಾನಕ್ಕನುಗುಣವಾಗಿ ಹೇಳಲಾಗುತ್ತದೆ. ಸೂರ್ಯನಿರುವ ಮೂರು ಸ್ಥಾನಗಳನ್ನು– ಸಾಯಂಕಾಲದ ಆರು ಘಂಟೆ, ಮಧ್ಯಾಹ್ನ ಹನ್ನೆರಡು ಘಂಟೆ ಮತ್ತು ಬೆಳಿಗ್ಗೆ ಆರು ಘಂಟೆ– ನಿರ್ದೇಶನ ಸ್ಥಾನ (Reference point)ವನ್ನಾಗಿ ಇಟ್ಟುಕೊಂಡು ಸಮಯ ಹೇಳಲಾಗುತ್ತದೆ. ಉದಾಹರಣೆಗೆ : 'ಹೊತ್ತಿಗೆ ಮುಂಚೆ ಎರಡು ತಾಸು' ಅಂದರೆ ಸಾಯಂಕಾಲದ ನಾಲ್ಕು ಘಂಟೆ.

ಸಾಮಾಜಿಕ ಪ್ರಭೇದಗಳು :

ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಮತ್ತು ಶಿಕ್ಷಣಗಳಿಂದ ಸಮಾಜ ವರ್ಗೀಕೃತವಾಗಿದೆ. ಬ್ರಾಹ್ಮಣರು ಮತ್ತು ಬಹುತೇಕ ಲಿಂಗಾಯತರು ಆರ್ಥಿಕವಾಗಿ,

೧ ಅಧಿಕ ಸ್ಥಳಗಳಲ್ಲಿ ಕೊಡೆ ಅಂದರೆ ದೇವರಿಗೆ ಹಿಡಿಯುವ ಛತ್ರಿ.

ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮುಂದುವರಿದವರಾದರೆ ಹರಿಜನರು, ಕುರುಬರು, ಬ್ಯಾಡರು ಇತ್ಯಾದಿ ಹಿಂದುಳಿದವರು. ಬ್ರಾಹ್ಮಣರು ಪ್ರತಿಷ್ಠಿತವರ್ಗದವರಾದ್ದರಿಂದ ಅವರು ತಮ್ಮದೇ ಆದ ಪ್ರಭೇದವನ್ನು ಬೆಳೆಸಿಕೊಂಡಿರುವರು. ಹರಿಜನರು ಇತ್ಯಾದಿ, ದಲಿತವರ್ಗಕ್ಕೆ ಸೇರಿದವರು. ಕೆಲವು ಊರುಗಳಲ್ಲಿ ಹರಿಜನರು ಊರಿನಿಂದ ಸುಮಾರು ದೂರದಲ್ಲಿ ಹರಿಜನಕೇರಿಗಳಲ್ಲಿ ವಾಸಿಸುತ್ತಾರೆ. ಸಾಮಾಜಿಕ ಅಂತರ ಹೆಚ್ಚಾದಷ್ಟು ಭಾಷೆಯ ಅಂತರವೂ ಹೆಚ್ಚು. ಬ್ರಾಹ್ಮಣರಿಗೂ ಹರಿಜನರಿಗೂ ನಡುವೆ ಇರುವ ಸಾಮಾಜಿಕ ಅಂತರ ಹೆಚ್ಚಾದ್ದರಿಂದ ಅವರಿಬ್ಬರ ಭಾಷೆಯ ಅಂತರವೂ ಹೆಚ್ಚು. ಬ್ರಾಹ್ಮಣರ ಮತ್ತು ಲಿಂಗಾಯತರ ಸಾಮಾಜಿಕ ಅಂತರ ಕಡಿಮೆಯಾದ್ದರಿಂದ ಅವರಿಬ್ಬರ ಭಾಷೆಯ ಅಂತರವೂ ಕಡಿಮೆ.

ಸಾಮಾನ್ಯವಾಗಿ ಈ ಸಾಮಾಜಿಕ ಪ್ರಭೇದಗಳು ವ್ಯವಹಾರ (Communication)ಕ್ಕೆ ಆತಂಕ ಉಂಟುಮಾಡುವುದಿಲ್ಲ.

೧. ದಲಿತ ಅಥವಾ ನಿಮ್ನವರ್ಗ(ನಿ.ವ.)ದವರ ನುಡಿಯಲ್ಲಿ ಪದಾರಂಭದ ಹ– ಲೋಪವಾಗುತ್ತದೆ. ಇದು ನಾಮಪದ ಮತ್ತು ಕ್ರಿಯಾಪದಗಳಲ್ಲೂ ನಡೆಯುವ ಕ್ರಿಯೆ.

ಹೇಳು > ಏಳು	ಹಾಳು > ಆಳು
ಹ್ಯಲ್ಲಿ > ಅ್ಯಲ್ಲಿ	ಹರಿಜನ > ಅರಿಜನ
ಹೋದ > ಓದ ~ ವಾದ	ಹೋರಿ > ಓರಿ

ಶಿಕ್ಷಣ ಪಡೆದ ಅಥವಾ ಸಾಕಷ್ಟು ಸುತ್ತಾಡಿದ ಒಬ್ಬ ಹರಿಜನ ಅಥವಾ ಬ್ರಾಹ್ಮಣೇತರನ ನುಡಿಯಲ್ಲಿ ಪದಾರಂಭದ ಹ– ಉಳಿದಿರಬಹುದು.

೨. ಮಹಾಪ್ರಾಣ(aspiration)ದ ಲೋಪ : ಇದು ಈಗೀಗ ಬ್ರಾಹ್ಮಣ ಭಾಷೆಯಲ್ಲಿಯೂ ಅಪರೂಪವಾದ್ದರಿಂದ, ಇದರ ಲೋಪವನ್ನು ನಿ.ವ. ಭಾಷೆಯ ವೈಶಿಷ್ಟ್ಯವೆಂದು ಹೇಳಲು ಕಷ್ಟ.

ಖರ್ಚು	ಕರ್ಚು
ಖಡು	ಕಡು

೩. ಬ್ರಾಹ್ಮಣರು ಪದಾರಂಭದ ವ್ಯಂಜನವನ್ನೂ ಮಹಾಪ್ರಾಣವನ್ನಾಗಿ ಉಚ್ಚರಿಸುತ್ತಾರೆ.

ಬೆಳ್ಳಗೆ ಭೆಳ್ಳಗೆ
ಬಂಗಾರ ಭಂಗಾರ
ಕೊಡೆ ಖೊಡೆ

೪. ನಿ.ವ. ಭಾಷೆಯಲ್ಲಿ hyper correction ಇದೆ. ಅಂದರೆ ಸಾಮಾನ್ಯ ವಾಗಿ ಹ– ಇಲ್ಲದ ಪದಗಳಲ್ಲಿ ನಿಮ್ನವರ್ಗದವರು ಹ– ಸೇರಿಸುತ್ತಾರೆ.

ಅಳತೆ ಹಳತೆ
ಆಕಳು ಹಾಕಳು
ಅನ್ನ ಹನ್ನ

ಇದನ್ನು ಸಮಾಜದ ದೃಷ್ಟಿಯಲ್ಲಿ ಮುಂದೆ ಬರುವ ನಿಮ್ನವರ್ಗದವರ ಆಕಾಂಕ್ಷೆಯ ಅಜಾಗೃತ ಅಭಿವ್ಯಕ್ತಿ (unconscious expression) ಎನ್ನಬಹುದು.

೫. ಪದಮಧ್ಯದ /ಇ/ ಕೆಲವು ಶಬ್ದಗಳಲ್ಲಿ ನಿ.ವ. ಭಾಷೆಯಲ್ಲಿ ಮಧ್ಯಸ್ವರ (Centralise) ಆಗುತ್ತದೆ.

ಬರಂಗಿಲ್ಲ > ಬರಂಗ‌ಿಲ್ಲ (Barangɨlla)
ನೋಡಿಲ್ಲ > ನೋಡ‌ಿಲ್ಲ (Noḍɨlla)

೬. ತಾಲವ್ಯೀಕರಣ (Palatalization) ಮತ್ತು ಅತಾಲವ್ಯೀಕರಣ (De-palatalization) ನಿ. ವ. ಭಾಷೆಯ ವೈಶಿಷ್ಟ್ಯ.

ಬ್ರಾ. ಭಾ.	ನಿ. ವ.	ಬ್ರಾ. ಭಾ.	ನಿ. ವ.
ಛೊಲೋ	ಸೊಲೋ	ಚಳಿ	ಸಳಿ
ಚೀಲ	ಸೀಲ	ಮುಚ್ಚಳ	ಮುಸಳ
ಬುಡ್ಚಿ	ಬುಡ್ಸಿ		

ಕೆಲವು ಪದಗಳಲ್ಲಿ ಬ್ರಾಹ್ಮಣಕನ್ನಡದ /ಸ/ ನಿ.ವ. ಭಾಷೆಯಲ್ಲಿ /ಚ/ ಅಂದರೆ ತಾಲವ್ಯೀಕರಣ ಆಗುತ್ತದೆ.

ಸಂಜೆಕ್ಕ > ಚಂಜೆಕ್ಕ
ಅಗ್ಸಾಲ್ರ > ಅಗ್ಚಾಲ್ರ

೭. ಲೈಂಗಿಕ ಅವಯವ ಮತ್ತು ಕ್ರಿಯೆಗಳನ್ನು ಸೂಚಿಸುವ ಪದಗಳು ನಿ. ವ. ಭಾಷೆಯಲ್ಲಿ ಸಾಮಾನ್ಯ ಬಳಕೆಯಲ್ಲಿವೆ ಮತ್ತು ಅವು ದಲಿತವರ್ಗದವರಿಗೆ ತುಚ್ಛವಾದ, ಹೀನವಾದ (Derogatory or negative connotation) ಅರ್ಥವನ್ನು ಕೊಡುವುದಿಲ್ಲ. ಸೌಮ್ಯೋಕ್ತಿ (Euphemism) ಹೆಚ್ಚಾದಷ್ಟು ವ್ಯಕ್ತಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಶ್ರೇಣಿಯಲ್ಲಿ ಮೇಲಿನ ಸ್ತರದವನು.

೮. ಪದಮಧ್ಯದ ವರ್ಣಲೋಪ (Syncopation) ದಲ್ಲಿ ಎರಡು ಪ್ರಕಾರ ಗಳಿವೆ. (a) ಒಂದು ಸ್ವರ ಲೋಪವಾಗುವುದು, (b) ಒಂದು ಸಿಲೆಬಲ್ (Syllable) ಲೋಪವಾಗುವುದು.

ಒಂದನೆಯ ಪ್ರಕಾರದ ಧ್ವನಿಲೋಪ ಬ್ರಾಹ್ಮಣಕನ್ನಡ ಮತ್ತು ನಿಮ್ನವರ್ಗದ ಕನ್ನಡ ಎರಡರಲ್ಲೂ ಕಂಡುಬರುತ್ತದೆ.

ಗಡಿಗೆ	ಗಡ್ಗಿ	ಅಡಿಗೆ	ಅಡ್ಗಿ
ತಿಂಗಳು	ತಿಂಗ್ಳ	ಕೊಡಲಿ	ಕೊಡ್ಲಿ

ಆದರೆ ಎರಡನೆಯ ಪ್ರಕಾರದ ಧ್ವನಿಲೋಪ ನಿ.ವ. ಭಾಷೆಯ ವೈಶಿಷ್ಟ್ಯ. ಬ್ರಾಹ್ಮಣಭಾಷೆಯಲ್ಲಿ ಕಂಡುಬರುವುದಿಲ್ಲ.

ಬ್ರಾ. ಭಾ.		ನಿ. ವ. ಭಾ.
ಹೋಗಲಿ	>	ಓಲಿ
ಆಗಲಿ	>	ಆಲಿ
ಹೋಗ್ತಾನ್ಸ	>	ಓತಾನ
ಸೋಮವಾರ	>	ಸೋಮಾರ
ಸಹಾಯ	>	ಸಾಯಾ
ಅಮವಾಸಿ	>	ಅಮಾಸಿ

೯. ನಿ. ವ. ಭಾಷೆಯಲ್ಲಿ ಧ್ವನಿಪಲ್ಲಟ :

ಕಾಗದ	>	ಕಾದಗ
ಅಂದಾಜು	>	ಅಂಜಾದು
ದಾರಣಿ	>	ದ್ರಾಣ್ಣಿ

೧೦. ಆತ್ಮಾರ್ಥಕ (Reflexive) ಪ್ರತ್ಯಯ ಬ್ರಾಹ್ಮಣಭಾಷೆಯಲ್ಲಿ /ಕೊ/. ಆದರೆ ನಿ. ವ. ಭಾಷೆಯಲ್ಲಿ /-ಕ್ಯ/ ~ /ಕs/.

೧೧. ತಾರತಮ್ಯ ಸೂಚಿಸುವ ಅನುಸರ್ಗಾವ್ಯಯ ಬ್ರಾಹ್ಮಣಭಾಷೆಯಲ್ಲಿ /–ಕಿಂತ/. ಆದರೆ ನಿ. ವ. ಭಾಷೆಯಲ್ಲಿ /ಕಿನ ~ ಕಿನ್ನ ~ ಕಿತ/.

೧೨. ವ್ಯಂಜನ ದ್ವಿತ್ವೀಕರಣ (Consonantal assimilation) ನಿ. ವ. ಭಾಷೆಯ ವೈಶಿಷ್ಟ್ಯ :

ಎರಡು	>	ಎರ್ಡು	>	ಎಡ್ಡು
ಲಿಂದ	>	ಲಿದ್ದ		
ದಾರ್ಣಿ	>	ದಾಣ್ಣಿ		

೧೩. ನಿ.ವ. ಭಾಷೆಯಲ್ಲಿ ಪದಾರಂಭದ /ಇ/ ಗೆ ಮೊದಲು ಬರುವ /ವ/, /ಯ/ ಆಗಿ ಬದಲಾಗುತ್ತದೆ.

ವಿಚಾರ > ಯಿಚಾರ

೧೪. ಬ್ರಾಹ್ಮಣನುಡಿಯಲ್ಲಿ ಸಂಸ್ಕೃತ ಶಬ್ದಗಳು ನಿ.ವ. ನುಡಿಗಿಂತ ಹೆಚ್ಚಾಗಿ ಉಪಯೋಗಿಸಲ್ಪಡುತ್ತವೆ.

ಸ್ವರವಿಧಾನ (Intonation) ದಲ್ಲೂ ರಾಯಚೂರು ಜಿಲ್ಲೆಯ ಕನ್ನಡಕ್ಕೂ stk ಗೂ ಗಮನಾರ್ಹ ವ್ಯತ್ಯಾಸವಿದೆ. ಅದನ್ನು ಇಲ್ಲಿ ಪ್ರಯತ್ನಿಸಿಲ್ಲ.

• •

---

* ಭಾರತೀಯ ಭಾಷಾ ಸಂಸ್ಥೆ(CIIL)ಗೋಸ್ಕರ ನಾನು ಬರೆದ ಟೆಲಿವಿಷನ್ ಆಡಿಯನ್ಸ್ ಪ್ರೊಫೈಲ್ ವರದಿಯನ್ನು ಈ ಲೇಖನಕ್ಕೆ ಉಪಯೋಗಿಸಲು ಅನುಮತಿ ನೀಡಿದ ಸಂಸ್ಥೆಯ ನಿರ್ದೇಶಕ ಡಾ. ಡಿ. ಪಿ. ಪಟ್ಟಾನಾಯಕರಿಗೆ ನಾನು ಕೃತಜ್ಞ.

ಬಳ್ಳಾರಿ ಜಿಲ್ಲೆಯ ಕನ್ನಡ

• ಕೆ. ಎಂ. ವೀರಭದ್ರಶರ್ಮ

ಕನ್ನಡದ ಭಾಷಾಪ್ರಭೇದಗಳನ್ನು ಗುರುತಿಸಿ, ಆ ಎಲ್ಲವುಗಳನ್ನೂ ಕವಿರಾಜ ಮಾರ್ಗಕಾರನು ಒಟ್ಟಾಗಿ 'ಕನ್ನಡಂಗಳ್' ಎಂದು ಕರೆದಿದ್ದಾನೆ. ಇಷ್ಟೇ ಅಲ್ಲದೆ ಉತ್ತರ ಮಾರ್ಗ–ದಕ್ಷಿಣಮಾರ್ಗಗಳೆಂಬ ಭಾಷಾಪ್ರಭೇದಗಳನ್ನು ಹೇಳಿ ಅವುಗಳಲ್ಲಿನ ವ್ಯತ್ಯಾಸಕ್ಕೆ ಉದಾಹರಣೆಯಾಗಿ 'ನೋಡುವೆನ್'–'ನೋಟಿಪ್ಪೆನ್', 'ಸೂಡುವೆನ್'–'ಸೂಟಿಪ್ಪೆನ್', 'ಆನ್'–'ಆವ್' ಎಂಬಂತಹ ಪ್ರಯೋಗಗಳನ್ನೂ ಕೊಟ್ಟಿದ್ದಾನೆ.

ತೀರ ಇತ್ತೀಚಿನವರೆಗೂ ಉಪಭಾಷೆ(Dialect)ಗಳಿಗೆ ಸಾಮಾಜಿಕ ಮನ್ನಣೆಯು ಇರದೆ ಇದ್ದುದರಿಂದ ಅವು ಪ್ರತ್ಯೇಕವಾಗಿ ಭಾಷಾವಿಜ್ಞಾನಿಗಳಿಂದ ಅಧ್ಯಯನಕ್ಕೊಳ ಪಟ್ಟಿರಲಿಲ್ಲ.

ಕ್ರಿಯಾಶೀಲ ಸತ್ವವುಳ್ಳ ಮಾನವಜನಾಂಗದ ಯಾವುದೋ ಒಂದು ಪಂಗಡ ವನ್ನು ಪ್ರತಿಷ್ಠಿತವರ್ಗವೊಂದು ತೀವ್ರವಾಗಿ ಅಲಕ್ಷಿಸಿ, ಅವರ ಹೃದಯದ ಬಡಿತ ತುಡಿತಗಳನ್ನು, ಸ್ಪಂದನಗಳನ್ನು ಗುರುತಿಸದೆ ಹೋದ ರೀತಿಯಲ್ಲಿ ಸಾಮಾಜಿಕ ಮನ್ನ ಣೆಯು ಉಪಭಾಷೆಗಳಿಗೆ ಇಲ್ಲದೆ ಹೋದುದು, ಭಾಷಾಜಗತ್ತಿನಲ್ಲಾದ ಒಂದು ಅನ್ಯಾಯ.

ಪ್ರತಿಷ್ಠಿತವರ್ಗದವರು ಎಂದು ಸಮಾಜದಲ್ಲಿ ಹೇಳಿಸಿಕೊಂಡ ಜನರ ಭಾಷೆ ಯನ್ನೇ ಪ್ರಮಾಣಭಾಷೆ (Standard language) ಅಥವಾ ಶಿಷ್ಟಭಾಷೆ ಎಂದು ಕರೆದು, ಆ ಭಾಷೆಯನ್ನು ಬಳಸಲು ಬಾರದ್ದರಿಂದ ಉಪಭಾಷೆಗಳು ಅಂಕುರವಾದವು ಎಂದು ತಿಳಿದು, ಭಾಷಾವೃತ್ತದ ಅವುಗಳ ಭಾಷಿಕ ಅಂಶಗಳಿಂದ ಅವಿಭಾಜಕಗಳು (Supra segmentals)– ಎಂದರೆ ಶ್ರುತಿ, ಲಯ, ಸ್ವರಾಘಾತ. ಒತ್ತುಗಳೆಡೆಗೆ ಅಲಕ್ಷ್ಯದಿಂದ ಇದ್ದು ಭಾಷಾಲೋಕದ ಒಂದು ಮಹತ್ವಕ್ಕೆ ವಂಚನೆಯಾಗಿದ್ದು ದನ್ನೇ ಭಾಷಾವಿಜ್ಞಾನಿಗಳು ಅರಿತುಕೊಂಡು, ಆ ಕ್ಷೇತ್ರದ ಫಲವತ್ತತೆಗೆ ಮುಂದಾಗಿರು ವುದು ಒಳ್ಳೆಯ ಫಲವನ್ನು ತರುವಂತಹುದಾಗಿದೆ.

ಯಾವುದೇ ಭಾಷೆಯಲ್ಲಿ ಬೇರೆಬೇರೆ ಭಾಷಾಪ್ರಭೇದಗಳು ಇದ್ದೇ ಇರುತ್ತವೆ. ಇವುಗಳನ್ನು ಆಯಾ ಭಾಷೆಯ ಉಪಭಾಷೆಗಳು (Dialects) ಎಂದು ಕರೆಯುತ್ತೇವೆ.

ಅತಿ ಹೆಚ್ಚಿನ ಜನಸಂಖ್ಯೆಯು ವ್ಯಕ್ತಿಭಾಷೆ (Idiolect)ಗಳ ಒಂದು ಗುಂಪೇ ಈ ಉಪ ಭಾಷೆಯಾಗಿರುತ್ತದೆ.

ನಾವು ಈಗ ಕನ್ನಡದಲ್ಲಿ ಪ್ರಮುಖವಾಗಿ ಮೈಸೂರು ಉಪಭಾಷೆ, ಧಾರವಾಡ ಉಪಭಾಷೆ, ಕರಾವಳಿ (ಮಂಗಳೂರು–ಕಾರವಾರ) ಉಪಭಾಷೆ ಎಂದು ಉಪಭಾಷಾ ವರ್ಗೀಕರಣ ಮಾಡುತ್ತೇವೆ. ಅಲ್ಲದೆ ಮಂಡ್ಯ ಉಪಭಾಷೆ, ಬೀದರ್ ಉಪಭಾಷೆ, ವಿಜಾಪುರ ಉಪಭಾಷೆ, ಕಲಬುರ್ಗಿ ಉಪಭಾಷೆ ಎಂತಲೂ ಗುರುತಿಸುತ್ತೇವೆ. ಸ್ಥೂಲ ವಾಗಿ ಹೇಳುವುದಾದರೆ ಕರ್ನಾಟಕದ ಉತ್ತರಭಾಗ ಧಾರವಾಡ ಕನ್ನಡ, ದಕ್ಷಿಣಭಾಗ ಮೈಸೂರು ಕನ್ನಡ, ಪಶ್ಚಿಮಭಾಗ ಕರಾವಳಿ ಕನ್ನಡ ಎನ್ನಬಹುದು. ಇವುಗಳೆಲ್ಲ ಕನ್ನಡದ ಉಪಭಾಷೆಗಳು. ಹೀಗೆ ಹೇಳಿದ ಮಾತ್ರಕ್ಕೆ ಕನ್ನಡದಲ್ಲಿ ಇಷ್ಟೇ ಉಪ ಭಾಷೆಗಳಿವೆ ಎಂದಲ್ಲ. ಮೇಲೆ ಹೇಳಿದ ಉಪಭಾಷೆಗಳನ್ನೆಲ್ಲಾ ಅವುಗಳ ಪರಸ್ಪರ ಅರಿವಿನ (Mutual Intelligibility) ಪ್ರಮಾಣ ಕಡಿಮೆ ಇರುವುದರ ಆಧಾರದ ಮೇಲೆ ಗುರುತಿಸಲಾಗಿದೆ. ಹಾಗೆಯೇ ಇನ್ನೂ ಕೆಲವು ಉಪಭಾಷೆಗಳನ್ನು ಅವುಗಳ ಸ್ವರಭಾರ (Intonation)ದಲ್ಲಿಯ ಅಂತರ, ಒತ್ತು (Stress) ಕೊಡುವುದರಲ್ಲಿಯ ಅಂತರ, ಸ್ವರವಿಧಾನ (Tone feature) ಹಾಗೂ ಶಬ್ದ–ವಾಕ್ಯಗಳ ಉಚ್ಚಾರಣಾ ಕಾಲಾವಧಿ ಗಳಲ್ಲಿಯ ಅಂತರಗಳಿಂದಾಗಿ ಪರಸ್ಪರ ಅರಿಯಲು ನಮಗೆ ಸಾಧ್ಯವಾಗದೇ ಹೋಗ ಬಹುದು. ಅಂತಹವುಗಳಲ್ಲಿ ಪ್ರಮುಖವಾಗಿ ತೋರಿಬರುವ, ಹೆಸರಿಸಲೇಬೇಕಾದ ಸೂಕ್ಷ್ಮ ಅಧ್ಯಯನಕ್ಕೊಳಪಡಬಲ್ಲ ಸಾಮರ್ಥ್ಯ ಪಡೆದಿರುವಂತಹದು ಬಳ್ಳಾರಿ ಜಿಲ್ಲೆ ಯಲ್ಲಿನ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸೊಂಡೂರು ತಾಲೂಕುಗಳಲ್ಲಿ ಕಂಡು ಬರುವ ಭಾಷೆ. ಈ ಭಾಷೆಯೇ 'ಬಳ್ಳಾರಿ ಕನ್ನಡ' (Kannada language of Bellary District) ಅಥವಾ ' ಬಳ್ಳಾರಿ ಉಪಭಾಷೆ ' (Dialect of Bellary District).

ಬಳ್ಳಾರಿ ಜಿಲ್ಲೆಯಲ್ಲಿ ಕಾಣಸಿಗುವ ಭಾಷೆಯನ್ನು ಮೈಸೂರು, ಧಾರವಾಡ, ಕಲಬುರ್ಗಿ, ಮಂಗಳೂರು ಇನ್ನಿತರ ಉಪಭಾಷೆಗಳಿಗೆ ಹೋಲಿಸಿ ನೋಡಿದಾಗ ಶಬ್ದ ಕೋಶದ ದೃಷ್ಟಿಯಿಂದ ಹೆಚ್ಚು ಸಾಮ್ಯವು ಕಂಡುಬರುತ್ತಿದ್ದರೂ ಶ್ರುತಿ, ತಾನ, ಒತ್ತು, ಸ್ವರವಿಧಾನಗಳ ವಿಶೇಷತೆಯಿಂದಾಗಿ ಈ ಭಾಷೆಯು ಕರ್ಣಸುಭಗ ರಾಗಾತ್ಮಕತೆ ಯನ್ನು ಪಡೆದುಕೊಂಡು ತನ್ನತನದಿಂದ ಮೆರೆದಿದೆ. ಮೇಲಾಗಿ ತನ್ನ ಲಾಲಿತ್ಯ ಪೂರ್ಣತೆಯಿಂದಾಗಿ ಮಹತ್ವವನ್ನು ಪಡೆದುಕೊಳ್ಳುತ್ತದೆ. ಈ ಭಾಷೆಗೇ ವಿಶಿಷ್ಟ ವಾದ ಹಲವಾರು ಅಪರೂಪ ಶಬ್ದರೂಪ(Morpheme)ಗಳನ್ನು ನಾವಿಲ್ಲಿ ಕಾಣ ಬಹುದಾಗಿದೆ.

ಭೂಪಟ(Map)ದಲ್ಲಿ ಈ ಜಿಲ್ಲೆಯನ್ನು ಕರ್ನಾಟಕ ಪ್ರಾಂತದ ಹೃದಯ ಭಾಗ ದಲ್ಲಿ ಗುರುತಿಸುತ್ತೇವೆ. ಇಲ್ಲಿ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ, ಸೊಂಡೂರು,

ಮಲ್ಲಾಪುರ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ಎಂದು ಎಂಟು ತಾಲೂಕುಗಳಿವೆ. ಸಿರಗುಪ್ಪ, ಬಳ್ಳಾರಿ, ಹೊಸಪೇಟೆ, ಸೊಂಡೂರು ಜಿಲ್ಲೆಯ ಒಂದು ಭಾಗದ ತಾಲೂಕು ಗಳಾದರೆ, ಉಳಿದ ನಾಲ್ಕು ತಾಲೂಕುಗಳು ಮತ್ತೊಂದು ಭಾಗದವುಗಳು. ನಾವು ಇಲ್ಲಿ ಜಿಲ್ಲೆಯ ಭಾಷಾ ಪರಿವೀಕ್ಷಣೆಯ ಅನುಕೂಲತೆಯ ದೃಷ್ಟಿಯಿಂದ ಮೊದಲನೆಯ ನಾಲ್ಕು ತಾಲೂಕುಗಳನ್ನು ಉನ್ನತ ಭಾಗದ ತಾಲೂಕುಗಳೆಂದೂ, ಉಳಿದ ನಾಲ್ಕು ತಾಲೂಕುಗಳನ್ನು ಅವನತ ಭಾಗದ ತಾಲೂಕುಗಳೆಂದೂ ಕರೆಯುವುದು ಉಚಿತವಾಗಿ ತೋರುತ್ತದೆ.

ಉನ್ನತ ಭಾಗದ ನಾಲ್ಕು ತಾಲೂಕುಗಳ ಜನರಾಡುವ ಭಾಷೆಯು ಒಂದೇ ತೆರ ನಾಗಿದ್ದರೆ, ಅವನತ ಭಾಗದ ತಾಲೂಕುಗಳ ಜನರಾಡುವ ಭಾಷೆಯೋ ಬೇರೊಂದು ತೆರ ನಾಗಿದೆ. ಅಂದರೆ ಈ ಜಿಲ್ಲೆಯ ಈ ಎರಡು ಭಾಗದ ಜನರ ಭಾಷೆಯ ಮಧ್ಯ ಭಿನ್ನ ತೆಯು ಒಡೆದುಕಾಣುತ್ತದೆ. 'ಒಂದು ವಿಶಿಷ್ಟ ಧಾರ್ಮಿಕ ಪದ್ಧತಿಗಳು ಒಂದು ವಿಶಿಷ್ಟ ಭಾಷಾ ರೂಢಿಗೆ ಕಾರಣವಾಗಬಹುದು' ಎನ್ನುವಂತೆ ಈ ಜಿಲ್ಲೆಯ ಎರಡೂ ಭಾಗದ ಜನರು ಆಡುವ ಭಾಷೆಯಲ್ಲಿ ಮಾತ್ರವೇ ಅಲ್ಲದೆ ಅವರ ಮಧ್ಯದ ಆಚಾರ–ವಿಚಾರ, ನಡೆವಳಿಕೆ ಮತ್ತು ಸಂಸ್ಕೃತಿಯಲ್ಲಿಯೂ ಆ ದೂರ ಈ ದೂರವಿದೆ. ಈ ಕಾರಣದಿಂದಾಗಿ ಬಳ್ಳಾರಿ ಜಿಲ್ಲೆಯ ಕನ್ನಡ ಭಾಷೆಯನ್ನು ಸೂಕ್ಷ್ಮತೆಯ ದೃಷ್ಟಿಯಿಂದ ವೀಕ್ಷಿಸಲು ಹೊರಟಾಗ ಇರುವ ಎಂಟು ತಾಲೂಕುಗಳನ್ನು ಎರಡು ಭಾಗಗಳನ್ನಾಗಿ ಮಾಡಿಕೊಳ್ಳುವುದು ಅನಿವಾರ್ಯವೆನಿಸುತ್ತದೆ.

ಈ ಜಿಲ್ಲೆಯು ಪೂರ್ವಕ್ಕೆ ನೆರೆನಾಡಾದ ಆಂಧ್ರಪ್ರದೇಶದ ಗುಂತಕಲ್ ಜಿಲ್ಲೆ ಯಿಂದಲೂ, ಪಶ್ಚಿಮಕ್ಕೆ ಧಾರವಾಡ ಜಿಲ್ಲೆಯಿಂದಲೂ, ಉತ್ತರಕ್ಕೆ ರಾಯಚೂರು ಜಿಲ್ಲೆಯಿಂದಲೂ ಮತ್ತು ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆಯಿಂದಲೂ ಆವೃತವಾಗಿದೆ. ಉನ್ನತಭಾಗದ ತಾಲೂಕುಗಳಾದ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸೊಂಡೂರುಗಳಲ್ಲಿ ಕ್ರಮವಾಗಿ ೮೬ + ೧೦೪ + ೭೮ + ೮೫ ಒಟ್ಟಾಗಿ ೩೫೩ ಹಳ್ಳಿ ಗಳು ಇವೆ. ಅವನತ ಭಾಗದ ಮಲ್ಲಾಪುರ, ಹಡಗಲಿ, ಹರಪನಹಳ್ಳಿ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿ ಕ್ರಮವಾಗಿ ೩೧ + ೭೦ + ೭೬ + ೯೮ ಒಟ್ಟಾಗಿ ೨೭೫ ಹಳ್ಳಿಗಳಿವೆ. ಜಿಲ್ಲೆಯ ಎರಡೂ ಭಾಗದ ಹಳ್ಳಿಗಳ ಸಂಖ್ಯೆ ೬೨೮ ಇದ್ದು, ೧೧೨೩೮೮೬ ಜನಸಂಖ್ಯೆ ಯಲ್ಲಿ ಶೇಕಡಾ ೭೩.೬೪ರಷ್ಟು ಪ್ರಮಾಣದ ಜನರು ಕನ್ನಡ ಭಾಷೆಯನ್ನಾಡುತ್ತಾರೆ.

ಜಿಲ್ಲೆಯ ಉನ್ನತಭಾಗದ ತಾಲೂಕುಗಳ ಭಾಷೆಯಲ್ಲಿ ಕಂಡುಬರುವ ವೈಶಿಷ್ಟ್ಯ ಗಳು ಅವನತ ಭಾಗದ ತಾಲೂಕುಗಳ ಭಾಷೆಯಲ್ಲಿ ಕಂಡುಬರದ ಕಾರಣ 'ಬಳ್ಳಾರಿ ಕನ್ನಡ' ಎಂದೊಡನೆ ಉನ್ನತ ಭಾಗದ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸೊಂಡೂರು ತಾಲೂಕುಗಳ ಜನರಾಡುವ ಭಾಷೆಯೆಂದೇ ಅರ್ಥಮಾಡಬೇಕಾಗುತ್ತದೆ.

ಹೀಗೆಂದ ಮಾತ್ರಕ್ಕೆ ಉಳಿದ ನಾಲ್ಕು ತಾಲೂಕುಗಳ ಭಾಷೆಯೇನೂ ಉಪೇಕ್ಷಿಸುವಂತಹುದಲ್ಲ. ಈ ತಾಲೂಕುಗಳ ಭಾಷೆಯ ಮೇಲೂ ಬೇರೆಬೇರೆ ಉಪಭಾಷೆಗಳ ಪ್ರಭಾವವು ಎಷ್ಟರ ಮಟ್ಟಿಗೆ ಉಂಟಾಗಿದೆ ಎಂಬುದನ್ನು ನೋಡಬೇಕು.

ಉನ್ನತ ಭಾಗದ ನಾಲ್ಕೂ ತಾಲೂಕುಗಳಲ್ಲಿ ಒಂದು ಹಳ್ಳಿಯೂ ಬಿಡದಂತೆ ಎಲ್ಲ ಕಡೆಯಲ್ಲೂ ಏಕರೀತಿಯ ಕನ್ನಡಭಾಷೆ(ಉಪಭಾಷೆ)ಯನ್ನು ಕಾಣುತ್ತೇವೆ. ಇಲ್ಲಿ ಶೇಕಡಾ ೭೫ ರಷ್ಟು ಶಬ್ದಗಳು ಮೈಸೂರು ಉಪಭಾಷೆಯನ್ನು ಬಳಸುವ ಜನ ಉಚ್ಚರಿಸುವಂತೆ ಆನೆ, ಒಂಟೆ, ಕುದುರೆ, ಎಮ್ಮೆ, ಅವರೆ, ತೊಗರೆ, ಸಜ್ಜೆ, ತೆನೆ, ಮಳೆ, ಬೆಳೆ, ತೆರೆ, ಕೆರೆ, ಸೀರೆ, ಮುಸುರೆ, ಕಳೆ, ಇರುವೆ, ಮದುವೆ, ಮನೆ, ದ್ವಾಸೆ, ಮಡಿಕೆ, ತಲೆ, ತೊಲೆ, ಮ್ಯಾಕೆ (ಮೇಕೆ), ಕಾಡಿಗೆ (Eyetex), ಬಾಡಿಗೆ, ಕುಂಟೆ, ಬದನೆ, ಗೆರೆ ಎಂದು 'ಎ'ಕಾರಾಂತವಾಗಿ ಉಚ್ಚರಿತವಾಗುತ್ತಿರುವುದು ಸೋಜಿಗ ಉಂಟುಮಾಡುವಂತಿದ್ದುದರಿಂದ, ಸಾಮಾಜಿಕವಾಗಿ ಅಥವಾ ಐತಿಹಾಸಿಕವಾಗಿ ಸುಲಭ ರೀತಿಯಲ್ಲಿ ಊಹೆಮಾಡಿ ಹೇಳಲು ಕಷ್ಟ. ಇಲ್ಲಿಯ ಜನರ ಭಾಷೆಯಲ್ಲಿನ ಶಬ್ದಗಳು ಹೀಗೆ ಮೈಸೂರು ಉಪಭಾಷೆಯಲ್ಲಿಯಂತೆ 'ಎ'ಕಾರಾಂತವಾಗಲು ಕಾರಣವಾದರೂ ಏನು? ಎಂಬ ಪ್ರಶ್ನೆ ಸಹಜವಾಗಿಯೇ ಕುತೂಹಲ ಹುಟ್ಟಿಸುವುದಾಗಿದೆ. ಹಾಗೆ ಯೋಚಿಸಿ ನೋಡಿದರೆ ಈ ತಾಲೂಕುಗಳು ವಿದ್ಯಾಪ್ರಗತಿಯ ದೃಷ್ಟಿಯಿಂದ ತೀರ ಹಿಂದುಳಿದವುಗಳಾಗಿದ್ದರೂ ಈ ಜನರ ಭಾಷೆಯು ಗ್ರಾಂಥಿಕಭಾಷೆಗೆ ಹೇಗೆ ಹತ್ತಿರವಾಯಿತು? ಎಂಬ ಪ್ರಶ್ನೆ ಅದರ ಹಿಂದೆಯೇ ಹುಟ್ಟುತ್ತದೆ.

ಇನ್ನೊಂದು ಅಂಶವೆಂದರೆ ಕರ್ನಾಟಕದಲ್ಲಿ ಪ್ರಾಯಶಃ ಯಾವ ಉಪಭಾಷೆಯಲ್ಲಿಯೂ ಬಳ್ಳಾರಿ ಉಪಭಾಷೆಯನ್ನಾಡುವ ಜನರ ಹಾಗೆ ತಾಯಿಗೆ 'ಅಮ್ಮ' ಎಂದೂ ಅಜ್ಜನಿಗೆ 'ತಾತ' ಎಂದೂ ಇಷ್ಟೊಂದು ವ್ಯಾಪಕವಾಗಿ ಮತ್ತು ವಿಸ್ತಾರ ಕ್ಷೇತ್ರದಲ್ಲಿ ಕರೆಯುತ್ತಿರುವ ಉದಾಹರಣೆಗಳು ವಿರಳ. ನವನಾಗರಿಕರು ಎಂದೆನಿಸಿಕೊಂಡ ಅಥವಾ ಎನಿಸಿಕೊಳ್ಳಬಯಸುವ ಕುಟುಂಬದಲ್ಲಿ ಮಾತ್ರ ಈಗೀಗ ತಾಯಿಗೆ 'ಅಮ್ಮ' ಎಂದು ಕರೆಯುತ್ತಿರುವುದನ್ನು ಕೇಳಿದ್ದೇವೆ. ಹಾಗಾದರೆ ಬಳ್ಳಾರಿ ಉಪಭಾಷೆಯನ್ನಾಡುವ ಜನರು ನಾಗರಿಕತೆಯಲ್ಲಿ ಅಷ್ಟು ಮುಂದುವರಿದವರೇ ಎಂಬುದಕ್ಕೆ ಹೌದೆಂದು ಇದೇ ಆಧಾರದ ಮೇಲೆ ಹೇಳಿದರೆ ದಡ್ಡತನವಲ್ಲದೆ ಮತ್ತೇನು? ಅಂದರೆ ಕಾರಣ ಗೂಢವಾಗಿಯೇ ಉಳಿಯಿತು. ಇನ್ನು ಈ ಉಪಭಾಷೆಯಲ್ಲಿ 'ಅಜ್ಜಿ'ಯನ್ನು 'ಅವ್ವ' ಎಂದು ಸಂಬೋಧಿಸುತ್ತಾರೆ. ಈ 'ಅಮ್ಮ', 'ತಾತ,' 'ಅವ್ವ' ಎಂಬ ಶಬ್ದಗಳ ಬಳಕೆಯನ್ನಲ್ಲದೆ ಬೇರೆ ಸಂಬಂಧವಾಚಕಶಬ್ದಗಳ ಬಳಕೆ– ತಾಯಿ, ಅಜ್ಜ, ಅಜ್ಜಿಯರಿಗೆ ಇಲ್ಲ. ಇದು ಈ ಉಪಭಾಷೆಯ ವೈಶಿಷ್ಟ್ಯವೆಂದೇ ನನ್ನ ಭಾವನೆ.

ಇನ್ನು ರೂಪಿಮಾ ಘಟ್ಟದಲ್ಲಿಯೂ ಜೀವನದಲ್ಲಿ ಹಾಸುಹೊಕ್ಕಾದ ನಿತ್ಯ ಬಳಕೆಯ ಹಲವು ಅಪರೂಪವಾದ ರೂಪಗಳನ್ನು ಕಾಣಬಹುದು. ಜಜಕ, ಮುದೇತ, ಮುದ್ಯಾಕೆ, ಗೋಸಿ. ಜಕಜಕ, ಪತ್ರ, ಪಿಳ್ಳೆ, ತಪಾತರ, ಮನಾರ, ಎಸಂದು, ಶನಾ,[1] ಜಿಗೂದು, ಜಮ, ಕಾಟಿಗ, ದಡ್ಡೆವು, ದೊಡ್ಡಿ, ಅನುಮಾದ್ದು, ತತ್ರಬಿತ್ರಿ, ಕೆಲಸಿ ಮುಂತಾದವುಗಳನ್ನು ಉದಾಹರಣೆಗೆ ಕೊಡಬಹುದು. ಈ ರೂಪಗಳ ಅರ್ಥವು ಕ್ರಮವಾಗಿ ಬಿಟ್ಟು ಬಿಟ್ಟು (off and on), ಮುದುಕ, ಮುದುಕಿ, ಕಚ್ಚೆ, ಮತ್ತೆ ಮತ್ತೆ, ಬೀಗ (Lock), ಹುಡುಗಿ ಅಥವಾ ಹೆಂಗಸು, ಬಹಳ, ತೃಪ್ತಿಯಾಗುವಷ್ಟು, ಎಷ್ಟೊಂದು (ಬಹಳ), ಜೋರಾಗಿ, ಮಜ, ಅಸ್ಪೃಶ್ಯ, ಬಣವೆ ಹಾಕಿರುವ ಕಣ, ಕಕ್ಕಸು (Lavatory), ಹನುಮಂತನಷ್ಟು ಹಿರಿದು (Biggest like Hanuman), ತಡವರಿಸು, ಕ್ಷೌರಿಕ ಎಂದಾಗುತ್ತದೆ. ಅಲ್ಲದೆ ಇನ್ನೂ ಮುಂದೆ ಸಾಗಿ ವಾಕ್ಯರಚನಾವಿಭಾಗದಲ್ಲಿಯೂ ಕೆಲವು ಮಾದರಿಗಳನ್ನು ಕಾಣಬಹುದು.

ಉದಾ :	ತಗಮ್ತಿ್ನ	—	ತೆಗೆದುಕೊಳ್ಳುತ್ತೇನೆ
	ಉಮ್ತಿ್ನ	—	ಊಟಮಾಡುತ್ತೇನೆ
	ತಿಮ್ತಿ್ನ	—	ತಿನ್ನುತ್ತೇನೆ
	ವೊತಿದ್ಯೆ	—	ಹೋಗುತ್ತಿದ್ದೆ
	ವೋತ್ನಿ	—	ಹೋಗುತ್ತೇನೆ
	ಆಗ್ತ್ಯತ್ಯೆ	—	ಆಗುತ್ತದೆ
	ವೊಗ್ತ್ಯತ್ಯೆ	—	ಹೋಗುತ್ತದೆ
	ತಗಮ್ತುದ್ಯ	—	ತೆಗೆದುಕೊಳ್ಳುವೆಯಾ
	ನಿಂತ್‌ಗಮ್‌ತನ	—	ನಿಂತುಕೊಳ್ಳುತ್ತಾನೆ
	ಕುಂತ್‌ಗಮ್‌ತನ	—	ಕುಳಿತುಕೊಳ್ಳುತ್ತಾನೆ

ಇಷ್ಟೇ ಅಲ್ಲದೆ ಭವಿಷ್ಯಾರ್ಥದಲ್ಲಿಯ ನಕಾರಾತ್ಮಕತೆ ಸೂಚಿತವಾಗುವ ಎಡೆಯಲ್ಲೆಲ್ಲ 'ಗಿನ' ಎಂಬ ಅಂತ್ಯಪ್ರತ್ಯಯವು ಈ ಜಿಲ್ಲೆಯ ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತಿರುವುದಕ್ಕೆ ಕೆಳಗಿನ ಉದಾಹರಣೆಗಳನ್ನು ಅವಲೋಕಿಸಬಹುದು.

ಉದಾ :	ಆಗ್‌ದಿದ್ರ್‌ಗಿನ	—	ಆಗದಿದ್ದರೆ
	ವೋಗ್‌ದಿದ್ರ್‌ಗಿನ	—	ಹೋಗದಿದ್ದರೆ
	ತತಂಬ್ದಿದ್ರ್‌ಗಿನ	—	ತೆಗೆದುಕೊಳ್ಳದಿದ್ದರೆ

ಹೀಗೆಯೇ ತಿಂಬ್ಬಿದ್ರ್‌ಗಿನ, ಉಂಬ್ಬಿದ್ರ್‌ಗಿನ, ಮಾಡ್ಬಿದ್ರ್‌ಗಿನ, ಕಳ್ಳಿದ್ರ್‌ಗಿನ, ಬಂದ್ರ್‌ಗಿನ, ಮರ್ತ್ರ್‌ಗಿನ ಮುಂತಾಗಿ ದೊಡ್ಡ ಪಟ್ಟಿಯನ್ನೇ ಕೊಡಬಹುದು.

---

೧ ಮೈಸೂರು ಉಪಭಾಷೆಯಲ್ಲೂ ಈ ರೂಪವನ್ನು ಕಾಣಬಹುದು.

ಸಿರಗುಪ್ಪ ತಾಲೂಕಿನ ರಾಂಪುರ, ರಾರಾವಿ, ಕರ್ಚಿಗನೂರು, ಪೂಂಡ್ಯಾಳು, ಹಳೇಕೋಟೆ, ತೆಕ್ಕಲಕೋಟೆ, ಕೆಂಚನಗುಡ್ಡ, ಬಲಕುಂದಿ, ಸಿರಿಗೇರಿ, ದರೂರು, ಕುರುವಳ್ಳಿ, ಗೆಣಿಕಿಹಾಳು, ಸೂಗೂರು, ಸಿದ್ಧರಗಡ್ಡೆ, ನಾಡಂಗ, ಚಾಣಕನೂರು, ಹಚ್ಚೊಳ್ಳಿ. ಬಳ್ಳಾರಿ ತಾಲೂಕಿನ ಕಗ್ಗಲು, ಬೂದಿಹಾಳು, ಸೋಮಲಾಪುರ, ಮೋಕ, ಸಿಡಿಗಿನಮೊಳೆ, ವಿಂಚೇರಿ, ಬೈಲೂರು, ಬಾದನಹಟ್ಟಿ, ಎತ್ತಿನಹಟ್ಟಿ, ಸಿದ್ದಮ್ಮನಹಳ್ಳಿ, ಜಾಲಿಬೆಂಚಿ, ಕೋಳೂರು, ದಮ್ಮೂರು. ಹೊಸಪೇಟೆ ತಾಲೂಕಿನ ಪಾಪಿನಾಯ್ಕನ ಹಳ್ಳಿ, ಕಾರಿಗನೂರು, ಕಾಮಲಾಪುರ, ರಾಮಸಾಗರ, ಬುಕ್ಕಸಾಗರ, ವೆಂಕಟಾಪುರ, ಹಂಪಿ, ಮಲಪನಗುಡಿ, ನಾಗೇನಹಳ್ಳಿ, ಕಾಕಬಾಳು ಮತ್ತು ಸೊಂಡೂರು ತಾಲೂಕಿನ ತಾರಾನಗರ, ಯಶವಂತನಗರ, ಲಿಂಗದೇವನಹಳ್ಳಿ, ವಡ್ಡು, ಸೋಮಲಾಪುರ, ಚೋರನೂರು ಈ ಸ್ಥಳಗಳಲ್ಲಿ ಕ್ಷೇತ್ರಪರಿವೀಕ್ಷಣೆ ಮಾಡಿದಾಗ ಮೇಲೆ ಹೇಳಿದ ಲಕ್ಷಣವಿಶೇಷಗಳೆಲ್ಲ– ಹಲವೆಡೆಗಳಲ್ಲಿ ವಿಸ್ತೃತವಾಗಿಯೂ ಎಲ್ಲೋ ಕೆಲವೆಡೆಗಳಲ್ಲಿ ಸಾಧಾರಣವಾಗಿಯೂ ವಯಸ್ಸಾದವರು, ಹಳೆಯ ತಲೆಮಾರಿನವರು, ಹೊಸಪರಿಸರ ಮತ್ತು ಭಾಷೆಗೆ ಹೊಂದಿಕೊಳ್ಳದ ಅಂಧಶ್ರದ್ಧೆಯುಳ್ಳವರು, ವಿದ್ಯಾವಂತರು, ಚಿಕ್ಕವರು, ಬಾಲಕರು ಎಂಬ ಭೇದವಿಲ್ಲದೆ, ಹೆಂಗಸರು, ಗಂಡಸರು ಎಂಬ ಲಿಂಗಭೇದವಿಲ್ಲದೆ– ಈ ಉಪಭಾಷೆಯಲ್ಲಿ ಗೋಚರವಾದವುಗಳಾಗಿವೆ.

ಈ ಉಪಭಾಷೆಯನ್ನಾಡುವ ಜನಗಳ ಸಂಪರ್ಕ ಮತ್ತು ನಿತ್ಯವ್ಯವಹಾರ ಗದಗ, ಹುಬ್ಬಳ್ಳಿ, ಧಾರವಾಡ, ರಾಯಚೂರು, ಬೆಂಗಳೂರು ಮೊದಲಾದ ಪಟ್ಟಣಗಳೊಂದಿಗೆ ಬೆಳೆದಿರಲಿ ಬೆಳೆಯುತ್ತಿರಲಿ, ಈ ಜನಗಳ ಭಾಷೆಯ ಮೇಲೆ ಯಾವುದೇ ಬೇರೊಂದು ಉಪಭಾಷೆ ಪ್ರಭಾವ ಬೀರುವುದು ಸಾಧ್ಯವಾಗಿಲ್ಲ. ಇನ್ನು ಮುಂದೆಯೂ ಸಾಧ್ಯವಾಗದು ಎನ್ನುವಷ್ಟರ ಮಟ್ಟಿಗೆ ಇವರ ಭಾಷೆ ದೃಢತೆಯನ್ನು ಹೊಂದಿ ತನ್ನ ವಿಶಿಷ್ಟತೆಯೊಂದಿಗೆ ಇನ್ನೂ ನಮಗೆ ಅದು ಶುದ್ಧವಾಗಿಯೇ ಗೋಚರಿಸುತ್ತಿರುವುದು ಆಶ್ಚರ್ಯ. ಆ ಭಾಷೆಯನ್ನಾಡುವ ಜನರಲ್ಲಿರಬಹುದಾದ ಪ್ರಾಂತಾಭಿಮಾನ (Provincialism) ಅಥವಾ ವೈಯಕ್ತಿಕತೆ (Individualism) ಇದಕ್ಕೆ ಕಾರಣವಾಗಿರಬಹುದು.

ಬಳ್ಳಾರಿಯು ಜಿಲ್ಲೆಯ ಮುಖ್ಯಪಟ್ಟಣವಾಗಿದ್ದು, ಈ ಸ್ಥಳಕ್ಕೆ ನೆರೆನಾಡಾದ ಆಂಧ್ರಪ್ರದೇಶದ ಜಿಲ್ಲೆಯು ತೀರ ಸಮೀಪವಾಗಿರುವುದರಿಂದ ಅಲ್ಲಿಯ ಜನರ ವ್ಯವಹಾರಗಳೆಲ್ಲವೂ ಬಳ್ಳಾರಿಯೊಂದಿಗೇ ನಡೆಯಬೇಕಾಗಿದೆ. ಬಳ್ಳಾರಿಯಲ್ಲಿನ ಜನರೂ ಕೂಡ ತೆಲುಗು ಭಾಷೆಯೊಂದಿಗೆ ಆ ಜನರಲ್ಲಿ ಸಂಪರ್ಕಿಸುತ್ತಾರೆ. ಆದೋನಿ, ಗುಂತಕಲ್ಲು, ಆಲೂರ, ಅನಂತಪುರಗಳ ತೆಲುಗು ಭಾಷೆಯ ಜನರೊಂದಿಗೆ ಹಲವಾರು ವರ್ಷಗಳಿಂದ ಬಳ್ಳಾರಿಯ ಜನರು ವ್ಯವಹರಿಸುತ್ತಲಿದ್ದಾರೆ. ತೆಲುಗುಭಾಷೆಯನ್ನಾಡುವ

ಕುಟುಂಬಗಳೂ ಬಳ್ಳಾರಿಯಲ್ಲಿ ವಾಸವಾಗಿವೆ. ತೆಲುಗುಭಾಷೆಯನ್ನಾಡುವ ಇಂತಹ ಜನರು ಬಳ್ಳಾರಿಯಲ್ಲಿ ಶೇಕಡ ೧೦.೨೧ ರಷ್ಟು ಇದ್ದಾರೆ. ಅಂದಮೇಲೆ ಬಳ್ಳಾರಿ ಕನ್ನಡದ ಮೇಲೆ ತೆಲುಗುಭಾಷೆಯ ಪ್ರಭಾವವು ಸಾಕಷ್ಟು ಬಿದ್ದಿರುವುದು ಸಹಜ ವಾಗಿದೆ. ಉದಾಹರಣೆಗೆ ಡಬ್ಬು, ಪಪ್ಪು, ಪಾಮು, ಚಪ್ಪು, ಬಕಟಿ, ಹೊಂಗ, ಚೇಯಿ, ಪೋ, ಚೂಡು, ಕುಚ್ಚ ಶಬ್ದಗಳನ್ನು ಕೊಡಬಹುದು. ಈ ಶಬ್ದಗಳು ಬಳ್ಳಾರಿಯ ಜನರು ಆಡುವ ಭಾಷೆಯಲ್ಲಿ ಒಕ ರೂಪಾಯಿ, ದೊಂಗ ಕದ್ರೆ!, ಈ ಕೆಲಸ ಚೇಸಿ, ಡಬ್ಬು ಐತ್ಯಾ?, ಬರ್ತದ್ಯಾನ ಚೂಡು ಎಂದು ವಿಲೀನವಾಗಿ ಹೋಗಿವೆ.


ಬಳ್ಳಾರಿ ಉಪಭಾಷೆಯಲ್ಲಿನ 'ಎ'ಕಾರಾಂತ ಶಬ್ದಗಳು, ಅಮ್ಮ, ತಾತ, ಶನಾ ಎಂಬ ರೂಪಗಳು ಅಲ್ಲದೆ ವೋತೈತೆ, ಕಾಯ್ತಾತೆ (ವೋಯ್ತೈತೆ, ಕಾಯ್ತೈತೆ) ಎಂಬ ಶಬ್ದಗಳು ಮೈಸೂರು ಉಪಭಾಷೆಗೆ ಹತ್ತಿರವಾಗಿ ಕಂಡುಬರುವುದರಿಂದ ಜಿಲ್ಲೆಯ ಕನ್ನಡಭಾಷೆಯು ತೀರ ಹಿಂದೆ ಬೇರೊಂದು ರೀತಿಯಾಗಿದ್ದು, ಯಾವುದೋ ಬಲ ವಾದ ಕಾರಣಗಳಿಂದ ಪ್ರಸ್ತುತರೂಪಕ್ಕೆ ಇಳಿದಿದೆ ಎನ್ನಿಸದಿರದು. ಅಂಥ ಕಾರಣ ಗಳೇನು ಎಂಬುದನ್ನರಿಯುವ ಪ್ರಯತ್ನದಲ್ಲಿ ನಾವು ಕೆಲವು ಐತಿಹಾಸಿಕ ಅನುಮಾನ ಗಳನ್ನು ಮಾಡಬಹುದಾಗಿದೆ.

ಈ ಉಪಭಾಷೆಯನ್ನಾಡುತ್ತಿರುವ ಹೊಸಪೇಟೆಯಿಂದ ಅನತಿದೂರದಲ್ಲಿಯೇ ಜಗತ್ಪ್ರಸಿದ್ಧವಾದ ಹಂಪೆ ಇದ್ದು, ಹಿಂದೆ ಆ ಸ್ಥಳ ವಿಜಯನಗರ ಸಾಮ್ರಾಜ್ಯದ ರಾಜ ಧಾನಿಯಾಗಿದ್ದುದು ತಿಳಿದೇ ಇದೆ. ಕೃಷ್ಣದೇವರಾಯನು ಸಾಮ್ರಾಜ್ಯದ ಪಟ್ಟಾಧಿಕಾರ ವನ್ನು ಪಡೆದ ಮೇಲೆ ಆತನು ಶ್ರೀರಂಗಪಟ್ಟಣದ ರಾಜಕುಮಾರಿಯನ್ನು ವಿವಾಹವಾದ. ಅಂದಿನಿಂದ ವಿಜಯನಗರದ ಕಡೆಯಿಂದ ಶ್ರೀರಂಗಪಟ್ಟಣಕ್ಕೂ, ಶ್ರೀರಂಗಪಟ್ಟಣದಿಂದ ವಿಜಯನಗರಕ್ಕೂ ವ್ಯವಹಾರ ಮತ್ತು ಒಡನಾಡಿಗಳು ಹೆಚ್ಚುತ್ತಬಂದು, ಮೈಸೂರು ಕಡೆಯ ಭಾಷೆ ವಿಜಯನಗರದ ಭಾಷೆಯ ಮೇಲೆ ತನ್ನ ಪ್ರಭಾವ ಬೀರಿದ ಕಾರಣವಾಗಿ ಅಲ್ಲಿಯ ಭಾಷೆಯ ಲಕ್ಷಣಗಳು, ಶಬ್ದಗಳು ವಿಜಯನಗರದ ಜನರ ಭಾಷೆಯಲ್ಲಿ ಬೆರೆತು ಹೋಗಿರಬೇಕು ಎಂದು ತೋರುತ್ತದೆ.

ಬಳ್ಳಾರಿ ಉಪಭಾಷಾಕ್ಷೇತ್ರದಲ್ಲಿ ಪ್ರಚಲಿತವಿರುವ ಲಾಲಿ "ಆನೆ ಬಂತಾನೆ, ಯಾವೂರಾನೆ" ಎಂಬ ಹಾಡಿನಲ್ಲಿ ಮೈಸೂರಾನೆ ಎಂದು ಕಂಡುಬರುತ್ತಿರುವುದರಿಂದ ವಿಜಯನಗರದ ಮೇಲೆ ಮೈಸೂರು ಕಡೆಯ ಪ್ರಭಾವ ಉಂಟಾಗಿದೆ ಎಂಬ ನಮ್ಮ ಅನುಮಾನಕ್ಕೆ ಕಾಲು ಬರುತ್ತದೆ. ಈ ಬಗ್ಗೆ ನಾನು ಈ ಉಪಭಾಷಾಕ್ಷೇತ್ರದ ಹಲವಾರು ಕಡೆಗಳಲ್ಲಿ ವಿಚಾರಿಸಿದಾಗ ಯಾರೊಬ್ಬರೂ ಧಾರವಾಡದ ಕಡೆಯಂತೆ 'ವಿಜಾಪೂರಾನೆ' ಎಂದು ಹೇಳದೆ 'ಮೈಸೂರಾನೆ' ಎಂದೇ ಹೇಳುದರಿಂದ ಬಳ್ಳಾರಿ

ಉಪಭಾಷೆಯನ್ನಾಡುವ ಜನರು ಇದಕ್ಕೂ ಹಿಂದೆ ಆಸಿ, ಕುದರಿ, ಮಸಿ, ಬೆಳಿ ಎಂದು 'ಇ'ಕಾರಾಂತ ಶಬ್ದಗಳನ್ನುಚ್ಚರಿಸುತ್ತಿದ್ದು, ಅನಂತರ ಮೈಸೂರು ಕಡೆಯ ಸಂಪರ್ಕ ಬಂದ ಮೇಲೆ ಅವುಗಳೆಲ್ಲ 'ಎ'ಕಾರಾಂತವಾದವು ಎಂದು ಊಹಿಸಲಾಗಿದೆ.


ಹೀಗೆ ಮತ್ತೊಂದು ಉಪಭಾಷೆಯಿಂದ ಪ್ರಭಾವಿತವಾದ ಈ ಉಪಭಾಷೆಯ ಕೇಂದ್ರಕ್ಷೇತ್ರ(Focal area)ವು ವಿಜಯನಗರವೇ (ಈಗಿನ ಹಂಪೆ) ಆಗಿದೆಯೆಂದು ಯಾವ ಅನುಮಾನವೂ ಇಲ್ಲದಂತೆ ಹೇಳಬಹುದು. ರಾಜಕೀಯವಾಗಿ, ಸಾಂಸ್ಕೃತಿಕ ವಾಗಿ ಮಹತ್ವ ಪಡೆದ ಕ್ಷೇತ್ರ ಇದಾಗಿದ್ದು, ಇಲ್ಲಿ ಬಳಸಲ್ಪಡುತ್ತಿದ್ದ ಭಾಷೆಯೇ ಪ್ರತಿಷ್ಠೆ ಪಡೆದುಕೊಂಡು ಸುತ್ತೆಲ್ಲೆಡೆಗೂ ಹಬ್ಬಿ ಸ್ವೀಕೃತವಾಗಿದೆ. ಇಲ್ಲಿಂದಲೇ ಅನೇಕ ಸೀಮಾ ರೇಖೆ (Isogloss)ಗಳು ಹೊರಡುತ್ತಿರುವುದನ್ನು ಅರಿಯಬಹುದು. ಈ ಕೇಂದ್ರ ಕ್ಷೇತ್ರದ ಸುತ್ತಲಿನ ಸೀಮಾರೇಖೆಗಳು ಈಗಲೂ ಚಲಿಸುತ್ತಿವೆ ಎನ್ನುವುದು ನಿಸ್ಸಂಶಯ. ಇದನ್ನು ಕೆಳಗಿನ ಚಿತ್ರದ ಮೂಲಕ ಸ್ಪಷ್ಟಗೊಳಿಸಿಕೊಳ್ಳಲು ಸಾಧ್ಯವಾಗಬಹುದು.



ವಿಜಯನಗರದಿಂದ ಹೊರಟ ಈ ಉಪಭಾಷೆಯ ಸೀಮಾರೇಖೆಗಳು ಜಿಲ್ಲೆಯ ಉತ್ತರಕ್ಕಿರುವ ರಾಯಚೂರು ಜಿಲ್ಲೆಯ ಗಂಗಾವತಿ ಮತ್ತು ಸಿಂಧನೂರು ತಾಲೂಕು ಗಳ ವರೆಗೂ ಹರಡಿಕೊಂಡಿವೆ. ಇಂಥ ಸೀಮಾರೇಖಾ ಸಮುದಾಯದಿಂದ ಸುತ್ತು ವರಿಯಲ್ಪಟ್ಟ ಸಿರುಗುಪ್ಪ, ಬಳ್ಳಾರಿ, ಹೊಸಪೇಟೆ, ಸೊಂಡೂರು, ಗಂಗಾವತಿ, ಸಿಂಧ ನೂರು ತಾಲೂಕುಗಳ ಪ್ರದೇಶವನ್ನು ಉಪಭಾಷಾಕ್ಷೇತ್ರ(Dialect area) ಎಂದು ಕರೆಯಬಹುದು. ಈ ಸೀಮಾರೇಖೆಗಳು ಬಳ್ಳಾರಿ ಜಿಲ್ಲೆಯ ಅವನತ ಭಾಗದ ತಾಲೂಕುಗಳಾದ ಮಲ್ಲಾಪುರ, ಹಡಗಲಿ, ಹರಪನಹಳ್ಳಿ ಮತ್ತು ಕೂಡ್ಲಿಗಿಗಳ ವರೆಗೂ ಸಮಾನಾಂತರವಾಗಿ ಹರಡಲೇಬೇಕಾಗಿತ್ತು, ಆದರೆ ಹಾಗಾಗಿಲ್ಲ. ಅದಕ್ಕೆ ಕಾರಣ ವೆಂದರೆ ನೈಸರ್ಗಿಕ ಆತಂಕವಾದ ಸೊಂಡೂರು ಬೆಟ್ಟಗಳು ಮತ್ತು ದಟ್ಟವಾದ ಅರಣ್ಯ ಪ್ರದೇಶ ಅವುಗಳಿಗೆ ತಡೆಯನ್ನುಂಟುಮಾಡಿರುವುದೇ ಆಗಿದೆ. ಸೊಂಡೂರಿನ ಈ ಮಹಾಬೆಟ್ಟಗಳು ವಾಯುವ್ಯ–ಆಗ್ನೇಯ ಮಾರ್ಗವಾಗಿ ಹಬ್ಬಿನಿಂತಿವೆ. ಈ ಹೇಳಿಕೆಗೆ ಕೆಳಗಿನ ಮಾತುಗಳು ಪುಷ್ಟಿಕೊಡಬಲ್ಲವು.

"The Bellary District consists of two widely differing natural divisions an eastern and western, seperated by the Sondur Hills which run right across the District from north-west to south-east"— Karnataka Gazetteer, Bellary District, Pub. 1971.

ಜಿಲ್ಲೆಯ ಉಪಭಾಷಾ ಸೀಮಾರೇಖೆಯನ್ನು ಕೆಳಗಿನಂತೆಯೂ ತೋರಿಸಲು ಸಾಧ್ಯ.



ಉಪಭಾಷೆಯ ಏಕರೂಪತೆಯ ಕಾರಣದಿಂದ ರಾಯಚೂರು ಜಿಲ್ಲೆಯ ಗಂಗಾವತಿ ಮತ್ತು ಸಿಂಧನೂರು ತಾಲೂಕುಗಳ ಕನ್ನಡವನ್ನೂ ಸೇರಿಸಿ 'ಬಳ್ಳಾರಿ ಕನ್ನಡ' ಎಂದರೆ ತಪ್ಪಾಗಲಾರದೇನೋ ಎನಿಸುತ್ತದೆ.

ಇದುವರೆಗೆ 'ಬಳ್ಳಾರಿ ಕನ್ನಡ' ಭಾಷೆಯಲ್ಲಿನ ಶಬ್ದ, ರೂಪಿಮಾ ಮತ್ತು ವಾಕ್ಯ ರಚನಾ ಘಟ್ಟದಲ್ಲಿ ಕಂಡುಬಂದ ವಿಶಿಷ್ಟತೆಗಳನ್ನೂ ಅಲ್ಲದೆ ಅವುಗಳ ಬಳಕೆಗೆ ಇರಬಹುದಾದ ಕಾರಣಗಳನ್ನೂ ವಿವೇಚಿಸಲಾಗಿದ್ದು, ಇನ್ನು ಮುಂದೆ ಈ ಭಾಷೆಯು ಹೊಂದಿರುವ ಒತ್ತು, ಆಘಾತ, ಲಯಗಳಲ್ಲಿನ ರೀತಿಯನ್ನು ಅಲ್ಲಿಯ ಜನರು ಬಳಸುತ್ತಿರುವ ವಿಶೇಷ ಪದಸಮುಚ್ಚಯಗಳಿಂದೊಡಗೂಡಿದ ಕೆಳಗಿನ ಒಂದು ಸಂಭಾಷಣೆಯಿಂದ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

"ಎಷ್ಟೇ ನಾನೋಂಪ್ರತಕ್‌ಗನೇ ಬದ್ಕಂಡೆ ಇಂತಾ ಅನುಮಾದ್ದು ಎತ್ತ್ರದಾಗಾ ಕುಲ್ಲಾ ವಡ್ಯಾಕ್ತೀ ಸುಮ್ನ್ ರಟ್ಟಿ, ಬ್ಯಾಳೆ ತೊಗೆ ಮಾಡಿ ಉಂಚೆ ಚಟ್ನಿ ಇಟ್ಗಂಡು ಬಾಕ್ಲೀಗೆ ಪತ್ತ್ರಕ್ಯಂಬಾ ಜಜಕ ಏಳಿಸ್ಲಾಬ್ಯಾಡಂತ. ಮುದ್ಯಾತ್ನು ಕಾಲ್ದಾಗ್ನಿಂದ ಶನಾ

ದಿನ ಇದ್ದ್ ಅರ್ವೇನ ತತ್ರಬಿತ್ರಿ ತತ್ರಬಿತ್ರಿ ಮಾಡ್ಕ್ಯಂತ ವಡ್ಡಿಟ್ಟಿ. ಒಂದಂದಪ ನಿನಿಗೇನಾರಾ ಕುರುಬ್ರು ಮಳ್ ಇಡ್ತ್ಯೆತ್ರ್ಯಾ? ಕೊಲ್ಲ್ ತಗಂಬ್ಲಾ, ಜಿಗೂದ್ಗ ಟ್ನಿದ್ರ್ಗಿನ ಎಂಗಿರ್ತ್ರೈತೆ. ಬ್ಲಾ ತಪಾತರ ಪೂತ್ತಾತ್ಲ್ಲ ಮುದ್ಯಾತ ಬರ್ಲಿ ನಿಂದ್ರು. ಎಮ್ಮ್ರೇನ ನೋಡ್ಕ್ಯಬ್ಯಾಡ. ಕೆಡಾ ಬಡ ಉಗ್ಗಿದ್ರ್ಗಿನ ಉಗಳ್ಸ್ಗ್ಯ".

ಈ ಮಾತುಗಳಲ್ಲಡಕಗೊಂಡಿರುವ ಜೀವಂತಿಕೆ ಕಂಡುಬರುವುದು, ಧ್ವನ್ಯಾಲೇಖದ ಮೂಲಕ ವಿಶ್ಲೇಷಿಸಿದಾಗ ಮಾತ್ರ. ಅಂಥ ಆವಶ್ಯಕತೆ ಕಾಣದ್ದರಿಂದ ವಿಶ್ಲೇಷಿಸಿಲ್ಲ. ಭಾಷೆಯ ಒಟ್ಟು ರೂಪುರೇಷೆಯನ್ನು ಕಾಣಿಸುವ ಪ್ರಯತ್ನ ಮಾತ್ರ ಇಲ್ಲಿ ಮಾಡ ಲಾಗಿದೆ.

ಮಾತು ಮಾತುಗಳ ಮಧ್ಯೆ ತಡೆ ಉಂಟಾಗುತ್ತಿದ್ದು ಭಾವೋದ್ರೇಕ, ಉದ್ವೇಗ ಗಳಿಗೆ ತಕ್ಕಂತೆ ಶಬ್ದಗಳಲ್ಲಿ ತುಂಬಿಕೊಳ್ಳುವ ಶ್ರುತಿ, ರಾಗಗಳ ರೀತಿ ಅವರ್ಣನೀಯ.

ಇದುವರೆಗೆ ಬಳ್ಳಾರಿ ಜಿಲ್ಲೆಯ ಉನ್ನತಭಾಗದ ತಾಲೂಕುಗಳ ಭಾಷೆಯನ್ನು ನೋಡಿದೆವು. ಅವನತಭಾಗದ ತಾಲೂಕುಗಳಲ್ಲಿನ ಭಾಷೆಯ ರೀತಿ ಅವುಗಳ ಮೇಲೆ ಉಂಟಾಗಿರಬಹುದಾದ ಬೇರೆ ಉಪಭಾಷೆಗಳ ಪ್ರಭಾವಗಳನ್ನು ಇನ್ನು ಸ್ವಲ್ಪ ನೋಡೋಣ.

ಜಿಲ್ಲೆಯ ಉನ್ನತಭಾಗದ ತಾಲೂಕುಗಳ ಜನರು ಆಡುವ ಭಾಷೆಯಲ್ಲಿ ಕಾಣ ಬಹುದಾದ ಒತ್ತು, ಶ್ರುತಿ, ತಾನ, ಸ್ವರಭಾರಗಳು ಅವನತ ಭಾಗದ ತಾಲೂಕುಗಳ ಜನರ ಭಾಷೆಯಲ್ಲಿ ಎಳ್ಳಷ್ಟೂ ಕಂಡುಬರುವುದಿಲ್ಲ. ಹರಪನಹಳ್ಳಿ ತಾಲೂಕಿನ ಭಾಷೆಯ ಮೇಲೆ ಹರಿಹರ ಮತ್ತು ದಾವಣಗೆರೆಯ ಕನ್ನಡದ ಪ್ರಭಾವವಿರುವುದನ್ನು ಕಾಣುವು ದಾದರೆ, ಹಡಗಲಿ ತಾಲೂಕಿನ ಭಾಷೆಯ ಮೇಲೆ ಧಾರವಾಡ, ಹುಬ್ಬಳ್ಳಿ, ಲಕ್ಷ್ಮೇಶ್ವರ, ಗದಗ ಪ್ರದೇಶಗಳ ಭಾಷೆಯ ಪ್ರಭಾವವಿರುವುದನ್ನು ಕಾಣುತ್ತೇವೆ. ಅಲ್ಲದೆ ಈ ಪ್ರಭಾವವು ಮಲ್ಲಾಪುರ ತಾಲೂಕಿನ ವರೆಗೂ ಹರಿದಿದೆ ಎಂಬುದು ಸುಸ್ಪಷ್ಟ. ಕೂಡ್ಲಿಗಿ ತಾಲೂಕಿನ ಭಾಷೆಯ ಮೇಲೆ ಚಿತ್ರದುರ್ಗ ಜಿಲ್ಲೆಯ ಜಗಳೂರು ಕನ್ನಡವೂ ಅಲ್ಲದೆ ಹರಪನಹಳ್ಳಿ, ದಾವಣಗೆರೆ, ಹರಿಹರಗಳ ಕನ್ನಡದ ಪ್ರಭಾವವು ಇದ್ದು ಇಲ್ಲಿಯ ಕನ್ನಡ ಕಲಸುಮೇಲೋಗರವಾಗಿರುವಂತೆ ತೋರುತ್ತದೆ. ಬಳ್ಳಾರಿ ಜಿಲ್ಲೆಯ ಕನ್ನಡವು ತಾಲೂಕು ತಾಲೂಕುಗಳ ಮಧ್ಯ ಎಷ್ಟು ಭಿನ್ನ ಎಂಬುದಕ್ಕೆ 'ಹೋಗುತ್ತೇನೆ' ಎಂಬ ಒಂದು ಶಬ್ದ ಹರಪನಹಳ್ಳಿ ತಾಲೂಕಿನಲ್ಲಿ 'ವೋಕಿನಿ' ಎಂದೂ, ಹಡಗಲಿ ಮತ್ತು ಮಲ್ಲಾಪುರ ತಾಲೂಕುಗಳಲ್ಲಿ 'ಹೊಕ್ಕಿನಿ' ಎಂದೂ, ಕೂಡ್ಲಿಗಿ ತಾಲೂಕಿನಲ್ಲಿ 'ವಕಿನಿ' ಎಂದೂ, ಸಿರುಗುಪ್ಪ, ಬಳ್ಳಾರಿ, ಹೊಸಪೇಟೆ, ಸೊಂಡೂರಿನ ಕೆಲ ಭಾಗಗಳಲ್ಲಿ 'ವೋತ್ನಿ' ಎಂದೂ ಬಳಕೆಯಾಗುತ್ತಿರುವುದೇ ಸಾಕ್ಷಿ. ಆದರೆ ಅವನತ ಭಾಗದ ಸಿರುಗುಪ್ಪ,

ಬಳ್ಳಾರಿ, ಹೊಸಪೇಟೆ ಮತ್ತು ಸೊಂಡೂರು ತಾಲೂಕುಗಳ ಭಾಷೆಯಲ್ಲಿ ಮಾತ್ರ ಭಿನ್ನತೆಯಿರದೆ ಏಕರೂಪತೆ ಕಂಡುಬರುತ್ತದೆ. ಸಿರುಗುಪ್ಪ ಮತ್ತು ಸೊಂಡೂರು ತಾಲೂಕುಗಳಲ್ಲಿ ತೆಲುಗು ಭಾಷೆಯ ಬಳಕೆ ಇಲ್ಲ. ಬಳ್ಳಾರಿ ಮತ್ತು ಹೊಸಪೇಟೆಗಳಲ್ಲಿ ಅದರಲ್ಲೂ ಆ ಸ್ಥಳಗಳಲ್ಲಿ ಮಾತ್ರ ತೆಲುಗು ಭಾಷೆಯು ಪ್ರಚಲಿತದಲ್ಲಿದ್ದು ದ್ವಿಭಾಷಿಕತೆ (Bilingualism) ಉಂಟಾಗಿ ಕನ್ನಡದ ಬಳಕೆಯ ಪ್ರಮಾಣಕ್ಕೆ ಸರಿದೊರೆಯಾಗಿದೆ.

ಅಂತೂ ಯಾವುದೇ ಒಂದು ಭಾಷೆಯ ಅಥವಾ ಉಪಭಾಷೆಯ ನಿಶ್ಚಿತ ಸ್ವರೂಪವನ್ನು ಗೆರೆ ಕೊರೆದು ಹೀಗೇ ಎಂದು ಹೇಳುವಂತಹದು ಕಠಿಣವಾದ ಕೆಲಸ. ಆದರೂ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಕೊನೆಯ ಮಾತೆಂದರೆ ಭಾಷೆ ನಿಂತ ನೀರಲ್ಲ, ಜೀವಂತ ಪ್ರವಾಹ.

ಗ್ರಂಥಋಣ

ಐತಿಹಾಸಿಕ ಭಾಷಾವಿಜ್ಞಾನ : ಜಿ. ಎಸ್. ಕುಳ್ಳಿ

ಉಪಭಾಷೆ : ಕೃಷ್ಣ ಪರಮೇಶ್ವರ ಭಟ್ಟ

Gazetteer, Bellary District

• •

ವಿಜಾಪುರ ಜಿಲ್ಲೆಯ ಕನ್ನಡ

• ಜಯವಂತ ಕುಳ್ಳಿ

ಭಾಷೆ–ಭಾಷೆಗಳ ನಡುವೆ ಗೆರೆ ಕೊರೆಯುವುದು ಕಠಿಣವಿದ್ದಾಗ ಉಪಭಾಷೆಗಳ ನಡುವೆ ಅದರಲ್ಲೂ ಭಾಷಾಪ್ರಭೇದಗಳ ನಡುವೆ ಗೆರೆ ಕೊರೆದು ಹೇಳುವುದು ಇನ್ನೂ ದುಸ್ತರವಾದುದು. ಆದರೂ ಸ್ಥೂಲವಾಗಿ ಸಾಮಾನ್ಯ ವೈಶಿಷ್ಟ್ಯಗಳನ್ನು ಹೇಳುವ ಪ್ರಯತ್ನ ಇಲ್ಲಿದೆ.

ಕ್ರಿಸ್ತಶಕ ಆರನೆಯ ಶತಮಾನದ ಚಾಲುಕ್ಯರಿಂದ ಮುಂದುವರಿದು, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಯಾದವ, ಆದಿಲಶಾಹಿ ಅರಸುಮನೆತನಗಳ ಕೈಕೆಳಗೆ ಬಂದು, ಕೊನೆಗೆ ಮರಾಠಿ ಸಂಸ್ಥಾನಿಕರ ಪ್ರಭಾವವನ್ನೂ ಅನುಭವಿಸಿ ನಿಂತ ವಿಜಾಪುರ ಜಿಲ್ಲೆ ತನ್ನ ವೈಶಿಷ್ಟ್ಯಗಳಿಗೆ ಕಾರಣವಾಗಿದೆ. ಈ ವೈಶಿಷ್ಟ್ಯಗಳು ವಿಜಾಪುರ ಜಿಲ್ಲೆಯ ಕನ್ನಡವನ್ನು ಇತರ ಜಿಲ್ಲೆಗಳ ಕನ್ನಡದಿಂದ ಪ್ರತ್ಯೇಕಿಸಲು ಕಾರಣವಾಗಿವೆ.

ವಿಜಾಪುರ ಜಿಲ್ಲೆಯಲ್ಲಿಯೇ ಕೃಷ್ಣೆ ಹರಿದು, ಜಿಲ್ಲೆಯನ್ನು ಇಬ್ಭಾಗಿಸಿದೆ. ಕೃಷ್ಣೆಯ ಮೇಲ್ಭಾಗದ ಉತ್ತರಭಾಗದಲ್ಲಿ ವಿಜಾಪುರ, ಇಂಡಿ, ಸಿಂದಗಿ, ಮುದ್ದೇಬಿಹಾಳ ತಾಲೂಕುಗಳೂ ಕೆಳಭಾಗದ ದಕ್ಷಿಣದಲ್ಲಿ ಜಮಖಂಡಿ, ಮುಧೋಳ, ಬಾಗಲಕೋಟ ತಾಲೂಕುಗಳೂ ಭಿನ್ನಭಿನ್ನ ಪ್ರಭೇದಗಳನ್ನು ಹೊಂದಿವೆ. ಎರಡು ಜಿಲ್ಲೆಗಳ ನಡುವಿರುವಷ್ಟು ವ್ಯತ್ಯಾಸ ಈ ಭಾಗಗಳಲ್ಲಿ ಕಂಡುಬರುತ್ತವೆ. ಎರಡೂ ಭಾಗಗಳ ಭಾಷೆಯನ್ನು ಇಲ್ಲಿ ಗಮನಿಸಲಾಗಿದ್ದು, ಭಿನ್ನತೆಯಿದ್ದಲ್ಲಿ ದಕ್ಷಿಣ(ದ) ಮತ್ತು ಉತ್ತರ (ಉ) ಭೇದವನ್ನೂ ಸೂಚಿಸಲಾಗಿದೆ.

೦ ಧ್ವನಿಮಾ :

೧ ಸ್ವರಧ್ವನಿಮಾ :

ವಿಜಾಪುರ ಕನ್ನಡದಲ್ಲಿ ಸ್ವರಧ್ವನಿಮಾಗಳು ಕೆಳಗಿನಂತಿವೆ :

ಇ		ಉ(ಉಁ)	
ಎ		ಒ	–(ದೀರ್ಘ)
	ಅ		
ಆ್ಯ	ಆ(ಆಁ) ಆ̆		

೧.೧ ಇ ÷ ಉ :

[ಇಡು] ÷ [ಉಡು]
[ಕಿಡಿ] ÷ [ಕುಡಿ]

ಎ ÷ ಒ :

[ಎಲೆ] ÷ [ಒಲೆ]
[ಕೆಡು] ÷ [ಕೊಡು]

ಆ್ಯ ÷ ಆ :

[ಕ್ಯಾರಿ] ÷ [ಕಾರಿ]

(ಇವೆರಡು ಸ್ವರಗಳು ಹ್ರಸ್ವ. ದೀರ್ಘ ಬಳಸುವ ಕಾಲಕ್ಕೆ ದೀರ್ಘದ ಚಿಹ್ನೆಯಾದ — ವನ್ನು ಮೇಲೆ ಕೊಡಲಾಗಿದೆ. ಉದಾ : ಕ್ಯಾರಿ.)

ಗ್ರಂಥಸ್ಥ ಕನ್ನಡದಲ್ಲಿ ಅಷ್ಟಾಗಿ ಬಳಕೆಯಾಗದ ಆ್ಯ ಮತ್ತು ಆಗಳು ವಿಜಾಪುರ ಕನ್ನಡದಲ್ಲಿ ವಿಪುಲವಾಗಿ ಬಳಕೆಯಾಗುತ್ತವೆ. ಉದಾಹರಣೆಗೆ, ಮಾಡಿಕ್ಯಾಸಿ, ಕ್ಯಾರಿ, ಕ್ಯಾರಿ, ಕ್ಯಾಂವಿ, ಬ್ಯಾಟಿ (ಬೇಟೆ,), ಪ್ಯಾಟಿ (ಪೇಟೆ) ಹಾಗೂ ದಾಸಿ (ದೋಸೆ), ಕಾಟಿ (ಕೋಟೆ), ಗಾಡಿ (ಗೋಡೆ), ಕಾಣಿ (ಕೋಣೆ) ಇತ್ಯಾದಿ.

ಅ ÷ ಆ :

[ಅದ] ÷ [ಆದ]
[ಕರಿ] ÷ [ಕಾರಿ]
[ಕತ್ತಿ] ÷ [ಕಾತ್ತಿ]
[ಮರಿ] ÷ [ಮಾರಿ]

ಕನ್ನಡದ ವರ್ಣಮಾಲೆಯಲ್ಲಿ ಅ ಹ್ರಸ್ವ, ಆ ಅದರ ದೀರ್ಘ. ಆದರೆ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಉಚ್ಚಾರದಲ್ಲಿ ಆ (ದೀರ್ಘ) ಮೈಸೂರು ಕನ್ನಡದ ಉಚ್ಚಾರವನ್ನೇ ಹೊಂದಿದ್ದರೂ, ಅ ದ ಉಚ್ಚಾರ ಎರಡರಲ್ಲಿಯೂ ಭಿನ್ನ. ಅ ಸಂವೃತ ಸ್ವರ, ಆ ವಿವೃತ ಸ್ವರ. ಇವೆರಡೂ ಸ್ವರಗಳು ಭಿನ್ನಧ್ವನಿಮಾಗಳು. ಆದರೂ ಸಂವೃತ ಸ್ವರದ ಬಳಕೆ ಸಾಪೇಕ್ಷವಾಗಿ ಕಡಿಮೆ. ಇಲ್ಲಿ ವರ್ಣಮಾಲೆಯಲ್ಲಿಯ ಸಂಜ್ಞೆಗೆ ಭಿನ್ನವಾಗಿ ಅ ಮತ್ತು ಆ ಎರಡೂ ಹ್ರಸ್ವಸ್ವರಗಳು ಎಂಬುದನ್ನು ಗಮನಿಸಬೇಕು. ಮುಂದೆ ಕೊಟ್ಟ ಉದಾಹರಣೆಗಳಲ್ಲಿ, ಅ (ಹ್ರಸ್ವ), ಅ̄ (ದೀರ್ಘ), ಆ (ಹ್ರಸ್ವ), ಆ̄ (ದೀರ್ಘ) ಈ ರೀತಿ ಸಂಕೇತ ಕೊಡಲಾಗಿದೆ. ಅದೇರೀತಿ ಕಾಗುಣಿತದಲ್ಲಿ ಇವು ಬಂದಾಗಲೂ ಇದೇ ಮುಂದುವರಿದಿದೆ. ಕದ (ಹ್ರಸ್ವ), ಕ̄ದ (ದೀರ್ಘ). ಕಾರಿ (ಹ್ರಸ್ವ), ಕಾ̄ರಿ

(ದೀರ್ಘ) ಕಾ ದ ಮೇಲೆ ˘ ಚಿಹ್ನೆಯನ್ನು ಕೊಟ್ಟರೆ (ಕ̆ಾ) ಅದು ಕ್ವಾ ಹ್ರಸ್ವ. ಅದಕ್ಕೆ ಮೇಲೆ ಗೆರೆ ಎಳೆದರೆ (ಕ̆̄ಾ) ಅದು ದೀರ್ಘ. ಉದಾ : ಕ̆ಾಟಿ.

೧.೨ ಹ್ರಸ್ವ ÷ ದೀರ್ಘ :

ಇ ÷ ಈ :

[ಇಡು] ÷ [ಈಡು]
[ಬಿಡು] ÷ [ಬೀಡು]

ಉ ÷ ಊ :

[ಸುಡು] ÷ [ಸೂಡು]
[ತುರಿ] ÷ [ತೂರಿ]

ಎ ÷ ಏ :

[ಕೆಡು] ÷ [ಕೇಡು]
[ಬೆಳೆ] ÷ [ಬೇಳೆ]

ಒ ÷ ಓ :

[ಕೊಡು] ÷ [ಕೋಡು]
[ತೊಡು] ÷ [ತೋಡು]

ಅ ÷ ಅ̄ :

[ಅದ] ÷ [ಅ̄ದ]

ಆ ÷ ಆ̄ :

[ಕಾರಿ] ÷ [ಕಾ̄ರಿ]
[ಹಾರಿ] ÷ [ಹಾ̄ರಿ]
[ಮಾರಿ] ÷ [ಮಾ̄ರಿ]

ಆ್ಯ ÷ ಆ್̄ಯ :

[ಕ್ಯಾರಿ] ÷ [ಕ್ಯಾ̄ರಿ]
[ನ್ಯಾರಿ] ÷ [ನ್ಯಾ̄ರಿ]

ಆ̆ ÷ ಆ̆̄ :

[ಕ̆ಾರಿ] ÷ [ಕ̆̄ಾರಿ]

೧.೩ ಕೆಲವು ಸ್ವರಗಳಲ್ಲಿ ಅನುನಾಸಿಕತೆಯೂ ಕಂಡುಬರುತ್ತದೆ. ಆ ಮತ್ತು ಊ ಗಳು ಅನುನಾಸಿಕಯುಕ್ತವೂ ಆಗಿವೆ; ಅನನುನಾಸಿಕವೂ ಆಗಿವೆ. ಈ ಭಿನ್ನತೆ ಧ್ವನಿಮಾತ್ಮಕ.

ಅ ÷ ಅ̈ :

[ಅ] – ‘ಅದು’
[ಅ̈] – ‘ಏನು ?’

ಊ ÷ ಓ̈ :

[ಹೂ]
[ಹೊ̈]

೧.೪ ಎ, ಒ ಸ್ವರಗಳು ಉಪಧ್ವನಿಮಾಗಳನ್ನು ಹೊಂದಿವೆ. ಎ ಅಥವಾ ಒ ಗಳು ಶಬ್ದ ಪ್ರಾರಂಭದಲ್ಲಿ ಬಂದರೆ ಅವುಗಳಿಗೆ ಉಳಿದ ಸ್ಥಾನಗಳಲ್ಲಿಯ ಉಚ್ಚಾರಣೆಗಿಂತ ಭಿನ್ನ ಉಚ್ಚಾರಣೆಯಿದೆ. ಯೇಳು–ಯೋಳು (೭), ಯೇನು, ಯೆರಡು, ವೊಂದು, ವೊಬ್ಬ ಮುಂತಾದ ಉಚ್ಚಾರಣೆಗಳನ್ನು ಗಮನಿಸಿದಾಗ, ಶಬ್ದ ಪ್ರಾರಂಭದಲ್ಲಿ ಎ ಬಂದರೆ, ಅವುಗಳ ಹಿಂದೆ ವ್ಯಂಜನೋಚ್ಚಾರಣೆ ಬರುತ್ತದೆ. ಅದನ್ನು ಈ ರೀತಿ ವಿವರಿಸಬಹುದು :

/ಎ/	[ಯ್ಎ] – ಶಬ್ದ ಪ್ರಾರಂಭದಲ್ಲಿ	ಬರುತ್ತದೆ
	[ಎ] – ಉಳಿದೆಡೆಗಳಲ್ಲಿ	
/ಒ/	[ವ್ಒ] – ಶಬ್ದ ಪ್ರಾರಂಭದಲ್ಲಿ	ಬರುತ್ತದೆ
	[ಒ] – ಉಳಿದೆಡೆಗಳಲ್ಲಿ	

೨ ವ್ಯಂಜನಧ್ವನಿಮಾ :

ಈ ಕೆಳಗಿನ ವ್ಯಂಜನಧ್ವನಿಮಾಗಳು ವಿಜಾಪುರ ಕನ್ನಡದಲ್ಲಿ ಕಂಡುಬರುತ್ತವೆ. ಧ್ವನಿಮಾ ಘಟ್ಟದಲ್ಲಿ ಇವು ಉಳಿದ ಪ್ರಭೇದಗಳಿಗೆ ಸಾಮಾನ್ಯವಾಗಿವೆ. ಉಪಧ್ವನಿಮಾ ಘಟ್ಟದಲ್ಲಿ ಕೆಲವು ವ್ಯತ್ಯಾಸಗಳು ವಿಶಿಷ್ಟವಾಗಿವೆ.

ಪ್ ಬ್	ತ್ ದ್	ಚ್ ಜ್	ಟ್ ಡ್	ಕ್ ಗ್	
ಮ್	ನ್		ಣ್		
	ಸ್	ಶ್			ಹ್
	ರ್				
	ಲ್		ಳ್		
ವ್		ಯ್			

ಙ್ ಮತ್ತು ಞ್ ಧ್ವನಿಗಳಿದ್ದರೂ ಅವು ಧ್ವನಿಮಾಗಳಲ್ಲ. ಅವನ್ನು ಕೆಳಗಿನಂತೆ ವಿವರಿಸಬಹುದು :

/ನ್/
- [ಙ್]– ತಜ್ಜಾತಿಯ ವ್ಯಂಜನಗಳ ಹಿಂದೆ. ಉದಾ: ಕಙ್ಕಣ, ಅಙ್ಗಿ
- [ಞ್] – ,, ,, ,, ,, ಅಞ್ಚೆ, ಸಞ್ಜೆ
- [ನ್] – ಉಳಿದೆಡೆಗಳಲ್ಲಿ ,, ನಾಡು, ಮನೆ

} ಬರುತ್ತದೆ.

ಇದೇರೀತಿ ಚ್, ಜ್ ಗಳಿಗೂ ಉಪಧ್ವನಿಮಾಗಳಿವೆ. ಉದಾಹರಣೆಗೆ :

/ಚ್/
- [˘ಚ್]– ಪೂರ್ವಸ್ವರ ಹಾಗೂ ಅ ಗಳ ಹಿಂದೆ. ಉದಾ: ˘ಚೀರು, ˘ಚಕಲಿ
- [ಚ್]– ಇತರೆಡೆಗಳಲ್ಲಿ ಉದಾ: ಚೂರು, ಚೊಣ್ಣ

/ಜ್/
- [˘ಜ್]-ಪೂರ್ವಸ್ವರ ಮತ್ತು ಅ ಗಳ ಹಿಂದೆ.ಉದಾ: ˘ಜೇರು, ˘ಜಿಡ್ಡು, ˘ಜರಾ
- [ಜ್]– ಇತರೆಡೆಗಳಲ್ಲಿ ಉದಾ : ಜುಲುಮಿ, ಜೋಡು

೨.೧ ಕೆಲವು ಸಂದರ್ಭಗಳಲ್ಲಿ ಅಲ್ಪಪ್ರಾಣ–ಮಹಾಪ್ರಾಣಗಳ ನಡುವೆ ಸ್ವಚ್ಛಂದ ಪರಿವರ್ತನೆಯಿದೆ. ಇದು ಸುಶಿಕ್ಷಿತರು ಮಾತನಾಡುವ ಭಾಷೆಯಲ್ಲಿ ಹೆಚ್ಚು ಕಂಡುಬರುತ್ತದೆ. ಅಶಿಕ್ಷಿತರಲ್ಲಿ ಈ ಪರಿವರ್ತನೆ ಕಡಿಮೆ. ಉದಾಹರಣೆಗೆ :

ಭೆಟ್ಟಿ – ಬೆಟ್ಟಿ
ಭಾವಿ – ಬಾವಿ
ಭಂಗಾರ – ಬಂಗಾರ
ಕಥೆ – ಕತೆ
ವಿದ್ಯಾರ್ಥಿ – ವಿದ್ಯಾರ್ತಿ
ಪುಢಾರಿ – ಪುಡಾರಿ

೨.೨ ಶ್ ಈ ಜಿಲ್ಲೆಯಲ್ಲಿ ಕಂಡುಬಂದರೂ ಅದು ಇಲ್ಲವೆನ್ನುವಷ್ಟು ಅದರ ಬಳಕೆ ಕಡಿಮೆಯಾಗಿದೆ. ಇದು ವಿಶಿಷ್ಟವಾಗಿ ಕೆಲವು ಅಂಕಿತನಾಮಗಳಲ್ಲಿ ಕಂಡುಬರುತ್ತದೆ ಅಷ್ಟೆ. ಉದಾಹರಣೆಗೆ: ಶಾಂತಿ, ಶಶಿ, ಶೇಖರ, ಶೈಲಾ, ಶರಣ, ಶಂಕರ.

೩ ಆಕೃತಿಮಾ :

ವಿಜಾಪುರ ಕನ್ನಡದ ಮಾತಿನಲ್ಲಿ ಆಕೃತಿಮಾಗಳು ವ್ಯಂಜನಾಂತ. ಗ್ರಂಥಸ್ಥ ಭಾಷೆಯಲ್ಲಿ ವ್ಯಂಜನಾಂತ ಶಬ್ದಗಳನ್ನು ಸ್ವರಾಂತ ಶಬ್ದಗಳನ್ನಾಗಿ ಮಾಡಲು –ಉ

ಹಚ್ಚಿ ನಿರ್ಮಾಣವಾದ ಶಬ್ದಗಳೆಲ್ಲ ಇಲ್ಲಿ ವ್ಯಂಜನಾಂತ. ಉದಾಹರಣೆಗೆ, ತಿನ್, ಕಣ್, ಕಲ್, ಉಪ್, ನೋಡ್, ಕಾಗದ್, ಪುಸ್ತಕ್, ನೀರ್, ನಾಟಕ್, ಕಾರ್, ಬಸ್ ಇತ್ಯಾದಿ.

ವಿಜಾಪುರ ಕನ್ನಡದ ಇನ್ನೊಂದು ವೈಶಿಷ್ಟ್ಯವೆಂದರೆ ಶಬ್ದಾಂತ್ಯ ಎಕಾರ ಇಕಾರ ವಾಗಿದ್ದು. ಉದಾಹರಣೆಗೆ: ಮನಿ, ತೆನಿ, ಕೊಣಿ, ದಾಸಿ, ಬ್ಯಾಳಿ, ಕ್ಯಾರಿ, ಹಾಳಿ, ರ್‍ಯಾಂಟಿ, ತಿಪ್ಪಿ, ಉಪ್ಪರಿಗಿ ಇತ್ಯಾದಿ.

೩.೧ ಲಿಂಗ :

ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಮತ್ತು ಅವುಗಳ ಪ್ರತ್ಯಯಗಳು ಉಳಿದ ಪ್ರಭೇದಗಳಲ್ಲಿ ಕಂಡುಬರುವಂತೆ ಇಲ್ಲಿಯೂ ಕಂಡುಬಂದರೂ ಈಗಾಗಲೇ ಹೇಳಿದಂತೆ ಶಬ್ದಗಳು ವ್ಯಂಜನಾಂತವಾಗುವ ಪ್ರಕ್ರಿಯೆ ಇಲ್ಲಿಯೂ ಕಂಡುಬರುತ್ತದೆ.

ಉದಾಹರಣೆಗೆ,

ಪುಲ್ಲಿಂಗ : ಬರ್‍ತಾನ್, ಹೊಕ್ಕಾನ್, ಕುಂಡರ್‌ತಾನ್, ನಿಂದರ್‌ತಾನ್, ತಿತಾನ್, ಮಕೋತಾನ್.

ಸ್ತ್ರೀಲಿಂಗ : ಬರ್‍ತಾಳ್, ಹೊಕ್ಕಾಳ್, ಕುಂಡರತಾಳ್, ತಿತಾಳ್, ಮಕೋತ್ತಾಳ್.

ನಪುಂಸಕಲಿಂಗ : ಹೊಕ್ಕತಿ, ಬರ್‍ತತಿ, ಕುಂಡರ್‌ತತಿ, ನಿಂದರ್‌ತತಿ, ತಿತತಿ.

ತಿರಸ್ಕಾರಪೂರ್ವಕವಾಗಿ ಮಾತನಾಡುವಾಗ ಸ್ತ್ರೀ-ಪುರುಷ ಇಬ್ಬರೂ ನಪುಂಸಕ ರಾಗಿ ಬಿಡುತ್ತಾರೆ. ಅಲ್ಲಿ ನಪುಂಸಕಲಿಂಗದ ಪ್ರತ್ಯಯಗಳೇ.

ಉದಾಹರಣೆಗೆ,

ಅದ್ ಬತ್ತು (ಅವನು ಬಂದನು, ಅವಳು ಬಂದಳು).
ಅದ್ ಹೋತ್
ಅದ್ ಒಟ್ಟರ್‌ಸಿತ್ (ಅವಳು ಮತ್ತೆ ಬಂದಳು)

೩.೨ ವಚನ :

ಇಲ್ಲಿ ಏಕವಚನ, ಬಹುವಚನ ಎರಡೂ ಇವೆ. ಆದರೆ ಪ್ರತ್ಯಯಗಳು ವಿಶಿಷ್ಟ. ಏಕವಚನದಲ್ಲಿ ಪ್ರತ್ಯಯವಿಲ್ಲ. ಬಹುವಚನದಲ್ಲಿ -ಊ (ರ್), -ರ್ ಮತ್ತು -ಗೋಳ್ ಪ್ರತ್ಯಯಗಳು.

ಉದಾಹರಣೆಗೆ,

ಏಕವಚನ	ಬಹುವಚನ
ಹುಡಗ್	ಹುಡುಗೂ, ಹುಡುಗೂರ್
ಮನಶ್ಯಾ	ಮನಶ್ಯಾರ್
ತುಡಗ್	ತುಡಗ್ರು
ಗಿಡಾ	ಗಿಡಗೋಳ್
ಬಾಂವಿ	ಬಾಂವಿಗೋಳ್
ಕ್ಹಾಟ್	ಕ್ಹಾಟ್‌ಗೋಳ್
ಹ್ಹಾಲಾ	ಹ್ಹಾಲ್‌ಗೋಳ್
ದಾನಾ	ದಾನ್‌ಗೋಳ್

– ಗೋಳ್ ಪ್ರತ್ಯಯ ಸನ್ಮಾನಾರ್ಥದಲ್ಲಿ ವ್ಯಕ್ತಿಗಳಿಗೂ ಹತ್ತುವುದು ಹೆಚ್ಚು.

ಉದಾಹರಣೆಗೆ,

ಸ್ವಾಮಿಗೋಳ್
ಮಂತ್ರಿಗೋಳ್
ಅಪ್‌ಗೋಳ್
ಗುರುಗೋಳ್

ನಪುಂಸಕಲಿಂಗದಲ್ಲಿ ಬಹುವಚನ ಪ್ರಯೋಗವಾಗುವುದು ಬಹು ವಿರಳ. ಅದು ಕ್ರಿಯಾಪದದ ಅರ್ಥದಿಂದಲೋ ಅಥವಾ ಅದರ ಹಿಂದಿನ ವಿಶೇಷಣದಿಂದಲೋ ವ್ಯಕ್ತವಾಗುತ್ತದೆ.

ಉದಾಹರಣೆಗೆ,

ಗಿಡಾ ಕಡಿ – ಹತ್ತ್ ಗಿಡಾ ಕಡದ್ರು
ನಾಯಿ ಸತ್ತಿ – ನಾಯಿ ಸಾತ್ತೂ
ಹೂವ್ ಸಿಕ್ಕ್ಯತ್ – ಹೂವ್ ಸಿಕ್ಕೂ
ಪುಸ್ತಕ್ ತುಗೊಂಡ್ ಬಾ – ಹತ್ತ್ ಪುಸ್ತಕ್ ತುಗೊಂಡ್ ಬಾ.

೩.೩ ವಿಭಕ್ತಿ :

1 ಪ್ರಥಮಾ :

ಪ್ರಥಮಾ ವಿಭಕ್ತಿಗೆ ಪ್ರತ್ಯಯವಿಲ್ಲ. ಸ್ವತಂತ್ರಶಬ್ದ ಇದ್ದ ರೂಪದಲ್ಲಿಯೇ ಬಳಕೆಯಾಗುತ್ತದೆ.

ಉದಾಹರಣೆಗೆ,

ಹುಡಗ್ ಬಂದ್
ಹುಡಿಗಿ ಕಲಿತಾಳ್
ಗಿಡಾ ಬಿತ್ತ್
ಹಣ್ಣ್ ಆಗೇತಿ
ಮನಿ ಕಟ್ಟಿಸಿದ್

2 ದ್ವಿತೀಯಾ :

ದ್ವಿತೀಯಾ ವಿಭಕ್ತಿಗೆ ಏಕವಚನ ಹಾಗೂ ಬಹುವಚನದಲ್ಲಿ ಬೇರೆ ಪ್ರತ್ಯಯಗಳು. ಏಕವಚನದಲ್ಲಿ ಶಬ್ದಾಂತ್ಯ ಸ್ವರ ದೀರ್ಘವಾಗುವುದು ಒಂದು ಪ್ರತ್ಯಯ, –ನ್ ಇನ್ನೊಂದು. ಕೆಲವೊಮ್ಮೆ ಯಾವ ಪ್ರತ್ಯಯವೂ ಇಲ್ಲ. ಬಹುವಚನದಲ್ಲಿ –ನ್ ಬರುತ್ತದೆ. ಉದಾಹರಣೆಗೆ,

ಏಕವಚನಕ್ಕೆ ಉದಾಹರಣೆ :

ಮೂಲಶಬ್ದ :

ನೀರ್ ಕುಡಿ
ಊರ್ ದಾಟಿದ್
ಪುಸ್ತಕ್ ತಾ
ನಾಟಕ್ ನೋಡಿದ್

ಸ್ವರದೀರ್ಘ :

ನಾಯೀ ಹೊಡಿ
ಪುಸ್ತಕಾ ತಾ
ಮನೀ ಕಟ್ಸ್
ಗ್ಯಾರಿ ಹೊಡಿ
ಗಿಡಾ ಕಡೀಬ್ಯಾಡ್
ಪೂಜೀ ಮಾಡ್

–ನ್ :

ಹುಡಗನ್ ಕರಕೊಂಡ್ ಬಾ
ರಾಮನ್ ನೋಡೀನಿ
ಕಾಮನ್ ಕೂಡಿಸ್ಯಾರ್

ಬಹುವಚನಕ್ಕೆ ಉದಾಹರಣೆ :

–ನ್ :

ಹುಡುಗೂರ್ನ್ ಕರಕೊಂಡ್ ಬಾ
ಗಿಡಗೋಳ್ನ್ ಹಚ್ಚ್
ಹೂಗೋಳ್ನ್ ಹರ್‌ದಾರ್
ಮನಿಗೋಳ್ನ್ ಕಟ್ಟಿಸ್ಯಾರ್

3 ತೃತೀಯಾ :

ಕನ್ನಡದಲ್ಲಿ ಸಾಮಾನ್ಯವಾಗಿ ಕಂಡುಬರುವ –ಇಂದ ಇಲ್ಲಿ ಸಿಗದು. ಅದರ ಬದಲು –ಕೈಲೆ, –ಕಯ್ಯಾಗ್, –(ಈ)ಲೆ ಪ್ರತ್ಯಯಗಳಿವೆ.

ಉದಾಹರಣೆಗೆ,

ಅವನ್ ಕೈಲೆ ಕೆಲಸಾ ಮಾಡಿಸಿದ್
ನಿನ್ನ್ ಕೈಲೆ ಆಗೂದುಲ್ಲ್
ಅವನ್ ಕಯ್ಯಾಗ್ ಅಕ್ಕತಿ
ನಿನ್ನ್ ಕಯ್ಯಾಗ್ ಆಗೂದುಲ್ಲ್
ಕೊಡ್ಲೀಲೆ ಗಿಡಾ ಕಡದ್
ಪೆನ್ನೀಲೆ ಬರೀತಾನ್
ಹಾಗ್ಗದ್ಲೆ ಕಟ್ಟತಾನ್

4 ಚತುರ್ಥಿ :

–ಗ್, –ಗಿ, –ಕ್, –ಇಗಿ ಇವು ಚತುರ್ಥಿ ವಿಭಕ್ತಿಪ್ರತ್ಯಯಗಳು.

ಉದಾಹರಣೆಗೆ,

ಹುಡಗ್ಗ್ ಕೊಡ್
ಹುಡುಗ್ಗಿ ಕೊಡ್‌ಬ್ಯಾಡ್
ಊರ್ಗಿ ಹಾದ್
ಮನೀಗಿ ಬಾಂದ್
ಪುಸ್ತಕ್ಕ್ ನಾಲ್ಕ್ ರೂಪಾಯಿ
ಗಿಡಕ್ಕ್ ನೀರ್ ಹಾಕ್
ಸಿನೇಮಾಕ್ಕ್ ಹೊಕ್ಕನ್
ತಾವರ್ಗಿ ಹಾದ್ಲ್

5 ಪಂಚಮಿ :

–ಇಂದ, ಕಡಿಂದ ಪಂಚಮಿ ವಿಭಕ್ತಿಪ್ರತ್ಯಯಗಳು.

ಉದಾಹರಣೆಗೆ,

ಊರಿಂದ ಬಾಂದ್
ಹಾಲ್‌ದಿಂದ ಬಾಂದ್
ಹೆಣ್ಣಿಂದ ಕ್ಯಾಟ್ಟ್
ಮನಿಂದ ಬಾಂದ್
ಹುಡಗನ್ ಕಡಿಂದ ಇಸಗೊಂಡ್

6 ಷಷ್ಠಿ :

ಶಬ್ದಾಂತ್ಯ ಸ್ವರದೀರ್ಘ ಮತ್ತು ಶೂನ್ಯ ಷಷ್ಠಿ ವಿಭಕ್ತಿಪ್ರತ್ಯಯಗಳು.

ಉದಾಹರಣೆಗೆ,

ದೀರ್ಘ :

ಕಾತ್ರೀ ಮಗಾ
ನಾಯೀ ಮರಿ
ಮನೀ ಮುಂದಿ
ಹುಲೀ ಚಾರ್ಮ್

ಶೂನ್ಯ :

ಹಣ್ಣಿನ್ ರಾಸಾ
ಮಣ್ಣಿನ್ ಮಾಗಾ
ಗುರುವಿನ್ ಶಿಷ್ಯಾ
ಪೆನ್ನಿನ್ ಮಸಿ
ಊರ್ ಮುಂದ್
ನೀರ್ ಮ್ಯಾಗ್

7 ಸಪ್ತಮಿ :

–ಆಗ್ ಸಪ್ತಮಿ ವಿಭಕ್ತಿಪ್ರತ್ಯಯ.

ಉದಾಹರಣೆಗೆ,

ಮನ್ಯಾಗ್
ಕೇರ್‍ಯಾಗ್

ಗುಡ್ಯಾಗ್
ಪುಸ್ತಕದಾಗ್
ಹಾಲ್‌ದಾಗ್
ತೆಲ್ಯಾಗ್

8 ಸಂಬೋಧನ :

ಶಬ್ದಾಂತ್ಯ ಸ್ವರದೀರ್ಘವೊಂದೇ ಸಂಬೋಧನ ಪ್ರತ್ಯಯ.

ಉದಾಹರಣೆಗೆ,

ರಾಮ್ಯಾ, ಭೀಮ್ಯಾ, ಮಾಲ್ಲ್ಯಾ, ಕಲ್ಲ್ಯಾ, ಕಸ್ತೂರೀ, ಶಾಂತೀ, ರಮಣಾ

೩.೪. ಲಿಂಗ, ವಚನ, ವಿಭಕ್ತಿಗಳನ್ನು ಒಂದೆಡೆ ಸ್ಪಷ್ಟಪಡಿಸುವ ರೂಪಾವಳಿಯನ್ನು ಕೆಳಗೆ ಕೊಡಲಾಗಿದೆ :

	ಏಕವಚನ	ಬಹುವಚನ
ಪ್ರ.	ಹುಡುಗ್	ಹುಡುಗೂ, ಹುಡುಗೂರ್
ದ್ವಿ.	ಹುಡಗನ್	ಹುಡುಗೂರ್ನ್
ತೃ.	ಹುಡಗನ್ ಕೈಲೆ	ಹುಡುಗೂರ್ ಕೈಲೆ
ಚ.	ಹುಡಗ್ಗಿ	ಹುಡುಗೂರ್‍ಗಿ
ಪ.	ಹುಡಗನ್ ಕಡಿಂದ	ಹುಡುಗರ್ ಕಡಿಂದ
ಷ.	ಹುಡಗನ್	ಹುಡುಗೂರ್
ಸ.	ಹುಡಗ್‌ನಾಗ್	ಹುಡುಗೂರಾಗ್
ಸಂ.	ಹುಡಗಾ	ಹುಡುಗೂರ್‍ಯಾ
ಪ್ರ.	ಗಿಡಾ	ಗಿಡಗೋಳ್
ದ್ವಿ.	ಗಿಡಾ	ಗಿಡಗೋಳ್ನ್
ತೃ.	ಗಿಡದ್ಲೆ	ಗಿಡಗೋಳ್ಳೆ
ಚ.	ಗಿಡಕ್ಕ	ಗಿಡಗೋಳ್ಗಿ
ಪ.	ಗಿಡದಿಂದ	ಗಿಡಗೋಳಿಂದ
ಷ.	ಗಿಡಾ	ಗಿಡಗೋಳ್
ಸ.	ಗಿಡ್‌ದಾಗ್	ಗಿಡಗೋಳಾಗ್

೪ **ಸರ್ವನಾಮಗಳು :**

ಸರ್ವನಾಮಗಳಲ್ಲಿ ವಿಶೇಷವೆಂದರೆ, ಆ ರೂಪಗಳಿಗೆ ಕ್ ಹತ್ತುವುದು.

1 ಪುರುಷವಾಚಕ :

	ಏಕವಚನ	ಬಹುವಚನ
ಉತ್ತಮ ಪು.	ನಾ	ನಾಂವ್
ಮಧ್ಯಮ ಪು.	ನೀ	ನೀಂವ್
ಪ್ರಥಮ ಪು.	ಆಂವ್ – ಕಾಂವ್ ಆಕಿ – ಕಾಕಿ	ಆವ್ರ – ಕಾವ್ರ
	ಆದ್ – ಕಾದ್	ಆವ್ – ಕಾವ್
	ಇಂವ್ – ಕಿಂವ್ ಇಕಿ – ಕಿಕಿ	ಇವ್ರ್ – ಕಿವ್ರ್
	ಇದ್–ಕಿದ್	ಇವ್–ಕಿವ್

2 ಸ್ಥಳವಾಚಕ :

ಆಲ್ಲಿ – ಕಾಲ್ಲಿ, ಇಲ್ಲಿ - ಕಿಲ್ಲಿ, ಆಕಾಡಿ – ಕಾಕಾಡಿ, ಇಕಾಡಿ – ಕಿಕಾಡಿ, ಆಚಿಕಡೆ – ಇಚಿಕಡೆ.

3 ಪ್ರಮಾಣವಾಚಕ :

ಅಸ್ಟ್ – ಕಸ್ಟ್, ತಟ್ – ಕೆಟ್, ತಟೆ – ಕೆಟೆ, ತಟು – ಕೆಟು, ಅಟ್ಟ – ಕಟ್ಟ, ಇಸ್ಟ್ – ಕಿಸ್ಟ್, ಈಟ್ – ಕೀಟ್, ಈಟೆ – ಕೀಟೆ, ಈಟು – ಕೀಟು, ಇಟ್ಟ – ಕಿಟ್ಟ.

4 ಪ್ರಶ್ನಾರ್ಥಕ :

ಪ್ರಶ್ನಾರ್ಥಕಗಳಿಗೆ ಕ್ ಹತ್ತುವುದಿಲ್ಲ.

ಯೆಲ್ಲಿ, ಯೆಸ್ಟ್–ಯೆಟ್ಟ್, ಯೇನ್, ಯಾಂವ್, ಯಾಕ್, ಯಾವಕ್ಕಿ, ಯಾರ್, ಯಾವದ್, ಹ್ಯಾಂಗ್, ಯಾಕಾಡಿ, ಯಾತ್ಲಾಗ್.

5 ರೀತಿವಾಚಕ :

ಹಾಂಗ್ – ಕಾಂಗ್ – ಖಾಂಗ್ (ಉ), ಕಾಂಗೆ – ಖಾಂಗೆ (ಉ.)
ಹಿಂಗ್ – ಕಿಂಗ್ – ಖಿಂಗ್ (ಉ), ಕಿಂಗೆ – ಖಿಂಗೆ (ಉ.)

೫ ಬಂಧುವಾಚಕ :

ಆಪ್ಪ್, ತಾಂದಿ, ಅವ್ವ್, ಆಯಿ, ಮುತ್ತ್ಯಾ (ಅಜ್ಜ), ಕಾಕಾ (ಚಿಕ್ಕಪ್ಪ), ಚಿಗವ್ವ್, ಅತ್ತಿ, ಮಾಂವ್, ಅಣ್ಣ್, ಅಕ್ಕ್, ತಾಮ್ಮ್, ತಂಗಿ, ನಾದ್ನಿ, ಮೈದನ್–ಮೈದ್, ಭಾವ್, ಸಡ್ಡಕ್, ಹೇಣತಿ (ಹೆಂಡತಿ), ಗಾಂಡ್, ಅಳ್ಯಾ, ಸೊಸಿ, ವೈನಿ–ಅತ್ತಿಗಿ.

ಈ ರೂಪಗಳ ಸಂಬೋಧನೆಯಲ್ಲಿಯೂ ವೈಶಿಷ್ಟ್ಯವಿದೆ. ಸಂಬೋಧನೆಯಲ್ಲಿ ರೂಪಗಳು ಬದಲಾಗುತ್ತವೆ.

ಉದಾಹರಣೆಗೆ,

ಯಾಪ್ಪ್, ಯಾಪಾ (ಅಪ್ಪ), ಯೆವ್ವ್, ಯವಾ, ಯವ್ವಾ, (ಅವ್ವ), ಯಾಣ್ಣ್, ಯಾಣಾ, ಆಣ್ಣಾ, ಯಾಕ್ಕ್, ಯಾಕ್ಕಾ, ಅಕ್ಕಾ, ತಾಮ್ಮ್, ತಾಮ್ಮಾ, ತಾಮ್ಮಾಶ್, ತಾಮಾ, ತಾಮಾಣಿ, ತಾಮ್ಮಾಣಿ.

ಬೇ ಹಚ್ಚುವ ಪ್ರಕ್ರಿಯೆ ಉತ್ತರಭಾಗದಲ್ಲಿ ಕಂಡುಬರುತ್ತದೆ.

ಯೆವ್ವಾ ಬೇ, ಯಾಕ್ಕಾ ಬೇ, ತಂಗೀ ಬೇ.

೬ **ಸಂಖ್ಯಾವಾಚಕ :**

ಸಂಖ್ಯಾವಾಚಕಗಳಲ್ಲಿ ಮರಾಠಿ ಪ್ರಭಾವ ಹೆಚ್ಚು.

ದಾ (ಹತ್ತು), ಬಾರಾ (ಹನ್ನೆರಡು), ಪಂಚವೀಸ (ಇಪ್ಪತ್ತೈದು), ಪನ್ನಾಸ್ (ಐವತ್ತು), ಶಂಭೋರ (ನೂರು).

ಸವ್ವಾ (೪/೫), ದೀಡ (೧೧/೨), ಪೋನೆ (೩/೪), ಅಡೀಚ್ (೨೧/೨).

೭ **ಅವಯುವವಾಚಕ :**

ಕಯ್, ಕಾಲ್, ಮೂಗ್, ಬಾಯಿ, ಹಲ್, ಹಣಿ, ತೆಲಿ, ಮುಕಾ–ಮಕಾ, ಮಾರಿ–ಮೋತಿ–ಮಸಡಿ, ನಾಡಾ–ಟೊಂಕ್–ಸಾಂಟ್, ಪಿಂಡ್ರಿ, ತಾಡಿ, ಯೆದಿ, ಡುಬ್ಬ್, ಬೆನ್ನ್, ಕಿಂವಿ, ಕುತಿಗಿ–ಗೋನ್, ಬಟ್ಟ್–ಬಳ್ಳ್, ನೆತ್ತಿ, ಹಾಟ್ಟಿ, ಮಾಲೀ, ಮೇಂದೂ (ಮೆದುಳು), ಕುಂಡಿ, ಕಾಪಾಳ್–ಗಾಲ್ಲ್, ಗಾದ್ದ್, ವಾಸಡಿ, ಕಿಪ್ಪಡಿ (ಕಿಪ್ಪೊಟ್ಟೆ).

೮ **ಕ್ರಿಯಾರೂಪಗಳು :**

೮.೧ ವರ್ತಮಾನಕಾಲ :

–ತ್ ವರ್ತಮಾನಕಾಲದ ಪ್ರತ್ಯಯ. ಆದರೆ ಕ್ರಿಯಾರೂಪಗಳೆಲ್ಲ –ಇ ಅಥವಾ –ಅಕಾರಾಂತವಾಗಿಯೋ ಇಲ್ಲವೆ ವ್ಯಂಜನಾಂತವಾಗಿಯೋ ಕೊನೆಗೊಳ್ಳುತ್ತವೆ. ಇಂಥ ರೂಪಗಳಲ್ಲಿ ಸಮರೂಪಧಾರಣೆಯೂ ಸಾಕಷ್ಟು ಕಂಡುಬರುತ್ತದೆ.

	ಏಕವಚನ	ಬಹುವಚನ
ಉತ್ತಮ ಪು.	ಹೋಗ್‌ತೀನಿ	ಹೋಗ್‌ತೀವಿ
	ಹೋಗ್‌ತೆನ	ಹೋಗ್‌ತ್ಯೊ
	ಹೊಕ್ಕನ್	ಹೊಕ್ಕ್ಯೊ

ಮಧ್ಯಮ ಪು.	ಹೋಗ್ತಿ	ಹೋಗ್ತೀರಿ
	ಹೊಕ್ಕಿ	ಹೊಕ್ಕೀರಿ
ಪ್ರಥಮ ಪು.	ಹೋಗ್ತಾನ್ ಹೊಕ್ಕಾನ್	ಹೋಗ್ತಾರ್
	ಹೋಗ್ತಾಳ್ ಹೊಕ್ಕಾಳ್	ಹೊಕ್ಕಾರ್
	ಹೋಗ್ತೆತಿ	ಹೋಗ್ತಾವ್
	ಹೋಗ್ತೈತಿ ಹೊಕ್ಕತಿ	ಹೊಕ್ಕಾವ್

ಇರ್ ಧಾತುವಿಗೆ ಸ್ಪಷ್ಟವಾಗಿ ಎರಡು ರೂಪಗಳು. ಅಲ್ಲದೆ ಉತ್ತರಭಾಗದಲ್ಲಿ ಇನ್ನೊಂದು ರೂಪ.

	ಏಕವಚನ	ಬಹುವಚನ
ಉತ್ತಮ ಪು.	ಇರ್ತನ್	ಇರ್ತ್ಯೊ
	ಅದೆನ್	ಅದ್ಯೊ
	ಹೀನಿ (ಉ)	ಹೀವಿ (ಉ)
ಮಧ್ಯಮ ಪು.	ಇರ್ತಿ	ಇರ್ತೀರಿ
	ಅದಿ	ಅದೀರಿ
	ಹೀ (ಉ)	ಹೀವಿ (ಉ)
ಪ್ರಥಮ ಪು.	ಇರ್ತಾನ್ ಅದಾನ್ ಹಾನ್ (ಉ) ಇರ್ತಾಳ್ ಅದಾಳ್ ಹಾಳ್ (ಉ)	ಇರ್ತಾರ್ ಅದಾರ್ ಹಾರ್ (ಉ)
	ಇರ್ತೆತಿ	ಇರ್ತಾವ್
	ತೆತಿ	ಅದಾವ್

೮.೨ ಭೂತಕಾಲ :

ಭೂತಕಾಲದ ಪ್ರತ್ಯಯ –ತ್, –ದ್, –ಇದ್ ಈ ಮೂರೂ ಪ್ರತ್ಯಯಗಳು ವಿಶಿಷ್ಟ ಪರಿಸರದಲ್ಲಿ ಬರುತ್ತವೆ.

ಪ್ರಥಮಾಕ್ಷರ ಸ್ವರ ಹ್ರಸ್ವವಾಗಿದ್ದು, –ಇಕಾರಾಂತ ಧಾತುಗಳಲ್ಲಿ –ದ್ ಬರುತ್ತದೆ.

ಉದಾಹರಣೆಗೆ,

ಪಡಿ – ಪಡ್ದ	ಉಣ್ – ಉಣ್ಣ
ಬರಿ – ಬರ್ದ್ನಿ	ಬಾ – ಬಾನ್ನಿ
ನಡಿ – ನಡದ್ಲ	ಮಲಗು – ಮಾಲಕೊನ್ನಿ
ತಿನ್ – ತಿನ್ನಿ	ನಿಲ್ – ನಿತ್ನಿ

ಅದೇರೀತಿ, ವ್ಯಂಜನಾಂತ (–ಡ್ ಬಿಟ್ಟು) ಧಾತುಗಳಲ್ಲಿಯೂ –ದ್ ಬರುತ್ತದೆ.

ಕೊಲ್ – ಕೊಂದ್
ಬಾ (ಬರ್–) –ಬಾಂದ್
ತಾ (ತರ್–) –ತಾಂದಿ

ಪ್ರಥಮಾಕ್ಷರ ಸ್ವರ ದೀರ್ಘವಾಗಿದ್ದರೆ –ಇದ್ ಬರುತ್ತದೆ.

ನೋಡ್ – ನೋಡಿದ್
ಮಾಡ್ – ಮಾಡಿದ್
ಕೂಡ್ – ಕೂಡ್ದಿ
ಹಾಡ್ – ಹಾಡಿದ್ಲ

ಪ್ರಥಮಾಕ್ಷರ ಸ್ವರ ದೀರ್ಘವಾಗಿದ್ದು, –ಡ್ ಕಾರಾಂತವಾಗಿದ್ದರೆ ಅಲ್ಲಿ –ತ್ ಬರುತ್ತದೆ. ಮುಂದೆ ಇದು ಸಮರೂಪಧಾರಣೆ ಹೊಂದಿದ ರೂಪವೇ ಬಳಕೆಯಲ್ಲಿ ಕಂಡುಬರುತ್ತದೆ.

ಸುಡ್–ತ್ – ಸುಟ್ಟ
ಕೊಡ್–ತ್–ಅಳ್ – ಕೊಟ್ಳ
ಬಿಡ್–ತ–ನಿ – ಬಿಟ್ನಿ

ಜೋಲ್, ಸಾಯುಗಳಲ್ಲಿಯೂ –ತ್

ಜೋತನು, ಸತ್ತನು

೮.೩ ಭವಿಷತ್ಕಾಲ :

ಕನ್ನಡಕ್ಕೆ ಸಾಮಾನ್ಯವಾಗಿರುವಂತೆ ಇಲ್ಲಿಯೂ ಭವಿಷತ್ಕಾಲವಿಲ್ಲ. ವರ್ತಮಾನ ಕಾಲದ ರೂಪಗಳಿಗೆ ಒಂದೆ ಭವಿಷತ್ತಿನ ಅರ್ಥದ ಶಬ್ದಗಳ ಮೂಲಕ ಭವಿಷತ್ಕಾಲ ಸೂಚನೆಯಾಗುತ್ತದೆ.

ಉದಾಹರಣೆಗೆ,

ನಾಳಿ ಬರ್‍ತಾನ್
ಹತ್ತ್ ವರಸದ ಮ್ಯಾಲ್ ಕೊಡ್ತಾನ್
ಮುಂದಿನ್ ವರಸ ಪಾಸ್ ಆಕ್ಕಾನ್

೮.೪ ವಿಧ್ಯರ್ಥ :

ಹೋಗೂಣು (ದ)
ಹೋಗಾಮು (ಉ)
ಮಾಡೂಣು (ದ)
ಮಾಡಾಮು (ಉ)

೮.೫ ನಿಷೇಧ :

–(ಇ)ಲ್ಲ್ ನಿಷೇಧಸೂಚಿ.

ಉದಾಹರಣೆಗೆ,

ಹೋಗೂದುಲ್ಲ್
ಬರೂದುಲ್ಲ್
ಮಾಡೂದುಲ್ಲ್
ಹೋಗಿಲ್ಲ್
ಬಂದಿಲ್ಲ್
ಮಾಡಿಲ್ಲ್

೮.೬ ಸಂಶಯ :

ಮಾಡ್‌ಬೌದ್, ಮಾಡ್ಯಾನ್, ನೋಡೂಣು.

ಮೇಲೆ ವಿವರಿಸಿದ ರಚನಾತ್ಮಕ ವೈಶಿಷ್ಟ್ಯಗಳಲ್ಲದೆ, ಅದು ಬಳಸುವ ವಿಶಿಷ್ಟ ಶಬ್ದಗಳಿಂದಲೂ ವಿಜಾಪುರ ಕನ್ನಡ ಇತರ ಕನ್ನಡಗಳಿಗಿಂತ ಭಿನ್ನವಾಗಿದೆ. ಇಲ್ಲಿಯೂ ಉತ್ತರ–ದಕ್ಷಿಣ ಭೇದ ಗಮನಾರ್ಹವಾಗಿದೆ. ಇಂಥ ವಿಶಿಷ್ಟ ಪ್ರಯೋಗಗಳ ಯಾದಿಯನ್ನು ಮುಂದೆ ಕೊಡಲಾಗಿದೆ.

ದಕ್ಷಿಣ	ಉತ್ತರ
ಹುಡಗ್	ಪಾರ್
ಹುಡಿಗಿ	ಪೋರಿ
ಒದಕಿ } ಒದೆ	—
ಲತ್ತಿ } ಒದೆ	ಲತ್ತಿ = ಏಟು

ದಕ್ಷಿಣ		ಉತ್ತರ
ಮಸಾರ		ಮಸಾರ
ಮನಗಂಡ	= ಬಹಳ	ಮನಗಂಡ
ಬಾಳೂಕೊಂಡ್	= ಬಹಳ	—
ಕಂಡಾಪಟಿ	= ಬಹಳ	—
ಮಸ್ತ್	= ಬಹಳ	ಮಸ್ತ್
ಭಾರಿ		ಭಾರಿ
ಚಂಚಿ = ಎಲೆ-ಅಡಿಕೆಯ ಚೀಲ		ಚೆಂಚಿ
ಅಗದಿ = ಅತಿ		ಅಗದಿ
—		ಖಂಬೀರ್ = ಆಢ್ಯ
ಕಪೆ	= ಸಲ	ಕೆಪ್ಪಿ
ಸಾರೆ	= ಸಲ	ಸಾರಿ
ಸರ್ತೆ	= ಸಲ	—
ಸರ್ಪೆ		—
ಗಾಂಗ್ಡಿ = ಕಂಬಳಿ		ಗಾಂಗಡಿ
ಕಾಮ್ಮಗ್ = ಕಮ್ಮನೆ		ಖಾಮ್ಮಗ್
ಗಾಣದ್ ಯಾಣ್ಣೆ		ಗಾಣದ್ಯಾಣ್ಣೆ
—		ಒಳ್ಳ್ಯಾಣ್ಣೆ
—		ಉಂಬುಯಾಣ್ಣೆ
—		ಉಣಾಯಾಣ್ಣೆ
—		ಸೆಂವ್ಯಾಣ್ಣೆ
—		ಕುಸಿಬಿಯಾಣ್ಣೆ
ಮದಡ್	= ಮೂರ್ಖ	ಮದಡ್
ಯಾಬಡ್	= ಮೂರ್ಖ	ಯಾಬಡ್
ಎಪೇಸಿ	= ಮೂರ್ಖ	—
ಮಬ್ಬ್	= ಮೂರ್ಖ	ಮಬ್ಬ್
ಎಪ್ರೇಸಿ	= ಮೂರ್ಖ	—
ಯಾಬ್ಬಂಕ್	= ಮೂರ್ಖ	ಎಪರೇಸಿ
ತ್ಯಾಬ್ಬ್	= ಮೂರ್ಖ	ತ್ಯಾಬ್ಬಾಂವ
ಟ್ಯಾಬ್ಬ್	= ಮೂರ್ಖ	—
ಪ್ಯಾಂಗಿ	= ಮೂರ್ಖ	ಪ್ಯಾಂಗಿ
ಪ್ಯಾಲಿ	= ಮೂರ್ಖ	ಪ್ಯಾಲಿ
ಸಾಡೇಸಾತ್ = ಕೆಟ್ಟ ಅದೃಷ್ಟ		ಸಾಡೇಸಾತ್

ದಕ್ಷಿಣ	ಉತ್ತರ
ತೀನ್‌ತೇರ್‌ ನೌಅಟ್ರಾ = ಹಾಳು	ತೀನ್‌ತೇರಾ ನೌಅಟ್ರಾ
ಅಠ್ರಾವೀಸ್ = ಅದ್ದೂರಿ	ಅಠ್ರಾವೀಸ್
ಛತ್ತೀಸ್ = ದೊಡ್ಡ ಮನುಷ್ಯ	—
ತಿರ್‌ಸಟ್ಟಿ = Whimsical	ತಿರ್‌ಸಟ್ಟಿ
ಅಡ್‌ಸಟ್ಟಿ = ಅಂದಾಜು	—
ಬಂದೂಬಸ್ತ = ಭದ್ರ	ಬಂದೋಬಸ್ತ್
ಯಾಟ್ಟಿ = ✓himsical	ಯಾಟ್ಟಿ
ಲಗೂ ಲಗೇಚ್ — } = ಬೇಗ	— ಜಲ್ದ
ದೌಡ್	ದೌಡ್
ಚುನಮರಿ ಅಕ್ಕ್ಯಾಳ್ } = ಮಂಡಕ್ಕಿ	ಚುನಮರಿ
ಬಿಕನಾಸಿ ಕೊರಬದ್ಗ್ಯಾಳಿ } = ದರಿದ್ರ	ಬಿಕನಾಸಿ ಕೊರಬದ್ರಗೇಡಿ
ಕಸಕ್ ಕಗ್ಗ್ } = ಮಾಗದ	ಕಸಕ್ ಖಗ್ಗ್
ಬಾಕ್ಳ = ಬಹಳ	—
ಕಿರ್ಗ್ಯೆಂ = ಸ್ವಲ್ಪಕಹಿ	ಖಿರ್ಗ್ಯೆಂ = ಜಿಪುಣ
ಪತ್ರಾಸ್	ಫತ್ರೇಸ್
—	ಅಸರಂತ ಯಾವಾಗಲೂ
—	ಭೆಂಗಡಿಗಿ = ಗದ್ದಲ
ಅಂಗಾರ = ಹಾಗಾದರೆ	ಅಂಗಾರ
ಪುಗಸೆಟ್ಟಿ ಪುಕಟ ಪಳ್ಳ್ } = Free	ಪುಗಸಟ್ಟಿ —
ಬೇಸಿ ಚಲೂ — ಲಕ್ ಗಾಂವ್ } = ಒಳ್ಳೆಯ	ಬೇಸಿ ಚಲೋ ವೈನ್ ಲಕ್ ಗಾಂವ್
—	ಕುಡಾಳಿ = ಪಕ್ಕೆಲುಬು

ದಕ್ಷಿಣ	ಉತ್ತರ
ಸೇಪ್ } = ಸಂಬಂಧ	ಸೇಪ್
—	ಸೇಪಾವಳಿ
ಆಂಬ್ರ್ = ಸಾರು	ಆಂಬ್ರ್
ಕೂನ್ = ಗುರುತು	ಖೂನ್
ಖೂನಿ = ಕೊಲೆ	ಖೂನಿ
ಸ್ವಾಟಿ } = ತುಟಿ	ಸ್ವಾಟಿ
ಸಾಂಡಿ	ಸಾಂಡಿ
ಅಪಟ } = ಪೂರ್ಣ	ಅಪೂಟ
ಪೂರ	ಪೂರಾ
ಸಬಳ್ = ನುಣುಪು	ಸಬೂಳ್
ಸಾಪ್ = ,,	ಸಾಪ್
ಸರತ್ = ನೇರ	—
ಕಾಳಿ = ಲಕ್ಷಣ	ಖಳಾ
ಪರಕ್ ಬದಲು	ಫರ್ಕ್
ಗುವ್ರ್ = ಆಳ	ಗುವ್ರ್
ಶ್ಯಾಣಾ = ಜಾಣ	ಶ್ಯಾಣೆ
ಕಪಾರತ್ = ಕ್ಷುಲ್ಲಕ	ಕಪಾರತ್
ಯಾಂಸಿ } = ವಕ್ರ	ಯಾಂಸಿ
ಡೊಂಕ್	ಡೊಂಕ್
ಉಸಾಬರಿ	ಉಸಾಬರಿ
ಬೂಸಳ್ = ಬೂಳಸ್	ಬುರಸ್
ಜರಾ = ಸ್ವಲ್ಪ	ಜರಾ
—	ಇರಾದಿ = ವೈರ
ಪಾರೀಕತಿಬಿ = ಪಾಲು	—
ಹೆಣೂಲ್ } = ಹೆಳಲು	ಹೆಣಲ್
ಹೆಣೋಲ್	—
ಇದರ್ = ಎದುರು	ಇದರ್
ಜುರ್ಕಿ }	ಜುರ್ಕಿ
ದಂ	—
ಕಿಂಡಿ } = ಕಿಟಿಕಿ	ಕಿಂಡಿ
ಕಿಡಿಕಿ	ಕಿಡಿಕಿ

ದಕ್ಷಿಣ	ಉತ್ತರ
ಆನೂಲಿ = ತೊಂದರೆ	ಅನೂಲಿ
—	ಚುಕ್ಯೋಳ್ – ಸಣ್ಣವರು
ಸ್ವಾರಿ ಗಟಾ } = ವ್ಯಕ್ತಿ	ಸವಾರಿ —
ಕರಗಾಲ್ = ದರಿದ್ರ	ಕರ್‌ಗಾಲಿ
ಥಾಡಿ	ಥಾಡಿ
ಗಾಲ್‌ಮೇಲ್ = ಅನಾಹುತ	ಗಾಲ್‌ಮೇಲ್
ಹಯ್‌ಗಯ್ ಅನ್‌ಮನ್ } = ಚಿಂತೆ	ಹಯ್‌ಗಯ್ ಅನ್‌ಮನ್
ವಾಜ್ಮಿ ಪೋಲ್ಮಿ } = ಒಳಿತು —	ವಾಜಮಿ — ವೈನ್
ಮಿಜಿಮಿಜಿ	ಮಿಜಿಮಿಜಿ
ರಿಪಿ	ರಿಪಿ
ಸಬೂಬ್ = ನೆವ	ಸಬಾಬ್
ನಶೀಬ್ = ಅದೃಷ್ಟ	ನಶೀಬ್
—	ಮುರ್‌ಮನ್=ಗಟ್ಟಿಮುಟ್ಟ
ಡಾಂವ್ ಪೇಚ್ }	ಡಾಂವ್ —
ನಾಕಲಿ = ಹಾಸ್ಯ	ನಕಲಿ
ಅಪ್‌ಸತ್ = ಒಪ್ಪಂದ	{ ಅಪ್‌ಸಾತ್ ಅಬ್‌ಸಾತ್
ಪಾಟಾಗಟಿ = ವಾದ	ಪಾಟಾಗಟೆ
ಕಾಯಸ್ ಕಳಾಸ್ } = ಅಂದಾಜು	ಖಾಯಸ್ —
—	ಮುಕಾಬಿಲಿ=ಇದಿರುಬದಿರು
ಚುಂಗ್ ಚುಂಗಡಿ ಚಿಂದಿ } = ಅರಿವೆಯ ತುಣುಕು ಕಾಸಿ —	{ ಚುಂಗ್ ಚುಂಗಡಿ ಚಿಂದಿ ಕಾಸಿ ಚುದುರ್ = ಚೂರ್
ಕಾಟಿಪಿಟಿ = ಪ್ರಯತ್ನ	ಖಟಿಪಿಟಿ

ದಕ್ಷಿಣ	ಉತ್ತರ
ಬ್ಯಾರಿಕಿ = ಕುಶಲ	ಬೆರಿಕಿ
ಜಾಬ್ದಾದ್ = ಸಮರ್ಥ	ಜಾಬಾದ್
—	ದಿಡಗ್ = ಬೇಗನೆ
ಸೊಯ್ = ಸೋವಿ	ಸೋಯಿ
ಬಿರಿ = ಕಠಿಣ	ಬಿರಿ
ಸಸಾರ್ = ಸುಲಭ	ಸಸಾರ್
ಪಾಡ್ = ಒಳ್ಳೆಯ	ಫಾಡ್
ದಿಂಡರಿಕಿ = ಪೂರ್ಣಮೈಯ್ಯ	ದಿಂಡರಕಿ
ಮೂರಾಬಟ್ಟಿ = ಹಾಳು	ಮುರಾಬಟಿ
ಮಸಲತ್ = ಯೋಜನೆ	ಮಸಲಾತಿ
ಫಜೀತಿ = ತೊಂದರೆ	ಫಜೀತಿ
ಪಳ್ಳ್ = ಪೊಳ್ಳು	ಫಳ್ಳ್
—	ಸಿಂತರಸಿ = ಜಿಪುಣತನ
ಜಕ್ಕಸ್ತ್ = ತಪ್ಪದೇ	ಜಕ್ಕಸ್ತ್
ಅಮೂಕ್ = ಸುಮಾರು	ಅಮೂಕ್
ಗುದಮುರಿಗಿ = ಗಂಟುಗಂಟು	ಗುದ್ಮುರಿಗಿ
ಮಾಲಕ್ = ಗಂಟು	ಮಾಲಕ್
ಮೋಗ್ರಂ = ತೋಂಡೀ	ಮೋಗಾಂ
ಫಾಸಿಗಿ = ಮೋಸ	ಫಸಗಿ
ಪಂಚೀತಿ = ತೊಂದರೆ	ಪಂಚೇತಿ
ಕಂತ್ರಾಟ್ = ಅನೇಕಮುಖ ಕೆಲಸ	ಕಂತ್ರಾಟ್
ಕಾಳ್ಳ್ } = ಕುತ್ತಿಗೆ	ಕಾಳ್ಳ್
ಗೋಣ್ } = ಕುತ್ತಿಗೆ	ಗೋಣ್
ಹೆಡಕ್ } = ಕುತ್ತಿಗೆ	ಹೆಡಕ್
ಕುತ್ತಿಗಿ } = ಕುತ್ತಿಗೆ	ಕುತ್ತಿಗಿ
ಈಡ್ = ಬಹಳ	ಈಡ್
ಖಲಾಸ್ = ಮುಕ್ತಾಯ	ಖಲಾಸ್
ಹಸರ್ಕ = ಸಾವಕಾಶ	ಹವರಾಳಗ
ಅಡ್ತಾರ್ = ತೊಂದರೆದಾಯಕ	ಅಡತಾರ
ಚೊಂಚ್ = ಎಡಗೈಯ್ಯವ	ಚೊಂಚ್

ದಕ್ಷಿಣ	ಉತ್ತರ
ಥಂಗ್	ಥಂಗ್
ಥೋಂಗ್ } = ಸುಳ್ಳು ನೆವ	ಥೋಂಗ್
ಡೋಕಾರ್	ಥೋಕಾರ್
ಕೌಂಸಲ್ = ಕೌಶಲ್ಯ	—
ಕಿತಿಬಿ = ಅಧಿಕಪ್ರಸಂಗತನ	ಕಿತಬಿ
ಕಣಿ	—
ದಿವಾಕ್ }	ದಿವಾಕ್
ಡೌಲ್	—
ಕಿಸೆ = ಜೇಬು	—
ಪುಡಿಕಿ = ಪುಡಿಕೆ	—
ಚೋಣ್ಣ = ಚೊಣ್ಣ	—
ಪಾಟ್ಲೋನ್	ಪಾಟ್ಲೋನ್
ಟೊಪ್ಪಿಗಿ } = ಟೊಪ್ಪಿಗೆ	ಟೊಪಿಗಿ
ಟೆಪ್ಪಿಗಿ	ಟೆಪ್ಪಿಗಿ
ಕಾಳಪಾಟ್	—
ಗುಂಡೇ = ಗುಂಡಿ	ಗುಂಡಿ
ಹುಜರ್ = ಸಮಕ್ಷಮ	ಹುಜರಾ
—	ಅಳಸ್ = ಸಡಿಲು
—	ಅಡೂಡಿ = ಗಡಿಬಿಡಿ
—	ಮುಜರಾ = ಖಾತ್ರಿ
—	ಅಟಾಟಿ = ಕಷ್ಟ
—	ಇಟ್ವರಿ = ಇಕ್ಕಟ್ಟು
—	ಅದಾವ್ತಿ = ವಿರುದ್ಧ
—	ಎಗಟಿ = ಒಂದೇ
—	ಡಾಂವ್ = ಕಣ್ಣೆ
ಅಟಕ್ = ಇಕ್ಕಟ್ಟು	ಅಟಕ್
—	ಅಂಚೂಟಿ = ತುಂಡು
—	ನಿಗಾನಿಸ್ತ = ಕಾಳಜಿ
ಹವಾಲ್ತಿ	ಹವಾಲ್ = ಮಧ್ಯಸ್ಥಿಕೆ
ಜಡಾ = ತೊಂದರೆ	ಜಡ
—	ಖದ್ದಿ = ಏರಾಟ
—	ಅಲಬತ್ = ಮುದ್ದಾಂ

ದಕ್ಷಿಣ	ಉತ್ತರ
—	ಹ್ಯಾಗಿ = ಅಯೋಗ್ಯ
ದುರಸ್ತ್ = ರಿಪೇರಿ	ದುರಸ್ತ್
ಆಕಲ್ = ಬುದ್ಧಿ	ಆಕಲ್
ಕಾಲಿ = ರಿಕ್ತ	ಖಾಲೆ
ಅಪದ್ಧ್ = ಅಯೋಗ್ಯ	ಅಪದ್ಧ್
ಸಮಜೂತಿ = ತಿಳಿವಳಿಕೆ	ಸಮಜೂತ್
—	ಗಪೂತ್‌ಲೆ=ಗುಪ್ತವಾಗಿ
—	ಸದಗ್ = ತಡಮಾಡು
ಐನ್	ಐನ್ = ಆಯುತ
ಮಜಕೂರ್ = ಸುದ್ದಿ	ಮಜಕೂರ್
ಪೈಟ್ = ಪದ್ಧತಿ	—
ಗರಮ್ = ಗುದ್ದು	—
ಅಬ್‌ರೂ = ಮರ್ಯಾದೆ	ಅಬರೂ
ಟಿಮಿಟಿಮಿ } = ಸೊಕ್ಕು	—
ಯೆಡ್ಡ್ } = ಸೊಕ್ಕು	ಯೆಡ್ಡ್
—	ಅಕರೆ
ಭರ್‌ಚಕ್ = ಜೋರು	ಭರ್‌ಚಕ್ = ಜೋರು
—	ಆಕೇಪಿ = ಆಕ್ಷೇಪ
ಬಾಂಕಿ = ಬಯಕೆ	ಬಂಕಿ
ಉಪ್ಪದರ್ ತೊಂದರೆ	{ ಉಪ್ಪದರ್
—	{ ಉಪದ್ರ
—	ಈಲ = ಮರ್ಮ
—	ಖಿಳ
ಚಾಳಿ = ಚಟ	ಚಾಳಿ
ಎಬ್ = ಕೀಳು (ಕ್ರಿ.)	—
ಚಡ್ತ್ = ಉತ್ತಮ	ಚಡತ
—	ಒಳಬಟ್ಟ್
ಪಾಕ್ಕಾ = ಖಚಿತ	ಪಾಕ್ಕಾ
ಭಯಂಕರ = ಅತಿ	ಭಯಂಕರ
ಪಸಂದ್ = ಮನಸ್ಸಿಗೆ ಬರು, ಒಳ್ಳೇ	ಪಸಂದ್

ದಕ್ಷಿಣ	ಉತ್ತರ
ದಗದ್ = ಕೆಲಸ	ದಗದ್
ಪುರಸೋತ್ = ಅವಕಾಶ	ಪುರಸತ
ದಾಂವತಿ = ತೊಂದರೆ	ಧಾಂವತಿ

ನಿತ್ಯಬಳಕೆಯು ಪಾತ್ರೆ ಪಗಡಿಗಳ ಹೆಸರುಗಳು :

ದಕ್ಷಿಣ	ಉತ್ತರ
ಸಾರಿ	ಹಾಲಸ್ವಾರಿ
ಗಡಿಗಿ	—
ಮಸರ್ ಗಡಿಗಿ	ನುಚ್ಚಿನ್ ಗಡಿಗಿ ಮಸರ್ ಚಟಿಗಿ
ತುಪ್ಪದ್ ಮಿಳ್ಳಿ	ತುಪ್ಪದ್ ಮಿಳ್ಳಿ
ಎಣ್ಣೀ ಕುಳ್ಳಿ	ಎಣ್ಣೀ ಗುಳ್ಳಿ
—	ಮಜ್ಜಿಗಿ ಗುಂಡಗಿ
ತಾಲಿ	ಆಂಬ್ರ ತಾಲಿ
ತಟ್ಟಿ	ರೊಟ್ಟೀ ತಟ್ಟಿ
ರೊಟ್ಟೀ ಬುಟ್ಟಿ	ರೊಟ್ಟೀ ಬುಟ್ಟಿ
ಊಟದ್ ಗಾಂಗಾಳ್	ಊಟದ ಗಂಗಾಳ
ಊಟಕ್ಕ ತಾಬಂಡಿ	—
ಚೆರಿಗಿ	ಚೆರಿಗಿ
ತೆಂಬಗಿ	ತೆಂಬಗಿ
ಕೇರೂ ಮಾರಾ	ಮಾರಾ
ಸುಪ್ಪಲಿ = ಸಣ್ಣ ಮೊರ	ಸುಪ್ಪಲಿ
ಕಾಸ್‌ಬಾರಿಗಿ = ಪೊರಕೆ	ಕಸ್‌ಬಾರಿಗಿ
ಹಿಡಿ = ಸಣ್ಣ ಪೊರಕೆ	—
ತಾಂಬ್ರೇಲ್ = Tambrel	ತಾಂಬ್ರೇಲ್
ಬಾರಡಿ = Bucket	ಬಾದಲಿ
ಬೊಗಾಣಿ	ಬೊಗೋಣಿ

೯ ವಿಶಿಷ್ಟವಾದ ಕೆಲವು ಪದಪುಂಜಗಳು :

ದಕ್ಷಿಣ	ಉತ್ತರ
ಕಾಂತಿ ಕುತ್ತಿ = ಅವತಾರ ಮುಗೀತ್	ಕಾಂತಿ ಕುತ್ತಿ
ಹೆಜ್ಜಿ ಕುತ್ತೆತಿ = ಅವತಾರ ಮುಗಿದಿದೆ	ಹೆಜ್ಜಿ ಕುತ್ತೆತಿ
ಜುಟ್ಟ್ ನಿಗರ್ತಿ = ಬಿಸಿ ತಾಗಿದೆ	—
ಚಟ್ ಬೆಳಗಿತ್ = ತೊಂದರೆಯಾಯ್ತು	—
ಸಿಟ್ ಹಾಟ್ಯಾಗ್ ಹಾಕ = ಸಹಿಸು	ಸಿಟ್ ಹಾಟ್ಯಾಗ್ ಹಾಕಾ
ಕಂಟಮಾಲಿ ಕೊಳ್ಳಿಗಿ ಬಿತ್ತ್=ಹೊಸ ತೊಂದರೆ	—
ಮಾಂಟಾ ಹಾಕ್ಯಾರ್ = ಮೋಸ ಮಾಡಿದರು	—
ಮುರಾಬಟ್ಟಿ ಆತ್ / ಹಾಳ್ಮಾಡಿ ಹತ್ತಿ ಬಿತ್ತಿದರ್ } = ಹಾಳಾಯಿತು	ಮುರಾಬಟ್ಟಿ ಆತ್ / ಹಾಳ್ಮಾಡಿ ಹತ್ತೀ ಬಿತ್ತಿದರ್
ಇನೆ ತೆಲೀವ್ಯಾಲಿನ ಮಾಸ್ ಹಾರಿಲ್ಲ / ಇನ್ನು ಅಪಕ್ವವಾಗಿದ್ದಾನೆ	ಇನೆ ತೆಲಿವ್ಯಾಲಿನ್ ಮಾಸ್ ಹಾರಿಲ್ಲ
ಕಲ್ಲ್ ಹಾಕಿದ್ / ಹುಳಿ ಹಿಂಡಿದರ್ } = ಅಡ್ಡ ಹಾಕಿದ	ಕಲ್ಲ್ ಹಾಕಿದ್ / ಹುಳಿ ಹಿಂಡಿದರ್
ಆಣೀ ತಪ್ಪೇತಿ = ಯೋಜನೆ ತಪ್ಪಿದೆ	—
ಸಾರ್ಗ್ಯಾಡ್ = ಗೊತ್ತುಗುರಿಯಿಲ್ಲದೆ ತಿರುಗು	ಸಾರ್ಗ್ಯಾಡ್
ನುಂಗಿ ನೀರ್ ಕುಡದ್ರು = ಮುಗಿಸಿದರು	ನುಂಗಿ ನೀರ್ ಕುಡದ್ರು
ಕುಣೀ ಹೆಚ್ಚ್ ಆಗೇತಿ = ಸೊಕ್ಕು ಬಂದಿದೆ	—
ಬದ್ದಿಗ್ಗಿ ಬಂದೆತಿ = ಮುಗಿಯುತ್ತ ಬಂದಿದೆ	—
ವೋಸ್ ನಿರ್ವೋಸ್ ಆಗಲಿ = ವಂಶ ನಿರ್ವಂಶವಾಗಲಿ	ವೋಸ್ ನಿರ್ವೋಸ್ ಆಗಲಿ
ಶೆಗಣಿ ತಿಂದ್ = ಹಾಳಾದನು	ಶೆಗಣಿ ತಿಂದ್
ಹಂಕ್ ತಿನ್ನಾವ್ = ಜಿಪುಣ	—

೧೦ ಕೆಲವು ಅವ್ಯಯಗಳು :

ದಕ್ಷಿಣ	ಉತ್ತರ
ನಿಂದರ್ಕಿಲೆ = ಒಮ್ಮೆಲೆ	ನಿಂದರ್ಕಿಲೆ
ಆಗಳ್ಕಿಲೆ = ಆಗಲೆ	ಆಗಳ್ಕಿಲೆ
ಹಿಂದಾಗಡೆ = ಆಮೇಲೆ	ಹಿಂದರ್ಗಡೆ

ದಕ್ಷಿಣ		ಉತ್ತರ
ದಸಿಂದ್	= ಕಾರಣ	ದಸಿಂದ್
ಗಸಕ್ನ	= ಕೂಡಲೆ	ಗಸಕ್ನೆ
ಪುಸಕ್ನ	= ಕೂಡಲೆ	ಪುಸಕ್ನೆ
ಪುಸಂಗ್ನ	= ಕೂಡಲೆ	—
ಬಡಕ್ನ		ಭಡಾಣೆ
ಬುದಂಗ್ನ್		ಭುದಂಗ್ನೆ
ಅಂತರ್ಕಿಲೆ	= ಕಾರಣವಿಲ್ಲದೆ	ಅಂತರ್ಕಿಲೆ
ಏಕದಂ ಕಿಲೆ	= ಒಮ್ಮೆಲೆ	ಏಕದಂ ಕಿಲೆ

ವಿಜಾಪುರ ಕನ್ನಡದ ಈವರೆಗಿನ ವಿವೇಚನೆಯಿಂದ ಅದು ಧ್ವನಿಮಾ ಹಾಗೂ ಆಕೃತಿಮಾ ವಿಭಾಗಗಳಲ್ಲಿ ಮೈಸೂರು ಹಾಗೂ ಕರಾವಳಿ ಕನ್ನಡದಿಂದ ಸಂಪೂರ್ಣ ಭಿನ್ನವಾಗಿಯೂ, ಉತ್ತರ ಕರ್ನಾಟಕ ಕನ್ನಡಕ್ಕೆ ಸ್ಥೂಲವಾಗಿ ಸಮಾನವಾಗಿಯೂ ಕಂಡುಬರುತ್ತದೆಯೆಂದು ವಿದಿತವಾಗುತ್ತದೆ. ಆದರೆ ಶಬ್ದಕೋಶವನ್ನು ಅವಲೋಕಿಸಿದಾಗ ಅದು ಉಳಿದೆಲ್ಲ ಜಿಲ್ಲೆಗಳಿಗಿಂತಲೂ ಭಿನ್ನವಾಗಿದೆ ಎನ್ನುವುದು ಸುಸ್ಪಷ್ಟ. ಸಂಧಿ ವಿಚಾರವನ್ನು ಎರಡು ಕಾರಣಗಳಿಗಾಗಿ ಕೈಬಿಡಲಾಗಿದೆ. ಆಡುನುಡಿಯ ಸಂಧಿ ಪ್ರಕ್ರಿಯೆ ಸಾಮಾನ್ಯವಾಗಿ ನಿಯಮಗಳಿಗೆ ಪಕ್ಕಾಗುವುದು ಕಠಿಣ ಎಂಬುದು ಒಂದು. ಅದು ಉಳಿದ ಪ್ರಭೇದಗಳಿಗಿಂತ ವಿಶಿಷ್ಟ ಅಂಶಗಳನ್ನೇನೂ ಹೊಂದಿಲ್ಲ ಎಂಬುದು ಇನ್ನೊಂದು. ಲೇಖನ ಇನ್ನೂ ದೀರ್ಘವಾಗಬಹುದೆಂಬ ಭೀತಿಯಿಂದ ಅತಿ ಮಹತ್ವಪೂರ್ಣವಾದ ಸ್ವರಾಘಾತ ವಿಚಾರವನ್ನು ಕೈಬಿಡಲಾಗಿದೆ. ಸ್ವರಾಘಾತವಿಚಾರವನ್ನುಳಿದು ವಿಜಾಪುರ ಕನ್ನಡದ ಸಮಗ್ರ ಚಿತ್ರಣವಿಲ್ಲಿದೆ.

• •

ಬೆಳಗಾವಿ ಜಿಲ್ಲೆಯ ಕನ್ನಡ

• ಎಂ. ಬಿ. ಭೋಯಿ

ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಬೆಳಗಾವಿಯೂ ಒಂದು. ಇದರ ಪಶ್ಚಿಮೋತ್ತರ ಗಡಿ, ಮಹಾರಾಷ್ಟ್ರದೊಂದಿಗೆ ಹೊಂದಿಕೊಂಡಿದೆ. ಮರಾಠರ ಹಲವಾರು ಸಂಸ್ಥಾನಗಳು ಬೆಳಗಾವಿ ಜಿಲ್ಲೆಯಲ್ಲಿ ಇದ್ದುದರಿಂದ ಮರಾಠಿಯು ಬೆಳಗಾವಿ ಜಿಲ್ಲೆಯ ಕನ್ನಡದ ಮೇಲೆ ಪ್ರಭಾವ ಬೀರಿದುದು ಸಹಜವಾಗಿದೆ. ಈಗಲೂ ಬೆಳಗಾವಿ, ಖಾನಾಪುರ ಹಾಗೂ ಚಿಕ್ಕೋಡಿ ತಾಲೂಕುಗಳಲ್ಲಿ ಮರಾಠಿ ಮಾತನಾಡುವವರು ವಿಶೇಷ ಸಂಖ್ಯೆಯಲ್ಲಿದ್ದಾರೆ. ಬೆಳಗಾವಿಯ ಬಗೆಗೆ ಇರುವ ವಾದವಂತೂ ಜನಜನಿತವಾಗಿದೆ.

ಮರಾಠಿಗರಲ್ಲದೆ ಭಾಷಾ ಅಲ್ಪಸಂಖ್ಯಾತರಾಗಿ ಮುಸಲ್ಮಾನರು, ಪಟ್ಟೆಗಾರರು, ಕೊರವರು, ಲಮಾಣಿಗಳು. ಗೊಲ್ಲರು, ವಡ್ಡರು ಈ ಜಿಲ್ಲೆಯಲ್ಲಿದ್ದಾರೆ. ಮರಾಠಿಯ ಪ್ರಭೇದವೊಂದನ್ನಾಡುವ ಗೌಳಿಗರು ಖಾನಾಪೂರ ತಾಲೂಕಿನ ಗುಡ್ಡಗಾಡು ಪ್ರದೇಶದಲ್ಲಿದ್ದಾರೆ. ಇತ್ತಿತ್ತಲಾಗಿ ವಲಸೆಬಂದ ಮಾರವಾಡಿಗಳು, ಗುಜರಾತಿಗಳು, ಸಿಂಧಿಗಳು ಕೆಲಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಬೆಳಗಾವಿ ನಗರದಲ್ಲಿ ಕೊಂಕಣಿಗಳ ಸಂಖ್ಯೆಯೂ ಗಮನಾರ್ಹವಾಗಿದೆ.

ಬೆಳಗಾವಿ ಜಿಲ್ಲೆಯ ಕನ್ನಡದಲ್ಲಿ ಪ್ರಮುಖವಾದ ನಾಲ್ಕು ಪ್ರಭೇದಗಳನ್ನು ಗುರುತಿಸಬಹುದು. ೧. ಬೈಲಹೊಂಗಲ ಕನ್ನಡ ೨. ಗಡಿ ಕನ್ನಡ ೩. ಗೋಕಾಕ ಕನ್ನಡ ೪. ರಾಮದುರ್ಗ ಕನ್ನಡ.

೧. ಬೈಲಹೊಂಗಲ ಕನ್ನಡ : ಇದರಲ್ಲಿ ಬೆಳಗಾವಿ ತಾಲೂಕಿನ ಬಾಗೆವಾಡಿ ವಿಭಾಗ, ಖಾನಾಪೂರ ತಾಲೂಕಿನ ಉತ್ತರ-ಪಶ್ಚಿಮ ಭಾಗವನ್ನು ಹೊರತುಪಡಿಸಿ ಉಳಿದ ಭಾಗ, ಬೈಲಹೊಂಗಲ ತಾಲೂಕು. ಸವದತ್ತಿ ತಾಲೂಕಿನ ಬಹು ಭಾಗಗಳು ಸಮಾವೇಶವಾಗುತ್ತವೆ.

೨. ಗಡಿ ಕನ್ನಡ : ಇದು ಮಹಾರಾಷ್ಟ್ರದ ಗಡಿಯ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಇದರ ಮೇಲೆ ಆರ್ಯಭಾಷೆಯಾದ ಮರಾಠಿಯ ಪ್ರಭಾವ ವಿಶೇಷ

ವಾಗಿದೆ. ಬೆಳಗಾವಿ ತಾಲೂಕಿನ ಬೆಳಗಾವಿ ನಗರ ಹಾಗೂ ಉತ್ತರಭಾಗ, ಬಾಗೇವಾಡಿ ಭಾಗವನ್ನು ಹೊರತುಪಡಿಸಿ ಉಳಿದ ಪೂರ್ವಭಾಗ, ಹುಕ್ಕೇರಿ ತಾಲೂಕಿನ ಪಶ್ಚಿಮ ಮತ್ತು ಉತ್ತರಭಾಗ, ಚಿಕ್ಕೋಡಿ ತಾಲೂಕು– ಇವು ಗಡಿ ಕನ್ನಡದಲ್ಲಿ ಸಮಾವೇಶಗೊಳ್ಳುತ್ತವೆ. ರಾಯಬಾಗ ತಾಲೂಕಿನ ಉತ್ತರಭಾಗ ಹಾಗೂ ಅಥಣಿ ತಾಲೂಕುಗಳಲ್ಲಿಯ ಕನ್ನಡವು ಗಡಿಕನ್ನಡದೊಡನೆ ವಿಶೇಷ ಸಾಮ್ಯವುಳ್ಳದಾಗಿದ್ದರೂ ವಿಜಾಪುರ ಕನ್ನಡದ ಪ್ರಭಾವವೂ ಇಲ್ಲಿ ಕಂಡುಬರುತ್ತದೆ.

೩. ಗೋಕಾಕ ಕನ್ನಡ : ಇದರಲ್ಲಿ ಗೋಕಾಕ ತಾಲೂಕು, ಹುಕ್ಕೇರಿ ತಾಲೂಕಿನ ದಕ್ಷಿಣ ಮತ್ತು ಪೂರ್ವಭಾಗಗಳು ಸಮಾವೇಶಗೊಳ್ಳುತ್ತವೆ.

೪. ರಾಮದುರ್ಗ ಕನ್ನಡ : ಇದರಲ್ಲಿ ಸವದತ್ತಿ ತಾಲೂಕಿನ ಪೂರ್ವಭಾಗ, ರಾಮದುರ್ಗ ತಾಲೂಕುಗಳು ಸೇರುತ್ತವೆ. ಇಲ್ಲಿ ಬಾಗಲುಕೋಟೆ, ಬಾದಾಮಿಗಳ ಕನ್ನಡ ಪ್ರಭಾವ ಬೀರಿದೆ. ಗಡಿ ಕನ್ನಡದ ಹೊರತು ಉಳಿದ ಭಾಗಗಳಲ್ಲಿ ಭಾಷಿಕ ವೈದೃಶ್ಯಗಳು ಕಡಿಮೆ. ಗಡಿ ಕನ್ನಡದಲ್ಲಿ ಮರಾಠಿ ಪ್ರಭಾವ ಎದ್ದುಕಾಣುತ್ತದೆ. ಅಲ್ಲದೆ ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನೂ ಅದು ಬೆಳೆಯಿಸಿಕೊಂಡುಬಂದಿದೆ.

ಪ್ರದೇಶಾನುಸಾರ ಆಯಾ ಪ್ರಭೇದಗಳ ಪ್ರಭಾವ ತೋರಬಹುದಾದರೂ ಒಟ್ಟಿನಲ್ಲಿ ಈ ಜಿಲ್ಲೆಯ ಬ್ರಾಹ್ಮಣರ ಕನ್ನಡ ಇತರರಿಗಿಂತ ಬೇರೆಯಾಗಿದೆ.

ಈ ಲೇಖನದಲ್ಲಿ ಮೇಲಿನ ಪ್ರಭೇದಗಳನ್ನು ಕ್ರಮವಾಗಿ ಬೈಲಹೊಂಗಲ ಕನ್ನಡ (ಬೈ), ಗಡಿಕನ್ನಡ (ಗ), ಗೋಕಾಕ ಕನ್ನಡ (ಗೋ), ರಾಮದುರ್ಗ ಕನ್ನಡ (ರಾ), ಬ್ರಾಹ್ಮಣ ಕನ್ನಡ (ಬ್ರಾ) ಎಂದು ಸಂಕೇತಿಸಲಾಗುವುದು.

ಸ್ವರಗಳು :

ə, a, æ, i, e, u, o, ɔ ಎಂಬ ಎಂಟು ಸ್ವರಗಳು ಕಂಡುಬರುತ್ತವೆ. ಇವುಗಳಲ್ಲಿ [o] ಮತ್ತು [ɔ] ಗಳನ್ನು ಪ್ರತ್ಯೇಕವಾದ ಧ್ವನಿಮಾಗಳೆಂದು ಹೇಳಲು ಸಾಧ್ಯವಾಗುವಂತಹ ಕನಿಷ್ಠಯುಗ್ಮಗಳು ದೊರೆಯುವುದಿಲ್ಲ. [ɔ] ಸ್ವರವು ವಿಶೇಷ ರೂಢಿಯಲ್ಲಿದ್ದು [o] ಕ್ವಚಿತ್ತಾಗಿ ಕಂಡುಬರುತ್ತದೆ. [ɔ], [o:] ಮತ್ತು [ɔ:] ಈ ಮೂರು ವೈದೃಶ್ಯ ಪ್ರಸಾರ ಪಡೆದಿದ್ದು ಪ್ರತ್ಯೇಕ ಧ್ವನಿಮಾಗಳೆಂದು ಹೇಳಲು ಸಾಧ್ಯವಾಗುವಂಥ ಕನಿಷ್ಠಯುಗ್ಮಗಳಲ್ಲಿ ಬರುತ್ತವೆ.

ಇನ್ನುಳಿದ ಆರೂ ಸ್ವರಗಳ ದೀರ್ಘತೆಯು ಧ್ವನಿಮಾ ಬೆಲೆಯುಳ್ಳದ್ದಾಗಿದೆ. ə: ಸ್ವರಕ್ಕೆ ಮಾತ್ರ ಹೆಚ್ಚಿನ ಕನಿಷ್ಠಯುಗ್ಮಗಳಿಲ್ಲ.

ಉದಾ :

ಅರಿ	/ əri /	' ತಿಳಿ '
ಅರಿ	/ ari /	' ಅರೆ '
ಆರಿ	/ a:ri /	' ಒಂದು ಗಿಡ ', ಆರಿ (< ಆರು, ಧಾ)
ಆಟ	/ a:ṭə /	—
ಅ:ಟ	/ ə:ṭə /	' ಅಷ್ಟು '
ಅಡ	/ əḍə /	' ಅಡು '
ಆಡ	/ a:ḍə /	' ಆಡು ', ' ಮೇಕೆ '
ಬಳಿ	/ bəḷi /	' ಬಳಿ ' (ಧಾ)
ಬಳಿ	/ baḷi /	' ಬಳೆ '
ಬ್ಯಳಿ	/ bæḷi /	' ಬೆಳೆ '
ಬ್ಯಾಳಿ	/ bæ:ḷi /	' ಬೇಳೆ '
ಬಾಳಿ	/ ba:ḷi /	' ಬಾಳೆ '
ತಡಿ	/ təḍi /	' ಜೇನು '
ತಡಿ	/ taḍi /	' ತಡೆ '
ತಾಡಿ	/ ta:ḍi /	' ಒಂದು ಮರ '
ತ್ವಡಿ	/ tɔḍi /	' ತೊಡೆ '
ಕರಿ	/ kəri /	' ಕರಿ '
ಕರಿ	/ kari /	' ಕರೆ '
ಕ್ಯರಿ	/ kæri /	' ಕೆರೆ '
ಕ್ಯಾರಿ	/ kæ:ri /	' ಕೇರೆ ' (=ಹಾವು)
ಕ್ವರಿ	/ kɔri /	' ಕೊರೆ '
ಕ್ವಾರಿ	/ kɔ:ri /	' ಕೋರೆ '

ಬೆಳಗಾವಿ ಜಿಲ್ಲೆಯ ಪ್ರಭೇದಗಳಲ್ಲಿ [ɔ] ಹ್ರಸ್ವಸ್ವರವು ಸಾಮಾನ್ಯವಾಗಿದ್ದು [o] ಕ್ವಚಿತ್ತಾಗಿದೆ. ಈ [ɔ] ಸ್ವರವು ಒ ಸ್ವರದಿಂದಲೇ ನಿಷ್ಪನ್ನವಾದುದೆಂಬಲ್ಲಿ ಸಂದೇಹವಿಲ್ಲ. ಇಂದು ಬರಹ ಕನ್ನಡದಲ್ಲಿ ಒಕಾರವಿರುವ ಕಡೆಗಳಲ್ಲೆಲ್ಲ ಇಲ್ಲಿಯ ಪ್ರಭೇದಗಳಲ್ಲಿ [ɔ] ಸ್ವರವೇ ಕಂಡುಬರುತ್ತದೆ. ಆದರೆ (ಬರಹ ಕನ್ನಡದಲ್ಲಿ) ಪವರ್ಗ ವ್ಯಂಜನದ ಮುಂದೆ ಇರುವ ಒ ಓಕಾರಗಳು ಈ ಪ್ರಭೇದಗಳಲ್ಲಿ ಶುದ್ಧವಾಗಿ ಕೇಂದ್ರ ವಿವೃತಸ್ವರಗಳಾಗಿರುವುದೂ ಅಷ್ಟೇ ಸಾಮಾನ್ಯ.

ಉದಾ :

ಪಳ್ಳ	/ pəḷḷə /	' ಪೊಳ್ಳು '
ಪರಿ	/ pari /	' ಪೊರೆ '
ಬಡ್ಡಿ	/ baḍḍi /	' ಬೊಡ್ಡೆ '
ಬಡ್ಡಿ	/bəḍḍi /	' ಬೊಡ್ಡಿ '
ಮಾಡ	/ ma:ḍə /	' ಮೋಡ '
ಮಾರಿ	/ ma:ri /	' ಮೋರೆ '
ಮಲಿ	/ mali /	' ಮೊಲೆ '
ಮಳಿ	/ maḷi /	' ಮೊಳೆ '
ಮಳ	/ məḷa /	' ಮೊಳ '

ಸ್ವರಗಳಲ್ಲಿ ಅನುನಾಸಿಕತ ಆಗಾಗ ಕಂಡುಬರುತ್ತದೆ.

ಉದಾ :

ಅ̃ವ̃	' ಅವನು '	ಇ̃ವ̃	' ಇವನು '
ಹ̃ಾವ̃	' ಹಾವು '	ಹ್ಯ̃ಾವ̃	' ಹೇವ '
ಸ್ಯ̃ಾವ̃ಗಿ	' ಸೇವಿಗೆ '	ಯ̃ಾವ̃	' ಯಾವನು '
ಸಾವ̃	' ಒಂದು ಧಾನ್ಯ '	ಹ̃ೀಟ	' ಹಿಂಭಾಗ '
ಹ̃ೊಟಿ	'ಯುಕ್ತಿ', 'ಎಳಕಲು'	ತ್ವ̃ಾಟ	' ತೋಟ '

ಕಾವ̃, ಕ̃ಾವ̃ ' ಕಾವು ', ' ಹಿಡಿಕೆ '

ಕಾವ ' ಬಿಸಿ '

ಮೇಲಿನ ಉದಾಹರಣೆಗಳಲ್ಲಿ ಕೊನೆಯ ಜೋಡಿಯೊಂದು ಮಾತ್ರ ಕನಿಷ್ಠಯುಗ್ಮ ವೆಂಬುದನ್ನು ಕಾಣಬಹುದು.

ವ್ಯಂಜನಗಳು :

ಪ್,	ಬ್,	ಮ್,	ವ್	
ತ್,	ದ್,			
		ನ್,	ಲ್,	ರ್
ಟ್,	ಡ್,	(ಣ್)	ಳ್	
ಚ್,	ಜ್,		ಯ್,	ಸ್. (ಶ್)
ಕ್,	ಗ್,		ಹ್	

ಇವಲ್ಲದೆ ಗಡಿ ಕನ್ನಡ ಹಾಗೂ ಬ್ರಾಹ್ಮಣ ಕನ್ನಡಗಳಲ್ಲಿ ಮಹಾಪ್ರಾಣಗಳು ಕಂಡುಬರುತ್ತವೆ.

ಈ ಪ್ರಭೇದಗಳಲ್ಲಿ ವಕಾರವು ದಂತೋಷ್ಠ್ಯವಾಗಿರದೆ ಉಭಯೋಷ್ಠ್ಯವಾಗಿದೆ. ಸಾಮಾನ್ಯವಾಗಿ ನ್, ಣ್ ಗಳಲ್ಲಿ ವ್ಯತ್ಯಾಸ ತೋರಿಬರುವುದಿಲ್ಲ. ಆಗೀಗ ತೋರಿ ಬರುತ್ತಿದ್ದರೆ ಗಡಿ ಹಾಗೂ ಬ್ರಾಹ್ಮಣ ಕನ್ನಡದಲ್ಲಿ ಮಾತ್ರ.

ರ್, ಲ್ ಗಳು ಇಲ್ಲಿ ವರ್ತ್ಸ್ಯವಾಗಿವೆ. ಇದೇ ರೀತಿ ಪರದಲ್ಲಿ ದಂತ್ಯವ್ಯಂಜನ ಗಳಾದ ತ, ದ ಗಳಿದ್ದಾಗ ನಕಾರವು ದಂತ್ಯವಾಗಿಯೂ ಉಳಿದ ಪರಿಸರಗಳಲ್ಲಿ ವರ್ತ್ಸ್ಯ ವಾಗಿಯೂ ಉಚ್ಚರಿಸಲ್ಪಡುತ್ತದೆ.

ಗಡಿ ಕನ್ನಡವನ್ನು ಹೊರತುಪಡಿಸಿ ಉಳಿದ ಪ್ರದೇಶದಲ್ಲಿ ಪಶ್ಚಸ್ವರಗಳು ಪರ ದಲ್ಲಿದ್ದಾಗ ಪದಾದಿ ಚ, ಜ ಗಳಿಗೆ ದಂತ್ರ್ಯೋಚ್ಚಾರವೂ ಉಳಿದ ಸ್ವರಗಳಿದ್ದಾಗ ತಾಲ ವ್ಯೋಚ್ಚಾರವೂ ಇರುತ್ತದೆ. ಪದಮಧ್ಯದಲ್ಲಿ ಪೂರ್ವಸ್ವರಗಳ ಹೊರತು ಬೇರೆ ಸ್ವರ ಗಳಿದ್ದಾಗ ದಂತ್ರ್ಯೋಚ್ಚಾರ ಹಾಗೂ ಪೂರ್ವಸ್ವರಗಳಿದ್ದಾಗ ತಾಲವ್ಯೋಚ್ಚಾರ ಇರುತ್ತದೆ.

ಗಡಿ ಕನ್ನಡದಲ್ಲಿ ಎಲ್ಲ ಸ್ಥಾನಗಳಲ್ಲಿ ಪೂರ್ವಸ್ವರಗಳು ಪರದಲ್ಲಿದ್ದಾಗ ಮಾತ್ರ ತಾಲವ್ಯೋಚ್ಚಾರವಿರುತ್ತದೆ.

ಈ ಪ್ರಭೇದಗಳಲ್ಲಿ ಶಕಾರವು ಕ್ವಚಿತ್ತಾಗಿ ಪ್ರಯೋಗಗೊಳ್ಳುವುದು ಕಂಡು ಬರುತ್ತದೆ.

ಶಂಕ	‘ ಶಂಕು ’
ಶಾಣ್ಯಾ	‘ ಜಾಣ ’
ಶಾಂತಿ	—
ಶಾಲ	‘ ಮೇಲುಹೊದಿಕೆ ’
ಶಲ್ಲೆ	,,
ಶೆಟ್ಟಿ, ಸೆಟ್ಟಿ	—
ಶೇಂಗಾ	‘ ಶೇಂಗಾ ’
ಶ್ಯಾರ	‘ ಶಹರ ’, ’ ಪಟ್ಟಣ ’

ಬ್ರಾಹ್ಮಣ ಮತ್ತು ಗಡಿಕನ್ನಡಗಳಲ್ಲಿರುವ ಮಹಾಪ್ರಾಣಗಳಿಗೆ ಉದಾಹರಣೆಗಳು:

ಖಣ	‘ ಕುಪ್ಪಸದ ಬಟ್ಟೆ ’
ಕಣ	‘ ರಾಸಿ ಮಾಡುವ, ಒಕ್ಕುವ ಸ್ಥಳ ’
ಗಾಣ	—
ಘಾಣ (ಗಡಿ)	‘ ಹೊಲಸು ’
ದನಿ	‘ ಧ್ವನಿ ’
ಧನಿ	‘ ಶ್ರೀಮಂತ ’

ಈ ಜಿಲ್ಲೆಯಲ್ಲಿ ಹಕಾರವು ಪದಾದಿಯಲ್ಲಿ ಮಾತ್ರವೇ ಬರಬಲ್ಲುದು :

ಬಾಳ, ಭಾಳ (ಗ, ಬ್ರಾ)	' ಬಹಳ '
ಹಂತ, ಹಂತಾ	' ಅಂತಹ '
ಹಿಂತ, ಹಿಂತಾ	' ಇಂತಹ '
ಹಾರ	' ಬಲಿ ' = ಆಹಾರ
ಬರಿ	' ಬರಹ '
ಸಿವ್ವಿ	' ಸಿಂಹ '
ಮಾಡೀ	' ಮಹಡಿ '
ತರಾ, ಥರಾ (ಗ, ಬ್ರಾ)	' ತರಹ '
ಹೌದ, ಹೌಂದ, ಹೋಂದ, ಹೊಂದ	' ಅಹುದು '
ಸಲೂ, ಸಲುವ	' ಸಲಹು '

ಕನ್ನಡ ಭಾಷೆಯ ಪದಾದಿ ಪಕಾರವು ಇಂದು ಹಕಾರವಾಗಿ ಮಾರ್ಪಟ್ಟಿರುವುದು ಸರ್ವವಿದಿತವಾದ ಸಂಗತಿ. ಆದರೆ ಬೆಳಗಾವಿ ಕನ್ನಡದಲ್ಲಿ ಆದಿ ಪಕಾರದಿಂದೊಡಗೂಡಿದ ಅನೇಕ ಪದಗಳು ಬಳಕೆಯಲ್ಲಿವೆ. ಉದಾ :

ಪಕಳಿ	' ಪುಷ್ಪದಳ '
ಪಕ್ಕ	' ಪುಚ್ಛ ', ' ಪಕ್ಷ '
ಪಕ್ಕಿ	' ಬೊಕ್ಕೆ '
ಪಚಡಿ	' ಕೋಸಂಬರಿ '
ಪಟಗೆ	' ತಲೆಗೆ ಸುತ್ತುವ ಬಟ್ಟೆ '
ಪಟಗಾ	' ರುಮಾಲು '
ಪಟ	' ಗಾಳಿಪಟ '
ಪಟ್ಟಿ	—
ಪಡಿ	' ಪಡೆ, ಕಲ್ಲುಬಂಡೆ '
ಪಡಿ / pəḍi /	' ಕಾಳಿನ ಒಂದು ಅಳತೆ '
ಪಡ್ಡ	' ಒಂದು ಕರಿದ ತಿನಿಸು '
ಪಳಿ	' ಹಲಗೆ '
ಪರಿ	' ಪೊರೆ '
ಪನದೆ	' ಮಜ್ಜಿಗೆ–ಸಾರು '
ಪಳ್ಳ	' ಪೊಳ್ಳು '
ಪಟ್ಟಿ	' ಪರಟೆ ', ' ತಲೆಯ ಓಡು '

ಪಂಜಿ, ಪಂಜಾ (ಬ್ರಾ)	' ಜಾಳಾದ ಅರಿವೆ, ಪಂಚೆ '
ಪಾಟಿ	' ಸ್ಲೇಟು '
ಪಾರ	' ಪಾರು '
ಪಾಲ	' ಪಾಲು '
ಪಾಳಿ	' ಸರತಿ, ', ' ಹರವಾದ ಕಲ್ಲು '
ಪಾಚಿ	' ನೀರುಳ್ಳಿ ಮುಂತಾದ ಸಸ್ಯಗಳ ಎಲೆ '
ಪಾಡ	'ಉತ್ತಮ', 'ಅರೆಮಾಗಿದ ಹಣ್ಣು', 'ಸ್ಥಿತಿ'
ಪಿಂಡ	' ತಿರುಳು '
ಪುಡಿ	' Powder '
ಪುಡಿಕಿ	' ಪೊಟ್ಟಣ '
ಪುಂಡಿ	' ನಾರು ಕೊಡುವ ಒಂದು ಸಸ್ಯ '
ಪೂಜಿ, ಪೂಂಜಿ (ಗ)	' ಪೂಜೆ' , ' ಶೂನ್ಯ '
ಪ್ಯಂಟಿ	' ಪೆಂಟೆ '
ಪ್ಯಂಡಿ	' ಪೆಂಡೆ ', ' ಕಟ್ಟು '. ' ಸಿವುಡು '
ಪ್ಯಾಟಿ	' ಪೇಟೆ '
ಪ್ಯಾಲಿ (ಬೈ)	' ಪೆದ್ದ '
ಪ್ಯೋಚ (ಗ)	' ಕೈಯಲ್ಲಿಯ ಬಂಗಾರದ ಆಭರಣ '

ಈ ಜಿಲ್ಲೆಯ ಗಡಿಭಾಗದ ಜನರು, ಬ್ರಾಹ್ಮಣರು ಹಾಗೂ ಸುಶಿಕ್ಷಿತ ವರ್ಗದವರನ್ನು ಬಿಟ್ಟು ಉಳಿದವರಲ್ಲಿ ಪದಾದಿಯಲ್ಲಿ ಟ, ಡ ಗಳಿರುವುದು ಬಹು ಅಪರೂಪ. ಟ, ಡ ಗಳ ಬದಲು ತ, ದ ಗಳಿರುತ್ತವೆ.

ಉದಾ :

ಟಕ್ಕೆ	ತಕ್ಕೆ
ಡೋಣೆ	ದೋಣೆ (ನಿ)
ಡಬ್ಬಣ	ದಬ್ಬನ
ಡಾಂಬರ	ದಾಂಬರ
ಡಾವಣಿ	ದಾವನಿ
ಟಗರು	ತಗರು
ಟೆಂಗಿನಕಾಯಿ	ತೆಂಗಿನಕಾಯಿ
ಡೊಂಬ	ದ್ವಂಬ
ಡೋರ, ಧೋರ (ಗ, ಬ್ರಾ)	ದ್ವಾರ

ಬರಹ ಕನ್ನಡದಲ್ಲಿ ಪ್ರಥಮಾಕ್ಷರವು ಸಕಾರವುಳ್ಳದ್ದಾಗಿದ್ದು ದ್ವಿತೀಯಾಕ್ಷರದಲ್ಲಿ ಚ, ಜಕಾರ ಬಂದಿದ್ದರೆ ಆದಿ ಸಕಾರವೂ ಚಕಾರವಾಗಿ ಮಾರ್ಪಡುತ್ತದೆ.

ಸಂಜೆ	ಚಂಜಿ
ಸೂಜಿ	ಚೂಜಿ
ಸೋಜಿಗ	ಚೋಜ್ಗ
ಸಜ್ಜಿ	ಚಜ್ಜಿ
ಸಂಚಿ	ಚಂಚಿ, ಚ್ವಂಚಿ

ಕೆಲವು ಸಲ, ಮಧ್ಯಸ್ವರ ಲೋಪಿಸುವುದರಿಂದ ಸಕಾರ ಮತ್ತು ಬೇರೆ ವ್ಯಂಜನ ಗಳಿಂದಾಗಬೇಕಾದ ವಿಜಾತೀಯ ಸಂಯುಕ್ತಾಕ್ಷರದ ಬದಲು ' ಞ್ಚ ' ಅಥವಾ ' ಚ್ಚ ' ಸಜಾತೀಯ ಸಂಯುಕ್ತಾಕ್ಷರವುಂಟಾಗುತ್ತದೆ.

ಹೊಸ್ತಿಲು	ಹ್ವಚ್ಚಲ
ಹೊದಿಸು	ಹ್ವಚ್ಚ
ಹುಣಿಸೆ	ಹುಂಚಿ

ಆದಿ ವಕಾರ :

ಸ್ವೀಕೃತಪದಗಳಲ್ಲಿಯ ಆದಿ ವಕಾರವು ಇಲ್ಲಿ ಲೋಪಿಸುತ್ತದೆ.

ವಿಮಾನ	ಇಮಾನ
ವಿಷ	ಇಸ
ವಿಧಿ	ಇದಿ
ವಿಚಾರ	ಇಚಾರ
ವಿಜಾಪೂರ	ಇಜಾಪೂರ
ವಿರೂಪಾಕ್ಷ	ಇರಪಕ್ಸಿ
ವಿಪರೀತ	ಇಪರೀತ

ಬರಹ ಕನ್ನಡದ ಪದಾಂತ ಉಕಾರದ ಬದಲು ಈ ಜಿಲ್ಲೆಯಲ್ಲಿ ə ಅಥವಾ a ಸ್ವರವಿರುವುದು ಸಾಮಾನ್ಯ. ಕೆಲವು ಸಲ ವಿಕಲ್ಪವಾಗಿ ಉಕಾರವಿರಬಹುದು.

ಉದಾ :

ಅವರ ಅಥವಾ ಅವ್ರ	' ಅವರು '
ಅದ ಅಥವಾ ಅದಾ (ಗ)	' ಅದು '
ಹುಳಾ	' ಹುಳು '

ಬರಹ ಕನ್ನಡದಲ್ಲಿ ಮೂರು ಅಥವಾ ಅದಕ್ಕೂ ಹೆಚ್ಚಿನ ಅಕ್ಷರಗಳುಳ್ಳ ಪದದಲ್ಲಿ ದ್ವಿತೀಯಸ್ವರವು ಹ್ರಸ್ವವಾಗಿದ್ದರೆ ಅದು ಲೋಪಿಸುವುದು ಇಲ್ಲಿ ಬಹು ಸಾಮಾನ್ಯ. ಅಂಥ ಲೋಪವು (೧) ಪ್ರಥಮಸ್ವರ ದೀರ್ಘವಾಗಿದ್ದಾಗ (೨) ಬರಹ ಕನ್ನಡದಲ್ಲಿ ದ್ವಿತೀಯಾಕ್ಷರವು ದ್ವಿತ್ವವಾಗಿದ್ದಾಗ (೩) ದ್ವಿತೀಯಾಕ್ಷರದಲ್ಲಿ ಯ್, ರ್, ವ್, ಡ್ ಈ ವ್ಯಂಜನಗಳಿದ್ದಾಗ ಹೀಗೆ ಮೂರು ಸಂದರ್ಭಗಳಲ್ಲಿ ಘಟಿಸುತ್ತದೆ.

ಉದಾ :

೧.	ಕಾಮ್ಣಿ	‘ ಕಾಮಾಲೆ ’	ಹೋಳ್ಗಿ	‘ ಹೋಳಿಗೆ ’
	ಕಾಸ್ಗೊ, ಕಾಸ್ಕ್ಯೊ	‘ ಕಾಯಿಸಿಕೊ ’	ಮಾಡ್ತಾನ	‘ ಮಾಡುತ್ತಾನೆ ’
	ಹೋಗ್ಲಿ	‘ ಹೋಗಲಿ ’	ನೋಡ್ತಾನ	‘ ನೋಡುತ್ತಾನೆ ’
೨.	ಕತ್ಲ	‘ ಕತ್ತಲು ’	ಕಮ್ಗ	‘ಕಮ್ಮಗೆ, ಕಮ್ಮನೆ’
	ತಂಬ್ಗಿ	‘ ತಂಬಿಗೆ ’	ತೊಟ್ಲ	‘ ತೊಟ್ಟಿಲು ’
	ತುಪ್ಳ	‘ ತುಪ್ಪಳ ’	ತಂಗ್ಳ	‘ ತಂಗಳು ’
	ಮಕ್ಳ	‘ ಮಕ್ಕಳು ’	ಮಗ್ಲ	‘ ಮಗ್ಗುಲು ’
	ನ್ಯಟ್ಗ	‘ ನೆಟ್ಟಗೆ ’	ಸಂಗ್ಟ	‘ ಸಂಕಟ ’
	ಸಪ್ಳ	‘ ಸಪ್ಪಳ ’	ಹಪ್ಳ	‘ ಹಪ್ಪಳ ’
೩.	ಬಯ್ಲ	‘ ಬಯಲು ’	ಪಯ್ರು	‘ ಪಯಿರು ’
	ಹಯ್ನ	‘ ಹಯನ ’		
	ಉರ್ಳ	‘ ಉರುಳು ’	ಅರ್ಲ	‘ ಅರಲು ’
	ಅರ್ಸ	‘ ಅರಸ ’	ಬಿರ್ಸ	‘ ಬಿರುಸು ’
	ಕವ್ಣಿ	‘ ಕವಣೆ ’	ನವ್ಣಿ	‘ ನವಣೆ ’
	ನವ್ಲ	‘ ನವಿಲು ’	ಸವ್ಲತ್ತ	‘ ಸವಲತ್ತು ’
	ಕಡ್ಲಿ	‘ ಕಡಲೆ ’	ಕ್ವಡ್ಲಿ	‘ ಕೊಡಲಿ ’
	ವಡ್ಲ	‘ ಒಡಲು ’	ಸಡ್ಲ	‘ ಸಡಿಲು ’

ಮೇಲಿನ ಪ್ರಕಾರವಲ್ಲದೆ ಬರಹ ಕನ್ನಡದ ದ್ವಿತೀಯಾಕ್ಷರದಲ್ಲಿ ರಕಾರವಿದ್ದು, ತೃತೀಯಾಕ್ಷರದಲ್ಲಿ ಪ್ರತಿವೇಷ್ಟಿತಗಳಾದ ಟ, ಡ, ಣ, ಳ ಗಳಿದ್ದರೆ ರಕಾರದ ಮುಂದಿನ ಸ್ವರವು ಲೋಪ ಹೊಂದಿ, ಮುಂದಿನ ವ್ಯಂಜನದೊಡನೆ ರಕಾರವು ಸಮರೂಪ ಧರಿಸುತ್ತದೆ.

ಉದಾ :

ಅಳ್ಳಿ	' ಅರಳಿ '	ಅಳ್ಳ	' ಅರಳು '
ಉಳ್ಳಿ	' ಉರುಳಿ '	ವಳ್ಳ	' ಒರಳು '
ಒಟ್ಟಿ	' ಒರಟ '	ಕಡ್ಡ	' ಕರಡು '
ಕಳ್ಳ	' ಕರುಳು '	ಕ್ವಳ್ಳ	' ಕೊರಳು '
ಗ್ವಟ್ಟ	' ಗೊರಟ '	ಪಟ್ಟ	' ಪರಟಿ '
ಹಡ್ಡ	' ಹರಡು '	ಹ್ವಳ್ಳ	' ಹೊರಳು '
ಕಣ್ಣಿ	' ಕರಣಿ '	ಕುಲಕಣ್ಣಿ	' ಕುಲಕರಣಿ '

ಲಿಂಗ–ವಚನ–ವಿಭಕ್ತಿ :

ಲಿಂಗ : ಕೂಸು ನಪುಂಸಕಲಿಂಗವಾಗಿರುವಂತೆ ಈ ಪ್ರಭೇದಗಳಲ್ಲಿ ಮುದುಕ, ಮುದುಕಿ, ಹೆಣ್ಣು ಮುಂತಾದ ಶಬ್ದಗಳು ವಿಕಲ್ಪವಾಗಿ ನಪುಂಸಕಲಿಂಗದಲ್ಲಿ ಪ್ರಯೋಗಿಸಲ್ಪಡುತ್ತವೆ.

ಉದಾ :

ಅವರ ಮನ್ಯಾಗ ಒಂದ ಹ್ಯಣ್ಣ ಅ:ತಿ 'ಅವರ ಮನೆಯಲ್ಲಿ ಒಂದು ಹೆಣ್ಣು ಇದೆ'
ಮುದಕಾ ಕ್ಯಮ್ಮಾಕ ಹತ್ತ:ತಿ 'ಮುದುಕ ಕೆಮ್ಮುತ್ತಿದ್ದಾನೆ'

ವಚನ : ಜಾತ್ಯೇಕ ವಚನವು ಇಲ್ಲಿ ಸರ್ವೇಸಾಮಾನ್ಯವಾಗಿದೆ. ಬಹುವಚನ ಸೂಚಕವಾದ –ಗಳು ಇಲ್ಲಿ –ಗೊಳ, –ಗೋಳ ಎಂದು ಪ್ರಯೋಗಗೊಳ್ಳುತ್ತದೆ.

ಅಣ್ಣಗೋಳ, ಅಪ್ಪಗೋಳ, ಸ್ವಾಮಿಗೋಳ, ಹ್ಯಣ್ಣಗೊಳ (ಹೆಣ್ಣುಗಳು)

–ಅರು ಎಂಬುದು –ಅರ ಎಂದಾಗುತ್ತದೆ.

ಹುಡಿಗ್ಯಾರ, ಕುಲಕಣ್ಯಾರ, ಪಾತರದಾರ, ಗಾಣಿಗ್ಯಾರ.

ಕೆಲವೊಮ್ಮೆ –ಓರ ಎಂದಾಗುವುದೂ ಉಂಟು. ಉದಾ : ಹುಡುಗೋರ.

ಗಡಿ ಕನ್ನಡದಲ್ಲಿ ಸಂಬಂಧವಾಚಕಗಳಿಗೆ –ದೇರ ಎಂಬ ಪ್ರತ್ಯಯ ಸೇರುತ್ತದೆ.

ಉದಾ :

ತಮ್ಮದೇರ 'ತಮ್ಮಂದಿರು'
ತಂಗಿದೇರ 'ತಂಗಿಯರು'

ವಿಭಕ್ತಿ :

ಪ್ರ. : ಪ್ರಕೃತಿ

ದ್ವಿ. : ೧. ಪ್ರಕೃತಿ
೨. (ಅ)ನ್ನ ಅಥವಾ (ಅ)ನ
೩. ಅಂತ್ಯಸ್ವರವು ದೀರ್ಘವಾಗುವುದು. ಆದರೆ ಆಕಾರವನ್ನುಳಿದು ಇತರ ಸ್ವರಗಳಲ್ಲಿ ದೀರ್ಘತ್ವವು ವಿಕಲ್ಪ.

ತೃ. : –ಇಂದ. –ಲೆ
ಚ. : –ಗ್ಯ, –ಕ, –ಕ್ಕ, –ಗ
ಪಂ. : –ಇಂದ
ಷ. : –ಅ, –ಎ, –ಈ, –ಊ
ಸ. : –ಆಗ, –ವಳಗ, –ಓಕ (ಗಡಿ)

ಉದಾಹರಣೆಗಳು :

ಪ್ರ. :	ನಾ ಬರತೇನ, ನಾನು ಬರತೇನ	'ನಾನು ಬರುತ್ತೇನೆ'
	ಅದ ಬರತ:ತಿ	'ಅದು ಬರುತ್ತದೆ'
	ಕೂಸ ಅಳತ:ತಿ	'ಕೂಸು ಅಳುತ್ತದೆ'
	ಕೂಸ ಅಳತೇತಿ (ಗ)	,,
	ಕೂಸು ಅಳತದ (ಬ್ರಾ)	,,
	ಸಾವಕಾರ ಹ್ವಂಟ	'ಸಾಹುಕಾರ ಹೊರಟನು'
ದ್ವಿ. :	೧. ಊರ ನೋಡ	'ಊರನ್ನು ನೋಡು'
	ಅವ್ನ ಪುಸ್ತೇಕ ತಂದ	'ಅವನು ಪುಸ್ತಕ ತಂದನು'
	ಆಕಿ ಮಡಿ ಉಟಗೊಂಡ್ಲು	'ಆಕೆ ರೇಶ್ಮೆ ಸೀರೆ ಉಟ್ಟುಕೊಂಡಳು'
	೨. ಅವನ್ನ ಕರಿ	'ಅವನನ್ನು ಕರೆ'
	ಅವನ ಕರಿ	,,
	ಹುಡುಗನ ಕಳಸ	'ಹುಡುಗನನ್ನು ಕಳುಹಿಸು'
	ಹುಡುಗನ್ನ ಕಳಸ	,,
	೩. ಹ್ವಲಾ ನೋಡಿ ಬಾ	'ಹೊಲವನ್ನು ನೋಡಿ ಬಾ'
	ನೀ ನನಗ ರ್ವಕ್ಕಾ ಕೊಡ	'ನೀನು ನನಗೆ ಹಣ ಕೊಡು'
	ಆಕಿ ಬುಟ್ಟೀ ತುಂಬ್ಲಿ	'ಆಕೆ ಬುಟ್ಟಿಯನ್ನು ತುಂಬಲಿ'
	ಮುದುಕ ಬಡಿಗೀ ಇಟ್ಟ	'ಮುದುಕನು ಬಡಿಗೆ ಇಟ್ಟನು'
	ಕಡೂ ತಾ	'ಕ(ಖ)ಡುವನ್ನು ತಾ'
	ಕೂಳೀ ಕೀಳು	'ಕೂಳೆಯನ್ನು ಕೀಳು'
	ತೋಡೇ ಹಾಕು	'ತೋಡೆಯನ್ನು ಹಾಕು'

ತೃ.	:	ಕಯ್ಲೆ	'ಕಯ್ಯಿಂದ'
		ಸಲಿಕೀಲೆ	'ಸಲಿಕೆಯಿಂದ'
		ಸ್ವಕ್ಕಿಲೆ, ಸೊಕ್ಕಿಲೆ	'ಸೊಕ್ಕಿನಿಂದ'
		ಕಯ್ಯಿಂದ	—
		ಸಲಿಕಿಂದ	—
		ಮನಿಂದ	'ಮನೆಯಿಂದ'
ಚ.	:	ಹ್ವಲಕ	'ಹೊಲಕ್ಕೆ'
		ಹ್ವಲಕ್ಕ	,,
		ನಡಕ	'ನಡುವಿಗೆ'
		ನಡಕ್ಕ	,,
		ಹ್ವಳಿಗ್ಯ / hɔḷigæ /	'ಹೊಳೆಗೆ'
		ಮಳಿಗ್ಯ	'ಮಳೆಗೆ'
		ಅವ್ಗೆ	'ಅವನಿಗೆ'
		ಇವ್ಗೆ	'ಇವನಿಗೆ'
ಪಂ.	:	ಹ್ವಲದಿಂದ	'ಹೊಲದಿಂದ'
		ನಡದಿಂದ	'ನಡುವಿನಿಂದ'
ಷ.	:	ಅದರ ಹಿಂದ	'ಅದರ ಹಿಂದೆ'
		ಹುಡುಗನ ಕಡ್ಯಾವ್ರ	'ಹುಡುಗನ ಕಡೆಯುವರು'
		ಯಾ ಮಾತ	'ಯಾವ ಮಾತು'
		ಹಿರೀ ಹ್ವಳಿ	'ಹಿರಿಯ ಹೊಳೆ' – ಕೃಷ್ಣಾ ನದಿ
		ಹೂಡೂ ಯತ್ತ	'ಹೂಡುವ ಎತ್ತು'
		ಆಡೂ ಮಾತ	'ಆಡುವ ಮಾತು'
ಸ.	:	ಹ್ವಲದಾಗ	'ಹೊಲದಲ್ಲಿ'
		ಹ್ವಲದ್ವಳಗ	,,
		ಮನಿವಳಗ	'ಮನೆಯಲ್ಲಿ'
		ಮನ್ಯಾಗ	,,
		ಹ್ವಲದೋಕ (ಗ)	'ಹೊಲದೊಳಗೆ, ಹೊಲದಲ್ಲಿ'
		ಮನಿಯೋಕ	'ಮನೆಯೊಳಗೆ, ಮನೆಯಲ್ಲಿ'

ಗಡಿ ಕನ್ನಡದಲ್ಲಿ ದ್ವಿತೀಯೆಗೆ ಬದಲು ಚತುರ್ಥಿ ಪ್ರಯೋಗ ಸಾಮಾನ್ಯ.

ಉದಾ :

ಅವ್ಗೆ ಕರಿ	**'ಅವನಿಗೆ = ಅವನನ್ನು ಕರೆ'**
ಕೂಸಿಗ್ಯ ಹ್ವಡದ	**'ಕೂಸಿಗೆ = ಕೂಸನ್ನು ಹೊಡೆದ'**

ಕನ್ನಡದ ಇತರ ಪ್ರಭೇದಗಳಲ್ಲಿರುವಂತೆ ಈ ಜಿಲ್ಲೆಯಲ್ಲಿಯೂ –ಊ ಎಂಬುದು ಮುಖ್ಯವಾದ ಸಮುಚ್ಚಾಯಕವಾಗಿದೆ. ಇದರ ಬದಲು ಗಡಿಕನ್ನಡದಲ್ಲಿ 'ಭೀ' ಎಂಬ ಹಿಂದುಸ್ತಾನಿಯ ಸಮುಚ್ಚಯ ಪ್ರತ್ಯಯವು ಪ್ರಯೋಗದಲ್ಲಿದೆ :

ಉದಾ :

ನಾ ಭೀ ಬರತೇನ	'ನಾನೂ ಬರುತ್ತೇನೆ'
ಅವ್: ಭೀ ಬರತಾ	**'ಅವನೂ ಬರುತ್ತಾನೆ'**

ಅಲ್ಲದೆ ಅಯಿನ್ತ / ayintə / **ಅಥವಾ ಅಯಿನ್ದ** / ayində / ಎಂಬುದು ಸಮುಚ್ಚಾಯಕದಂತೆ ಕಾರ್ಯ ಮಾಡುತ್ತದೆ.

ಉದಾ :

'ನೀ ಬಾ ಅಯಿಂತ'	'ನೀನು ಬಾ ಮತ್ತೆ'

ಕಾಲಗಳನ್ನು ಕುರಿತ ಕೆಲವು ವಿಶೇಷಸಂಗತಿಗಳು :

ವರ್ತಮಾನಕಾಲ : ಪ್ರ. ಪು., ಏಕವಚನ, ಪುಲ್ಲಿಂಗ :

ಬಡಿತಾ (ಗ),	ಬಡುತಾನ (ರಾ),	ಬಡಿತಾನ (ಬೈ.ಗೋ)	'ಬಡೆಯುತ್ತಾನೆ'
ಕಡಿತಾ ,,	ಕಡುತಾನ ,,	ಕಡಿತಾನ ,,	'ಕಡಿಯುತ್ತಾನೆ'

ಭೂತಕಾಲ : ಪ್ರ. ಪು. ಏಕವಚನ ಪುಲ್ಲಿಂಗ :

ಹೇಳಿದಾ (ಗ)	ಹೇಳಿದಾನ	(ರಾ, ಬೈ, ಗೋ)	'ಹೇಳಿದ್ದಾನೆ'
ಮಾಡಿದಾ ,,	ಮಾಡಿದಾನ	,,	'ಮಾಡಿದ್ದಾನೆ'
ಕರದ್ದಾ ,,	ಕರದ್ದಾನ	,,	'ಕರೆದಿದ್ದಾನೆ'
ಬ(ಭ)ಯಿಂದಾ	ಬಂದಾನ	,,	'ಬಂದಿದ್ದಾನೆ'

ಪ್ರ. ಪು. ಏಕವಚನ ಸ್ತ್ರೀಲಿಂಗ :

ಹೇಳಿದಾಳ, ಹೇಳಿಯಾಳ (ಗ)	ಹೇಳಿದಾಳ	(ರಾ,ಬೈ,ಗೋ)	'ಹೇಳಿದ್ದಾಳೆ'
ಮಾಡಿದಾಳ, ಮಾಡಿಯಾಳ (ಗ)	ಮಾಡಿದಾಳ	,,	'ಮಾಡಿದ್ದಾಳೆ'

ಪ್ರ. ಪು. ಏಕವಚನ ನಪುಂಸಕಲಿಂಗ :

ಹೋತು	(ಗ)	ಹೋತಿ	(ಬೈ,ರಾ,ಗೋ)	'ಹೋಯಿತು'
ತಿತ್ತ, ಚಿತ್ತ	,,	ತಿಂತು, ತಿಂತ	,,	'ತಿಂದಿತು'
ತಿತ್ತು, ಚಿತ್ತು	,,			,,
ತತ್ತ, ತತ್ತು		ತಂತ, ತಂತು		'ತಂದಿತು'
ಖು(ಕು)ತ್ತ್ಯ, ಖು(ಕು)ತ್ತ್ಯು	,,	ಕುಂತ್ಯ, ಕುಂತ್ಯು	,,	'ಕುಳಿತಿತು'

ಉ. ಪು. ಏಕವಚನ :

ಹೇಳ್ನ್ಯ	(ಗ)	ಹೇಳನಿ (ಬೈ. ಗೋ, ರಾ)	'ಹೇಳಿದೆನು'
ಬಂದ್ನ್ಯ	,,	ಬನ್ನಿ ,,	'ಬಂದೆನು'
ತಂದ್ನ್ಯ	,,	ತನ್ನಿ ,,	'ತಂದೆನು'
ಕ್ವಂದ್ನ್ಯ	,,	ಕ್ವಂದ್ನಿ, ಕ್ವನ್ನಿ ,,	'ಕೊಂದೆನು'

ಈ ಪ್ರಭೇದಗಳಲ್ಲಿ ಭವಿಷತ್ಕಾಲ ಸೂಚಿಸಲು ಪ್ರತ್ಯೇಕವಾದ ರೂಪವಿಲ್ಲ. ವರ್ತಮಾನಕಾಲದ ಕ್ರಿಯಾರೂಪವೇ ಭವಿಷತ್ಕಾಲವನ್ನೂ ನಿರಂತರಕಾಲವನ್ನೂ ಸೂಚಿಸುತ್ತದೆ.

ಈ ಪ್ರಭೇದಗಳಲ್ಲಿ 'ಅದೆ' (= 'ಇದೆ') ಎಂಬ ಕ್ರಿಯಾರೂಪವು ಕೆಳಗಿನಂತೆ ಕಂಡುಬರುತ್ತದ.

ಯೇತಿ (ಗ) ಅ:ತಿ (ə:ti) (ಬೈ,ರಾ,ಗೋ) ಅದ (ಬ್ರಾ) ಅದೆ = ಇದೆ

ಗಡಿ ಕನ್ನಡದಲ್ಲಿ ನಿಷೇಧ ರೂಪಗಳು ಕೆಳಗಿನಂತೆ ಇವೆ.

ಮಾಡಾಣೆಲ್ಲ	=	'ಮಾಡಿಲ್ಲ'	ಅಥವಾ	'ಮಾಡಲಿಲ್ಲ'
ಹೇಳಾಣೆಲ್ಲ	=	'ಹೇಳಿಲ್ಲ'	,,	'ಹೇಳಲಿಲ್ಲ'
ಬರಾಣೆಲ್ಲ	=	'ಬರಲಿಲ್ಲ'	,,	'ಬಂದಿಲ್ಲ'

ಕೆಲವೊಮ್ಮೆ ಇವೇ ರೂಪಗಳು ವರ್ತಮಾನ, ಭವಿಷತ್ಕಾಲಗಳಲ್ಲೂ ಪ್ರಯೋಗ ಗೊಳ್ಳುತ್ತವೆ.

ವಿಧಿ : ಮ. ಪು. :

ಗಡಿ	:	ಹೇಳ, ಹೇಳೋ. ಹೇಳಲಕೋ	'ಹೇಳು'. 'ಹೇಳೋ'
ಗೋಕಾಕ	:	ಹೇಳಾಕೊ, (ಹೇಳಾಕ್ರಿ, ಹೇಳಾಕಪಾ)	,,
ಉಳಿದೆಡೆಗಳಲ್ಲಿ	:	ಹೇಳ, ಹೇಳು	,,

ಗಡಿ : ಬಾ, ಬಾರೋ, ಬಾನೋ, ಬಾರಲಕೋ 'ಬಾ', 'ಬಾರೋ'
ಗೋಕಾಕ : ಬರಾಕೊ, (ಬರಾಕ್ರಿ)
ಇತರೆಡೆಗಳಲ್ಲಿ : ಬಾ, ಬಾರೊ, (ಬರ್ರಿ)

ಗಡಿ : ತಾ, ತಾರೋ, ತಾನೊ, ತಾಲಕೊ 'ತಾ', 'ತಾರೊ'
ಗೋಕಾಕ : ತರಾಕೊ (ತರಾಕ್ರಿ) ,,
ಉಳಿದೆಡೆಗಳಲ್ಲಿ : ತಾ, ತಾರೊ, (ತರ್ರಿ) ,,

ಸಂಬೋಧನೆಯಲ್ಲಿ ತಮ್ಮ ಸಮಾನರು ಅಥವಾ ತಮಗಿಂತ ಕೀಳಾದವರನ್ನು ಕರೆಯುವಾಗ 'ಯಾ' ಪ್ರತ್ಯಯ ಸೇರಿಸುವುದು ಇಲ್ಲಿ ಬಹು ಸಾಮಾನ್ಯ.

ಉದಾ :

ಕಲ್ಲಪ್ಪ > ಕಲ್ಲ್ಯಾ, ಸಿಂಗಪ್ಪ > ಸಿಂಗ್ಯಾ, ಬಸಪ್ಪ > ಬಸ್ಯಾ,

ಈ ರೀತಿ 'ಯಾ' ಪ್ರತ್ಯಯ ಸೇರಿದ ಕೆಲವು ರೂಪಗಳು ಸಂಬೋಧನೆಯಲ್ಲದಲ್ಲಿಯೂ ಕಂಡುಬರುತ್ತವೆ.

ಉದಾ :

ಮಂಗ್ಯಾ	'ಮಂಗ'	ಸೂರ್ಯಾ	'ಸೂರ್ಯ'
ಅಳ್ಯಾ	'ಅಳಿಯ'	ಶಾಣ್ಯಾ	'ಜಾಣ'
ಹಿರ್‍ಯಾ	'ಹಿರಿಯ'	ಕಿರ್‍ಯಾ	'ಕಿರಿಯ'

ಸ್ತ್ರೀಲಿಂಗದಲ್ಲಿ –ಇ ಸೇರಿಸಿ ಸಂಬೋಧಿಸಲಾಗುತ್ತದೆ.

ಉದಾ :

ಕಲ್ಲವ್ವ > ಕಲ್ಲಿ, ಸಿಂಗವ್ವ > ಸಿಂಗಿ, ಬಸವ್ವ > ಬಸ್ಸಿ,

ತಾಯಿ ಅಥವಾ ಅವಳಿಗೆ ಸಮಾನಳಾದ ಸ್ತ್ರೀಯನ್ನು –ಬೆ ಎಂದು ಸಂಬೋಧಿಸಲಾಗುತ್ತದೆ. (ಇದು ಗಡಿ ಕನ್ನಡದಲ್ಲಿಲ್ಲ)

ಎಬೆ, ಬಾರಬೆ, ಉಣಸಬೆ ('ಉಣ್ಣಿಸು')

ಗಡಿ ಕನ್ನಡದಲ್ಲಿ ಚಿಕ್ಕ ಬಾಲಕರನ್ನು ಕರೆಯುವಾಗ –ಅಪು, –ಅಪ್ಪು, –ಪು, ಅಪಯ್, ಅಪ್ಪಯ್ ಮುಂತಾದ ಪದಗಳನ್ನೂ ಸೇರಿಸಲಾಗುತ್ತದೆ.

ಉದಾ :

ಬಾರಪು, ಬಾರಪ್ಪು, ಅಪಯ್ ಇಲ್ಲಿ ಬಾ, ಅಪ್ಪಯ್ ಇಲ್ಲಿ ಬಾ.

ಬಾಲಕಿಯನ್ನು -ಅವ್ವ, ಅವ್ವಾ, ಅವಿ ಮುಂತಾದವುಗಳಿಂದ ಸಂಬೋಧಿಸಲಾಗುತ್ತದೆ.

ಬಾರವ್ವ, ಬಾ ಅವ್ವಾ, ಬಾ ಅವಿ, ಅವ್ವಿ ಇಲ್ಲಿ ಬಾ.

ಇತರೆಡೆಗಳಲ್ಲಿ -ಪ್ಪ, ಅಪ್ಪ, ತಮ್ಮಾ ಎಂದು ಬಾಲಕರಿಗೂ -ವ್ವ, ಅವ್ವ, ತಂಗಿ ಎಂದು ಬಾಲಿಕೆಯರಿಗೂ ಬಳಸಲ್ಪಡುತ್ತವೆ.

ಅಕಾರದಿಂದಾರಂಭವಾಗುವ ಸಂಬಂಧವಾಚಕಗಳು ಸಂಬೋಧನೆಯಲ್ಲಿ ಯ (>ಎ) ಕಾರದಿಂದೊಡಗೂಡಿ ಪ್ರಯೋಗಿಸಲ್ಪಡುತ್ತವೆ.

ಉದಾ :

ಯಕ್ಕಾ, ಯಣ್ಣಾ, ಯಪ್ಪಾ, ಯೆವ್ವಾ, ಯೆಮ್ಮಾ, ಯೆತ್ತಿ.

ಸ್ವೀಕೃತ ಪದಗಳನ್ನು ಇಲ್ಲಿ -ಆಸ (ಗಡಿ), -ಅಸ ಎಂಬ ಪ್ರತ್ಯಯ ಸೇರಿಸಿ ಕ್ರಿಯಾಧಾತುಗಳನ್ನಾಗಿ ಪರಿವರ್ತಿಸಲಾಗುತ್ತದೆ.

ಉದಾ :

ಬದಲಾಸ (ಗ)	ಬದಲಸ (ಬೈ, ಗೋ, ರಾ)	'ಬದಲಿಸು'
ತಟಾಸ ,,	ತಟಸ ,,	'ತಾಟಿಸು'
ಜಬರಾಸ ,,	ಜಬರಸ ,,	'ಜಬರಿಸು'

ಗಡಿ ಕನ್ನಡದಲ್ಲಿ ಮರಾಠಿ ಪದಗಳನ್ನು ಸ್ವೀಕರಿಸಿ -ಆಸ ಪ್ರತ್ಯಯ ಸೇರಿಸುವುದು ತೀರ ಸಾಮಾನ್ಯ.

ಉದಾ :

ಉಡಾಸ	'ಉಡಾಯಿಸು' = 'ಹಾರಿಸು'
ಬಿಗಡಾಸ	'ಬಿಗಡಾಯಿಸು' = 'ಕೆಡು'
ವಳಖಾಸ	'ಗುರುತಿಸು'
ಚಿಡಾಸ	'ಚಿಡಾಯಿಸು', 'ಪೀಡಿಸು'
ಜಿತಾಸ	'ಗೆಲ್ಲು'
ಹರಾಸ	'ಸೋಲು'
ಅಟಕಾಸ	'ಸಿಕ್ಕಿಕೊಳ್ಳು'
ಸುಚಾಸ	'ಹೊಳೆ', 'ತಿಳಿ'

ಈ ಎಲ್ಲ ಪ್ರಭೇದಗಳಲ್ಲಿ ಮುಖ್ಯ ಕ್ರಿಯಾಧಾತುವಿಗೆ ಹತ್ತು ಎಂಬುದನ್ನು ಸಹಾಯಕ ಕ್ರಿಯಾಪದವನ್ನಾಗಿ ಸೇರಿಸುವುದುಂಟು.

ಉದಾ :

ಹೋಗಾಕ ಹತ್ತಿದ್ದ	'ಹೋಗುತ್ತಿದ್ದನು'
ಹೋಗಾಕ ಹತ್ತಿದಾನ	'ಹೋಗುತ್ತಿದ್ದಾನೆ'
ಹೇಳಾಕ ಹತ್ತಿದಾ (ಗ)	'ಹೇಳುತ್ತಿದ್ದಾನೆ'
ಹೇಳಲಾಕ ಹತ್ತಿದ್ದ (ಗ, ಗೋ)	'ಹೇಳುತ್ತಿದ್ದನು'

ಬರಹಕನ್ನಡದ –ಓಣ ಪ್ರತ್ಯಯವು ಇಲ್ಲಿ –ಊನ(ಣ), ಊನು(ಣು) ಎಂದು ತೋರುತ್ತದೆ.

ಹೋಗೂನು	'ಹೋಗೋಣ'
ಹೋಗೂನ	,,
ಬರೂನು	'ಬರೋಣ'
ಬರೂನ	,,

ಈ ಜಿಲ್ಲೆಯ ಎಲ್ಲ ಭಾಗಗಳಲ್ಲಿ ಭೂತನ್ಯೂನ ರೂಪಗಳ ಮುಂದೆ –ಕರ, –ಕಸ, –ಕಾರ, –ಕಾಸ, –ಕ್ಯಾರ, –ಕ್ಯಾಸ, –ಕೇರಿ, –ಕೇಸಿ, –ಕರಿಂದ, –ಕಸಿಂದ, –ಕಾರಿಂದ, –ಕಾಸಿಂದ, –ಕೇರಿಂದ, –ಕೇಸಿಂದ ಎಂಬ ರೂಪಾವಳಿಯನ್ನು ಪ್ರಯೋಗಿಸುವುದು ಸಾಮಾನ್ಯವಾದ ರೂಢಿ. ಇವುಗಳಲ್ಲಿ –ಇಂದ ಸೇರಿದ ರೂಪಗಳು ಗಡಿಕನ್ನಡದಲ್ಲಿಯೂ ಉಳಿದವು ಉಳಿದೆಡೆಗಳಲ್ಲಿಯೂ ವಿಶೇಷ ರೂಢಿಯಲ್ಲಿವೆ.

ಉದಾ :

ನಾ ಹೋಗ್ ಕರ ಬತೇನ	'ನಾನು ಹೋಗಿ ಬರುತ್ತೇನೆ'
ನಾ ಹೋಗ್ ಕಸ ಬರತೇನ	,,
ನಾ ಹೋಗ್ ಕಾರ ಬರತೇನ	,,
ನಾ ಹೋಗ್ ಕಾಸ ಬರತೇನ	,,
ನಾ ಹೋಗ್ ಕ್ಯಾರ ಬರತೇನ	,,
ನಾ ಹೋಗ್ ಕ್ಯಾಸ ಬರತೇನ	,,
ನಾ ಹೋಗ್ ಕೇಸಿ ಬರತೇನ	,,
ನಾ ಹೋಗ್ ಕರಿಂದ ಬರತೇನ	,,
ನಾ ಹೋಗ್ ಕಸಿಂದ ಬರತೇನ	,,
ನಾ ಹೋಗ್ ಕೇರಿಂದ ಬರತೇನ	,,
ನಾ ಹೋಗ್ ಕೇಸಿಂದ ಬರತೇನ	,,

ಅತ್ತ, ಇತ್ತ, ಎತ್ತ ಎಂಬ ದಿಗ್ವಾಚಕಗಳನ್ನು ಗಡಿಕನ್ನಡದಲ್ಲಿ ಅತ್ತಲಾಗ, ಇತ್ತಲಾಗ, ಎತ್ತಲಾಗ ಎಂದೂ ರಾಮದುರ್ಗ ಪ್ರದೇಶದಲ್ಲಿ ಅತ್ತಾಗ, ಇತ್ತಾಗ, ಎತ್ತಾಗ ಎಂದೂ ಉಳಿದೆಡೆಯಲ್ಲಿ ಅತ್ತ, ಇತ್ತ, ಎತ್ತ ಎಂದೂ ಪ್ರಯೋಗಿಸಲಾಗುತ್ತದೆ.

ಇಲ್ಲಿಯ ಕನ್ನಡ, ಮರಾಠಿಯಿಂದ ಪ್ರಭಾವಿತವಾಗಿದೆಯೆಂದು ಹೇಳಿತಷ್ಟೇ. ಕೆಳಗಿನ ಕೆಲವು ಮರಾಠಿ ಶಬ್ದಗಳು ಇಲ್ಲಿ ವಿಶೇಷ ರೂಢಿಯಲ್ಲಿವೆ :

ಅಗದೀ	'ಅತೀ'
ಅಪೂಟ	'ತೀರಾ'
ದೀಡ	'ಒಂದೂವರೆ'
ರಗಡ	'ಬಹಳ'
ಶಿಲ್ಲಕ	'ಶಿಲ್ಕು'
ಲಾವಣಿ	'ಹೊಲವನ್ನು ಬೇರೆಯವರಿಗೆ ಉಳಲು ಕೊಡುವುದು'
ಟೇ(ಠೇ)ವಣಿ	'Deposit'
ಕೊ(ಖೊ)ಟ್ಟಿ	'ಸುಳು', 'ಖೋಟಾ'
ಕ(ಖ)ರೆ	'ಸತ್ಯ'
ಮೋಜಣಿ	'ಅಳತೆ'
ಪೀಕ	'ಬೆಳೆ' (ನಾ)
ಶಾಣ್ಯಾ	'ಜಾಣ'
ಶೇಂಗಾ	'ಶೇಂಗಾ', 'ನೆಲಗಡಲೆ'

ಗಡಿ ಕನ್ನಡದಲ್ಲಿ ಈ ಸ್ವೀಕರಣ ಅತಿಯಾಗಿದೆ. ಅಲ್ಲಿ ಸಂಖ್ಯಾವಾಚಕಗಳೆಲ್ಲ ಮರಾಠಿಯಿಂದ ಬಂದಿವೆ. ದಿನನಿತ್ಯ ಬಳಕೆಯ 'ವಯಿನಿ' (ಅತ್ತಿಗೆ), ಮಾವ್ಶಿ(ಚಿಕ್ಕಮ್ಮ), ಬಾತ್ಮಿ (ಸುದ್ದಿ), ಗಪ್‌ಚಿಪ್ (ಗುಪ್ತವಾಗಿ), ಹಳುಹಳು (ಸಾವಕಾಶ), ಥಾಮಣಿ (ತಡೆ, ಸೈರಣೆ) ಮುಂತಾದ ತಬ್ದಗಳೂ ಮರಾಠಿಯ ಸ್ವೀಕರಣಗಳೆ.

ಮಾದರಿಗಾಗಿ ಈ ಪ್ರದೇಶದಲ್ಲಿ ಬಳಕೆಯಲ್ಲಿರುವ ಕೆಲವು ವಿಶಿಷ್ಟ ಪದಗಳ ಸಂಗ್ರಹವನ್ನು ಕೆಳಗೆ ಕೊಟ್ಟಿದೆ.

ಗಡಿ	ಬೈ, ಗೋ, ರಾ	
ಪೋರ	ಹುಡಗ	'ಹುಡುಗ'
ಪೋರಿ	ಹುಡಗಿ	'ಹುಡುಗೆ'
ವನಗಿ	ಪಲ್ಲೆ	'ಪಲ್ಯ'
ಖಿಯ್	ಇಸಾ	'ವಿಷ, ಕಹಿ'

ಗಡಿ	ಬೈ. ಗೋ. ರಾ	
ಮಂದಿ	ಮಂದಿ	'ಜನ'
ಚಟಗಿ	ಕುಡಿಕಿ, ಮಿಳ್ಳಿ	'ಕುಡಿಕೆ'
ಭಾಂಗ	ಬೋತೊಲೆ. ಬೋತಾಲಿ, ಬೋತಲಿ	'ಬೈತಲೆ'
ಕ(ಖ)ಳವ	ಕಳಸ	'ಕಳುಹಿಸು, ಕಳಸು'
ತ(ಥ)ಮಗಿ	ತ್ಯಂಬಿಗಿ, ಚರಿಗಿ	'ತಂಬಿಗೆ'
ಹೊಯ್ಕ	ಅಚ್ಚೀರೆ	'ಆಶ್ಚರ್ಯ'
ಉಸಲ	ಉಸಲ	'ಉಸಿರು'
ಅಮಟಿ	ಬ್ಯಾಳಿ	'ಬೇಳೆ, ಸಾರು'
ಝುಣಕ	ಹಿಟ್ಟಿನ ಪಲ್ಲೆ	—
ಗನಸ	ಗಂಡ್ಸ	'ಗಂಡಸು'
ಹೆಗ್ಸಿ	ಹೆಂಗ್ಸ	'ಹೆಂಗಸು'
ಹತೀಲಿ. ಹತ್ಯಾಕ	ಹಂತೇಕ	'ಹತ್ತಿರ'
ಹುಂಚಿ	ಹುಂಚಿ	'ಹುಣಸೆ'
ಹುನಕ	ಹುಡಕ	'ಹುಡುಕು'
ಹಡ್ಡ	ಹಡ್ಡ	'ಹರಡು' (ಧಾ)
ಟ(ಠ)ಂಪಿ	ಟ್ವಂಗಿ, ತ್ವಂಗಿ, ಕ್ವಂಗಿ	'ಟೊಂಗೆ'
—	ತ್ವಾಟಿ	'ತೋಟ, ತೊಗಟೆ'
—	ತಟ್ವಾಗು	'ಬದಿಗೆ ಸರಿ, ದೂರ ಸರಿ'
ಮೆಟ್ಟ, ಕಾಲಮರ್ಗಿ	ಕಾಲಮರಿ, ಕಾಲಮರ್ಗಿ ಕೆರವ	'ಕೆರವು'
ಚಪ್ಪಲಿ	ತಟ್ಲಿ	'ಹೆಣ್ಣುಮಕ್ಕಳ ಚಪ್ಪಲು'
ಗುಮ್ಮ	ಆಳ	'ಆಳ'
ಊದ	ಓದ	'ಓದು'
ಉಡಗೋಲ	ಕಸಬರಿಗಿ, ಹಿಡಿ	'ಪೊರಕೆ'
ಗುಂಡಿ	ಬಿಡ್ಡಿ, ಬುಡ್ಡಿ (ರಾ)	'ಗುಂಡಿ'
ಬಾಗ್ಲ	ಬಾಗ್ಲ, ಬಾಕ್ಲ (ರಾ)	'ಬಾಗಿಲು'
—	ಲಕ್ಕ	'ಉತ್ತಮ'
ಗೌಂಡಿ	ಉಪ್ಪಾರ	'ಉಪ್ಪಾರ'

ಗಡಿ	ಬೈ, ಗೋ, ರಾ	
—	ತತ್ರಾಣ್ಗೆ	'ಹೊಲಕ್ಕೆ ನೀರು ತುಂಬಿ ಕೊಂಡು ಒಯ್ಯುವ ಮಣ್ಣಿನ ಪಾತ್ರೆ'
ಚಿಪ್ಪಾಡಿ	ಚಿಪ್ಪಾಡಿ	'ದನಗಳು ತಿಂದು ಬಿಟ್ಟ ಮೇವು'
ಕಿ(ಖಿ)ಚಡಿ	ಕಿಚಡಿ	'ಅನ್ನ'
ತಾ(ಥಾ)ಟ	ತಾಟ	'ಮನೆಯ ಮೇಲ್ಭಾಗ'
ಸೀಪ	ಸೀಪ	'ಚೀಪು'
ಬುಡಬೆದರು	ಮಯ್ನೆರಿ	'ಮೈ ನೆರೆ'
ಗಟ್ಟಬೀಳು	ಬೆಟ್ಟಿಯಾಗು	'ಭೆಟ್ಟಿಯಾಗು'
ಪೈಸ	ಬಯ್ಲು	'ಬಯಲು'
ಗಂಡಾ	ಅಂಡಿ	'ನಾಲ್ಕರ ಗುಂಪು'
ಸೇಂದ	ಸೇದ	'ಸೇದು'

ಈವರೆಗೆ ಈ ಜಿಲ್ಲೆಯ ಧ್ವನಿ, ವ್ಯಾಕರಣ ಮತ್ತು ಕೆಲವು ವಿಶಿಷ್ಟ ಪ್ರಯೋಗಗಳನ್ನು ಕುರಿತು ವಿವೇಚಿಸಲಾಯಿತು. ಇಲ್ಲಿ ಪ್ರಮುಖವಾದ ಅಂಶಗಳನ್ನು ಎತ್ತಿ ಹೇಳಿದೆ. ನೆರೆಯ ಭಾಷೆಯಾದ ಮರಾಠಿಯಿಂದ ಇಲ್ಲಿಯ ಕನ್ನಡವು ಸ್ವೀಕರಿಸಿರುವುದನ್ನು ಅಲ್ಲಲ್ಲಿ ಎತ್ತಿತೋರಿಸಿದೆ. ಇದಲ್ಲದೆ ಹಿಂದುಸ್ತಾನಿಯಿಂದಲೂ ಅಂಥ ಸ್ವೀಕರಣ ನಡೆದಿದೆ. ಹಕ್ಕ, ಹಾಸಿಲ, ತಾಲೂಕ, ಜಿಲ್ಲಾ, ಕಚೇರಿ, ಫೌಜದಾರ, ಇನಾಮದಾರ, ಲಿಲಾವ, ಶ್ಯಾರ (ಶಹರ), ನಸೀಬ, ದವುಲ–ದವುಳ (< ದೌಲತ್), ದಾದ, ಪಿರಾದಿ (ಫಿರ್ಯಾದ), ಹರಕಾತ ಮುಂತಾದವು ಅಂಥ ಸ್ವೀಕೃತ ಶಬ್ದಗಳಲ್ಲಿ ಕೆಲವು. ಕನ್ನಡವು ಮರಾಠಿಯಿಂದ ಸ್ವೀಕರಿಸಿದಂತೆ ಅದಕ್ಕೆ ಎರವಲನ್ನು ಕೊಟ್ಟಿದೆ. ಅದೇ ರೀತಿ ಹಿಂದುಸ್ತಾನಿಗೆ ಎರವಲು ಕೊಟ್ಟಿದೆಯೆ ಎಂಬುದು ವಿಚಾರಾರ್ಹವಾದ ಸಂಗತಿ. ಈಗೀಗ ಟೇ(ತೇ)ಸನ, ರೇಲ್ವೆ, ಬಸ್ಸ, ಕಾರ, ರೋಡ, ಟ್ರ(ಟ)ಕ್ಕ, ಲಾಯಿಟ, ಮಿಸೇನ, ರೇಡವೆ ಮುಂತಾದ ಇಂಗ್ಲಿಷ ಪದಗಳು ತೀರ ಅಶಿಕ್ಷಿತರಲ್ಲಿಯೂ ಬಳಕೆಯಾಗ ಹತ್ತಿವೆ. ಸುಶಿಕ್ಷಿತರ ಸ್ವೀಕರಣಕ್ಕಂತೂ ಮಿತಿಯೆ ಇಲ್ಲ. ಹೀಗೆಯೆ ಇನ್ನು ಒಂದೆರಡು ದಶಕಗಳ ಕಾಲ ನಡೆದುದಾದರೆ ಕನ್ನಡ ಭಾಷೆಯ ಮೂಲ ಧ್ವನಿ ಮತ್ತು ಆಕೃತಿಮಾ ವ್ಯವಸ್ಥೆ ಪೂರ್ಣ ವ್ಯತ್ಯಸ್ತಗೊಳ್ಳುವುದರಲ್ಲಿ ಸಂಶಯವಿಲ್ಲ.

• •

ಧಾರವಾಡ ಜಿಲ್ಲೆಯ ಕನ್ನಡ

• ವಿಲ್ಯಂ ಮಾಡ್ತ

೦.೧ ಭಾರತದ ಪ್ರಾಚೀನಭಾಷೆಗಳಲ್ಲಿ ಅಂತೆಯೇ ದಕ್ಷಿಣದ್ರಾವಿಡಗಳಲ್ಲಿ ತುಂಬ ಗಮನಾರ್ಹವಾದ ಕನ್ನಡಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ವುಂಟು. ಕಾವೇರಿಯಿಂದ ಗೋದಾವರಿಯ ವರೆಗೆ ಹರಡಿದ್ದ ವಿಸ್ತಾರವಾದ ಕನ್ನಡ ನಾಡಿನಲ್ಲಿ ಪ್ರಾಚೀನಕಾಲದಲ್ಲಿಯೇ ಉಪಭಾಷೆಗಳಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ದೋಷಮಿನಿತೆಂದು ಬಗೆದು
ದ್ಭಾಷಿಸಿ ತಱಸಂದು ಕನ್ನಡಂಗಳೊಳೆಂದುಂ
ವಾಸುಗಿಯುಮಱಯಲಾಱದೆ
ಬೇಸಱಗುಂ ದೇಶಿ ಬೇಱೆವೇಱಪ್ಪುದಱಂ ॥ (೧–೪೬)

ಎಂಬ ಕವಿರಾಜಮಾರ್ಗದ ಪದ್ಯ, ಈ ಅಂಶವನ್ನು ವ್ಯಕ್ತಪಡಿಸುತ್ತದೆ.

೦.೨ ಹೀಗೆ ಅನೇಕ ಭಾಷಾಪ್ರಭೇದಗಳು ಚಲಾವಣೆಯಲ್ಲಿದ್ದಾಗ, ಅವುಗಳೆಲ್ಲಕ್ಕೂ ಪ್ರಾತಿನಿಧಿಕಸ್ಥಾನದಲ್ಲಿರಬಹುದಾದ, ಅನುಕರಣಯೋಗ್ಯವಾದ ಶಿಷ್ಟಭಾಷೆಯೊಂದು ಅಂದು ರೂಢಿಯಲ್ಲಿದ್ದಿರಬೇಕೆಂಬುದು ನಿಸ್ಸಂದೇಹ. ಇದನ್ನೇ ಕವಿರಾಜಮಾರ್ಗಕಾರನು

ಅದಱೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕು
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ (೧–೩೭)

ಎಂಬ ಪದ್ಯದ ಮೂಲಕ "ಕನ್ನಡದ ತಿರುಳ್" ಎಂದು ಹೇಳಿದ್ದಾನೆ. ಹೀಗೆ ಕವಿರಾಜಮಾರ್ಗಕಾರನು ಗುರುತಿಸಿದ ಕನ್ನಡ ತಿರುಳ್ ಅಥವಾ ಶಿಷ್ಟಕನ್ನಡವನ್ನು

ರಾಜದ್ರಾಜಕಮೆನಿಸಿದ
ಸಾಜದ ಪುಲಿಗೆಱೆಯ ತಿರುಳಕನ್ನಡದೊಳ್ ನಿ
ರ್ವ್ಯಾಜದೆಸಕದೊಳೆ ಪುದಿದೊಂ
ದೋಜೆಯ ಬಲದಿನಿಯ ಕವಿತೆ ಪಂಪನ ಕವಿತೇ ॥ (೧೪–೫೮)

ಎಂಬ ಪದ್ಯದಲ್ಲಿ ಪಂಪನೂ ಅನುಮೋದಿಸಿದ್ದಾನೆ.

೦.೩ ರನ್ನನು ಈ ಕನ್ನಡವನ್ನೇ "ಎರಡಱುನೂಱಱ ಕನ್ನಡವಾ ತಿರುಳ ಕನ್ನಡಂ" ಎಂದಿದ್ದಾನೆ. ಈ ಕಿಸುವೊಳಲ್, ಮಹಾಕೊಪಣನಗರ, ಪುಲಿಗೆಱೆ ಒಕ್ಕುಂದಗಳ ಮಧ್ಯಭಾಗ "ಕನ್ನಡದ ತಿರುಳ್"; ಎಂದರೆ, ಇಂದಿನ ಧಾರವಾಡದ ಸುತ್ತಮುತ್ತಲಿನ ಪ್ರದೇಶವೆಂದು ಇಲ್ಲಿ ಗಮನಕ್ಕೆ ತರಬೇಕಾದ ವಿಷಯ. ಕಲ್ಯಾಣ, ಬಳ್ಳಿಗಾವಿಗಳ ಮಧ್ಯದ ಈ ಕನ್ನಡ, ಹನ್ನೆರಡನೆಯ ಶತಮಾನದಲ್ಲಿ ಶಿವಶರಣರಿಂದಾಗಿ ಅನುಭಾವದ ಅಭಿವ್ಯಕ್ತಿಗೆ "ಮಾತೆಂಬ ಜ್ಯೋತಿರ್ಲಿಂಗ"ವಾಯಿತು.

೦.೪ ಬಸವಣ್ಣನವರ ನೇತೃತ್ವದಲ್ಲಿ ಸಾಮಾನ್ಯವಾಗಿ ಉತ್ತರಕರ್ನಾಟಕ ಧಾರ್ಮಿಕ, ರಾಜಕೀಯ ಮತ್ತು ಸಾಹಿತ್ಯಿಕ ಚಟುವಟಿಕೆಗಳ ಕೇಂದ್ರವಾಗಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಕನ್ನಡನಾಡಿನ ಮೂಲೆ ಮೂಲೆಗಳಿಂದ ನಾನಾ ವೃತ್ತಿಯ, ನಾನಾ ಜಾತಿಯ, ಭಿನ್ನಭಿನ್ನ ಸಂಸ್ಕಾರದ ಅನೇಕ ಆಚಾರ-ವ್ಯವಹಾರಗಳ ಜನ ಬಂದು ನೆರೆದು, ಸಹೋದರಭಾವದಿಂದ ಬಾಳಿ ಭಾಷೆಯನ್ನು ಬೆಳೆಯಿಸಿದರು. ತತ್ಪರಿಣಾಮವಾಗಿ ಪ್ರಮಾಣಭಾಷೆ (Standard language) ಯೊಂದು ಸಿದ್ಧ ವಾಯಿತು.

೦.೫ ಅಂದಿನ ಈ ಪ್ರಮಾಣಭಾಷೆ ಇಂದಿಗೂ ಕಾಲಸಹಜವಾದ ಬದಲಾವಣೆ ಗಳನ್ನು ಹೊಂದಿ, ಧಾರವಾಡ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತನ್ನ ವಿಶಿಷ್ಟಸ್ಥಾನವನ್ನು ಉಳಿಸಿಕೊಂಡುಬಂದಿವೆ. ಉತ್ತರಕರ್ನಾಟಕ ಕನ್ನಡದ ಈ ವಿಶಿಷ್ಟ ಪ್ರಭೇದವನ್ನು ಧಾರವಾಡಕನ್ನಡವೆಂದು ಕರೆಯುವುದು ತಪ್ಪಾಗಲಾರದು.

೦.೬ ಉತ್ತರಕ್ಕೆ ವಿಜಾಪುರ ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆ. ಪೂರ್ವಕ್ಕೆ ರಾಯಚೂರು, ಬಳ್ಳಾರಿ ಜಿಲ್ಲೆಗಳು; ಪಶ್ಚಿಮಕ್ಕೆ ಬೆಳಗಾವಿ ಜಿಲ್ಲೆಗಳಿಂದ ಆವೃತವಾದ ಧಾರವಾಡ ಜಿಲ್ಲೆ ಸಾಹಿತ್ಯಿಕವಾಗಿ, ರಾಜಕೀಯವಾಗಿ, ಇಡೀ ಉತ್ತರಕರ್ನಾಟಕದ ಬದುಕನ್ನು ರೂಪಿಸುವ ಕೇಂದ್ರಶಕ್ತಿಯನ್ನು ಪಡೆದಿದೆ. ರಾಜಕೀಯವಾಗಿ ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರ, ಮುಸಲ್ಮಾನ, ಮರಾಠ, ಬ್ರಿಟಿಷ್– ಹೀಗೆ ಸಾಮಾನ್ಯವಾಗಿ ಎಲ್ಲ ಅರಸರ ಆಡಳಿತಕ್ಕೂ ಒಳಗಾದ ಈ ಜಿಲ್ಲೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕು ಹಾಗೆಯೇ ಭಾಷೆ ವೈಶಿಷ್ಟ್ಯಪೂರ್ಣವೆನಿಸಿವೆ.

೦.೭ ಧಾರವಾಡ ಜಿಲ್ಲೆಯ ಕನ್ನಡದ ವಿಶಿಷ್ಟತೆ "ಬರೆಪುಬೊಕ್ಕ" ಭಾಷೆಗಿಂತ, ಜನರು ದಿನಬಳಕೆಯಲ್ಲಿ ಬಳಸುವ ಮಾತಿನಲ್ಲಿ ಹೆಚ್ಚಾಗಿ ಕಂಡುಬಂದರೂ ಕೆಲವೊಮ್ಮೆ ಸಾಹಿತ್ಯದಲ್ಲಿಯೂ ನುಸುಳಿಬರುವುದನ್ನು ಕಾಣಬಹುದು. ದ. ರಾ. ಬೇಂದ್ರೆಯವರ ಹಲವಾರು ಕವನಗಳು ಇದಕ್ಕೆ ನಿದರ್ಶನ. ಪ್ರಸ್ತುತ ಪ್ರಬಂಧ ಧಾರವಾಡ ಜಿಲ್ಲೆಯ ಕನ್ನಡದ ಧ್ವನಿಮಾ, ನಾಮಪದ, ಸರ್ವನಾಮಪದ, ಸಂಖ್ಯಾವಾಚಕ ಮತ್ತು ಕ್ರಿಯಾ ಪದಗಳ ಸ್ಥೂಲವಿವೇಚನೆಯಾಗಿದೆ.

೧.೦ ಧ್ವನಿಮಾ :

೧.೧ ಸ್ವರಗಳು :

೧.೧೧ ಧಾರವಾಡ ಕನ್ನಡದಲ್ಲಿ ಸ್ವರಗಳು ಎಂಟು :

ಜಿಹ್ವೋನ್ನತಿ	ಪೂರ್ವ ವಿಸ್ತೃತೋಷ್ಠ	ಮಧ್ಯ ವಿಸ್ತೃತೋಷ್ಠ	ಪಶ್ಚ ವೃತ್ತೋಷ್ಠ
ಉನ್ನತ	/i/ ಇ		ಉ /u/
ಉನ್ನತ–ಮಧ್ಯ	/e/ ಎ		ಒ /o/
ನಡುಮಧ್ಯ		/ə/ ಅ̣	
ಅವನತಮಧ್ಯ	/æ/ ಆ್ಯ		ಒ̱ /ɔ/
ಅವನತ		/a/ ಅ	

೧.೧೨ ದೀರ್ಘತ್ವ (length) ಮತ್ತು ನಾಸಿಕ್ಯತೆ (nasalization) ಗಳೂ ಧ್ವನಿಮಾಗಳಾಗಿವೆ.

೧.೧೩ ಪ್ರಸ್ತುತದಲ್ಲಿ ಸ್ವರಗಳನ್ನು ವಿರೋಧಪ್ರಸಾರ ತತ್ತ್ವ (The principle of contrast) ದ ಆಧಾರದ ಮೇಲೆ ನಿರ್ಣಯಿಸಿ ಕೆಲವು ಸಾಮಿಪ್ಯ/ಕನಿಷ್ಠತಮ ಯುಗ್ಮ (sub/minimal pair) ಗಳನ್ನು ಉದಾಹರಣೆಗಳಾಗಿ ಕೆಳಗೆ ಕೊಡಲಾಗಿದೆ.

ಕಿಡಿ	' particle of fire '	[kiṛi]	[ki:ṛi]	' an insect '	ಕೀಡಿ
ಕೆಡು	' spoil '	[keṛu]	[ke:ṛu]	' loss '	ಕೇಡು
ಮ್ಯಾರಿ	' appear, shine '	[mæri]	[mæ:ri]	' breakfast '	ಮ್ಯಾೕರಿ
ಮ̣ರಿ	' young one '	[məri]	[mari]	' hiding '	ಮರಿ
			[ma:ri]	' face '	ಮಾರಿ
ಕೊ̱ರಿ	' cut '	[kɔri]	[kɔ:ri]	'tusk of an elephent'	ಕೋೕರಿ
ಮೊರಿ	' lamentation '	[mori]	[mo:ri]	' opening '	ಮೋರಿ
ಕುಡಿ	' drink '	[kuṛi]	[ku:ṛi]	' having met '	ಕೂಡಿ
ಹೂ	' flower '	[hu:]	[hũ:]	' yes '	ಹೂಂ
ಕಾವು	' handle '	[ka:wu]	[kã:wu]	' fomentation '	ಕಾಂವು
ಆವು	' cow '	[a:wu]	[ã:wu]	' mucus '	ಆಂವು
ಬಾವಿ	' well '	[ba:wi]	[bã:wu]	' swelling '	ಬಾಂವು

೧.೧೪ **ಸ್ವರಪ್ರಸಾರ (Distribution of Vowel) :**

ಧ್ವನಿಮಾ (ಸ್ವರ)	ಉಪಧ್ವನಿ	ಸ್ಥಾನ		
		ಆದಿ	ಮಧ್ಯ	ಅಂತ್ಯ
/ಇ/	[ಇ]	ಇಳಿ 'get down'	ಗಿಳಿ 'parrot'	ಕೋಟಿ 'fort'
/ಈ/	[ಈ]	ಈಟಿ 'lance'	ಚೀರಿ 'having cried'	—
/ಎ/	[ಎ]	ಎರಿ 'black soil'	ಕೆರಿ 'tank'	ಇಲ್ಲೆ 'here'
/ಏ/	[ಏ]	ಏರು 'climb'	ಕೇರು 'clean'	—
/ಆ್ಯ/	[ಆ್ಯ]	—	ಮ್ಯಾರಿ 'shine'	—
/ಆ್ಯ‌ೀ/	[ಆ್ಯ‌ೀ]	—	ಪ್ಯಾೀಟಿ 'market'	ಮನ್ಗ್ಯಾೀ ['mangæ:'] 'monkey'
/ಅ̣/	[ಅ̣]	ಅ̣ಗಿ 'dig'	ಕ̣ರಿ 'fry'	ಅ̣ದ̣ '(it) is'
/ಆ̣/	[ಆ̣]	ಆ̣ಟು 'that much'	—	ಅದಾ̣ 'the same'
/ಅ/	[ಅ]	ಅಲ್ಲಿ 'there'	ಕದ 'door'	ಕ್ಯಾೀರ 'marking nut'
/ಆ/	[ಆ]	ಆರು 'six'	ಕಾರು 'vomit'	ಸೇವಾ 'service'
/ಒ̱/	[ಒ̱]	ಒ̱ಲಿ 'choola'	ಕೊ̱ಲಿ 'murder'	—
/ಓ̱/	[ಓ̱]	—	ಕೋ̱ಟಿ 'fort'	—
/ಒ/	[ಒ]	ಒಟ್ಟು 'altogether'	ಕೊಟ್ಟು 'having given'	ಎಬ್ಕೊ 'dig out'
/ಓ/	[ಓ]	ಓಡು 'run'	ಕೋಡು 'horn'	—
/ಉ/	[ಉ]	ಉರಿ 'burn'	ಕುಡಿ 'drink'	ಕೊಡು 'give'
/ಊ/	[ಊ]	ಊಟ 'meal'	ಕೂಟ 'join'	ಹೂ 'flower'

೧.೨ ವ್ಯಂಜನಗಳು :

೧.೨೧ ಉಚ್ಚಾರಣಾಸ್ಥಾನ (point of articulation) ಮತ್ತು ಉಚ್ಚಾರಣಾ ರೀತಿ (manner of articulation) ಗಳಿಗನುಗುಣವಾಗಿ ಧಾರವಾಡ ಕನ್ನಡದ ಇಪ್ಪತ್ತೊಂದು ವ್ಯಂಜನಗಳನ್ನು ಕೆಳಗೆ ಕೋಷ್ಟಕದಲ್ಲಿ ನಮೂದಿಸಲಾಗಿದೆ :

ಉಚ್ಚಾರಣಾ ರೀತಿ	ಘೋಷತ್ವ	ಉಚ್ಚಾರಣಾ ಸ್ಥಾನ					
		ಉಭಯೋಷ್ಠ್ಯ	ದಂತ್ಯ	ಪರಿವೇಷ್ಟಿತ	ತಾಲವ್ಯ	ಕಂಠ್ಯ	ಗಲೀಯ
ಸ್ಪರ್ಶ	ಅಘೋಷ	ಪ್	ತ್	ಟ್	ಚ್	ಕ್	
	ಘೋಷ	ಬ್	ದ್	ಡ್	ಜ್	ಗ್	
ಘರ್ಷ	ಅಘೋಷ		ಸ್		ಶ್		
	ಘೋಷ						ಹ್
ಅನುನಾಸಿಕ		ಮ್	ನ್	ಣ್			
ಪಾರ್ಶ್ವಿಕ			ಲ್	ಳ್			
ಕಂಪಿತ			ರ್				
ಅರೆವ್ಯಂಜನ		ವ್			ಯ್		

೧.೨೨ ಮೇಲೆ ಕಾಣಿಸಿದ ವ್ಯಂಜನಗಳನ್ನು ವಿರೋಧಪ್ರಸಾರ ತತ್ತ್ವದ ಆಧಾರದ ಮೇಲೆ ನಿರ್ಣಯಿಸಿ ಅವುಗಳಿಗೆ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ :

೧.೨೨೧ **ಆದಿಸ್ಥಾನದಲ್ಲಿ :**

/ಪ್/ ÷ /ಬ್/ ಪಡಿ 'two seers' /pəḍi/ /bəḍi/ 'beat' ಬಡಿ

/ತ್/ ÷ /ದ್/ ತಾಟು 'a plate' /ta:ṭu/ /da:ṭu/ 'cross' ದಾಟು

/ತ್/ ÷)ಟ್/ ತಾಕು 'touch' /ta:ku/ /ṭa:ku/ 'a pen' ಟಾಕು

/ಚ್/ ÷ /ಜ್/ ಚಿಗಿ 'sprout' /cigi/ /jigi/ 'jump' ಜಿಗಿ

/ಕ್/ ÷ /ಗ್/ ಕೆರಿ 'a tank' /keri/ /geri/ 'a line' ಗೆರಿ

/ಸ್/÷/ಶ್/÷/ಹ್/ ಸಾಲು 'a line' /sa:lu/ /śa:lu/ 'a blanket' ಶಾಲು
ಹಾಲು 'milk' /ha:lu/

/ಮ್/ ÷ /ನ್/ ಮಾಡು 'do' /ma:ḍu/ /na:ḍu/ 'a country' ನಾಡು

/ರ್/ ÷ /ಲ್/ ರಾಡಿ 'mud' /ra:ḍi/ /la:ḍi/ 'a thread' ಲಾಡಿ

/ವ್/ ÷ /ಯ್/ ವಾತ 'a disease' /wa:ta/ /ya:ta/ ' a picota' ಯಾತ

/ಯ್/ ÷ /ಜ್/ ಯಾತಗ 'why for' /ya:taga/ /ja:taga/ 'a horoscope' ಜಾತಗ

/ಮ್/ ÷ /ವ್/ ಮಾಲಿ 'a garland' /ma:li/ /wa:li/ 'an ear ornament' ವಾಲಿ

೧.೨೨೨ ಮಧ್ಯಸ್ಥಾನದಲ್ಲಿ :

/ಪ್/ ÷ /ಬ್/	ಸೇಪು 'relationship'	/se:pu/	/se:bu/	'an apple'	ಸೇಬು
/ತ್/ ÷ /ದ್/	ನಾತ 'smell'	/na:ta/	/na:da/	'sound'	ನಾದ
/ಟ್/ ÷ /ಡ್/	ಮಟ 'a monastery'	/maṭa/	/maḍa/	'deep water'	ಮಡ
/ಚ್/ ÷ /ಜ್/	ಕಾಚು 'cashew'	/ka:cu/	/ka:ju/	'glass'	ಕಾಜು
/ಕ್/ ÷ /ಗ್/	ಮಕ 'a face'	/maka/	/maga/	'a son'	ಮಗ
/ಮ್/ ÷ /ನ್/	ದ್ಯಾಮ 'name of a person'	/dæ:ma/	/dhæ:na/	'meditation	ಧ್ಯಾನ
/ನ್/ ÷ /ಣ್/	ಮನ 'mind'	/mana/	/maṇa/	'a maund'	ಮಣ
/ರ್/ ÷ /ಲ್/	ಮರಿ 'forget'	/mari/	/mali/	'breast'	ಮಲಿ
/ಲ್/ ÷ /ಳ್/	ಮಲಿ 'breast'	/mali/	/maḷi	'rain'	ಮಳಿ

೧.೨೨೩ ಸಜಾತಿ ದ್ವಿತ್ವದಲ್ಲಿ :

/ಪ್/ ÷ /ಬ್/	ತಿಪ್ಪಿ 'a heap'	/tippi/	/ṭibbi/	'design'	ಟಿಬ್ಬಿ
/ತ್/ ÷ /ದ್/	ಎತ್ತು 'an ox'	/ettu/	/eddu/	'having got up'	ಎದ್ದು
/ತ್/ ÷ /ಟ್/	ಕತ್ತಿ 'an ass'	/katti/	/kaṭṭi/	'pavement'	ಕಟ್ಟಿ
/ಕ್/ ÷ /ಗ್/	ನೆಕ್ಕು 'lick'	/nekku/	/neggu/	'bend'	ನೆಗ್ಗು
/ಚ್/ ÷ /ಜ್/	ಕ಼ಚ್ಚಿ 'having bitten'	/kəcci/	/kəjji/	'itch'	ಕ಼ಜ್ಜಿ
/ಮ್/ ÷ /ನ್/	ಅಮ್ಮ 'grand mother'	/amma/	/anna/	'food'	ಅನ್ನ
/ನ್/ ÷ / ಣ್/	ಅನ್ನ 'food'	/anna/	/aṇṇa/	'elder brother'	ಅಣ್ಣ
/ರ್/ ÷ /ಲ್/	ಕರ್ರಿ 'please call'	/karri/	/kalli/	'name of a girl'	ಕಲ್ಲಿ
/ಲ್/ ÷ /ಳ್/	ಕಲ್ಲಿ 'name of a girl'	/kalli/	/kaḷḷi/	'a female thief'	ಕಳ್ಳಿ

೧.೩ ಧ್ವನಿಪ್ರಭೇದಗಳು (Allophonic Variations) :

/ ಡ್ /

[ಡ಼್] [ṛ] ಘೋಷ ಪರಿವೇಷ್ಟಿತ ತಾಡಿತ, (voiced retroflex flap): ಏಕಾಕಿಯಾಗಿ ಸ್ವರಗಳ ನಡುವೆ : /ರಾಡಿ/ [ರಾಡ಼ಿ] 'mud' /ಜಡಿ/ [ಜಡ಼ಿ] 'beat'

[ಡ್] [ḍ] ಘೋಷ ಪರಿವೇಷ್ಟಿತ ಸ್ಪರ್ಶ, ಇತರಡೆಗಳಲ್ಲಿ : /ಡಬ್ಬಿ/ [ಡಬ್ಬಿ] 'a box' /ದಣ್ಡ/ [ದಣ್ಡ] 'a fine'.

/ ಚ್ /

[ಚ್] [tś] ಅಘೋಷ ತಾಲವ್ಯ ಅನುಘರ್ಷ (palatal affricate), ಪೂರ್ವ ಮತ್ತು ಮಧ್ಯಸ್ವರಗಳು ಪರವಾದಾಗ :

	/ಚಿಗಿ/	[ಚಿಗಿ]	'sprout'
	/ಚೀರು/	[ಚೀರು]	'cry'
	/ಚೆರಿ/	[ಚೆರಿ]	'a thread'
	/ಚೇರು/	[ಚೇ]	'a stomach discase'
/cæ:ḍi/	/ಚ್ಯಾೞಡಿ/	[ಚ್ಯಾೞಡಿ]	'slander'
	/ಚಾಕು/	[ಚಾಕು]	'a pen knife'
	/ಚ್ಚಡಿ/	[ಚ್ಚಡಿ]	'a stick'

[ತ್ಸ್] [tˢ] ವತ್ಸ್ಯ-ತಾಲವ್ಯ (alveo-palatal) ಅನುರ್ಘ, ಪಶ್ಚ ಸ್ವರಗಳು ಪರವಾದಾಗ :

/ಚುನ್ಗ/	[ತ್ಸುನ್ಗ]	'an end'
/ಚೂರು/	[ತ್ಸೂರು]	'a piece'
/ಚೊಳ್ಚ್ಗುಡ್ಡ/	[ತ್ಸೊಳ್ಚ್ಗುಡ್ಡ]	'name of a place'
/ಚೋಳು/	[ತ್ಸೋಳು]	'a scorpion'

/ ಜ್ /

[ಜ್] [d_z] ಘೋಷ ತಾಲವ್ಯ ಅನುಘರ್ಷ, ಪೂರ್ವ ಮತ್ತು ಮಧ್ಯ ಸ್ವರಗಳು ಪರವಾದಾಗ :

	/ಜಿಗಿ/	[ಜಿಗಿ]	'jump'
	/ಜೀರು/	[ಜೀರು]	'a florist'
	/ಜೇರು/	[ಜೇರು]	'serious'
/jæru/	/ಜ್ಯಾರು/	[ಜ್ಯಾರು]	'slip'
	/ಜಾಡಿ/	[ಜಾಡಿ]	'blanket'

[ದ್ಸ್] [d_z] ಘೋಷ ವತ್ಸ್ಯ ತಾಲವ್ಯ ಅನುಘರ್ಷ, ಪಶ್ಚ ಸ್ವರಗಳು ಪರವಾದಾಗ :

/ಜುಗ್ಗ/	[ದ್ಸುಗ್ಗ]	'double'
/ಜೂಜು/	[ದ್ಸೂದ್ಸು]	'a gamble'
/ಜೋಳ/	[ದ್ಸೋಳ]	'jawar'
/ಜೋರು/	]ದ್ಸೋರು]	'serious'

/ ಕ್ /

[ಕ್<] [k<] ಪೂರ್ವೀಯ (fronted) ಅಘೋಷ ಕಂಠ್ಯಸ್ಪರ್ಶ, ಪೂರ್ವ ಸ್ವರಗಳು ಪರವಾದಾಗ :

/ಕಿಡಿ/	[ಕಿ<ಡಿ]	'a spark'
/ಕೆಡು/	[ಕೆ<ಡು]	'spoil'

[ಕ್] [k] ಅ-ಪೂರ್ವೀಯ (non-fronted) ಅಘೋಷ ಕಂಠ್ಯಸ್ಪರ್ಶ, ಇತರೆಡೆಗಳಲ್ಲಿ :

/ಕದ/	[ಕದ]	'door'
/ಕೂಡು/	[ಕೂಡು]	'join'

/ ಮ್ /

[ಮ್] [ṁ] ಘೋಷ ದಂತೌಷ್ಠ್ಯ (labiodental) ಅನುನಾಸಿಕ, ಘರ್ಷಗಳು ಪರವಾದಾಗ :

/ಹಮ್ಸ/	[ಹಮ್ಸ]	'a swan' (ಹಂಸ)
/ಸಮ್ಸೆ/	[ಸಮ್ಸೆ]	'a doubt' (ಸಂಸೆ)
/ಸಮ್ಹಾರ/	[ಸಮ್ಹಾರ]	'destruction' (ಸಂಹಾರ)
/ಸಿಮ್ಹ/	[ಸಿಮ್ಹ]	'a lion' (ಸಿಂಹ)

[ಮ್] ಘೋಷ ಉಭಯೋಷ್ಠ್ಯ ಅನುನಾಸಿಕ, ಇತರೆಡೆಗಳಲ್ಲಿ :

/ಮಾಸ/	[ಮಾಸ]	'flesh'
/ನಾಮ/	[ನಾಮ]	'name'

/ ನ್ /

[ಞ್] [ñ] ಘೋಷ ತಾಲವ್ಯ ಅನುನಾಸಿಕ;
(ವತ್ಸ್ಯ-)ತಾಲವ್ಯ ಸ್ಪರ್ಶಗಳು ಪರವಾದಾಗ :

/ಅ̣ನ್ಜಿ/	[ಅ̣ಞ್ಜಿ]	'border'
/ಹ̣ನ್ಜಿ/	[ಹ̣ಞ್ಜಿ]	'cotton piece'
/ಹುನ್ಜ/	[ಹುಞ್ಜ]	'a cock'
/ಅ̣ನ್ಚು/	[ಅ̣ಞ್ತ್ಸು]	'border'
/ಪ̣ನ್ಜು/	[ಪ̣ಞ್ದ್ಸು]	'a fire-stick'

[ಙ್] [ṅ] ಘೋಷ ಕಂಠ್ಯ ಅನುನಾಸಿಕ; ಕಂಠ್ಯ ಸ್ಪರ್ಶಗಳು ಪರವಾದಾಗ :

/ಅನ್ಕ/	[ಅಙ್ಕ]	'act'
/ಸನ್ಗ್ಟ	[ಸಙ್ಗ್ಟ]	'trouble'

[ನ್] [n] ಘೋಷ ದಂತ್ಯ ಅನುನಾಸಿಕ; ಇತರೆಡೆಗಳಲ್ಲಿ :

/ಆನಿ/	[ಆನಿ]	'elephant'
/ನಾನು/	[ನಾನು]	'I'

/ ರ್ /

[ಱ್] [ṟ] ವರ್ತ್ಸ್ಯ ಕಂಪಿತ; ಸಜಾತಿ ದ್ವಿತ್ವದಲ್ಲಿ :

/ಬರ್ರಿ/	[ಬಱ್ಱಿ]	'please come'

[ರ್] [r] ವರ್ತ್ಸ್ಯ ತಾಡಿತ, ಇತರೆಡೆಗಳಲ್ಲಿ :

/ರ಼ಗತ/	[ರ಼ಗತ]	'blood'
/ರಾಡಿ/	[ರಾಡಿ]	'mud'
/ಮರ/	[ಮರ]	'tree'

/ ವ್ /

[ವ್$_3$] [w$_3$] ಘೋಷ ಪ್ರಬಲ ವೃತ್ತೋಷ್ಠ ಅರೆವ್ಯಂಜನ (strongly rounded voiced bilabial) ; ಪಶ್ಚಸ್ವರ ಪರವಾದಾಗ :

/ಕಾವು/	[ಕಾವು$_3$]	'heat'
/ಹಾವು/	[ಹಾವು$_3$]	'snake'
/ನೀವು/	[ನೀವು$_3$]	'you (pl)'

[ವ್$_2$] [w$_2$] ಘೋಷ ಅಲ್ಪಪ್ರಬಲ ವೃತ್ತೋಷ್ಠ್ಯ (less rounded) ಅರೆವ್ಯಂಜನ; ಮಧ್ಯಸ್ವರ ಪರವಾದಾಗ :

/ವಾರ/	[ವಾ$_2$ರ]	'week'

[ವ್$_1$] [w$_1$] ಘೋಷ ಅತ್ಯಲ್ಪ ಪ್ರಬಲ ವೃತ್ತೋಷ್ಠ್ಯ (slightly rounded) ಅರೆವ್ಯಂಜನ; ಪೂರ್ವಸ್ವರ ಪರವಾದಾಗ :

/ಹರಿವಿ/	[ಹರಿವಿ$_1$]	'a pot'

/ ಸ್ /

[ಷ್] [ṣ] ಪರಿವೇಷ್ಟಿತ ಘರ್ಷ (retroflex spirant/fricative); ಅಘೋಷ ಪರಿವೇಷ್ಟಿತಸ್ಪರ್ಶ ಪರವಾದಾಗ ಅಥವಾ ಅಘೋಷ ಕಂಠ್ಯಸ್ಪರ್ಶ ಪೂರ್ವದಲ್ಲಿದ್ದಾಗ :

/ಅಸ್ಟು/	[ಅಷ್ಟು]	'so much'
/ಕಸ್ಟ/	[ಕಷ್ಟ]	'misery'
/ಸಾಕ್ಸಿ/	[ಸಾಕ್ಷಿ]	'witness'

[ಸ್] [s] ಅಘೋಷ ಅಗ್ರ-ವತ್ಸ್ರ್ಯ; ಇತರೆಡೆ :

/ಸಾಲಿ/	[ಸಾಲಿ]	'school'
/ಕಸ/	[ಕಸ]	'weed'

/ ಹ್ /

[ಹ್̣] ಅಘೋಷ ಗಲೀಯ (glottal) ಘರ್ಷ, /ಕ್/ ಮತ್ತು /ಪ್/ ಪರವಾದಾಗ :

/ಅನ್ತಹ್ಕರಣ/	[ಅನ್ತಹ್̣ಕರಣ]	'pity'
/ಅನ್ತಹ್ಪುರ/	[ಅನ್ತಹ್̣ಪುರ]	'harem'

[ಹ್] ಘೋಷ ಗಲೀಯ ಘರ್ಷ; ಇತರೆಡೆ :

/ಹಾದಿ/	[ಹಾದಿ]	'road'
/ಹೊತ್ತು/	[ಹೊತ್ತು]	'time'

೧.೪ ಸ್ವಯಂಚಲಿಗಳು (Automatics) :

೧. ಪದಾದಿ ಸ್ಥಾನದಲ್ಲಿ ಉನ್ನತಮಧ್ಯಪೂರ್ವಸ್ವರಗಳು ಯಕಾರದೊಂದಿಗೂ, ಉನ್ನತ ಮಧ್ಯಸ್ವರಗಳು ವಕಾರದೊಂದಿಗೂ ಉಚ್ಚಾರಗೊಳ್ಳುತ್ತವೆ.

/ಎಲ್ಲಿ/	[ಯೆಲ್ಲಿ]	'where'
/ಏನು/	[ಯೇನು]	'what'
/ಒಂದು/	[ವೊಂದು]	'one'
/ಓಡು/	[ವೋಡು]	'run'

೨. ಸ್ವರಗಳು ಅನುನಾಸಿಕಗಳಿಗೆ ಪರವಾದಾಗ ತುಸು ನಾಸಿಕ್ಯತೆಯನ್ನು ಪಡೆದು ಕೊಳ್ಳುತ್ತವೆ.

/ಆನಿ/	[ಆನಿಂ]	'an elephant'
/ಕೋಣ/	[ಕೋಣಂ]	'he-buffalo'

೩. ಕೆಲವು ಪದಗಳಲ್ಲಿ ಮಕಾರ ಮತ್ತು ವಕಾರಗಳ ಹಿಂದಿನ ಸ್ವರಗಳು ಅನುನಾಸಿಕಗಳಾಗಿಯೂ ಉಚ್ಚಾರದಲ್ಲಿವೆ.

[ಕಾವು] ∽ [ಕಾಂವು] 'handle'
[ಹಾವು] ∽ [ಹಾಂವು] 'snake'
ಬೇಯು ∽ [ಬೇಂಯು] 'boil'

೪. ಪರಿವೇಷ್ಟಿತ ವ್ಯಂಜನಗಳ ಪೂರ್ವದಲ್ಲಿ ಬರುವ ಸ್ವರಗಳು ಪರಿವೇಷ್ಟಿತಗೊಳ್ಳುತ್ತವೆ.

/ಕಟ್ಟಿ/ [ಕಟ್ಟಿ] [kə̣ṭṭị] 'having tied'
/ಮುಡಿ/ [ಮುಡಿ] [mə̣ṛi] 'die'

೫. ಮುಕ್ತಬಾಹ್ಯ ವಿರಾಮದ (open external juncture) ಪೂರ್ವದಲ್ಲಿ ಹ್ರಸ್ವ ಸ್ವರಗಳು ಅರೆದೀರ್ಘ (half-length) ಸ್ವರಗಳಾಗುತ್ತವೆ.


/ಗಿಳಿ/ [ಗಿಳಿ·] 'parrot'
/ಇಳಿ/ [ಇಳಿ·] 'get down'

೨.೦ ನಾಮಪದ :

೨.೧ ನಾಮಪದ ರಚನೆ :

ನಾಮಪ್ರಕೃತಿ ± ವಚನಪ್ರತ್ಯಯ ± ವಿಭಕ್ತಿಪ್ರತ್ಯಯ.

೨.೨ ನಾಮಪ್ರಕೃತಿ :



ಬಹುವಚನ ಪ್ರತ್ಯಯಗಳನ್ನು ಸ್ವೀಕರಿಸಬಲ್ಲ ನಾಮಪ್ರಕೃತಿಗಳನ್ನು ಬಹುವಚನೀಯ (+ plural) ಗಳೆಂದೂ ಉಳಿದವುಗಳನ್ನು ಬಹುವಚನ ನ್ಯೂನ (– plural) ಗಳೆಂದೂ ವರ್ಗೀಕರಿಸಬಹುದು. ಬಹುವಚನೀಯವನ್ನು ಬದ್ಧ (close) ಮತ್ತು ಮುಕ್ತ (open) ವರ್ಗಗಳೆಂದು ವಿಭಜಿಸಬಹುದು. ಬದ್ಧ ವರ್ಗದಲ್ಲಿ ಕೆಲವೇ ಕೆಲವು ಪ್ರಕೃತಿಗಳು ಸೇರುತ್ತವೆ. ಮುಕ್ತವರ್ಗ ಬೃಹದಾಕಾರದ್ದಾಗಿದೆ. ಅಂತ್ಯಸ್ವರಗಳನ್ನು ಗಮನಿಸಿ ಅದನ್ನು ಪೂರ್ವಸ್ವರಾಂತ್ಯ ಮತ್ತು ಪೂರ್ವೇತರ ಸ್ವರಾಂತ್ಯಗಳೆಂದು ವಿಂಗಡಿಸಬಹುದು. ಪೂರ್ವೇತರ ಸ್ವರಾಂತ್ಯಗಳಲ್ಲಿ ಬಂಧುವಾಚಕ ಮತ್ತು ಬಂಧುವಾಚಕೇತರಗಳೆಂದು ಎರಡು ಉಪವರ್ಗಗಳು. ಪ್ರಸ್ತುತ ವರ್ಗೀಕರಣದಿಂದಾಗಿ ಬಹುವಚನ ಮತ್ತು ವಿಭಕ್ತಿ ಪ್ರತ್ಯಯಗಳನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ.

೨.೩. ವಚನಪ್ರತ್ಯಯ :

ನಾಮಪ್ರಕೃತಿಗಳ ಸಹಜರೂಪ ಏಕವಚನದಲ್ಲಿದೆಯೆಂದು ತಿಳಿದುಕೊಳ್ಳಲಾಗಿದೆ. ಬಹುವಚನಪ್ರತ್ಯಯಕ್ಕೆ ಐದು ರೂಪಗಳಿವೆ.

೧. –ಆ್ಯೇರು : ಮುಕ್ತವರ್ಗದ ಪೂರ್ವಸ್ವರಾಂತ್ಯಪ್ರಕೃತಿಗಳಿಗೆ ಬಹುವಚನ ಪ್ರತ್ಯಯ ಪರವಾದಾಗ ಅದಕ್ಕೆ ಆ್ಯರು ಎಂಬ ರೂಪ :

ಹುಡಿಗಿ –ಆ್ಯೇರು > ಹುಡಿಗ್ಯಾೇರು
ತನ್ಗಿ –ಆ್ಯೇರು > ತನ್ಗ್ಯಾೇರು
ಗೆಳ್ತಿ –ಆ್ಯೇರು > ಗೆಳ್ತ್ಯಾೇರು

೨. –ಆರು : ಮುಕ್ತವರ್ಗದ ಪೂರ್ವೇತರ ಸ್ವರಾಂತ್ಯ ಬಂಧುವಾಚ ಪ್ರಕೃತಿಗಳಿಗೆ ಬಹುವಚನಪ್ರತ್ಯಯ ಪರವಾದಾಗ ಅದಕ್ಕೆ –ಆರು ಎಂಬ ರೂಪ :

ಅಕ್ಕ –ಆರು > ಅಕ್ಕಾರು
ಅಜ್ಜ –ಆರು > ಅಜ್ಜಾರು
ತಮ್ಮ –ಆರು > ತಮ್ಮಾರು

೩. –ರು : ಮುಕ್ತವರ್ಗದ ಪೂರ್ವೇತರ ಸ್ವರಾಂತ್ಯ ಬಂಧುವಾಚಕೇತರ ಪ್ರಕೃತಿಗಳಿಗೆ ಬಹುವಚನಪ್ರತ್ಯಯ ಪರವಾದಾಗ ಅದಕ್ಕೆ –ರು ಎಂಬ ರೂಪ :

ಹುಡುಗ –ರು > ಹುಡುಗರು
ಲುಚ್ಚಾ –ರು > ಲುಚ್ಚಾರು
ರಾಜಾ –ರು > ರಾಜಾರು

೪. –ø : ಬಹುವಚನ ನ್ಯೂನ ಪ್ರಕೃತಿಗಳಿಗೆ ಬಹುವಚನ ಪ್ರತ್ಯಯ ಶೂನ್ಯವಾಗಿದೆ; ಅರ್ಥಾತ್ ಪ್ರತ್ಯಯವಿಲ್ಲ.

ಹೊಲ –ø > ಹೊಲ
ಹುಲಿ –ø > ಹುಲಿ
ನರಿ –ø > ನರಿ

೫. –ಗುಳು : ಬದ್ಧವರ್ಗದ ಪ್ರಕೃತಿಗಳಿಗೆ ಬಹುವಚನಪ್ರತ್ಯಯ ಪರವಾದಾಗ ಅದಕ್ಕೆ– ಗುಳು ಎಂಬ ರೂಪ :

ಅತ್ತಿ –ಗುಳು > ಅತ್ತಿಗುಳು
ಆಳು –ಗುಳು > ಆಳುಗುಳು
ಗುರು – ಗುಳು > ಗುರುಗುಳು

ಬಹುವಚನ ಉಪಾಕೃತಿ (allomorph) ಗಳಲ್ಲಿ ೦೦ –ಗುಳು ಎಂಬ ರೂಪಕ್ಕೆ ಅಧಿಕ ಪ್ರಸಾರವಿದೆ. ಏಕೆಂದರೆ ಅದು –ಆ್ಯರು ಮತ್ತು –ಆರು ಪ್ರತ್ಯಯಗಳೊಡನೆ ಪಲ್ಲಟಗೊಳ್ಳಬಹುದು.

ತನ್ಗ್ಯಾರು ~ ತನ್ಗಿಗುಳು
ಅಕ್ಕಾರು ~ ಅಕ್ಕಗುಳು
ಅಜ್ಜಾರು ~ ಅಜ್ಜಗುಳು
ತಮ್ಮಾರು ~ ತಮ್ಮಗುಳು

೩.೪ ವಿಭಕ್ತಿಪ್ರತ್ಯಯಗಳು :

ವಿಭಕ್ತಿಪ್ರತ್ಯಯಗಳು ಏಕವಚನದಲ್ಲಿ ನೇರವಾಗಿ ನಾಮಪ್ರತ್ಯಯೊಡನೆ ಬಹುವಚನದಲ್ಲಿ ವಚನಪ್ರತ್ಯಯದ ಬಳಿಕ ಸೇರುತ್ತವೆ.

ಕರ್ಮ	ನ ~ [ನ್ನ / ∅]	/	I ii {A–/i/, B} ಏ.ವ. / ಇತರ
ಸಂಪ್ರದಾನ	ಗ / ಇಗೆ / ಕ/ಕ್ಕ / ಗೆ		I ii {A–ಅ್ಯ, B} ಏ.ವ. / {I ii A–ಅ್ಯ&ಬ.ವ., II cv:c ಉ} / II – {ಏ, ಅ, ಆ} & / ಇತರ
ಅಧಿಕರಣ	ಅಗ ~ ಅಲ್ಲಿ / ಅಲ್ಲಿ		I ಬ. ವ. II / ಇತರ
ಕರಣ	{ಇನ್ದ / ಲಿನ್ದ}		

ನಾಮ ಪ್ರಕೃತಿ–

೨.೪೧ ಕರ್ಮವಿಭಕ್ತಿಪ್ರತ್ಯಯ :

–ನ ∽ –ನ್ನ : ಬಹುವಚನೀಯ ಮುಕ್ತವರ್ಗೀಯ ಇಕಾರಾಂತವಲ್ಲದ ಪೂರ್ವ ಸ್ವರಾಂತ್ಯ ಏಕವಚನ ನಾಮಪ್ರಕೃತಿಗಳನ್ನು ಸೇರುತ್ತದೆ :

ಗಾಣಿಗ್ಯಾೕನ ∽ ಗಾಣಿಗ್ಯಾೕನ್ನ
ಅಕ್ಕನ ∽ ಅಕ್ಕನ್ನ
ಹುಡುಗನ ∽ ಹುಡುಗನ್ನ

–ನ ∽ –ø : ಇತರ ನಾಮಪ್ರಕೃತಿಗಳನ್ನು ಸೇರುತ್ತದೆ :

ಅತ್ತಿನ ∽ ಅತ್ತಿ   ಅತ್ತಿಗುಳ್ಣ* ∽ ಅತ್ತಿಗುಳ್
ಹುಡಿಗಿನ ∽ ಹುಡಿಗಿ   ಹುಡಿಗ್ಯಾೕರ್ನ ∽ ಹುಡಿಗ್ಯಾೕರ್
ತನ್ಗಿನ ∽ ತನ್ಗಿ   ತನ್ಗ್ಯಾೕರ್ನ ∽ ತನ್ಗ್ಯಾೕರ್
ಹೊಲನ ∽ ಹೊಲ

೨.೪೨ ಸಂಪ್ರದಾನ ವಿಭಕ್ತಿಪ್ರತ್ಯಯ :

–ಆ್ಯೕ ಸ್ವರಾಂತ ಮುಕ್ತವರ್ಗೀಯ ಮತ್ತು ಪೂರ್ವೇತರ ಸ್ವರಾಂತ ಮುಕ್ತ ವರ್ಗೀಯ ಏಕವಚನ ನಾಮಪ್ರಕೃತಿಗಳಿಗೆ –ಗ ಪ್ರತ್ಯಯ ಪರವಾಗುತ್ತದೆ.

ಗಾಣಿಗ್ಯಾೕ –ಗ > ಗಾಣಿಗ್ಯಾೕಗ
ಅಕ್ಕ –ಗ > ಅಕ್ಕಗ
ಲುಚ್ಚಾ –ಗ > ಲುಚ್ಚಾಗ
ರಾಜಾ –ಗ > ರಾಜಾಗ

–ಎ, –ಅ, –ಆಕಾರಾಂತ ಬಹುವಚನನ್ಯೂನ ನಾಮಪ್ರಕೃತಿಗಳಿಗೆ –ಕ ∽ ಕ್ಕ ಪ್ರತ್ಯಯ ಪರವಾಗುತ್ತದೆ.

ಕಳೆ –ಕ ∽ ಕ್ಕ > ಕಳೆಕ / ಕ್ಕ
ಹೊಲ –ಕ ∽ ಕ್ಕ > ಹೊಲಕ / ಕ್ಕ
ಟೀಕಾ –ಕ ∽ ಕ್ಕ > ಟೀಕಾಕ / ಕ್ಕ

–ಆ್ಯ ಸ್ವರಾಂತ ಮುಕ್ತ ವರ್ಗೀಯ ಬಹುವಚನ ಮತ್ತು cv:c ಉ & ರೂಪದ ಬಹುವಚನನ್ಯೂನ ನಾಮಪ್ರಕೃತಿಗಳಿಗೆ –ಇಗೆ ಪ್ರತ್ಯಯ ಪರವಾಗುತ್ತದೆ.

ಗಾಣಿಗ್ಯಾೕರು –ಇಗೆ > ಗಾಣಿಗ್ಯಾೕರಿಗೆ**
ಮಾತು –ಇಗೆ > ಮಾತಿಗೆ**

---

* ನ್ → ಣ್/ಳ್–

** [–ಉ/ø, ಹುಡಿಗಿ, ಹುಲ್ಲು] → [ø, ಹುಡಿಗ್, ಹುಲ್] /– [ಸಂ. ವಿ. ಪ್ರ.]

ಇತರ ನಾಮಪ್ರಕೃತಿಗಳಿಗೆ –ಗೆ ಪ್ರತ್ಯಯ ಪರವಾಗುತ್ತದೆ :

ಮಯ್ –ಗೆ > ಮಯ್ಗೆ
ಹುಲಿ –ಗೆ > ಹುಲಿಗೆ
ಅತ್ತಿ –ಗೆ > ಅತ್ತಿಗೆ
ಅತ್ತೆಗುಳು –ಗೆ > ಅತ್ತಿಗುಳ್ಗೆ
ಹುಡಿಗ್ಯಾೀರು –ಗೆ > ಹುಡಿಗ್ಯಾೀರ್ಗೆ
ಗಾಣೆಗ್ಯಾೀರು –ಗೆ > ಗಾಣೆಗ್ಯಾೀರ್ಗೆ
ಅಕ್ಕಾರು –ಗೆ > ಅಕ್ಕಾರ್ಗೆ
ಹುಡುಗರು –ಗೆ > ಹುಡುಗರ್ಗೆ
ಲುಚ್ಚಾರು –ಗೆ > ಲುಚ್ಚಾರ್ಗೆ
ರಾಜಾರು –ಗೆ > ರಾಜಾರ್ಗೆ
ಹುಡಿಗಿ –ಗೆ > ಹುಡಿಗ್ಗೆ
ಹುಲ್ಲು –ಗೆ > ಹುಲ್ಗೆ

ಅಧಿಕರಣ ವಿಭಕ್ತಿಪ್ರತ್ಯಯ :

ಬಹುವಚನ ಮತ್ತು ಬಹುವಚನನ್ಯೂನ ನಾಮಪ್ರಕೃತಿಗಳಿಗೆ– ಆಗ ∽ –ಅಲ್ಲಿ ಪ್ರತ್ಯಯ ಪರವಾದರೆ ಉಳಿದೆಡೆ – ಅಲ್ಲಿ ಪ್ರತ್ಯಯ ಮಾತ್ರ ಪರವಾಗುತ್ತದೆ.

ಹುಡುಗರು–ಅಲ್ಲಿ ∽ ಆಗ > ಹುಡುಗರಲ್ಲಿ / ಹುಡುಗರಾಗ *
ಹೊಲ–ಅಲ್ಲಿ ∽ ಆಗ > ಹೊಲದಲ್ಲಿ / ಹೊಲದಾಗ
ಟೀಕಾ–ಅಲ್ಲಿ ∽ ಆಗ > ಟೀಕಾದಲ್ಲಿ / ಟೀಕಾದಾಗ
ಹುಡುಗ–ಅಲ್ಲಿ > ಹುಡುಗನಲ್ಲಿ
ಅತ್ತಿ–ಅಲ್ಲಿ > ಅತ್ತಿಯಲ್ಲಿ
ಲುಚ್ಚಾ–ಅಲ್ಲಿ > ಲುಚ್ಚಾನಲ್ಲಿ
ಗಾಣೆಗ್ಯಾೀ–ಅಲ್ಲಿ > ಗಾಣೆಗ್ಯಾೀನಲ್ಲಿ
ಹುಡಿಗಿ–ಅಲ್ಲಿ > ಹುಡಿಗಿಯಲ್ಲಿ
ರಾಜಾ–ಅಲ್ಲಿ > ರಾಜಾನಲ್ಲಿ
ಅಕ್ಕ–ಅಲ್ಲಿ > ಅಕ್ಕನಲ್ಲಿ
ಮಾತು–ಅಲ್ಲಿ > ಮಾತಿನಲ್ಲಿ

---

* [-V& ; φ] → [φ ; ದ್ ; ಯ್ ; ನ್ ; ಇನ್] /— [{ಅ ; ಆ} II ; ಇ ; ಇ I ; ಉ II] ನಾ. ಪ್ರ.–&v

೨.೪೪ **ಕರಣ ವಿಭಕ್ತಿಪ್ರತ್ಯಯ :** ಇನ್ದ ∽ ಲಿನ್ದ

ಹುಡುಗ – ಇನ್ದ ∽ ಲಿನ್ದ > ಹುಡುಗನಿನ್ದ, ಹುಡುಗನ್ಲಿನ್ದ *
ಹುಡುರು – ಇನ್ದ ∽ ಲಿನ್ದ > ಹುಡುರಿನ್ದ, ಹುಡುಗರ್ಲಿನ್ದ
ಅತ್ತಿ – ಇನ್ದ ∽ ಲಿನ್ದ > ಅತ್ತಿಯಿನ್ದ, ಅತ್ತಿಲಿನ್ದ
ಅತ್ತಿಗುಳು – ಇನ್ದ ∽ ಲಿನ್ದ > ಅತ್ತಿಗುಳಿನ್ದ, ಅತ್ತಿಗುಳ್ಳಿನ್ದ
ಲುಚ್ಚಾ – ಇನ್ದ ∽ ಲಿನ್ದ > ಲುಚ್ಚಾನಿನ್ದ, ಲುಚ್ಚಾನ್ಲಿನ್ದ
ಲುಚ್ಚಾರು – ಇನ್ದ ∽ ಲಿನ್ದ > ಲುಚ್ಚಾರಿನ್ದ, ಲುಚ್ಚಾರ್ಲಿನ್ದ
ಗಾಣಿಗ್ಯಾೀ – ಇನ್ದ ಲಿನ್ದ > ಗಾಣಿಗ್ಯಾೀನಿನ್ದ, ಗಾಣಿಗ್ಯಾೀಲಿನ್ದ
ಗಾಣಿಗ್ಯಾೀರು – ಇನ್ದ ∽ ಲಿನ್ದ > ಗಾಣಿಗ್ಯಾೀರಿನ್ದ, ಗಾಣಿಗ್ಯಾೀರ್ಲಿನ್ದ
ಹುಡಿಗಿ – ಇನ್ದ ∽ ಲಿನ್ದ > ಹುಡಿಗಿಯಿನ್ದ, ಹುಡಿಗಿಲಿನ್ದ
ಹುಡಿಗ್ಯಾೀರು – ಇನ್ದ ∽ ಲಿನ್ದ > ಹುಡಿಗ್ಯಾೀರಿನ್ದ, ಹುಡಿಗ್ಯಾೀರ್ಲಿನ್ದ
ಅಕ್ಕ – ಇನ್ದ ∽ ಲಿನ್ದ > ಅಕ್ಕನಿನ್ದ, ಅಕ್ಕಲಿನ್ದ
ಅಕ್ಕರು – ಇನ್ದ ∽ ಲಿನ್ದ > ಅಕ್ಕಾರಿನ್ದ, ಅಕ್ಕಾರ್ಲಿನ್ದ
ಹೊಲ – ಇನ್ದ ∽ ಲಿನ್ದ > ಹೊಲದಿನ್ದ, ಹೊಲದ್ಲಿನ್ದ
ಹುಲಿ – ಇನ್ದ ಲಿನ್ದ > ಹುಲಿಯಿನ್ದ, ಹುಲಿಲಿನ್ದ
ಮಾತು – ಇನ್ದ ∽ ಲಿನ್ದ > ಮಾತಿನಿನ್ದ, ಮಾತಿನ್ಲಿನ್ದ
ಕೞೆ – ಇನ್ದ ∽ ಲಿನ್ದ > ಕೞೆದಿನ್ದ, ಕೞೆದ್ಲಿನ್ದ
ಮಯ್ – ಇನ್ದ ∽ ಲಿನ್ದ > ಮಯಿನ್ದ, ಮಯ್ಲಿನ್ದ

---

* ೧. [φ] → [ನ್ / ಯ್ / ಇನ್] / [I {A–ಆ, B} ; {–ಇ ; II–{ಎ, ಅ, ಆ, ಯ್}} ; –ಉ] ನಾ. ಪ್ರ – ಕ. ವಿ. ಪ್ರ. //


೨. [& ಲ್ ; [ಯ್ / ಉ &]] → [ಳ್ / φ] / [ಳ್ & – ; [ಯ್ &–& ಲ್ / – ಪ್ರತ್ಯಯ]] //

೩.೦ ಸರ್ವನಾಮಪದ :

೩.೧ ಸರ್ವನಾಮಪದ ರಚನೆ :

ಸರ್ವನಾಮಪ್ರಕೃತಿ ± ವಿಭಕ್ತಿಪ್ರತ್ಯಯ

೩.೨ ಸರ್ವನಾಮಪ್ರಕೃತಿ :



ಸರ್ವನಾಮ ಪ್ರಕೃತಿಗಳನ್ನು ಪ್ರಥಮ, ದ್ವಿತೀಯ ಮತ್ತು ತೃತೀಯ ಪುರುಷಗಳೆಂದು ತ್ರಿವಿಧವಾಗಿ ವಿಂಗಡಿಸಬಹುದು. ತೃತೀಯ ಪುರುಷವನ್ನು ಆತ್ಮಾರ್ಥಕ, ಪ್ರಶ್ನಾರ್ಥಕ ಮತ್ತು ದರ್ಶನಾತ್ಮಕಗಳೆಂದು ವಿಭಜಿಸಿದರೆ, ದರ್ಶನಾತ್ಮಕವನ್ನು ದೂರದರ್ಶಕ ಮತ್ತು ಸಮೀಪ ದರ್ಶಕಗಳೆಂದು ವರ್ಗೀಕರಿಸಿ ಅವುಗಳಲ್ಲಿ ಮಹತ್ ಮತ್ತು ಅಮಹತ್ ವರ್ಗಗಳನ್ನು ಗುರುತಿಸಬಹುದು.

೩.೩ ವಿಭಕ್ತಿಪ್ರತ್ಯಯ :

ಕರ್ಮ	–ಅ (ಏ.ವ. ನಾಮಪ್ರಕೃತಿಗಳ ಬಳಿಕ)
	–ಅನ್ನ (ಬ.ವ. ನಾಮಪ್ರಕೃತಿಗಳ ಬಳಿಕ)
ಸಂಪ್ರದಾನ	–ಗ
ಅಧಿಕರಣ	–ಅಲ್ಲಿ
ಕರಣ	–ಇನ್ದ ~ –ಲಿನ್ದ

೩.೪ ಸರ್ವನಾಮ ರೂಪಾವಳಿ :

ವಿಭಕ್ತಿಪ್ರತ್ಯಯ	ಪ್ರಥಮ ಪುರುಷ ಏಕವಚನ : ನಾನು*	ಪ್ರಥಮ ಪುರುಷ ಬಹುವಚನ : ನಾವು	ದ್ವಿತೀಯ ಪುರುಷ ಏಕವಚನ : ನೀನು	ದ್ವಿತೀಯ ಪುರುಷ ಬಹುವಚನ : ನೀವು
ಕರ್ಮ	ನನ್ನ	ನಮ್ಮನ್ನ	ನಿನ್ನ	ನಿಮ್ಮನ್ನ
ಸಂಪ್ರದಾನ	ನನ್ಗ	ನಮ್ಗ	ನಿನ್ಗ	ನಿಮ್ಗ
ಅಧಿಕರಣ	ನನ್ನಲ್ಲಿ	ನಮ್ಮಲ್ಲಿ	ನಿನ್ನಲ್ಲಿ	ನಿಮ್ಮಲ್ಲಿ
ಕರಣ	ನನ್ನಿನ್ದ ~ ನನ್ಲಿನ್ದ	ನಮ್ಮಿನ್ದ ~ ನಮ್ಲಿನ್ದ	ನಿನ್ನಿನ್ದ ~ ನಿನ್ಲಿನ್ದ	ನಿಮ್ಮಿನ್ದ ~ ನಿಮ್ಲಿನ್ದ

	ತೃತೀಯ ಪುರುಷ					
	ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕಲಿಂಗ	
	ಅವ	ಅವರು	ಆಕಿ/ಅವಳು	ಅವರು	ಅದು	ಅವು
ಕರ್ಮ	ಅವನ	ಅವರ್ ~ ಅವರ್ನ	ಆಕೆ ~ ಆಕಿನ/ ಅವಳ್ನ, ಅವಳ್ನ್ನ	ಅವರ್ ~ ಅವರ್ನ	ಅದನ ~ ಅದನ್ನ	ಅವನ ~ ಅವನ್ನ
ಸಂಪ್ರದಾನ	ಅವಗ	ಅವರ್ಗೆ	ಆಕಿಗೆ/ಅವಳ್ಗೆ	ಅವರ್ಗೆ	ಅದಕ	ಅವಕ
ಅಧಿಕರಣ	ಅವನಲ್ಲಿ	ಅವರಲ್ಲಿ	ಆಕಿಯಲ್ಲಿ/ ಅವಳಲ್ಲಿ	ಅವರಲ್ಲಿ	ಅದರಾಗ	—
ಕರಣ	ಅವನಿನ್ದ ~ ಅವನ್ಲಿನ್ದ	ಅವರಿನ್ದ ~ ಅವರ್ಲಿನ್ದ	ಆಕಿಯಿನ್ದ ~ ಆಕಿಲಿನ್ದ/ ಅವಳಿನ್ದ ~ ಅವಳ್ಳಿನ್ದ	ಅವರಿನ್ದ ~ ಅವರ್ಲಿನ್ದ	ಅದರಿನ್ದ ~ ಅದರ್ಲಿನ್ದ	—


*

೧. [ನಾ(ನು) / ನಾವು / ನೀನು / ನೀವು] → [ನನ್ / ನಮ್ / ನಿನ್ / ನಿಮ್ // ನನ್ನ್ / ನಮ್ಮ್ / ನಿನ್ನ್ / ನಿಮ್ಮ್] / — [ಸಂಪ್ರದಾನ // ಇತರ] ವಿಭಕ್ತಿಪ್ರತ್ಯಯ

೨. $C \rightarrow \phi / - C_1 C_2$

೪.೦ ಸಂಖ್ಯಾವಾಚಕಗಳು

೪.೧ ಸಂಖ್ಯಾವಾಚಕ ಪ್ರಕೃತಿ :



ಸಂಖ್ಯಾವಾಚಕ ಪ್ರಕೃತಿಗಳನ್ನು ಮೂಲಾಂಕ ಮತ್ತು ಕ್ರಮಾಂಕಗಳೆಂದೂ, ಮೂಲಾಂಕಗಳನ್ನು ಮಹತ್ ಮತ್ತು ಅಹಮತ್‌ಗಳೆಂದೂ, ಅಹಮತ್‌ಪ್ರಕೃತಿಗಳನ್ನು ಉಕಾರಾಂತ, ಇಕಾರಾಂತ ಮತ್ತು ಅಕಾರಾಂತ ಪ್ರಕೃತಿಗಳೆಂದೂ ವರ್ಗೀಕರಿಸಲಾಗಿದೆ. ಕ್ರಮಾಂಕಗಳು ನಾಮಗುಣವಾಚಕಗಳಂತೆ ವರ್ತಿಸುತ್ತವೆ. ಮೂಲಾಂಕಗಳು ನಾಮ ಪದದಂತೆ ವರ್ತಿಸುತ್ತವೆ.

೪.೨ ಮೂಲಾಂಕಗಳ ರೂಪಾವಳಿ :

ಮಹತ್ ಮೂಲಾಂಕಗಳು 'ಹುಡುಗ' ಎಂಬ ಪದದಂತೆ, ಇಕಾರಾಂತ ಅಮಹತ್ ಮೂಲಾಂಕಗಳು 'ಆಕಿ' ಎಂಬ ಸರ್ವನಾಮಪದದಂತೆ, ಅಕಾರಾಂತ ಅಮಹತ್ ಮೂಲಾಂಕಗಳು 'ಹೊಲ' ಎಂಬ ಪದದಂತೆ ರೂಪಾವಳಿಗಳನ್ನು ಪಡೆದುಕೊಳ್ಳುತ್ತವೆ.

೪.೨೧ ಉಕಾರಾಂತ ಅನುಹತ್ ಮೂಲಾಂಕಗಳ ರೂಪಾವಳಿ :

ವಿಭಕ್ತಿಪ್ರತ್ಯಯಗಳು		ಉದಾ. ಒನ್ದು *
ಕರ್ಮ	– ∅ ~ – ನ	ಒನ್ದು ~ ಒನ್ದನ
ಸಂಪ್ರದಾನ	– ಕ ~ – ಕ್ಕ	ಒನ್ದಕ ~ ಒನ್ದಕ್ಕ
ಅಧಿಕರಣ	– ಅಲ್ಲಿ ~ ಆಗ	ಒನ್ದರಲ್ಲಿ ~ ಒನ್ದರಾಗ
ಕರಣ	– ಇನ್ದ ~ ಲಿನ್ದ	ಒನ್ದರಿನ್ದ ~ ಒನ್ದರ್ಲಿನ್ದ

೫.೦ ಕ್ರಿಯಾಪದ :

೫.೧ ಕ್ರಿಯಾಪದ ರಚನೆ :

ಕ್ರಿಯಾಪ್ರಕೃತಿ ± ಕಾಲಪ್ರತ್ಯಯ + { ಪುರುಷವಾಚಕ / ಕ್ರಿಯಾರ್ಥ ವಿಶೇಷ / ಪ್ರತ್ಯಯಗಳು }

೫.೨ ಕ್ರಿಯಾಪ್ರಕೃತಿ :

ಕ್ರಿಯಾಪ್ರಕೃತಿ

ಅ–ವರ್ಗ | ಬ–ವರ್ಗ | ಕ–ವರ್ಗ

ಭೂತಕಾಲ ಪ್ರತ್ಯಯಗಳಿಗನುಗುಣವಾಗಿ ಕ್ರಿಯಾಪ್ರಕೃತಿಗಳನ್ನು ಅ–ವರ್ಗ, ಬ–ವರ್ಗ ಮತ್ತು ಕ–ವರ್ಗ ಕ್ರಿಯಾಪ್ರಕೃತಿಗಳೆಂದು ವರ್ಗೀಕರಿಸಬಹುದು.

೫.೨೧ ಅ–ವರ್ಗ ಕ್ರಿಯಾಪ್ರಕೃತಿಗಳು : –ದ್ ಭೂತಕಾಲ ಪ್ರತ್ಯಯವನ್ನು ಸ್ವೀಕರಿಸುತ್ತವೆ : ನೋಡ್, ಇದ್, ತಿನ್, ಏಳ್, ಕಾಣ್, ಆಗ್, ಹೋಗ್, ಬೀಳ್.

---

* ಒನ್ದು → [ಒನ್ದ / ಒನ್ದರ್] /— [{ ಕರ್ಮ, ಸಂಪ್ರದಾನ } / { ಅಧಿಕರಣ, ಕರಣ }] ವಿಭಕ್ತಿಪ್ರತ್ಯಯ

೫.೨೨ **ಬ–ವರ್ಗ ಕ್ರಿಯಾಪ್ರಕೃತಿಗಳು :** –ತ್ ಭೂತಕಾಲ ಪ್ರತ್ಯಯವನ್ನು ಸ್ವೀಕರಿಸುತ್ತವೆ. ಅಳ್, ಕೀಳ್, ನಾರ್, ಹೊರ್, ಸಾಯ್,

೫.೨೩ **ಕ–ವರ್ಗ ಕ್ರಿಯಾಪ್ರಕೃತಿಗಳು :** –ನ್ದ್ ಭೂತಕಾಲ ಪ್ರತ್ಯಯವನ್ನು ಸ್ವೀಕರಿಸುತ್ತವೆ. ತರ್, ಬರ್, ನೋ, ಬೇ......

೫.೩ **ಕಾಲಪ್ರತ್ಯಯ :**

೫.೩೧ **ಅಭೂತ :** –ತ್

೫.೩೨ ಭೂತ → [ದ್ / ತ್ / ನ್ದ್] / [ಅ / ಬ / ಕ] ವರ್ಗ ಕ್ರಿಯಾಪ್ರಕೃತಿ – //

೫.೪ **ಪುರುಷವಾಚಕಪ್ರತ್ಯಯ :**

೫.೪೧ **ಅಭೂತ :**

ಏಕವಚನ	ಬಹುವಚನ
೧. –ಈನಿ	೧. –ಈವಿ
೨. –ಇ ~ ಈರಿ	೨. ಈನಿ
೩. ಪು. –ಆನ	೩. ಪು./ಸ್ತ್ರೀ. –ಆರ
ಸ್ತ್ರೀ. –ಆಳ	ನ. –ಆವು
ನ. –ತ ~ ಅಯ್ತಿ	

೫.೪೨ **ಭೂತ :**

೧. ಎ ~ ನಿ	೧. –ವಿ
೨. –ಇ	೨. –ರಿ
೩. ಪು. –ಅ	೩. ಪು./ಸ್ತ್ರೀ. –ರು
ಸ್ತ್ರೀ. –ಲು	ನ. –ವು
ನ. –ತು	

೫.೫ ಕ್ರಿಯಾಪದದ ರೂಪಾವಳಿಗಳು :

೫.೫೧ ಅಭೂತ : 'ನೋಡ್–'

ಏಕವಚನ	ಬಹುವಚನ
೧. ನೋಡ್ತೀನಿ	೧. ನೋಡ್ತೀವಿ
೨. ನೋಡ್ತಿ ~ ನೋಡ್ತೀದಿ	೨. ನೋಡ್ತೀರಿ
೩. ಪು. ನೋಡ್ತಾನ	೩. ಪು./ಸ್ತ್ರೀ. ನೋಡ್ತಾರ
ಸ್ತ್ರೀ. ನೋಡ್ತಾಳ	ನ. ನೋಡ್ತಾವು
ನ. ನೋಡುತ್ತ ~ ನೋಡ್ತಿಯ್ತಿ	

೫.೫೨ ಭೂತ :

೧. ನೋಡ್ದೆ ~ ನೋಡ್ದ್ನಿ	೧. ನೋಡ್ದ್ವಿ
೨. ನೋಡ್ದಿ	೨. ನೋಡ್ದ್ರಿ
೩. ಪು. ನೋಡ್ದ	೩. ಪು./ಸ್ತ್ರೀ. ನೋಡ್ದ್ರು
ಸ್ತ್ರೀ. ನೋಡ್ದ್ಲು	ನ. ನೋಡ್ದ್ವು
ನ. ನೋಡ್ತು	

೫.೬ ಪೂರ್ಣಭೂತ ಕ್ರಿಯಾಪದ :

ಭೂತಕ್ರಿಯಾಪ್ರಕೃತಿಗೆ ಅಭೂತ ಪುರುಷವಾಚಕ ಪ್ರತ್ಯಯಗಳನ್ನು ಸೇರಿಸಿದರೆ ಪೂರ್ಣಭೂತ ಕ್ರಿಯಾಪದವುಂಟಾಗುತ್ತದೆ.

೫.೭ ಸಂಶಯಾರ್ಥಕ ಕ್ರಿಯಾಪದ :

ಭೂತಕ್ರಿಯಾಪ್ರಕೃತಿಗೆ ಕೆಳಗಿನ ಸಂಶಯಾರ್ಥಕ ಪ್ರತ್ಯಯಗಳನ್ನು ಸೇರಿಸಿದರೆ ಸಂಶಯಾರ್ಥಕ ಕ್ರಿಯಾಪದ ದೊರಕುತ್ತದೆ.

ಪ್ರತ್ಯಯಗಳು :

ಏಕವಚನ	ಬಹುವಚನ
೧. –ಏನು	೧. –ಏವು
೨. –ಈ	೨. –ಈರಿ
೩. ಪು. –ಆನು	೩. ಪು./ಸ್ತ್ರೀ. –ಆರು
ಸ್ತ್ರೀ. –ಆಳು	ನ. –ಆವು
ನ. –ಈತು	

೧.	ತಿನ್ದೇನು	೧.	ತಿನ್ದೇವು
೨.	ತಿನ್ದೀ	೨.	ತಿನ್ದೀರಿ
೩.	ಪು. ತಿನ್ದಾನು	೩.	ಪು./ಸ್ತ್ರೀ. ತಿನ್ದಾರು
	ಸ್ತ್ರೀ. ತಿನ್ದಾಳು		ನ. ತಿನ್ದಾವು
	ನ. ತಿನ್ದೀತು		

೫.೮ **ವಿಧ್ಯರ್ಥಕ ಕ್ರಿಯಾಪದ :**

ಕ್ರಿಯಾಪ್ರಕೃತಿಗೆ ವಿಧಿರೂಪ ಪ್ರತ್ಯಯಗಳನ್ನು ಸೇರಿಸಿ ವಿಧ್ಯರ್ಥಕ ಕ್ರಿಯಾಪದಗಳನ್ನು ಉತ್ಪಾದಿಸಬಹುದು.

ಪ್ರತ್ಯಯಗಳು :

ಏಕವಚನ		ಬಹುವಚನ	
೧.	-ಲಿ ~ ಲ್ಯಾ	೧.	– ಊನು
೨.	– [ø / ಉ] / [ಇಕಾರಾಂತ / ಇತರ] ಪ್ರಕೃತಿ–//	೨.	– ರಿ
		೩.	– ಲಿ

೧.	ನೋಡ್ಳಿ* ~ ನೋಡ್ಳ್ಯಾ	೧.	ನೋಡೂನು
೨.	ನೋಡು	೨.	ನೋಡ್ರಿ
೩.	ನೋಡ್ಳಿ	೩.	ನೋಡ್ಳಿ

೫.೯ ನಿಷೇಧಾರ್ಥಕ ಕ್ರಿಯಾಪದ

'ಇಲ್ಲ' ಎಂಬ ನಿಷೇಧರೂಪವನ್ನು ಕೃದನ್ತನಾಮಕ್ಕೆ ಸೇರಿಸಿದರೆ ಅದು ಅಭೂತ ನಿಷೇಧಾರ್ಥಕ ಕ್ರಿಯಾಪದವಾಗುತ್ತದೆ.

ನೋಡುವುದು + ಇಲ್ಲ → ನೋಡುವುದಿಲ್ಲ

ತಿನ್ನುವುದು + ಇಲ್ಲ → ತಿನ್ನುವುದಿಲ್ಲ.

---

* ಲ್ → ಳ್ / ಡ್ - //

ಭೂತಕಾಲ ಕ್ರಿಯಾನ್ಯೂನಕ್ಕೆ 'ಇಲ್ಲ' ಎಂಬುದನ್ನು ಸೇರಿಸಿದರೆ ಪೂರ್ಣಭೂತ ನಿಷೇಧಾರ್ಥಕ ಕ್ರಿಯಾಪದವುಂಟಾಗುತ್ತದೆ.

ನೋಡಿ + ಇಲ್ಲ → ನೋಡಿಲ್ಲ
ತಿಂದು + ಇಲ್ಲ → ತಿಂದಿಲ್ಲ

ಕ್ರಿಯಾಪ್ರಕೃತಿಗೆ ಸಂಯೋಜನಾತ್ಮಕ, ಕ್ರಿಯಾಪ್ರತ್ಯಯ ಸೇರಿದ ಬಳಿಕ 'ಇಲ್ಲ' ಎಂಬ ರೂಪವನ್ನು ಕೂಡಿಸಿದರೆ ಭೂತನಿಷೇಧಾರ್ಥಕ ಕ್ರಿಯಾಪದ ಉಂಟಾಗುತ್ತದೆ.

ನೋಡ್ಳ + ಇಲ್ಲ → ನೋಡ್ಳಿಲ್ಲ

ಕ್ರಿಯಾಪ್ರಕೃತಿಗೆ – ಬ್ಯಾಡ / – ಬಾರದು ಸೇರಿಸಿದರೆ ನಿಷೇಧಾರ್ಥಕ ವಿಧಿರೂಪ ಉಂಟಾಗುತ್ತದೆ.

ನೋಡ್ + ಬ್ಯಾಡ / –ಬಾರದು → ನೋಡ್ಬ್ಯಾಡ / ನೋಡ್ಬಾರದು
ತಿನ್ + ಬ್ಯಾಡ / – ಬಾರದು → ತಿನ್ಬ್ಯಾಡ / ತಿನ್ಬಾರದು

'— ಬ್ಯಾಡ' ವನ್ನು ದ್ವಿತೀಯ ಪುರುಷದಲ್ಲಿ ಏಕವಚನ ಪ್ರಕೃತಿಗೆ ಸೇರಿಸಿದರೆ, '— ಬಾರದು' ಎಬುದಕ್ಕೆ ಪುರುಷವಚನಗಳ ನಿರ್ಬಂಧವಿಲ್ಲ.

ಕ್ರಿಯಾಪ್ರಕೃತಿಗೆ –ಆಕೆ ಎಂಬ ಪ್ರತ್ಯಯ ಸೇರಿದ ಬಳಿಕ –ಇಲ್ಲ ಎಂಬುದನ್ನು ಸೇರಿಸಿದರೆ ಅಭೂತ ನಿಷೇಧಾರ್ಥಕ ಸಂಶಯಾರ್ಥಕ ಕ್ರಿಯಾಪದ ಉಂಟಾಗುತ್ತದೆ.

ನೋಡ್ + ಆಕೆ + ಇಲ್ಲ → ನೋಡಾಕಿಲ್ಲ *
ತಿನ್ + ಆಕೆ + ಇಲ್ಲ → ತಿನ್ನಾಕಿಲ್ಲ **

ಧಾರವಾಡ ಕನ್ನಡದ ಪ್ರಸ್ತುತ ವಿಶ್ಲೇಷಣೆ ಸ್ಥೂಲ ಸ್ವರೂಪದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಾಧಿತಗಳ ಬಗ್ಗೆ ಆಗಲಿ, ವಾಕ್ಯವನ್ನು ಕುರಿತಾಗಲಿ, ಇನ್ನಿತರ ಕೆಲವು ವಿಷಯಗಳ ಬಗೆಗಾಗಲಿ ಪ್ರಸ್ತಾಪ ಇಲ್ಲಿ ಮಾಡಿಲ್ಲ. ಧಾರವಾಡ ಕನ್ನಡ ಪ್ರಮಾಣ ಕನ್ನಡಕ್ಕಿಂತ ಭಿನ್ನವಾಗಿದೆ ಎಂಬುದು ಕೆಲವುಮಟ್ಟಿಗಾದರೂ ಈ ಲೇಖನದ ಓದುಗರಿಗೆ ಕಾರಣ ಸಹಿತ ಖಚಿತವಾದರೆ ಸಾಕು; ಅದೇ ಲೇಖನದ ಸಾರ್ಥಕತೆ. †

• •

* V & → φ / — & V

** ತಿನ್ → ತಿನ್ನ್ / — & V

† ಪ್ರಸ್ತುತ ಲೇಖನಕ್ಕೆ ತಮ್ಮ The Structure of Kannada (Dharwar, Karnatak University, 1961) ಗ್ರಂಥವನ್ನು ಮಾತೃಕೆಯನ್ನಾಗಿ ಬಳಸಲು ಅನುಮತಿಯನ್ನಿತ್ತ ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ॥ ಆರ್. ಸಿ. ಹಿರೇಮಠರಿಗೆ ನನ್ನ ಕೃತಜ್ಞತೆಗಳು.

ಉತ್ತರಕನ್ನಡ ಜಿಲ್ಲೆಯ ಕನ್ನಡ

● ಶಾಲಿನಿ ರಘುನಾಥ

ನಿಸರ್ಗಸೌಂದರ್ಯದ ನೆಲೆವೀಡಾಗಿರುವ ಉತ್ತರಕನ್ನಡ ಜಿಲ್ಲೆ, ದಕ್ಷಿಣೋತ್ತರವಾಗಿ ೧೦೦ ಮೈಲುಗಳಷ್ಟು ಉದ್ದವೂ ಪೂರ್ವ-ಪಶ್ಚಿಮವಾಗಿ ೬೦ ಮೈಲುಗಳಷ್ಟು ಅಗಲವೂ ವ್ಯಾಪಿಸಿದೆ. ಇದರ ಉತ್ತರಕ್ಕೆ ಬೆಳಗಾಂವ ಜಿಲ್ಲೆ, ಪೂರ್ವಕ್ಕೆ ಧಾರವಾಡ, ಶಿವಮೊಗ್ಗ ಜಿಲ್ಲೆಗಳು, ಪಶ್ಚಿಮಕ್ಕೆ ಅರಬೀಸಮುದ್ರ ಮತ್ತು ಗೋವಾ, ದಕ್ಷಿಣಕ್ಕೆ ಶಿವಮೊಗ್ಗ ಮತ್ತು ದಕ್ಷಿಣಕನ್ನಡ ಜಿಲ್ಲೆಗಳು ಮೇರೆಯಾಗಿವೆ. ಭೌಗೋಲಿಕವಾಗಿ ಈ ಜಿಲ್ಲೆಯನ್ನು ಘಟ್ಟದ ಮೇಲಿನ ಪ್ರದೇಶ ಮತ್ತು ಘಟ್ಟದ ಕೆಳಗಿನ ಪ್ರದೇಶ ಎಂದು ಸಾಮಾನ್ಯವಾದ ವಿಂಗಡಣೆಯನ್ನು ಮಾಡುತ್ತಾರೆ. ಆದರೆ ಸಮುದ್ರಕ್ಕೆ ಹೊಂದಿ ಕರಾವಳಿ, ಅದಕ್ಕೆ ತಾಗಿ ಸಹ್ಯಾದ್ರಿಯ ಇಳಿಜಾರಿನ ಪ್ರದೇಶ, ಘಟ್ಟ ಹತ್ತಿ ಮೇಲೆ ಬಂದರೆ ದಟ್ಟವಾದ ಕಾಡಿನಿಂದ ಕೂಡಿದ ಮಲೆನಾಡು, ಅದರ ಸೆರಗಿನಲ್ಲಿಯೇ ವಿಶಾಲವಾದ ಬಯಲುಪ್ರದೇಶ ಕಂಡುಬರುತ್ತವೆ. ಹೀಗೆ ಉತ್ತರಕನ್ನಡ ಜಿಲ್ಲೆಯಲ್ಲಿ ಕರಾವಳಿ, ಮಲೆನಾಡು, ಬಯಲುಸೀಮೆ– ಈ ಮೂರು ಪ್ರಕಾರಗಳು ಇವೆ. ಈ ಪ್ರಭೇದಗಳನ್ನು ಹವಾಮಾನ, ಭೂಗುಣಗಳಲ್ಲಷ್ಟೇ ಅಲ್ಲ; ಜನರ ಸಂಸ್ಕೃತಿಯಲ್ಲಿಯೂ ನಾವು ಕಾಣುತ್ತೇವೆ. ಅಂತೆಯೇ ಈ ಜಿಲ್ಲೆಯನ್ನು ಭಾರತದ ಒಂದು ಸಂಕ್ಷಿಪ್ತ ಆವೃತ್ತಿ ಎಂದರೂ ತಪ್ಪಾಗಲಾರದು. ಸುಮಾರು ೮,೯೦,೦೦೦ ಜನಸಂಖ್ಯೆ ಇರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ವೈವಿಧ್ಯತೆ ವಿಪುಲವಾಗಿದೆ. ಇಲ್ಲಿ ಕನ್ನಡ. ಕೊಂಕಣಿ, ಮರಾಠಿ, ಗುಜರಾತಿ, ಉರ್ದು ಮುಂತಾದ ಭಾಷೆಗಳನ್ನು ಆಡುವ ಜನರಿದ್ದಾರೆ. ಆದರೆ ಒಟ್ಟು ಸಂಖ್ಯೆಯಲ್ಲಿ ೫೬.೫೮% ರಷ್ಟು ಜನರು ಕನ್ನಡ ಮಾತನಾಡುತ್ತಾರೆ. ಇಲ್ಲಿಯ ಮೂಲಕನ್ನಡಿಗರು ಯಾರೆಂದು ಹೇಳುವುದು ಕಷ್ಟ. ಏಕೆಂದರೆ ಬಹ್ವಂಶದ ಜನರು ದೇಶದ ಮತ್ತು ನಾಡಿನ ಬೇರೆಬೇರೆ ಭಾಗಗಳಿಂದ ವ್ಯಾಪಾರಕ್ಕಾಗಿಯೋ ಬೇರೆ ಕಾರಣಕ್ಕಾಗಿಯೋ ಇಲ್ಲಿ ಬಂದು ನೆಲೆಸಿದ್ದಾರೆ. ಹಳೆಯ ಮೈಸೂರಿನ ಭಾಗಗಳಿಂದ ಕೆಲವರು ವೀರಶೈವರು, ದೇಶಸ್ಥ ಬ್ರಾಹ್ಮಣರು, ಗೊಂಗಡಿಕಾರರು, ಜಿನಗಾರರು ಬಂದವರಾದರೆ; ವೀರಶೈವರಲ್ಲಿ ಕೆಲವರು ಬಯಲುಸೀಮೆಯಿಂದ ಬಂದವರು. ಬಡಿಗೇರರ, ಗಾವುಂಡಿಗಳ ಮೂಲ ಬೆಳಗಾಂವ ಜಿಲ್ಲೆ. ಅಕ್ಕಸಾಲಿಗರು ಶಿಕಾರಿಪುರದಿಂದ, ಕಂಚಗಾರರು ಗುಡಿಗಾರರು ಗೋವಾ ಕಡೆಯಿಂದ, ಕಲಾಲರು ಮಧ್ಯಭಾರತದಿಂದ ಬಂದವರಾಗಿದ್ದಾರೆ. ಹವ್ಯಕಬ್ರಾಹ್ಮಣರು ಉತ್ತರಭಾರತದಿಂದ ಬಂದವರೆಂಬ ಐತಿಹ್ಯವಿದೆ. ಇನ್ನು ಕೆಲವರ ಮೂಲವೇ ತಿಳಿದಿಲ್ಲ. ಆದುದರಿಂದ ಇವರಲ್ಲಿ ಕೆಲವರು ಮೂಲದಲ್ಲಿ ಸಹಜವಾಗಿ

ಮರಾಠಿಯನ್ನೋ, ಉರ್ದುವನ್ನೋ, ಕೊಂಕಣಿಯನ್ನೋ, ಸಂಸ್ಕೃತವನ್ನೋ ಮನೆ ಮಾತಾಗಿ ಹೊಂದಿದ್ದವರು. ಆದರೆ ಇಲ್ಲಿಗೆ ಬಂದು ನೆಲೆಸಿದ ಮೇಲೆ ಕನ್ನಡವನ್ನೇ ಮಾತನಾಡುತ್ತಿದ್ದಾರೆ. ಹೀಗಾಗಿ ಮೂಲಭಾಷೆಯ ಕೆಲವು ಅಂಶಗಳೂ ಅದರಲ್ಲಿ ಸೇರಿರಬಹುದಾಗಿದೆ. ಒಟ್ಟಿನಲ್ಲಿ ಇಲ್ಲಿ ಕನ್ನಡ ಮಾತನಾಡುವ ಪ್ರತಿಯೊಂದು ಜಾತಿ–ವೃತ್ತಿಯವರ ಭಾಷೆಯೂ ಭಿನ್ನವಾಗಿರುವುದು ಗಮನಾರ್ಹ. ಅಂತೆಯೇ ಉತ್ತರ ಕನ್ನಡ ಜಿಲ್ಲೆಯ ಕನ್ನಡ ಒಂದಲ್ಲ, ಹಲವಾರು.

ಸುಮಾರು ೪೫ ಸಾವಿರ ಜನಸಂಖ್ಯೆ ಇರಬಹುದಾದ ಹವ್ಯಕರು ಹೊನ್ನಾವರ, ಕುಮಟಾ, ಸಿರಸಿ, ಸಿದ್ದಾಪುರ, ಯಲ್ಲಾಪುರ, ಸುಪಾ ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಂಖ್ಯೆಯಲ್ಲಿ ಸುಮಾರು ೪೦ ಸಾವಿರ ಇರಬಹುದಾದ ಹಾಲಕ್ಕಿ ಒಕ್ಕಲಿಗರು ಕುಮಟಾ, ಹೊನ್ನಾವರ, ಭಟ್ಕಳ, ಕಾರವಾರ ಮತ್ತು ಅಂಕೋಲಾ ತಾಲೂಕುಗಳಲ್ಲಿ ವಿಶೇಷವಾಗಿ ವಾಸವಾಗಿದ್ದಾರೆ. ಸುಮಾರು ೪೦–೪೫ ಸಾವಿರ ಸಂಖ್ಯೆಯ ನಾಡವರು ಮುಖ್ಯವಾಗಿ ಕುಮಟಾ, ಹೊನ್ನಾವರ, ಅಂಕೋಲಾಗಳಲ್ಲಿ ನೆಲೆಗೊಂಡಿದ್ದಾರೆ. ಇನ್ನುಳಿದ ಕನ್ನಡ ಮಾತನಾಡುವ ವರ್ಗದಲ್ಲಿ ಹೊಲೇರು, ಹಸ್ಲರು, ದೀವ್ರು, ತಳವಾರರು, ಗೋಲಕರು, ಅಗಸರು, ಮಾಂಗರು, ಕುರುಬರು, ಗೊಲ್ಲರು, ಉಪ್ಪಾರರು, ಬನವಾಸಿ ಸಾಬರು, ಗಾವುಂಡಿಗಳು (ಹಳಿಯಾಳ ತಾಲೂಕು), ಬಡಿಗೇರರು (ಹಳಿಯಾಳ), ಗೊಂಗಡಿಕಾರರು, ಹಣಬ್ಯಾರರು– ಇವರೆಲ್ಲ ಕೇವಲ ಘಟ್ಟದ ಮೇಲಿನ ಪ್ರದೇಶದಲ್ಲಿ ಕಂಡುಬರುತ್ತಾರೆ. ಮುಕ್ರಿಗಳು, ಗಾಮಒಕ್ಕಲು, ಜಿನಗಾರರು, ಪಟ್ಟಸಾಲಿಗರು, ನಾಮಧಾರಿಗಳು, ಕೊಮಾರಪೈಕರು, ಅಂಬಿಗರು, ಬೋಯಿಗಳು, ಹರಕಾಂತ್ರರು, ಕಾಬೇರರು, ಮಾಗೇರರು, ಕನ್ನಡ ವಾಜಂತ್ರಿಗಳು ಮೊದಲಾದವರು ಕೇವಲ ಘಟ್ಟದ ಕೆಳಗಿನ ಪ್ರದೇಶದಲ್ಲಿ ವಾಸವಾಗಿದ್ದಾರೆ. ಕರೆಒಕ್ಕಲು, ಅಕ್ಕಸಾಲಿಗರು, ದೇವಡಿಗರು, ಕಂಚುಗಾರರು ಸಾಮಾನ್ಯವಾಗಿ ಎಲ್ಲ ಪ್ರದೇಶಗಳಲ್ಲಿಯೂ ಇದ್ದು, ಕರಾವಳಿತೀರದವರು ಮಾತ್ರ ಕೊಂಕಣಿ ಮಾತನಾಡುತ್ತಾರೆ. ಆದರೆ ಮಲೆನಾಡು, ಬಯಲು ಸೀಮೆಯಲ್ಲಿದ್ದವರು ಕನ್ನಡ, ಕೊಂಕಣಿಮಿಶ್ರಿತ ಕನ್ನಡವನ್ನು ಆಡುತ್ತಾರೆ. ಸಿಂಪಿಗಳು, ಕಲ್ಲುಕಟಿಗರು, ಜಾಡರು, ಬಣಜಿಗಳು ವಿಶೇಷತಃ ಘಟ್ಟದ ಮೇಲಿನ ಪ್ರದೇಶದಲ್ಲಿದ್ದು, ಮರಾಠಿಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ಕಲಾಲರ ಕನ್ನಡ, ಉರ್ದು ಮಿಶ್ರಿತವಾದುದು.

ಭೌಗೋಲಿಕವಾಗಿ ಉತ್ತರಕನ್ನಡ ಜಿಲ್ಲೆಯ ಭಾಷೆಯನ್ನು ಅಭ್ಯಾಸಮಾಡುವಾಗ ವ್ಯತ್ಯಾಸವಿಪುಲತೆಯಿಂದ ಮಲೆನಾಡನ್ನು ಸಿರಸಿ–ಸಿದ್ದಾಪುರಸೀಮೆ ಮತ್ತು ಯಲ್ಲಾಪುರ ಸೀಮೆ ಎಂದು ವರ್ಗೀಕರಿಸಿಕೊಂಡಿದ್ದೇನೆ. ಬನವಾಸಿ, ಮುಂಡಗೋಡ ಕರಾವಳಿ ಹಾಗೂ ಅವುಗಳ ಸುತ್ತಮುತ್ತಲಿನ ಕನ್ನಡವನ್ನು ಬಯಲುಸೀಮೆಯ ಕನ್ನಡವೆಂದು ಕರೆಯಲಾಗಿದೆ. ಕರಾವಳಿಪ್ರದೇಶದ ಕನ್ನಡದಲ್ಲಿಯೂ ಸಾಕಷ್ಟು ಪ್ರಾದೇಶಿಕ ವೈವಿಧ್ಯತೆ

ಯಿದ್ದರೂ ಸದ್ಯದ ಲೇಖನದಲ್ಲಿ ಆ ವ್ಯತ್ಯಾಸಗಳನ್ನು ವಿಶೇಷವಾಗಿ ಗುರುತಿಸುವ ಪ್ರಯತ್ನ ಮಾಡದೆ ಅಲ್ಲಿಯ ಸಾಮಾನ್ಯ ಕನ್ನಡವನ್ನು ಕರಾವಳಿಕನ್ನಡ ಎಂದು ಕರೆದಿದ್ದೇನೆ. ಈ ಜಿಲ್ಲೆಯ ಭಾಷಾಧ್ಯಯನದಲ್ಲಿ ಭೌಗೋಲಿಕ ವಿಭಾಗದಂತೆಯೇ ಜಾತಿಯನ್ನು ಒಂದು ಮುಖ್ಯ ವಿಭಾಗವನ್ನಾಗಿಯೇ ಪರಿಗಣಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಪ್ರಸ್ತುತ ಲೇಖನದಲ್ಲಿ ಪ್ರಾದೇಶಿಕವಿಭಾಗಗಳೊಂದಿಗೆ ಹವ್ಯಕ, ಹಾಲಕ್ಕಿ, ನಾಡವರು, ಮುಕ್ರಿ, ಗೊಂಡರು ಮುಂತಾದ ಕೆಲವು ಮುಖ್ಯಜನಾಂಗದವರ ಆಡು ಮಾತುಗಳನ್ನು ಆಧಾರವಾಗಿಟ್ಟುಕೊಂಡು ಉತ್ತರಕನ್ನಡ ಜಿಲ್ಲೆಯ ಕನ್ನಡವನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ. ಈ ಲೇಖನವು ಆ ಭಾಷೆಯ ಸ್ಥೂಲಸ್ವರೂಪ ವನ್ನು ಮಾತ್ರ ತಿಳಿಸುತ್ತದೆ. ಧ್ವನಿಮಾ, ಆಕೃತಿಮಾ ವಿಧಾನಗಳಂತೆ ವಾಕ್ಯರಚನಾ ಕ್ರಮವನ್ನು ವರ್ಣಿಸದಿದ್ದರೂ ಕೊನೆಯಲ್ಲಿ ಬೇರೆಬೇರೆ ಕನ್ನಡಗಳೊಂದಿಗೆ ತುಲನಿಸುತ್ತ ಸೂಚ್ಯವಾಗಿ ತೋರಿಸಲು ಪ್ರಯತ್ನಿಸಿದ್ದೇನೆ.

ಧ್ವನಿಮಾಗಳು :

ಉತ್ತರಕನ್ನಡ ಜಿಲ್ಲೆಯಲ್ಲಿ ಒಂದು ಕನ್ನಡದ ಧ್ವನಿಮಾವ್ಯವಸ್ಥೆಯಂತೆ ಇನ್ನೊಂದ ರದ್ದಿಲ್ಲ. ಈ ಜಿಲ್ಲೆಯ ಕನ್ನಡದ ಧ್ವನಿಮಾವ್ಯವಸ್ಥೆಯನ್ನು ತೋರಿಸುವಾಗ ಪ್ರಮುಖವಾಗಿ ಹವ್ಯಕ ಕನ್ನಡದ ಧ್ವನಿಮಾವ್ಯವಸ್ಥೆಯನ್ನು ಗುರುತಿಸಲಾಗಿದೆ. ಇದಕ್ಕೆ ಕಾರಣ, ಈ ಜಿಲ್ಲೆಯಲ್ಲಿ ಇವರು ಹೆಚ್ಚಿನ ಸಂಖ್ಯೆಯಲ್ಲಿ ಇರುವರಲ್ಲದೆ ಉಳಿದೆಲ್ಲ ಪ್ರಭೇದಗಳಲ್ಲಿರುವ ಧ್ವನಿಮಾಗಳು (ಚ಼ ಒಂದನ್ನು ಬಿಟ್ಟು) ಈ ಭಾಷೆಯ ಧ್ವನಿಮಾ ವ್ಯವಸ್ಥೆಯಲ್ಲಿವೆ. ಅಂತೆಯೇ ಮುಖ್ಯವಾಗಿ ಹವ್ಯಕ ಕನ್ನಡದ ಧ್ವನಿಮಾವ್ಯವಸ್ಥೆ ಯನ್ನು ವರ್ಣಿಸಿ, ಉಳಿದವುಗಳ ವ್ಯತ್ಯಾಸವನ್ನು ಎತ್ತಿತೋರಿಸಲಾಗಿದೆ.

ಸ್ವರಗಳು :

ಇ	ಈ	ಇ̲ (ɨ)		ಉ	ಊ
ಎ	ಏ	ಅ̲ (ə)	ಆ̲ (əː)	ಒ	ಓ
ಎ̲ (ɛ)	ಏ̲ (ɛː)	ಅ	ಆ	ಒ̲ (ɔ)	ಓ̲ (ɔː)

ವ್ಯಂಜನಗಳು :

ಪ್	ತ್	ಟ್	ಚ್	ಕ್
ಬ್	ದ್	ಡ್	ಜ್	ಗ್
	ಸ್		ಶ್	ಹ್
ಮ್	ನ್	ಣ್	ಞ್	ಙ್
ವ್	ಲ್	ಳ್	ಯ್	
	ರ್			

ಅನುನಾಸೀಕರಣ : ~

ವಿಶೇಷ ದೀರ್ಘ : s

ಸ್ವರಗಳು :

/ಇ/ ಮತ್ತು /ಈ/ ಗಳು ಉನ್ನತಪೂರ್ವ ಅವೃತ್ತ (High front unrounded) ಸ್ವರಗಳು.

ಉದಾ : ಇ + ಡ್ ಉ = ಇಡು, ಹ್ + ಅ + ವ್ + ಬ್ + ಇ + ಲ್ + ಅ = ಹಂಬಿಲ (ಹಂಬಲ)

ತ್ + ಅ + ಗ್ + ಇ = ತಗಿ (ತೆಗಿ)

ಈ + ಳ್ + ಇ = ಈಳಿ (ಈಳಿಕಾಯಿ), ಕ್ + ಅ + ಡ್ + ಈ + ಗ್ + ಎ = ಕಡೀಗೆ (ಕಡೆಗೆ), ಬ್ + ಅ + ರ್ + ಈ = ಬರೀ (ಸುಮ್ಮನೆ)

/ಇ̱/ ಉನ್ನತಮಧ್ಯ ಅವೃತ್ತ (High central unrounded) ಹ್ರಸ್ವಸ್ವರ.

ಸಂಸ್ಕೃತದಿಂದ ಸ್ವೀಕೃತವಾದ ಶಬ್ದಗಳಲ್ಲಿ ಋಕಾರಕ್ಕೆ ಬದಲಾಗಿ ರಕಾರದೊಂದಿಗೆ ಈ ಸ್ವರ ಕಂಡುಬರುತ್ತದೆ.

ಉದಾ : ರ್ + ಇ̱ + ಸ್ + ಇ = ರಿ̱ಸಿ (ಋಷಿ), ರ್ + ಇ̱ + ಣ್ + ಅ = ರಿಣ (ಋಣ)

ಅಲ್ಲದೆ ಅಲ್ಪಧ್ವನಿ ಬಿಡುಗಡೆಯ ಸಂದರ್ಭದಲ್ಲಿಯೂ ಈ ಸ್ವರ ಕಂಡುಬರುತ್ತದೆ.

ಉದಾ : ಬ್ + ಇ + ದ್ + ಇ̱ + ರ್ + ಉ = ಬಿದಿ̱ರು (ಬಿದಿರು)

ಬ್ + ಇ + ದ್ + ರ್ + ಉ = ಬಿದ್ರು (ಬಿದ್ದರು)

/ಉ/ ಮತ್ತು /ಊ/ ಉನ್ನತಪಶ್ಚವೃತ್ತ (High back rounded) ಸ್ವರಗಳು.

ಉದಾ : ಉ + ರ್ + ಇ = ಉರಿ, ತ್ + ಉ + ಟ್ + ಟ್ + ಉ = ತುಟ್ಟು = (ತೊಟ್ಟು), ಕ್ + ಒ + ಡ್ + ಉ = ಕೊಡು

ಊ + ಬ್ + ಅ + ನ್ + ಡ್ + ಎ = ಊಬಂಡೆ (ಊದುವ ಕೊಳವೆ)

ಕ್ + ಊ + ಸ್ + ಉ = ಕೂಸು (ಹೆಣ್ಣುಮಗು)

ಆ + ರ್ + ಊ = ಆರೂ (ಆದರೂ)

/ಎ/ ಮತ್ತು /ಏ/ ಉನ್ನತಮಧ್ಯಪೂರ್ವ ಅವೃತ್ತ (Higher mid front unrounded) ಸ್ವರಗಳು.

ಉದಾ : ಎ + ಲ್ + ಇ = ಎಲಿ (ಇಲಿ), ಯ್ + ಎ + ತ್ + ತ್ + ಉ = ಯೆತ್ತು(ಎತ್ತು), ಕ್ + ಏ + ಪ್ + ಪ್ + ಎ = ಕೆಪ್ಪೆ(ಕಪ್ಪೆ)
ಏ + ಞ್ + ಚ್ + ಣ್ + ಇ = ಏಂಚಣಿ (ಏಣಿ), ಸ್ + ಏ + ಡ್ + ಉ = ಸೇಡು
ಬ್ + ಆ + ರ್ + ಏ = ಬಾರೇ (ಸ್ತ್ರೀಲಿಂಗ, 'ಬಾ' ಶಬ್ದ)

/ಅ/ ಮತ್ತು /ಆ/ ಉನ್ನತ ಮಧ್ಯಮಧ್ಯ ಅವೃತ್ತ (Higher mid central unrounded) ಸ್ವರಗಳು.

ಉದಾ : ಆ + ಕ್ + ಕ್ + ಉ = ಅಕ್ಕು (ಅಡ್ಡಿಲ್ಲ)
ವ್ + ಅ + ಡ್ + ಇ + ಸ್ + ಉ = ಮಡಿಸು (ಮಡಿಸು)
ಬ್ + ಅ + ಗ್ + ಏ + ಲ್ + ಇ = ಬಗೇಲಿ (ಸ್ವಲ್ಪ)
ಆ + ವ್ + ಅ + ಳ್ + ಕ್ + ಎ = ಆವಳ್ಕೆ (ಆಕಳಿಕೆ)

/ಅ/ ಮತ್ತು /ಅ/ ವ್ಯತ್ಯಾಸಕ್ಕೆ,

ಉದಾ : ಕ್ + ಅ + ರ್ + ಅ = ಕರ
ಕ್ + ಅ + ರ್ + ಅ = ಕರ (ದನದಕರು)

/ಒ/ ಮತ್ತು /ಓ/ ಉನ್ನತಮಧ್ಯಪಶ್ಚವೃತ್ತ (Higher mid-back rounded) ಸ್ವರಗಳು.

ಉದಾ : ಒ + ಗ್ + ಇ = ಒಗಿ (ಎಸೆ), ಕ್ + ಒ + ನ್ + ಎ = ಕೊನೆ
ಓ + ಡ್ + ಲ್ + ಉ = ಓಡ್ಲು (ಹೆಂಚು)
ಜ್ + ಓ + ರ್ + ಉ = ಜೋರು (ಸೋರು)
ಎ + ಲ್ + ಲ್ + ಓ = ಎಲ್ಲೋ (ಎಲ್ಲೊ)

/ಏ/ ಮತ್ತು /ಏ/ ಅವನತ ಮಧ್ಯಪೂರ್ವ ಅವೃತ್ತ (Lowermid-front unrounded) ಸ್ವರಗಳು.

ಉದಾ : ಹ್ + ಏ + ಳ್ + ಎ = ಹೇಳೆ (ನೆವ)
ನ್ + ಏ + ಡ್ + ಏ = ನೆಡೆ (ನಡೆ)
ಬ್ + ಏ + ಳ್ + ಎ = ಬೇಳೆ (ಬೇಳೆ)

/ಎ/ ಮತ್ತು /ಎ/ ಗಳಲ್ಲಿರುವ ವ್ಯತ್ಯಾಸಕ್ಕೆ,

ಉದಾ : ನ್ + ಎ + ಟ್ + ಟ್ + ಗ್ + ಎ = ನೆಟ್ಗೆ (ಕೈಬೆರಳು ಮಡಿಚಿ ಮಾಡುವ ಶಬ್ದ)

ನ್ + ಎ + ಟ್ + ಟ್ + ಅ + ಗ್ + ಎ = ನೆಟ್ಟಗೆ (ನೇರವಾಗಿ)

ಯಲ್ಲಾಪುರ ಸೀಮೆಯಲ್ಲಿ ಈ /ಎ/ ಅವನತವೂ ಮಧ್ಯಸ್ವರವೂ ಆಗುತ್ತದೆ. ಕೆಲವೊಮ್ಮೆ ಯಕಾರವೂ ಅದರೊಂದಿಗೆ ಸೇರಿಕೊಳ್ಳುತ್ತದೆ.

ಉದಾ : ನ್ + ಯ್ + ಎ + ಳ್ + ಲ್ + ಉ = ನ್ಯೆಳ್ಳು (ನೆಳಲು)

ನ್ + ಯ್ + ಎ + ಲ್ + ಅ = ನ್ಯೆಲ (ನೆಲ)

/ಅ/ ಮತ್ತು /ಆ/ ಅವನತ ಮಧ್ಯಮಧ್ಯ ಅವೃತ್ತ (Lower mid-central unrounded) ಸ್ವರಗಳು.

ಉದಾ : ಅ + ರ್ + ಎ = ಅರೆ (ಅರ್ಧ), ಕ್ + ಅ + ರ್ + ಇ = ಕರಿ (ಕರೆ)

ಅ + ಳ್ + ಳ್ + ಅ = ಅಳ್ಳ (ಒಂದು ಅಳತೆ)

ಆ + ಶ್ + ಎ = ಆಶೆ (ಮೇಲೋಗರ)।

ಕ್ + ಆ + ಸ್ + ಉ = ಕಾಸು (ಕಾಯಿಸು)

ಗ್ + ಅ + ನ್ + ಆ = ಗನಾ (ಒಳ್ಳೆಯ)

/ಒ/ ಮತ್ತು /ಓ/ ಅವನತ ಮಧ್ಯಪಶ್ಚವೃತ್ತ (Lower-mid back rounded) ಸ್ವರಗಳು.

ಉದಾ : ಕ್ + ಒ + ದ್ + ಇ = ಕೊದಿ (ಕುದಿ)

ಹ್ + ಓ + ಪ್ + ಅ = ಹೋಪ (ಹೋಗೋಣ)

ಸ್ + ಓ + ರ್ + ಎ = ಸೋರೆ (ಸೋರೆಕಾಯಿ)

/ಒ/ ಮತ್ತು /ಒ/ ಗಳಲ್ಲಿರುವ ವ್ಯತ್ಯಾಸಕ್ಕೆ,

ಉದಾ : ಕ್ + ಒ + ಟ್ + ಟ್ + ಎ = ಕೊಟ್ಟೆ (ಕೊಟ್ಟೆನು)–ಕ್ರಿಯಾಪದ

ಕ್ + ಒ + ಟ್ + ಟ್ + ಎ = ಕೊಟ್ಟೆ (ಅಡ್ಕೆ ಕೊನೆಗೆ ಹಾಕುವ ಕೊಟ್ಟೆ)–ನಾಮಪದ

ಯಲ್ಲಾಪುರ ಸೀಮೆಯ ಕನ್ನಡದಲ್ಲಿ ಈ ಸ್ವರ ಅವನತವೂ ಕಡಿಮೆ ವೃತ್ತಸ್ಥವೂ ಆಗುತ್ತದೆ. ಕೆಲವೊಮ್ಮೆ ಜೊತೆಗೆ ವಕಾರವೂ ಸೇರಿಕೊಳ್ಳುತ್ತದೆ.

ಉದಾ : ಗ್ + ವ್ + ಓ + ಡ್ + ಎ = ಗ್ವೋಡೆ (ಗೋಡೆ)

ಕ್ + ವ್ + ಓ + ಣ್ + ಅ = ಕ್ವೋಣ (ಕೋಣ)

ವ್ಯಂಜನಗಳು :

/ಪ್/ ಅಘೋಷ ಅಲ್ಪಪ್ರಾಣ ಓಷ್ಠ್ಯಸ್ಪರ್ಶವ್ಯಂಜನ.

ಉದಾ : ಪ್ + ಅ + ಲ್ + ಲ್ + ಇ = ಪಲ್ಲಿ (ಹಲ್ಲಿ)
ಹ್ + ಅ + ಮ್ + ಪ್ + ಉ = ಹಂಪು (ಅರೆಹಣ್ಣು)
ಚ್ + ಇ + ಪ್ + ಪ್ + ಉ = ಚಿಪ್ಪು (ಗರಟೆಯ ಹೊದಿಕೆ)

/ತ್/ ಅಘೋಷ ಅಲ್ಪಪ್ರಾಣ ದಂತ್ಯಸ್ಪರ್ಶವ್ಯಂಜನ.

ಉದಾ : ತ್ + ಉ + ಪ್ + ಪ್ + ಉ = ತುಪ್ಪು (ಉಗುಳು)
ಕ್ + ಅ + ನ್ + ತ್ + ಉ = ಕಂತು (ಮುಳುಗು)
ಶ್ + ಅ + ಉ + ತ್ + ಎ = ಶೌತೆ (ಸವುತೆ)

/ಟ್/ ಅಘೋಷ ಅಲ್ಪಪ್ರಾಣ ಪಶ್ಚವತ್ಸ್ಯ ಮೂರ್ಧನ್ಯಸ್ಪರ್ಶ ವ್ಯಂಜನ.

ಉದಾ : ಟ್ + ಇ + ಸ್ + ಲ್ + ಉ = ಟಿಸ್ಲು (ಟಿಸಿಲು)
ಬ್ + ಎ + ಟ್ + ಟ್ + ಅ = ಬೆಟ್ಟ (ಗುಡ್ಡ)
ಮ್ + ಓ + ಟ್ + ಉ = ಮೋಟು (ಚಿಕ್ಕದು)

/ಚ್/ ಅಘೋಷ ಅಲ್ಪಪ್ರಾಣ ತಾಲವ್ಯ ಈಷತ್‌ಸ್ಪರ್ಶ.

ಉದಾ : ಚ್ + ಒ + ಬ್ + ಬ್ + ಎ = ಚೊಬ್ಬೆ (ಒಂದು ರೀತಿಯ ಬುಟ್ಟಿ)
ಬ್ + ಎ + ಚ್ + ಚ್ + ಉ = ಬೆಚ್ಚು (ಹೆದರು)
ಚ್ + ಆ + ಚ್ + ಉ = ಚಾಚು (ಗೋಡೆಗೆ ತಗುಲಿಸಿ ಇಡು)

/ಕ್/ ಅಘೋಷ ಅಲ್ಪಪ್ರಾಣ ಕಂಠ್ಯವ್ಯಂಜನ.

ಉದಾ : ಕ್ + ಒ + ಯ್ + ಲ್ + ಉ = ಕೊಯ್ಲು (ನಾಮಪದ, ಕೊಯ್ಯುವುದು)
ಮ್ + ಅ̱ + ಕ್ + ಅ = ಮ̱ಕ (ಮೊಗ)
ಹ್ + ಎ̱ + ಕ್ + ಕ್ + ಉ = ಹೆ̱ಕ್ಕು (ಹೆರಕು)

/ಬ್/ ಘೋಷ ಅಲ್ಪಪ್ರಾಣ ಓಷ್ಠ್ಯಸ್ಪರ್ಶ.

ಉದಾ : ಬ್ + ಅ + ದ್ + ಧ್ + ಅ = ಬದ್ಧ (ಸತ್ಯ)
ಹ್ + ಅ + ಬ್ + ಬ್ + ಉ = ಹಬ್ಬು (ಪಸರಿಸು)
ಜ್ + ಅ + ಮ್ + ಬ್ + ಅ + ರ್ + ಅ = ಜಂಬರ (ಸಂಭ್ರಮ)

/ದ್/ ಅಘೋಷ ಅಲ್ಪಪ್ರಾಣ ದಂತ್ಯಸ್ಪರ್ಶ.

ಉದಾ : ದ್ + ಇ + ಮ್ + ಬ್ + ಅ = ದಿಂಬ (ದಡ)
ಹ್ + ಒ̱ + ದ್ + ಇ̱ = ಹೊ̱ದಿ̱ (ಹದಿ)
ಮ್ + ಅ + ದ್ + ದ್ + ಉ = ಮದ್ದು (ಔಷಧಿ)

/ಡ್/ ಘೋಷ ಅಲ್ಪಪ್ರಾಣ ಮೂರ್ಧನ್ಯಸ್ಪರ್ಶ.

ಉದಾ : ಡ್ + ಒ̱ + ಙ್ + ಕ್ + ಉ = ಡೊ̱ಂಕು (ಡೊಂಕು)
ಕ್ + ಅ + ಣ್ + ಡ್ + ಇ = ಕಂಡಿ (ತೂತು)
ಹ್ + ಇ + ಡ್ + ಇ = ಹಿಡಿ (ಕಸಬರಿಗೆ)

/ಜ್/ ಘೋಷ ಅಲ್ಪಪ್ರಾಣ ತಾಲವ್ಯ ಈಷತ್‌ಸ್ಪರ್ಶ.

ಉದಾ : ಜ್ + ಅ + ನ್ + ನ್ + ಎ = ಜನ್ನೆ (ಮೊಸರು)
ಸ್ + ಓ̱ + ಜ್ + ಅ = ಸೋ̱ಜ (ಸಹಜ)
ಅ + ಜ್ + ಜ್ + ಅ = ಅಜ್ಜ (ಅಜ್ಜ)

/ಗ್/ ಘೋಷ ಅಲ್ಪಪ್ರಾಣ ಕಂಠ್ಯಸ್ಪರ್ಶ.

ಉದಾ : ಗ್ + ಎ̱ + ಡ್ + ಅ = ಗೆ̱ಡ (ಗಿಡ)
ನ್ + ಒ̱ + ಗ್ + ಅ = ನೊ̱ಗ (ನೊಗ)
ಶ್ + ಇ + ಗ್ + ಗ್ + ಉ = ಶಿಗ್ಗು (ನಾಚಿಕೆ)

/ಸ್/ ಅಘೋಷ ಜಿಹ್ವಾಗ್ರವರ್ತ್ಸ್ಯ ಊಷ್ಮ (Voiceless apico alveolar sibilant) ವ್ಯಂಜನ.

ಉದಾ : ಸ್ + ಒ̱ + ರ್ + ಇ = ಸೊ̱ರಿ (ಸುರಿ)
ಎ + ಸ್ + ರ್ + ಉ = ಎಸ್ರು (ಕುದಿಯುವ ನೀರ))
ತ್ + ಉ + ಸ್ + ಅ = ತುಸ (ಸ್ವಲ್ಪ)

/ಶ್/ ಅಘೋಷ ಜಿಹ್ವಾಮುಖ ವರ್ತ್ಸ್ಯ ಊಷ್ಮ (Voiceless blade alveolar sibilant) ವ್ಯಂಜನ.

ಉದಾ : ಶ್ + ಇ + ದ್ + ದ್ + ಎ = ಶಿದ್ದೆ (ಸಿದ್ದೆ)
ಹ್ + ಅ + ಶ್ + ವ್ + ಉ = ಹಶ್ವು (ಹಸಿವು)
ಕ್ + ಇ + ಶ್ + ಎ = ಕಿಶೆ (ಕಿಸೆ)

/ಹ್/ ಘೋಷ ಕಾಕಲ್ಯಘರ್ಷ ವ್ಯಂಜನ.

ಉದಾ : ಹ್ + ಇ + ಳ್ + ಳ್ + ಎ = ಹಿಳ್ಳೆ (ಚಿಕ್ಕ ಮಗು)
ಬ್ + ಅ + ಹ್ + ಅ + ಳ್ + ಅ = ಬಹಳ

/ಮ್/ ಘೋಷ, ಉಭಯೋಷ್ಠ್ಯ ಅನುನಾಸಿಕ.

ಉದಾ : ಮ್ + ಅ + ಡ್ + ಲ್ + ಉ = ಮಡ್ಲು (ತೆಂಗಿನ ಗರಿ)
ಸ್ + ಉ + ಮ್ + ಮ್ + ಗ್ + ಎ = ಸುಮ್ಮ್ಗೆ (ಸುಮ್ಮನೆ)
ಜ್ + ಆ + ಮ್ + ಅ = ಜಾಮ (ಜಾವ)

/ನ್/ ಜಿಹ್ವಾಗ್ರ ವರ್ತ್ಸ್ಯ ಅನುನಾಸಿಕ.

ಉದಾ : ನ್ + ಆ + ತ್ + ಅ = ನಾತ (ಕೆಟ್ಟ ವಾಸನೆ)
ಮ್ + ಅ + ನ್ + ಅ + ಗ್ + ಉ = ಮನಗು (ಮಲಗು)
ಕ್ + ಅ + ನ್ + ತ್ + ಅ = ಕಂತ (ಆಳ)

/ಣ್/ ಮೂರ್ಧನ್ಯ ಅನುನಾಸಿಕ.

ಉದಾ : ಮ್ + ಆ + ಣ್ + ಇ = ಮಾಣಿ (ಗಂಡುಹುಡುಗ)
ಮ್ + ಅ + ಣ್ + ಡ್ + ಎ = ಮಂಡೆ (ತಲೆಗೂದಲು)
ಗ್ + ಇ + ಣ್ + ಣ್ + ಉ = ಗಿಣ್ಣು (ಕಬ್ಬಿನ ಗಂಟು)

/ಙ್/ ಕಂಠ್ಯ ಅನುನಾಸಿಕ.

ಉದಾ : ತ್ + ಅ + ಙ್ + ಗ್ + ಇ = ತಂಗಿ
ಸ್ + ಅ + ಙ್ + ಗ್ + ತ್ + ಇ = ಸಙ್ಗ್ತಿ (ಜೊತೆ)

/ಮ್/, /ನ್/, /ಣ್/, /ಙ್/ ಗಳಲ್ಲಿರುವ ವ್ಯತ್ಯಾಸಗಳಿಗೆ.

ಉದಾ : ಮ್ + ಉ + ಗ್ + ಗ್ + ಉ = ಮುಗ್ಗು
ನ್ + ಉ + ಗ್ + ಗ್ + ಉ = ನುಗ್ಗು
ಅ + ನ್ + ನ್ + ಅ = ಅನ್ನ
ಅ + ಣ್ + ಣ್ + ಅ = ಅಣ್ಣ
ಕ್ + ಅ + ಮ್ + ಚ್ + ಉ = ಕಮ್ಚು (ಮಗುಚಿ ಇಡು)
ಕ್ + ಅ + ನ್ + ಚ್ + ಉ = ಕನ್ಚು (ಕಂಚು)
ಪ್ + ಅ + ಣ್ + ತ್ + ಇ = ಪಣ್ತಿ (ಹಣತೆ)
ಪ್ + ಅ + ಙ್ + ಗ್ + ತ್ + ಇ = ಪಙ್ಗ್ತಿ (ಸಾಲು)

/ವ್/ ಅಘೋಷ, ಉಭಯೋಷ್ಠ್ಯ.

ಉದಾ : ವ್ + ಅ + ಜ್ + ಜ್ + ಎ = ವಜ್ಜೆ (ಭಾರ)
ವ್ + ಓ + ಳ್ + ಇ = ವೋಳಿ (ಸಾಲು)
ತ್ + ಒ̠ + ವ್ + ವ್ + ಎ = ತೊ̠ವ್ವೆ (ತೊವೆ)
ಮ್ + ಆ + ವ್ + ಉ = ಮಾವು

/ಲ್/ ವತ್ಸ್ಯ್ಯ ಪಾರ್ಶ್ವಿಕ (Alveolar lateral).

ಉದಾ : ಲ್ + ಆ + ಗ್ + ಊ = ಲಾಗೂ (ಹೊಂದಿಕೆ)

ಸ್ + ಒ + ಲ್ + ಇ = ಸೊಲಿ (ಸುಲಿ)

ಎ + ಲ್ + ಲ್ + ಆ = ಎಲ್ಲಾ (ಎಲ್ಲರೂ)

/ಳ್/ ಮೂರ್ಧನ್ಯಪಾರ್ಶ್ವಿಕ (Retroflex lateral).

ಉದಾ : ಎ + ಳ್ + ಎ = ಎಳೆ (ಬಲಿಯದ)

ತ್ + ಎ + ಳ್ + ಸ್ + ಉ = ತೆಳ್ಸು (ತಿಳಿಸು)

ಹ್ + ಒ + ಳ್ + ಳ್ + ಇ = ಹೊಳ್ಳಿ (ಜಗುಲಿ)

/ಯ್/ ಘೋಷ ತಾಲವ್ಯ.

ಉದಾ : ಯ್ + ಆ̃ + ನ್ = ಯಾ̃ನ್ (ನಾನು).

ಬ್ + ಅ + ಯ್ + ಸ್ + ಉ = ಬಯ್ಸು (ಬಯಸು)

ಬ್ + ಅ + ಯ್ + ಯ್ + ಉ = ಬಯ್ಯು

/ರ್/ ಘೋಷ ವತ್ಸ್ಯ್ಯ.

ಉದಾ : ರ್ + ಅ + ವ್ + ಕ್ + ಎ = ರವ್ಕೆ (ಕುಪ್ಪುಸ)

ತ್ + ಅ + ರ್ + ಎ = ತರೆ (ಗೀರು)

ಹ್ + ಅ + ರ್ + ಕ್ + ಉ = ಹರ್ಕು (ಹರುಕು)

ಅನುನಾಸೀಕರಣ :

ಸಾಮಾನ್ಯವಾಗಿ ಅನುನಾಸಿಕಗಳ ಹಿಂದುಮುಂದಿನ ಸ್ವರಗಳೂ ಅನುನಾಸೀಕರಣ ಗೊಳ್ಳುತ್ತವೆ. ಯ ಮತ್ತು ವ ಗಳೂ ಕೆಲವೊಮ್ಮೆ ಅನುನಾಸಿಕತ್ವವನ್ನು ಹೊಂದು ತ್ತವೆ. ಇಷ್ಟಲ್ಲದೇ ಹವ್ಯಕ ಭಾಷೆಯಲ್ಲಿ ಅನುನಾಸೀಕರಣವು ಪ್ರತ್ಯೇಕವಾದ ಧ್ವನಿಮಾ ಸ್ಥಾನವನ್ನು ಹೊಂದುತ್ತದೆ. ಅದು ಅಲ್ಲಿ ಕೆಲವೊಮ್ಮೆ ಗೌರವಸೂಚಕವೂ ಹೌದು.

ಉದಾ : ತ್ + ಆ = ತಾ (ತೆಗೆದುಕೊಂಡು ಬಾ)

ತ್ + ಆ̃ = ತಾ̃ (ತಾನು)

ಆ = ಅದು (ವಿಶೇಷಣ)

ಆ̃ = ಕುತೂಹಲವನ್ನು ವ್ಯಕ್ತಪಡಿಸುವಲ್ಲಿ ಅಥವಾ ಕರೆಗೆ ಓಗೊಡುವಲ್ಲಿ

ಅ + ವ್ + ಅ = ಅವ (ಅವಳು)

ಅ + ವ್ + ಅ̃ = ಅವ̃ = (ಅವನು)

ಬಾ ಇವನ್ನು ಬ್ಹಾ ಎಂದು ಉಚ್ಚರಿಸಿದರೆ ಅದು ಏಕವಚನವಾದರೂ ಗೌರವ ಸೂಚಕವಾಗುತ್ತದೆ.

ವಿಶೇಷದೀರ್ಘ :

ಇದು ಮಾತಿಗೆ ಹೆಚ್ಚಿನ ಒತ್ತನ್ನು ನೀಡುವಲ್ಲಿ ಸಹಾಯಕಾರಿಯಾಗುತ್ತದೆ.

ಉದಾ : ಗಡದ್ದ್........ ಆಗಿ (ಗಡದ್ದಾಗಿ) ಇತ್ಯಾದಿ.

ಉತ್ತರಕನ್ನಡ ಜಿಲ್ಲೆಯ ಕನ್ನಡದಲ್ಲಿ ಮಹಾಪ್ರಾಣಗಳಿಲ್ಲ. ಮಹಾಪ್ರಾಣಯುಕ್ತ ಸಂಸ್ಕೃತ ಶಬ್ದಗಳನ್ನು ಉಚ್ಚರಿಸುವಾಗ ಒಮ್ಮೊಮ್ಮೆ ಪ್ರಯತ್ನಪೂರ್ವಕವಾಗಿ ಮಹಾ ಪ್ರಾಣ ಬರಬಹುದು ಅಷ್ಟೆ. ಶಿಷ್ಟಕನ್ನಡದ /ಶ್/, /ಷ್/, /ಸ್/ ಈ ಮೂರರಲ್ಲಿ /ಶ್/ ಮತ್ತು /ಸ್/ ಎರಡೇ ಕಂಡುಬರುತ್ತವೆ. ನಾಯಕಕನ್ನಡದಲ್ಲಿ ಇ̱, ಅ̱, ಆ̱ ಸ್ವರ ಗಳಿಲ್ಲ. ಅಂತೆಯೇ ಹಾಲಕ್ಕಿಗಳಲ್ಲಿ ಇ̱, ಆ̱ ಸ್ವರಗಳಿಲ್ಲ. /ಳ್̱/ ಎಂಬ ಮೂರ್ಧನ್ಯ ವ್ಯಂಜನವೂ ಹಾಲಕ್ಕಿ ಕನ್ನಡದಲ್ಲಿಲ್ಲ. /ಲ್/ ಮತ್ತು /ಳ್/ ಗಳ ಬದಲು ಲಕಾರ ವೊಂದೇ ಪ್ರಯೋಗವಾಗುತ್ತದೆ. ಉದಾ : ಹೇಳು > ಹೇಲು, ಕೇಳು > ಕೇಲು ಇತ್ಯಾದಿ. ಇದರಲ್ಲಿ /ಚ್/, /ಶ್/, /ಸ್/ ಗಳ ಬದಲಾಗಿ /ಚ಼್/ ಎಂಬ ಒಂದೇ ಧ್ವನಿಮಾ ಇದೆ. ಈ /ಚ಼್/, /ಚ್/ ಮತ್ತು /ಸ್/ ಗಳ ಮಧ್ಯದ ಧ್ವನಿಮಾ ಆಗಿದೆ. ಇದೇ ಕೆಲವೊಮ್ಮೆ /ಚ್/, /ಶ್/, /ಸ್/ ಗಳಾಗಿ ಸಾಮಾನ್ಯನ ಕಿವಿಗೆ ಕೇಳುತ್ತದೆ.

ಉದಾ : ಚ಼್ + ನ್ + ಜ್ + ಎ = ಚ಼ಂಜೆ (ಸಂಜೆ)

ಚ಼್ + ಆ + ಕ್ + ಉ = ಚ಼ಾಕು (ಚಾಕು)

ಚ಼್ + ಇ + ಚ಼್ + ಉ = ಚ಼ಿಚ಼ು (ಶಿಶು)

ಹವ್ಯಕಕನ್ನಡವನ್ನು ಬಿಟ್ಟು, ಇತರ ಪ್ರಭೇದಗಳಲ್ಲಿ ಕೆಲವೊಮ್ಮೆ ಅಂತ್ಯದ ಎಕಾರ > ಇಕಾರವಾಗುತ್ತದೆ.

ಉದಾ : ನಡೆ > ನಡಿ, ಧಾರೆ > ಧಾರಿ, ವ್ಯಥೆ > ಯತಿ, ಕಟ್ಗೆ > ಕಟ್ಗಿ

ಶಬ್ದಾದಿಯ ಇಕಾರ ಕೆಲವೊಮ್ಮೆ ಎಕಾರವಾಗುತ್ತದೆ. ಅಕಾರ > ಎಕಾರವಾಗು ತ್ತದೆ.

ಸೀರೆ > ಸೇರಿ

ದೀಪ < ದೇಪ

ಗಂಟೆ > ಗೆಂಟೆ

'ಇಲ್ಲ' ಎನ್ನುವ ಶಬ್ದವನ್ನು ವಿಕಲ್ಪದಿಂದ 'ಎಲ್ಲ' ಎನ್ನುವುದುಂಟು. ಗಾವೊಕ್ಕಲು 'ಯೆಲ್ಲ' ಎಂದೇ ಹೇಳುತ್ತಾರೆ.

ಕೆಲವೊಮ್ಮೆ ಶಬ್ದಾದಿಯ ಉಕಾರ > ಒಕಾರವಾಗುತ್ತದೆ.

ಕುದ್ರೆ > ಕೊದ್ರಿ
ಕುಡಿ > ಕೊಡಿ

ಕೆಲವೊಮ್ಮೆ ಳಕಾರ > ಲಕಾರವಾಗುತ್ತದೆ.

ಒದ್ದಳು > ಒದ್ಲು
ಬಿದ್ದಳು > ಬಿದ್ಲು

ಕೆಲವೊಮ್ಮೆ ಲಕಾರ > ನಕಾರವಾಗುತ್ತದೆ.

ಮೇಲೆ > ಮೇನೆ
ಕೊಡಲಾರೆ > ಕೊಡುನಾರೆ
ಬರಲಿಲ್ಲ > ಬರನಿಲ್ಲ

ನಾಡವರ ಕನ್ನಡದಲ್ಲಿ ಆದಿಯ ಒಕಾರ > ಉಕಾರವಾಗುವುದು ಹೆಚ್ಚು.

ತೊಟ್ಟು > ತುಟ್ಟು
ಹೊಟ್ಟು > ಹುಟ್ಟು ಇತ್ಯಾದಿ.

ಹೀಗೆ ಪ್ರತಿಯೊಂದು ಕನ್ನಡದಲ್ಲಿಯೂ ಅಲ್ಪಸ್ವಲ್ಪ ವ್ಯತ್ಯಾಸಗಳು ಇದ್ದೇ ಇರುತ್ತವೆ. ಅದೇ ಅವುಗಳ ವೈಶಿಷ್ಟ್ಯವೂ ಹೌದು.

ಆಕೃತಿನೂಗಳು :

ಇದರಲ್ಲಿ ಮುಖ್ಯವಾಗಿ ನಾವು, ಉತ್ತರಕನ್ನಡ ಜಿಲ್ಲೆಯ ಕನ್ನಡದ ಲಿಂಗ, ವಚನ ವ್ಯವಸ್ಥೆಗಳನ್ನೂ ಸರ್ವನಾಮ, ವಿಭಕ್ತಿ ಪ್ರತ್ಯಯಗಳನ್ನೂ, ಕಾಲವಾಚಕ, ವಿಧ್ಯರ್ಥಕ, ನಿಷೇಧಾರ್ಥಕ ಪ್ರತ್ಯಯಗಳನ್ನೂ ನೋಡಬಹುದಾಗಿದೆ.

ವಚನವ್ಯವಸ್ಥೆ :

ಮೂಲದ್ರಾವಿಡದಂತೆ ಏಕ, ಅನೇಕ ವಚನಗಳು ಈ ಭಾಷೆಯಲ್ಲಿವೆ. ಹವ್ಯಕರಲ್ಲಿ ಪ್ರಥಮ ಪುರುಷದಲ್ಲಿ ಎಲ್ಲ ಲಿಂಗಗಳಲ್ಲೂ ಬಹುವಚನ ರೂಪ 'ಅವು' ಎಂದಾಗುತ್ತದೆ. ಉಳಿದವುಗಳಲ್ಲಿ ಅವರು ~ ಅವ್ರು ಮತ್ತು ಅವು (ನಪುಂಸಕಲಿಂಗ) ಎಂದಾಗುತ್ತವೆ. ಅಲ್ಲದೆ ಹವ್ಯಕರಲ್ಲಿಯೇ :

–ಅ್ಯಕ್ಳೊ – ಅಂದ್ಯಕ್ಳೊ → ತಂದ್ಯಕೊ. ತಂದಂದ್ಯಕ್ಳೊ.
–ಇಂದಿಕ್ಳೊ ~ ಇಂದಿಕ್ಳು → ತಾಯಿಂದಿಕ್ಳೊ ~ ತಾಯಿಂದಿಕ್ಳು
–ರು, –: ರು → ಮಳ್ರು, ಅತ್ತೇರು

–ಅಕ್ಳು → ಭಟ್ಟಕ್ಳು
–ಗ್ಳು, –ಗಿಳು, → ಆಳ್ಗ್ಳು, ಆಳ್ಗಿಳು
–ಗೊ → ಆಳ್ಗೊ
–ಓರು, –ನೋರು → ಅತ್ತ್ಯೋರು, ಮಾವನೋರು

ಇತರ ಕನ್ನಡಗಳಲ್ಲಿ.

–ದಿರು, –ದೀರು → ಅಣ್ಣದಿರು, ಭಾವದಿರು, ಭಾವದೀರು
–ಅರು → ಹೆಂಗಸರು
–ಊರು → ಅರಸೂರು
–ಗಲು, –ಕಲು → ಗುರುಗಲು, ಮಕ್ಕಲು (ಹಾಲಕ್ಕಿ)
–ಗೋಲು –ಗ್ಲು ಮಂಗಗೋಲು, ಕಡ್ಡಿಗ್ಲು

ಲಿಂಗವ್ಯವಸ್ಥೆ :

ಸಾಮಾನ್ಯವಾಗಿ ಕನ್ನಡದಲ್ಲಿ ನಾವು ಪ್ರಥಮಪುರುಷ ಏಕವಚನ ಮತ್ತು ಬಹುವಚನಗಳಲ್ಲಿ ಮಾತ್ರ ಲಿಂಗಭೇದವನ್ನು ಗುರುತಿಸಬಹುದು. ಉತ್ತರಕನ್ನಡ ಜಿಲ್ಲೆಯ ಕನ್ನಡದ ಲಿಂಗವ್ಯವಸ್ಥೆಯು ಮೂಲದ್ರಾವಿಡ ಪದ್ಧತಿಯನ್ನೇ ಹೋಲುತ್ತಿದ್ದರೂ ಏಕವಚನದಲ್ಲಿ ಮಾತ್ರ ವ್ಯತ್ಯಾಸವನ್ನು ಹೊಂದಿದೆ. ಆದುದರಿಂದ ಏಕವಚನದಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂದು ಎರಡು ಭಾಗ ಮಾಡಬಹುದು. ಬಹುವಚನದಲ್ಲಿ, ಮಹತ್ ಮತ್ತು ಅಮಹತ್ ಎಂಬ ಮೂಲದ್ರಾವಿಡ ಲಿಂಗ ವ್ಯವಸ್ಥೆಯನ್ನೇ ಗುರುತಿಸಬಹುದು.

ಉದಾ : ಲಕ್ತ್ತಿಗೆ (ಅತ್ತಿಗೆ) ಹೆಗ್ಡೇರ್ ಮನೀಗೆ ಹೋಗೀದು.
ನಾಯಿ ಮನಗೀದು. } ಪುಲ್ಲಿಂಗೇತರ

ಅಣ್ಣ ಪೇಟೆಗ್ ಹೋಗೀನು. — ಪುಲ್ಲಿಂಗ

ಹೆಂಗಚರೆಲ್ಲ ಅಡಿಗೆ ಮಾಡ್ತೀವ್ರು.
ಗಂಡಚರೆಲ್ಲ ಕೆಲಸಕ್ ಹೋಗೀರು. } ಮಹತ್

ದನಕರ ಎಲ್ಲ ಹಟ್ಟಿಗ್ ಬಂದ್ವು. — ಅಮಹತ್

ಹವ್ಯಕರಲ್ಲಿ ಅಮ್ಮ ಬಂದ, ಅಮ್ಮ ಬಂತು ಎರಡೂ ಪ್ರಯೋಗಗಳು ಕಂಡು ಬರುತ್ತವೆ. ಇದರಿಂದ ಏಕವಚನದಲ್ಲಿಯೂ ಕೂಡ ಮಹತ್ ಮತ್ತು ಅಮಹತ್ ಭೇದ ಕೆಲವುಕಡೆ ಇರುವುದನ್ನು ಗಮನಿಸಬಹುದು. ಸ್ತ್ರೀವಾಚಕ ಶಬ್ದಗಳನ್ನು ಸೃಷ್ಟಿಸಿಕೊಳ್ಳುವಾಗ ಸಾಮಾನ್ಯವಾಗಿ –ಇ, –ಎ, –ತಿ, –ತೆ, –ಇತ್ತಿ ಪ್ರತ್ಯಯಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

ಉದಾ : ಕಳ್ಳ > ಕಳ್ಳಿ, ಜಾಣ > ಜಾಣೆ
ನೆಂಟ > ನೆಂಟ್ತಿ, ಬುದ್ಧಿವಂತ > ಬುದ್ಧಿವಂತೆ
ಬೀಗ > ಬೀಗಿತ್ತಿ ಇತ್ಯಾದಿ.

ಸರ್ವನಾಮಗಳು :

ಪ್ರಥಮಪುರುಷ ಪುಲ್ಲಿಂಗ ಏಕವಚನ, ಹಾಲಕ್ಕಿ ಕನ್ನಡದಲ್ಲಿ ಅವ ~ ಅವ್ನ ಎಂದೂ, ನಾಯಕ ಕನ್ನಡದಲ್ಲಿ ಅವ ಎಂದೂ, ನಾಮಧಾರಿಗಳಲ್ಲಿ ಅವ್ ಎಂದೂ ವ್ಯತ್ಯಾಸ ಹೊಂದುತ್ತದೆ. ಹವ್ಯಕರಲ್ಲಿ ಅಪ್ಪೆ ಎಂದು ಅನುನಾಸಿಕಯುಕ್ತವಾಗುತ್ತದೆ. ಅಂತೆಯೇ ಬಹುವಚನದಲ್ಲಿ ಅವರು ಎನ್ನುವುದರ ಬದಲಾಗಿ ಹವ್ಯಕರಲ್ಲಿ ಅವು, ಅವ್ಕಳ್ಳ, ಅವ್ಕೊ ಎಂದಾಗುತ್ತವೆ. ಸ್ತ್ರೀಲಿಂಗ ಏಕವಚನ ಅವಳು, ಹವ್ಯಕರಲ್ಲಿ ಅವ್ಳ, ಅದು ಮತ್ತು ಅವ ಎಂದಿದೆ. ಮಧ್ಯಮಪುರುಷ ಏಕವಚನ ನೀನು, ಸಾಮಾನ್ಯವಾಗಿ ನೀ ಎಂದಾಗುತ್ತದೆ. ಬಹುವಚನದಲ್ಲಿ ನೀವು – ನೀವ್ ಎಂದಾಗುತ್ತದೆ. ಇದೇ ಹಾಲಕ್ಕಿ ಕನ್ನಡದಲ್ಲಿ ನೀಮು, ಹವ್ಯಕರಲ್ಲಿ ನಿಜ್ಗ, ನಿಜ್ಗ್ಳ, ನಿಜ್ಗೋವು, ನೀವು ಎಂಬ ರೂಪಗಳನ್ನು ತಾಳುತ್ತದೆ. ಉತ್ತಮಪುರುಷ ಏಕವಚನ ನಾನು – ನಾ, ಬಹುವಚನ ನಾವು – ನಾವ್, ನಾಮು (ಹಾಲಕ್ಕಿ) ಎಂದು ಉಳಿದ ಕನ್ನಡಗಳಲ್ಲಿದ್ದರೆ ಹವ್ಯಕರಲ್ಲಿ ಬೇರೆ ರೀತಿಯದಿದೆ. ಮೂಲದ್ರಾವಿಡದ ಸಮಾವೇಶಕ, ಅಸಮಾವೇಶಕ ವ್ಯತ್ಯಾಸ ವೈಶಿಷ್ಟ್ಯವನ್ನು ಹವ್ಯಕ ಕನ್ನಡ ಕೆಲಮಟ್ಟಿಗೆ ಉಳಿಸಿಕೊಂಡಿದೆ.

ಏಕವಚನದಲ್ಲಿ ಆನು, ಧ್ಯಾನು, ನಾನು– ಈ ಮೂರು ರೂಪಗಳಿವೆ. ಬಹುವಚನದಲ್ಲಿ ಯಜ್ಗ, ಯಜ್ಗ್ಳು – ಅಸಮಾವೇಶಕ ರೂಪಗಳಾದರೆ, ನಜ್ಗೊ, ನಜ್ಗ್ಳು, ನಜ್ಗೋವು – ಸಮಾವೇಶಕ ರೂಪಗಳು.

ಕೆಲವುಕಡೆ ಮಾತ್ರ ಎರಡೂ ರೂಪಗಳು ಒಂದೇ ಅರ್ಥವನ್ನು (ಅಸಮಾವೇಶಕ) ಹೊಂದಿರುವುದೂ ಉಂಟು. ಆ ಸಂದರ್ಭದಲ್ಲಿ 'ನಾವ್' ಎನ್ನುವುದು ಸಮಾವೇಶಕ ಅರ್ಥವನ್ನು ಕೊಡುತ್ತದೆ.

ಸಂಖ್ಯಾವಾಚಕಗಳು :

ಒಂದು > ವಂದು
ಎರಡು > ಎಯ್ಡು ಎಂದು ಅಲ್ಪವ್ಯತಾಸ ಹೊಂದುತ್ತವೆ.

ಹಾಲಕ್ಕಿ ಕನ್ನಡದಲ್ಲಿ ಮಾತ್ರ,

ಏಳು > ಏಲು
ಸಾವಿರ > ಛಾವಿರ ಎಂದಾಗುತ್ತವೆ.

ವಿಭಕ್ತಿ ಪ್ರತ್ಯಯುಗಳು :

ಪ್ರಥಮಾ ವಿಭಕ್ತಿಗೆ ಪ್ರತ್ಯಯವಿಲ್ಲ.

ಉದಾ : ಅಣ್ಣ, ಗೆಡ, ಸೊಸೆ ಇತ್ಯಾದಿ.

ದ್ವಿತೀಯಾ : –ನ, –ಅನ್ನ, –ಅ, –

ಉದಾ : ಅವ್ನ, ಅಣ್ಣನ್ನ, ಸೊಸ್ಯ, ಅದ, ಮಸಿ.

ತೃತೀಯಾ : –ಇಂದ, –ನಿಂದ

ಉದಾ : ಸೊಸಿಂದ, ಅಣ್ಣನಿಂದ.

ಕೆಲವೊಮ್ಮೆ ದ್ವಿತೀಯೆಯ ನಂತರ, ಎಕಾರಾಂತ ಶಬ್ದಗಳಿಗೆ ಯಕಾರವೂ, ಉಕಾರಾಂತ ಶಬ್ದಗಳಿಗೆ ವಕಾರವೂ, ವಿಭಕ್ತಿ ಪ್ರತ್ಯಯುಗಳಿಗಿಂತ ಮೊದಲು ಅಂಟಿಕೊಳ್ಳುತ್ತವೆ.

ಉದಾ : ಮಳೆಯಿಂದ, ಗುರುವಿಂದ.

ಚತುರ್ಥಿ : –ಕೆ, ಅಜಿ$^{3}_{\cap}$, –ಗೆ, –ಈಗೆ

ಉದಾ : ಅದಕೆ, ಅಣ್ಣಂಗೆ, ಸೊಸಿಗೆ, ಹೆಂಡ್ತೀಗೆ, ಗುರುವೀಗೆ.

ಪಂಚಮಿ : ವಿಭಕ್ತಿ ಇಲ್ಲ.

ಷಷ್ಠಿ : –ದ, –ನ ಮತ್ತು ಇ, ಉ, ಏಕಾರಾಂತ ಪದಗಳೆಲ್ಲ ದೀರ್ಘ ಹೊಂದುತ್ತವೆ.

ಉದಾ : ದನದ. ಅಣ್ಣನ, ಹೆಂಡ್ತೀ, ಗುರೂ, ಆನೇ.

ಸಪ್ತಮಿ : –ನಲ್ಲಿ, –ಲಿ, –ಅಲ್ಲಿ, ಆಗೆ

ಇ, ಉ, ಎಕಾರಾಂತಗಳೆಲ್ಲ ದೀರ್ಘೀಕರಣದ ನಂತರ –'ಲಿ' ಪ್ರತ್ಯಯ ಧಾರಣೆ ಮಾಡುತ್ತವೆ.

ಉದಾ : ಅಣ್ಣನಲ್ಲಿ, ಹೆಂಡ್ತೀಲಿ, ಆನೇಲಿ, ಗುರೂಲಿ, ದನದಲ್ಲಿ, ಅದರಾಗ ಇತ್ಯಾದಿ.

ಕಾಲವಾಚಕ ಪ್ರತ್ಯಯುಗಳು :

ಭೂತ ಮತ್ತು ಅಭೂತ ಎಂದು ಎರಡು ಕಾಲಗಳನ್ನು ಗುರುತಿಸಬಹುದು.

ಧಾತು + ಕಾಲವಾಚಕ ಪ್ರತ್ಯಯ + ಆಖ್ಯಾತ ವಿಭಕ್ತಿಪ್ರತ್ಯಯ = ಕ್ರಿಯಾಪದ.

ಭೂತಕಾಲ : –ದ್, –ತ್, ಡ್, –ಟ್ ಗಳನ್ನು ಭೂತಕಾಲಸೂಚಕ ಪ್ರತ್ಯಯಗಳೆನ್ನಬಹುದು.

ತಿನ್ + ದ್ + ಎ = ತಿಂದೆ
ಕಲ್ + ತ್ + ಅ = ಕಲ್ತ
ಉಣ್ + ಡ್ + ಆ = ಉಂಡ
ಕೊಡು + ಟ್ + ಅ = ಕೊಟ್ಟ

ಆಗು, ಹೋಗು ಈ ಧಾತುಗಳ ಭೂತಕಾಲರೂಪ, ಹಾಲಕ್ಕಿ ಕನ್ನಡದಲ್ಲಿ ಆಗಿ, ಹೋಗಿ ಎಂದಾಗುತ್ತದೆ.

ಉದಾ : ಆಗೀವ, ಹೋಗೀವ

ಇವಲ್ಲದೆ ಪ್ರಥಮಪುರುಷದಲ್ಲಿ ಹವ್ಯಕರಲ್ಲಿ ಇನ್ನೂ ಕೆಲವು ಪ್ರತ್ಯಯಗಳಿವೆ :

–ಯ್ದ್, –ದ್ಯ, –ಜ ಮುಂತಾಗಿ

ಉದಾ : ಹೋಗು + ಯ್ದ್ + ಅ = ಹೊಯ್ದ (ಸಿರಸಿ, ಸಿದ್ದಾಪುರ)
ಹೋಗು + ದ್ಯ್ + ಅ = ಹೋದ್ಯ (ಬನವಾಸಿ)
ಹೋಗು + ಜ್ + ಅ = ಹೋಜ (ಸಿರಸಿ, ಕುಮಟಾ)

ಅಭೂತಕಾಲ : ತ್, ವ್ ಪ್ರತ್ಯಯ.

ಮಾಡ್ + ತ್ + ಎ = ಮಾಡ್ತೆ
ಮಾಡ್ + ವ್ + ಎ = ಮಾಡ್ವೆ

ಯಲ್ಲಾಪುರದ ಕಡೆ, ಭವಿಷ್ಯತ್ ಕಾಲದಲ್ಲಿ ಧಾತುವಿಗೆ ಎ ಪ್ರತ್ಯಯ ಹತ್ತುತ್ತದೆ.


ಉದಾ : ಹೋಗು + ಎ = ಹೋಗೆ (ಹೋಗುತ್ತೇನೆ ಅಥವಾ ಹೋಗಬೇಕು)
ಬರ್ + ಎ = ಬರೇ (ಬರುತ್ತೇನೆ ಅಥವಾ ಬರಬೇಕು)

ವಿಧ್ಯರ್ಥಕಗಳು :

	ಏ.ವ.	ಬ.ವ.
ಉ. ಪು. :	—	–ಊವನಿ, ಈವೊನಿ, ಈವ
ಮ. ಪು. :	φ	–ಇರಿ, –ರ
ಪ್ರ. ಪು. :	–ಲಿ, - ಇಲ್ಲಿ	–ಲಿ, –ಇಲಿ

ಉದಾ :

ಉ. ಪು. :	—	ಕುಡೂವನಿ, ಕುಡೀವನಿ, ಕುಡೀವ
ಮ. ಪು. :	ಕುಡಿ	ಕುಡೀರಿ, ಕುಡಿರ ~ ಕುಡ್ರ
ಪ್ರ. ಪು. :	—	ಕುಡಿಲಿ, ಕುಡೀಲಿ



ಉತ್ತರಕನ್ನಡ ಜಿಲ್ಲೆಯ ಉಪಭಾಷಾ ಭೂಪಟ

ಪಕ್ಷಾರ್ಥರೂಪ :

ಪಕ್ಷಾರ್ಥ ಭೂತಕಾಲ ಧಾತುವಿಗೆ –ರೆ, –ಈರೆ ಪ್ರತ್ಯಯ ಸೇರಿಸಿದರೆ ಪಕ್ಷಾರ್ಥ ವುಂಟಾಗುತ್ತದೆ.

ಉದಾ : ಮಾಡ್ + ಈರೆ – ಮಾಡೀರೆ.
ಬಂದ + ರೆ – ಬಂದರೆ ~ ಬಂದ್ರೆ.
ಬಂದ್ + ಈರೆ – ಬಂದೀರೆ.

ನಿಷೇಧಾರ್ಥಕ ಪ್ರತ್ಯಯಗಳು :

–ಅದೆ ಎಂಬುದು ನಿಷೇಧಾರ್ಥಕ ಪ್ರತ್ಯಯ. ಕೆಲವೊಮ್ಮೆ ಅನ್ ಅಥವಾ ಇನ್ ಜೊತೆಗೆ –ಇಲ್ ಸೇರಿಸಿಕೊಂಡು ನಿಷೇಧಾರ್ಥಕ ಪ್ರತ್ಯಯಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

ಉದಾ : ಮಾಡದೆ, ಮಾಡನಿಲ್ಲ, ಮಾಡ್ನಿಲ್ಲ.

ಆಗ, ಬ್ಯಾಡ ಮುಂತಾದ ಶಬ್ದಗಳೂ ನಿಷೇಧಾರ್ಥಕ ವಿಧ್ಯರ್ಥರೂಪಗಳನ್ನು ಸೂಚಿಸುತ್ತವೆ,

ಉದಾ : ಮಾಡೂಕಾಗ, ಮಾಡಬ್ಯಾಡ.

ಹವ್ಯಕರಲ್ಲಿ, ಭೂತಕಾಲದಲ್ಲಿ –ಅಲ್, ಅಭೂತಕಾಲದಲ್ಲಿ –ಅದ್ ಮತ್ತು –ಅ ಪ್ರತ್ಯಯಗಳಿವೆ.

ಉದಾ : ಮಾಡಲಿಲ್ಲೆ.
ಮಾಡದಿಲ್ಲೆ.
ಮಾಡ ಇತ್ಯಾದಿ.

ಆಖ್ಯಾತ ವಿಭಕ್ತಿಪ್ರತ್ಯಯಗಳು :

ಭೂತಕಾಲ

	ಏ. ವ.	ಬ. ವ.
ಉ. ಪು.	ಇ (ಎ),	–ರು, ಈರು ಅ, ಬ, ಮು
ಮ. ಪು.	ಎ	–ಈರಿ
ಪ್ರ. ಪು.	ಅ, ಉ, –ಈದ	ರು, –ಈರು ದ್ವು.

ಉದಾ :

	ಏ. ವ.	ಬ. ವ.
ಉ. ಪು.	ಮಾಡ್ಡಿ (ಮಾಡ್ದೆ)	ಮಾಡ್ದ್ರು, ಮಾಡೀರು
		ಮಾಡ್ದ್ಯ, ಮಾಡ್ದೊ, ಮಾಡ್ದ್ಯ
ಮ. ಪು.	ಮಾಡ್ದೆ	ಮಾಡ್ದ್ರಿ, ಮಾಡೀರಿ
ಪ್ರ. ಪು.	ಮಾಡ್ದ, ಮಾಡೀದ	ಮಾಡ್ದ್ರು, ಮಾಡೀರು
	ಮಾಡ್ತು	ಮಾಡುದ್ವು

ಅಭೂತಕಾಲ

	ಏ. ವ.	ಬ. ವ.
ಉ. ಪು. :	ಎ (ಇ)	ಊರು, ಒ, ಅ, ಅ್ಯ
ಮ. ಪು. :	ಎ	ಊರಿ, ರಿ
ಪ್ರ. ಪು. :	ಅ	ರು, ಊರು, ಅ
	ಊದು	ಊವು

ಉದಾ :

	ಏ. ವ.	ಬ. ವ.
ಉ. ಪು. :	ಮಾಡ್ತೆ (ಮಾಡ್ತಿ)	ಮಾಡೂರು
		ಮಾಡ್ತೊ, ಮಾಡ್ತ, ಮಾಡ್ತ್ಯ
ಮ. ಪು. :	ಮಾಡ್ತೆ	ಮಾಡೂರಿ, ಮಾಡ್ತಿ
ಪ್ರ. ಪು. :	ಮಾಡ್ತ	ಮಾಡ್ತ್ರು, ಮಾಡೂರು
	ಮಾಡೂದು	ಮಾಡ್ತ, ಮಾಡೂವು

ಹವ್ಯಕ ಕನ್ನಡದಲ್ಲಿ ಭವಿಷ್ಯತ್ತಿನ ಅರ್ಥದಲ್ಲಿ, ಲಿಂಗ, ವಚನಗಳ ಭೇದವಿಲ್ಲದೆ. ಪ್ರಥಮಪುರುಷದಲ್ಲಿ –ಗು ಪ್ರತ್ಯಯ ಹತ್ತುತ್ತದೆ.

ಉದಾ : ಅಪ್ಪಿ ಮಾಡ್ಗು
ಅವ ಮಾಡ್ಗು } ಅವು ಮಾಡ್ಗು
ಅದು ಮಾಡ್ಗು

ಇತರ ವಿಷಯಗಳು :

ಉತ್ತರಕನ್ನಡ ಜಿಲ್ಲೆಯ ಭಾಷೆಯನ್ನು ಸಮೀಕ್ಷಿಸುವಾಗ. ಅದರ ವರ್ಣನಾತ್ಮಕ ವಿಶ್ಲೇಷಣೆಯೊಂದಿಗೆ ಭಾಷೆಗೆ ಸಂಬಂಧಪಟ್ಟ ಕೆಲವು ವೈಶಿಷ್ಟಪೂರ್ಣವಾದ ವಿಷಯಗಳನ್ನು ಅವಲೋಕಿಸಬೇಕಾಗುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

ಸಂಬಂಧವಾಚಕ ಶಬ್ದಗಳು :

ಅಜ್ಜ, ಅಜ್ಜಿ, ಅಪ್ಪ, ಅವ್ವಿ (ಅಮ್ಮ), ಅಣ್ಣ, ತಮ್ಮ, ಅಕ್ಕ, ತಂಗಿ, ಅತ್ತಿಗೆ, ನಾದಿನಿ, ಮಾವ, ಅತ್ತೆ, ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಪ್ಪ, ದೊಡ್ಡಮ್ಮ, ಭಾವ, ಮೈದುನ, ಓರಗಿತ್ತಿ, ಶಡುಕ ಇತ್ಯಾದಿ ಶಬ್ದಗಳೇ ಸಾಮಾನ್ಯವಾಗಿ ಸಂಬಂಧವನ್ನು ಸೂಚಿಸಲು ಬಳಕೆಯಲ್ಲಿವೆ. ಗಂಡನ ತಮ್ಮ ಮೈದುನನಾಗುತ್ತಾನೆ. ಗಂಡನ ಅಥವಾ ಹೆಂಡತಿಯ ತಂಗಿ ನಾದಿನಿಯಾಗುತ್ತಾಳೆ. ಗಂಡನ ಅಣ್ಣನ ಅಥವಾ ತಮ್ಮನ ಹೆಂಡತಿ ಓರಗಿತ್ತಿ (ವಾರ್ಗಿತ್ತಿ) ಯಾಗುತ್ತಾಳೆ. ಹೆಂಡತಿಯ ತಂಗಿಯ ಗಂಡ ಶಡುಕ (ಶಡ್ಕ) ನಾಗುತ್ತಾನೆ. ಇವಲ್ಲದೆ, ನಾಡವರಲ್ಲಿ ಅಜ್ಜನಿಗೆ (ಅಪ್ಪಾಜಿ) ಎಂದೂ ಹೇಳುತ್ತಾರೆ. ಅಲ್ಲಿ ತಮ್ಮನ ಹೆಂಡತಿ ಮೈದ್ನಿಯಾಗುತ್ತಾಳೆ. ಪ್ರಾಯಶಃ ಮೈದುನ ಶಬ್ದದ ಸ್ತ್ರೀಲಿಂಗ ರೂಪವಾಗಿ ಮೈದ್ನಿ ಬಂದಿರಬೇಕು. ಅದೇ ಭಾಷೆಯಲ್ಲಿ ಹೆಂಡತಿಯ ತಮ್ಮ ನೆಂಟ, ಅಂತೆಯೇ ಅವನ ಹೆಂಡತಿ ನಂಟ್ತಿ. ತಾಯಿಯನ್ನು ಅವ್ವ (ಅವ್ವಿ) ಎರಡು ರೀತಿಯಲ್ಲಿಯೂ ಕರೆಯುತ್ತಾರೆ. ಹವ್ಯಕರಲ್ಲಿ ತಾಯಿಗೆ ಅಮ್ಮ, ಅಬ್ಬೆ, ಆಯಿ ಈ ಮೂರೂ ಶಬ್ದಗಳೂ ಬೇರೆ ಬೇರೆ ಪ್ರದೇಶಗಳಲ್ಲಿ ಬಳಕೆಯಲ್ಲಿವೆ. ಅಮ್ಮ ಎಂಬುದಕ್ಕೆ ವಿಧವೆ ಎಂಬ ಅರ್ಥವು ಕೆಲವು ಪ್ರದೇಶದಲ್ಲಿಯೂ, ಅಜ್ಜಿ ಎಂಬ ಅರ್ಥವು ಮತ್ತೆ ಕೆಲವು ಕಡೆಗಳಲ್ಲಿಯೂ ಬಳಕೆಯಲ್ಲಿದೆ. ಅಬ್ಬೆ ಎಂಬ ಶಬ್ದ ಹಳಗನ್ನಡದ್ದು. ಇದು ವಿಶೇಷವಾಗಿ ಯಲ್ಲಾಪುರ ಹಾಗೂ ಕರಾವಳಿ ಪ್ರದೇಶಗಳಲ್ಲಿ ಪ್ರಯೋಗದಲ್ಲಿದೆ. ಆಯಿ ಶಬ್ದ ಕೊಂಕಣಿಯ ಪ್ರಭಾವದಿಂದ ಬಂದುದು. ಇಷ್ಟಲ್ಲದೆ ಹವ್ಯಕರಲ್ಲಿ ಅಜ್ಜಿಗೆ ಅಮ್ಮಮ್ಮ (ಅಮ್ಮನ ಅಮ್ಮ) ದೊಡ್ಡಪ್ಪನನ್ನು ಬೊಪ್ಪ, ಚಿಕ್ಕಪ್ಪನನ್ನು ಚಿಕ್ಕಯ್ಯ, ಅಪ್ಪಚ್ಚಿ, ಕಕ್ಕ ಮುಂತಾಗಿ ಸಂಬೋಧಿಸುತ್ತಾರೆ. ಅಂತೆಯೇ ಚಿಕ್ಕಮ್ಮನಿಗೂ ಚಿಕ್ಕಿ, ಕವ್ವ ಮುಂತಾದ ಶಬ್ದಗಳುಂಟು. ಲಿಂಗಾಯತರನ್ನು ಬಿಟ್ಟರೆ ತಂದೆ-ತಾಯಿಗಳಿಗೆ ಯಾರೂ ಬಹುವಚನವನ್ನು ಉಪಯೋಗಿಸಿ ಮಾತನಾಡುವದಿಲ್ಲ. ಹವ್ಯಕರಲ್ಲಿ ಪತಿಗೆ ಹಾಗೂ ಪತಿಗೃಹದ ಹಿರಿಯರಿಗೆಲ್ಲ ಬಹುವಚನವನ್ನು ಉಪಯೋಗಿಸಿ ಮಾತನಾಡಬೇಕು. ಉದಾ : ಅತ್ತೇರು, ಮಾವನೋರು (ಮಾವಗಳು) ಇತ್ಯಾದಿ. ನಾಡವರಲ್ಲಿ ಗಂಡನ ಅಣ್ಣನನ್ನು ಮಾತ್ರ ಬಹುವಚನದಿಂದ ಸಂಬೋಧಿಸಲೇಬೇಕು.

ವ್ಯಕ್ತಿಗಳ ಹೆಸರು :

ಕುಲದೇವರುಗಳ ಹೆಸರುಗಳನ್ನು ಇಡುವುದೇ ವಿಶೇಷವಾಗಿ ಕಂಡುಬರುತ್ತದೆ. ಜೊತೆಗೆ ಅಜ್ಜ, ಅಜ್ಜಿಯರ ಹೆಸರನ್ನು ಮಗ, ಮಗಳಿಗಿಡುವುದೂ ಕೂಡ ಸರ್ವೇಸಾಮಾನ್ಯ. ಹವ್ಯಕರಲ್ಲಿ ಕೆಲವೇ ಕುಟುಂಬದಲ್ಲಿ ಗಂಡುಮಕ್ಕಳಿಗೆ ವಿಷ್ಣು, ನಾರಾಯಣ, ಗಣಪತಿ ಈ ಮೂರೇ ಹೆಸರುಗಳನ್ನು ಇಡುವ ಪದ್ಧತಿ ಇದೆ. ಅದರ ಹೊರತಾಗಿ,

ಶಿವಪ್ಪ, ಇಗ್ಗಪ್ಪ (ವಿಘ್ನೇಶ್ವರ), ರಾಮಚಂದ್ರ, ವೆಂಕಟಿ, ವೆಂಕಪ್ಪ (ವೆಂಕಟರಮಣ), ಪರಮು (ಪರಮೇಶ್ವರ), ಮಾಬ್ಲ (ಮಹಾಬಲೇಶ್ವರ) ಮುಂತಾಗಿ ಪುರುಷರ ಹೆಸರುಗಳೂ. ಸುಬ್ಬಿ. ಸುಬ್ಬಮ್ಮ, ವೆಂಕು, ವೆಂಕಮ್ಮ, ಭಾಗಮ್ಮ (ಭಾಗೀರಥಿ), ಗಣಪಿ ಮುಂತಾದವು ಮಹಿಳೆಯರ ಹೆಸರುಗಳೂ ಆಗಿರುತ್ತವೆ. ಹಾಲಕ್ಕಿ ಒಕ್ಕಲರಲ್ಲಿ ಬೀರಾ, ನಾಗಾ, ತಿಮ್ಮ, ಗೋವಿಂದ, ವಾಸು, ಹನುಮಂತ ಮುಂತಾದವು ಪುರುಷರಲ್ಲಿಯೂ. ತುಲ್ಸಿ, ಶಿವಿ, ನಾಗಿ, ತಿಮ್ಮಿ, ಪುಟ್ಟಿ ಮುಂತಾದ ಹೆಸರುಗಳ ಹೆಂಗಸರಲ್ಲಿಯೂ ಕಂಡು ಬರುತ್ತವೆ. ಇತರರಲ್ಲಿ, ಸೋಮಣ್ಣ, ಬೊಮ್ಮಣ್ಣ, ಸಾಂತಯ್ಯ, ಗುರಪ್ಪ, ಮಲ್ಲಪ್ಪ, ತಿರಕಪ್ಪ, ಬೋರಾ, ಈರಾ, ನಾಗು, ವೆಂಕು, ತಿಮ್ಮಕ್ಕ, ಗಂಗಕ್ಕ, ಈರಮ್ಮ, ಗೌರಮ್ಮ, ಕಾವೇರಿ ಮುಂತಾದ ಹೆಸರುಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಒಟ್ಟಿನಲ್ಲಿ ಅಣ್ಣ, ಅಪ್ಪ, ಅಕ್ಕ, ಅಮ್ಮ ಇವನ್ನು ಹೆಸರಿನೊಂದಿಗೆ ಸೇರಿಸಿ ಸಂಬೋಧಿಸುವುದು ವಿಶೇಷವಾಗಿ ಬಳಕೆಯಲ್ಲಿದೆ. ಅಲ್ಲದೆ ಪುರುಷರು ಹೆಸರನ್ನು ಹೇಳುವಾಗ, ಹೆಸರಿನ ಜೊತೆಗೆ ಅಡ್ಡ ಹೆಸರನ್ನು ಸೇರಿಸಿ ಹೇಳುವುದೇ ಹೆಚ್ಚು. ಹವ್ಯಕರಲ್ಲಿ ಹೆಗಡೆ, ಭಟ್ಟ ವಿಶೇಷವಾಗಿವೆ. ಜೊತೆಗೆ ಸಭಾಹಿತ, ಭಾಗ್ವತ, ಹೆಬ್ಬಾರ, ದೀಕ್ಷಿತ ಮುಂತಾದವುಗಳೂ ಇವೆ. ಹಾಲಕ್ಕಿಗಳಲ್ಲಿ ಗೌಡ ಎಂಬುದು ಅಡ್ಡಹೆಸರು. ಸಾಮಾನ್ಯನೂ ಅವರಲ್ಲಿ ಗೌಡನೇ. ನಾಡವರಲ್ಲಿ ನಾಯಕ, ನಾಮಧಾರಿಗಳಲ್ಲಿ ನಾಯ್ಕ ಅಡ್ಡಹೆಸರುಗಳಾದರೆ, ಗುಡಿಗಾರ, ಕಂಚುಗಾರರಲ್ಲಿ ಊರಿನ ಹೆಸರಿನೊಂದಿಗೆ ಕರ್ ಎಂಬ ಪ್ರತ್ಯಯ ಸೇರಿ ಅಡ್ಡಹೆಸರಾಗಿರುವ ವೈಶಿಷ್ಟ್ಯ ಪೂರ್ಣ. ಉದಾ : ಮಡಗಾಂವ್‌ಕರ, ಅಂಕೋಲೆಕರ್, ಹೊನ್ನಾವರಕರ್, ಇತ್ಯಾದಿ. ಮೊಗೇರ ಜಾತಿಯಲ್ಲಿ ತಾರೀಬಾಗ್ಲ, ಮಾಪಾರಿ, ಹಾದಿಮನಿ, ಕಡೀಮನಿ ಮುಂತಾದವು ಅಡ್ಡಹೆಸರುಗಳಾಗಿವೆ,

ಊರ ಹೆಸರುಗಳು :

ಅಚ್ಚಕನ್ನಡ ಹೆಸರುಗಳೊಂದಿಗೆ ಕೊಂಕಣಿ, ಮತ್ತು ಆಂಗ್ಲ ಭಾಷಾಪ್ರಭಾವಿತ ಹೆಸರುಗಳಿರುವುದು ಗಮನಾರ್ಹ. ಕಡೇವಾಡವೇ. ಆಂಗ್ಲೀಕರಣದಿಂದ ಕಾರವಾರವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಊರುಗಳ ಕನ್ನಡ ಹೆಸರುಗಳೆಲ್ಲ ಬಹುತೇಕವಾಗಿ ಗುಡ್ಡ, ಗದ್ದೆ. ಹಳ್ಳಿ, ಕೋಡು, ಊರು, ಮನೆ, ಕೊಪ್ಪ, ಕುಳಿ. ಕಿ, ಣಿ. ಗಾರು, ಹೊಂಡ, ಕಟ್ಟಾ, ಸರ, ತೋಟ, ಟ್, ಕೊಡ್ಲು, ಕೇರಿ, ಬೈಲ್, ಕುರ್ವೆ, ಕೈ. ಗುಂಡಿ, ಗುಂಜಿ, ಗಿರಿ, ಗುತ್ತಿ, ಖಂಡ ಮುಂತಾದ ಭೌಗೋಲಿಕ, ಪ್ರಾಕೃತಿಕ ಸ್ಥಳನಾಮಗಳೊಂದಿಗೆ ಕೂಡಿಕೊಂಡಿವೆ. ಹೊಸಗದ್ದೆ, ಹೆಗಡೆ ಮಕ್ಕಿಗದ್ದೆ, ಜಡ್ಡಿಗದ್ದೆ, ಹಕ್ಕಿಗದ್ದೆ, ಮಾಣಗದ್ದೆ, ಮಹೀಗಡ್ಡೆ, ಉಪ್ಪಿನಗದ್ದೆ ಮುಂತಾಗಿ ಪ್ರಮುಖವಾದ ಗದ್ದೆಪ್ರದೇಶಗಳನ್ನು ಸೂಚಿಸಿದರೆ, ಬಾಳೆಹಳ್ಳಿ, ಮತ್ತಿಹಳ್ಳಿ, ಹುಣಸೇಮನೆ, ಆಲಳ್ಳಿ, ಕಾನಸೊಪ್ಪ, ಗುಡ್ಡೇಕೊಪ್ಪ, ಹಲಸಿನಕೊಪ್ಪ, ಕ್ಯಾದಗಿಕೊಪ್ಪ, ಮಾವಿನಕೊಪ್ಪ, ಮುಂತಾದವು ಗಿಡ

ಮರಗಳ ಪ್ರಾಧಾನ್ಯತೆಯನ್ನು ಎತ್ತಿ ತೋರಿಸುತ್ತವೆ. ಭರತನಹಳ್ಳಿ, ಸೋಮನಹಳ್ಳಿ ಬೊಪ್ಪನಹಳ್ಳಿ, ಹನುಮನಕೊಪ್ಪ, ನಾಗಶೆಟ್ಟಿಕೊಪ್ಪ, ಬಲಶೆಟ್ಟಿಕೊಪ್ಪ, ಬಸವನಕೊಪ್ಪ, ಹೆಬ್ಬಾರ್ನಕೇರಿ, ಮಾದನಕೇರಿ ಮುಂತಾದವು ಪ್ರಮುಖ ವ್ಯಕ್ತಿಯ ಸ್ಮರಣೆಯ ಮೇಲಿಂದ ಬಂದಿರಬಹುದಾದ ಹೆಸರುಗಳು. ನಂದಗದ್ದೆ ಎನ್ನುವುದು ಹೊಲೆಯ ಆಡಳಿತಗಾರನೊಬ್ಬನಿಂದ ಬಂದ ಹೆಸರಂತೆ. ಹಳದೋಟ, ಹೊಸ್ತೋಟ, ದೊಡ್ಡನಳ್ಳಿ, ಶಣ್ಣಕೇರಿ, ಯಡ್ಡಳ್ಳಿ, ಹೊಸಳ್ಳಿ. ಹಿರೇಬೈಲು. ಹೆಬೈಲು, ಕೆಳಗಿನಕೇರಿ, ಪುಟ್ಟನಮನೆ, ಹಿರೇಕೈ ಮುಂತಾದುವು ವ್ಯತ್ಯಾಸವನ್ನು ಗುರುತಿಸಲು ಹುಟ್ಟಿದವುಗಳಾಗಿರಬೇಕು. ಕಾನೇ ಮುಖ್ಯವಾಗಿ ಕಾನಗೋಡು, ಕಾನಸೂರು, ಬಿದ್ರಕಾನುಗಳು ಹುಟ್ಟಿದ್ದರೆ, ಗುತ್ತಿ ಪ್ರಾಧಾನ್ಯತೆಯಿಂದ ಹಿರೇಗುತ್ತಿ, ಗುತ್ತಿಗೇರಿ, ಗುತ್ತಿಬೈಲುಗಳು ಜನ್ಮತಾಳಿವೆ. ಕುಳಿ ಶಬ್ದದಿಂದ ಬಂದ ಅಡ್ಕೆಕುಳಿ, ಪಡುಗುಳಿ. ಶಿಗುಳಿ, ಕುಳಿಬೇಡು ಮುಂತಾದ ಹೆಸರಿನ ಹಳ್ಳಿಗಳಿವೆ. ಪಡುವಣಬೈಲ್, ಕೆರೇಬೈಲ್, ಯರೇಬೈಲ್, ಕೊಡ್ಲಿಬೈಲ್, ಹೊನ್ನೆ ಬೈಲ್, ಹಿರೇಬೈಲ್ ಇವೆಲ್ಲ ಪೂರ್ವಪದದಲ್ಲಿ ಪ್ರಾಕೃತಿಕ ಮತ್ತು ಭೌಗೋಲಿಕ ಪರಿಸರ ವನ್ನು ವರ್ಣಿಸುವ ವಿಶೇಷಣಗಳಾಗಿರುವುದನ್ನು ಗಮನಿಸಬಹುದು. ಈ ಜಿಲ್ಲೆಯ ಸ್ಥಳನಾಮಗಳನ್ನು ಕುರಿತ ಸಮಗ್ರ ಅಧ್ಯಯನ ನಡೆದಿಲ್ಲ. ಕಾರವಾರ ಜಿಲ್ಲೆಯಲ್ಲಿರ ಬಹುದಾದ ಸುಮಾರು ೧೩೦೦ ಹಳ್ಳಿಗಳ ಹೆಸರುಗಳ ಭಾಷಾ ವೈಜ್ಞಾನಿಕ ವಿಶ್ಲೇಷಣೆ, ಸ್ವಾರಸ್ಯಕರವೂ ಕುತೂಹಲಕಾರಿಯೂ ಆದ ಅಧ್ಯಯನವಾದೀತು.

ಬೈಗಳುಗಳು :

ಹಲ್ಕಟ್ಟುರಂಡೆ, ಹಡ್ಬೆರಂಡೆ, ಬೋಸುಡಿರಂಡೆ, ತಾಯ್ನಹಡ, ಬಿಕ್ನಾಸಿ, ಸತ್ತಮನೆ, ಹುಚ್ಚುಮುಂಡೇಗಂಡ, ಸೂಳೆಮಗ, ಘಟಿಂಗ ಮುಂತಾದವು ಸಾಮಾನ್ಯ ಬೈಗಳುಗಳು. ಬಯಲುಸೀಮೆಯಲ್ಲಿ ಮುಕ್ಳ್ಯರಿ, ಮಂಗಮುಂಡೆ, ಬಿಕ್ಕೇರಂಡೆ, ಹಂಚಿನಗುರುಪ್ಪೆ, ಲಭಾಡ ಮುಂತಾದ ವಿಶೇಷ ಬೈಗಳುಗಳಿವೆ. ಅಂತೆಯೇ ಯಲ್ಲಾಪುರ ಸೀಮೆಯಲ್ಲಿ ಚಾಪರ್ಕ, ಕೊಳೀರಂಡೆ, ಬಡೀರಂಡೆ, ಸೊಡ್ಲೆರಂಡೆ, ಹಲ್ಕಟ್ಟು ಕೂಸು.... ಹೋಯ್ತಿಂದು, ದರಿದ್ರಗೆಟ್ಟವ್ನೆ, ಕೆಟ್ಟಮುಸುಡಿನವನೆ ಮುಂತಾದವೂ ಬಳಕೆಯಲ್ಲಿವೆ. ಘಟ್ಟದ ಕೆಳಗೆ, ಕಳದವನೆ ಎಂಬ ಬೈಗಳು ವೈಶಿಷ್ಟ್ಯಪೂರ್ಣವಾದುದು, ಅದು, ಸತ್ತವನೆ ಎಂಬುದಕ್ಕೆ ಸಂವಾದಿಯಾದುದು.

ಶಿಶುನುಡಿಗಳು :

ಚಿಕ್ಕಮಕ್ಕಳ ಭಾಷೆಯೂ ಸ್ವಾರಸ್ಯಕರವಾಗಿದೆ. ಇಲ್ಲಿ, ಚಿಕ್ಕಮಕ್ಕಳ ಭಾಷೆ ಎಂದಾಗ, ಚಿಕ್ಕಮಕ್ಕಳೊಂದಿಗೆ ದೊಡ್ಡವರು ಆಡುವ ಶಬ್ದಗಳೂ ಸೇರಿವೆ. ಈ ಭಾಷೆಯೂ ಕೂಡ, ಜಾತಿಯಿಂದ ಜಾತಿಗೆ, ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ

ಹೊಂದಿರುವುದು ಸ್ಪಷ್ಟ. ಉದಾಹರಣೆಗೆ ಹವ್ಯಕರ ಮಕ್ಕಳು ಚಾಚಿ ಮಾಡಿಕೊಂಡರೆ ನಾಡವರ ಮಕ್ಕಳು ಕಾಕ ಮಾಡಿಕೊಳ್ಳುತ್ತಾರೆ. ತಾಯಂದಿರು ಅವರಿಗೆ ಅಮ್ಮಿ (ಮೊಲೆ) ಕುಡಿಸುತ್ತಾರೆ. ಮಕ್ಕಳು ಮಮ್ಮ (ಊಟ, ತಿಂಡಿ) ಬೇಕೆಂದೂ ಹಟ ಮಾಡುತ್ತಾರೆ. ಕೆಲವೊಮ್ಮೆ ಕಮ್ಮ ಅಥವಾ ಸಿಪಿ (ಸಿಹಿ) ಬೇಕೆಂದೂ, ಜಾಯಿ (ಹಾಲು) ಬೇಕೆಂದೂ ಹಟಮಾಡುತ್ತಾರೆ. ಹವ್ಯಕರ ಮಕ್ಕಳು ಮಿಂಮಿಂ (ಸ್ನಾನ) ಮಾಡಿ ದದ್ದ (ನಿದ್ರೆ) ಮಾಡುತ್ತಾರೆ. ಅದೇ ನಾಡವರ ಮಕ್ಕಳು ಹಮ್ಮುತ್ತಾರೆ. ಇವಲ್ಲದೆ ಬುವಾ (ಹೂವು), ಅಬ್ಬು (ಗಾಯ), ಪಾಯಿ (ಹರಿಯುವ ಜಂತು), ಗುಮ್ಮ (ಹೆದರಿಕೆಯ ಪ್ರಾಣಿ) ಗಳನ್ನೂ ಇಲ್ಲಿ ಹೆಸರಿಸಬಹುದು. ಒಟ್ಟಿನಲ್ಲಿ ಶಿಶುನುಡಿಗಳೂ ಅಷ್ಟೇ ಮಹತ್ವದುವು ಮತ್ತು ವೈವಿಧ್ಯಪೂರ್ಣವಾದುವು ಎಂದು ಉಲ್ಲೇಖಿಸುವುದಷ್ಟೇ ನನ್ನ ಉದ್ದೇಶ.

ಉತ್ತರ ಕನ್ನಡ ಜಿಲ್ಲೆಯ ಕೇವಲ ಪ್ರಾದೇಶಿಕ ವ್ಯತ್ಯಾಸಗಳನ್ನು ಎತ್ತಿತೋರಿಸಲು ಕೃಷಿಗೆ ಸಂಬಂಧಿಸಿದಂತೆ ಒಂದೆರಡು ಉದಾಹರಣೆಗಳನ್ನು ನೋಡಬಹುದು. ಹುಡಿ ಮಣ್ಣಿನ ಅಗೆ ಬಿತ್ತುವುದಕ್ಕೆ ಘಟ್ಟದ ಕೆಳಗೆ ಉಲಿ ಬಿತ್ತುವುದು ಎನ್ನುತ್ತಾರೆ. ಮಾಸಿ ಮಾಡುವುದು ಯಲ್ಲಾಪುರದ ಕಡೆ. ಹೊಯಕೆ ಮಾಡುವುದಾದರೆ ಬನವಾಸಿಯ ಕಡೆ ಹ್ವಾಕಿ ಮಾಡುವುದಾಗುತ್ತದೆ, ಸಿರಸಿ–ಸಿದ್ದಾಪುರದ ಕಡೆ ಹೂಡುವುದಾಗುತ್ತದೆ. ಭತ್ತದ ಸಸಿಯೊಂದಿಗೆ ಬೆಳೆದ ಕಾಡು ಗಿಡಗಳನ್ನು ಕೀಳುವುದು, ಉಳಿದ ಕಡೆ ಕಳೆ ಕೀಳುವು ದಾದರೆ, ಯಲ್ಲಾಪುರದ ಕಡೆ ಸೊದೆ ತೆಗೆಯುವುದಾಗಿದೆ. ಕೊರಡು–ಕುಂಟೆಗಳನ್ನು ಹೊಡೆಯುವುದು ಬಯಲುಸೀಮೆಯಲ್ಲಿ ಬರ ಹೊಡಿಯುವುದು, ಎಳಾಲು ಕಟ್ಟುವು ದಾಗಿದೆ. ಬೆಳೆ ಕೊಯ್ದು ನಂತರ ಅದನ್ನು ಆರಲು ಬಿಡುವುದನ್ನು ಯಲ್ಲಾಪುರದ ಕಡೆ ಅರಿಹಾಕುವುದು ಎನ್ನುತ್ತಾರೆ. ಅದನ್ನೇ ಕರಾವಳಿ ಪ್ರದೇಶದಲ್ಲಿ ಹರ್ಬುದು ಎನ್ನುತ್ತಾರೆ. ೭–೮ ಅರಿಗಳನ್ನು ಹಾಕಿದ ಒಂದು ಹೊರೆ, ಯಲ್ಲಾಪುರ ಪ್ರದೇಶದಲ್ಲಿ ಒಂದು ವಜ್ಜೆ ಯಾಗುತ್ತದೆ. ಕಣವೂ ಕೂಡ ಅಲ್ಲಿ ಕಳವಾಗುತ್ತದೆ. ಗೊಣಬೆ, ಹೋದಾಣಯಾಗು ತ್ತದೆ. ಇದೇ ಗೊಣಬೆ, ಬಯಲುಸೀಮೆಯಲ್ಲಿ ಬಣವೆಯಾಗಿಯೂ ಕರಾವಳಿ ಪ್ರದೇಶ ದಲ್ಲಿ ಗೋಣೆಯೂ ಆಗುತ್ತದೆ: ಸಿರ್ಸಿ–ಸಿದ್ದಾಪುರಗಳಲ್ಲಿ ಗೊಣಬೆ (ಗೊಣವೆ) ಯಾಗುವುದೂ ಉಂಟು. ಕಣದಲ್ಲಿ ಒಕ್ಕುವ ಕಂಬ, ಬಯಲುಸೀಮೆಯಲ್ಲಿ ಮೇಟಕಂಬ ವೆಂಬ ಹೆಸರಿನಲ್ಲಿಯೂ ಕರಾವಳಿಯಲ್ಲಿ ಉಕ್ಕಿಕಂಬ ಎಂಬ ಹೆಸರಿನಲ್ಲಿಯೂ ಪ್ರಚಲಿತ ವಿದೆ. ಕರಾವಳಿ ಪ್ರದೇಶದಲ್ಲಿ ಭತ್ತ ಸಳೆದು, ಹರಹಾಕಿ. ಮೊಲಿ ತೂರಿದ ನಂತರ ಭತ್ತದ ಕಾಳು ಹುಲಿರಾಶಿಯಾಗುತ್ತದೆ. ಬಿಳಿ ಹುಲ್ಲು ಸ್ವಿಕ್ರೆಯಾಗುತ್ತದೆ. ಭತ್ತವನ್ನು ಮೊರ ಅಥವಾ ಗೆಸ್ಸಿಯಿಂದ ತೂರಿದ ನಂತರ ಹುಳ್ಳು ಅಥವಾ ಹುಲ್ಲು ಹೊರಟು ಹೋಗಿ ಭತ್ತ ಶುದ್ಧವಾಗುತ್ತದೆ. ಒಕ್ಕುವ ಕ್ರಿಯೆಗೆ ಬಯಲುಸೀಮೆಯಲ್ಲಿ ಒಕ್ಲ ಹೊಡೆಯುವುದು ಎನ್ನುತ್ತಾರೆ.

ಬಾಳೆ ಸಾಮಾನ್ಯವಾಗಿ ಎಲ್ಲ ಕಡೆಗೆ ಬೆಳೆಯುತ್ತದೆ. ಬಾಳೆ ಸುಳಿ ಕರಾವಳಿಯಲ್ಲಿ ತಿಳ್ಳು ಆಗುತ್ತದೆ: ಅದರ ಹೆಡೆ ಹಾಡಾಗುತ್ತದೆ. ಕುಂಡಿಗೆಯ ಒಳಗಿನ ಮೃದುಭಾಗ ಬಾಳೆ ತುಪ್ಪವೂ, ಕುಂಡಿಗೆ ಕುಕ್ತವೂ ಆಗುತ್ತದೆ. ಸಿರ್ಸಿ-ಸಿದ್ದಾಪುರದ ಕಡೆ, ಬಾಳೆಯ ಚಿಕ್ಕ ಸಸಿಗೆ ಹಿಳ್ಳು ಎಂಬ ಹೆಸರಿದೆ. ಬಾಳೆಹಣ್ಣಿನ ಸಿಪ್ಪೆಯನ್ನು ಯಲ್ಲಾಪುರದ ಕಡೆ ಸಪ್ಪು ಎಂದೂ ಕರಾವಳಿಯಲ್ಲಿ ಚಿಲ್ಲೆ ಎಂದೂ ಕರೆಯುತ್ತಾರೆ. ಇಲ್ಲಿ ಈ ಚಿಲ್ಲೆ ಎನ್ನುವ ಶಬ್ದ ಗಮನಾರ್ಹ. ಏಕೆಂದರೆ ನಾಡವರಲ್ಲಿ ಚರ್ಮ ಎನ್ನುವ ಅರ್ಥದಲ್ಲಿ 'ಚಿಲ್ಲೆ' ಎಂಬ ಶಬ್ದವಿದೆ. ಅಂತೆಯೇ ತೊಟ್ಟು, -ತಟ್ಟು (ಯಲ್ಲಾಪುರ), ತುಟ್ಟು (ಕರಾವಳಿ), ಬಾಳೆಯಮುಂಡ, ಬಾಳೆಕುಂಟೆ (ಯಲ್ಲಾಪುರ), ಬಾಳೆದಿಂಡು (ಕರಾವಳಿ) ಎಂದು ಕರೆಯಲ್ಪಡುತ್ತದೆ. ಬಾಳೆಪಟ್ಟೆ ಹಸಿಯಿದ್ದಾಗ ಅದನ್ನು ಬಾಳೆಹಂದ್ರ (ಯಲ್ಲಾಪುರ) ಎಂದು ಕರೆಯುತ್ತಾರೆ. ಅದರ ತುಂಡನ್ನು ಅಲ್ಲಿ, ದೋಸೆ ಎರೆಯಲು ಉಪಯೋಗಿಸುತ್ತಾರೆ. ಆ ಪ್ರದೇಶದಲ್ಲಿ ಬಾಳೆಹಣ್ಣಿನಿಂದ ಮುಳ್ಕ, ಚಾಟಿದೋಸೆ, ದಡ್ಕ ಮುಂತಾದ ಸಿಹಿ ತಿಂಡಿಗಳನ್ನು ತಯಾರಿಸುತ್ತಾರೆ. ಬಾಳೆಕಾಯಿ ಚಿಪ್ಸ್‌ಗೆ ಹವ್ಯಕರು ಬಾಳೆಕಾಯಿ ತಾಳಿ ಎನ್ನುತ್ತಾರೆ. ಅದರಂತೆಯೇ ಯಾವ ಚಿಪ್ಸ ಆದರೂ ಅಲ್ಲಿ ಅದು ತಾಳಿಯಾಗುತ್ತದೆ. ಉತ್ತರಕನ್ನಡ ಜಿಲ್ಲೆಯಲ್ಲಿರುವ ಪ್ರತಿಯೊಂದು ಜನಾಂಗದ ಆಹಾರ-ಪದಾರ್ಥಗಳ ವಿವರಣೆಯೂ ತಿಂಡಿ-ತೀರ್ಥಗಳ ವೈವಿಧ್ಯತೆಯೂ ಪ್ರತ್ಯೇಕ ಲೇಖನದ ವಿಷಯವೇ ಆಗಿದೆ.

ಉತ್ತರಕನ್ನಡ ಜಿಲ್ಲೆಯ ಅಡಕೆಗಳಲ್ಲಿ ಅದೆಷ್ಟು ವೈವಿಧ್ಯತೆ ! ಚಿಕಣಿಅಡ್ಕೆ, ಆಪಿ, ಕಿರಡ್ಕೆ, ಅಜಗಾಯಿ, ಸಿಗರ್ಬೆಟ್ಟೆ, ಕಲ್ಬೆಟ್ಟೆ. ಸಿಪ್ಪೆಗೋಟು, ಒಂದೇ ಎರಡೇ. ಅಡ್ಕೆ ಕೊನೆಯನ್ನು ತುಂಬುವುದು ಹೆಡ್ಗೆ ಅಥವಾ ಕಲ್ಲಿಯಲ್ಲಾದರೆ, ಅಡ್ಕೆಯನ್ನು ತುಂಬುವುದು ಚೊಬ್ಬೆ ಅಥವಾ ಬುಟ್ಟಿಯಲ್ಲಿ.

ಧಾನ್ಯಗಳನ್ನು ಅಳೆಯುವಲ್ಲಿ ಸೊಲಿಗೆ, ಅಳ್ಳ (೩ ಸೊಲಿಗೆ), ಸಿದ್ದೆ (೨ ಅಳ್ಳ), ಕೊಳಗ (೬ ಸಿದ್ದೆ), ಮೂಸಿಗೆ (೧೫ ಕೊಳಗ) ಖಂಡ್ಗ, ಕಾಡಿ (೨೦ ಖಂಡ್ಗ) ಗಳನ್ನು ಉಪಯೋಗಿಸುತ್ತಾರೆ. ಕೆಲವುಕಡೆ ಶೇರು, ಪಾಯ್ಲಿಗಳು ಬಂದರೂ, ಹಳೆಯ ಜನರೆಲ್ಲ ಮೊದಲಿನ ಅಳತೆಯಲ್ಲಿಯೇ ಲೆಕ್ಕ ಮಾಡುತ್ತಾರೆ. ಚಿಕ್ಕ ದೊಡ್ಡ ಪ್ರಮಾಣಗಳನ್ನು ಹೇಳುವಲ್ಲಿ. ಶಣ್ಣದು (ಸಣ್ಣದು), ಪುಟ್ಟದು, ದೊಡ್ಡದು, ದುಣ್ಣಂದು, ಗುಡ್ಡದು ಮುಂತಾದವು ಬಳಕೆಯಲ್ಲಿವೆ.

ಸಾಮಾನ್ಯವಾಗಿ, ಶಬ್ದಗಳನ್ನು ಆದಷ್ಟು ಸಂಕ್ಷಿಪ್ತಗೊಳಿಸಿ ಉಚ್ಚರಿಸುವುದು ಇಲ್ಲಿಯ ಎಲ್ಲ ಕನ್ನಡಗಳ ವೈಶಿಷ್ಟ್ಯ. ಒಂದೇ ಶಬ್ದವನ್ನು, ಬೇರೆ-ಬೇರೆ ಜಾತಿಯವರು ಉಚ್ಚರಿಸುವ ರೀತಿ ಭಿನ್ನ-ಭಿನ್ನವಾಗಿದೆ. ಕೆಲವು ಭಾಷೆಗಳಂತೂ ಕೇವಲ ಸ್ವರವ್ಯತ್ಯಾಸದಿಂದಲೇ ಬೇರೆಯಾಗಿವೆ. ಉದಾಹರಣೆಗೆ :

ತೆಗೆದುಕೊಳ್ಳುತ್ತೇನೆ ಎನ್ನುವುದು. ತಕಂತೆ (ಹಾಲಕ್ಕಿ), ತಕಂತಿ (ನಾಡವರು), ತಕಣ್‌ತೆ (ಮುಕ್ರಿ), ತಗತ್ತೆ (ಹವ್ಯಕ) ಹೀಗೆ ಅಲ್ಪ ವ್ಯತ್ಯಾಸವನ್ನು ತಾಳುತ್ತದೆ.

ಹೋಗುತ್ತೇನೆ ಎನ್ನುವುದು, ಹೋತೆ, ಹೋತಿ, ಹೋಗ್ತೆ (ಹೋಗ್ತಿ) ಎಂದಾಗುತ್ತದೆ.

ಗೊಂಡರಲ್ಲಿ ಸಂಕ್ಷಿಪ್ತ ಕ್ರಿಯೆ ಇನ್ನೂ ವಿಚಿತ್ರವಾಗಿದೆ.

ಉದಾ : ಕೇಳಿದನು – ಕೇಳ್ದ (ಉಳಿದವರಲ್ಲಿ)
– ಕೇಂಡ (ಗೊಂಡರಲ್ಲಿ)

ಹೇಳಿದಳು, ನೋಡಿದಳು – ಹೇಳ್ಳು, ನೋಳ್ಳು ಎಂಬ ರೂಪಗಳು ಗೊಂಡರಲ್ಲಿವೆ.

ಹೋಪ – ಹ್ವಾಪ (ಹೋಗೋಣ), ವಪ್ಪಲಿಲ್ಲೆ (ಒಪ್ಪಲಿಲ್ಲ), ಮಾತಾಡೂದಿಲ್ಲೆ (ಮಾತನಾಡುವುದಿಲ್ಲ) ಮುಂತಾದ ಪ್ರಯೋಗಗಳು ಹವ್ಯಕರಿಗೂ, ಗೊಂಡರಿಗೂ ಸಾಮಾನ್ಯ.

ದಿವ್ರು ಭಾಷೆಯಲ್ಲಿ ಬತ್ತದೆ (ಬರುತ್ತದೆ), ಹೇಳರೆ (ಹೇಳಿದ್ದಾರೆ). ಹೇಳ್‌ರೆ (ಹೇಳಿದರೆ), ಬತ್ನಿ, ಬತ್ತೀನಿ (ಬರುತ್ತೇನೆ), ಹೋತ್ನಿ, ಹೊಕ್ಕೀನಿ (ಹೋಗುತ್ತೇನೆ) ಬರಕಲೇ (ಬರುವುದಿಲ್ಲವೇ), ಐದಾರೆ (ಇದ್ದಾರೆ), ಐತಿ (ಇದೆ), ಹೋಲಿ (ಹೋಗಲಿ) ಮುಂತಾದ ಪ್ರಯೋಗಗಳು ಕಂಡುಬರುತ್ತವೆ. ಪ್ರಾದೇಶಿಕ ವೈವಿಧ್ಯತೆ ಎಲ್ಲ ಜಾತಿಗಳಲ್ಲಿಯೂ ಸರ್ವೇಸಾಮಾನ್ಯ.

ಮುಕ್ರಿಕನ್ನಡದಲ್ಲಿ ಆತಿದಿ (ಆಗುತ್ತದೆ), ಹೋತಿದಿ (ಹೋಗುತ್ತದೆ), ಬರಾ (ಬಾ) ಎಂಬ ವ್ಯತ್ಯಾಸಗಳು ಕಂಡುಬಂದರೆ. ನಾಡವರಲ್ಲಿ ಹೋಗ್ಯ (ಹೋಗಿದ್ದಾನೆ), ಬಂದ್ಯ (ಬಂದಿದ್ದಾನೆ) ಅಂತೆಯೇ ಬಿಟ್ಟಿಕ್ಯ, ಕೊಡ್‌ತ್ಯ ಮುಂತಾದ ರೂಪಗಳು ಕೇಳಿಬರುತ್ತವೆ. ಅವನನ್ನು ಕರೆ ಎನ್ನಲು ನಾಡವರು ದಿಂಗೈ ಎನ್ನುತ್ತಾರೆ. ಅಗೇರರು ದನಗಾ ಎನ್ನುತ್ತಾರೆ. ಪ್ರಾಯಶಃ ಈ ಶಬ್ದಗಳು ದನಿಗೈ ಎನ್ನುವುದರಿಂದ ಬಂದಿರಬೇಕು. ಒಟ್ಟಿನಲ್ಲಿ ಶಬ್ದದ ಉತ್ಪತ್ತಿ ಸ್ವಾರಸ್ಯಮಯವಾಗಿದೆ.

ಕೇವಲ ಶಬ್ದಗಳನ್ನೇ ಕುರಿತು ಅಭ್ಯಾಸ ಮಾಡಿದರೂ ಪ್ರತಿಯೊಂದು ಪ್ರಭೇದದಲ್ಲಿಯೂ ಅದರದೇ ಆದ ಕೆಲವು ಶಬ್ದಗಳು ನಮಗೆ ದೊರಕುತ್ತವೆ. ಅಲ್ಲದೇ ಕರಾವಳಿಯಲ್ಲಿ ಕಡಲಿಗೆ ಸಂಬಂಧಿಸಿದಂತೆ, ಮೀನುಗಾರಿಕೆಗೆ ಸಂಬಂಧಿಸಿದಂತೆ ನೂರಾರು ಶಬ್ದಗಳಿವೆ. ಇವು ಮಲೆನಾಡು, ಬಯಲುಸೀಮೆಗಳಲ್ಲಿ ಕೇಳಬರುವುದಿಲ್ಲ. ಮೊದಲಿದ್ದ ಅನೇಕ ಉತ್ತಮ ಶಬ್ದಗಳು ಈಗ ಇಲ್ಲವಾಗಿವೆ. ಅವುಗಳನ್ನು ನಾವು ಕೇವಲ ಜನಪದ

ಸಾಹಿತ್ಯದಲ್ಲಿ ಮಾತ್ರ ಗುರುತಿಸಬಹುದಾಗಿದೆ. ನಾಮಧಾರಿ ಒಕ್ಕಲರಲ್ಲಿ ಸಮುರಂತೆ ಎನ್ನುವ ಒಂದು ಶಬ್ದವಿದೆ. ಅದರ ಅರ್ಥ ಸಮರತಿಗೆ ಯೋಗ್ಯಳಾದವಳು ಎಂದು. ಅದೇರೀತಿ, ಸಾಜಳ್ಳ (ಸುಂದರ), ವಾಜೆ (ಚಾಳಿ), ಮೆರು (ಕುಟ್ಟು), ದಾವುಳಿ (ಮಂಗಳ ಸೂತ್ರ), ಪಂಚಬಣ್ಣಿಗಿ (ಸುಂದರ), ತಳಗಿ (ಹರಿವಾಣ), ನಾಡಣುಗಿ (ಬಾಗಿಲು), ಗಾಡ (ಬೇಗ), ಹುಳಲ್‌ಹಾದಿ (ಅಡ್ಡಹಾದಿ), ಅಜಣೆ (ತೊಂದರೆ), ಹಮ್ಮು (ಮಲಗು), ಮಂಡಿಗೈಸು (ಕೂದಲು ತೆಗೆಯಿಸು) ಮುಂತಾದವು ನಾಮಧಾರಿ ಒಕ್ಕಲರಲ್ಲಿಯೂ ತೆಣೆ (ಜಗುಲಿ). ನಿಂಗಳ (ಕೆಂಡ), ಕುಟ್ಟಿ (ಚಿಕ್ಕಮನೆ), ಚರಕಲು (ನಕ್ಷತ್ರ), ಕಣಬೆ ಕಾಯಿ (ಬೀಗ), ಬೇತು (ಸಂಚು), ಗುಣುಬು (ಸಣ್ಣತಟ್ಟೆ), ಹೊಂತಕಾರಿ (ಯುವಕ) ಅಡಕ್ಲ (ದೊಡ್ಡಪಾತ್ರೆ), ಶಿಕ್ಕ (ಪಾತ್ರೆ ಇಡುವ ದಾರದ ಸ್ಟ್ಯಾಂಡು), ಹಚಿಗೆ (ಅಕ್ಕಿ ತೊಳೆಯುವ ಬುಟ್ಟಿ), ಪೇಳಿ (ಬಿದಿರಿನ ಎಲೆ ಅಡಕೆ ತಟ್ಟೆ) ಮುಂತಾದ ಶಬ್ದಗಳು ನಾಡವರಲ್ಲಿಯೂ ಹತ್ತಗೆ (ಗಟ್ಟಿ), ಅಬ್ಬಿಮನೆ (ಬಚ್ಚಲುಮನೆ), ಕಿಚ್ಚು (ಬೆಂಕಿ). ಬೆಣಚ್‌ಕಿಂಡಿ (ಕಿಡಕಿ). ಹೇಡಿಗೆ (ಚಿಟ್ಟೆ), ಏಂಚಣೆ (ಎಣೆ), ಮುಕ್ಸಂಜೆ (ಮೂರು ಸಂಜೆ), ಅಡಿಗೆಮರಿ (ಅಡಿಗೆಮನೆ), ಸವುಡಿ (ಪುರಸೊತ್ತು), ಮುನ್ನಾದಿನ (ಮೊದಲ ದಿನ), ಮಡೀಕೆ (ಬೆಳ್ಳಗೆ), ಕಿಟ್ಟು (ಹಚ್ಚು), ದುಣ್ಣ (ದೊಡ್ಡ+ದಪ್ಪ), ವೈನ (ಚೆನ್ನಾಗಿ), ವರಕು (ನಿದ್ದೆ), ಮೀಯ (ಸ್ನಾನಮಾಡು) ಮುಂತಾದವು ಹವ್ಯಕರಲ್ಲಿಯೂ ಬದಕಲು (ಬೈತಲೆ), ಗೆಯ್ಬಿಕಟ್ಟೋದು (ವಿಶಿಷ್ಟ ರೀತಿಯಲ್ಲಿ ಸೀರೆ ಉಡುವುದು), ಬೀಜಗ್ತಿ (ಸೂಲಗಿತ್ತಿ), ಬಣ್ಣ (ಸೀರೆ), ತೀಡು (ಅಳು), ಕಕ್ಕುಲಾತಿ (ಪ್ರೀತಿ), ಹೆರ್ಚು (ಓಡಿಸು), ಮೆಡು (ಕಟ್ಟು), ಜೋಗಿಲ (ಧೋತರ), ತಿರುಮೊಕ (ಶ್ರೀಮುಖ) ಮುಂತಾದವು ಹಾಲಕ್ಕಿಒಕ್ಕಲರಲ್ಲಿಯೂ ವಿಶಿಷ್ಟವಾದ ಶಬ್ದಗಳೆನ್ನಬಹುದು. ಮುಕ್ರಿ ಗಳಲ್ಲಿ ಅಂಬ್ರು ಎನ್ನುವುದು ಹೆಚ್ಚು ಬಳಕೆಯಲ್ಲಿರುವ, ವಾಕ್ಯದ ಕೊನೆಯಲ್ಲಿ ಬರುವ ಶಬ್ದವಾದರೆ; ಹಾಲಕ್ಕಿಗಳಲ್ಲಿ ಕಂಡ್ಯ ಹವ್ಯಕರಲ್ಲಿ ಬಿಲ ಎಂಬ ಶಬ್ದಗಳು ಅದೇರೀತಿ ಯಲ್ಲಿ ಬಳಕೆಯಲ್ಲಿವೆ.

ಒಟ್ಟಿನಲ್ಲಿ ಇದೇ ಉತ್ತರಕನ್ನಡ ಜಿಲ್ಲೆಯ ಕನ್ನಡ ಎಂದು ಬೆರಳಿಟ್ಟು ತೋರಿಸಲು ಸಾಧ್ಯವಿಲ್ಲ. ಈ ಜಿಲ್ಲೆಯಲ್ಲಿ ಭಾಷೆಯನ್ನು ಕುರಿತು ಆದ ಸಂಶೋಧನೆಗಿಂತ, ಆಗ ಬೇಕಾದ ಸಂಶೋಧನೆಯೇ ಬಹಳವಿದೆ. ಪ್ರಸ್ತುತ ಲೇಖನವು ಆ ದಿಸೆಯಲ್ಲಿ ಪ್ರಯತ್ನಿ ಸುವವರಿಗೆ ಕೆಲಮಟ್ಟಿನ ಮಾರ್ಗದರ್ಶನವನ್ನೊದಗಿಸಬಹುದು.

ಈ ಲೇಖನವನ್ನು ಬರೆಯುವಲ್ಲಿ ಸಹಾಯಕರಾದ ಡಾ. ಹಾ. ಮಾ. ನಾಯಕ, ಡಾ. ಎಲ್. ಆರ್. ಹೆಗಡೆ, ಡಾ. ಕೆಂಪೇಗೌಡ, ಶ್ರೀ ಜಿ. ಎಚ್. ನಾಯಕ. ಗಣಪತಿ ನಾಯಕ, ಎಸ್. ಜಿ. ಹೆಗಡೆ ಅವರಿಗೆ ಕೃತಜ್ಞತೆಗಳು.

ಆಧಾರಗ್ರಂಥಗಳು

Kanara Gazetteer Part I 1881

ಡಾ. ಎಲ್. ಆರ್. ಹೆಗಡೆ : ಬೆಳ್ಳಿಯಮ್ಮನ ಹಾಡುಗಳು, ಸಮಾಜ ಪುಸ್ತಕಾಲಯ ಧಾರವಾಡ, ೧೯೭೨

ಡಾ. ಎಲ್. ಆರ್. ಹೆಗಡೆ : ತಿಮ್ಮಕ್ಕನ ಪದಗಳು (ಮುನ್ನುಡಿ). ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೬೯

ಎಲ್. ಜಿ. ಭಟ್ : ಹಾಲಕ್ಕಿ ಪಾಯಸ (ಮುನ್ನುಡಿ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೪

A. S. Acharya : *Halakki Kannada*, Pona, 1976

K. G. Shastri : *The Havyaka Dialect of North Kanara*, Karnatak University Dharwar, 1971

ಪಡುವಣ : ೪೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣಸಂಚಿಕೆ, ಕಾರವಾರ, ೧೯೬೫

ವನಶ್ರೀ : ಉತ್ತರಕನ್ನಡ ಜಿಲ್ಲಾ ಸಾಹಿತ್ಯಸಮ್ಮೇಳನ ಸ್ಮರಣಸಂಚಿಕೆ, ಯಲ್ಲಾಪುರ, ೧೯೭೪

• •

ದಕ್ಷಿಣಕನ್ನಡ ಜಿಲ್ಲೆಯ ಕನ್ನಡ

● ಅಲೆವೂರು ಶ್ರೀರಮಣ ಆಚಾರ್ಯ

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಭಾಷೆಗಳು ಮುಖ್ಯವಾಗಿ ಮೂರು: ಕೊಂಕಣಿ, ತುಳು, ಕನ್ನಡ. ಕೊಂಕಣಿ, ವಿಶಿಷ್ಟಜನಾಂಗದವರ ಭಾಷೆಯಾಗಿದ್ದು ಜಿಲ್ಲೆಯ ಎಲ್ಲ ಭಾಗಗಳಲ್ಲೂ ಬಳಕೆಯಲ್ಲಿದೆ. ಅದು ಆ ಜನಾಂಗಕ್ಕಷ್ಟೇ ಸೀಮಿತ. ತುಳುಭಾಷೆಯು ಕಲ್ಯಾಣಪುರಹೊಳೆಯಿಂದ ದಕ್ಷಿಣಕ್ಕಿರುವ ಭಾಗಗಳಲ್ಲಿ ಹವ್ಯಕ ಮತ್ತು ಗೌಡಜನಾಂಗದವರನ್ನು ಬಿಟ್ಟು ಉಳಿದೆಲ್ಲ ಜನಾಂಗದವರ ಮಾತೃಭಾಷೆ. ಇವರೆಲ್ಲರಿಗೂ ಕನ್ನಡ ವ್ಯಾವಹಾರಿಕಭಾಷೆ. ಇವರು ಬಳಸುವ ಕನ್ನಡ, ಶಾಲೆಗಳಲ್ಲಿ ಬರೆದು ಓದಿ ಕಲಿತ ಕನ್ನಡ. ಹವ್ಯಕ ಮತ್ತು ಗೌಡ ಜನಾಂಗದವರು ಪುತ್ತೂರು ತಾಲೂಕಿನ ಭಾಗಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದು, ಅವರ ಮಾತೃಭಾಷೆ ಕನ್ನಡ. ಕಲ್ಯಾಣಪುರಹೊಳೆಯಿಂದ ಉತ್ತರಕ್ಕಿರುವ ಎಲ್ಲ ಜನಾಂಗದವರಿಗೂ ಕನ್ನಡವೇ ಮಾತೃ ಭಾಷೆ. ಇವರಿಗೆ ಉಳಿದ ಭಾಷೆಗಳ ಸಂಪರ್ಕ ಸಾಧಾರಣಸ್ಥಿತಿಯಲ್ಲಿ ಅತ್ಯಲ್ಪ ಇಲ್ಲವೆ ಶೂನ್ಯ. ಪ್ರಕೃತ ಲೇಖನದಲ್ಲಿ ಜಿಲ್ಲೆಯ ಉತ್ತರಭಾಗದ ಶಿವಳ್ಳಿಜನಾಂಗದವರು, ದಕ್ಷಿಣಭಾಗದ ಹವ್ಯಕ ಮತ್ತು ಗೌಡ ಜನಾಂಗದವರು ಆಡುವ ಕನ್ನಡನುಡಿಗಳ ಆಧಾರದ ಮೇಲೆ 'ದಕ್ಷಿಣಕನ್ನಡ ಜಿಲ್ಲೆಯ ಕನ್ನಡ'ದ ಸ್ಥೂಲ ವಿವೇಚನೆಗೆ ಪ್ರಯತ್ನಿಸ ಲಾಗಿದೆ. ಉಪಾಯವಿಲ್ಲದೆ ಕೋಟ, ಕುಂದಾಪುರ ಭಾಗಗಳ ನುಡಿಗಳನ್ನು ಅಳವಡಿಸಿ ಕೊಳ್ಳುವುದಾಗಲಿಲ್ಲ. ಅದೊಂದು ನ್ಯೂನತೆಯಾಗಿಯೇ ಉಳಿಯುತ್ತದೆ.

೧. ವರ್ಣಸಮಾಮ್ನಾಯ :

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಕನ್ನಡದ ಆಡುನುಡಿಗಳ ವರ್ಣ ಗಳನ್ನು ಸ್ವನಾತ್ಮಕ ಹಾಗೂ ವರ್ಣಾತ್ಮಕ ಗುಣಧರ್ಮಗಳ ಆಧಾರದಿಂದ ಕೆಳಗೆ ಕಾಣಿಸಿ ದಂತೆ ವರ್ಗೀಕರಿಸಬಹುದು :

ಸ್ವರಗಳು :

	ಅಗ್ರೀಯ ವಿಸ್ತೃತ		ಕೇಂದ್ರೀಯ ವಿಸ್ತೃತ		ಮೂಲೀಯ ಮುದ್ರಿತ	
	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ
ಸಂವೃತ	ಇ	ಈ	ಉ̱	ಊ̱	ಉ	ಊ
ಅರ್ಧಸಂವೃತ	ಎ	ಏ	ಅ̱		ಒ	ಓ
ಅರ್ಧವಿವೃತ	ಎ̱	ಏ̱			ಒ̱	ಓ̱
ವಿವೃತ			ಅ			

ಆನುನಾಸಿಕ್ಯ : ನ್

ವ್ಯಂಜನಗಳು :

		ಓಷ್ಠ್ಯ	ದಂತ್ಯ	ಮೂರ್ಧನ್ಯ	ತಾಲವ್ಯ	ಕಂಠ್ಯ
ಸ್ಪರ್ಶ	ಅಘೋಷ	ಪ್	ತ್	ಟ್	ಚ್	ಕ್
	ಘೋಷ	ಬ್	ದ್	ಡ್	ಜ್	ಗ್
ಅನುನಾಸಿಕ		ಮ್	ನ್	ಣ್	ಞ್	ಙ್
ಊಷ್ಮ			ಸ್		ಶ್	ಹ್
ಅಂತಸ್ಥ	ಸ್ಪಂದಿತ		ರ್			
	ಪಾರ್ಶ್ವಸ್ಪರ್ಶ		ಲ್	ಳ್		
	ಅಸ್ಪರ್ಶ	ವ್			ಯ್	

೧.೧ ಸ್ವರವರ್ಣಗಳು :

ಮೇಲೆ ಕಾಣಿಸಿದ ೧೭ ಸ್ವರಗಳಲ್ಲಿ ಇ, ಉ, ಎ, ಒ, ಅ ಸ್ವರಗಳು ತಮ್ಮ ದೀರ್ಘಸಂವಾದಿಗಳೊಂದಿಗೆ ಎಲ್ಲ ನುಡಿಗಳಲ್ಲೂ ಬಳಕೆಯಲ್ಲಿವೆ. ಆದುದರಿಂದ ಇವನ್ನು ಮುಖ್ಯವರ್ಣಗಳೆಂದು ಪರಿಗಣಿಸಿ, ಉಳಿದ ಸ್ವರಗಳನ್ನು ಉಪವರ್ಣಗಳೆಂದು ಕರೆಯಬಹುದು. ಈ ಉಪವರ್ಣಗಳು ಹೆಚ್ಚಿನ ಸಂದರ್ಭಗಳಲ್ಲಿ ಮೂಲವರ್ಣಗಳ ಸ್ವನಾತ್ಮಕ ಪ್ರಭೇದಗಳಂತಿದ್ದು, ಕೆಲವೊಂದು ನುಡಿಗಳಲ್ಲಿ ಕೆಲವೊಮ್ಮೆ ವರ್ಣಾತ್ಮಕ ಸ್ಥಿತಿಯನ್ನು ಹೊಂದುತ್ತವೆ. ಉದಾಹರಣೆಗೆ 'ಅ̱' ಸ್ವರವು ಸಾಧಾರಣವಾಗಿ ಪರದಲ್ಲಿ ಸಂವೃತಸ್ವರವಿದ್ದಾಗ ಕಂಡುಬರುವ 'ಅ' ವರ್ಣದ ಸ್ವನಪ್ರಭೇದವಾಗಿದೆ. ಆದರೆ ಇದು ವರ್ಣಾತ್ಮಕಸ್ಥಿತಿಯನ್ನು ಮುಟ್ಟುವ ಪ್ರಸಂಗಗಳನ್ನು ಗೌಡಕನ್ನಡದಿಂದ ಆರಿಸಿದ ಶಬ್ದಗಳಲ್ಲಿ ಕಾಣಬಹುದು. ಉದಾ :

ಗೌಡ ಕನ್ನಡ :

ಕರಿ 'ಕರೆಯು' ಕರಿ 'ಇದ್ದಲು'

ಕಡಿ 'ಕಡೆಯು' ಕಡಿ 'ಕಡಿಯು' ಇತ್ಯಾದಿ.

'ಉ' ಸ್ವರವು ಸಾಧಾರಣವಾಗಿ ಲಘು ಅಕ್ಷರಗಳ ಮಧ್ಯದಲ್ಲಿ ಹಾಗೂ ಪದಗಳ ಅಂತ್ಯದಲ್ಲಿ ವೈಕಲ್ಪಿಕವಾಗಿ 'ಉ' ವರ್ಣವನ್ನು ಪ್ರತಿನಿಧೀಕರಿಸುತ್ತದೆ. ಶಿವಳ್ಳಿ ಮತ್ತು ಗೌಡಕನ್ನಡಗಳಲ್ಲಿ ಇವು ವರ್ಣಾತ್ಮಕಸ್ಥಿತಿಗೆ ಏರುವ ಸಂದರ್ಭಗಳನ್ನು ಕೆಳಗಿನ ನಿದರ್ಶನಗಳಲ್ಲಿ ಕಾಣಬಹುದು. ಉದಾ :

ಶಿವಳ್ಳಿ ಕನ್ನಡ :

ಕೊಡು 'ನೀನು ಕೊಡು', ಕೊಡು 'ಅದು ಕೊಡಬಹುದು'

ತೊಡು 'ನೀನು ತೊಟ್ಟುಕೊ' ತೊಡು 'ತಿನ್ನುವ ಬಯಕೆ' ಇತ್ಯಾದಿ.

ಗೌಡ ಕನ್ನಡ :

ಕೊಟ್ಟು 'ಗುದ್ದಲಿ' ಕೊಟ್ಟು 'ಕೊಟ್ಟು (<ಕೊಡು)'

ಹೋಕು 'ಹೋಗಬಹುದು' ಹೋಕು 'ಹೋಗಬೇಕು'

ಕೊಡದು 'ಕೊಡಲಾರದು' ಕೊಡುದು 'ಅದು ಕೊಡಬಹುದು'

ಮಾತಿನ ಓಘದಲ್ಲಿ ಈ 'ಉ' ವರ್ಣವು ಪದಮಧ್ಯದಲ್ಲಿ ಲಘು ಅಕ್ಷರಗಳಲ್ಲಿ ಇ, ಅ, ಎ ವರ್ಣಗಳಿಗೆ ಆದೇಶವಾಗಿ ಬರುವುದನ್ನು ಕಾಣಬಹುದು. ಉದಾ :

ಶಿವಳ್ಳಿ ಕನ್ನಡ :

ಅರುಗು 'ಅರಗು' ನೇರುಳೆ 'ನೇರಳೆ'

ಹಳುದಿ 'ಹಳದಿ' ಅರುವೆ 'ಅರಿವೆ'

ಇಳುತ 'ಇಳಿತ' ಉಸುರು 'ಉಸಿರು'

ಎಳುದಾಟ 'ಎಳೆದಾಟ' ನೆರುವೇರು 'ನೆರವೇರು' ಇತ್ಯಾದಿ.

ಗೌಡ ಕನ್ನಡ :

ಮೊಸುರು 'ಮೊಸರು' ನೆಗುಡಿ 'ನೆಗಡಿ'

ಸೂತುಕ 'ಸೂತಕ' ನಾದುನಿ 'ನಾದಿನಿ'

ಬಾಗುಲು 'ಬಾಗಿಲು' ಕದುರು 'ಕದಿರು' ಇತ್ಯಾದಿ.

'ಋೂ' ವರ್ಣವು ಅತ್ಯಂತ ವಿರಳ. ಎರಡು ಪದಗಳು ಸೇರಿ ಸಂಧಿಯಾದಾಗ ಅಥವಾ ಒತ್ತಾಯದ ನುಡಿಗಳಲ್ಲಿ ಈ ವರ್ಣವು ಕೆಲವೊಮ್ಮೆ ಕಂಡುಬರುತ್ತದೆ. ಉದಾ : ಶಿವಳ್ಳಿ ಕನ್ನಡದಲ್ಲಿ

ಅದ್ದು ಬತ್ತೂಂತ° 'ಅದು ಬರುತ್ತದೆ ಎಂದು'

ಪೆಟ್ಟಿಗೇ ಮೇಲೆ ಒಂದ್ದೂ ಪುಸ್ತಕ ಇಲ್ಲೆ ಇತ್ಯಾದಿ.

ಎ, ಏ, ಒ, ಓ ಸ್ವರಗಳು, ಸಂವೃತ ಭಿನ್ನಸ್ವರಗಳು ಪರದಲ್ಲಿದ್ದಾಗ ಅನುಕ್ರಮವಾಗಿ ಎ, ಏ, ಒ, ಓ ವರ್ಣಗಳ ಸ್ವನಪ್ರಭೇದಗಳಾಗಿವೆ. ಇವುಗಳ ವರ್ಣಾತ್ಮಕ ಸ್ಥಿತಿಗೆ ಕಾರಣಗಳಾಗುವ ಸಂದರ್ಭಗಳನ್ನು ಕೆಳಗಿನ ನಿದರ್ಶನಗಳಲ್ಲಿ ಗಮನಿಸಬಹುದು.

ಶಿವಳ್ಳಿ : ಎ : ಎ

ಹೆರ್ಗ್ಗೆ 'ಹೊರಗೆ'	ಹೆರ್ಗ್ಗೆ 'ಹೆರಿಗೆ'
ನೆಗಿ 'ನೆಗೆ'	ನೆಗು 'ನಗು'
ಬೇಡ 'ಬೇಡರವ'	ಬೇಡ 'ಬೇಡ' ಇತ್ಯಾದಿ.

ಒ : ಒ

ಕೊಡ 'ನೀರಿನ ಕೊಡ'	ಕೊಡ 'ಕೊಡಲಾರ'
ತೊಳಿ 'ತೊಳೆ'	ತೊಳಿ 'ತುಳಿ'
ಹೋತ 'ಗಂಡು ಆಡು'	ಹೋತ 'ಅವನು ಹೋಗುತ್ತಾನೆ'
ಕೊಳ್ಕೆ 'ಮೂರನೇ ಬೆಳೆ'	ಕೊಳ್ಕೆ 'ಕೊಳಿಕೆ' ಇತ್ಯಾದಿ.

ಗೌಡ : ಏ : ಎ

ಹೆರು 'ಹೆಪ್ಪು'	ಹೆರು 'ಪ್ರಸವಿಸು'
ತೆರು 'ತೆರ'	ತೆಗಿ 'ತೆಗೆ'
ಮೊರಿ 'ಮೊರೆ'	ಮೊರಿ 'ಮರಿ'
ಮೊಸಿ 'ಮಸೆ'	ಮೊಸಿ 'ಇದ್ದಲು'
ಕೇರು 'ಸಾರಿಸು'	ಕೇರಿ 'ಓಣಿ' ಇತ್ಯಾದಿ.

೧.೨ ಅನುನಾಸಿಕ್ಯ :

ಇದು ಸ್ವರಗಳೊಂದಿಗೆ ಏಕಕಾಲದಲ್ಲಿ ಉಚ್ಚರಿಸಲ್ಪಡುವ ಅರ್ಥಾಭಿವ್ಯಂಜಕಶಕ್ತಿಯನ್ನು ಪಡೆದ ಸ್ವನಾತ್ಮಕಧರ್ಮವಾಗಿದೆ. ಈ ಧರ್ಮವನ್ನು ಪಡೆದಿರುವ ಸ್ವರಗಳು ಅನುನಾಸಿಕ ಸ್ವರಗಳು. ಹವ್ಯಕದಲ್ಲಿ ಚೇತನವಾಚಕ (Rational) ಪ್ರತ್ಯಯವು ಅನುನಾಸಿಕ ಅಕಾರವಾಗಿದೆ. ಉದಾ :

ಅಕ್ಕ॑, ಅಜ್ಜ॑, ಅಳಿಯ॑, ಹೆಗ್ಗ॑ (ಹೆಗ್ಗಣ), ಕುಂಡೆಚ್ಚ॑ (ಇಣಚಿ),
ಪಗೆಲ॑ (ಒಂದು ಜಾತಿಯ ಹಾವು) ಇತ್ಯಾದಿ.

ಶಿವಳ್ಳಿ ಮತ್ತು ಗೌಡ ಕನ್ನಡಗಳಲ್ಲಿ ಇನ್ನೂ ಕೆಲವು ಸ್ವರಗಳು ಅನುನಾಸಿಕ ಅನನುನಾಸಿಕ ಭೇದವನ್ನು ತೋರುತ್ತವೆ. ಉದಾ :

ಶಿವಳ್ಳಿ :

ಸೀ॑ ‘ಸಿಹಿ’	ಸ॑ವ॑ಂಟು ‘ಸವುಟು’
ಸೀ॑ಯಾಳ ‘ಎಳೆನೀರು’	ಹಾ॑ವು ‘ಹಾವು’
ಕ॑ಯಿ॑ ‘ಕಹಿ’	ಹೊ॑ಯ್ಗೆ ‘ಉಸುಬು’ ಇತ್ಯಾದಿ.

ಗೌಡ :

ನಾಯಿ॑ ‘ನಾಯಿ’	ಸೊ॑ವ್ಸಾರ ‘ಸಂಸಾರ’
ಮೂಯಾ॑ಣ ‘ಮೇಣ’	ಕಲ್ಸೊವ॑ ಇತ್ಯಾದಿ.

೧.೩ ವ್ಯಂಜನವರ್ಣಗಳು :

ವ್ಯಂಜನವರ್ಣಗಳಲ್ಲಿ ಅನುನಾಸಿಕ ಹಾಗೂ ಊಷ್ಮವರ್ಣಗಳನ್ನು ಬಿಟ್ಟು ಉಳಿದವು ಎಲ್ಲ ನುಡಿಗಳಲ್ಲೂ ಸಾಧಾರಣವಾಗಿವೆ. ಐದು ಅನುನಾಸಿಕಗಳ ಪೈಕಿ ಶಿವಳ್ಳಿ ಕನ್ನಡದಲ್ಲಿ ಮ್, ನ್, ಣ್ ಗಳು ಮಾತ್ರ ವರ್ಣಾತ್ಮಕಗಳಾಗಿದ್ದು ಙ್ ಮತ್ತು ಞ್ ಗಳು ಸವರ್ಣ ವರ್ಗೀಯವರ್ಣಗಳೊಂದಿಗೆ ಮಾತ್ರ ಬಳಕೆಯಲ್ಲಿರುವುದರಿಂದ ಅವನ್ನು ನ್ ವರ್ಣದ ಸ್ವನಪ್ರಭೇದಗಳೆಂದು ಪರಿಗಣಿಸಬಹುದು. ಹವ್ಯಕ ಮತ್ತು ಗೌಡ ಕನ್ನಡಗಳಲ್ಲಿ ಮಾತ್ರ ಇವು ಸ್ವತಂತ್ರವರ್ಣಗಳಾಗಿವೆ. ಉದಾ :

ಹವ್ಯಕ :

ಞಗ್ಗು 'ಜಿಗ್ಗು' : ನಕ್ಕು 'ನೆಕ್ಕು'

ಬಜ್ಜ 'ತೊಂದರೆ : ಬನ್ನಂಗಾಯಿ 'ಅರ್ಧಪಣ್ಣಾದ ಕಾಯಿ'

ಕೊಞ್ಞಿ 'ತೊದಲು' : ಮೊನ್ನೆ ಇತ್ಯಾದಿ.

ಗೌಡ :

ಮಜ್ಜ 'ಮಗ' ನೊಜ್ಜ 'ನೊಗ'

ಹಞ್ಞ 'ಸ್ವಲ್ಪ' ನೊಞ್ಞಿ 'ತೊದಲು ಮಾತು' ಇತ್ಯಾದಿ.

ಊಷ್ಮವರ್ಣಗಳಲ್ಲಿ ಸ್ ಮತ್ತು ಶ್ ಎರಡೂ ಶಿವಳ್ಳಿ ಮತ್ತು ಹವ್ಯಕಗಳಲ್ಲಿ ವರ್ಣಾತ್ಮಕಗಳು. ಗೌಡಕನ್ನಡದಲ್ಲಿ ಸ್ ಮಾತ್ರ ಕಂಡುಬರುತ್ತದೆ. ಉದಾ :

ಶಿವಳ್ಳಿ	ಹವ್ಯಕ	ಗೌಡ	
ಸಾಲು	ಸಾಲು	ಸಾಲು	
ಶಾಲು	ಶಾಲು	—	
ಸಾಯಿ	ಸಾಯಿ	ಸಾಯಿ	
ಶಾಯಿ	—	—	ಇತ್ಯಾದಿ.

೨. ವರ್ಣವೈವಿಧ್ಯ :

ಇಲ್ಲಿ ಬಳಕೆಯಲ್ಲಿರುವ ಕನ್ನಡದ ಆಡುನುಡಿಗಳನ್ನು ಪರಸ್ಪರ ಹೋಲಿಸಿದಾಗ ಕೆಲವು ವೈವಿಧ್ಯಗಳು ಕಂಡುಬರುತ್ತವೆ. ಇವನ್ನು ಭಾಷೆಯ ಎಲ್ಲ ಸ್ತರಗಳಲ್ಲೂ ಅರ್ಥಾತ್ ವರ್ಣವ್ಯವಸ್ಥೆ, ಪದರಚನೆ, ವಾಕ್ಯರಚನೆ ಹಾಗೂ ಶಬ್ದಸಂಪತ್ತಿಗಳಲ್ಲೂ ಗಮನಿಸಬಹುದು. ಈ ವೈವಿಧ್ಯಗಳು ಒಂದೆಡೆ ಈ ನುಡಿಗಳ ಐತಿಹಾಸಿಕ ಬೆಳವಣಿಗೆಯಲ್ಲಿ ಬಹುಮುಖತ್ವವನ್ನು ನಿರ್ದೇಶಿಸಿದರೆ, ಇನ್ನೊಂದೆಡೆ ಇವುಗಳ ಮೇಲೆ ಪ್ರಮಾಣ (Standard) ಕನ್ನಡದ ಹಾಗೂ ನೆರೆನುಡಿಗಳ ಪ್ರಭಾವದ ದ್ಯೋತಕಗಳೂ ಆಗಿವೆ. ಇಲ್ಲಿ ಈ ಎಲ್ಲ ಸಂಗತಿಗಳ ಶಾಸ್ತ್ರೀಯ ಅಧ್ಯಯನಕ್ಕೆ ಪ್ರಯತ್ನಿಸದೆ ಕೆಲವೊಂದು ವೈವಿಧ್ಯಗಳತ್ತ ಅಂಗುಲಿ ನಿರ್ದೇಶನವನ್ನಷ್ಟೇ ಮಾಡಲಾಗಿದೆ.

೨.೧ ಸ್ವರವೈವಿಧ್ಯ :

ಇ : ಎ

ಶಿವಳ್ಳಿ	ಹವ್ಯಕ	ಗೌಡ	ಪ್ರಮಾಣ ಕನ್ನಡ
ಎರು	ಎರುಗು	—	ಇರುವೆ
ಎದುರು	—	ಎದುರು	ಇದಿರು
ಕೆಮಿ	ಕೆಮಿ	ಕೆಬಿ	ಕಿವಿ
ನೆರಿ	ನೆರಿ	ನೆರಿ	ನಿರಿ(ಗೆ)
ಮೆದುಳು	—	ಮೆದುಳು	ಮಿದುಳು
ಹೆರಿ	ಹೆರಿ	ಹಿರಿಯ	ಹಿರಿಯ
ಇಲಿ	ಎಲಿ	ಎಲಿ	ಇಲಿ
ತಿಳಿ	ತೆಳಿ	ತೆಳಿ	ತಿಳಿ(ಯು)
ಬಿಳಿ	ಬೆಳಿ	ಬೆಳ್ದು	ಬಿಳಿ
ಮಿಡಿ	ಮೆಡಿ	ಮಿಡಿ	ಮಿಡಿ
ಸಿಡ್ಲು	ಸೆಡ್ಲು	ಸಿಡ್ಲು	ಸಿಡಿಲು

ಉ : ಒ

ತೊಳಿ	ತೊಳಿ	ತೊಳಿ	ತುಳಿ
ತೊರ್ಸು	ತೊರ್ಸು	ತೊರ್ಸು	ತುರಿಸು
ಸೊರಿ	ಸೊರಿ	ಸೊರ್ಗು	ಸುರಿ
ಹೊರಿ	ಹೊರಿ	ಹೊರಿ	ಹುರಿ
ಉಳಿ	ಒಳಿ	ಒಳಿ	ಉಳಿ(ಯು)
ಕುಣಿ	ಕೊಣಿ	ಕೊಣಿ	ಕುಣಿ
ಕುದಿ	ಕೊದಿ	ಕೊದಿ	ಕುದಿ
ಜುಟ್ಟು	ಜೊಟ್ಟು	ಜುಟ್ಟು	ಜುಟ್ಟು
ತುಟಿ	ತೊಟಿ	ತುಟಿ	ತುಟಿ
ಒಕ್ಕು	—	ಉಕ್ಕು	ಉಕ್ಕು
ತೊಳ್ಕು	—	ತುಳ್ಕು	ತುಳುಕು

ಅ : ಎ

ನೆಗು	ನೆಗೆ(ನಾ)	ನೆಗಾಡು	ನಗು
ಗೆಂಡೆ	ಗೆಂಡೆ	ಗೆಂಡೆ	ಗದ್ದೆ

ಶಿವಳ್ಳಿ	ಹವ್ಯಕ	ಗೌಡ	ಪ್ರಮಾಣ ಕನ್ನಡ
ಗೆಂಟ್ಲು	ಗೆಂಟ್ಲು	ಗಂಟ್ಲು	ಗಂಟಲು
ನೆಡು	ನೆಡು	ನಡು	ನಡು
ನೆಂಟ	ನಂಟೆ	ನಂಟ	ನಂಟ
ಎರಣೆ	ಅರಣೆ	ಅರ್ಣೆ	ಅರಣೆ
ಜನ	ಜೆನ	ಜೆನ	ಜನ
ಕಪ್ಪೆ	ಕೆಪ್ಪೆ	ಕಪ್ಪೆ	ಕಪ್ಪೆ
ಗಂಡು	ಗೆಂಡು	ಗಂಡು	ಗಂಡು
ಗಂಡ	ಗೆಂಡ	ಗಂಡ	ಗಂಡ
ಗಡ್ಡ	ಗೆಡ್ಡ	ಗಡ್ಡ	ಗಡ್ಡ
ಜಗುಲಿ	ಜೆಗಿಲಿ	ಜಗುಲಿ	ಜಗಲಿ

ಅ : ಒ

ಶಿವಳ್ಳಿ ಮತ್ತು ಹವ್ಯಕಗಳ ಅಕಾರದ ಸ್ಥಾನದಲ್ಲಿ ಗೌಡ ಕನ್ನಡದಲ್ಲಿ ಒಕಾರವು ಕಂಡುಬರುತ್ತದೆ. ಉದಾ :

ಶಿವಳ್ಳಿ	ಗೌಡ	ಶಿವಳ್ಳಿ	ಗೌಡ
ಮಸಿ	ಮೊಸಿ	ಮರಿ	ಮೊರಿ
ಮಗುಚು	ಮೊಗ್ಚು	ಮಗ್ಗಿ	ಮೊಗ್ಗಿ
ಮಜ್ಜಿಗೆ	ಮೊಜ್ಜಿಗೆ	ಬಳ್ಳಿ	ಬೊಳ್ಳಿ
ಮಣ್ಣು	ಮೊಣ್ಣು	ಬಗ್ಗು	ಬೊಗ್ಗು
ಬಯ್ಲು	ಬೊಯ್ಲು	ಹಲ್ಲಿ	ಪೊಲ್ಲಿ

ಆ : ಏ

ಶಿವಳ್ಳಿ	ಹವ್ಯಕ	ಗೌಡ
ಆಡು	ಏಡು	ಏಡು
ಆವೆ	ಏವೆ	ಏವೆ 'ಆವೆ'
ಜಾಂಗಟೆ	ಜೇಂಗಟೆ	ಜಾಗಟೆ
ಯಾವುದು	ಏವದು	ಯಾದು
ಯಾವಾಗ ಏಗ್ಳು	ಏವಗ	ಯಾಗ

ಒ : ಉ

ಶಿವಳ್ಳಿ	ಹವ್ಯಕ	ಗೌಡ
ಸುಂಡ್ಲ	ಸೊಂಡಿಲು	ಸೊಂಡಿಲು
ಹುಕ್ಳು	ಹೊಕ್ಳು	ಹೊಕ್ಕುಳು

ಒ : ಎ

ನೊಣ	ನೆಳವು	ನೆಳ
ಹೊರುಡು	ಹೆರಡು	ಹೊರ್ಡ್ರು
ಚೊಲ್ಲು	ಚೆಲ್ಲು	—
ಹೆರುಗೆ	ಹೆರಗೆ	ಹೊರಗೆ

ಪದಾಂತ್ಯದಲ್ಲಿ ಗೌಡ ಮತ್ತು ಶಿವಳ್ಳಿ ಕನ್ನಡಗಳಲ್ಲಿ ಎಕಾರಾಂತ ಧಾತುಗಳೆಲ್ಲ ಇಕಾರಾಂತಗಳಾಗಿವೆ. ಹವ್ಯಕದಲ್ಲಿ ಇವು ಬೇರೆಬೇರೆಯಾಗಿಯೇ ಇವೆ. ಧಾತು ಭಿನ್ನಪದಗಳಲ್ಲಿ ಕೆಲವೊಂದು ಅಪವಾದಗಳನ್ನು ಬಿಟ್ಟು ಅಂತ್ಯಸ್ವರಗಳು ಮೂರು ನುಡಿಗಳಲ್ಲೂ ಸಮಾನಗಳಾಗಿವೆ.

೨.೨ ವ್ಯಂಜನವೈವಿಧ್ಯ :

ಅಘೋಷ : ಘೋಷ

ಶಿವಳ್ಳಿ : ತಳಿ 'ದಳಿ' ಗೆಂಡ 'ಕೆಂಡ'
ತುಂಬಿ 'ದುಂಬಿ' ಕೊನೆ 'ಗೊನೆ'

ಸ್ಪರ್ಶ : ಅನುನಾಸಿಕ

ಹವ್ಯಕ : ಙಗ್ಗು 'ಜಗ್ಗು' (ತುಳು : ಙಗ್ಗುಣ)
ಗೌಡ : ನೂಕು 'ದೂಡು' (ತುಳು : ನೂಕುಣ)

ಸ್ಪರ್ಶ : ಅನುನಾಸಿಕ + ಸ್ಪರ್ಶ

ಗೌಡ : ಬಳಂಕು 'ಬಳಕು' ಕಡುಂಬು 'ಕಡುಬು'
ದಾಂಟು 'ದಾಟು' ಬಳೆಂಗಾರ 'ಬಳೆಗಾರ'
ತೊಡಂಗು 'ತೊಡಗು' ಹಾಂತೆ 'ಹಾತೆ'
ಅಡಂಗು 'ಅಡಗು' ಜಿಗುಂಟು 'ಜಿಗುಟು' ಇತ್ಯಾದಿ.

ಸ್ಪರ್ಶದ್ವಿತ್ವ : ಸ್ಪರ್ಶೈಕತ್ವ

ಹವ್ಯಕ : ಕೊಳಕ್ಕು 'ಕೊಳಕು' ಸೆಳೆತ್ತ 'ಸೆಳೆತ'
ಕೆಣಕ್ಕು 'ಕೆಣಕು' ಅಗತ್ತೆ 'ಅಗತೆ'
ಬಯುಕ್ಕೆ 'ಬಯುಕೆ' ಬಿಗಿತ್ತ 'ಬಿಗಿತ'
ಮಡಿಕ್ಕೆ 'ಮಡಿಕೆ' ಕಳಚ್ಚು 'ಕಳಚು' ಇತ್ಯಾದಿ.

ಚ : ತ

ಹವ್ಯಕ : ಚಳ್ಳು 'ತಳ್ಳು' ಚೆಂಬು 'ತಂಬಿಗೆ'
ಗೌಡ : ಚೋಡಿ 'ತೊರೆ' ಚಾಳಿ 'ತಾಳೆ'
ಚೆಣೆ 'ತಣೆ'

ಚ : ಸ

ಗೌಡ : ಚಪ್ಪೆ 'ಸಪ್ಪೆ' ಚುಂಟ್ರುಟ 'ಸುರುಟು'
ಚಂಚಿ 'ಸಂಚಿ' ಚಿಪ್ಪುಳ್ಸು 'ಸಿಂಪಡಿಸು'
ಚೊಪ್ಪು 'ಸೊಪ್ಪು'

ಪ : ಹ

ಹವ್ಯಕ : ಪತ್ತು 'ಹತ್ತು' ಪಳ್ಳ 'ಹಳ್ಳ'
ಪೊರ್ಪು 'ಹರಿ' (ತುಳು : ಪರ್ಪುಣ/ಪರಿಪುಣ)

ಮ : ವ

ಶಿವಳ್ಳಿ : ಕೆಮಿ 'ಕಿವಿ' ಬಾಮಿ 'ಬಾವಿ'
ತಿಮಿ 'ತಿವಿ' ಸಾಸ್ಮಿ 'ಸಾಸಿವೆ'
ಸಮಿ 'ಸವೆ' ಅಮೆ 'ಅವೆ'
ಹವ್ಯಕ : ಸಾಸಮೆ 'ಸಾಸಿವೆ' ಅಮ್ಸರ 'ಅವಸರ'
ಹಾಮಾಸು 'ಹಾವಸೆ' ಕೆಮಿ 'ಕಿವಿ'

ರ : ಲ

ಶಿವಳ್ಳಿ : ಕೊಡ್ರಿ 'ಕೊಡಲಿ' ಮುಂಗ್ರಿ 'ಮುಂಗುಲಿ(?)'

೩. ನಾಮಪ್ರಕೃತಿಗಳು :

ನಾಮಪ್ರಕೃತಿಗಳು ಇಲ್ಲಿ ಬಹ್ವಂಶದಲ್ಲಿ ಪ್ರಮಾಣಕನ್ನಡದ ಮಾದರಿಯನ್ನೇ ಹೋಲುತ್ತವೆ. ಅಂತ್ಯವರ್ಣಗಳ ದೃಷ್ಟಿಯಿಂದ ಇವುಗಳಲ್ಲಿ ಕಂಡುಬರುವ ಕೆಲವು ವಿಶಿಷ್ಟ ಸಂಗತಿಗಳನ್ನು ಕೆಳಗೆ ಸಂಗ್ರಹಿಸಲಾಗಿದೆ.

ಹವ್ಯಕ ಕನ್ನಡದ ಬಹುವಚನ ಪ್ರಕೃತಿಗಳಲ್ಲಿ ಕೆಲವು ಒಕಾರಾಂತಗಳಾಗಿವೆ. ಉದಾ :

ಅಬ್ಬೆಕ್ಕೊ 'ತಾಯಂದಿರು' ಮರಂಗೊ 'ಮರಗಳು'
ಮಗಳಕ್ಕೊ 'ಹೆಣ್ಣುಮಕ್ಕಳು' ಹೆಡ್ಡಂಗೊ 'ಹೆಡ್ಡರು'
ತಂಗೆಕ್ಕೊ 'ತಂಗಿಯಂದಿರು' ಮೆಡಿಗೊ 'ಮಿಡಿಗಳು'
ಬಟ್ಟಕ್ಕೊ 'ಪುರೋಹಿತರು' ಕಣ್ಣಿಗೊ 'ಕಣ್ಣುಗಳು' ಇತ್ಯಾದಿ.

ಚೇತನವಾಚಕ (Rational) ಪ್ರಕೃತಿಗಳ ಅಂತಿಮ ಅಕಾರಗಳು ಅನುನಾಸಿಕಗಳು. ಉದಾ :

ಮಗನ್ 'ಮಗ' ಕಂಟನ್ 'ಗಂಡುಬೆಕ್ಕು'
ಬಟ್ಟನ್ 'ಭಟ್ಟ' ಕುದ್ಕನ್ 'ನರಿ'
ಅಕ್ಕನ್ 'ಅಕ್ಕ' ಕುಂಡೆಚ್ಚನ್ 'ಇಣಚಿ' ಇತ್ಯಾದಿ.

ಗೌಡ ಮತ್ತು ಹವ್ಯಕ ಕನ್ನಡಗಳಲ್ಲಿ ಪ್ರಥಮಪುರುಷ (ನಿರ್ದೇಶಕ) ಹಾಗೂ ಪ್ರಶ್ನಾರ್ಥಕಸರ್ವನಾಮಗಳ ಪುಲ್ಲಿಂಗ ಏಕವಚನ ಪ್ರಕೃತಿಗಳು ಅನುನಾಸಿಕ ಸ್ವರಾಂತಗಳಾಗಿವೆ. ಉದಾ :

ಹವ್ಯಕ : ಅವನ್ ಇವನ್ ಏವನ್
ಗೌಡ : ಅವನ್ ಇವನ್ ಯಾವನ್

ಶಿವಳ್ಳಿಕನ್ನಡದಲ್ಲಿ ಇವುಗಳ ಪೈಕಿ ಅವನ್ ಮತ್ತು ಇವನ್ ಪ್ರಕೃತಿಗಳು ವೈಕಲ್ಪಿಕವಾಗಿ ಬಳಕೆಯಲ್ಲಿವೆ.

ಶಿವಳ್ಳಿ ಮತ್ತು ಗೌಡಕನ್ನಡಗಳಲ್ಲಿ ಪ್ರಮಾಣಕನ್ನಡದ ಉಕಾರಾಂತ ಪ್ರಕೃತಿಗಳು ಎರಡು ಗುಂಪುಗಳಲ್ಲಿ ಹಂಚಿಹೋಗಿವೆ. ಶಿವಳ್ಳಿಕನ್ನಡದಲ್ಲಿ ಎರಡು ಲಘು ಅಕ್ಷರಗಳ ಆಕೃತಿಗಳು ಮಾತ್ರ ಉಕಾರಾಂತಗಳಾಗಿದ್ದು ಉಳಿದವು ಉ̱ಕಾರಾಂತಗಳಾಗಿವೆ. ಉದಾ :

ಮಗು, ಅದು̱, ಒಂದು̱, ಸೊಪ್ಪು̱, ಕಾಲು̱
ಹಸು, ಅಪ್ಪು̱, ಹುಲ್ಲು̱, ಊರು̱, ನೂಲು̱ ಇತ್ಯಾದಿ.

ಗೌಡಕನ್ನಡದಲ್ಲಿ ಇವು, ಕೆಲವು ಅಪವಾದಗಳನ್ನು ಬಿಟ್ಟರೆ, ಓಷ್ಠ್ಯವರ್ಣಗಳ ಹಾಗೂ ಉ, ಒ ಸ್ವರಗಳ ಮುಂದೆ ಉಕಾರಾಂತಗಳಾಗಿದ್ದು ಉಳಿದೆಡೆಗಳಲ್ಲಿ ಉ̱ಕಾರಾಂತಗಳಾಗಿವೆ. ಉದಾ :

ಹಸು, ಅದು, ಕಾಲು, ಕಲ್ಲು, ಆಳು, ಏಟು, ಎತ್ತು
ಕೂಸು, ಹುಲ್ಲು, ಸೊಪ್ಪು, ಊರು, ಅವು, ಒಂದು, ನೂಲು ಇತ್ಯಾದಿ.

೪. **ಬಹುವಚನಪ್ರತ್ಯಯಗಳು** :

ಏಕವಚನಪ್ರಕೃತಿಗಳಿಂದ ಬಹುವಚನಪ್ರಕೃತಿಗಳನ್ನು ಸಾಧಿಸಲು ಈ ನುಡಿಗಳಲ್ಲಿ ಬಳಸಲ್ಪಡುವ ಪ್ರತ್ಯಯಗಳು ಈ ಕೆಳಗಿನಂತಿವೆ.

ಶಿವಳ್ಳಿ :	ಅಕ್ಳು,	ದಿಕ್ಳು,	ಗಳು,		ರು
ಹವ್ಯಕ :	ಅಕ್ಕೊ,	ಅಂದ್ರು,	ಜಿಗ್ಗೊ,	ಗೊ,	(ರು)
ಗೌಡ :	ಕಳು,	ಅಂದರು,	ಜ್ಗ,	ಗ,	ರು

ಶಿವಳ್ಳಿ :

ಮಗಳಕ್ಳು 'ಹೆಣ್ಣುಮಕ್ಕಳು'	ಹಳ್ಳಿಗಳು
ಮಕ್ಳು 'ಮಕ್ಕಳು'	ಆಳುಗಳು
ಅತ್ತೇದಿಕ್ಳು 'ಅತ್ತೆಯಂದಿರು'	ನಂಟ್ರು
ತಂಗೀದಿಕ್ಳು 'ತಂಗಿಯಂದಿರು'	ಬ್ರಾಂಬ್ರು ಇತ್ಯಾದಿ.

ಹವ್ಯಕ :

ಮಗಳಕ್ಕೊ	ಮರಂಗೊ 'ಮರಗಳು'
ಮಕ್ಕೊ 'ಮಕ್ಕಳು'	ಕಂಟ್ಗೊ 'ಗಂಡುಮಕ್ಕಳು'
ಅತ್ಯೋರಕ್ಕೊ	ಮೆಡಿಗೊ 'ಮಿಡಿಗಳು'
ತಂಗೆಕ್ಕೊ	ಕಂಜಿಗೊ 'ಕರುಗಳು'
ಮಗಂದ್ರು 'ಗಂಡುಮಕ್ಕಳು'	ಹಣ್ಣುಗೊ 'ಹಣ್ಣುಗಳು'
ಅಕ್ಕಂದ್ರು	ತಲಗೊ 'ತಲೆಗಳು' ಇತ್ಯಾದಿ.

ಗೌಡ :

ಅತ್ತೆಕಳ್–	ಮರಂಗ
ಮಕ್ಕಳ್–	ಕಾಣಂಗ 'ಕೋಣಗಳು'
ತಂಗೆಕಳ್–	ಕೊತ್ತಿಗ 'ಬೆಕ್ಕುಗಳು'
ಅಕ್ಕಂದರು	ಕುದುರೆಗ 'ಕುದುರೆಗಳು'
ಅಣ್ಣಂದರು	ನಂಟರ್– ಇತ್ಯಾದಿ.

ಹವ್ಯಕಕನ್ನಡದಲ್ಲಿ 'ರು' ಪ್ರತ್ಯಯವು (< ಅವರು ?) ಕೇವಲ ಗೌರವಪ್ರದರ್ಶಕವಾಗಿದೆ. ಉದಾ : ಅತ್ತಿಗೋರು 'ಅತ್ತಿಗೆ', ಅತ್ತ್ಯೋರು 'ಅತ್ತೆ', ಮಾವನೋರು 'ಮಾವ'. ಇವನ್ನು ಏಕವಚನಪ್ರಕೃತಿಗಳಾಗಿಯೇ ಪರಿಗಣಿಸಲಾಗುವುದೆಂಬುದಕ್ಕೆ 'ಅತ್ತ್ಯೋರಕ್ಕೊ' 'ಅತ್ತೆಯುಂದಿರು' ಉತ್ತಮ ನಿದರ್ಶನವಾಗಿದೆ.

೫. ಸರ್ವನಾಮಗಳು :

ಉತ್ತಮಪುರುಷ, ಮಧ್ಯಮಪುರುಷ, ಆತ್ಮವಾಚಕಸರ್ವನಾಮಗಳಲ್ಲಿ ವಚನಭೇದ ಮಾತ್ರವಿದೆ, ಲಿಂಗಭೇದವಿಲ್ಲ. ಹವ್ಯಕದಲ್ಲಿ ಉತ್ತಮಪುರುಷ ಬಹುವಚನದಲ್ಲಿ ಸಮಾವಿಷ್ಟ (Inclusive), ಅಸಮಾವಿಷ್ಟ (Exclusive) ಭೇದವಿದೆ.

ಪ್ರಥಮಪುರುಷ (ನಿರ್ದೇಶಕ) ಸರ್ವನಾಮಗಳ ಏಕವಚನದಲ್ಲಿ ಶಿವಳ್ಳಿಕನ್ನಡದಲ್ಲಿ ಪುಂಸ್ತ್ರೀನಪುಂಸಕಗಳೆಂಬ ಮೂರು ಲಿಂಗಪ್ರಯುಕ್ತಗಳಾದ ಭೇದಗಳಿವೆ. ಬಹುವಚನದಲ್ಲಿ ಇವು ನಪುಂಸಕ, ನಪುಂಸಕಭಿನ್ನಗಳೆಂದು ಎರಡೇ ತೆರನಾಗಿವೆ. ಹವ್ಯಕದಲ್ಲಿ ಇವು ಏಕವಚನದಲ್ಲಿ ಪುಲ್ಲಿಂಗ, ಪುಲ್ಲಿಂಗಭಿನ್ನ ಹಾಗೂ ಆದರಾರ್ಥಕಸ್ತ್ರೀಲಿಂಗವೆಂದು ಮೂರು ತೆರನಾಗಿದ್ದರೆ ಗೌಡಕನ್ನಡದಲ್ಲಿ ಪುಲ್ಲಿಂಗ, ಪುಲ್ಲಿಂಗಭಿನ್ನಗಳಾಗಿ ಎರಡೇ ತೆರನಾಗಿವೆ. ಬಹುವಚನದಲ್ಲಿ ಇವೆರಡು ಕನ್ನಡಗಳಲ್ಲೂ ಲಿಂಗಭೇದವಿಲ್ಲ.

ಪ್ರಶ್ನಾರ್ಥಕಸರ್ವನಾಮಗಳು ಹವ್ಯಕ ಮತ್ತು ಗೌಡಕನ್ನಡಗಳಲ್ಲಿ ಪ್ರಥಮಪುರುಷ (ನಿರ್ದೇಶಕ) ಸರ್ವನಾಮಗಳನ್ನೇ ಹೋಲುತ್ತವೆ. ಶಿವಳ್ಳಿಕನ್ನಡದಲ್ಲಿ ಏಕವಚನದಲ್ಲಿ ಇವುಗಳಿಗೆ ಮೂರು ವಿಭಿನ್ನ ಪ್ರಕೃತಿಗಳಿವೆ. ಆದರೆ ಇವು ಮೂರೂ ಮನುಷ್ಯೇತರ ಸಂಬಂಧಿಗಳಾಗಿವೆ. ಬಹುವಚನದಲ್ಲಿ ಪುಲ್ಲಿಂಗ, ಪುಲ್ಲಿಂಗಭಿನ್ನವೆಂದು ಇವು ಎರಡು ತೆರನಾಗಿವೆ. ಪುಲ್ಲಿಂಗ ಬಹುವಚನಪ್ರಕೃತಿಯನ್ನೇ ಮನುಷ್ಯಸಂಬಂಧಿಯಾದ ಏಕವಚನದಲ್ಲೂ ಬಳಸಲಾಗುತ್ತದೆ. ಉದಾ :

ಸರ್ವನಾಮ ಏಕವಚನಪ್ರಕೃತಿಗಳು :

	ಶಿವಳ್ಳಿ	ಹವ್ಯಕ	ಗೌಡ
ಉತ್ತಮಪುರುಷ	ನಾನ್ು, ನಾ	ಆನು	ನಾ
ಮಧ್ಯಮಪುರುಷ	ನೀನ್ು, ನೀ	ನೀನು	ನೀ
ಆತ್ಮವಾಚಕ	ತಾನ್ು		ತಾ

	ಶಿವಳ್ಳಿ	ಹವ್ಯಕ	ಗೌಡ
ಪ್ರಥಮ ಪುರುಷ :			
ದೂರನಿರ್ದೇಶಕ			
ಪುಲ್ಲಿಂಗ	ಅವುನು, ಅವೆ	ಅವೆ	ಆವೆ
ಸ್ತ್ರೀಲಿಂಗ	ಅವುಳು	ಅದು	ಅದು
ನಪುಂಸಕಲಿಂಗ	ಅದು		
ಆದರಸ್ತ್ರೀಲಿಂಗ	—	ಅವ	—
ಸಮೀಪನಿರ್ದೇಶಕ			
ಪುಲ್ಲಿಂಗ	ಇವುನು, ಇವೆ	ಇವೆ	ಇವೆ
ಸ್ತ್ರೀಲಿಂಗ	ಇವುಳು	ಇದು	ಇದು
ನಪುಂಸಕಲಿಂಗ	ಇದು		
ಆದರಸ್ತ್ರೀಲಿಂಗ	—	ಇವ	—
ಪ್ರಶ್ನಾರ್ಥಕ :			
ಪುಲ್ಲಿಂಗ	—	ಎವೆ	ಯಾವೆ
ಸ್ತ್ರೀಲಿಂಗ	—	ಎವದು	ಯಾದು
ನ. ಲಿಂಗ$_1$	ಯಾವುದು		
ನ. ಲಿಂಗ$_2$	ಏನು		
ನ. ಲಿಂಗ$_3$	ಎಂತದು		
ಆದರಸ್ತ್ರೀಲಿಂಗ	—	ಎವ	—

ಸರ್ವನಾಮ ಬಹುವಚನ ಪ್ರಕೃತಿಗಳು :

	ಶಿವಳ್ಳಿ	ಹವ್ಯಕ	ಗೌಡ
ಉತ್ತಮ ಪುರುಷ	ನಾವು	ಎಂಗೊ(ಅಸಮಾವಿಷ್ಟ) ನಾವು (ಸಮಾವಿಷ್ಟ)	ನಾವು
ಮಧ್ಯಮ ಪುರುಷ	ನೀವು	ನಿಂಗೊ	ನೀವು
ಆತ್ಮವಾಚಕ	ತಾವು		ತಾವು

	ಶಿವಳ್ಳಿ	ಹವ್ಯಕ	ಗೌಡ
ಪ್ರಥಮಪುರುಷ :			
ದೂರನಿರ್ದೇಶಕ			
ಪು–ಸ್ತ್ರೀಲಿಂಗ	ಅವುರು	ಅವು	ಅವು
ನಪುಂಸಕಲಿಂಗ	ಅವು		
ಸಮೀಪನಿರ್ದೇಶಕ			
ಪು–ಸ್ತ್ರೀಲಿಂಗ	ಇವುರು	ಇವು	ಇವು
ನಪುಂಸಕಲಿಂಗ	ಇವು		
ಪ್ರಶ್ನಾರ್ಥಕ			
ಪು–ಸ್ತ್ರೀಲಿಂಗ	ಯಾರು	ಆರು	ಯಾರು
ನಪುಂಸಕಲಿಂಗ	ಯಾವುವು (ವಿರಳ)		

೬. ನಾಮಪ್ರಕೃತಿಗಳ ವರ್ಗೀಕರಣ :

ನಾಮಪ್ರಕೃತಿಗಳನ್ನು, ಮುಂದೆ ವಿಭಕ್ತಿಪ್ರತ್ಯಯಗಳನ್ನು ಉಪಯೋಗಿಸಿದಾಗ ಅವುಗಳಲ್ಲಿ ಕಂಡುಬರುವ ಸಾಮಾನ್ಯರೂಪಗಳ ವೈವಿಧ್ಯ ಮತ್ತು ವಿಭಕ್ತಿಪ್ರತ್ಯಯಗಳ ಆಕೃತಿಭೇದ ಇವೆರಡರ ಆಧಾರದ ಮೇಲೆ ಈ ಕೆಳಗಿನಂತೆ ವರ್ಗೀಕರಿಸಬಹುದು.

೧. ಇಕಾರಾಂತಗಳು ಮತ್ತು ಎಕಾರಾಂತಗಳು.

೨. ಎರಡು ಲಘು ಅಕ್ಷರಗಳಿರುವ ಉಕಾರಾಂತ ಮೂಲಪ್ರಕೃತಿಗಳು.

೩. ಆತ್ಮವಾಚಕ, ಉತ್ತಮ ಮತ್ತು ಮಧ್ಯಮಪುರುಷ ಸರ್ವನಾಮಗಳು.

೪. ಬಹುವಚನ ಪ್ರಕೃತಿಗಳು ಮತ್ತು ನಪುಂಸಕೇತರ ಪ್ರಥಮಪುರುಷ (ನಿರ್ದೇಶಿಕ) ಸರ್ವನಾಮಗಳು.

೫. ನಪುಂಸಕ ಪ್ರಥಮಪುರುಷ ಸರ್ವನಾಮಗಳು, ಸಂಖ್ಯಾವಾಚಕಗಳು,-ದು ಅಥವಾ ತತ್ಸದೃಶ ಪ್ರತ್ಯಯಗಳಲ್ಲಿ ಕೊನೆಗೊಳ್ಳುವ (ಧಾತು)ಸಾಧಿತ ಪ್ರಕೃತಿಗಳು.

೬. ಉಳಿದ ಉಕಾರಾಂತ(ಅಥವಾ ಉ̱ಕಾರಾಂತ)ಗಳು.

೭. ಅಕಾರಾಂತ (ಹವ್ಯಕದಲ್ಲಿ ಎ̆ಕಾರಾಂತ) ಚೇತನವಾಚಕಗಳು.

೮. ಅಕಾರಾಂತ ಅಚೇತನವಾಚಕಗಳು.

ಕೆಳಗೆ ವಿಭಕ್ತಿರೂಪಗಳನ್ನು ಉದಾಹರಿಸುವಾಗ ಈ ಕ್ರಮವನ್ನೇ ಅನುಸರಿಸಲಾಗಿದೆ.

೭. ವಿಭಕ್ತಿ ಪ್ರತ್ಯಯಗಳು :

ಸಾಧಾರಣವಾಗಿ ಎಲ್ಲ ಕನ್ನಡನುಡಿಗಳಲ್ಲಿರುವಂತೆಯೇ ಇಲ್ಲಿಯೂ ವಿಭಕ್ತಿ ಪ್ರತ್ಯಯಗಳು ಐದು ತೆರನಾಗಿವೆ. ತೃತೀಯಾ ಮತ್ತು ಪಂಚಮೀ ವಿಭಕ್ತಿಗಳನ್ನು ರೂಪರಚನೆಯ ದೃಷ್ಟಿಯಲ್ಲಿ ಪ್ರತ್ಯೇಕಿಸುವುದು ಅಸಾಧ್ಯ, ಸಪ್ತಮೀ ವಿಭಕ್ತಿ ಪ್ರತ್ಯಯವೂ ಕೆಲವೊಮ್ಮೆ ತೃತೀಯಾರ್ಥದಲ್ಲಿ ಪ್ರಯೋಗಿಸಲ್ಪಡುತ್ತದೆ. ದ್ವಿತೀಯಾ ವಿಭಕ್ತಿ ಪ್ರತ್ಯಯಗಳು ಮನುಷ್ಯಸಂಬಂಧಿ ನಾಮಪ್ರಕೃತಿಗಳೊಂದಿಗೆ ಆವಶ್ಯಕವಿದ್ದು ಉಳಿದೆಡೆ ವೈಕಲ್ಪಿಕ. ಸಪ್ತಮೀ ವಿಭಕ್ತಿಪ್ರತ್ಯಯಗಳು ವಿರಳವಾಗಿ ಬಳಸಲ್ಪಡುತ್ತವೆ.

೭.೧ ದ್ವಿತೀಯಾ ವಿಭಕ್ತಿಪ್ರತ್ಯಯಗಳು :

ಶಿವಳ್ಳಿ		ಹವ್ಯಕ		ಗೌಡ
ನ	೧,೨	ಇನ	೨,೬	ನ ೧,೨,೩,೬,೮
ಅ(ನ್ನ)	೩	ಅನ್/ಅ ಉಳಿದೆಡೆ (ಅನುಕ್ರಮವಾಗಿ ಸ್ವರಾರಕ್ಷಗಳು ಪರದಲ್ಲಿದ್ದಾಗ, ಇಲ್ಲದಿದ್ದಾಗ)		ಅ ಉಳಿದೆಡೆ
ನ್ನ	ಉಳಿದೆಡೆ			

ಉದಾ :

ಶಿವಳ್ಳಿ	ಹವ್ಯಕ	ಗೌಡ
ಬಾಮೀನ	ಮೆಡಿಯ	ಕೋಟೇನ
ಮಗೀನ	ಹುಳುವಿನ	ಗುರುನ
ನನ್ನ (ನ್ನ)	ಎನ್ನ	ನನ್ನ
ಗಂಟಿಗೆಳುನ್ನ	ಕಂಜಿಗಳ	ಮರಂಗಳ
ಅದ್ರುನ್ನ	ಅದರ	ಅದರ
ಊರ್ರುನ್ನ	ಊರಿನ	ಕಾರ್ರುನ
ಮಗನ್ನ	ಅಕ್ಕನ	ಅಕ್ಕನ
ಮರನ್ನ	ಮರವ	ಮರನ

೭.೨ ತೃತೀಯಾ ವಿಭಕ್ತಿಪ್ರತ್ಯಯಗಳು :

ಶಿವಳ್ಳಿ	ಹವ್ಯಕ	ಗೌಡ
ಇಂದ	ಇಂದ ೬	ಅಂದ ೩
	ಅಂದ ೩,೫	ನ್ದ ಉಳಿದೆಡೆ
	ನ್ದ ಉಳಿದೆಡೆ	

ಉದಾ :

ಬಾವೀಂದ	ಮೆಡಿಂದ	ಏಣಿಂದ
ಮಗೀಂದ	ಹುಳುವಿಂದ	—
ನನ್ನಿಂದ	ಎನ್ನಂದ	ನನ್ನಂದ
ಗಂಟಿಗಳಿಂದ	ಮರಂಗಳ್ಂದ	ಮರಂಗಳ್ಂದ
ಆದ್ದುರಿಂದ	ಅದರಿಂದ	ಅದಂರ್ದ
ಊರಿಂದ	ಕಣ್ಣಿಂದ	ಕೋಟ್ಟುಂದ
ಮಗನಿಂದ	ಅಕ್ಕಂದ	ಅಪ್ಪಂದ
ಮರದಿಂದ	ಮರಂದ	ಮರಂದ

೭.೩ ಚತುರ್ಥೀ ವಿಭಕ್ತಿಪ್ರತ್ಯಯಗಳು :

ಶಿವಳ್ಳಿ	ಹವ್ಯಕ	ಗೌಡ
ಕ್ಕ ೫,೮	ಕ್ಕೆ ೫,೮,	ಕೆ ೫
	೪ ಮನುಷ್ಯೇತರ ವಾಚಕ	ಕ್ಕೆ ೮
ಇಗೆ/ಈಗೆ ೪,೬,೭	ಇಂಗೆ ೨,೬	ಇಗೆ ೪
ಉಗೆ ೩	ಅಗೆ ೩	ಗೆ ಉಳಿದೆಡೆ
ಗೆ ಉಳಿದೆಡೆ	ಗೆ ಉಳಿದೆಡೆ	

ಉದಾ :

ಬಾವೀಗೆ	ಮೆಡಿಗೆ	ಮಂತ್ರಿಗೆ
ಮಗೀಗೆ	ಉಡುವಿಂಗೆ	—
ನಸ್ಸುಗೆ	ಎನಗೆ	ನಂಗೆ

ಶಿವಳ್ಳಿ	ಹವ್ಯಕ	ಗೌಡ
ಗಂಟಿಗಳಿಗೆ/-ಳೀಗೆ	ಕಂಜಿಗೊಕ್ಕೆ ಎಂಗೊಗೆ	ಮರಂಗಳಿಗೆ
ಅದ್ರುಕ್ಕೆ	ಅದಕ್ಕೆ	ಅದ್ರುಕೆ
ಊರಿಗೆ/-ರೀಗೆ	ಕಣ್ಣಿಂಗೆ	ಕಾರ್ರುಗೆ
ಮಗನಿಗೆ/-ನೀಗೆ	ಅಕ್ಕಂಗೆ	ಅಪ್ಪಂಗೆ
ಮರಕ್ಕೆ	ಅಟ್ಟಕ್ಕೆ	ಮರಕ್ಕೆ

೭.೪ ಷಷ್ಠೀ ವಿಭಕ್ತಿಪ್ರತ್ಯಯಗಳು :

ಶಿವಳ್ಳಿ		ಹವ್ಯಕ		ಗೌಡ	
ನ	೨,೩	ಇನ	೨,೬	ನ	೧,೨,೬
ಇನ	೬	ಅ	ಉಳಿದೆಡೆ	ಅ	ಉಳಿದೆಡೆ
φ	೧				
ಅ	ಉಳಿದೆಡೆ				

ಉದಾ :

ಶಿವಳ್ಳಿ	ಹವ್ಯಕ	ಗೌಡ
ಬಾಮೀ	ಮೆಡಿಯು	ಏಣೆನ
ಮಗೀನ	ಉಡುವಿನ	ಗುರುನ
ನನ್ನ	ಎನ್ನ	ನನ್ನ
ಅದ್ರುರ	ಅದರ	ಅದರ
ಗಂಟಿಗಳ	ಕಂಜಿಗಳ	ಮರಂಗಳ
ಊರಿನ	ಕಣ್ಣಿನ	ಕೊಟ್ರುನ
ಮಗನ	ಅಕ್ಕನ	ಅಪ್ಪನ
ಮರದ	ಅಟ್ಟದ	ಮರದ

೭.೫ ಸಪ್ತಮೀ ವಿಭಕ್ತಿಪ್ರತ್ಯಯಗಳು :

ಶಿವಳ್ಳಿ		ಹವ್ಯಕ		ಗೌಡ	
ಲಿ	೧,೨	ಲಿ	೧	ಲಿ	೧,೬
ಇಲ್ಲಿ/ಈಲಿ	೬	ಇಲಿ	೬	ಅಲಿ	೫
ಅಲ್ಲಿ	ಉಳಿದೆಡೆ	ಅಲ್ಲಿ	ಉಳಿದೆಡೆ		

ಉದಾ :

ಬಾಮೀಲಿ	ಮೆಡಿಲಿ	ಏಣಿಲಿ
ಮಗೀಲಿ	—	—
ನನ್ನಲ್ಲಿ	—	—
ಗಂಟೆಗಳಲ್ಲಿ	—	—
ಅದುರಲ್ಲಿ	ಅದರಲ್ಲಿ	ಅದರಲಿ
ಊರಿಲ್ಲಿ/ರೀಲಿ	ಕಣ್ಣಿಲಿ	ಕಾರುಲಿ
ಮರದಲ್ಲಿ	—	—

೮. ಕ್ರಿಯಾಪದಗಳು :

ಕ್ರಿಯಾಪದಗಳನ್ನು ಅವುಗಳ ರಚನ ಹಾಗೂ ಪ್ರಯೋಗಗಳ ಆಧಾರದ ಮೇಲೆ ಎಲ್ಲ ವಿದ್ವಾಂಸರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಸಮಗ್ರವಾಗಿ ವಿವೇಚಿಸುವುದು ಈ ಲೇಖನದ ಮಿತಿಯಿಂದ ಹೊರಗಾದದ್ದು. ಇಲ್ಲಿ ಅವುಗಳ ರಚನೆಯ ಬಗ್ಗೆ ಪೂರ್ಣ ಕ್ರಿಯಾಪದಗಳ ಆಧಾರದಿಂದ ಕೇವಲ ಸ್ಥೂಲನಿರ್ದೇಶನವನ್ನು ಮಾಡಲಾಗಿದೆ.

ರಚನಾತ್ಮಕದೃಷ್ಟಿಯಿಂದ ಪೂರ್ಣಕ್ರಿಯಾಪದಗಳನ್ನು ಮುಖ್ಯವಾಗಿ ಎರಡು ತೆರನಾಗಿ ವಿಭಾಗಿಸಬಹುದು : ೧. ಕಾಲವಾಚಕಪ್ರತ್ಯಯಗಳನ್ನು ಹಚ್ಚಿ ಸಾಧಿತ ಗಳಾದ ಧಾತುಪ್ರಕೃತಿಗಳಿಗೆ ಆಖ್ಯಾತಪ್ರತ್ಯಯಗಳನ್ನು ಸೇರಿಸಿ ಸಿದ್ಧವಾಗುವವು. ೨. ಧಾತುಗಳಿಗೆ ನೇರವಾಗಿ ಆಖ್ಯಾತಪ್ರತ್ಯಯಗಳನ್ನು ಸೇರಿಸಿ ಸಿದ್ಧವಾಗುವವು. ಒಂದನೆಯ ಗುಂಪಿಗೆ ಭೂತ, ವರ್ತಮಾನ, ಭವಿಷ್ಯತ್‌ರೂಪಗಳು ನಿದರ್ಶನಗಳಾದರೆ, ಉಳಿದವು ಎರಡನೆಯ ಗುಂಪಿಗೆ ಸೇರಿದವು.

೮.೧ ಕಾಲವಾಚಕಪ್ರತ್ಯಯಗಳು :

ಇವು ಮೂರು ತೆರನಾಗಿದ್ದು, ಶಿವಳ್ಳಿ ಮತ್ತು ಹವ್ಯಕ ಕನ್ನಡಗಳಲ್ಲಿ ಇವನ್ನು ಆಯಾ ಕಾಲವಾಚಕಪ್ರಕೃತಿಗಳನ್ನು ಸಾಧಿಸಲು ಉಪಯೋಗಿಸಲಾಗುತ್ತದೆ. ಗೌಡ ಕನ್ನಡದಲ್ಲಿ ಭೂತ ಮತ್ತು ಭವಿಷ್ಯತ್‌ಪ್ರಕೃತಿಗಳನ್ನು[೩] ಇದೇರೀತಿ ಸಾಧಿಸಿದರೂ ವರ್ತಮಾನಪ್ರಕೃತಿಗಳ ರಚನೆಯಲ್ಲಿ ಭಿನ್ನರೀತಿಯು ಕಂಡುಬರುತ್ತದೆ. ಇಲ್ಲಿ ವರ್ತಮಾನ ಕಾಲವಾಚಕಪ್ರತ್ಯಯಗಳು ರೂಪಾತ್ಮಕವಾಗಿಯೂ ಉಳಿದ ಕನ್ನಡ ಪ್ರತ್ಯಯಗಳಿಂದ ಭಿನ್ನವಾಗಿದ್ದು ಇವನ್ನು ಭೂತಕಾಲಪ್ರಕೃತಿಗಳ ಮುಂದೆ ಉಪ ಯೋಗಿಸಿ ವರ್ತಮಾನಪ್ರಕೃತಿಗಳನ್ನು ಸಾಧಿಸಲಾಗುತ್ತದೆ. ಇದರಿಂದ ಇಲ್ಲಿ ಕಾಲ ವಾಚಕಕ್ರಿಯಾರೂಪಗಳು ಎರಡು ರೀತಿಯ ರಚನೆಗಳನ್ನು ಒಳಗೊಳ್ಳುತ್ತವೆ.

೧ ಧಾತು + ಭೂತ / ಭವಿಷತ್ಕಾಲವಾಚಕ ಪ್ರತ್ಯಯ + ಆಖ್ಯಾತಪ್ರತ್ಯಯ.

೨ ಧಾತು + ಭೂತಕಾಲವಾಚಕ ಪ್ರತ್ಯಯ + ವರ್ತಮಾನಕಾಲವಾಚಕ ಪ್ರತ್ಯಯ + ಆಖ್ಯಾತಪ್ರತ್ಯಯ.*

೮.೨ ಆಖ್ಯಾತಪ್ರತ್ಯಯಗಳು :

ಪೂರ್ಣಕ್ರಿಯಾಪದಗಳ ಕೊನೆಯಲ್ಲಿ ಕಂಡುಬರುವ ಆಖ್ಯಾತಪ್ರತ್ಯಯಗಳನ್ನು ವಿವೇಚನೆಗೆ ಅನುಕೂಲವಾಗುವಂತೆ ಪುರುಷಾರ್ಥ, ಅಶಕ್ಯಾರ್ಥ, ಪ್ರಾರ್ಥನಾ ಅಥವಾ ಅಪೇಕ್ಷಾರ್ಥ, ನಿಷೇಧಾರ್ಥ, ಶಾಸನಾರ್ಥಗಳೆಂದು ಹೆಸರಿಸಬಹುದು.

೮.೨.೧ ಪುರುಷಾರ್ಥಪ್ರತ್ಯಯಗಳು :

ಇವು ಭೂತ, ವರ್ತಮಾನ, ಭವಿಷತ್ಪ್ರಕೃತಿಗಳ ಮುಂದೆ ಬಳಸಲ್ಪಡುವ ಪ್ರತ್ಯಯಗಳು. ಇವು ಇಲ್ಲಿಯ ಮೂರು ಕನ್ನಡಗಳಲ್ಲಿಯೂ ಉಪಲಭ್ಯವಿದ್ದು ಪುರುಷ, ವಚನ ಮತ್ತು ಲಿಂಗಪ್ರಯುಕ್ತಗಳಾದ ಭೇದಗಳಲ್ಲಿ ಆಯಾ ಕನ್ನಡದ ಸರ್ವನಾಮಗಳ ರಚನೆಯನ್ನು ಹೋಲುತ್ತವೆ.

ಶಿವಳ್ಳಿ ಮತ್ತು ಹವ್ಯಕಗಳಲ್ಲಿ ಇವು ಒಂದೊಂದೇ ಗುಂಪಿನ ಘಟಕಗಳಾಗಿದ್ದು ಭೂತ, ವರ್ತಮಾನ, ಭವಿಷತ್‌ಪ್ರಕೃತಿಗಳ ಮುಂದೆ ಸಮನಾಗಿ ಬಳಸಲ್ಪಡುತ್ತವೆ. ಗೌಡ ಕನ್ನಡದಲ್ಲಿ ಮಾತ್ರ ಇವು ಎರಡು ಗುಂಪುಗಳಲ್ಲಿ ಒಡೆದಿದ್ದು, ಒಂದನೆಯ ಗುಂಪಿನವು ಭೂತ ಮತ್ತು ಭವಿಷತ್ಪ್ರಕೃತಿಗಳ ಮುಂದೆಯೂ ಎರಡನೆಯ ಗುಂಪಿನವು ವರ್ತಮಾನಪ್ರಕೃತಿಗಳ ಮುಂದೆಯೂ ಕಂಡುಬರುತ್ತವೆ. ಉದಾ : ಮಾಡ್‌ 'ಮಾಡು' –ಈ ಧಾತುವಿನ ರೂಪಗಳು ಹೀಗಿವೆ :

ಶಿವಳ್ಳಿ :

ಭೂತಕಾಲ

	ಏ. ವ.	ಬ. ವ.
ಉ. ಪು.	ಮಾಡುದೆ	ಮಾಡ್ಡೊ/ಮಾಡ್ತು*
ಮ. ಪು.	ಮಾಡುದೆ	ಮಾಡುದ್ರಿ/ಮಾಡಿರಿ
ಪ್ರ. ಪು. ಪು.	ಮಾಡುದ	ಮಾಡ್ದ್ರು/ಮಾಡಿರು
ಸ್ತ್ರೀ.	ಮಾಡೀಳು	
ನ.	ಮಾಡ್ತು*	ಮಾಡ್ಡೊ

ವರ್ತಮಾನಕಾಲ

	ಏ. ವ.	ಬ. ವ.
ಉ. ಪು.	ಮಾಡ್ತೆ	ಮಾಡ್ಲೊ/ಮಾಡುತ್ತು
ಮ. ಪು.	ಮಾಡ್ತೆ	ಮಾಡ್ರಿ
ಪ್ರ. ಪು. ಪು.	ಮಾಡ್ತ	ಮಾಡ್ತ್ರು
ಸ್ತ್ರೀ.	ಮಾಡ್ತು	
ನ.	ಮಾಡುತ್ತು	ಮಾಡ್ಲೊ

ಭವಿಷತ್‌ಕಾಲ

	ಏ. ವ.	ಬ. ವ.
ಉ. ಪು.	ಮಾಡುವೆ	ಮಾಡು
ಮ. ಪು.	ಮಾಡುವೆ	ಮಾಡೂರಿ
ಪ್ರ. ಪು. ಪು.	ಮಾಡುವ	ಮಾಡೂರು
ಸ್ತ್ರೀ.	ಮಾಡೂಳು	
ನ.	ಮಾಡು	ಮಾಡು

ಹವ್ಯಕ :

ಭೂತಕಾಲ

	ಏ. ವ.	ಬ. ವ.
ಉ. ಪು.	ಮಾಡಿದೆ	ಮಾಡಿತ್ತು (ಸಮಾವಿಷ್ಟ) ಮಾಡಿದೆಯೊನ್ (ಅಸಮಾವಿಷ್ಟ)
ಮ. ಪು.	ಮಾಡಿದೆ	ಮಾಡಿದಿ
ಪ್ರ. ಪು. ಪು.	ಮಾಡಿದನ್	ಮಾಡಿದವು
ಸ್ತ್ರೀ. ನ.	ಮಾಡಿತ್ತು	
ಆದರಸ್ತ್ರೀ.	ಮಾಡಿದ	

ವರ್ತಮಾನಕಾಲ

	ಏ. ವ.	ಬ. ವ.
ಉ. ಪು.	ಮಾಡುತ್ತೆ	ಮಾಡುತ್ತು (ಸಮಾವಿಷ್ಟ) ಮಾಡುತ್ತೆಯೊನ್ (ಅಸಮಾವಿಷ್ಟ)
ಮ. ಪು.	ಮಾಡುತ್ತೆ	ಮಾಡುತ್ತಿ

ಪ್ರ. ಪು. ಪು.	ಮಾಡುತ್ತನ್	ಮಾಡುತ್ತವು
ಸ್ತ್ರೀ. ನ.	ಮಾಡುತ್ತು	
ಆದರಸ್ತ್ರೀ.	ಮಾಡುತ್ತ	

ಭವಿಷತ್‌ಕಾಲ

	ಏ. ವ.	ಬ. ವ.
ಉ. ಪು.	ಮಾಡುವೆ	ಮಾಡುಗು (ಸಮಾವಿಷ್ಟ) ಮಾಡುವೆಯೊನ್ (ಅಸಮಾವಿಷ್ಟ)
ಮ. ಪು.	ಮಾಡುವೆ	ಮಾಡು
ಪ್ರ. ಪು. ಪು.	ಮಾಡುಗು	ಮಾಡುಗು

ಗೌಡ : ಕೊಡು

ಭೂತಕಾಲ

	ಏ. ವ.	ಬ. ವ.
ಉ. ಪು.	ಕೊಟ್ಟೆ	ಕೊಟ್ಟೆ
ಮ. ಪು.	ಕೊಟ್ಟ	ಕೊಟ್ಟರಿ
ಪ್ರ. ಪು. ಪು.	ಕೊಟ್ಟೊ	ಕೊಟ್ಟೊ
ಸ್ತ್ರೀ. ನ.	ಕೊಟ್ಟತು	

ಭವಿಷತ್‌ಕಾಲ

	ಏ. ವ.	ಬ. ವ.
ಉ. ಪು.	ಕೊಡುವೆ	ಕೊಡುವೆ
ಮ. ಪು.	ಕೊಡುವ	ಕೊಡುವರಿ
ಪ್ರ. ಪು. ಪು.	ಕೊಡುವೊ	ಕೊಡುವೊ
ಸ್ತ್ರೀ. ನ.	ಕೊಡುದು	

ವರ್ತಮಾನಕಾಲ

	ಏ. ವ.	ಬ. ವ,
ಉ. ಪು.	ಕೊಟ್ಟನೆ	ಕೊಟ್ಟವೆ
ಮ. ಪು.	ಕೊಟ್ಟಯ	ಕೊಟ್ಟರೆ
ಪ್ರ. ಪು.	ಕೊಟ್ಟದೆ	ಕೊಟ್ಟವೆ

ಮೂರೂ ಕನ್ನಡಗಳಲ್ಲಿ ಬಳಸಲಾದ ಪುರುಷಾರ್ಥಪ್ರತ್ಯಯಗಳನ್ನು ಮುಂದಿನ ಪುಟದಲ್ಲಿ ಕಾಣಿಸಿದಂತೆ ಕೋಷ್ಟಕಗಳಲ್ಲಿ ಸಂಗ್ರಹಿಸಬಹುದು.

ಪುರುಷಾರ್ಥಪ್ರತ್ಯಯಗಳು :

ಶಿವಳ್ಳಿ :

		ಏ. ವ.	ಬ. ವ.
ಉ. ಪು.		ಎ	ಉ ಭವಿಷ್ಯಕ್ಕೆ
			ಒ ಉಳಿದೆಡೆ
ಮ. ಪು.		ಎ	ರಿ
ಪ್ರ.ಪು :	ಪು.	ಅ	ರು (ಪು., ಸ್ತ್ರೀ.)
	ಸ್ತ್ರೀ.	ಳು	
	ನ.	ಉ ಭವಿಷ್ಯಕ್ಕೆ	ಉ ಭವಿಷ್ಯಕ್ಕೆ
		ತು ಉಳಿದೆಡೆ	ಒ ಉಳಿದೆಡೆ

ಹವ್ಯಕ :

	ಏ. ವ.	ಬ. ವ.
ಉ. ಪು.	ಎ	ಉ ಸಮಾವಿಷ್ಟ
		ಎಯೊನ್ ಅಸಮಾವಿಷ್ಟ
ಮ. ಪು.	ಎ	ಇ
ಪ್ರ. ಪು.	ಅನ್	ಅವು (ಪ್ರ. ಪು., ಸ್ತ್ರೀ. ನ., ಆದರಸ್ತ್ರೀ.)
ಸ್ತ್ರೀ. ನ.	ಉ	
ಆದರಸ್ತ್ರೀ.	ಅ	

ಗೌಡ : ಗುಂಪು ೧. ಭೂತಭವಿಷತ್‌ರೂಪಗಳಲ್ಲಿ

	ಏ. ವ.	ಬ. ವ.
ಉ. ಪು.	ಎ	ಎ
ಮ. ಪು.	ಅ	ಅರಿ
ಪ್ರ. ಪು.	ಒ	ಒ

ಗುಂಪು ೨. ವರ್ತಮಾನರೂಪಗಳಲ್ಲಿ(ಕಾಲವಾಚಕ ಆಕೃತಿಗಳೊಂದಿಗೆ)

	ಏ. ವ.	ಬ. ವ.
ಉ. ಪು.	*(ಅ)ನೆ	ಅವೆ
ಮ. ಪು.	ಇಯ	(ಅ)ರೆ
ಪ್ರ. ಪು.	(ಅ)ದೆ	(ಅ)ವೆ

* ಬಂಧನಿಯೊಳಗಿನ ವರ್ಣಗಳು ಸ್ವರಾಂತಪ್ರಕೃತಿಗಳ ಮುಂದೆ ಲುಪ್ತವಾಗುತ್ತವೆ.

೮.೨.೨ ಅಶಕ್ಯಾರ್ಥ ಪ್ರತ್ಯಯಗಳು :

ಇವನ್ನು ಧಾತುಗಳಿಗೆ ನೇರವಾಗಿ ಹಚ್ಚಲಾಗುತ್ತದೆ. ಇವು ಶಿವಳ್ಳಿ ಮತ್ತು ಹವ್ಯಕ ಕನ್ನಡದಲ್ಲಿ ಲಿಂಗಭೇದವನ್ನು ಪಡೆದಿವೆ. ಉದಾ :

ಶಿವಳ್ಳಿ : ಮಾಡೆ 'ಮಾಡಲಾರೆ' ಇತ್ಯಾದಿ.

		ಏಕವಚನ		ಬಹುವಚನ	
ಉ. ಪು.		ಎ	ಮಾಡೆ	ಅ	ಮಾಡ
ಮ. ಪು.		ಎ	ಮಾಡೆ	ರಿ	ಮಾಡ್ರಿ
ಪ್ರ. ಪು:	ಪು.	ಅ	ಮಾಡ	ರ್ः	ಮಾಡ್ರು
	ಸ್ತ್ರೀ.	ಅಳು	ಮಾಡಳು		
	ನ.	ಅ	ಮಾಡ	ಅ	ಮಾಡ

ಹವ್ಯಕ :

ಉ. ಪು.		ಎ	ಮಾಡೆ	ಅ	ಮಾಡ (ಸಮಾವಿಷ್ಟ)
				ಎಯೊನ್	ಮಾಡೆಯೊನ್ (ಅಸಮಾವಿಷ್ಟ)
ಮ. ಪು.		ಎ	ಮಾಡೆ	—	
ಪ್ರ. ಪು:	ಪು.	ಅ̃	ಮಾಡನ್	ಅವು	ಮಾಡವು
	ಸ್ತ್ರೀ. ನ.	ಅ	ಮಾಡ		

ಗೌಡಕನ್ನಡದಲ್ಲಿ ಒಂದೇ ಪ್ರತ್ಯಯ (ಅದ್ದು) ಇದ್ದು, ಪ್ರಥಮಪುರುಷ ಏಕವಚನದಲ್ಲಿ ಪುಲ್ಲಿಂಗೇತರ ರೂಪದಲ್ಲಿ ಮಾತ್ರ ಇದನ್ನು ಬಳಸಲಾಗುತ್ತದೆ. ಉಳಿದೆಡೆ ಉಲೆ (< ಇಲ್ಲೆ) ಎಂಬ ಪದವನ್ನು ಕೆಲವು ಕೃದಂತಪದಗಳೊಂದಿಗೆ ಉಪಯೋಗಿಸಿ ಈ ಅರ್ಥವನ್ನು ವ್ಯಕ್ತಗೊಳಿಸಲಾಗುತ್ತದೆ. ಉದಾ :

ಕೊಡದ್ದು	'ಅದು ಕೊಡಲಾರದು'
ತಿನದ್ದು	'ಅದು ತಿನ್ನಲಾರದು' ಇತ್ಯಾದಿ.

ಇತರ ಸ್ಥಳಗಳಲ್ಲಿ

ಕೊಟ್ಟುತ್ತುಲೆ	'ಕೊಡಲಿಲ್ಲ'
ಕೊಡದ್ದುಲೆ	'ಕೊಡುವುದಿಲ್ಲ'
ಕೊಡುಕುಲೆ	'ಕೊಡಲಿಕ್ಕಿಲ್ಲ' ಇತ್ಯಾದಿ.

೮.೨.೩ ಪ್ರಾರ್ಥನಾ ಅಥವಾ ಅಪೇಕ್ಷಾರ್ಥ ಪ್ರತ್ಯಯಗಳು :

ಕನ್ನಡದಲ್ಲಿ ಸಾಧಾರಣವಾಗಿ ವಿಧ್ಯರ್ಥಗಳೆಂದು ಪರಿಗಣಿಸಲಾದ ಪ್ರತ್ಯಯಗಳನ್ನು ಇಲ್ಲಿ– ಶಿವಳ್ಳಿ : ಮಾಡ್ಕು, ಹವ್ಯಕ : ಮಾಡೆಕ್ಕು ಮೊದಲಾದ ರೂಪಗಳಲ್ಲಿ ಕಂಡು ಬರುವ ಪ್ರತ್ಯಯಗಳಿಂದ ಬೇರೆಯಾಗಿ ಪರಿಗಣಿಸುವ ಸೌಕರ್ಯಕ್ಕಾಗಿ, ಈ ಹೆಸರಿನಲ್ಲಿ ಕರೆಯಲಾಗಿದೆ. ಇವುಗಳನ್ನು ಕೆಳಗಿನ ರೂಪಗಳಲ್ಲಿ ಗುರುತಿಸಬಹುದು. ಉದಾ :

ಶಿವಳ್ಳಿ :

	ಏ. ವ.		ಬ. ವ.	
ಉ. ಪು.	—		ಆ	ಮಾಡುವಾ
ಮ. ಪು.	ø	ಮಾಡ್ತು	ಇ, ಇನಿ	ಮಾಡಿ, ಮಾಡಿನಿ
ಪ್ರ. ಪು.	ಲಿ	ಮಾಡ್ಲಿ	ಲಿ	ಮಾಡ್ಲಿ

ಹವ್ಯಕ :

ಉ. ಪು.	—		ಓನ್	ಮಾಡುವೊನ್
ಮ. ಪು.	ø	ಮಾಡು	ಇ/ಇರ್–	ಮಾಡಿ / ಮಾಡಿರೊನ್
ಪ್ರ. ಪು.	ಲಿ	ಮಾಡ್ಲಿ	ಲಿ	ಮಾಡ್ಲಿ

ಗೌಡ :

ಉ. ಪು.			ಓನ್ಓ	ಹೊವೊನ್ಓ 'ಹೋಗೋಣ'
ಮ. ಪು.	ø	ಹೋಗು	ಇ	ಹೋಗಿ
ಪ್ರ. ಉ.	ಲಿ	ಹೋಗ್ಲಿ	ಲಿ	ಹೋಗ್ಲಿ

ಈ ಪ್ರತ್ಯಯಗಳಿಗೆ ಪ್ರಮಾಣಕನ್ನಡದಲ್ಲಿರುವಂತೆಯೇ ಪ್ರಥಮಪುರುಷದಲ್ಲಿ ವಚನ–ಲಿಂಗ ಭೇದವಿಲ್ಲ. ಉತ್ತಮ ಮತ್ತು ಮಧ್ಯಮ ಪುರುಷಗಳಲ್ಲಿ ಇವು ಬಹು ವಚನದಲ್ಲಿ ಮಾತ್ರ ಬಳಕೆಯಲ್ಲಿವೆ.

ಗೌಡ ಮತ್ತು ಶಿವಳ್ಳಿ ಕನ್ನಡಗಳಲ್ಲಿ ಮಧ್ಯಮಪುರುಷ ಬಹುವಚನದಲ್ಲಿ ನಿ ಪ್ರತ್ಯಯುವನ್ನು ಇ ಕಾರಾಂತ ಧಾತುಗಳ ಮುಂದೆ ಅಗತ್ಯವಾಗಿ, ಇತರ ಧಾತು ಗಳೊಂದಿಗೆ ವೈಕಲ್ಪಿಕವಾಗಿ 'ಇ' ಪ್ರತ್ಯಯದ ಬದಲು ಬಳಸಲಾಗುತ್ತದೆ. ಉದಾ :

ಗೌಡ : ತಡಿನಿ 'ತಡೆಯಿರಿ' ಬಿಗಿನಿ 'ಬಿಗಿಯಿರಿ'

ಶಿವಳ್ಳಿ : ಕುಡಿನಿ 'ಕುಡಿಯಿರಿ' ಎಳಿನಿ 'ಎಳೆಯಿರಿ',
ಮಾಡಿ ಅಥವಾ ಮಾಡಿನಿ ಇತ್ಯಾದಿ.

೮.೨.೪ **ನಿಷೇಧಾರ್ಥಪ್ರತ್ಯಯಗಳು :**

ಮಧ್ಯಮಪುರುಷ 'ಅಡ' ಮತ್ತು 'ಅಡಿ' ಈ ಪ್ರತ್ಯಯಗಳು ಹವ್ಯಕದಲ್ಲಿ ಮಾತ್ರ ಕಂಡುಬಂದಿದ್ದು, ಮಧ್ಯಮಪುರುಷ ಏಕವಚನ ಮತ್ತು ಬಹುವಚನಗಳಲ್ಲಿ ಅನುಕ್ರಮವಾಗಿ ಧಾತುಗಳೊಂದಿಗೆ ಉಪಯೋಗಿಸಲ್ಪಡುತ್ತವೆ. ಉದಾ :

ಬರಡ 'ಬರಬೇಡ' ಬರಡಿ 'ಬರಬೇಡಿ'
ತಿನ್ನಡ 'ತಿನ್ನಬೇಡಿ' ತಿನ್ನಡಿ 'ತಿನ್ನಬೇಡಿ'

ಇವು ಕನ್ನಡದಲ್ಲಿ ಬರಬೇಡ, ತಿನ್ನಬೇಡ ಮೊದಲಾದ ವಾಕ್ಯಾಂಶಗಳ ಸಂಕ್ಷಿಪ್ತ ರೂಪಗಳಂತೆಯೇ ಕಂಡುಬಂದರೂ ತುಳುಭಾಷೆಯಲ್ಲಿ ಇದೇ ಅರ್ಥದಲ್ಲಿ ಬಳಕೆಯಲ್ಲಿರುವ ಬರಡ : ಬರಡೆ, ತಿನಡ : ತಿನಡೆ ಪದಗಳೊಂದಿಗೆ ತುಲನೆಮಾಡಿದಾಗ ಇವುಗಳ ಏಕಪದತ್ವವನ್ನು ವರ್ಣನಾತ್ಮಕದೃಷ್ಟಿಯಿಂದ ಸಂದೇಹಿಸಬೇಕಾಗಿಲ್ಲವೆಂದು ತೋರುತ್ತದೆ.

ಪ್ರಥಮಪುರುಷ : ಹವ್ಯಕ : 'ಅದ್ದೆ', ಶಿವಳ್ಳಿ : 'ಉ̱ದೆ'.

'ಅವನು ಮಾಡದಿರಲಿ', 'ಅವನು ಬಾರದಿರಲಿ' ಮುಂತಾದ ನಿಷೇಧಾರ್ಥ ವಾಕ್ಯಗಳ ಸ್ಥಳದಲ್ಲಿ, ಹವ್ಯಕ ಮತ್ತು ಶಿವಳ್ಳಿ ಕನ್ನಡಗಳಲ್ಲಿ ಎಲ್ಲ ಪುರುಷಗಳಲ್ಲೂ ಸಾಧಾರಣವಾಗಿರುವ ನಿಷೇಧಾರ್ಥ ಕೃದಂತರೂಪ (ಅಪೂರ್ಣಕ್ರಿಯಾಪದ)ಗಳನ್ನು ಕೆಲವೊಮ್ಮೆ ಬಳಸಲಾಗುತ್ತದೆ. ಪರಿಣಾಮವಾಗಿ ಈ ಪ್ರತ್ಯಯಗಳು ಪೂರ್ಣಕ್ರಿಯಾಪದಸಾಧಕ ಆಖ್ಯಾತಪ್ರತ್ಯಯದ ಕಾರ್ಯವನ್ನು ನಿರ್ವಹಿಸುತ್ತವೆ. ಉದಾ :

ಹವ್ಯಕ : ಮಾಡದ್ದೆ
ಶಿವಳ್ಳಿ : ಮಾಡು̱ದೆ 'ಮಾಡದಿರಲಿ'
ಹವ್ಯಕ : ಬಾರದ್ದೆ
ಶಿವಳ್ಳಿ : ಬರು̱ದೆ 'ಬಾರದಿರಲಿ' ಇತ್ಯಾದಿ.

೮.೨.೫ **ಶಾಸನಾರ್ಥಪ್ರತ್ಯಯಗಳು:**

ಶಿವಳ್ಳಿ : ಕು̱. ಉದಾ : ಮಾಡ್ಕು 'ಮಾಡಬೇಕು', ಕುಡೀಕು̱ 'ಕುಡಿಯಬೇಕು'

ಹವ್ಯಕ : ಎಕ್ಕು. ಉದಾ : ಮಾಡೆಕ್ಕು, ಇರೆಕ್ಕು 'ಇರಬೇಕು'

ಗೌಡ : ಒಕು ಅಥವಾ ಕು. ಉದಾ : ಕೊಡೊಕು 'ಕೊಡಬೇಕು'

ಬರಿಯೊಕು 'ಬರೆಯಬೇಕು', ಹೋಕು 'ಹೋಗಬೇಕು' ಇತ್ಯಾದಿ.

ಇವೂ ನಿಷೇಧಾರ್ಥಪ್ರತ್ಯಯಗಳಂತೆಯೇ –ಬೇಕು ವಾಕ್ಯಾಂಶಗಳಿಂದ ಬೆಳೆದು ಬಂದು ಏಕಪದತ್ವವನ್ನು ಪಡೆದಿರುವ ಪದಗಳ ಅಂಶಗಳಾಗಿವೆ.

ಕೊನೆಯ ಮಾತು :

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಕನ್ನಡದ ಆಡುನುಡಿಗಳ ರಚನೆಯ ಬಗೆಗೆ ಇದೊಂದು ಸ್ಥೂಲವಿವೇಚನೆಯ ಪ್ರಯತ್ನ. ಇದು ಅಪೂರ್ಣ. ಸಾಧಿತ ನಾಮ, ಧಾತುಪ್ರಕೃತಿ, ಅಪೂರ್ಣಕ್ರಿಯಾಪದ, ವಿಶೇಷಣ, ಅವ್ಯಯ, ವಾಕ್ಯರಚನೆ, ಶಬ್ದಸಂಪತ್ತಿ ಮುಂತಾದ ಹಲವಾರು ಚಿಕ್ಕ, ದೊಡ್ಡ ಸಂಗತಿಗಳ ಬಗೆಗೆ ಇಲ್ಲಿ ಚಕಾರ ವನ್ನೂ ಎತ್ತಲಿಲ್ಲ. ಆದರೂ ಲೇಖನ ಇಲ್ಲಿಗೇ ಕೊನೆಗೊಳ್ಳುತ್ತದೆ.

ಭಾಷೆ, ಹಳ್ಳವಾಗಿದ್ದದ್ದು ಹೊಳೆಯಾಗಿ ಸಾಗರದಲ್ಲಿ ಒಂದಾಗುತ್ತದೆ. ಲೇಖನಿ ಹೆಜ್ಜೆಹೆಜ್ಜೆಗೂ ಆರುತ್ತದೆ, ಹೆಪ್ಪುಗಟ್ಟುತ್ತದೆ. ಲೇಖಕ ದಡದಲ್ಲಿಯೇ ಎಡವಿ ಬೀಳುತ್ತಾನೆ. ಆಳಕ್ಕಿಳಿದು ಸಾರವನ್ನು ಹೆಕ್ಕಿ ತೆಗೆಯುವ ಅವನ ಹಂಬಲ, ಕನಸಾಗಿಯೇ ಉಳಿಯುತ್ತದೆ.

ಪ್ರಕೃತ ಲೇಖನ, ಓದುಗರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಆಡುನುಡಿಗಳ ಬಗೆಗೆ ಸ್ವಾಗತಾರ್ಹ ಕುತೂಹಲವನ್ನು ಕೆರಳಿಸಿದರೆ 'ಧನ್ಯೋಹಂ'.

ಅಡಿಟಿಪ್ಪಣಿಗಳು


೧. ವರ್ಣಸಮಾಮ್ನಾಯದಲ್ಲಿ ಅನುಸ್ವಾರದ ಸಂಕೇತ (೦) ವನ್ನು ಪರಿಗಣಿಸಲಿಲ್ಲ. ಆದರೂ ಸೌಕರ್ಯಕ್ಕಾಗಿ ಈ ಸಂಕೇತವನ್ನು ಇಲ್ಲಿ ಆರಿಸಿದ ಉದಾಹರಣೆಗಳಲ್ಲಿ ಸ್ಪರ್ಶವರ್ಣಗಳ ಹಿಂದೆ ಸವರ್ಣ ಅನುನಾಸಿಕ ವ್ಯಂಜನವರ್ಣಗಳ ಬದಲು ಉಪಯೋಗಿಸಿಕೊಳ್ಳಲಾಗಿದೆ.

೨. ಈ ಪದಕ್ಕೆ ಗೌಡಕನ್ನಡದಲ್ಲಿ ಜಿರಳೆ ಎಂಬ ಅರ್ಥವಿದೆ.

೩. ಭವಿಷತ್ಪ್ರಕೃತಿಗಳನ್ನು ಅರ್ಥದ ದೃಷ್ಟಿಯಲ್ಲಿ ಸಂಭಾವನಾರ್ಥಪ್ರಕೃತಿಗಳೆಂದು ಕರೆಯುವುದು ಹೆಚ್ಚು ಸಮಂಜಸ.

೪. ಇವನ್ನು ಕನ್ನಡದಲ್ಲಿ ಕೊಟ್ಟಿದ್ದಾನೆ, ಮಾಡಿದ್ದಾನೆ ಮುಂತಾದ ಪೂರ್ಣವರ್ತಮಾನರೂಪಗಳ ಪಂಗಡಕ್ಕೆ ಹೋಲಿಸುವುದು ಉಚಿತವೆಂದು ತೋರುತ್ತದೆ. ಆಗ ಗೌಡಕನ್ನಡದಲ್ಲಿ ವರ್ತಮಾನ ಸಾಮಾನ್ಯರೂಪಗಳ ಜಾಗ ತೆರವಾಗುತ್ತದೆ.

೫. ಶಿವಳ್ಳಿ ಮತ್ತು ಹವ್ಯಕಗಳಲ್ಲಿ ಉತ್ತಮಪುರುಷ ಬಹುವಚನ ಹಾಗೂ ಪ್ರಥಮಪುರುಷ ನಪುಂಸಕಗಳ ರೂಪಗಳಲ್ಲಿ ಕಂಡುಬರುವ ಸಾಮ್ಯ ಗಮನಾರ್ಹವಾಗಿದೆ.



ಸಹಾಯಕ ಗ್ರಂಥಗಳು

Acharya, A. S. : *Barkur Kannada*, Linguistic Survey of India Series 6, Centre of Advanced Study in Linguistics, University of Poona, Deccan College, Poona 1971,

ಬಿಳಿಗಿರಿ, ಎಚ್. ಎಸ್. : ವರ್ಣನಾತ್ಮಕ ವ್ಯಾಕರಣದ ಮೂಲತತ್ತ್ವಗಳು, ಕನ್ನಡ ವಿಭಾಗದ ಪ್ರಕಟನೆ ೧. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–೧, ೧೯೭೦.

Bhat, D. N. S. : *An outline of Havyaka Kannada*, Linguistic Survey of India, Series 5, Deccan College, Poona, 1971.

Gowda, K. Kushalappa : *Gowda Kannada*, Department of Linguistics, Publication No. 20, Annamalai University, Annamalai Nagar Tamilnadu, India, 1970.

• •

ಚಿತ್ರದುರ್ಗ ಜಿಲ್ಲೆಯ ಕನ್ನಡ

• ಬಿ. ವಿ. ವೀರಭದ್ರಪ್ಪ

ಉತ್ತರ–ದಕ್ಷಿಣವಾಗಿ ಚಿತ್ರದುರ್ಗ ಜಿಲ್ಲೆಯು ಕರ್ನಾಟಕ ರಾಜ್ಯದ ಮಧ್ಯಭಾಗವಾಗಿದೆ. ಉತ್ತರದಿಂದ ದಕ್ಷಿಣಕ್ಕೆ ಜಿಲ್ಲೆಯು ೮೫ ಮೈಲು ಉದ್ದವಾಗಿಯೂ, ಪೂರ್ವದಿಂದ ಪಶ್ಚಿಮಕ್ಕೆ ೧೦೦ ಮೈಲು ಅಗಲವಾಗಿಯೂ ಹಬ್ಬಿಕೊಂಡಿದೆ. ಜಿಲ್ಲೆಯ ವಿಸ್ತೀರ್ಣ ೪೧೭೭.೯ ಚದುರ ಮೈಲುಗಳು. ಚಿತ್ರದುರ್ಗ ಜಿಲ್ಲೆಯು ಉತ್ತರಭಾಗದಲ್ಲಿ ಬಳ್ಳಾರಿ, ಧಾರವಾಡ ಜಿಲ್ಲೆಗಳಿಂದಲೂ, ದಕ್ಷಿಣದಲ್ಲಿ ತುಮಕೂರು ಜಿಲ್ಲೆಯಿಂದಲೂ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಯಿಂದಲೂ ಮತ್ತು ಪೂರ್ವದಲ್ಲಿ ಆಂಧ್ರದ ಅನಂತಪುರ ಜಿಲ್ಲೆಯಿಂದಲೂ ಸುತ್ತುವರಿಯಲ್ಪಟ್ಟಿದೆ. ಈ ಜಿಲ್ಲೆಯ ಶೇ. ೭೦ ರಷ್ಟು ಜನರ ಮಾತೃಭಾಷೆ ಕನ್ನಡವಾಗಿದೆ. ಆಂಧ್ರಕ್ಕೆ ಹೊಂದಿಕೊಂಡ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲೂಕುಗಳಲ್ಲಿ ತೆಲುಗುಭಾಷೆಯನ್ನಾಡುವವರ ಸಂಖ್ಯೆ ಗಣನೀಯವಾಗಿದ್ದರೂ ಅವರೆಲ್ಲರೂ ದ್ವಿಭಾಷಿಗಳು. ತೆಲುಗು ಮಾತನಾಡುವವರೂ ಶಾಲೆಯಲ್ಲಿ ಕನ್ನಡವನ್ನೇ ಕಲಿಯುತ್ತಾರೆ. ಈ ಜಿಲ್ಲೆಯ ಜನರ ರೀತಿ-ನೀತಿಗಳು ಆಚಾರ–ವಿಚಾರಗಳು ಮತ್ತು ಆಡುಭಾಷೆ ವಿಶಿಷ್ಟವಾಗಿದ್ದು, ಉತ್ತರ–ದಕ್ಷಿಣಗಳ ಸಮ್ಮಿಶ್ರವಾಗಿದೆ.

ಈಗಾಗಲೇ 'ಮೈಸೂರು ಕನ್ನಡ', 'ಧಾರವಾಡ ಕನ್ನಡ' ಗಳಂತಹ ವಿಶಾಲವಾದ ಭೌಗೋಲಿಕ ಭಾಷಾಪ್ರಭೇದಗಳನ್ನು ಕುರಿತು ವ್ಯವಸ್ಥಿತವಾದ ರೀತಿಯಲ್ಲಿ ಅಧ್ಯಯನಗಳು ನಡೆದಿವೆ. ಅಲ್ಲದೆ 'ನಂಜನಗೂಡು ಕನ್ನಡ', 'ತಿಪಟೂರು ಕನ್ನಡ', 'ಗುಲಬುರ್ಗಾ ಕನ್ನಡ', 'ಹವ್ಯಕ ಉಪಭಾಷೆ' ಮತ್ತು 'ಹಾಲಕ್ಕಿ ಒಕ್ಕಲಿಗರ ಕನ್ನಡ' ಇತ್ಯಾದಿ ನಿರ್ದಿಷ್ಟ ಪ್ರಾದೇಶಿಕಪ್ರಭೇದಗಳನ್ನು ಮತ್ತು ಸಾಮಾಜಿಕಪ್ರಭೇದಗಳನ್ನು ಕುರಿತು ಅಧ್ಯಯನಗಳೂ ನಡೆದಿವೆ. ಆದರೆ ಇದುವರೆಗೆ ಚಿತ್ರದುರ್ಗ ಜಿಲ್ಲೆಯ ಕನ್ನಡವನ್ನು ಕುರಿತು ಭೌಗೋಲಿಕವಾಗಿಯಾಗಲಿ, ಸಾಮಾಜಿಕವಾಗಿಯಾಗಲಿ ಯಾರೂ ಅಭ್ಯಾಸಮಾಡಿಲ್ಲ. ಈ ದಿಸೆಯಲ್ಲಿ ಇದೊಂದು ಮೊದಲ ಪ್ರಯತ್ನವಷ್ಟೇ ಹೊರತು, ಪ್ರಬುದ್ಧ ಪ್ರಬಂಧವಲ್ಲ.

ಚಿತ್ರದುರ್ಗ ಜಿಲ್ಲೆಯ ಬಹುಸಂಖ್ಯಾಕರ ಭಾಷೆ ಕನ್ನಡವಾದರೂ ಮೊಳಕಾಲ್ಮೂರು, ಚಳ್ಳಕೆರೆ, ಜಗಳೂರು ಮತ್ತು ಚಿತ್ರದುರ್ಗ ತಾಲೂಕುಗಳಲ್ಲಿ ತೆಲುಗು

ಮಾತನಾಡುವವರ ಸಂಖ್ಯೆ ಗಣನೀಯವಾಗಿರುವುದರಿಂದ ಆ ಭಾಗಗಳ ಕನ್ನಡವು ಅನೇಕ ತೆಲುಗುಪದಗಳಿಂದ ಕೂಡಿಕೊಂಡು, ತೆಲಗುಭಾಷೆಯ ಪ್ರಭಾವಕ್ಕೆ ಒಳಗಾಗಿದೆ. ಹಿರಿಯೂರು, ಹೊಸದುರ್ಗ ಮತ್ತು ಹೊಳಲ್ಕೆರೆಗಳ ಕನ್ನಡವು ಹೆಚ್ಚಾಗಿ ಹಳೆಯ ಮೈಸೂರು ಪ್ರಭೇದಕ್ಕೆ ಸಮೀಪವಾಗಿದ್ದರೆ, ಹರಿಹರ, ದಾವಣಗೆರೆ ತಾಲೂಕುಗಳ ಕನ್ನಡವು ಧಾರವಾಡಕನ್ನಡಕ್ಕೆ ಸಮೀಪವಾಗಿದೆ. ಇದಲ್ಲದೆ ಒಂದೊಂದು ಭೌಗೋಲಿಕಪ್ರಭೇದದಲ್ಲೂ ಮುಖ್ಯವಾಗಿ ಬ್ರಾಹ್ಮಣ ಮತ್ತು ಶೂದ್ರ ಎಂದು ಎರಡು ಪ್ರಭೇದಗಳನ್ನು ಗುರುತಿಸಬಹುದು. ಆದರೆ ಈ ವಿಭಾಗಕ್ರಮ ಪರಿಪೂರ್ಣವಾದುದೇನಲ್ಲ. ಏಕೆಂದರೆ ವಿದ್ಯಾವಂತ ಶೂದ್ರರ ಭಾಷೆಯು ಬ್ರಾಹ್ಮಣ ಪ್ರಭೇದದ ಅನುಕರಣೆಯಾಗಿದ್ದು, ಶೂದ್ರಪ್ರಭೇದದ ಸಂಪರ್ಕದಿಂದ ಪೂರ್ಣ ವಿಮುಕ್ತವಾಗದೇ ಇರುವುದರಿಂದ, ಇದೊಂದು ಸಮ್ಮಿಶ್ರಪ್ರಭೇದವಾಗಿರುತ್ತದೆ.

ಕೆಲವು ಕನ್ನಡಪದಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಹೇಗೆ ರೂಪಾಂತರಗೊಂಡಿವೆ ಎಂಬುದನ್ನು ಗಮನಿಸೋಣ. ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಮತ್ತು ಚಳ್ಳಕೆರೆ ತಾಲೂಕುಗಳಲ್ಲಿ ಕೆಳವರ್ಗದ ಜನರು 'ಭಾನುವಾರ'ವನ್ನು 'ಆಯಿತ್ವಾರ' ಎಂದು ಉಚ್ಚರಿಸಿದರೆ, ಮೇಲ್ವರ್ಗದವರು 'ಭಾನುವಾರ' ಎಂದು ಕರೆಯುತ್ತಾರೆ. ಹರಿಹರ, ದಾವಣಗೆರೆ ತಾಲೂಕುಗಳಲ್ಲಿ ವಿದ್ಯಾವಂತರು 'ಭಾನುವಾರ'ವನ್ನು 'ರವಿವಾರ' ಎಂದೂ, ಸಾಮಾನ್ಯರು 'ಆದಿತ್ಯವಾರ' ಎಂದೂ ಕರೆಯುತ್ತಾರೆ.

ಹಳೆಯ ಮೈಸೂರು ಭಾಗದ 'ಪುರಿ'ಯು ಉತ್ತರಕರ್ನಾಟಕದಲ್ಲಿ 'ಚುರಮುರಿ' ಆಗಿದೆ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಆ ತಿನಿಸನ್ನು 'ಮಂಡಕ್ಕಿ', 'ಮಂಡಾಳು', 'ಬುರುಗು' ಇತ್ಯಾದಿ ಪದಗಳಿಂದ ಕರೆಯುತ್ತಾರೆ. 'ಬುರುಗು' ತೆಲುಗು ಪದವಾಗಿದ್ದು, ಆಂಧ್ರಕ್ಕೆ ಹೊಂದಿಕೊಂಡ ಪ್ರದೇಶಗಳಾದ ಚಳ್ಳಕೆರೆ, ಮೊಳಕಾಲ್ಮೂರು ತಾಲೂಕುಗಳಲ್ಲಿ ರೂಢಿಯಲ್ಲಿದೆ. 'ಮಂಡಾಳು', ಜಗಳೂರು ಮತ್ತು ಬಳ್ಳಾರಿ ಜಿಲ್ಲೆಯ ನೆರೆಭಾಗಗಳಲ್ಲಿ ಕೇಳಿಬರುತ್ತದೆ. ಉಳಿದಕಡೆ 'ಮಂಡಕ್ಕಿ' ಸಾಮಾನ್ಯವಾಗಿ ರೂಢಿಯಲ್ಲಿರುವ ಪದ. ಗಾಡಿಯ ಚಕ್ರ ಕೆಳಗೆ ಉರುಳದಂತೆ ತಡೆಯುವ ವಸ್ತುವನ್ನು ಉತ್ತರಕರ್ನಾಟಕದಲ್ಲಿ 'ಕೀಲು' ಎಂದೂ ಮೈಸೂರುಕನ್ನಡದಲ್ಲಿ 'ಕಡಾಣಿ' ಎಂದೂ ಕರೆಯಲಾಗುವುದು. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಎರಡೂ ಪದಗಳು ಬಳಕೆಯಲ್ಲಿವೆ. ಹರಿಹರ, ದಾವಣಗೆರೆ, ಹೊಳಲ್ಕೆರೆಗಳಲ್ಲಿ 'ಕೀಲು' ಬಳಕೆಯಲ್ಲಿದೆ. ಜಿಲ್ಲೆಯ ಉಳಿದ ಕಡೆ 'ಕಡಾಣಿ' ಬಳಕೆಯಲ್ಲಿದೆ.

ಗ್ರಾಂಥಿಕರೂಪವಾದ 'ಹೇಗೆ' ಚಿತ್ರದುರ್ಗ ಜಿಲ್ಲೆಯಲ್ಲಿ ವಿಶಿಷ್ಟರೀತಿಗಳಲ್ಲಿ ಉಚ್ಚಾರವಾಗುತ್ತದೆ. ವಿದ್ಯಾವಂತರ ಬಾಯಲ್ಲಿ 'ಹ್ಯಾಗೆ' ಎಂದು ಉಚ್ಚಾರವಾದರೆ ಹರಿಹರ, ದಾವಣಗೆರೆ ತಾಲೂಕುಗಳ ಸಾಮಾನ್ಯರ ಬಾಯಲ್ಲಿ 'ಹ್ಯಾಂಗ' ಎಂದೂ,

ಉಳಿದಕಡೆ 'ಹೆಂಗೆ', 'ಎಂಗೆ' ಎಂದೂ ಉಚ್ಚಾರವಾಗುತ್ತದೆ. ಹಳೆಯ ಮೈಸೂರಿನಲ್ಲಿ 'ಗೋರಿಕಾಯಿ' ಎಂದು ಕರೆಯಲಾಗುವ ತರಕಾರಿಯನ್ನು ಹರಿಹರ–ದಾವಣಗೆರೆ ತಾಲೂಕಗಳಲ್ಲಿ 'ಚವಳಿಕಾಯಿ' ಎಂದೂ, ಜಿಲ್ಲೆಯ ಉಳಿದಕಡೆ 'ಜವಳಿಕಾಯಿ' ಎಂದೂ ಕರೆಯಲಾಗುತ್ತಿದೆ. 'ಗೋರಿಕಾಯಿ' ಎಂಬ ಮೈಸೂರುಕನ್ನಡ ಪ್ರಯೋಗ, ಈ ಜಿಲ್ಲೆಯಲ್ಲಿ ಕೇಳಿಬರುವುದು ಅಪರೂಪ. ಹಳೆಯ ಮೈಸೂರಿನ 'ತಣಿಗೆ' ಯಾಗಲಿ ಉತ್ತರಕರ್ನಾಟಕದ 'ಗಂಗಾಳ'ವಾಗಲಿ ಈ ಜಿಲ್ಲೆಯಲ್ಲಿ ಅಷ್ಟಾಗಿ ಕೇಳಿಬರುವುದಿಲ್ಲ. 'ಗಂಗಳ', 'ಗಂಗ್ಳ' ರೂಪಗಳೇ ಹೆಚ್ಚಾಗಿ ಉಚ್ಚಾರವಾಗುತ್ತವೆ. 'ತಟ್ಟೆ' ಎಂಬುದು ವಿದ್ಯಾವಂತರ ಬಾಯಲ್ಲಿ ಮಾತ್ರ ಕೇಳಿಬರುತ್ತದೆ.

'ಅರಳಿಮರ'ವು ತೆಲುಗುಭಾಷೆಯ ಪ್ರಭಾವದಿಂದ ಚಳ್ಳಕೆರೆ, ಮೊಳಕಾಲ್ಮೂರು ಭಾಗಗಳಲ್ಲಿ 'ರಾಗಿಮರ'ವಾಗುತ್ತದೆ (ತೆಲುಗಿನಲ್ಲಿ 'ರಾಗಿಮಾನ'). ಹಾಗೆಯೇ 'ನೇಗಿಲು' ಈ ಭಾಗಗಳಲ್ಲಿ 'ಮಡಕೆ' ಆಗುತ್ತದೆ. 'ಈರುಳ್ಳಿ'ಯು 'ನೀರುಳ್ಳಿ' ಯಾಗಿಯೂ ಉಚ್ಚಾರವಾಗುತ್ತದೆ. ಆದರೆ ಹರಿಹರ, ದಾವಣಗೆರೆ ತಾಲೂಕುಗಳ ಸಾಮಾನ್ಯಜನರು 'ಉಳ್ಳಾಗಡ್ಡೆ' ಎಂದರೆ, ಜಿಲ್ಲೆಯ ಉಳಿದಕಡೆ 'ಉಳ್ಳೇಗಡ್ಡೆ' ಎನ್ನುತ್ತಾರೆ. ಹಿರಿಯೂರು, ಚಳ್ಳಕೆರೆ ಭಾಗಗಳಲ್ಲಿ 'ಬೆಳ್ಳುಳ್ಳಿ'ಯನ್ನು 'ಬೆಳ್ಳಾಗಡ್ಡೆ' ಎಂದೂ ಕರೆಯುತ್ತಾರೆ. ಜಿಲ್ಲೆಯ ದಕ್ಷಿಣಭಾಗದಲ್ಲಿ 'ಬದನೆಕಾಯಿ' ರೂಢಿಯಲ್ಲಿದ್ದರೆ, ಉತ್ತರ ಭಾಗದಲ್ಲಿ ಮುಳ್ಗಾಯಿ' ಬಳಕೆಯಲ್ಲಿದೆ. ದಾವಣಗೆರೆ, ಹರಿಹರ ಭಾಗಗಳಲ್ಲಿ 'ಓತಿಕ್ಯಾತ', 'ಓತಿಕಾಟ' ಎಂದು ಕರೆಯಲಾಗುವ ಹಲ್ಲಿಜಾತಿಯ ಪ್ರಾಣಿಯನ್ನು ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ಭಾಗಗಳಲ್ಲಿ 'ದೊಣ್ಣೆಕಾಟ' ಎಂದೂ ಕರೆಯಲಾಗುತ್ತದೆ.

ಪದಗಳಲ್ಲೇ ಅಲ್ಲದೆ ವ್ಯಾಕರಣಪ್ರಕ್ರಿಯೆಗಳಲ್ಲೂ ಉತ್ತರ–ದಕ್ಷಿಣ ಪ್ರಭೇದಗಳನ್ನು ಚಿತ್ರದುರ್ಗ ಜಿಲ್ಲೆ ಕನ್ನಡದಲ್ಲೂ ಕಾಣಬಹುದು.

೧. ಗ್ರಾಂಥಿಕ : ನಾನು ಹೋಗುತ್ತೇನೆ, ಅವನು ಹೋಗುತ್ತಾನೆ

ದಾವಣಗೆರೆ / ಹರಿಹರ : ನಾನು ಹೋಕ್ಕೀನಿ, ಅವನು ಹೋಕ್ಕಾನೆ

ಜಿಲ್ಲೆಯ ಉಳಿದಕಡೆ : ನಾನು ಹೋಗ್ತೀನಿ, ಅವನು ಹೋಗುತ್ತಾನೆ

೨. ಗ್ರಾಂಥಿಕ : ನೋಡಿಕೊಂಡು ಬಾ

ದಾವಣಗೆರೆ / ಹರಿಹರ : ನೋಡಿಕ್ಯಂದು ಬಾ (್ಯ = æ)

ಜಿಲ್ಲೆಯ ಉಳಿದಕಡೆ : ನೋಡಿಕಂಡು ಬಾ

೩. ಗ್ರಾಂಥಿಕ : ಆಗುತ್ತದೆ, ಹೋಗುತ್ತದೆ

ದಾವಣಗೆರೆ
ಹರಹರ } : ಅಕ್ಕತಿ, ಹೋಕ್ಕತಿ

ಜಿಲ್ಲೆಯ ಉಳಿದಕಡೆ : ಆಗ್ತೈತೆ, ಓಗ್ತೈತೆ

೪. ಗ್ರಾಂಥಿಕ : ಅವನೇ ಹೇಳಿದ

ಹೊಳಲ್ಕೆರೆ : ಅವನೇಯು ಹೇಳಿದ

ದಾವಣಗೆರೆ ತಾಲೂಕು ಶಿರಮಗೊಂಡನಹಳ್ಳಿಯ ಗಿರಿಜವ್ವ (ವಯಸ್ಸು, ವರ್ಷ ೬೦) ಹೇಳಿದ **'ಯಾರಿಗೂ ಯಾರಿಲ್ಲ'** ಎಂಬ ಕಥೆಯನ್ನು ಈ ಜಿಲ್ಲೆಯ ಕನ್ನಡದ ಮಾದರಿಗಾಗಿ ಹೀಗೆ ನೋಡಬಹುದು :

ಒಬ್ಬ ರಾಜ. ರಾಜನ್ಗೆ ಮೂರು ಹೆಣ್‌ಮಕ್ಕಳು, ಒಬ್ಬಾನು ಗಂಡ್‌ಮಗ. ರಾಜ ಮಂತ್ರೀನ ಕರ್‍ದು ಮಗನ್ಗೆ ಸಾಲಿಗೆ ಹಾಕಿ ಬಾರಪ್ಪ ಅಂತಂದ. ಮಂತ್ರಿ ಮನಸ್ಸಿಗೆ ತಗಳ್ಳಲೇ ಇಲ್ಲ. 'ಯಾರಿಗೆ ಯಾರಿಲ್ಲಪ್ಪ', ನಾನೆ ಹಾಕಿ ಬರ್ತೀನಿ ಬಾರಪ್ಪ ಅಂತಂದ. ಮಗನ್ಗೆ ಕರಕಂದ್ ಹೋಗಿ ಸಾಲಿಗೆ ಹಾಕ್ಬಂದ. ನಮ್ಮಪ್ಪ 'ಯಾರಿಗೆ ಯಾರಿಲ್ಲ' ಅಂದನಲ್ಲ ಏನಿರ್‍ಬೋದು ಇದರರ್ಥ, ಅಂದಕಂಡ ಮಗ. ಸಾಲೇಗೆ ಒಂದನೇ ಪುಸ್ತಕ ಕಲ್ತ. ಮೇಸ್ಟ್ರಿಗೆ ಕೇಳ್ದ, 'ಯಾರಿಗೆ ಯಾರಿಲ್ಲ' ಅಂದ್ನಲ್ಲ ನಮ್ಮಪ್ಪ, ಇದಕ್ಕೇನರ್ಥ ಅಂತ. ಏ, ನೀನು ಅರ್ಥ ಕೇಳಾಕೆ ಬಂದೀಯೋ, ಏನು ಸಾಲಿ ಕಲಿಯಾಕೆ ಬಂದೀಯೋ ಅಂತ ಗದರಿಸ್ದ ಮೇಸ್ಟ್ರು. ಮಗ ಎರಡನೇ ಪುಸ್ತಕಾನೂ ಕಲ್ತ. ಕಲ್ತಮೇಲೆ ಮೇಸ್ಟ್ರಿಗೆ ಕೇಳ್ದ 'ಯಾರಿಗೆ ಯಾರಿಲ್ಲ' ಅಂದ್ನಲ್ಲ ನಮ್ಮಪ್ಪ, ಅದಕ್ಕೇನರ್ಥ ಅಂತ. ಅವನೂ ಹಂಗೇ ಗದರಿಸ್ದ. ಏ, ಏನು ನೀನು ಅರ್ಥ ಕೇಳಾಕೆ ಬಂದಿಯೋ, ಸಾಲಿ ಕಲಿಯಾಕೆ ಬಂದಿಯೋ ಅಂತಂದ. ಓದು ಮುಗಿಯೂತಂಕ ಎಲ್ಲ ಮೇಸ್ಟ್ರನೂ ಕೇಳ್ದ. ಒಬ್ರೂ ಹೇಳ್ಲಿಲ್ಲ. ಮಗಾ ದೊಡ್ಡವನಾಗ್ತಾ ಬಂದ. ಅವನಿಗೆ ಒಬ್ಬ ಅಕ್ಕ ಇದ್ಲು. ರಾಜ, ಮಗನಿಗೆ ಅಕ್ಕನ ಮಗಳ್ನೇ ಮಾಡಾನಾ ಅಂತೇಳಿ, ಮಗಳ ಮಗಳ್ನೇ ನೋಡಿದ್ರು. ಹೆಣ್ಣು ಮಾಡಿದ್ರು, ಮದುವೆ ಮಾಡಿದ್ರು. ಕಾರ್ಯ ಆಯ್ತು ಎಲ್ಲ ಆಯ್ತು. ರಾಜನ ಮಗ ಹೆಣ್ತಿಮನೆಗೆ ಹೋಗಿದ್ದ. ಬರಬೇಕಾದ್ರೆ ಕುಕ್ಕುಟ ಮಾಮುನಿ ಅನ್ನೋನು ರುಷಿ ಹಾದ್ಯಾಗ ಕುಂತಿದ್ದ. ಅವನು ಯಾರ್‍ಯಾರ ಕಣ್ಣಿಗು ಬಿದ್ದಿರಲಿಲ್ಲ. ಇವನ ಕಣ್ಣಿಗೆ ಬಿದ್ದ. ಅಪ್ಪ, ನೀನ್ಯಾರಪ್ಪ, ಬಾರಪ್ಪ ಮಗು. ಇಷ್ಟು ವರ್ಸ ಆದ್ರೂ ನಾ ಒಬ್ರ ಕಣ್ಣಿಗೂ ಬಿದ್ದಿರಲಿಲ್ಲ. ನಿನ್ಕಣ್ಗೆ ಬಿದ್ದೆ. ಮತ್ತೆ ಏನು ಬೇಡ್ತಿ, ಬೇಡಪ್ಪ ನನ್‌ಮಗನೇ ಅಂತ ಕೇಳಿದ. ಸ್ವಾಮಿ ನನಗೆ ಎಲ್ಲ ಐಸಿರೀನೂ ಐತಿ. ನಾನೊಂದು ಅರ್ಥ ಕೇಳ್ಬೇಕು ಅಂತ ಮಾಡಿದೀನಿ ಅಂತಂದ. ಅವ್ನು ಅದ್ನ ಮರ್‍ತೇ ಇಲ್ಲ. ಏನಪ್ಪ

ಅದು ಅಂತ ಕೇಳ್ದ ಮುನಿ. 'ಯಾರಿಗೂ ಯಾರಿಲ್ಲ' ಅಂತೇಳಿ ನಮ್ಮಪ್ಪ ಸಾಲಿಗೆ ಹಾಕ್ದ, ಅದಕೇನು ಅರ್ಥ ಅಂತ ಕೇಳ್ದ. ಅಪ್ಪ 'ಯಾರಿಗೂ ಯಾರಿಲ್ಲ' ಅನ್ನಾದು ನಾನು ಹೇಳ್ತೀನಿ. ನಿನಗೆ ಮದ್ವೆ ಆಗೈತಾ ಅಂತಂದ. ಮದ್ವೆ ಆಗೈತಿ, ಕಾರ್ಯ ಆಗೈತಿ. ಈಗ ಹೇಣ್ತಿಮನೇಲಿಂದ್ಲೇ ಬಂದೆ ಅಂದ. ನಾನು ಹೇಳ್ದಿಂಗೆ ಮಾಡು 'ಯಾರಿಗೂ ಯಾರಿಲ್ಲ' ಅನ್ನೋದು ತೋರಿಸ್ತೀನಿ. ಮನೆಗೆ ಹೋಗು. ಹೋಗಿ ಉಂಡು ತಿಂದು ರಾತ್ರಿನಾಗ ಮಂಚದ ಮೇಲೆ ಮಕ್ಕೋ. ಎಲ್ಲರು ಉಂಡು ತಿಂಬೋ ಹೊತ್ನಾಗೆ ಮಂಚದ ಮೇಲ್ನಿಂದ ಉಳ್ಳಿದಂಗೆ ಮಾಡಿ, ಸತ್ತಂಗೆ ಬಿದ್ಬಿಡು. ಮಾತಾಡ್ಲೇ ಬೇಡ. ಎಲ್ಲರೂ ಸೇರ್ತಾರೆ. ಅಪ್ಪಾ ನಿನಗೆ ಬರೋ ಸಾವು ನನಗೆ ಬರಬಾರದಾಗಿತ್ತೇ ನಪ್ಪ ಅಂತಾರೆ. ತಾಯಿ ಹೊಯ್ಕಂತಾಳೆ, ತಂದೆ ಹೊಯ್ಕಂತಾನೆ. ಜನ ಸೇರ್ತಾರ. ನಿನ್ ಹೇಣ್ತೀನೂ ಬರ್ತಾಳೆ. ನೆರೆಹೊರಿನೂ ಬರ್ತಾತೆ. ಆ ಹೊತ್ನಾಗ ನಾನು ಬರ್ತೀನಿ. ಆವಾಗ ತೋರಿಸ್ತೀನಪ್ಪ. ನಾನಾವಾಗ ಕುಡಿಯ್ತೀನಿ, ನೀನಾವಾಗ ಎದ್ದು ಕೂತ್ಕೋವಂತಿ ಹೋಗು ಅಂತಂದ.

ಇವನು ಸಂಜೆ ಮನೆಗೆ ಬಂದ. ಬಂದೋನು ಉಂಡ, ತಿಂದ, ಮಂಚದ ಮೇಲೆ ಮಲಗಿದ. ಉಳ್ಳಾಡಿದಂಗ್ ಮಾಡಿ, ಮಂಚದ ಮೇಲ್ನಿಂದ ಉಳ್ಳಿ ಕೆಳಗೆ ಬಿದ್ದು ಸತ್ತಂಗ ಮಾಡ್ದ. ಅಪ್ಪ ಬಂದ, ಅವ್ವ ಬಂದ್ಲು, ಏಣ್ತೀ ಬಂದ್ಲು, ನೆರಿಹೊರಿ ಬಂದ್ರು, ಇರೋನು ಒಬ್ಬಾನು, ನಿನಗೆ ಬರೋ ಸಾವು ನನಗೆ ಬರಬಾರದಾಗಿತ್ತೇನಪ್ಪ ಅಂತಂದ್ರು. ತಾಯಿನೂ ಹೊಯ್ಕಂಡ್ಲು. ತಂದೆನೂ ಹೊಯ್ಕಂಡ. ಎಣ್ತೀನೂ ಹೊಯ್ಕಂಡ್ಲು. ಅಕ್ಕ, ಹೆಣ್ಕೊಟ್ಟಾಕಿ, ಆಕೀನೂ ಹೊಯ್ಕಂಡ್ಲು. ಹೇಣ್ತಿ, ನಿಮಗೆ ಬರೋ ಸಾವು ನನಗೆ ಬರಬಾರದಾಗಿತ್ತೇನ್ರೀ ಅಂದ್ಲು. ನೆರಿಹೊರಿ ನಿನಗೆ ಬರಾ ಸಾವು ನಮಗೆ ಬರಬಾರದಾಗಿತ್ತೇನಪ್ಪ ಅಂತಂದ್ರು. ಇವನೇನು ಕಣ್ ತಗೀಲಿಲ್ಲ. ಆ ಹೊತ್ನಾಗೆ ಕುಕ್ಕುಟ ಮಾಮುನಿ ಅನ್ನೋ ರುಷಿ ಒಂದು ಜೋಳಿಗೆ ಹಾಕ್ಕೊಂಡು, ಅದರಾಗೆ ಒಂದೀಟು ತುಂಬಿಪತ್ರಿ ಇಟ್ಕೊಂಡು ಬಂದ. ಊರಾಗೆ ನನ್ನಂತ ಒಬ್ಬ ಮುದುಕಿ ಕಟ್ಟಿಮೇಲೆ ಕುಂತಿತ್ತು. ರುಷಿ ಬಿಕ್ಷಾಂದೇಹಿ ಅಂದ. ಅಯ್ಯೋ ನಮ್ಮಪ್ಪ ರಾಜನ ಮಗ, ಇರಾನೊಬ್ಬನು ಸತ್ತಾದಾನೆ. ಜನ ಎಲ್ಲ ಕುಂತೈತಿ ಅಂತಂದ್ಲು. ರಾಜನ ಮಗನಾ ? ಹಂಗಾದ್ರೆ ನಾನು ಜನ್ಮ ಬದಕ್ಸ್ತೀನಿ, ಹೇಳಮ್ಮ ಅಂದ. ಅಯ್ಯೋ ಇವ್ನ ಜನ್ಮ ಬದಕ್ಸ್ತಾನಂತೆ ಅಂತೇಳಿ ಆ ಮುದುಕಿ ಹೇಳ್ತು. ಆಗ್ಲಿ ಅಂತ ಅವನ್ನ ಕರಕೊಂಡೋಗಿ ಮಗನೆದುರಿಗೆ ಕುಂದಿರಿಸ್ತು. ಜನ್ಮ ಬದಕ್ಸ್ತೀನಿ, ನಾನು ಹೇಳ್ದಂಗೆ ಕೇಳ್ತೀರೇನು ಅಂತಂದ. ಹೂಂ ಕೇಳ್ತೀವಿ ಅಂದ್ರು. ಒಂದು ಲೋಟ ನೀರ್ಕೊಡ್ರಿ ಅಂದ. ಲೋಟ ನೀರಿಸ್ಕೊಂಡು ಅದ್ರಾಗೆ ಒಂದೀಟು ತುಂಬಿಪತ್ರಿ ಆಕಿ, ಒಂದೀಟು ಮಂತ್ರಿಸ್ದಂಗೆ ಮಾಡ್ದ. ಈ ನೀರು ಯಾರು ಕುಡಿಯ್ತೀರಿ, ಅವರು ಸಾಯ್ತಿರಿ, ಅವನು ಏಳ್ತಾನೆ ಅಂತಂದೇಳಿ ಅಂದ. ಎಲ್ರೂ ಸುಮ್ನಾದ್ರು. ಅಯ್ಯಯ್ಯೋ

ನಾನೆಂಗೆ ಸಾಯ್ಲಿ ಅಂದ ತಂದಿ. ಅಯ್ಯಯ್ಯೋ ಇನ್ನೂ ಮೂರು ಎಣ್ಮಕ್ಳು ಅದಾವೆ, ನಾನೆಂಗೆ ಸಾಯ್ಲಿ ಅಂದ್ಲು ತಾಯಿ. ಆಕೀನೂ ಕುಡಿಯ್ಲಿಲ್ಲ. ಪೆಣ್‌ಕೊಟ್ಟಾಕಿ ಅಕ್ಕಗ ಕೇಳಿದ, ಆಕಿ ಅಯ್ಯೋ ನನಗೆ ಮಕ್ಳು ಅದಾವೆ, ಮರಿ ಅದಾವೆ, ನನಗೆ ಬೇಕಾದಂಗೆ ಐತಿ, ನಾನ್ಯಾಕೆ ಸಾಯ್ಲಿ ಅಂದ್ಲು. ಏಣ್ತೆ, ನೀನಾರಾ ಕುಡಿಯ್ತೀಯಾ ಅಂತ ಕೇಳ್ದ ಮುನಿ. ನಾನ್ಯಾಕೆ ಸಾಯ್ಲಿ ನನ್ನವ್ವ, ನನ್ನಪ್ಪ ಅದಾರ ಅಂದ್ಲು ಆಕಿ. ನೆರಿಹೊರಿ ಯಾರಾನ ಕುಡಿಯ್ತೀರಾ ಅಂದ ಮುನಿ. ಅಯ್ಯೋ ಅವನ ಸಾವಿಗೆ ನಾವು ಸಾಯಾನ, ನಮ್ಮ ಮನಿ ಮಠ ಬಿಟ್ಟು, ನಮ್ಮ ಮಕ್ಳು ಮರಿ ಬಿಟ್ಟು ಅಂತಂದು ಅವ್ರು ಅಂದ್ರು. ಹಂಗಾದ್ರೆ ಯಾರೂ ಒಲ್ರೇನು. ಯಾರು ಕುಡಿಯ್ತಾರೆ ಅವರು ಸಾಯ್ತಾರೆ, ಅವನು ಏಳ್ತಾನೆ ಅಂದ. ಒಬ್ರೂ ಮಾತಾಡಾಕೇ ಓಗ್ಲಿಲ್ಲ. ಇನ್ನೇನು ಅಂಗಾರೆ ನಾನೇ ಕುಡೀಲಾ ಅಂದ. ಸುಮ್ನಾಗ್ಬಿಟ್ರು. ಇವನೇನು ಮಾಡ್ದಾ, ಗಡಗಡ ಲೋಟದಾಗಿನ ನೀರು ಕುಡ್ದ, ಕುಡ್ದು ಸತ್ತಂಗ ಮಾಡ್ದ. ನಾ ಸತ್ತಂಗ ಮಾಡ್ತೀನಿ, ನೀನು ಎದ್ದಂಗ ಮಾಡು ಎಂದಿದ್ನಲ್ಲ. ಅವನೆದ್ದ. ಅಲ್ಲಿದ್ದಾರೆಲ್ಲ ಇವನ್ಗೇ ಮಣ್ ಮಾಡಿದ್ರೇ ಆಯ್ತುಬಿಡು ಅಂತ ಮಾತಾಡ್ಕಂಡ್ರು. ಆವನು ಎದ್ದು ಕುಂತನಲ್ಲ. ಕಡೀಕೆ ಮುನಿನೂ ಎದ್ದ. ನೋಡ್ದೇನಪ್ಪ 'ಯಾರಿಗೂ ಯಾರಿಲ್ಲ' ಅನ್ನೋದು ಗುರ್ತಾಯ್ತೇನಪ್ಪ. ತಂದೆ ಆಗ್ತಾನಾ? ತಾಯಿ ಆಗ್ತಾಳಾ? ಮಾಡ್ಕಂಡೇಣ್ತೆ ಆಗ್ತಾಳಾ? ಒಡಹುಟ್ಟಿದ ಅಕ್ಕ ತಂಗೇರು ಆಗ್ತಾರಾ? ಯಾರಾದರಪ್ಪ ನೆರಿಹೊರಿ ಆಗ್ತಾರೇನಪ್ಪ? ನಿನ್ ಸಾವಿಗೆ ಯಾರಾದ್ರೂ ಆಗ್ತಾರೇನು? 'ಯಾರಿಗೂ ಯಾರಿಲ್ಲ' ಅನ್ನಾದು ಇದೆ ಕಣ ತಮ್ಮ ಅಂತ ಹೇಳಿದ, ಮಾಯಾಗ್ಬಿಟ್ಟ.

• •

ಶಿವಮೊಗ್ಗ ಜಿಲ್ಲೆಯ ಕನ್ನಡ

• ಅಲೆವೂರು ಶ್ರೀರಮಣ ಆಚಾರ್ಯ

ಪ್ರಕೃತ ಲೇಖನವು ಶಿವಮೊಗ್ಗ ಪಟ್ಟಣ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೆಲೆಸಿರುವ ಒಕ್ಕಲಿಗರ ಆಡುನುಡಿಯ ವರ್ಣನಾತ್ಮಕ ವಿವೇಚನೆಯ ದಿಶೆಯಲ್ಲಿ ಒಂದು ಸ್ಥೂಲ ಪ್ರಯತ್ನ. ಯಾವ ತರದ ಪೂರ್ವಗ್ರಹವನ್ನೂ ಇಟ್ಟು ಕೊಳ್ಳದೆ ಈ ನುಡಿಯನ್ನಾಡುವವರ ಪ್ರತ್ಯಕ್ಷ ಸಂಪರ್ಕವನ್ನು ಬೆಳೆಸಿ, ಅವರಿಂದ ಸಂಗ್ರಹಿಸಿದ ನುಡಿಗಳ ಆಧಾರದ ಮೇಲೆ ಈ ವಿವೇಚನೆಯನ್ನು ಮಾಡಲಾಗಿದೆ. ಆಡುನುಡಿಗಳ ಬಗೆಗೆ ಹೇಳ ಹೊರಟಾಗ ಹಲವಾರು ಸಮಸ್ಯೆಗಳು ತಾವಾಗಿಯೇ ಎದುರಾಗುತ್ತವೆ. ಆಡುವವರ ಪ್ರದೇಶ, ವಯಸ್ಸು, ವರ್ಗ, ವೃತ್ತಿ, ಮನೋವೃತ್ತಿ, ವಿದ್ಯಾಭ್ಯಾಸ, ಜನತಾಸಂಪರ್ಕ ಮುಂತಾದ ಹಲವಾರು ಸಂಗತಿಗಳ ಪರಿಣಾಮವಾಗಿ ನುಡಿಗಳ ಪ್ರತಿಯೊಂದು ಸ್ತರವಲ್ಲಿಯೂ ವೈವಿಧ್ಯಗಳು ಕಂಡುಬರುತ್ತವೆ. ಅವನ್ನೆಲ್ಲಾ ಒಂದೂ ಬಿಡದಂತೆ ನಿರ್ದೇಶಿಸಿ, ಶಾಸ್ತ್ರೀಯವಾಗಿ ವಿವೇಚಿಸುವುದು ಈ ಲೇಖನದ ಎಲ್ಲೆಗೆ ಮೀರಿದ್ದು. ಸಾಧಾರಣವಾಗಿ ಈ ನುಡಿಗಳನ್ನು ಮನೆಮಾತಾಗಿ ಬಳಸುವವರಲ್ಲಿ ಹೆಚ್ಚು ಕಡಿಮೆ ಎಲ್ಲರಿಗೂ ಒಪ್ಪಿಗೆಯಾಗಬಹುದೆಂದೆನಿಸಿದ ಸಂಗತಿಗಳನ್ನು ಮಾತ್ರ, ಇಲ್ಲಿ ಎತ್ತಿಕೊಳ್ಳಲಾಗಿದೆ.

೧. ವರ್ಣಸಮಾಮ್ನಾಯ :

ಈ ಆಡುನುಡಿಯಲ್ಲಿ ಬಳಕೆಯಲ್ಲಿರುವ ವರ್ಣಗಳನ್ನು ಅವುಗಳಲ್ಲಿ ಕಂಡುಬರುವ ವ್ಯಾವರ್ತಕ ಸ್ವನಧರ್ಮಗಳ ಆಧಾರದ ಮೇಲೆ ಈ ಕೆಳಗಿನಂತೆ ವರ್ಗೀಕರಿಸಬಹುದು.

ಸ್ವರವರ್ಣಗಳು :

	ಅಗ್ರೀಯ ವಿಸ್ತೃತ		ಕೇಂದ್ರೀಯ ವಿಸ್ತೃತ		ಮೂಲೀಯ ಮುದ್ರಿತ	
	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ	ಹ್ರಸ್ವ	ದೀರ್ಘ
ಸಂವೃತ	ಇ	ಈ			ಉ	ಊ
ಅರ್ಧಸಂವೃತ	ಎ	ಏ			ಒ	ಓ
ವಿವೃತ	ಎ̱	ಏ	ಅ	ಆ	ಒ̱	ಓ̱

ವ್ಯಂಜನವರ್ಣಗಳು :

		ಓಷ್ಠ್ಯ	ದಂತ್ಯ	ಮೂರ್ಧನ್ಯ ವಕ್ರಿತ	ತಾಲವ್ಯ	ಕಂಠ್ಯ ಅಥವಾ ಮೃದು ತಾಲವ್ಯ
ಸ್ಪರ್ಶ	ಅಘೋಷ	ಪ್	ತ್	ಟ್	ಚ್	ಕ್
	ಘೋಷ	ಬ್	ದ್	ಡ್	ಜ್	ಗ್
ಅನುನಾಸಿಕ		ಮ್	ನ್	ಣ್		ಙ್
ಊಷ್ಮ			ಸ್		ಶ್	[ಹ್]
ಅಂತಸ್ಥ	ಸ್ಪಂದಿತ		ರ್			
	ಪಾರ್ಶ್ವಸ್ಪರ್ಶ		ಲ್	ಳ್		
	ನಿರಂತರ	ವ್			ಯ್	

ವರ್ಣಗಳ ವಿರೋಧಪ್ರಸಾರ :

ಈ ವರ್ಣಗಳಲ್ಲಿ ಪರಸ್ಪರ ಅರ್ಥವಿಭಾಜಕಶಕ್ತಿಯನ್ನು ತೋರಿಸುವ ಸಮಾನ ಸದೃಶ ಪರಿಸರಗಳು ಸಾಧಾರಣವಾಗಿ ಕನ್ನಡದ ಎಲ್ಲ ನುಡಿಗಳಲ್ಲೂ ಕಂಡುಬರುವವು. ಅವಲ್ಲದೆ ಈ ನುಡಿಯಲ್ಲಿ ವಿಶಿಷ್ಟರೀತಿಯಲ್ಲಿ ಕಂಡುಬರುವ ಕೆಲವು ನಿದರ್ಶನಗಳನ್ನು ಮಾತ್ರ ಇಲ್ಲಿ ಆರಿಸಬಹುದು. ಉದಾ :

ಎ : ಎ̲

ಎಲ್ಲಾರೂ	‘ಎಲ್ಲಿಯಾದರೂ’
ಎ̲ಲ್ಲಾರೂ	‘ಎಲ್ಲರೂ’
ಎಣ್ಣು	‘ಹೆಣ್ಣು’
ಎ̲ಣ್ಡ್ತಿ	‘ಹೆಂಡತಿ’
ಎದೆ	‘ಎದೆ’
ಎ̲ಡೆ	‘ದೈವಗಳಿಗೀಯುವ ಬಲಿ’
ಬೆಳ್ಳಿ	‘ಬೆಳ್ಳಿ’
ಬೆ̲ಳ್ಳು	‘ಬೆರಳು’
ನೆಡು	‘(ಗಿಡಗಳನ್ನು) ನಡು’
ನೆ̲ಡಿ	‘ನಡೆಯು’
ಎತ್ತು	‘ಎತ್ತು’
ಎ̲ಪ್ಪು	‘ಹೆಪ್ಪು’

ಒ : ಒ

ಕೊಡ್ಲಿ	'(ಅವನು) ಕೊಡು'
ಕೊಡ್ಲಿ	'ಕೊಡಲಿ (ಆಯುಧ)'
ಕೊಳ್ಳಿ	'ಉರಿಯುವ ಮರದ ತುಂಡು'
ಕೊಳ್ಳು	'ಕೊರಳು'
ಗೊಡ್ಡು	'ಈಯದ ದನ'
ಗೊರ್ಸು	'ಗೊರಸು'

ಎ : ಏ

ಬೆರಿ	'ಬೆರೆಯುು'
ಬೇರೆ	'ಬೇರೆ'
ಬೆಳಿ	'ಬೆಳೆ'
ಬೇಳಿ	'ಬೇಳೆ'

ಒ : ಓ

ತೊಡೆ	'ತೊಡೆ'
ತೋಟ	'ತೋಟ'
ಗೊನೆ	'ಗೊನೆ'
ಗೋಡೆ	'ಗೋಡೆ'
ಜೊರ	'ಜ್ವರ'
ಜೋಳ	'ಜೋಳ'

ಏ : ಏ

ಪೇಟೆ	
ಪೇಟ	'ರುಮಾಲು, ಮುಂಡಾಸು'
ಬೇಡಿ	'(ನೀವು) ಬೇಡಿರಿ (<ಬೇಡು)'
ಬೇಡಿ	'ಮಾಡಬೇಡಿ'
ಬೇಸ್ತ್ವಾರ	'ಬೃಹಸ್ಪತಿವಾರ'
ಬೇಸಿಗೆ	'ಬೇಸಿಗೆ'

ಓ̱ : ಓ

ಗೋಮಳೆ 'ಕುತ್ತಿಗೆ'
ಗೋ̱ಡೆ
ಕೋಡು
ತೋ̱ಡ 'ಒದು ಜಾತಿಯ ಇಲಿ'
ಜೋಗ್ಳ 'ಜೋಗುಳ'
ಜೋ̱ಳ 'ಜೋಳ'

ಕೆಲವೊಮ್ಮೆ ಏ̱ ಮತ್ತು ಓ̱ ವರ್ಣಗಳ ಆದಿಭಾಗದಲ್ಲಿ ಅತಿ ಸ್ಪಷ್ಟವಾದ ವ್ಯಂಜನೀಕರಣವು ಕಂಡುಬರುತ್ತದೆ. ಪರಿಣಾಮವಾಗಿ ಇವು ಅನುಕ್ರಮವಾಗಿ ಯ್ ಅಥವಾ ವ್ ವರ್ಣದ ಪರದಲ್ಲಿರುವ ಆ ವರ್ಣದಂತೆ ಕೇಳಿಸುತ್ತವೆ. ಉದಾ :

ಪೇ̱ಟೆ ಅಥವಾ ಪ್ಯಾಟೆ
ಬೇ̱ಡ ಅಥವಾ ಬ್ಯಾಡ
ಕೋ̱ಣ ಅಥವಾ ಕ್ವಾಣ
ಜೋ̱ಳ ಅಥವಾ ಜ್ವಾಳ ಇತ್ಯಾದಿ.

ಈ ಬಗ್ಗೆ ಇನ್ನೂ ಸೂಕ್ಷ್ಮ ಪರಿಶೀಲನೆಯ ಅಗತ್ಯವಿರುವುದರಿಂದ, ತಾತ್ಕಾಲಿಕವಾಗಿ ಏ̱ ಮತ್ತು ಓ̱ ಸ್ವರಗಳನ್ನು ಇಲ್ಲಿ ಸ್ವತಂತ್ರವರ್ಣಗಳೆಂದೇ ಪರಿಗಣಿಸಲಾಗಿದೆ.

ಮ್ : ಙ್

ತುಮ್ಸು 'ತುಂಬಿಸು'
ಮುಙ್ಸಿ 'ಮುಂಗುಸಿ'
ನಮ್ಕೆ 'ನಂಬಿಗೆ'
ಅಙ್ಗೆ 'ಹಾಗೆ'

ನ್ : ಙ್

ತನ್ಕೆ 'ತನಿಕೆ'
ಬೆಙ್ಕಿ 'ಬೆಂಕಿ'
ತಿನ್ಸು 'ತಿನ್ನಿಸು'
ಅಙ್ಸು 'ಹಂಗಿಸು'

ಙ್ : ಞ್

ಎಣ್ಗರ 'ಹೆಣ್ಣುಕರು'
ಎಙ್ಗರ 'ಹೇಗಾದರೂ'

ಉಣ್ಸು 'ಉಣ್ಣಿಸು'
ಉಙ್ಗ್ರು 'ಉಂಗುರ'

ನ್ : ಣ್

ಮನೆ : ಮಣೆ
ಬೆನ್ನು : ಬೆಣ್ಣೆ

ಶ್ : ಸ್

ಕುಶಿ 'ತೃಪ್ತಿ' : ಕುಸಿ 'ಕುಸಿಯು'
ಶೂಲಿ : ಸೂಳೆ
ಶಾಲು : ಸಾಲು ಇತ್ಯಾದಿ.

ಇಲ್ಲಿ ಗಮನಾರ್ಹವಾದ ಒಂದು ಸಂಗತಿಯೆಂದರೆ ಕೆಲವು ವರ್ಣಗಳಲ್ಲಿ ಅಂಶತಃ ಕಂಡುಬರುವ ಪೂರಕಪ್ರಸಾರ. ಅರ್ಧಸಂವೃತಗಳಾದ ಎ ಏ ಒ ಓ ಸ್ವರಗಳಿಗೆ ವಿವೃತಗಳಾದ ಎ̲ ಏ̲ ಒ̲ ಓ̲ ಸ್ವರಗಳೊಂದಿಗೆ ಈ ರೀತಿಯ ಪೂರಕಪ್ರಸಾರವಿದೆ. ಪರದಲ್ಲಿ ಸಂವೃತಸ್ವರಗಳಿದ್ದಾಗ ಅರ್ಧಸಂವೃತವರ್ಗದ ಸ್ವರಗಳು ಕಂಡುಬಂದರೆ ಉಳಿದೆಡೆ ವಿವೃತಸ್ವರಗಳು ಬಳಸಲ್ಪಡುತ್ತವೆ. ಉದಾ :

ಬೆನ್ನು : ಬೆ̲ಣ್ಣೆ ಗೊಡ್ಡು : ಗೊ̲ದ್ದ
ಕೆಮ್ಪು : ಕೆ̲ನ್ನೆ ಬೊಜ್ಜು : ಬೊ̲ಬ್ಬೆ
ಎಣ್ಣು : ಎ̲ಣ್ಣೆ ಕೊಕ್ಕು : ಕೊಕ್ಕೆ ಇತ್ಯಾದಿ.

ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಪೂರಕಪ್ರಸಾರವೇ ಕನ್ನಡನುಡಿಯ ಆಂತರ್ಯದಲ್ಲಿ ಅಡಗಿದ್ದು, ಈ ಸ್ವರಗಳಲ್ಲಿ ಕಂಡುಬರುವ ವಿರೋಧಪ್ರಸಾರವು ನೈಮಿತ್ತಿಕವಾಗಿದ್ದು, ಕೆಲವೊಂದು ವಿಶಿಷ್ಟಸಂದರ್ಭಗಳಲ್ಲಿ ಬಾಹ್ಯರೂಪಗಳಲ್ಲಿ ಮಾತ್ರ ಬೆಳೆದುಬಂದಿರುವ ವೈಲಕ್ಷಣ್ಯವೆಂಬುದನ್ನು ಮನಗಾಣಬಹುದು. ಇಂತಹ ವಿಶಿಷ್ಟ ಸಂದರ್ಭಗಳಲ್ಲಿ ಮುಖ್ಯವಾದವುಗಳೆಂದರೆ :

೧. ರಚನಾತ್ಮಕ ವೈಶಿಷ್ಟ್ಯ :

ಎರಡು ಅಥವಾ ಎರಡಕ್ಕಿಂತ ಹೆಚ್ಚು ಆಕೃತಿಗಳು ಒಂದೆಡೆ ಸೇರಿ ಪದ ಹಾಗೂ ವಾಕ್ಯಾಂಶಗಳ ರಚನೆಯಾದಾಗ ನಿಮಿತ್ತಭೂತಪರಿಸರಗಳು ಮಾಯವಾಗಿ ಹೊಸ ಪರಿಸರಗಳ ನಿರ್ಮಾಣವಾಗುವುದು. ಉದಾ :

ಎಲ್ಲಾರೂ (← ಎಲ್ಲಿ + ಆದರೂ)
ಎಲ್ಲಾರೂ (← ಎಲ್ಲ + ರೂ)

ಎಳ್ಳುಣ್ಡೆ (← ಎಳ್ಳು + ಉಣ್ಡೆ)
ಎಳ್ಳೆಣ್ಣೆ (← ಎಳ್ಳು + ಎಣ್ಣೆ)
ಎಳ್ಣೀರು (← ಎಳೆ + ನೀರು)

ಕೆಟ್ಟು (← ಕೆಡು + ಟು)
ಕೆಟ್ಟ (← ಕೆಡು + ಟ)
ಕೆರ್ದು (← ಕೆರೆ + ದು)

ಬೇಡ್ದ (← ಬೇಡು + ದ) 'ಬೇಡಿದ'
ಬೇಡ್ದ (← ಬೇಡ + ದ) 'ಬೇಡವಾದ'
ಬೇಡ್ಬೇಡ (← ಬೇಡು + ಅ + ಬೇಡ)

ಕೊಡ್ದ (← ಕೊಡು + (ಅ) ದ)
ಕೊಡ್ದ (← ಕೊಡ + ದ)

ತೊರೇ ಮಣೆ (← ತೊರಿಯುವ < ತುರಿಯುವ + ಮಣೆ)
ಕೋಲಾಟ (← ಕೋಲು + ಆಟ) ಇತ್ಯಾದಿ.

ಆಕೃತಿವಿಕಾರ :

ಇದು ಎರಡು ತೆರನಾಗಿದೆ. ಎರಡಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಆಕೃತಿಗಳಲ್ಲಿ ಮಧ್ಯಾಕ್ಷರಗಳಲ್ಲೊಂದರ ಸ್ವರವು ಲುಪ್ತವಾದಾಗ ಅಥವಾ ಆಕೃತಿಗಳ ಅಂತಿಮಸ್ವರವು ಐತಿಹಾಸಿಕ ಅಥವಾ ಇನ್ನಿತರ ಕಾರಣಗಳಿಂದ ಬದಲಾವಣೆಹೊಂದಿದಾಗ ಮೂಲ ಪರಿಸರಗಳು ಮಾಯವಾಗುವವು. ಉದಾ :

ಮಧ್ಯಾಕ್ಷರಸ್ವರಲೋಪಕ್ಕೆ :

ಬೆಳ್ಳು 'ಬೆರಳು'
ಮೆಣ್ಸು 'ಮೆಣಸು'
ಸೆರ್ಗು 'ಸೆರಗು'
ಗೊರ್ಸು 'ಗೊರಸು'
ಕೊಳ್ಳು 'ಕೊರಳು'
ಒಸ್ಡು 'ಒಸಡು'
ಒಕ್ಳ 'ಹೊಕ್ಕುಳು' ಇತ್ಯಾದಿ.

ಸ್ವರಬದಲಾವಣೆಗೆ :

ಕೆರಿ 'ಕೆರೆ'
ಬೆಳಿ 'ಬೆಳೆ'
ಒಡಿ 'ಒಡೆ, ಹೊಡೆ'
ಕೊರಿ 'ಕೊರೆ'
ಮೊಗ್ಗು 'ಮೊಗ್ಗೆ'
ಬೆಣ್ಣೆ ಅಥವಾ ಬೆಣ್ಣಿ
ಕೋಣೆ ಅಥವಾ ಕೋಣಿ
ಕೆನೆ ಅಥವಾ ಕೆನಿ ಇತ್ಯಾದಿ.

ಕಂಠ್ಯ ಅನುನಾಸಿಕವಾದ ಙ ವರ್ಣದ ಪ್ರಸಾರ ಅತ್ಯಲ್ಪ. ಇದು ಕೇವಲ ಕಂಠ್ಯ ಸ್ಪರ್ಶಗಳ ಪೂರ್ವಭಾವಿಯಾಗಿ ಸಾಧಾರಣವಾಗಿದ್ದು, ಆ ಪರಿಸರದಲ್ಲಿ ದಂತ್ಯ ಅನುನಾಸಿಕದ ಪ್ರಸಾರವು ಕೇವಲ ನೈಮಿತ್ತಿಕ. ಹೀಗಾಗಿ ಇವೆರಡೂ ಆಂತರ್ಯದಲ್ಲಿ ಪೂರಕಪ್ರಸಾರವನ್ನೇ ಹೊಂದಿದ್ದು, ನುಡಿಯ ಬಾಹ್ಯರೂಪದಲ್ಲಿ ಮಾತ್ರ ಅಪರೂಪವಾಗಿ ವಿರೋಧಪ್ರಸಾರದೆಡೆ ಸರಿಯುತ್ತವೆ. ಉದಾ :

ತನ್ಕೆ 'ತನಿಕೆ'
ಸಙ್ತಿ 'ಸಂಗತಿ'
ನನ್ಕರ್ಚು 'ನನ್ನ ಖರ್ಚು'
ಎಙ್ಸ್ರು 'ಹೆಂಗಸರು' ಇತ್ಯಾದಿ.

[ಹ್] ಸ್ವನದ ಕುರಿತು :

ಸಾಧಾರಣವಾಗಿ ಕಂಠ್ಯವೆಂದು ಪ್ರಸಿದ್ಧವಾಗಿರುವ ಈ ಊಷ್ಮಸ್ವರವು, ಇಲ್ಲಿ ಆಪರೂಪವಾಗಿಯೂ ವರ್ಣಾತ್ಮಕಸ್ಥಿತಿಯನ್ನು ಪಡೆದಂತೆ ತೋರುವುದಿಲ್ಲ. ಮುಖ್ಯವಾಗಿ ಶಬ್ದಗಳ ಆದಿಯಲ್ಲಿ ಮಾತ್ರ ಈ ಸ್ವನವು ವೈಕಲ್ಪಿಕವಾಗಿ ಪ್ರಯೋಗದಲ್ಲಿದೆ. ಈ ಸ್ವನದಿಂದ ಆರಂಭವಾಗುವ ಯಾವ ಶಬ್ದವನ್ನಾದರೂ ಸ್ವರಾದಿಯಾಗಿಯೂ ಉಚ್ಚರಿಸಬಹುದು. ಪರಿಣಾಮವಾಗಿ ಈ ನುಡಿಯಲ್ಲಿ ಹಲವು ಶಬ್ದಗಳು ಒಂದಕ್ಕಿಂತ ಹೆಚ್ಚು ಅರ್ಥಗಳ ವಾಚಕಗಳಾಗಿವೆ. ಉದಾ :

ಅಲ್ಲಿ	'ಹಲ್ಲಿ, ಅಲ್ಲಿ'
ಅಕ್ಕಿ	'ಹಕ್ಕಿ, ಅಕ್ಕಿ'
ಒತ್ತು	'ಹೊತ್ತು, ಒತ್ತು'
ಏಳು	'ಹೇಳು, ಏಳು'
ಏರು	'ಹೇರು, ಏರು' ಇತ್ಯಾದಿ.

ಇಲ್ಲಿ ಒಂದು ಮುಖ್ಯವಾದ ಸಂಗತಿಯೆಂದರೆ ಹಕಾರಾದಿಯಾಗಿ ಕಂಡುಬರುವ ಶಬ್ದಗಳು ಕೇವಲ ಸ್ವರಾದಿಗಳೂ ಆಗಬಹುದು. ಆದರೆ ಸ್ವರಾದಿ ಶಬ್ದಗಳೆಲ್ಲ ಹಕಾರಾದಿಗಳಾಗಲಾರವು. ಉದಾಹರಣೆ : ಹೇಳು ಅನ್ನುವ ಸ್ಥಳದಲ್ಲಿ 'ಹೇಳು' ಅಥವಾ 'ಏಳು' ಎಂದು ಹೇಳಬಹುದು. ಆದರೆ ಏಳು ಎಂಬುದರ ಬದಲಾಗಿ ಹೇಳು ಎಂದು ಯಾರೂ ಹೇಳುವುದಿಲ್ಲ.

೨. ಪದರಚನೆ :

ನಾಮಪದಗಳು :

ನಾಮಪ್ರಕೃತಿಗಳು ಸಾಧಾರಣವಾಗಿ ಸ್ವರಾಂತಗಳಾಗಿದ್ದು, ಇವುಗಳ ಕೊನೆಯಲ್ಲಿ ಇ, ಉ, ಎ ಅಥವಾ ಅ ವರ್ಣಗಳ ಪೈಕಿ ಯಾವುದಾದರೂ ಒಂದು ವರ್ಣವಿರುತ್ತದೆ. ಇದು ಕನ್ನಡದ ಸಾಧಾರಣ ನಿಯಮವನ್ನೇ ಹೋಲುತ್ತಿರುವುವಾದರೂ ಕೆಲವೊಂದು ಪ್ರಕೃತಿಗಳಲ್ಲಿ ಸ್ವಲ್ಪ ವೈಲಕ್ಷಣ್ಯವು ಕಂಡುಬರುತ್ತದೆ. ಅಂತಹ ಪ್ರಕೃತಿಗಳನ್ನು ಮಾತ್ರ ಇಲ್ಲಿ ಆರಿಸಿಕೊಡಲಾಗಿದೆ.

೧. ಸಾಮಾನ್ಯವಾಗಿ ಉಕಾರಾಂತಗಳಾಗಿದ್ದು, ಇಲ್ಲಿ ಅಕಾರಾಂತ ಅಥವಾ ಎಕಾರಾಂತಗಳಾಗಿರುವವು.

ಒಕ್ಳ 'ಹೊಕ್ಕುಳು'

ತೂತ 'ತೂತು'

ಅಸ 'ಹಸು'

ಪೊದುರೆ 'ಪೊದರು'

೨. ಸಾಮಾನ್ಯವಾಗಿ ಎಕಾರಾಂತಗಳೆನಿಸಿದ್ದು, ಇಲ್ಲಿ ಉಕಾರಾಂತ ಅಥವಾ ವೈಕಲ್ಪಿಕವಾಗಿ ಇಕಾರಾಂತಗಳಾಗಿರುವವು.

ತರಗುಲು 'ತರಗೆಲೆ'

ಮೊಗ್ಗು 'ಮೊಗ್ಗೆ'

ಕೋಣಿ 'ಕೋಣೆ'

ಬಾಣ್ಲೆ 'ಬಾಣಲೆ'

ಜಳ್ಡಿ 'ಜರಡಿ'

ಸಕ್ರೆ, ಸಕ್ರಿ 'ಸಕ್ಕರೆ'

ಕೆನೆ, ಕೆನಿ

ಒಡೆ, ಒಡಿ

ದೋಸೆ, ದೋಸಿ

ಮುದ್ದೆ, ಮುದ್ದಿ

ಜೊತೆ, ಜೊತಿ 'ಸಹವಾಸ'

ನಾಚಿಕೆ, ನಾಚಿಕಿ

ನೆಗಡೆ, ನೆಗಡಿ

ವೀಣೆ, ವೀಣಿ

ಬೆಣ್ಣೆ, ಬೆಣ್ಣಿ ಇತ್ಯಾದಿ.

ದೀರ್ಘಸ್ವರಗಳಲ್ಲಿ ಕೊನೆಗೊಳ್ಳುವ ನಾಮಪದಗಳು ತುಂಬ ವಿರಳ. ಹಾಗೂ ಸಾಮಾನ್ಯವಾಗಿ ಏಕಾಕ್ಷರಾತ್ಮಕಗಳು. ಉದಾ : ಊ 'ಹೂವು', ಚಾ, ಸೀ 'ಸಿಹಿ'

ಇತ್ಯಾದಿ. ಆಪಾತತಃ ವಿರೋಧಪ್ರಸಾರದಲ್ಲಿರುವ ಏಕಾಕ್ಷರ ಭಿನ್ನಪದಗಳು ಚೆಣ್ಡು : ಚೆಣ್ಡೂ 'ಚೆಂಡು ಹೂವು'. ಇಲ್ಲಿ ಗಮನಾರ್ಹವಾದ ಇನ್ನೊಂದು ಪದ ಯುಗ್ಮ ಚಸ್ದ : ಚಸ್ದಾ. ಇಲ್ಲಿ ಕಂಡುಬರುವ ವಿರೋಧಪ್ರಸಾರವು ಮೇಲು ನೋಟಕ್ಕೆ ಮಾತ್ರ ಎಂದು ಹೇಳುವುದು ಸಾಧ್ಯವಿಲ್ಲ. ಆದರೂ ಹೆಚ್ಚಿನ ವಿವರಣೆಗೆ ಹೋಗದೆ ಪ್ರಕೃತ ಇಂತಹ ಪದಗಳನ್ನು ದೀರ್ಘಸ್ವರಾಂತಗಳೆಂದೇ ಪರಿಗಣಿಸಬಹು ದಾಗಿದೆ. ಸಿನಿಮಾ, ರೇಡಿಯೋ ಮೊದಲಾದ ಎರವಲು ಶಬ್ದಗಳನ್ನೂ ಇಲ್ಲಿ ಸೇರಿಸಿ ಕೊಳ್ಳಬಹುದು.

ಬಹುವಚನಪ್ರತ್ಯಯಗಳು :

ನಾಮಪದಗಳೊಂದಿಗೆ ಬಳಕೆಯಲ್ಲಿರುವ ಬಹುವಚನಪ್ರತ್ಯಯಗಳನ್ನು ಮುಖ್ಯ ವಾಗಿ ಐದು ವರ್ಗಗಳಲ್ಲಿ ವಿಂಗಡಿಸಬಹುದು.

೧. –ಕ್ಳು : ಮಗು ಪದದ ಬಹುವಚನರೂಪದಲ್ಲಿ (ಮಕ್ಳು) ಮಾತ್ರ ಕಂಡು ಬರುವ ಪ್ರತ್ಯಯ.

೨. –ಗಳು / –ಗುಳು : ಇವು ಗುರು ಹಾಗೂ ಮನುಷ್ಯವಾಚಕಗಳಲ್ಲದ ಎಲ್ಲ ನಾಮಪದಗಳೊಂದಿಗೂ ವೈಕಲ್ಪಿಕರೀತಿಯಲ್ಲಿ ಬಳಸಲ್ಪಡುತ್ತವೆ. ಉದಾ : ಗುರುಗುಳು, ಮನಿಗಳು, ಮರಗುಳು, ಅಣ್ಣುಗುಳು, ಕೋಣಗುಳು ಇತ್ಯಾದಿ.

೩. ಗೋಳು : ಇದು ಬೋವಿ 'ಪಾಲಕಿ ಎತ್ತುವವರು' ಪದದೊಂದಿಗೆ ಉಪಯೋಗಿಸಲ್ಪಡುತ್ತದೆ. ಉದಾ : ಬೋವಿಗೋಳು.

೪. –(ಅ)ನ್ದ್ರು / –(ಅ)ನ್ದಿರು / –(ಅ)ದೀರು : ಇವು ಅಕಾರಾಂತ ಸಂಬಂಧ ವಾಚಕ ನಾಮಪದಗಳೊಂದಿಗೆ ಉಪಯೋಗಿಸಲ್ಪಡುತ್ತವೆ. ಉದಾ : ಗಣ್ಡನ್ದ್ರು, ಗಣ್ಡದೀರು, ಅಣ್ಣನ್ದಿರು, ಅಣ್ಣದೀರು: ಅಳಿಯದೀರು ಇತ್ಯಾದಿ. ಈ ಪ್ರತ್ಯಯಗಳು ವೈಕಲ್ಪಿಕವಾಗಿ ಎಣ್ಡ್ತಿ ಪದದೊಂದಿಗೂ ಉಪಯೋಗಿಸಲ್ಪಡುತ್ತವೆ. ಉದಾ : ಎಣ್ಡ್ರು, ಎಣ್ಡದೀರು, ಎಣ್ಡನ್ದಿರು ಇತ್ಯಾದಿ.

೫. –(ಅ)ರು : ಉಳಿದೆಡೆ

ಉಡುಗ್ರು 'ಹುಡುಗರು'
ಎಙ್ಸ್ರು 'ಹೆಂಗಸರು'
ಬ್ಯೇಡ್ರು 'ಬೇಡರು'
ಸವತೀರು 'ಸವತಿಯರು'
ತಙ್ಗಿಯರು, ತಙ್ಗೀರು
ಉಡುಗಿಯರು, ಉಡುಗೇರು, ಹುಡುಗಿಯರು ಇತ್ಯಾದಿ.

ವಿಭಕ್ತಿಪ್ರತ್ಯಯಗಳು :

ನಾಮಪ್ರಕೃತಿಗಳ ಮುಂದೆ ಹಚ್ಚಲ್ಪಡುವ ಪ್ರತ್ಯಯಗಳಲ್ಲಿ ಮುಖ್ಯವಾದುವು ವಿಭಕ್ತಿಪ್ರತ್ಯಯಗಳು. ಈ ವಿಭಕ್ತಿಪ್ರತ್ಯಯಗಳ ರೂಪ ಮತ್ತು ಪ್ರಸಾರ ಎರಡೂ ಹೆಚ್ಚುಕಡಿಮೆ ಪ್ರಮಾಣಕನ್ನಡದ ರೀತಿಯಲ್ಲೇ ಇವೆ. ಪ್ರಕೃತಿಗಳ ಮುಂದೆ ಪ್ರತ್ಯಯಗಳನ್ನು ಬಳಸಿದಾಗ ಕಂಡುಬರುವ ಕೆಲವು ರೂಪಭೇದಗಳನ್ನು ಬಿಟ್ಟರೆ, ಬೇರೆ ಮಹತ್ವದ ಬದಲಾವಣೆಗಳೇನೂ ತೋರಿಬರುವುದಿಲ್ಲ. ಈ ಬದಲಾವಣೆಗಳನ್ನು ಕೆಳಗೆ ಆರಿಸಿಕೊಟ್ಟ ಉದಾಹರಣೆಗಳಲ್ಲಿ ಗಮನಿಸಬಹುದು.

ವಿಭಕ್ತಿಪ್ರತ್ಯಯಗಳ ಪ್ರಸಾರದ ನಿರೂಪಣೆಯ ದೃಷ್ಟಿಯಿಂದ ನಾಮಪದಗಳನ್ನು ಕೆಳಗೆ ಕಾಣಿಸಿದಂತೆ ೭ ಗುಂಪುಗಳಲ್ಲಿ ವರ್ಗೀಕರಿಸಿಕೊಳ್ಳುವುದು ಅನುಕೂಲ.

೧. ಇಕಾರಾಂತ ಮತ್ತು ಎಕಾರಾಂತ ಪ್ರಕೃತಿಗಳು.

೨. ಎರಡು ಲಘು ಅಕ್ಷರಗಳ ಉಕಾರಾಂತ ಪ್ರಕೃತಿಗಳು.

೩. ತೃತೀಯಪುರುಷ, ನಪುಂಸಕಲಿಂಗ, ಏಕವಚನ ಸರ್ವನಾಮ ಹಾಗೂ ಸಂಖ್ಯಾವಾಚಕ ಉಕಾರಾಂತ ಪ್ರಕೃತಿಗಳು.

೪. ಬಹುವಚನ ಪ್ರಕೃತಿಗಳು ಮತ್ತು ತೃತೀಯಪುರುಷ ನಪುಂಸಕ ಏಕವಚನೇತರ ಸರ್ವನಾಮಪ್ರಕೃತಿಗಳು.

೫. ಉಳಿದ ಉಕಾರಾಂತ ಪ್ರಕೃತಿಗಳು.

೬. ಅಕಾರಾಂತ ಮನುಷ್ಯವಾಚಕ ಪ್ರಕೃತಿಗಳು.

೭. ಇತರ ಅಕಾರಾಂತ ಪ್ರಕೃತಿಗಳು.

ಈ ಏಳು ಗುಂಪುಗಳ ನಾಮಪ್ರಕೃತಿಗಳ ಮುಂದೆ ಉಪಯೋಗಿಸಲ್ಪಡುವ ವಿಭಕ್ತಿಪ್ರತ್ಯಯಗಳು

	ನಾಮಪ್ರಕೃತಿ	ಸಾಮಾನ್ಯರೂ	ವಿಭಕ್ತಿಪ್ರತ್ಯಯಗಳು				
			ದ್ವಿತೀಯಾ	ತೃತೀಯಾ ಪಂಚಮಿ	ಚತುರ್ಥಿ	ಷಷ್ಠಿ	ಸಪ್ತಮಿ
೧	ಗಿಣಿ, ಕೆ̱ರೆ	ಗಿಣೀ– / ಗಿಣಿಯಲ್– _ರೇ– / ಕೆ̱ರೆಯ್–	φ / ,ನ	–(ಇ)ನ್ದ	–ಗೆ	φ	–ಲಿ
೨	ಗುರು	ಗುರೂ– / ಗುರುವ್–	–(ಇ)ನ	(–ಇ)ನ್ದ	–ಗೆ	φ / –ನ	–ನಲ್ಲಿ
೩	ಅದು	ಅದು– / ಅದ–	–ನ್ನು	–ರಿನ್ದ	–ಕ್ಕೆ	–ರ	–ರಲ್ಲಿ
೪	ಮರಗುಳು	ಮರಗುಳು– / –ಳ್	–(ಅ)ನ್ನು	–ಇನ್ದ	–ಗೆ	–ಅ	–ಅಲ್ಲಿ
೫	ಕಣ್ಣು	ಕಣ್ಣು– / ಣ್ಣ್–	–(ಅ)ನ್ನು	–ಇನ್ದ	–ಗೆ	–ಇನ	–ಅಲ್ಲಿ
೬	ಅಣ್ಣ	ಅಣ್ಣ–	–ನ್ನ	–ನಿನ್ದ	–ಜ೩	–ನ	–ನಲ್ಲಿ
೭	ಮರ	ಮರ–	—	–ದಿನ್ದ	–ಕ್ಕೆ	–ದ	–ದಲ್ಲಿ

ಇಲ್ಲಿ ಗಮನಿಸಬೇಕಾದ ಕೆಲವು ಸಂಗತಿಗಳು :

ನಾಮಪದಗಳ ಮೂಲಪ್ರಕೃತಿಗಳಿಗೂ ಪ್ರಥಮಾವಿಭಕ್ತಿಯ ರೂಪಗಳಿಗೂ ಭೇದವಿಲ್ಲದಿರುವುದರಿಂದ ಪ್ರಥಮಾ ವಿಭಕ್ತಿಪ್ರತ್ಯಯವನ್ನು ಪ್ರತ್ಯೇಕವಾಗಿ ನಿರ್ದೇಶಿಸಿಲ್ಲ.

ಎಕಾರಾಂತ ಪ್ರಕೃತಿಗಳು ವೈಕಲ್ಪಿಕವಾಗಿ ಇಕಾರಾಂತಗಳಾಗಿರುವುದೂ ಕಂಡು ಬರುತ್ತದೆ. ಆದರೆ ವಿಭಕ್ತಿಪ್ರತ್ಯಯಗಳು ಪರವಾದಾಗ ಅವು ಎಕಾರಾಂತಗಳಂತೆಯೇ ಇರುತ್ತವೆ. ೧ನೆಯ ಮತ್ತು ೨ನೆಯ ಗುಂಪಿನ ಪ್ರಕೃತಿಗಳಿಗೆ ಸ್ವರಾದಿಪ್ರತ್ಯಯವು ಪರವಾದಾಗ ಅನುಕ್ರಮವಾಗಿ ಯಕಾರ ಮತ್ತು ವಕಾರಗಳ ಆಗಮವಾಗುತ್ತದೆ. ಉಳಿದೆಡೆ ಅಂತ್ಯಸ್ವರವು ದೀರ್ಘವಾಗುತ್ತದೆ.

ಸ್ವರಾದಿಪ್ರತ್ಯಯವು ಪರವಾದಾಗ ೪ ಮತ್ತು ೫ನೆಯ ಗುಂಪಿನ ಪ್ರಕೃತಿಗಳ ಅಂತ್ಯದ ಉಕಾರವು ಲೋಪವಾಗುತ್ತದೆ.

೩ನೆಯ ಗುಂಪಿನ ಪ್ರಕೃತಿಗಳ ಅಂತ್ಯದ ಉಕಾರವು ವಿಭಕ್ತಿಪ್ರತ್ಯಯಗಳು ಪರವಾದಾಗ ವೈಕಲ್ಪಿಕವಾಗಿ ಅಕಾರವಾಗುತ್ತದೆ.

೬ನೆಯ ಮತ್ತು ೭ನೆಯ ಗುಂಪಿನ ಪ್ರಕೃತಿಗಳೊಂದಿಗೆ ಅನುಕ್ರಮವಾಗಿ ಕಂಡು ಬರುವ ನ್/ಜ್, ದ್/ಕ್ ವರ್ಣಗಳನ್ನು ಆಯಾ ನಾಮಪದಗಳ ವರ್ಗಗಳನ್ನು ಸೂಚಿಸುವ ಸಾರ್ಥಕ ಆಗಮಗಳೆಂದೂ ಪರಿಗಣಿಸಬಹುದು. ಈ ಸಮಸ್ಯೆಯು ಕನ್ನಡದ ಎಲ್ಲ ನುಡಿಗಳಲ್ಲೂ ಹೆಚ್ಚು ಕಡಿಮೆ ಸಮನಾಗಿರುವುದರಿಂದ ಅದರ ವಿವೇಚನೆಗೆ ಹೋಗದೆ, ಅನುಕೂಲತೆಯ ದೃಷ್ಟಿಯಿಂದ ಈ ವರ್ಣಗಳನ್ನು ಪ್ರತ್ಯಯಗಳ ಅಂಗವಾಗಿಯೇ ಪರಿಗಣಿಸಲಾಗಿದೆ.

ವಿಭಕ್ತಿರೂಪಗಳಲ್ಲಿ ಕಂಡುಬರುವ ಕೆಲವು ವೈಶಿಷ್ಟ್ಯಗಳು :

ವಿಭಕ್ತಿಪ್ರತ್ಯಯಗಳು ಪರವಾದಾಗ ಮಗು, ಅಸ 'ಹಸು' ಮತ್ತು ಕರ 'ಕರು' ಈ ಮೂರು ಪ್ರಕೃತಿಗಳ ಸಾಮಾನ್ಯರೂಪಗಳು ಅನುಕ್ರಮವಾಗಿ ಮಗೀ–, ಅಸೀ–, ಕರೀ– ಎಂದಾಗುತ್ತವೆ.

ಉದಾ : ಆ ಮಗೀಗೇನಾರೂ ತಿನ್ನಾಕ್ಕೊಡು.

ಅಸೀನಾಲು 'ಹಸುವಿನ ಹಾಲು'

ಕರೀಗ್ಹೊಡೀಬ್ಯೇಡ 'ಕರುವಿಗೆ ಹೊಡೆಯ ಬೇಡ'

'ದನ' ಪ್ರಕೃತಿಯೊಂದಿಗೆ ೨ನೆಯ ಗುಂಪಿನ ಪ್ರತ್ಯಯಗಳೂ ವೈಕಲ್ಪಿಕವಾಗಿ ಉಪಯೋಗಿಸಲ್ಪಡುತ್ತವೆ. ಈ ಪ್ರತ್ಯಯಗಳು ಮುಂದಿದ್ದಾಗ ಪ್ರಕೃತಿಯ ಅಂತ್ಯದ ಅಕಾರಕ್ಕೆ ಈಕಾರಾದೇಶವಾಗುತ್ತದೆ. ಉದಾ :

ದನೀನ ಬಾಲ

ದನದ ಇಣ್ಡು ಇತ್ಯಾದಿ.

ಕೋಣ, ಮಜ್ಜ ಮುಂತಾದ ಕೆಲವು ಪ್ರಕೃತಿಗಳ ಮುಂದೆ ಕೆಲವೊಮ್ಮೆ ೬ನೆಯ ಗುಂಪಿನ ಪ್ರತ್ಯಯಗಳೂ ಬಳಸಲ್ಪಡುತ್ತವೆ. ಉದಾ :

ಕೋಣನ್ ಅಥವಾ ಕೋಣದ್ ಮಯ್

ಮಜ್ಜನ್ಮಾನ್ದೆ ಇತ್ಯಾದಿ.

ಕಯ್ ಅಥವಾ ಕಯ್ಯಿ, ಮಯ್ ಅಥವಾ ಮಯ್ಯಿ ಪ್ರಕೃತಿಗಳ ವಿಭಕ್ತಿರೂಪಗಳು ೪ನೆಯ ಗುಂಪಿನ ಪ್ರಕೃತಿಗಳ ವಿಭಕ್ತಿರೂಪಗಳನ್ನೇ ಹೋಲುತ್ತವೆ.

ಕ್ರಿಯಾಪದಗಳು :

ಮೂಲ ಅಥವಾ ಸಾಧಿತಧಾತುಪ್ರಕೃತಿಗಳಿಗೆ ಆಖ್ಯಾತಪ್ರತ್ಯಯಗಳನ್ನು ಹಚ್ಚಿ ಕ್ರಿಯಾಪದಗಳ ರಚನೆಯಾಗುತ್ತದೆ.

ಅಂತ್ಯಸ್ವರದ ಆಧಾರದ ಮೇಲೆ ಧಾತುಪ್ರಕೃತಿಗಳು ಇಲ್ಲಿ ಇಕಾರಾಂತ ಹಾಗೂ ಉಕಾರಾಂತಗಳೆಂದು ಎರಡು ತೆರನಾಗಿವೆ. ಕನ್ನಡದಲ್ಲಿ ಸಾಧಾರಣವಾಗಿ ಎಕಾರಾಂತಗಳೆಂದು ಪರಿಗಣಿಸಲ್ಪಟ್ಟಿರುವ ಧಾತುಗಳು ಇಲ್ಲಿ ಇಕಾರಾಂತಗಳಾಗಿವೆ. ಉದಾ :

ಒದಿ	'ಒದೆ'	ನೆಡಿ	'ನಡೆ'
ಸೆಡಿ	'ಸೆಳೆ'	ನೆಗಿ	'ನೆಗೆ'
ತೆಗಿ	'ತೆಗೆ'	ನೆನಿ	'ನೆನೆ'
ಎಣಿ	'ಹೆಣೆ'	ತೆರಿ	'ತೆರೆ'
ಕೆರಿ	'ಕೆರೆ'	ಕೊಳಿ	'ಕೊಳೆ'
ಕೊರಿ	'ಕೊರೆ'	ಒಳಿ	'ಹೊಳೆ'
ಮೊಳಿ	'ಮೊಳೆ'	ಎಸಿ	'ಎಸೆ'
ಒಸಿ	'ಹೊಸೆ' ಇತ್ಯಾದಿ.		

ಯಕಾರವು ಅಂತ್ಯವ್ಯಂಜನವಾಗಿರುವ ಧಾತುಗಳನ್ನುಳಿದು ಇತರ ಇಕಾರಾಂತ ಧಾತುಗಳಲ್ಲಿ ಎರಡು ಲಘು ಅಕ್ಷರಗಳು ಮಾತ್ರ ಕಂಡುಬರುತ್ತಿವೆ. ಅಂತ್ಯಾಕ್ಷರದಲ್ಲಿ ಯಕಾರವಿದ್ದಾಗ ಆದಿಯ ಅಕ್ಷರಗಳು ಗುರುವಾಗಿರುತ್ತವೆ. ಉದಾ :

ಆಯಿ	ಬಯ್ಯಿ
ತೇಯಿ	ಉಯ್ಯಿ '(ನೀರು) ಎರೆ'
ಕಾಯಿ	ನೆಯ್ಯಿ
ಸಾಯಿ	ಒಯ್ಯಿ
ಬೇಯಿ	ಕೊಯ್ಯಿ
ಮೇಯಿ	

ಅಪರೂಪವಾಗಿ ಇವು ಉಕಾರಾಂತವಾಗಿಯೂ ಪ್ರಯೋಗಿಸಲ್ಪಡುತ್ತವೆ.

ಎರಡು ಲಘು ಅಕ್ಷರಗಳಿರುವ ಉಕಾರಾಂತ ಧಾತುಗಳು ವಿರಳ. ಇವು ಕನ್ನಡದ ಇತರ ನುಡಿಗಳಲ್ಲಿ ಕಂಡುಬರುವ ರೀತಿಯಲ್ಲೇ ಇವೆ. ಉದಾ :

ಬಿಡು	ಇರು	ಸಿಗು
ಇಡು	ಎರು 'ಹೆರು'	ನೆಗು 'ನಗು' ಇತ್ಯಾದಿ.

ಕೆಲವು ಧಾತುಗಳಲ್ಲಿ ಮಧ್ಯಾಕ್ಷರದ ಸ್ವರವರ್ಣದ ಲೋಪ ಹಾಗೂ ವರ್ಣಾತ್ಮಕ ವಿಕಾರ ಕಂಡುಬರುತ್ತವೆ. ಉದಾ :

ಒಳ್ಡು	'ಹೊರಡು'	ದುಮ್ಕು	'ದುಮುಕು'
ಒಳ್ಳು	'ಹೊರಳು'	ತುರ್ಕು	'ತುರುಕು'
ಆಳ್ಳು	'ಅರಳು'	ಕಿವ್ಚು	'ಕಿವುಚು'
ಉಳ್ಳು	'ಉರುಳು'	ತಲ್ಪು	'ತಲಪು'
ನಳ್ಳು	'ನರಳು'	ಗುಡ್ಸು	'ಗುಡಿಸು'
ಸುಣ್ಡು	'ಸುರುಟು'	ಸಾರ್ಸು	'ಸಾರಿಸು' ಇತ್ಯಾದಿ.

ಕೆಳಗೆ ಕೊಟ್ಟ ಧಾತುಗಳು ಇತರ ನುಡಿಗಳಲ್ಲಿ ಹೆಚ್ಚು ಬಳಕೆಯಲ್ಲಿಲ್ಲ.

ಇಜ್ಗು	'ಅಕ್ಕಿ ಬೇಯಿಸು'
ಕಕ್ಕು	'ಕಾರು'
ಸೊಕ್ಕು	'ಹುಲುಸಾಗಿ ಬೆಳೆ'
ಸೆಣಿ	'(ಬಟ್ಟೆ) ಒಗೆ'
ತುಣಿ	'(ಹೊಟ್ಟೆ) ಒತ್ತು'
ಮಿದಿ	'ಕಲಸು, ಬೆರಸು'

ಕೃದಂತಾವ್ಯಯಗಳು :

ಮುಖ್ಯವಾಗಿ ಇಲ್ಲಿ ಬಳಕೆಯಲ್ಲಿರುವ ಕೃದಂತಾವ್ಯಯಗಳು ಹೀಗಿವೆ :

೧. **ಪೂರ್ಣಾರ್ಥಕ ಅಥವಾ ಭೂತಕಾಲಿಕ** : ಇವನ್ನು ಸಾಧಾರಣವಾಗಿ ಭೂತಕಾಲವಾಚಕಗಳೆನಿಸಿದ –ಕು, –ಟು, –ಡು, –ತು, –ದು, ಇ(ದ್) ಪ್ರತ್ಯಯಗಳನ್ನು ಯಥೋಚಿತವಾಗಿ ಧಾತುಪ್ರಕೃತಿಗಳಿಗೆ ಹಚ್ಚಿ ಸಾಧಿಸಲಾಗುತ್ತದೆ. ಉದಾ :

ನೆಕ್ಕು 'ನಕ್ಕು'
ಇಟ್ಟು
ಉಣ್ಡು
ಎತ್ತು 'ಹೆತ್ತು'
ಕುಡಿದು
ಮಾಡಿ ಇತ್ಯಾದಿ.

೨. **ನಿರಂತರಾರ್ಥಕ ಅಥವಾ ಅಭೂತಕಾಲಿಕ** ; ಧಾತುಪ್ರಕೃತಿಗಳಿಗೆ –ತಾ ಪ್ರತ್ಯಯವನ್ನು ಹಚ್ಚಿದಾಗ ಇವು ಸಿದ್ಧವಾಗುತ್ತವೆ. ಈ ಪ್ರತ್ಯಯ ಹಾಗೂ ಕೆಳಗೆ ಕಾಣಿಸಿದ ನಿಷೇಧಾರ್ಥಕ ಮತ್ತು ಉದ್ದೇಶಾರ್ಥಕ ಪ್ರತ್ಯಯಗಳು ಪರವಾದಾಗ ಧಾತುಪ್ರಕೃತಿಗಳ ಅಂತ್ಯದ ಇಕಾರವು ದೀರ್ಘವಾಗುತ್ತದೆ; ಉಕಾರವು (ಸಂಯುಕ್ತ ವ್ಯಂಜನಗಳು ಪೂರ್ವದಲ್ಲಿದ್ದರೆ ವೈಕಲ್ಪಿಕವಾಗಿ) ಲೋಪವಾಗುತ್ತದೆ. ಉದಾ :

ಕುಡೀತಾ 'ಕುಡಿಯುತ್ತಾ'
ಇರ್ತಾ 'ಇರುತ್ತಾ'
ಮಾಡ್ತಾ 'ಮಾಡುತ್ತಾ'
ಎತ್ತುತಾ, ಎತ್ತಾ 'ಎತ್ತುತ್ತಾ' ಇತ್ಯಾದಿ.

೩. **ನಿಷೇಧಾರ್ಥಕ** : ಇವನ್ನು ಧಾತುಪ್ರಕೃತಿಗಳಿಗೆ –ದೇ ಪ್ರತ್ಯಯವನ್ನು ಹಚ್ಚಿ ಸಾಧಿಸಲಾಗುತ್ತದೆ. ಉದಾ :

ಕುಡೀದೇ 'ಕುಡಿಯದೆ'
ಮಾಡ್ದೇ 'ಮಾಡದೆ'
ಇಲ್ದೇ (ಕೆಲವೊಮ್ಮೆ ಇರ್ದೇ) ಇತ್ಯಾದಿ.

೪. **ಉದ್ದೇಶವಾಚಕ** : ಇವನ್ನು ಸಾಧಿಸಲು ಎರಡು ರೀತಿಯ ಪ್ರತ್ಯಯಗಳ ಗುಂಪನ್ನು ಉಪಯೋಗಿಸಲಾಗುತ್ತದೆ. ಒಂದನೆಯ ಗುಂಪಿನ ಪ್ರತ್ಯಯಗಳು

ಮುಖ್ಯವಾಗಿ -ಲ್ ಮತ್ತು φ (ಶೂನ್ಯ). ಎರಡನೆಯ ಗುಂಪಿನ ಪ್ರತ್ಯಯಗಳು -ಓಕೆ, ಆಕೆ ಅಥವಾ -ಅಕ್ಕೆ. ಈ ಎರಡೂ ಗುಂಪಿನ ಪ್ರತ್ಯಯಗಳು ಅನುಕ್ರಮವಾಗಿ ಸಾಹಿತ್ಯಿಕ ಕನ್ನಡದ -ಅಲು/ಅ ಹಾಗೂ -ಅಲಿಕ್ಕೆ ಪ್ರತ್ಯಯಗಳ ಸಂವಾದಿಗಳಾಗಿವೆ. ಉದಾ :

ಒಂದನೆಯ ಗುಂಪು :

ಕುಡೀಲ್ (ಇಲ್ಲ) 'ಕುಡಿಯಲಿಲ್ಲ'
ಮಾಡ್ಳ (ಇಲ್ಲ) 'ಮಾಡಲಿಲ್ಲ'
ಇರ್ಲ (ಆರ) 'ಕುಡಿಯಲಾರ'
ಮಾಡ್ (ಬೇಕು) 'ಮಾಡಬೇಕು'
ಇರ್ (ಬೇಡ) 'ಇರಬೇಡ'
ಕುಡೀ (ಬೇಡ) 'ಕುಡಿಯಬೇಡ' ಇತ್ಯಾದಿ.

ಎರಡನೆಯ ಗುಂಪು :

ಮಾಡೋಕೆ / ಮಾಡಾಕೆ
ಕುಡಿಯೋಕೆ / ಕುಡಿಯಾಕೆ
ಇರೋಕೆ / ಇರಾಕೆ
ನನಿಗ್ಬುದ್ಧಿ ಏಳೋಕ್ನೀ ಯಾರು ?
ನಿನ್ನೆ ಸಿನಮಾ ನೋಡಕ್ಕೆ ತುಂಬಾ ಜನ ಬಂದಿದ್ರು ಇತ್ಯಾದಿ.

ಕೆಲವೊಮ್ಮೆ -ದು ಪ್ರತ್ಯಯಾಂತಗಳಾದ ಧಾತುಸಾಧಿತನಾಮಪದಗಳ ಚತುರ್ಥಿ ವಿಭಕ್ತಿಯ ರೂಪಗಳನ್ನು ಎರಡನೆಯ ಗುಂಪಿನ ರೂಪಗಳ ಬದಲಾಗಿ ಬಳಸಲಾಗುತ್ತದೆ. ಉದಾ : ಕುಡಿಯೋದ್ಕೆ, ಇರೋದ್ಕೆ ಇತ್ಯಾದಿ. ಇದರಿಂದ ಇಲ್ಲಿ -ಓಕೆ ರೂಪಗಳನ್ನು ಚತುರ್ಥಿವಿಭಕ್ತಿರೂಪಗಳೆಂದೂ -ಆಕೆ ರೂಪಗಳನ್ನು -ಅಲಿಕ್ಕೆ ರೂಪಗಳ ಸಂವಾದಿಗಳೆಂದೂ ಊಹಿಸಲು ಸಾಕಷ್ಟು ಅವಕಾಶವಿದೆ.

೫. **ಅಪೇಕ್ಷಾರ್ಥಕ :** ಇವು, ಪೂರ್ಣಾರ್ಥಕ ಕೃದಂತರೂಪಗಳ ಮುಂದೆ -ರೆ ಪ್ರತ್ಯಯವನ್ನು ಬಳಸಿದಾಗ ಸಿದ್ಧವಾಗುತ್ತವೆ. ಉದಾ :

ಕುಡಿದ್ರೆ, ಮಾಡಿದ್ರೆ, ಇದ್ರೆ ಇತ್ಯಾದಿ.

ಕೃದಂತವಿಶೇಷಣಗಳು :

ಮೇಲೆ ನಿರ್ದೇಶಿಸಿದ ಪೂರ್ಣಾರ್ಥಕ, ನಿಷೇಧಾರ್ಥಕ, ಕೃದಂತರೂಪಗಳ ಮುಂದೆ -ಅ ಪ್ರತ್ಯಯವನ್ನು ಹಾಗೂ ಧಾತುಪ್ರಕೃತಿಗಳ ಮುಂದೆ ನೇರವಾಗಿ ಓ ಅಥವಾ ಊ

ಪ್ರತ್ಯಯಗಳನ್ನು ಸೇರಿಸಿ ಅನುಕ್ರಮವಾಗಿ ಪೂರ್ಣಾರ್ಥಕ ಅಥವಾ ಭೂತಕಾಲಿಕ, ನಿಷೇಧಾರ್ಥಕ ಹಾಗೂ ನಿರಂತರಾರ್ಥಕ ಅಥವಾ ಅಭೂತಕಾಲಿಕ ವಿಶೇಷಣಗಳು ಸಾಧಿಸಲ್ಪಡುತ್ತವೆ. ಉದಾ :

ಪೂರ್ಣಾರ್ಥಕ ಅಥವಾ ಭೂತಕಾಲಿಕ :

ಕುಡಿದ, ಮಾಡ್ದ, ಇದ್ದ ಇತ್ಯಾದಿ.

ನಿಷೇಧಾರ್ಥಕ :

ಕುಡೀದ 'ಕುಡಿಯುದ', ಮಾಡ್ದ 'ಮಾಡದ'
ಇಲ್ದ 'ಇಲ್ಲದ' ಇತ್ಯಾದಿ.

ನಿರಂತರಾರ್ಥಕ ಅಥವಾ ಅಭೂತಕಾಲಿಕ :

ಕುಡಿಯೋ / ಕುಡಿಯೂ 'ಕುಡಿಯುವ'
ಮಾಡೋ / ಮಾಡೂ 'ಮಾಡುವ' ಇತ್ಯಾದಿ.

ಕೃದಂತನಾಮಗಳು :

ಇವನ್ನು ಪೂರ್ಣಾರ್ಥಕ ಮತ್ತು ನಿಷೇಧಾರ್ಥಕ ಕೃದಂತ ಅವ್ಯಯಗಳ ಮುಂದೆ –ಇದ್ದು ಪ್ರತ್ಯಯವನ್ನು, ನಿರಂತರಾರ್ಥಕ ವಿಶೇಷಣಗಳ ಮುಂದೆ -ದು ಪ್ರತ್ಯಯವನ್ನು ಹಚ್ಚಿ ಸಾಧಿಸಲಾಗುತ್ತದೆ. ಉದಾ :

ಕುಡಿದಿದ್ದು, ಮಾಡಿದ್ದು ಮಾಡ್ದಿದ್ದು 'ಮಾಡದಿದ್ದು'
ಕುಡೀದಿದ್ದು 'ಕುಡಿಯುದಿದ್ದದ್ದು', ಕುಡಿಯೋದು, ಮಾಡೋದು ಇತ್ಯಾದಿ.

ಪೂರ್ಣಕ್ರಿಯಾಪದಗಳು :

ಕನ್ನಡದ ಎಲ್ಲ ನುಡಿಗಳಲ್ಲೂ ಸಾಧಾರಣವಾಗಿರುವಂತೆ ಇಲ್ಲೂ ಪೂರ್ಣ ಕ್ರಿಯಾಪದಗಳು ರಚನಾತ್ಮಕವಾಗಿ ಎರಡು ಗುಂಪುಗಳಿಗೆ ಸೇರುತ್ತವೆ :

೧. ನಿರಂತರಾರ್ಥಕ ಹಾಗೂ ಪೂರ್ಣಾರ್ಥಕ ಪ್ರತ್ಯಯಗಳನ್ನು ಧಾತುಗಳಿಗೆ ಹಚ್ಚಿ ನಿಷ್ಪನ್ನಗಳಾದ ಪ್ರಕೃತಿಗಳ ಮುಂದೆ, ಪುರುಷಾರ್ಥವಾಚಕ ಪ್ರತ್ಯಯಗಳನ್ನು ಹಚ್ಚಿ ನಿಷ್ಪನ್ನಗಳಾಗುವ ಪದಗಳು.

೨. ಧಾತುಪ್ರಕೃತಿಗಳಿಗೆ ನೇರವಾಗಿ ಪುರುಷವಾಚಕಪ್ರತ್ಯಯಗಳನ್ನು ಹಚ್ಚಿ ನಿಷ್ಪನ್ನಗಳಾಗುವ ಪದಗಳು.

ಒಂದನೆಯ ವರ್ಗಕ್ಕೆ ಭೂತಕಾಲಿಕ, ಅಭೂತಕಾಲಿಕ (ವರ್ತಮಾನ ಭವಿಷತ್ಕಾಲಿಕ) ಹಾಗೂ ಸಂಭಾವನಾರ್ಥಕ ಕ್ರಿಯಾಪದಗಳು ಸೇರಿವೆ. ಎರಡನೆಯ ವರ್ಗಕ್ಕೆ ವಿಧ್ಯರ್ಥಕ ಹಾಗೂ ನಿಷೇಧಾರ್ಥಕಕ್ರಿಯಾಪದಗಳು ಸೇರಿವೆ.

ಮಾಡಲಾರ ಮೊದಲಾದ ಅಶಕ್ಯಾರ್ಥವಾಚಕ ಕ್ರಿಯಾಪದಗಳನ್ನು ಉದ್ದೇಶ ವಾಚಕ ಕೃದಂತ ಅವ್ಯಯಗಳೊಂದಿಗೆ ಆರ್ ಎಂಬ ಅಸ್ವತಂತ್ರ ಧಾತುವಿನ ರೂಪ ಗಳನ್ನು ಸೇರಿಸಿ ಸಿದ್ಧಗೊಳಿಸಲಾಗುತ್ತದೆ. ಆದುದರಿಂದ ಇವನ್ನು ಎರಡು ಪದಗಳ ಸಮುದಾಯರೂಪವಾದ ವಾಕ್ಯಾಂಶವೆಂದೇ ಪರಿಗಣಿಸಬಹುದು. ಇವೂ ರಚನಾತ್ಮಕ ವಾಗಿ ಎರಡನೆಯ ವರ್ಗಕ್ಕೆ ಸೇರುತ್ತವೆ.

ಪುರುಷಾರ್ಥವಾಚಕಪ್ರತ್ಯಯಗಳು :

ಇವನ್ನಿಲ್ಲಿ ಕನ್ನಡದ ಸಾಧಾರಣ ನಿಯಮಕ್ಕೆ ಅನುಗುಣವಾಗಿ ೪ ಅಥವಾ ೫ ಗುಂಪುಗಳಲ್ಲಿ ವಿಂಗಡಿಸಬಹುದು :

೧. ಸಾಮಾನ್ಯಪುರುಷವಾಚಕ ಪ್ರತ್ಯಯಗಳು :

		ಏ. ವ.	ಬ. ವ.
ಉ. ಪು.		–ಎ	–(ಇ)ವಿ, –ಒ, –(ಉ)ವು
ಮ. ಪು.		–ಎ	–ರಿ
ಪ್ರ.ಪು. :	ಪುಲ್ಲಿಂಗ	–ಅ	–ರು
,,	ಸ್ತ್ರೀಲಿಂಗ	–ಲು, –ಳು	–ರು
,,	ನ.ಲಿಂಗ	–ತು	–(ಉ)ವು

ಈ ಪ್ರತ್ಯಯಗಳು ಭೂತಕಾಲದ ಕ್ರಿಯಾರೂಪಗಳಲ್ಲೂ ಅಶಕ್ಯಾರ್ಥವಾಚಕ ಗಳಾದ ಕ್ರಿಯಾರೂಪಗಳಲ್ಲಿರುವ ಆರ್ 'ಅಶಕ್ತವಾಗು' ಎಂಬ ಧಾತುವಿನೊಂದಿಗೂ ಬಳಸಲ್ಪಡುತ್ತವೆ. ಉದಾ :

ಭೂತಕಾಲದ ರೂಪಗಳು : ಧಾತು 'ಕುಡಿ'.

		ಏ. ವ.	ಬ. ವ.
ಉ. ಪು.		ಕುಡಿದೆ	ಕುಡ್ದಿವಿ, ಕುಡ್ದೊ, ಕುಡ್ದುವು. ಕುಡಿದಿವಿ, ಕುಡಿದೊ, ಕುಡಿದುವು
ಮ. ಪು.		ಕುಡಿದೆ	ಕುಡಿದ್ರಿ
ಪ್ರ.ಪು. :	ಪುಲ್ಲಿಂಗ	ಕುಡಿದ	ಕುಡಿದ್ರು
,,	ಸ್ತ್ರೀಲಿಂಗ	ಕುಡಿದ್ಲು	ಕುಡಿದ್ರು
,,	ನ.ಲಿಂಗ	ಕುಡೀತು	ಕುಡಿದುವು, ಕುಡ್ದುವು

ಧಾತು 'ಮಾಡು'.

	ಏ. ವ.	ಬ. ವ.
ಉ. ಪು.	ಮಾಡ್ದೆ	ಮಾಡ್ದಿವಿ, ಮಾಡ್ದೊ, ಮಾಡ್ದುವು
ಪ್ರ.ಪು. : ನ.ಲಿಂಗ	ಮಾಡ್ತು	ಮಾಡ್ದುವು

ಧಾತು 'ಇರು'.

ಉ. ಪು.	ಇದ್ದೆ	ಇದ್ದಿವಿ, ಇದ್ದೊ, ಇದ್ದುವು
ಪ್ರ.ಪು : ನ ಲಿಂಗ	ಇತ್ತು	ಇದ್ದುವು ಇತ್ಯಾದಿ.

ಅಶಕ್ಯಾರ್ಥಕ್ರಿಯಾಪದಗಳು :

	ಏ. ವ.	ಬ. ವ.
ಉ. ಪು.	ಕುಡೀಲಾರೆ	ಕುಡೀಲ್ಲಾರುವು
ಮ. ಪು.	ಕುಡೀಲಾರೆ	ಕುಡೀಲಾರ್ರಿ
ಪ್ರ.ಪು. : ಪುಲ್ಲಿಂಗ	ಕುಡೀಲಾರ	ಕುಡೀಲಾರ್ರು
,, ಸ್ತ್ರೀಲಿಂಗ	ಕುಡೀಲಾರು	ಕುಡೀಲಾರ್ರು
,, ನ.ಲಿಂಗ	ಕುಡಿಲಾರ್ದು	ಕುಡಿಲಾರುವು

ಇದೇರೀತಿ ಮಾಡ್ಲಾರೆ, ಇರ್ಲಾರೆ ಇತ್ಯಾದಿ.

ಯದ್ಯಪಿ ಇಲ್ಲಿ ಉತ್ತಮಪುರುಷ ಹಾಗೂ ಮಧ್ಯಮಪುರುಷಗಳ ಏಕವಚನದಲ್ಲಿ ಒಂದೇ ಪ್ರತ್ಯಯುವಿರುವಂತೆ ಕಂಡುಬರುತ್ತದೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ಸ್ವರಾಕ್ಷರವು ಪರದಲ್ಲಿದ್ದಾಗ ಇವುಗಳು ಭಿನ್ನಪ್ರತ್ಯಯಗಳೆಂದು ತಿಳಿಯಲು ಸಾಧ್ಯವಾಗುತ್ತದೆ. ಉದಾ :

ಉ. ಪು.	ಎ/ನ್	ನಾ ಬಂದೆ
		ನಾ ಬಂದ್ನಾ ?
ಮ. ಪು.	ಎ/ಯ್	ನೀ ಬಂದೆ
		ನೀ ಬಂದ್ಯಾ ?

ಪ್ರಥಮಪುರುಷ ಬಹುವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಪ್ರಯುಕ್ತವಾದ ಭೇದ ವಿಲ್ಲ. ಅಲ್ಲಿ ಅನಪುಂಸಕ, ನಪುಂಸಕ ಎಂದು ಎರಡೇ ರೀತಿಯ ಭೇದವಿದೆ.

(ಅಪೂರ್ಣ ಅಥವಾ) ವರ್ತಮಾನಾರ್ಥವಾಚಕಪ್ರತ್ಯಯುಗಳು :

		ಏ. ವ.	ಬ. ವ.
ಉ. ಪು.		–ಈನಿ	–ಈವಿ
ಮ. ಪು.		–ಈ	–ಈರಿ
ಪ್ರ. ಪು. :	ಪುಲ್ಲಿಂಗ	–ಆನೆ	–ಆರೆ
,,	ಸ್ತ್ರೀಲಿಂಗ	–ಆಳೆ	–ಆರೆ
,,	ನ.ಲಿಂಗ	–ತೆ	–ಆವೆ

ಇವು, ಅಭೂತಕಾಲಿಕ (ವರ್ತಮಾನ ಭವಿಷತ್ಕಾಲಿಕ)ರೂಪಗಳಲ್ಲಿ ಬಳಸಲ್ಪಡುತ್ತಿದ್ದು ಎಲ್ಲ ಧಾತುಗಳ ನಿರಂತರಾರ್ಥಕ ಪ್ರಕೃತಿಗಳೊಂದಿಗೆ, ಇರು ಧಾತುವಿನ ಪೂರ್ಣಾರ್ಥಕಪ್ರಕೃತಿಯ ಮುಂದೆಯೂ ಉಪಯೋಗಿಸಲ್ಪಡುತ್ತವೆ. ಪ್ರಥಮ ಪುರುಷ ನಪುಂಸಕಲಿಂಗದ ರೂಪಗಳಲ್ಲಿ ನಿರಂತರಪ್ರತ್ಯಯವು ಉತ್ ಎಂಬ ರೂಪ ಭೇದವನ್ನು ತಾಳಿದೆ. ಉದಾ :

		ಏ. ವ.	ಬ. ವ.
ಉ. ಪು.		ಕುಡೀತೀನಿ	ಕುಡೀತೀವಿ
ಮ. ಪು.		ಕುಡೀತೀ	ಕುಡೀತೀರಿ
ಪ್ರ. ಪು. :	ಪುಲ್ಲಿಂಗ	ಕುಡೀತಾನೆ	ಕುಡೀತಾರೆ
,,	ಸ್ತ್ರೀಲಿಂಗ	ಕುಡೀತಾಳೆ	ಕುಡೀತಾರೆ
,,	ನ.ಲಿಂಗ	ಕುಡಿಯುತ್ತೆ	ಕುಡೀತಾವೆ

ಇದೇ ರೀತಿಯಲ್ಲಿ

ಇರ್ತೀನಿ, ಇರ್ತೀವಿ: ಇದೀನಿ, ಇದೀವಿ;
ಮಾಡ್ತೀನಿ, ಮಾಡ್ತೀವಿ ಇತ್ಯಾದಿ.

ವಿಧ್ಯರ್ಥಪ್ರತ್ಯಯುಗಳು :

	ಏ. ವ	ಬ. ವ.
ಉ. ಪು.	–ಲಿ	–ಓಣ / –ಆಣ
ಮ. ಪು.	–φ	–ರಿ
ಪ್ರ. ಪು.	–ಲಿ	–ಲಿ

ಮುಖ್ಯವಾಗಿ ವಿಧ್ಯರ್ಥಪ್ರತ್ಯಯುಗಳು ಮೂರು (ಶೂನ್ಯವನ್ನು ಪರಿಗಣಿಸಿದರೆ ನಾಲ್ಕು). ಇಲ್ಲಿ ಪ್ರಥಮಪುರುಷದಲ್ಲಿ ಲಿಂಗಪ್ರಯುಕ್ತವಾದ ಹಾಗೂ ವಚನಪ್ರಯುಕ್ತ

ವಾದ ಭೇದವಿಲ್ಲ. ಇವನ್ನು ನೇರವಾಗಿ ಧಾತುಪ್ರಕೃತಿಗಳೊಂದಿಗೆ ಉಪಯೋಗಿಸಲಾಗುತ್ತದೆ. ಉದಾ :

	ಏ. ವ.	ಬ. ವ.
ಉ. ಪು.	ಕುಡೀಲಿ	ಕುಡಿಯೋಣ, ಕುಡಿಯಾಣ
ಮ. ಪು.	ಕುಡಿ	ಕುಡೀರಿ
ಪ್ರ. ಪು.	ಕುಡೀಲಿ	ಕುಡೀಲಿ

ಉತ್ತಮಪುರುಷದಲ್ಲಿ ಬಹುವಚನದ ರೂಪಗಳನ್ನೇ ಏಕವಚನದಲ್ಲೂ ಉಪಯೋಗಿಸುವುದು ಕಂಡುಬರುತ್ತದೆ. ಉದಾ :

ನಾನೇನ್ಮಾಡೋಣ ಗದ್ದೇ ಕೆಲ್ಸಕ್ಕೋಗಾಣ?
ನಾವೆಲ್ಲಾ ಈವೊತ್ತು ಸಿನೆಮಾಕ್ಕೋಗೋಣ ಇತ್ಯಾದಿ.

ಸಂಭಾವನಾರ್ಥಪ್ರತ್ಯಯುಗಳು :

		ಏ. ವ.	ಬ. ವ.
ಉ. ಪು.		–ಏನು	–ಏವು
ಮ. ಪು.		–ಈ	–ಈರಿ
ಪ್ರ. ಪು. :	ಸ್ತ್ರೀಲಿಂಗ	–ಆನು	–ಆರು
,,	ಪುಲ್ಲಿಂಗ	–ಆಳು	–ಆರು
,,	ನ.ಲಿಂಗ	–ಈತು	–ಆವು

ಇವನ್ನು ಪೂರ್ಣಾರ್ಥಕ ಕೃದಂತ ಅವ್ಯಯಗಳೊಂದಿಗೆ ಉಪಯೋಗಿಸಿದಾಗ ಸಂಭಾವನಾರ್ಥಕ ಕ್ರಿಯಾಪದಗಳು ಸಿದ್ಧವಾಗುತ್ತವೆ. ಉದಾ :

		ಏ. ವ.	ಬ. ವ.
ಉ. ಪು.		ಕುಡಿದೇನು	ಕುಡಿದೇವು
ಮ. ಪು.		ಕುಡಿದೀ	ಕುಡಿದೀರ
ಪ್ರ. ಪು. :	ಪುಲ್ಲಿಂಗ	ಕುಡಿದಾನು	ಕುಡಿದಾರು
,,	ಸ್ತ್ರೀಲಿಂಗ	ಕುಡಿದಾಳು	ಕುಡಿದಾರು
,,	ನ.ಲಿಂಗ	ಕುಡಿದೀತು	ಕುಡಿದಾವು

ಇದೇ ರೀತಿ

ಮಾಡೇನು, ಇದ್ದೇನು ಇತ್ಯಾದಿ.

ನಿಷೇಧಾರ್ಥಪ್ರತ್ಯಯ : 'ಅಲ್ಲ'

ಈ ಪ್ರತ್ಯಯವು ಎಲ್ಲ ಪುರುಷವಚನಲಿಂಗಗಳಲ್ಲಿ ಒಂದೇ ತೆರನಾಗಿದೆ. ಉದಾ : (ನಾನು/ನೀನು/ಅವನು/ಅವರು/....) ಕುಡಿಯಲ್ಲ, ಮಾಡಲ್ಲ, ಇರಲ್ಲ ಇತ್ಯಾದಿ.

ಇರಲ್ಲ, ಇಲ್ಲ ಇವೆರಡು ಇರು ಧಾತುವಿನ ಇರ್ತ್ಾನೆ, ಇರ್ತಾರೆ.... (ಸಾಮಾನ್ಯ ವರ್ತಮಾನ) ಹಾಗೂ ಇದಾನೆ, ಇದಾರೆ.... (ಅದ್ಯತನವರ್ತಮಾನ) ಮುಂತಾದ ಎರಡು ಗುಂಪಿನ ರೂಪಗಳಿಗೆ ಅನುಕ್ರಮವಾಗಿ ಸಂವಾದಿಗಳಾಗಿರುವ ನಿಷೇಧಾರ್ಥಕ ರೂಪಗಳು. ಉದಾ :

(ಈವೊತ್ತು/ನಾಳೆ) ಅಣ್ಣ ಮನೇಲಿರ್ತಾನೆ/ಇರಲ್ಲ
(ಈವೊತ್ತು/ಈಗ) ಅಣ್ಣ ಮನೇಲಿದಾನೆ/ಇಲ್ಲ

ಮಾಡಲ್ಲ, ಇರಲ್ಲ ಮುಂತಾದ ನಿಷೇಧಾರ್ಥಕ ಕ್ರಿಯಾಪದಗಳನ್ನು ನಿರಂತರಾರ್ಥಕ ಕೃದಂತನಾಮಗಳೊಂದಿಗೆ ನಿಷೇಧಾರ್ಥಕ ಇಲ್ಲ ಪದವನ್ನು ಉಪಯೋಗಿಸಿ ರಚಿಸಿದ ವಾಕ್ಯಾಂಶಗಳ ಸೂಕ್ಷ್ಮ ರೂಪವೆಂದೂ ಪರಿಗಣಿಸಬಹುದು. ಉದಾ :

ಮಾಡಲ್ಲ (← ಮಾಡೋದು + ಇಲ್ಲ)
ಇರಲ್ಲ (← ಇರೋದು + ಇಲ್ಲ) ಇತ್ಯಾದಿ.

ಸಾಧಿತಧಾತುಪ್ರಕೃತಿಗಳು :

ಪ್ರಯೋಜಕಧಾತುಪ್ರಕೃತಿಗಳು :

ಧಾತು ಭಿನ್ನಪ್ರಕೃತಿಗಳಿಗೆ –ಸು ಪ್ರತ್ಯಯವನ್ನು ಸೇರಿಸಿ ಧಾತುಪ್ರಕೃತಿಗಳನ್ನು, ಧಾತುಪ್ರಕೃತಿಗಳಿಗೆ –ಸು ಪ್ರತ್ಯಯವನ್ನು ಸೇರಿಸಿ ಸಕರ್ಮಕ ಹಾಗೂ ಪ್ರಯೋಜಕ ಧಾತುಗಳನ್ನು ಸಿದ್ಧಗೊಳಿಸಲು ಕನ್ನಡದ ಸಾಧಾರಣ ನಿಯಮವನ್ನೇ ಅನುಸರಿಸಲಾಗುತ್ತದೆ. ಈ ಪ್ರತ್ಯಯಗಳು ಪರವಾದಾಗ ಮೂಲಪ್ರಕೃತಿಯ ಅಂತ್ಯಸ್ವರವು ವೈಕಲ್ಪಿಕವಾಗಿ ಲೋಪವಾಗುವುದೊಂದನ್ನುಳಿದರೆ, ಬೇರೇನೂ ಮಹತ್ವದ ಬದಲಾವಣೆ ಇಲ್ಲಿ ಕಂಡುಬರುವುದಿಲ್ಲ. ಉದಾ :

ಕುಡಿ, ಕುಡ್ಸು ಅಥವಾ ಕುಡಿಸು, ಕುಡಿಸ್ಸೇನಿ ಇತ್ಯಾದಿ.

ಅಶಕ್ಯಾರ್ಥಕ ಪ್ರಕೃತಿಗಳು :

ಇವನ್ನು ಉದ್ದೇಶಾರ್ಥ ಕೃದಂತ ಅವ್ಯಯಗಳೊಂದಿಗೆ ಆರ್ 'ಅಶಕ್ತವಾಗು' ಎಂಬ ಅಸ್ವತಂತ್ರ ಧಾತುವನ್ನುಪಯೋಗಿಸಿ ಸಿದ್ಧಗೊಳಿಸಲಾಗುತ್ತದೆ. ಉದಾ :

ಕುಡೀಲಾರೆ, ಮಾಡ್ಯಾರ ಇತ್ಯಾದಿ.

ಆತ್ಮವಾಚಕ ಧಾತುಪ್ರಕೃತಿಗಳು :

ಇವನ್ನು ಪೂರ್ಣಾರ್ಥಕ ಕೃದಂತ ಅವ್ಯಯಗಳೊಂದಿಗೆ ಕೊಳ್ಳು ಧಾತುವಿನ ರೂಪಗಳನ್ನುಪಯೋಗಿಸಿ ಸಾಧಿಸಲಾಗುತ್ತದೆ. ಉದಾ :

ನೊಯ್ಯು ನೊಂದ್ಕೋ, ನೊನ್‌ದ್ಕೋ
ಗೆಲ್ಲು ಗದ್ದುಕೋ
ಬರು ಬನ್ದುಕೋ, ಬನ್‌ದ್ಕೋ
ನೆಗು ನಕ್ಕೋ
ಕಲಿ ಕಲ್ತುಕೋ
ಒರು ಒತ್ತುಕೋ
ನಿಲ್ಲು ನಿನ್ತುಕೋ, ನಿತ್ತುಕೋ
ಇಡು ಇಟ್ಟುಕೋ
ಕೊಳ್ಳು ಕೊಣ್ಡುಕೋ
ಮಾಡು ಮಾಡಿಕೋ, ಮಾಡ್ಕೊ
ಬಿಡುಸು ಬಿಡುಸ್ಕೋ ಇತ್ಯಾದಿ.

ಕೆಳಗಿನ ಧಾತುಗಳಲ್ಲಿ ಕೃತ್ ಪ್ರತ್ಯಯವೂ ಧಾತುವಿನ ಅಂತಿಮ ಅಕ್ಷರವೂ ಲೋಪವಾಗಿವೆ. ಪರಿಣಾಮವಾಗಿ ಮೂಲಧಾತುಪ್ರಕೃತಿಗಳಿಗೇನೇ 'ಕೊಳ್ಳು' ಧಾತುವಿನ ರೂಪಗಳನ್ನು ನೇರವಾಗಿ ಹಚ್ಚಿದಂತೆ ಭಾಸವಾಗುತ್ತದೆ. ಉದಾ :

ಕುಡಿ ಕುಡ್ಕೋ
ಅಗಿ ಅಕ್ಕೋ
ಮುಗಿ ಮುಕ್ಕೋ
ಒಗಿ ಒಕ್ಕೊ ಇತ್ಯಾದಿ.

ಈ ಪ್ರತ್ಯಯಲೋಪವು ಕೆಲವೆಡೆ ವೈಕಲ್ಪಿಕವಾಗಿದೆ. ಉದಾ :

ಒ̱ದಿ ಒ̱ದ್ದುಕೋ, ಒ̱ದ್ಕೊ
ನೆ̱ನಿ ನೆ̱ನ್‌ದುಕೋ, ನೆ̱ನ್‌ಕೋ
ಉಣ್ಣು ಉಣ್ಡುಕೋ, ಉಣ್‌ಕೋ ಇತ್ಯಾದಿ.

ಆತ್ಮವಾಚಕ ಧಾತುರೂಪಗಳಲ್ಲಿ ಕಂಡುಬರುವ ಕೆಲವು ಮುಖ್ಯ ವೈಶಿಷ್ಟ್ಯಗಳನ್ನು ಕೆಳಗೆ ಕೊಟ್ಟ ನಿದರ್ಶನಗಳಲ್ಲಿ ಕಾಣಬಹುದು.

(ನಾನು) ಮಾಡ್ಕನ್ತೀನಿ
(ನಾವು) ಮಾಡ್ಕನ್ತಿವಿ

(ಅದು) ಮಾಡ್ಕಣುತ್ತೆ, ಮಾಡ್ಕಳುತ್ತೆ
(ಅವು) ಮಾಡ್ಕನ್ತವೆ

(ನಾನು) ಮಾಡ್ಕೊಣ್ಡೆ
(ನಾವು) ಮಾಡ್ಕಣ್ಡಿವಿ, ಣ್ಡುವು
(ಅದು) ಮಾಡ್ಕನ್ತು
(ಅವು) ಮಾಡ್ಕಣ್ಡುವು

(ನಾನು) ಮಾಡ್ಕಳ್ಳಿ, ಮಾಡ್ಕಳ್ಕೋಣ
(ನಾವು) ಮಾಡ್ಕಳ್ಳೋಣ
(ನೀನು) ಮಾಡ್ಕೊ
(ನೀವು) ಮಾಡ್ಕಳಿ
(ಅವನು) ಮಾಡ್ಕಳ್ಳಿ
(ಅವರು) ಮಾಡ್ಕಳಿ

(ಯಾರೂ) ಮಾಡ್ಕಣಲ್ಲ

ಮಾಡ್ಕೊಣಾದು, ಮಾಡ್ಕೆಣೋದು
ಮಾಡ್ಕಣ್ಡು
ಮಾಡ್ಕಣ್ತಾ
ಮಾಡ್ಕಳ್ದೇ ಇತ್ಯಾದಿ.

ಕೆಲವು ಆರಿಸಿದ ಶಬ್ದಗಳು :

ಅಟ್ಟಿ = ಗುಡಿಸಲುಗಳ ಗುಂಪು, ಗುಡಿಸಲಿನ ಮುಂದೆ ತೆರವಾದ ಭಾಗ; ಮಾದ್ರಟ್ಟಿ = ಮಾದಿಗರ ಕೇರಿ; ಮಟ = ಶಾಲೆ; ಕೋರೀಮನೆ = ಬಾಡಿಗೆ ಮನೆ; ಉಲ್ಸೂರು = ಮನೆಯ ಮುಂದೆ, ಒಂದೆ ಅಥವಾ ಪಕ್ಕಗಳಲ್ಲಿ ಇಳಿಬಿಟ್ಟ ಛಾವಣಿ, (ಹುಲ್ಲು + ಸೂರು); ಪಸ್ಲು = ಹೊಸ್ತಿಲು; ರಾಡ = ಬಾಗಿಲುಗಳಿಗೆ ಉಪಯೋಗಿಸುವ ಕಬ್ಬಿಣದ ಕೀಲು; ಬೆಣೆ = ಕೀಲು; ತಣಿಗೆ = ಊಟದ ಬಟ್ಟಲು; ಚೊಂಬು = ತಂಬಿಗೆ; ಕೊಳ್ದಾಪ್ಲಿ = ಒಂದು ಜಾತಿಯ ಕೊಡ; ತೋರೇಮಣೆ = ತುರಿಮಣೆ; ಜಳ್ಡಿ = ಜರಡೆ; ದಿಣ್ಡು = ಲಟ್ಟಣೆ; ಅಲ್ಲೆ = ಸಟ್ಟುಗ; ಊದೇಕೊಳ್ವೆ = ಊದುಗೊಳವೆ; ವಳ್ಕಲ್ಲು = ಕಡೆಯುವ ಕಲ್ಲು (ಒರಳು + ಕಲ್ಲು); ಬರ್ಲು = ಒಡಿಸೂಡಿ, ಕಸಬರಿಕೆ; ಕುಡ್ಲು = ಕುಡುಗೋಲು, ಕತ್ತಿ; ಮಚ್ಚು = ದೊಡ್ಡ ಕತ್ತಿ;

ಬೀಗದೆಸ್ಲ್ = ಕೀಲಿಕೈ; ಸಾರ್ವೆ · ಒಂದರ ಮೇಲೊಂದರಂತೆ ಕಟ್ಟಿದ ಬಿದಿರಿನ ಅಟ್ಟೆಗಳು; ಮಂಜಿಕ್ರ್ = ಬುಟ್ಟಿ; ಬುಡ್ಡೀದೀಪ = ಆಕಾಶದೀಪ; ಎಪ್ಪು, ಯಪ್ಪು = ಹಪ್ಪು; ಈರುಳ್ಳಿ = ಉಳ್ಳಾಗಡ್ಡೆ, ನೀರುಳ್ಳಿ; ದನಿಯ = ಕೊತ್ತುಂಬರಿ; ಅಳ್ಸ್ಲಣ್ಣ್ = ಹಲಸಿನ ಹಣ್ಣು; ಮೆಣಸು = ಕಾಳುಮೆಣಸು, ಒಳ್ಳೆಮೆಣಸು; ಮೆಣಸಿನಕಾಯಿ = ಕೆಂಪು ಮೆಣಸು; ಹಸೀ ಮೆಣಸಿನಕಾಯಿ = ಹಸಿರು ಮೆಣಸಿನ ಕಾಯಿ; ಮುಳುಗಾಯಿ = ಗುಳ್ಳದ ಕಾಯಿ; ಈಚು = ಎಳೆ ಕಾಯಿ, ಮಿಡಿ; ಕಂದು = ಬಾಳೆ ಗಿಡ; ಅಳ್ಳೀಗಿಡ = ಹರಳೆ ಗಿಡ; ಅಣ್ಬು = ಒಳ್ಳಿ, ಮಲ್ಲಿಗೇಯಣ್ಬು; ಪುಳ್ಳೆ = ಚಿಕ್ಕಚಿಕ್ಕ ಗೆಲ್ಲುಗಳು; ತರಗಲು = ಒಣಗಿದ ಎಲೆಗಳು; ಗುಸ್ಜು = ಕಾಯಿ ಸಿಪ್ಪೆಯ ಒಳನಾರು, ಜುಂಗು (ತುಳು : ಪೂಸೆಪ್ಪು); ಮಟ್ಟೆ = ತೆಂಗಿನಕಾಯಿಯ ಸಿಪ್ಪೆ; ನೆಳ್ಳ್ = ನೆರಳು; ಅಬೆ = ಆವಿ, ಹಬೆ; ಒಸ್ರಿ = ಒಸರು (ತುಳು : ತೆಣಸು); ಜೊಳ್ಳ್ = ಪೊಟ್ಟು ಬತ್ತ; ಒಟ್ಟು = ಅಕ್ಕಿಧೂಳು; ತವ್ಡ = ಬತ್ತದ ಸಿಪ್ಪೆ (ತುಳು : ಉಮಿ); ಬದಿ = ಗದ್ದೆಯ ಅಂಚು; ಕನ್ರಿ = ಬೆಳೆ ಬೆಳೆಸಲಾಗದ ಭೂಮಿ, ಬಂಜರು ನೆಲ; ಕಪ್ಪಿ = ಬಾವಿ ಅಗೆಯುವಾಗ ಎತ್ತುಗಳನ್ನು ಕಟ್ಟಿ ನೀರೆಳೆಯುವ ಯಂತ್ರ, ಏತ; ಬಾನಿ = ಏತದಲ್ಲಿ ನೀರೆತ್ತುವ ಪಾತ್ರ; ಗುಣಿಕೆ = ಉರುಳು ಗಂಟು, ಕುಣಿಕೆ; ಗೊಪ್ಪೆ = ಗೋಣಿ ಚೀಲಗಳಿಂದ ತಯಾರಿಸಿದ ಗುರುಬು; ಆಯ್ತಾರ = ಆದಿತ್ಯವಾರ, ಭಾನುವಾರ; ಬೇಸ್ತಾರ = ಬೃಹಸ್ಪತಿವಾರ, ಗುರುವಾರ; ನಾಳ್ದು = ನಾಡಿದ್ದು; ಎಳ್ಡು = ಎರಡು; ಯೋಳು = ಏಳು; ಇಪ್ಪತ್ರೊಮ್ಬತ್ತು = ಇಪ್ಪತ್ತೊಂಭತ್ತು; ದೀಡು = ಈಡು, ಆಸ್ತಿಯನ್ನು ಒತ್ತೆಯಾಗಿ ಇರಿಸುವುದು; ಎಡೆ = ದೈವ ದೇವತೆಗಳಿಗೆ ಅರ್ಪಿಸುವ ಬಲಿ; ಮುಯ್ಯಿ = ಉಡುಗೊರೆ, (ತುಳು : ಮುಡಿಪು); ಸೊಮ್ಬೇರಿ = ಸೋಮಾರಿ; ಪಕ್ಲ್ = ಸಂಸಾರ, ಕುಟುಂಬ, ಪರಿವಾರ; ಜುಗ್ಗ = ಕೃಪಣ, ಜಿಪುಣ, ಆಸೆಬುರುಕ; ಪುಕ್ಲ = ಪುಕ್ಕ; ಪುಕ್ಲಿ = ಪುಕ್ಕಿ; ಪುಕ್ಲು = ಪುಕ್ಕತನ; ಕುಣ್ಬ್ಳ = ಕುಂಟುವಿಕೆ; ಕೊಕ್ಕ = ವಕ್ರ ವ್ಯವಹಾರ, ಮೊಂಡುತನ; ಪುಜ್ಗಿ = ಶ್ರುತಿಬುರುಡೆ; ಚಿನ್ನಿದಾಣ್ಡು = ಒಂದು ತೆರನಾದ ಆಟ (ಮರಾಠಿ : ವಿಟ್ಟಿದಾಂಡು, ತುಳು : ಕುಟ್ಟಿದೊಣ್ಣೆ); ಕುಣ್ಟೆಬಿರೆ = ಒಂದು ಕಾಲಿನಲ್ಲಿ ಕುಂಟುತ್ತಾ ಆಡುವ ಆಟ, ಟೊಂಕಾಟ; ಅಕಾಡ = ಕುಸ್ತಿಯ ಮೈದಾನ; ಸಾದ್ಲೆ = ಕುಸ್ತಿಯ ಅಭ್ಯಾಸ; ಗೋಮಳೆ = ಕತ್ತು; ಕೊಳ್ಳು = ಕೋಣ ಅಥವಾ ಎತ್ತು ಮುಂತಾದ ಪ್ರಾಣಿಗಳ ಕೊರಳು; ಕಳ್ಳು = ಕರಳು; ಬೆಳ್ಳು = ಬೆರಳು; ಅಸ್ತ = ಕೈ, ಹಸ್ತ; ಗದ್ದ = ಗಲ್ಲ; ಸೊಣ್ಡ್ಳ = ಸೊಂಡಿಲು; ಮೂಗಿನ್ಸುಣ್ಡೆ = ಮೂಗಿನ ಸೊಳ್ಳೆ; ಪುಕ್ಕ = ಗರಿ; ಗರಿ = ನವಿಲುಗರಿ; ತುಪ್ಪ = ಉಣ್ಣೆ; ಬೊಬ್ಬೆ = ಗುಳ್ಳೆ; ಗೊಣ್ಣೆ = ಸಿಂಬಳ; ಅಜ್ವಾರ = ಅಂಗಾತನೆ; ಮಕಾಡೆ = ಮುಖ ಕೆಳಗಾಗಿಸಿ; ಗ್ವಾಡೆಯಾಗಿ = ಬದಿಯಲ್ಲಿ; ಮುಸ್ಟ್ಲ = ಮುಂದಿನ; ಇಸ್ಟ್ಲ = ಇಂದಿನ;

ಅಜ್ಗ = ಹಾಗೆ; ಇಜ್ಗ = ಹೀಗೆ; ಏಜ್ಗ = ಹೇಗೆ: ತತ್ರಿ = ಕೋಳಿ ಮೊಟ್ಟೆ; ತೋಡ = ಒಂದು ಜಾತಿ ಇಲಿ; ಅವಾ್ರಣೆ = ಅರಣೆ; ತಿಗಣೆ = ತಗಣೆ; ಗೆಜ್ಲ = ಗೆದ್ದಲು: ಇರ್ಬೆ = ಇರುವೆ: ಗೊದ್ದ = ಕಪ್ಪು ಇರುವೆ; ಚೋಳು = ಚೇಳು; ಒರ್ಕೆ = ಖಾಲಿ ಜೇನುತೊಟ್ಟಿ; ಮಜಾ್ಕ್ನ = ಮುಂಗುಸಿ; ಕಳ್ಡಿ = ಕರಡಿ; ಮೊಸ್ತ್ಲ = ಮೊಸಳೆ; ಎಣ್ಗರ = ಹೆಣ್ಣುಕರು; ಓರಿಕರ = ಗಂಡುಕರು; ಮಿದಿ = ಕಲಸು: ಸೆಳಿ, ಸೆಣ = ನೋಯು: ತುಣ = (ಹೊಟ್ಟೆ) ಒತ್ತು: ಗಿಡುಗು = (ತೂತು) ತುಂಬು; ಸುಣ್ಡು = ಸುರುಟು; ಮುರಿ = ಕಿವುಡಾಗು; ಕಕ್ಕು = ಕಾರು; ಜಿಗುಟು = ಚಿವುಟು; ಉಳ್ಡು = ಉರುಳಾಡು; ಒಳ್ಡು = ಹೊರಳಾಡು.

• •

ಚಿಕ್ಕಮಗಳೂರು ಜಿಲ್ಲೆಯ ಕನ್ನಡ

● ಕೆ. ಎಸ್. ಗುರುಬಸವೇಗೌಡ

ಪೀಠಿಕೆ :

ನಾನು ಪ್ರಥಮತಃ ಚಿಕ್ಕಮಗಳೂರು ಜಿಲ್ಲೆಗೆ ಸೇರಿದವನಾದರೂ, ವಿದ್ಯಾಭ್ಯಾಸ ಹಾಗೂ ನೌಕರಿಯ ಕಾರಣಗಳಿಂದ ಆ ಜಿಲ್ಲೆಯನ್ನು ಬಿಟ್ಟು ಬಹಳ ವರ್ಷಗಳಾದವು. ಅಂದರೆ ಚಿಕ್ಕಮಗಳೂರು ಜಿಲ್ಲೆಯ ಕನ್ನಡ ಭಾಷೆಯಲ್ಲಿರಬಹುದಾದ ಕೆಲವು ವೈಶಿಷ್ಟ್ಯಗಳೇ ನನ್ನ ಕನ್ನಡದಲ್ಲಾಗಲಿ ಅಥವಾ ಮತ್ತಾವುದೇ ಜಿಲ್ಲೆಯ ಕನ್ನಡದಲ್ಲಾಗಲಿ ಕಾಣದೇ ಇರಬಹುದು. ಈ ಜಿಲ್ಲೆಯ ಕನ್ನಡಭಾಷೆಯ ನಿರಂತರ ಸಂಪರ್ಕವು ಕಾರಣಾಂತರದಿಂದ ತಪ್ಪಿಹೋದಾಗ ಪರಿಸರ ಪ್ರಭಾವದಿಂದ ಭಾಷೆಯನ್ನು ಆಡುವ ರೀತಿಯಲ್ಲಿ ಬದಲಾವಣೆಯಾಗುವುದು ಆಶ್ಚರ್ಯವೇನಲ್ಲ. ಆದರೂ ಕೂಡ ಈ ಲೇಖನಸಂಬಂಧದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ಷೇತ್ರಕಾರ್ಯವನ್ನು ಕೈಕೊಂಡಿದ್ದದ್ದೇ ಆಗಿದ್ದರೆ ಈ ವಿಷಯವನ್ನು ಮತ್ತಷ್ಟು ಶಾಸ್ತ್ರೀಯವಾಗಿ ವಿಶ್ಲೇಷಿಸಬಹುದಾಗಿತ್ತು. ಆದರೆ ಅಂತಹ ಕ್ಷೇತ್ರಕಾರ್ಯವು ಸಾಧ್ಯವಾಗಲಿಲ್ಲ. ಆದುದರಿಂದ ನನ್ನ ಸ್ವಂತ ಸ್ಥಳವಾದ ಕಡೂರು ತಾಲೂಕಿನ ಕಂಚುಗಲ್ ಎಂಬ ಗ್ರಾಮದ ಸುತ್ತಮುತ್ತ ಪ್ರಚಲಿತವಾಗಿರುವ ಕನ್ನಡದ ಕೆಲವು ಅಂಶಗಳನ್ನು ಆಧಾರವಾಗಿಟ್ಟುಕೊಂಡು ಈ ಲೇಖನವನ್ನು ಸಿದ್ಧಪಡಿಸಿದ್ದೇನೆ.

ಭೌಗೋಲಿಕ ವಿಶೇಷ :

ಚಿಕ್ಕಮಗಳೂರು ಜಿಲ್ಲೆಯ ವಿಸ್ತೀರ್ಣವು ೭,೧೯೫ ಕಿಲೋಮೀಟರುಗಳಿದ್ದು. ಈ ಜಿಲ್ಲೆಯು 'ಮಲೆನಾಡು' ಹಾಗೂ 'ಬಯಲುಸೀಮೆ'ಗಳಿಂದ ಕೂಡಿದೆ. ೧೯೭೧ರ ಜನಗಣತಿಯ ಪ್ರಕಾರ ಈ ಜಿಲ್ಲೆಯಲ್ಲಿ ೭,೩೬,೬೪೭ ಜನಸಂಖ್ಯೆ ಇದ್ದು. ಇವರಲ್ಲಿ ೨,೫೭,೩೦೫ ಜನ ವಿದ್ಯಾವಂತರಿದ್ದಾರೆ. ಈ ಜಿಲ್ಲೆಯಲ್ಲಿ ಮಾತನಾಡುವ ಕನ್ನಡ ಭಾಷಾಪ್ರಭೇದಗಳನ್ನು ತಿಳಿಸುವ ಗ್ರಂಥಗಳಾಗಲೀ. ಲೇಖನಗಳಾಗಲೀ ಇಲ್ಲಿಯವರೆಗೆ ಪ್ರಕಟವಾದಂತೆ ಕಾಣುವುದಿಲ್ಲ.

ಭಾಷಾಪ್ರಭೇದಗಳು :

ಮೇಲೆ ಹೇಳಿದ ನನ್ನ ಹುಟ್ಟೂರಾದ ಕಂಚುಗಲ್ ಗ್ರಾಮದ ಪರಿಸರದಲ್ಲಿನ ಕನ್ನಡದ ಆಡುಭಾಷೆಯಲ್ಲಿ ಕಂಡುಬರುವ ಕೆಲವು ಪ್ರಭೇದಗಳನ್ನು ಗಮನಿಸೋಣ.

ವರ್ಣಮಾಲೆ :

ಸ್ವರಗಳು :

ಇ	ಈ	ಉ	ಊ
ಎ	ಏ	ಒ	ಓ
ಆ್ಯ	ಆ್ಯ	ಅ	ಆ

ವ್ಯಂಜನಗಳು :

ಪ್	ತ್	ಟ್	ಚ್	ಕ್
ಬ್	ದ್	ಡ್	ಜ್	ಗ್
ಮ್	ನ್	ಣ್		
	ಸ್	ಶ್	(ಷ್)	(ಹ್)
	ರ್			
	ಲ್	ಳ್		
ವ್		ಯ್		

ಸ್ವರಗಳು : (i) ಈ ಪರಿಸರದಲ್ಲಿ ಶಿಷ್ಟಭಾಷೆಯಲ್ಲಿರುವ ಸ್ವರಗಳಿಗಿಂತ 'ಆ್ಯ' ಮತ್ತು 'ಆ್ಯ' ಎಂಬ ಎರಡು ವಿಸ್ತೃತೋಷ್ಠ ಅರ್ಧವಿವೃತಹ್ರಸ್ವ ಮತ್ತು ದೀರ್ಘ ಸ್ವರಗಳು ಬಳಕೆಯಲ್ಲಿವೆ.

ಉದಾ : ಬ್ + ಆ್ಯ + ಳ್ + ಎ – ಬ್ಯಳೆ 'ಬೆಳೆ'
ಬ್ + ಆ್ಯ + ಳ್ + ಎ – ಬ್ಯಾಳೆ 'ಬೇಳೆ'

(ii) ಸಾಮಾನ್ಯವಾಗಿ ಉಳಿದ ಉಪಭಾಷೆಗಳಲ್ಲಿ ಇದ್ದಂತೆ ಪದಾಂತ್ಯದಲ್ಲಿ ಬರುವ ಸ್ವರಗಳು ಅರ್ಧದೀರ್ಘತ್ವವನ್ನು ಹೊಂದಿರುತ್ತವೆ. ಪದಾದಿಯಲ್ಲಿ ಬರುವ ಎ, ಏ ಸ್ವರಗಳು ಯಕಾರದ ಒತ್ತಡವನ್ನೂ ಒ, ಓ ಸ್ವರಗಳು ವಕಾರದ ಒತ್ತಡವನ್ನೂ ಹೊಂದಿರುತ್ತವೆ.

ವ್ಯಂಜನಗಳು : ವ್ಯಂಜನಗಳಲ್ಲಿ ಮಹಾಪ್ರಾಣ ಕಂಡುಬರುವುದಿಲ್ಲ. ಆದರೆ

ಕೆಲವು ಸಂದರ್ಭದಲ್ಲಿ ಯಾವುದಾದರೂ ಪದವನ್ನು ಒತ್ತಿ ಹೇಳುವಾಗ ಅಲ್ಲಿಯ ಅಲ್ಪಪ್ರಾಣವು ಮಹಾಪ್ರಾಣವಾಗಿ ಪರಿಣಮಿಸಬಹುದು. ಉದಾ :

ಘಟ್ಟಿ 'ಗಟ್ಟಿ'
ಥಿನ್ನು 'ತಿನ್ನು'

ಸ, ಶ ಪ್ರಭೇದವಿದ್ದು, ಅವು ಸ್ವತಂತ್ರ ವರ್ಣಗಳಾಗಿ ಬಳಕೆಯಲ್ಲಿವೆ. ಆದರೆ 'ಷ್' ಮಾತ್ರ ಸ್ವತಂತ್ರವರ್ಣವಾಗಿ ಬಳಕೆಯಿಲ್ಲ. ಆದರೆ ಇದು ಧ್ವನಿಪ್ರಭೇದವಾಗಿ ಯಾವ ವರ್ಣಕ್ಕೆ (ಸ, ಶ) ಹತ್ತಿರ ಎಂದು ಹೇಳುವುದು ಸಧ್ಯಕ್ಕೆ ಸಾಧ್ಯವಾಗುತ್ತಿಲ್ಲ.

ಹಕಾರದ ಉಚ್ಚಾರಣೆಯು ಇಂತಹ ಜಾತಿಯವರಲ್ಲಿ ಇದೆ, ಇಂತಹ ಜಾತಿಯವರಲ್ಲಿ ಇಲ್ಲ ಎಂದು ನಿರ್ದಿಷ್ಟವಾಗಿ ಹೇಳಬೇಕಾದರೆ, ಪರಿಸರದಲ್ಲಿ ಇರುವ ಅನೇಕ ಜಾತಿಗಳವರು ಆಡುವ ಕನ್ನಡವನ್ನು ಅಭ್ಯಾಸ ಮಾಡಬೇಕು. ಆದರೆ ಕೆಲವರು ಹಕಾರವಿಲ್ಲದ ಕಡೆ ಇದನ್ನು ಉಪಯೋಗಿಸುವುದನ್ನು ಕೇಳಿದ್ದೇನೆ. ಈ ತರಹದ ಉಚ್ಚಾರಣೆಯನ್ನು ಭಾಷಾವಿಜ್ಞಾನಿಗಳು ಅತ್ಯೋಕ್ತಿ (Hypercorrection) ಎಂದು ಕರೆಯುತ್ತಾರೆ. ಉದಾ :

ಹಲಂಕಾರ 'ಅಲಂಕಾರ'
ಹಿದೇ 'ಇದೇ'

ನಾಮಾಕೃತಿಮಾಗಳು :

(೧) ಶಿಷ್ಟಕನ್ನಡದ ಬಹುವಚನಪ್ರತ್ಯಯ –ಗಳು, ಈ ಉಪಭಾಷೆಯಲ್ಲಿ –ಗ್ಳು ಆಗುತ್ತದೆ. ಉದಾ :

ಕುರಿಗ್ಳು 'ಕುರಿಗಳು'
ಮರಗ್ಳು 'ಮರಗಳು'

(೨) ಶಿಷ್ಟಕನ್ನಡದ –'ಗಿತ್ತಿ' ಸ್ತ್ರೀಲಿಂಗಸಾಧಿತನಾಮಪ್ರಕೃತಿಯು, ಇಲ್ಲಿ –'ಓಳು' ಆಗುತ್ತದೆ.

ಅಗಸಗಿತ್ತಿ > ಅಗಸ್ರೋಳು
ಮಾದಗಿತ್ತಿ > ಮಾದಿಗ್ರೋಳು

(೩) (i) ದ್ವಿತಿಯಾ ವಿಭಕ್ತಿಪ್ರತ್ಯಯ –'ಅನ್ನು' ವಿಗೆ ಬದಲಾಗಿ –'ನ್' ಪ್ರತ್ಯಯವು ಮಾನವಪ್ರಕೃತಿಗಳಮೇಲೆ ಮಾತ್ರ ಹತ್ತುತ್ತದೆ. ಬೇರೆ ಕಡೆಗಳಲ್ಲಿ ರಿಕ್ತಾವತಾರ(φ)ವಿರುತ್ತದೆ. ಉದಾ :

(ಅ) ಮಾವನನ್ನು > ಮಾವನ್
ಅಣ್ಣನನ್ನು > ಅಣ್ಣನ್

(ಆ) ಕರುವನ್ನು > ಕರ
ಮರವನ್ನು > ಮರ

(ii) (ಅ) ತೃತಿಯಾ ವಿಭಕ್ತಿಪ್ರತ್ಯಯ –'ಇಂದ' ಹತ್ತುವಾಗ ಪ್ರಕೃತಿಯ ಇ, ಎ ಅಂತ್ಯಸ್ವರಗಳು ದೀರ್ಘವಾಗುತ್ತವೆ.

ಉದಾ : ಕುರಿಯಿಂದ > ಕುರೀಂದ
ಮನೆಯಿಂದ > ಮನೇಂದ
ಹುಡುಗಿಯಿಂದ > ಹುಡುಗೀಂದ

(ಆ) ಈ ವಿಭಕ್ತಿಪ್ರತ್ಯಯವು ಅಕಾರಾಂತ ಮಾನವಪ್ರಕೃತಿಗಳ ಮೇಲೆ ಹತ್ತುವಾಗ ಅಂತ್ಯಸ್ವರವು ಅದೃಶವಾಗಿ, ಆ ಸ್ಥಾನದಲ್ಲಿ ನಕಾರವು ಬರುತ್ತದೆ. ಉದಾ :

ಮಾವನಿಂದ > ಮಾವ್‌ನಿಂದ
ತಮ್ಮನಿಂದ > ತಮ್‌ನಿಂದ

(ಇ) ಉಕಾರಾಂತ ಪ್ರಕೃತಿಯ ಮೇಲೆ ಹತ್ತುವಾಗ ಅಂತ್ಯಸ್ವರವು ಅದೃಶವಾಗುತ್ತದೆ. ಉದಾ :

ಕಾಡು + ಇಂದ > ಕಾಡಿಂದ 'ಕಾಡಿನಿಂದ'
ಊರು + ಇಂದ > ಊರಿಂದ 'ಊರಿನಿಂದ'

(iii) ಶಿಷ್ಟಕನ್ನಡದ ಸಪ್ತಮಿ ವಿಭಕ್ತಿಪ್ರತ್ಯಯ –'ಅಲ್ಲಿ' ಎಂಬುದು ಈ ಉಪಭಾಷೆಯಲ್ಲಿ 'ಅಲಿ/ಲಿ' ಆಗುತ್ತದೆ. ಉದಾ :

ಕೆರೆಯಲ್ಲಿ > ಕೆರೇಲಿ
ಕುರಿಯಲ್ಲಿ > ಕುರೀಲಿ
ಊರಲ್ಲಿ > ಊರ್‌ಲಿ
ಮರದಲ್ಲಿ > ಮರ್‌ದಲಿ

ಕ್ರಿಯಾಕೃತಿಮಾಗಳು :

ಸಾಮಾನ್ಯವಾಗಿ ಕಾಲವನ್ನು ಭೂತ, ವರ್ತಮಾನ ಮತ್ತು ಭವಿಷತ್ ಎಂದು ಮೂರು ಭಾಗಗಳಾಗಿ ವಿಂಗಡಿಸುವುದನ್ನು ನಾವು ನೋಡಿದ್ದೇವೆ. ಆದರೆ ಆಧುನಿಕ ಭಾಷಾವಿಜ್ಞಾನಿಗಳಲ್ಲಿ ಅನೇಕರು ಕ್ರಿಯೆ ಈಗ ನಡೆಯುವುದಕ್ಕೂ ಮುಂದೆ ನಡೆಯು

ವುದಕ್ಕೂ ಇರುವ ವ್ಯತ್ಯಾಸವನ್ನು ಕಳೆದುಕೊಂಡಿರುವುದರಿಂದ ವರ್ತಮಾನ, ಭವಿಷತ್ ಕಾಲಗಳನ್ನು ಅಭೂತಕಾಲ (Non-past) ವೆಂದು ಪರಿಗಣಿಸಿದ್ದಾರೆ.

ಈಗ 'ಬರು' / 'ತರು' ಎಂಬ ಎರಡು ಕ್ರಿಯಾಧಾತುಗಳು, ಈ ಎರಡು ಕಾಲಗಳಲ್ಲಿ ಶಿಷ್ಟಕನ್ನಡದ ರೂಪಗಳಿಗಿಂತ ಯಾವ ರೀತಿಯಲ್ಲಿ ಭಿನ್ನವೆಂಬುದನ್ನು ನೋಡೋಣ. ಬೇರೆ ಕ್ರಿಯಾಧಾತುಗಳಲ್ಲಿ ಆಗುವ ಬದಲಾವಣೆಯನ್ನು ಇಲ್ಲಿ ಚರ್ಚಿಸಿಲ್ಲ.

'ಬರು'

ಅಭೂತಕಾಲ :

		ಏ. ವ.	ಬ. ವ.
ಉ. ಪು.		ಬತ್ತೀನಿ (ಬರುತ್ತೇನೆ)	ಬತ್ತೀವಿ (ಬರುತ್ತೇವೆ)
ಮ. ಪು.		ಬತ್ತೀಯ (ಬರುತ್ತೀಯ)	ಬತ್ತೀರಿ (ಬರುತ್ತೀರಿ)
ಪ್ರ. ಪು. :	ಪುಲ್ಲಿಂಗ	ಬತ್ತಾನೆ (ಬರುತ್ತಾನೆ)	ಬತ್ತಾರೆ (ಬರುತ್ತಾರೆ)
,,	ಸ್ತ್ರೀಲಿಂಗ	ಬತ್ತಾಳೆ (ಬರುತ್ತಾಳೆ)	
,,	ನ.ಲಿಂಗ	ಬತ್ತದೆ (ಬರುತ್ತದೆ)	ಬತ್ತವೆ (ಬರುತ್ತವೆ)

ಭೂತಕಾಲ :

		ಏ. ವ.	ಬ. ವ.
ಉ. ಪು.		ಬಂದೆ (ಬಂದೆ)	ಬಂದು (ಬಂದೆವು)
ಮ. ಪು.		ಬಂದೆ (ಬಂದೆ)	ಬಂದ್ರಿ (ಬಂದಿರಿ)
ಪ್ರ. ಪು. :	ಪುಲ್ಲಿಂಗ	ಬಂದ (ಬಂದನು)	ಬಂದ್ರು (ಬಂದರು)
,,	ಸ್ತ್ರೀಲಿಂಗ	ಬಂದ್ಲು (ಬಂದಳು)	
,,	ನ.ಲಿಂಗ	ಬಂತು (ಬಂದಿತು)	ಬಂದು (ಬಂದವು)

ವಿಧ್ಯರ್ಥ :

ವಿಧ್ಯರ್ಥಪ್ರತ್ಯಯವು ಪ್ರಥಮಪುರುಷ ಬಹುವಚನದಲ್ಲಿ –'ಓಣ'ದ ಬದಲಾಗಿ –'ಅನ' ಆಗುತ್ತದೆ. ಉದಾ :

ಬರೋಣ > ಬರನ

ತಿನ್ನೋಣ > ತಿನ್ನನ

ಅಭೂತಭಾವಕ್ರಿಯಾರೂಪವು ಈ ಉಪಭಾಷೆಯಲ್ಲಿ –'ಓನು' ಆಖ್ಯಾತ ಪ್ರತ್ಯಯವನ್ನು ತೆಗೆದುಕೊಳ್ಳುತ್ತದೆ. ಉದಾ :

ಬರೋನು 'ಬರುವವನು'

ತಿನ್ನೋನು 'ತಿನ್ನುವವನು'

ಇದರ ನಿಷೇಧವು –'ದೋನು' ಎಂಬ ಆಖ್ಯಾತಪ್ರತ್ಯಯವನ್ನು ಹೊಂದುತ್ತದೆ. ಈ ಆಖ್ಯಾತಪ್ರತ್ಯಯವು ಹತ್ತುವಾಗ, ಧಾತುವಿನ ಅಂತ್ಯಸ್ವರ ಇಕಾರವಿದ್ದಲ್ಲಿ ಅದು ದೀರ್ಘವಾಗುತ್ತದೆ (ಶಿಷ್ಟಕನ್ನಡದ ಎಕಾರಾಂತ ಧಾತುಗಳು ಈ ಉಪಭಾಷೆಯಲ್ಲಿ ಇಕಾರಾಂತವಾಗಿವೆ). ಉದಾ :

ಬರೀದೋನು 'ಬರಿಯುದವನು'

ಕರೀದೋನು 'ಕರಿಯುದವನು'

ತಿನ್‌ದೋನು 'ತಿನ್ನದವನು'

ಶಿಷ್ಟಕನ್ನಡದ 'ಕೂಡದು' ಮತ್ತು 'ಬಾರದು' ಎಂಬ ನಿಷೇಧರೂಪಗಳು, ಈ ಉಪಭಾಷೆಯಲ್ಲಿ ವಿರಳವಾಗಿ ಬಳಕೆಯಲ್ಲಿವೆ. ಆದರೆ 'ಕಾದು' ಎಂಬ ರೂಪವು ಹೆಚ್ಚು ಬಳಕೆಯಲ್ಲಿದೆ. ಉದಾ :

ಬರಕಾದು 'ಬರಕೂಡದು, ಬರಬಾರದು'

ಅಳಕಾದು 'ಅಳಕೂಡದು, ಅಳಬಾರದು'

ಶಿಷ್ಟಕನ್ನಡದಲ್ಲಿ ಹೆಚ್ಚು ಬಳಕೆಯಲ್ಲಿಲ್ಲದ ಕೆಲವು ಪದಗಳು, ಈ ಉಪಭಾಷೆಯಲ್ಲಿ ಕಂಡುಬರುತ್ತವೆ. ಗಂಗ್ಳ – 'ಊಟದ ತಟ್ಟೆ'; ತಡಿ – 'ಹಾಸಿಗೆ', ಬವಣೆ – 'ಬಣವೆ'; ತಾಳ್ಳು – 'ಪಲ್ಯ'; ಇಂಡಿ – 'ಚಟ್ನಿ'; ಕುಟ್ಟೆಂಡಿ – ಹುಚ್ಚೆಳ್ಳನ್ನು ಇತರ ಸಾಂಬಾರ ಪದಾರ್ಥಗಳೊಂದಿಗೆ ಬೆರಸಿ ಕುಟ್ಟಿ ತಯಾರಿಸಿದ ಚಟ್ನಿ (ಧಾರವಾಡ ಕನ್ನಡದಲ್ಲಿ

'ಕುರೇಶಾಣಿ'); ಎಸರು – 'ಸಾರು'; ಪಡ್ಸಾಲೆ – 'ಜಗಲಿ'; ಜಿರ್ನೆ – 'ಬೇಗ'; ಮನ್ದ್ಯಾಳ – 'ನಿವೇಶನ'; ನೆರ್ವಣಿಗೆ – 'ಮೆರವಣಿಗೆ' ಇತ್ಯಾದಿ.

ಮೇಲೆ ಹೇಳಿರುವ ಭಾಷಾಪ್ರಭೇದಗಳು, ಕೇವಲ ಈ ಜಿಲ್ಲೆಯ ಆದರಲ್ಲೂ ನಮ್ಮ ಊರಿನ ಪರಿಸರದ ಕನ್ನಡಕ್ಕೆ ಮಾತ್ರ ಮೀಸಲಾದವುಗಳು ಎಂದು ಹೇಳಲಾಗುವುದಿಲ್ಲ. ಈ ಪ್ರಭೇದಗಳು ಬೇರೆ ಜಿಲ್ಲೆಯ ಕನ್ನಡದಲ್ಲೂ ಕಂಡುಬರಬಹುದು.

• •

ಹಾಸನ ಜಿಲ್ಲೆಯ ಕನ್ನಡ

● ಎಂ. ಎನ್. ಲೀಲಾವತಿ

ಹಾಸನ ಜಿಲ್ಲೆ, ಕರ್ನಾಟಕದಲ್ಲಿ ಬಹು ಪ್ರಮುಖವಾದ ಭೌಗೋಲಿಕ ಪರಿಸರದಲ್ಲಿದೆ.[1] ಮಲೆನಾಡು ಮತ್ತು ಬಯಲುನಾಡುಗಳೆರಡಕ್ಕೂ ಪ್ರವೇಶದ್ವಾರವಾಗಿ ನಿಂತಿರುವ ಹಾಸನ, ಪ್ರಮುಖ ವ್ಯಾಪಾರಕೇಂದ್ರಗಳಲ್ಲಿ ಒಂದು. ಮಲೆನಾಡು ಮತ್ತು ಬಯಲುನಾಡುಗಳೆರಡೂ ಈ ಜಿಲ್ಲೆಯ ನೆಳಲು-ಬಿಸಿಲಾಟಗಳ ದ್ಯೋತಕವಾಗಿ ನಿಂತಿವೆ. ಈ ಭೌಗೋಲಿಕ ಭಿನ್ನತೆ ಭಾಷಿಕವಾಗಿ ಮತ್ತು ಸಾಮಾಜಿಕವಾಗಿ ತುಂಬ ಅಂತರವನ್ನು ಉಂಟುಮಾಡಿದೆ. ಈ ಜಿಲ್ಲೆಯ ಬಹುಭಾಗವೆಲ್ಲ ಬಯಲುನಾಡಾಗಿದ್ದರೂ ಮಲೆನಾಡಿನ ಅಂಚಿನಲ್ಲಿರುವ ಕೆಲವು ತಾಲೂಕುಗಳು ಒಂದು ರೀತಿಯ 'ಸಂಕ್ರಮಣ ಕ್ಷೇತ್ರ'ಗಳಾಗಿ ಉಳಿದುಕೊಂಡಿವೆ.

ಭೌಗೋಲಿಕವಾಗಿಯಷ್ಟೇ ಭಾಷೆಯ ಸಮೀಕ್ಷೆಯನ್ನು ನಡೆಸುತ್ತೇನೆಂಬ ಮಡಿವಂತಿಕೆಯಿಂದ ಹೊರಡುವುದು, ಭಾರತದಂತಹ ನೆಲದಲ್ಲಿ ತೊಡಕಿನ ಕೆಲಸ. ಸಾಮಾಜಿಕ ಅಂತಸ್ತುಗಳ ಹಿನ್ನೆಲೆಯಲ್ಲಿ ಬಹುತೇಕ ಜನಾಂಗದವರ ನುಡಿಭಿನ್ನತೆಯನ್ನು ನಾವು ಇಂದು ಕಾಣುತ್ತಿದ್ದೇವೆ. ಇದಕ್ಕೆ ಕಾರಣ ಅವರು ಬೆಳೆದುಬಂದ ಪರಿಸರ. ಆದ್ದರಿಂದ ಭೌಗೋಲಿಕಭಿನ್ನತೆಯ ಜೊತೆಗೆ ಸಾಮಾಜಿಕಭಿನ್ನತೆಯ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಹಾಸನ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಜನಾಂಗದವರೆಂದರೆ ಒಕ್ಕಲಿಗರು, ಬ್ರಾಹ್ಮಣರು, ಲಿಂಗಾಯತರು, ಈಡಿಗರು, ಬೇಸ್ತರು ಮತ್ತು ಹರಿಜನರು. ಪಟ್ಟಣಗಳಲ್ಲಿ ವೈಶ್ಯರು ಇದ್ದರೂ ಅವರನ್ನು ಪ್ರಮುಖವಾಗಿ ಇಲ್ಲಿ ಗಮನಿಸಿಲ್ಲ. ಬ್ರಾಹ್ಮಣರಲ್ಲಿ ಸಂಕೇತಿ ಬ್ರಾಹ್ಮಣರೆಂಬ ಒಂದು ಪಂಗಡ ಅರಕಲಗೂಡು, ರಾಮನಾಥಪುರ, ಕೊಣನೂರು ಮತ್ತು ಅಗ್ರಹಾರ ಪ್ರದೇಶಗಳಲ್ಲಿ ಇದೆ. ಇವರ ಕನ್ನಡ, ತಮಿಳು

1 ಹಾಸನ ಜಿಲ್ಲೆಯ ದಕ್ಷಿಣಕ್ಕೆ ದಕ್ಷಿಣಕನ್ನಡ ಜಿಲ್ಲೆ, ನೈರುತ್ಯಕ್ಕೆ ಕೊಡಗು ಜಿಲ್ಲೆ, ಆಗ್ನೇಯ ದಿಕ್ಕಿನಲ್ಲಿ ಮೈಸೂರು, ಮಂಡ್ಯ ಜಿಲ್ಲೆಗಳು. ಪೂರ್ವಕ್ಕೆ ಬೆಂಗಳೂರು, ಈಶಾನ್ಯಕ್ಕೆ ತುಮಕೂರು ಜಿಲ್ಲೆ ಮತ್ತು ಪಾಯುವ್ಯ ದಿಕ್ಕಿಗೆ ಚಿಕ್ಕಮಗಳೂರು ಜಿಲ್ಲೆಗಳು ಇವೆ. ಈ ಜಿಲ್ಲೆಯಲ್ಲಿ ಎಂಟು ತಾಲೂಕುಗಳಿವೆ. ಅವುಗಳು ಹಾಸನ, ಅರಸೀಕೆರೆ. ಬೇಲೂರು, ಆಲೂರು, ಚನ್ನರಾಯಪಟ್ಟಣ, ಅರಕಲಗುಂಡು, ಹೊಳೆನರಸೀಪುರ ಮತ್ತು ಸಕಲೇಶಪುರ.

ಮಿಶ್ರವಿದ್ದು ಭಾಷಾವಿಜ್ಞಾನದ ದೃಷ್ಟಿಯಿಂದ ತುಂಬಾ ಕುತೂಹಲಕರವಾದುದು. ಬ್ರಾಹ್ಮಣರನ್ನು ಬಿಟ್ಟು ಮಿಕ್ಕ ಜನಾಂಗದವರೆಲ್ಲರ ಭಾಷೆ, ಸಾಮಾನ್ಯವಾಗಿ ಒಂದೇ ರೀತಿಯಾಗಿದ್ದು ಹೆಚ್ಚಿನ ಭಿನ್ನತೆಯನ್ನು ತೋರುವುದಿಲ್ಲ.

ಹಾಸನ ಜಿಲ್ಲೆಯ ಕನ್ನಡವನ್ನು ವೀಕ್ಷಿಸಿದಾಗ ಅಲ್ಲಿ ಪ್ರಮುಖವಾಗಿ ಕಂಡು ಬರುವ ಅಂಶವೆಂದರೆ ಧ್ವನಿಮಾವಲಯದಲ್ಲಾಗಲೀ ವ್ಯಾಕರಣದಲ್ಲಾಗಲೀ ಅತಿ ಹೆಚ್ಚಿನ ವ್ಯತ್ಯಾಸಗಳು ಇಲ್ಲದಿರುವುದು. ಆಡುಮಾತಿನಲ್ಲಿ ಮಹಾಪ್ರಾಣಗಳು, ಬಳಕೆಯಲ್ಲಿ ಇಲ್ಲ. ಗ್ರಾಂಥಿಕ ಕನ್ನಡದಲ್ಲಷ್ಟೇ ಬಳಕೆಯಾಗುವ ಮಹಾಪ್ರಾಣಗಳು ಬ್ರಾಹ್ಮಣರ ಭಾಷೆಯಲ್ಲಿ ಕಂಡುಬಂದರೂ ಈಗೀಗ ಅವು ತಮ್ಮ ನಿಯತತೆಯನ್ನು ಕಳೆದುಕೊಳ್ಳು ತ್ತಿವೆ. ಇದಕ್ಕೆ ಕಾರಣ ಈಗೀಗ ಬ್ರಾಹ್ಮಣರು ಒಕ್ಕಲಿಗರಾಗುತ್ತಿರುವುದೇ ಇರಬಹುದು. ವ್ಯಾಕರಣದಲ್ಲಿನ ಕೆಲವು ಬದಲಾವಣೆಗಳನ್ನು ಗಮನಿಸಿ ಅವುಗಳನ್ನು ಮುಂದೆ ನಮೂದಿ ಸಿದ್ದೇನೆ. ಇವೆಲ್ಲಕ್ಕಿಂತ ಹೆಚ್ಚಾಗಿ ಅರಕಲಗೂಡುಪ್ರದೇಶದಲ್ಲಿ ಅತಿ ವಿಶಿಷ್ಟವೆನಿಸ ಬಹುದಾದ ಒಂದೆರಡು ಅಂಶಗಳು ನನ್ನ ಗಮನಕ್ಕೆ ಬಂದಿದ್ದು, ಅವುಗಳನ್ನು ಹಾಸನ ಜಿಲ್ಲೆಯ ಕನ್ನಡದ ವೈಶಿಷ್ಟ್ಯವೆಂದು ಗುರುತಿಸಬಹುದು.

ನನ್ನ ಲೇಖನಕ್ಕೆ ಬೇಕಾದ ಭಾಷಾಸಂಗ್ರಹಣೆಯನ್ನು, ವಿವರಗಳನ್ನು ಮೈಸೂರಿ ನಲ್ಲಿ ಸ್ನಾತಕೋತ್ತರ ಕೇಂದ್ರದಲ್ಲಿ ಓದುತ್ತಿರುವ ಕೆಲವು ವಿದ್ಯಾರ್ಥಿಗಳಿಂದ ಸಂಗ್ರಹಿಸಿ ಕೊಂಡಿದ್ದೇನೆ. ಅಲ್ಲದೆ ನಾನೇ ಸ್ವತಃ ಗೊರೂರಿಗೆ ಹೋಗಿ, ಶ್ರೀ ರಾಮಸ್ವಾಮಿ ಅಯ್ಯಂಗಾರರನ್ನು ಭೇಟಿಮಾಡಿ ಕೆಲವು ವಿವರಗಳನ್ನು ಸಂಗ್ರಹಿಸಿದ್ದೇನೆ. ಇದರ ಜೊತೆಗೆ ಅವರ ಕೆಲವು ಪುಸ್ತಕಗಳಲ್ಲಿ ಬಳಕೆಯಾಗಿರುವ ಪ್ರಾದೇಶಿಕಪದಗಳನ್ನೂ ಬಳಸಿಕೊಂಡಿದ್ದೇನೆ. ಅವರು ಉಪಯೋಗಿಸಿರುವ ಎಷ್ಟೋ ಪದಗಳು ಇಂದು ಬಳಕೆ ಯಿಂದ ಕಣ್ಮರೆಯಾಗುತ್ತಿವೆ. ಆದರೂ ಅಲ್ಲಲ್ಲಿ ಹಳ್ಳಿಗರ ಬಾಯಲ್ಲಿ ಆ ಪದಗಳು ಕಣ್ಣಾಮುಚ್ಚಾಲೆಯಾಟ ಆಡುತ್ತಿರುವುದನ್ನು ಕಾಣಬಹುದು. ನಾನು ಮಾಹಿತಿಯನ್ನು ಸಂಗ್ರಹಿಸಿರುವುದು ಚನ್ನರಾಯಪಟ್ಟಣ, ಬೇಲೂರು, ಅರಕಲಗೂಡು ಮತ್ತು ಸಕಲೇಶಪುರ ತಾಲೂಕಿನ ವಿದ್ಯಾರ್ಥಿಗಳಿಂದ. ವಿದ್ಯಾರ್ಥಿಗಳನ್ನು ಬ್ರಾಹ್ಮಣ, ಒಕ್ಕಲಿಗ ಮತ್ತು ಹರಿಜನ ಜಾತಿಗಳಿಂದ ಆಯ್ದುಕೊಂಡಿದ್ದೇನೆ. 'prestige dialect' ಎಂಬ ದೃಷ್ಟಿಯಿಂದ ಹಾಸನ ಪಟ್ಟಣದಿಂದ ಯಾವ ಮಾಹಿತಿಯನ್ನೂ ಸಂಗ್ರಹಿಸಿಲ್ಲ. ಒಂದು ವ್ಯವಸ್ಥಿತವಾದ ಪ್ರಶ್ನಾವಳಿಯನ್ನು ತಯಾರಿಸಿಕೊಳ್ಳಲು ಸಾಧ್ಯವಾಗದೆ ದಿನ ಬಳಕೆಯ ವಸ್ತು, ವ್ಯವಸಾಯದ ಉಪಕರಣಗಳು ಮುಂತಾದವುಗಳನ್ನು ಬಾಯಿ ಮಾತಿನಿಂದ ಕೇಳಿ ಪಡೆದಿದ್ದೇನೆ. ಈ ಸಮೀಕ್ಷೆ ಒಂದು ರೀತಿಯಲ್ಲಿ ಶಿಷ್ಟಭಾಷೆ ಯೊಂದಿಗಿನ ತೌಲನಿಕಾಧ್ಯಯನವೂ ಹೌದು.

ಧ್ವನಿಮಾವ್ಯವಸ್ಥೆಯಲ್ಲಿ ಮಹಾಪ್ರಾಣಗಳು ಇಲ್ಲವೆಂದು ಹಿಂದೆಯೇ ತಿಳಿಸಿದೆ.

ಸಂಕೇತಿಬ್ರಾಹ್ಮಣರ ಭಾಷೆಯಲ್ಲಿ ಮಹಾಪ್ರಾಣಗಳು ತುಂಬಾ ಬಳಕೆಯಾಗುತ್ತವೆ. ಅಲ್ಪಪ್ರಾಣಗಳು ಬಳಕೆಯಾಗುವ ಕಡೆಯಲ್ಲಿಯೂ ಅವರು ಮಹಾಪ್ರಾಣಗಳನ್ನು ಬಳಸುತ್ತಾರೆ. ಮಹಾಪ್ರಾಣಗಳೇ ಅವರ ಪ್ರಾಣವೇನೋ ಎಂಬ ಕಲ್ಪನೆ ಕೇಳುವವರಿಗೆ ಬಂದರೆ ಆಶ್ಚರ್ಯವಿಲ್ಲ. ಬ್ರಾಹ್ಮಣರನ್ನುಳಿದು ಮಿಕ್ಕವರ ಮಾತಿನಲ್ಲಿ ಮೂರ್ಧನ್ಯ ಊಷ್ಮವರ್ಣ 'ಷ' ಕಾರವು ಬಳಕೆಯಲ್ಲಿಲ್ಲ. ಆದರ ಬದಲು 'ಸ'ಕಾರ 'ಶ'ಕಾರಗಳೇ ಬಳಕೆಯಾಗುತ್ತಿವೆ.

ಹಳ್ಳಿಗರ ಭಾಷೆಯಲ್ಲಿ ಪದದ ಆದಿಯಲ್ಲಿ 'ಎ'ಕಾರ ಬಂದಾಗ ಅದು 'ಯೆ'ಕಾರವಾಗಿ ಬಳಸಲ್ಪಡುತ್ತದೆ. ಉದಾ : ಯೆಲೆ, ಯೇಳು, ಯೆದೆ ಇತ್ಯಾದಿ.

ವ್ಯಾಕರಣವ್ಯವಸ್ಥೆಯಲ್ಲಿ ಗಮನಾರ್ಹವಾಗಿ ಕಾಣುವ ಬದಲಾವಣೆಗಳನ್ನು ಮಾತ್ರ ಇಲ್ಲಿ ವಿಶ್ಲೇಷಿಸಿದ್ದೇನೆ. ದ್ವಿತೀಯಾವಿಭಕ್ತಿಪ್ರತ್ಯಯ –ನ. ಇದು ಸರ್ವನಾಮಗಳೊಂದಿಗೂ ಬಳಕೆಯಾಗುತ್ತದೆ. ಉದಾ : ಅವನ್ನ ಕೇಳು, ಭೀಮನ್ನ ಕೂಗು. ಚತುರ್ಥಿ ವಿಭಕ್ತಿಪ್ರತ್ಯಯ –ಇಗ್ ಮತ್ತು –ಕ್. 'ಉ'ಕಾರಾಂತ ಪದಗಳು ಮತ್ತು 'ಅ'ಕಾರಾಂತ ಬಂಧುವಾಚಕಗಳು –ಇಗ್ ಪ್ರತ್ಯಯವನ್ನು ಪಡೆದುಕೊಳ್ಳುತ್ತವೆ. ಆದರೆ ತೃತೀಯಪುರುಷ ನಪುಂಸಕ ಸರ್ವನಾಮಗಳೂ ಸಂಖ್ಯಾವಾಚಗಳೂ ಈ ಪಟ್ಟಿಯಲ್ಲಿ ಬರುವುದಿಲ್ಲ. ಉದಾ : ಕಾಡಿಗ್, ಅವ್ವಿಗ್, ಅಪ್ಪನಿಗ್ ಇತ್ಯಾದಿ. ಮಿಕ್ಕೆಲ್ಲ ನಾಮವಾಚಿಗಳು –'ಕ್' ಪ್ರತ್ಯಯವನ್ನು ತೆಗೆದುಕೊಳ್ಳುತ್ತವೆ. ಉದಾ : ಅದಕ್, ಮೂರಕ್, ಮರಕ್ ಇತ್ಯಾದಿ. ಮಿಕ್ಕ ವಿಭಕ್ತಿಪ್ರತ್ಯಯಗಳಲ್ಲಿ ಯಾವ ಬದಲಾವಣೆಯೂ ಇಲ್ಲ.

ಬಹುವಚನಪ್ರತ್ಯಯಗಳಲ್ಲಿ –ಗಳು ರೂಪವು –ಗೋಳು, –ಗೊಳು ಎಂದು ಬದಲಾಗಿದೆ. ಉದಾ : ಮರಗೋಳು, ಹಸಗೊಳು. ಮಹದ್ವಾಚಿ ಬಹುವಚನ ಪ್ರತ್ಯಯವಾದ –ಂದಿರು ಬಳಕೆಯಲ್ಲಿಲ್ಲ. ಆದರ ಬದಲು –ದೀರು ಬಳಕೆಯಲ್ಲಿದೆ. ಉದಾ : ಅಕ್‌ದೀರು, ಅಣ್‌ದೀರು. ಇದರ ಜೊತೆಗೆ –ರು ಪ್ರತ್ಯಯವೂ ಇದೆ. ಉದಾ : ಸೊಸೇರು, ಹುಡುಗ್‌ರು.

ವಿಧ್ಯರ್ಥರೂಪ –ಓಣ ಎಂಬುದು ಹಾಸನ ಜಿಲ್ಲೆಯ ಕನ್ನಡದಲ್ಲಿ –ಓನ, ಆನ ಮತ್ತು –ವ ಎಂಬ ರೂಪಗಳಲ್ಲಿ ಸಿಗುತ್ತದೆ. –ವ ವಿಧ್ಯರ್ಥಕರೂಪ ಸಕಲೇಶಪುರ ತಾಲೂಕಿನ ಸುತ್ತಮುತ್ತ ಪ್ರಯೋಗದಲ್ಲಿದೆ. ಉದಾ : ನಾವು ಹೋಗುವ. ಮಿಕ್ಕ ರೂಪಗಳು ಬೇರೆ ಎಲ್ಲ ಕಡೆ ಕಾಣಸುತ್ತವೆ. ಉದಾ : ಮಾಡೋನ ಅಥವಾ ಮಾಡಾನಾ.

ವರ್ತಮಾನಕಾಲದ ಆಖ್ಯಾತಪ್ರತ್ಯಯಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಆದರೆ ಭೂತಕಾಲದ ಆಖ್ಯಾತಪ್ರತ್ಯಯಗಳಲ್ಲಿ ಕೆಲವು ರೂಪ ಬದಲಾವಣೆಗಳನ್ನು ಕಾಣಬಹುದು. ಆಖ್ಯಾತಪ್ರತ್ಯಯಗಳನ್ನು ಕ್ರಮಶಃ ಕೆಳಗೆ ಕೊಡಲಾಗಿದೆ.

	ಏಕವಚನ	ಬಹುವಚನ
ಪ್ರ. ಪು.	–ಎ	–ಒ, –ಯೊ, –ಮು, –ವು
ದ್ವಿ. ಪು.	–ಎ	–ರಿ
ತೃ. ಪು.	–ಅ	
	–ಳು, ಲು	–ರು
	–ತು	–ವು

ಪ್ರಥಮಪುರುಷ ಬಹುವಚನಪ್ರತ್ಯಯದಲ್ಲಿ '–ಒ' ಮತ್ತು 'ಯೊ' ರೂಪಗಳು ಚನ್ನರಾಯಪಟ್ಟಣದ ಸುತ್ತಮುತ್ತ ಸಿಗುತ್ತವೆ. ಉದಾ : ನಾವ್ ಆ ಕೆಲ್ಸ ಮಾಡಿದೊ. ನಾವ್ ಊರಿಗೆ ಓದ್ಯೊ. ಇನ್ನು '–ಮು' ರೂಪ ಬೇಲೂರಿನ ಸುತ್ತಮುತ್ತ ಬ್ರಾಹ್ಮಣರ ಭಾಷೆಯಲ್ಲಿ ಕಂಡುಬರುತ್ತದೆ. ಉದಾ : ನಾವು ಬಂದ್‌ಮು, ನಾವು ಕೇಳಿದ್‌ಮು ಇತ್ಯಾದಿ. '–ವು' ರೂಪ ಸಾಮಾನ್ಯವಾಗಿ ಎಲ್ಲೆಡೆಯೂ ಸಿಗುತ್ತದೆ.

ಭೂತಕಾಲಪ್ರತ್ಯಯದಲ್ಲಿ '–ಇದ್' ಪ್ರತ್ಯಯದ ಸ್ವರ ಬಹುತೇಕ ಬಿದ್ದು ಹೋಗಿ, ಅದು 'ದ'ಕಾರವಾಗಿಯೇ ಬಳಕೆಯಾಗುತ್ತದೆ. ಉದಾ : ಮಲಗ್ದೆ. ಆದ್ದರಿಂದ ಶಿಷ್ಟಭಾಷೆಯಲ್ಲಿರುವಂತೆ –ಇದ್ ಮತ್ತು –ದ ಎಂಬ ಎರಡು ಭೂತಕಾಲ ಪ್ರತ್ಯಯಗಳು ಇಲ್ಲಿಲ್ಲ.

ಇಲ್ಲಿಯವರೆಗೆ ವ್ಯಾಕರಣದ ಕೆಲವು ವೈಶಿಷ್ಟ್ಯಗಳನ್ನು ನೋಡಿದೆವು. ಇನ್ನು ಮುಂದೆ ಹಾಸನ ಜಿಲ್ಲೆಗೇ ವಿಶಿಷ್ಟವಾದ ಕೆಲವು ಪದಗಳನ್ನು ಪಟ್ಟಿಮಾಡಿ ಪ್ರಸ್ತಾಪಿಸಲಿದ್ದೇನೆ.

ನುಗ್ಗೇಹಳ್ಳಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ತೆಂಗಿನಕಾಯಿಯನ್ನು ಸುಲಿದು ಕಟ್ಟುವುದಕ್ಕೆ 'ಗುದಿ' ಎನ್ನುತ್ತಾರೆ. ಈ ಗುದಿಯನ್ನು ಹಿಂದು ಮುಂದೆ ಜೋತು ಬೀಳುವಂತೆ ಹೆಗಲಿಗೆ ಹಾಕಿಕೊಂಡು ಹೋಗುವುದಕ್ಕೆ 'ಡುಬ್ಕ' ಎನ್ನುತ್ತಾರೆ. ಈ ಪದ ಬಹಳ ವಿಚಿತ್ರವಾಗಿದೆ. ಇದು ಈ ಪ್ರದೇಶವನ್ನು ಬಿಟ್ಟು ಇನ್ನು ಎಲ್ಲಿಯೂ ಸಿಗುವುದಿಲ್ಲ. ಚನ್ನರಾಯಪಟ್ಟಣದ ಸುತ್ತಮುತ್ತಲಿರುವ ಬ್ರಾಹ್ಮಣರು ದೋಸೆ ಹಾಕುವ ಉಪಕರಣವನ್ನು 'ಕಾವಲಿ'ಯೆಂದೂ ಮಿಕ್ಕವರು 'ತವೆ'ಯೆಂದೂ ಕರೆಯುತ್ತಾರೆ. ಆದರೆ ಈ 'ತವೆ' ಹಾಸನದಲ್ಲಿ prestigious ಪದವಾಗಿದ್ದು, ವಿದ್ಯಾವಂತರು 'ತವಾಯ್' ಎಂದು ಕರೆಯುತ್ತಾರೆ. 'ಕಾವಲಿ' ಪದವನ್ನು ಅಲ್ಲಿ ಅವಿದ್ಯಾವಂತರು ಬಳಸುತ್ತಾರೆ. ತೆಂಗಿನಕಾಯನ್ನು ಕೀಳುವ ಬಿದಿರು ಕಡ್ಡಿಯನ್ನು 'ರೋಟಿ' ಎಂದು ಕರೆಯುತ್ತಾರೆ. ಇದೇ ರೋಟಿ, ಸಕಲೇಶಪುರದ ಕಡೆ ಜೋಟಿಯಾಗಿದೆ. 'ರ'ಕಾರ

'ಜ'ಕಾರವಾಗಿ ಬದಲಾಗಿರುವುದಕ್ಕೆ ಸಾಕಷ್ಟು ಉದಾಹರಣೆಗಳು ಸಿಕ್ಕದೇ ಇರುವುದರಿಂದ ಇಲ್ಲಿ ಯಾವ ಧ್ವನಿನಿಯಮವನ್ನೂ ಕೊಡಲು ಸಾಧ್ಯವಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಕಾಗದವನ್ನು 'ಕಾಜಗ' ಅಥವಾ 'ಕಾದಗ' ಎಂದು ಉಚ್ಚರಿಸುತ್ತಾರೆ. 'ಕಾವಗ' ಪದ, ಅಕ್ಷರಪಲ್ಲಟಕ್ಕೆ ಒಳ್ಳೆಯ ಉದಾಹರಣೆ.

ಪದಮಧ್ಯದ 'ದ'ಕಾರ 'ಜ'ಕಾರವಾಗಿ ಬದಲಾಗಿರುವುದಕ್ಕೆ ಇನ್ನೊಂದು ಉದಾಹರಣೆ 'ಇಜ್ಜಲು'. 'ಕೆಂದಲ್ಲ' ಎನ್ನುವ ಪದ, ಈ ಜಿಲ್ಲೆಯಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಇದರ ಅರ್ಥ, ಯಾವ ಪರಿಣಾಮವೂ ಆಗುವುದಿಲ್ಲ ಎಂದು. ಉದಾ : ಅವನು ಚಳಿಮಳೆಗೆ ಕೆಂದಲ್ಲ. ಎಂದರೆ ಅವನು ಯಾವುದಕ್ಕೂ ಜಗ್ಗಲ್ಲ ಎಂದು. 'ಹಣ್ಬು' ಎಂದರೆ ಧಾನ್ಯದಿಂದ ಕಲ್ಲು ಕಸವನ್ನು ಬೇರೆಮಾಡುವುದು ಎಂದು. ಬ್ರಾಹ್ಮಣರನ್ನು ಬಿಟ್ಟು ಬೇರೆ ಯಾರೂ ಪದದಾದಿಯ 'ಹ'ಕಾರವನ್ನು ಉಚ್ಚರಿಸುವುದಿಲ್ಲ. 'ತಂಗಳ ಹಿಟ್ಟು' ಹಳ್ಳಿಗರಲ್ಲಿ 'ತಂಗುಟ್ಟು' ಆಗಿದೆ. ಊಟ ಮಾಡುವ ತಟ್ಟೆಯನ್ನು 'ತಣಿಗೆ' ಎಂದು ಕರೆಯುತ್ತಾರೆ. 'ಮೊಟ್ಟೆ', 'ಮೊಳೆ' ಮುಂತಾದ ಶಬ್ದಗಳಲ್ಲಿ 'ಒ'ಕಾರ 'ಅ'ಕಾರವಾಗಿ ಅವು 'ಮಟ್ಟೆ', 'ಮಳೆ' ಎಂಬುದಾಗಿ ಉಚ್ಚರಿಸಲ್ಪಡುತ್ತವೆ. 'ಬನ್ನಿ,' 'ತನ್ನಿ' ರೂಪಗಳು ಬಲ್ಲಿ, ತಲ್ಲಿಯಾಗಿವೆ. 'ನೇಗಿಲು' ಎಂಬ ಪದವನ್ನು ಈಗ್ಯೆ ಐದಾರು ವರ್ಷಗಳ ಹಿಂದೆ 'ಮೇಗಿಲು' ಎಂಬುದಾಗಿ ಕರೆಯುತ್ತಿದ್ದರು. ಈಗಲೂ ಹಳ್ಳಿಯ ವೃದ್ಧರ ಬಾಯಲ್ಲಿ ಈ ರೂಪವನ್ನು ಕಾಣಬಹುದು. ಚನ್ನರಾಯಪಟ್ಟಣದ ಸುತ್ತಮುತ್ತ 'ಕಾಲುವೆ' ಎನ್ನುವುದನ್ನು ಕೆಲವರು 'ಕಾವಲೆ' ಎನ್ನುತ್ತಾರೆ. ಬಹುಶಃ ಅಕ್ಷರಪಲ್ಲಟದಿಂದ ಅವರಿಗೆ ಉಚ್ಚಾರಣಾಸೌಲಭ್ಯ ಉಂಟಾಗಿರಬಹುದು. ಮಳೆಗಾಲದಲ್ಲಿ ತಲೆಯ ಮೇಲೆ ಹಾಕಿಕೊಳ್ಳಲು ಉಪಯೋಗಿಸುವ ಗೋಣಿಯಿಂದ ಮಾಡಿದ ಚೀಲಕ್ಕೆ 'ಗೊಮ್‌ಟ' ಎಂದೂ ವಡಕೆಹುಲ್ಲಿನಿಂದ ಮಾಡಿದ ಚೀಲಕ್ಕೆ 'ಗೊರಗು' ಎಂದೂ ಕರೆಯುತ್ತಾರೆ. 'ಗೊರಗು' 'ಗುರಗ' ಎಂದೂ ಬಳಕೆಯಾಗುತ್ತಿದೆ.

ಬೇಲೂರಿನ ಸುತ್ತಮುತ್ತ ಮನೆಯ ಹಿಂದಿನ ಹಿತ್ತಲಿಗೆ ಕಟ್ಟುವ ಬಾಗಿಲನ್ನು 'ತೊಟ್ಟಿ' ಎಂದು ಕರೆದರೆ, ಬೇರೆ ಕಡೆಯಲ್ಲಿ 'ಹೊಳೆ' ಎಂಬ ಪದ ಬಳಕೆಯಲ್ಲಿದೆ. 'ತೊಟ್ಟಿ' ಎನ್ನುವುದು ಬಹುಶಃ ತಟ್ಟಿಗೆ ಎನ್ನುವುದರ ಸವೆದರೂಪ ಇರಬಹುದು. ಹೊಲದಲ್ಲಿ ಹುಟ್ಟುವ ಕಳೆಗೆ ಅವರು 'ಹಳು' ಎಂದು ಕರೆಯುತ್ತಾರೆ. ಗದ್ದೆಯ ಸಣ್ಣಸಣ್ಣ ಮಡಿಗಳಿಗೆ 'ಗಣ್ಣ' ಎಂಬ ಹೆಸರಿದೆ.

ಮೇಲಿನ ಉದಾಹರಣೆಗಳಿಂದ ಸೀಮಾರೇಖೆಗಳು ಕೆಲವೊಮ್ಮೆ ಪಕ್ಕಪಕ್ಕದಲ್ಲೇ ಹಾದು ಹೋಗುವುದನ್ನು ಕಾಣಬಹುದು.

ಅರಕಲಗೂಡಿನ ಸುತ್ತಮುತ್ತ ವಿದ್ಯಾವಂತರಲ್ಲದವರ ಭಾಷೆಯಲ್ಲಿ ಒಂದು ವಿಶಿಷ್ಟತೆಯಿದೆ. ಪದದಾದಿಯ 'ಕ' ಕಾರ, ಪೂರ್ವಸ್ವರಗಳಾದ 'ಇ, ಈ, ಎ, ಏ' ಗಳ ಹಿಂದೆ ಬಂದಾಗ 'ಚ' ಕಾರವಾಗಿ ಬದಲಾಗುತ್ತದೆ.[೧] ಈ ಬದಲಾವಣೆ ತುಂಬಾ ವ್ಯವಸ್ಥಾಬದ್ಧವಾಗಿ ಆಗಿದ್ದು, ಮೂಲದ್ರಾವಿಡಭಾಷೆಯ ನೆನಪನ್ನುಂಟುಮಾಡುತ್ತದೆ. ಅದಕ್ಕೆ ಕೆಳಗಿನ ಉದಾಹರಣೆಗಳನ್ನು ಗಮನಿಸಬಹುದು.

ಕೇಳು > ಚೇಳು
ಕೇರು > ಚೇರು
ಕೆಂಪು > ಚೆಂಪು
ಕೆನ್ನೆ > ಚೆನ್ನೆ
ಕಿವಿ > ಚಿವಿ
ಕೀಳು > ಚೀಳು

ಈ ಧ್ವನಿನಿಯಮ, ಪದಮಧ್ಯದಲ್ಲೂ ಪ್ರವರ್ತಿಸುತ್ತದೆ ಎಂದು ಡಾ. ಚಿದಾನಂದ ಮೂರ್ತಿಯವರು ಹೇಳಿ ಬೆಂಚಿ (ಬೆಂಕಿ) ಎಂಬ ಉದಾಹರಣೆಯನ್ನು ಕೊಟ್ಟಿದ್ದಾರೆ. ಆದರೆ ನನಗೆ ಆ ಸ್ವರೂಪ ಸಿಗಲಿಲ್ಲ.

ಡಾ. ಚಿದಾನಂದಮೂರ್ತಿಯವರು ಪದದಾದಿಯ 'ಗ'ಕಾರ ಪೂರ್ವಸ್ವರಗಳ ಹಿಂದೆ 'ಜ' ಕಾರವಾಗುತ್ತದೆಂದು ಅಲ್ಲಿಯೇ ತಿಳಿಸಿದ್ದಾರೆ. ಆದರೆ ಈ ಧ್ವನಿನಿಯಮ 'ಕ' ಕಾರದಷ್ಟು ನಿಯತವಾಗಿ ನಡೆದಿಲ್ಲವೆಂದೇ ಹೇಳಬೇಕು. ನಾನು ಸಂಗ್ರಹಿಸಿದ ಅನೇಕ ಪದಗಳಲ್ಲಿ ಒಂದೇ ಒಂದು ಪದದಲ್ಲಿ 'ಗ' ಕಾರ 'ಜ' ಕಾರವಾಗಿದ್ದ ಅಂಶ ಕಂಡು ಬಂತು. ಅದನ್ನು ಮುಂದೆ ನೋಡೋಣ. ಈ ಧ್ವನಿನಿಯಮ, ಮುಖ್ಯವಾಗಿ ಹರಿಜನರ ಉಪಭಾಷೆಯಲ್ಲಿ ಕಂಡುಬಂದರೂ ಬೇರೆ ಜನಾಂಗದವರಲ್ಲೂ ಇದರ ಬಳಕೆ ಕಾಣಬರುತ್ತದೆ.

ಅರಕಲಗೂಡಿನ ಸುತ್ತಮುತ್ತ ಬಳಕೆಯಾಗುವ ಕೆಲವು ಪದಗಳು ತುಂಬಾ ವೈಶಿಷ್ಟ್ಯದಿಂದ ಕೂಡಿವೆ. ಇಲ್ಲಿ ಇದ್ದಿಲಿಗೆ ಮಸಿಗೆಂಡೆ, ಆಲೂಗೆಡ್ಡೆಗೆ ಕಾಲಿಂಗೆಂಡೆ, ಈರುಳ್ಳಿಗೆ ಉಳ್ಳಿಜೆಂಡೆ ಎನ್ನುತ್ತಾರೆ. ಉಳ್ಳಿಜೆಂಡೆ ಎನ್ನುವಲ್ಲಿ ಮಾತ್ರ 'ಗ' ಕಾರ 'ಜ'ಕಾರವಾಗಿರುವುದನ್ನು ನೋಡಬಹುದು. ಆದರೆ ಇಲ್ಲಿ ಕುತೂಹಲದಿಂದ ಗಮನಿಸಬೇಕಾದ ಪದವೆಂದರೆ 'ಗೆಂಡೆ' ಎನ್ನುವುದು. ಈ 'ಗೆಂಡೆ' ಪದ, ಮೂಲದ್ರಾವಿಡ ಸ್ವರೂಪದ್ದಾಗಿದ್ದು ಕ್ರಮೇಣ ನಕಾರ ಬಿದ್ದು ಹೋಗಿ ಅದರ ಸ್ಥಾನದಲ್ಲಿ ಸಜಾತಿಯ

೧ ಇದನ್ನು ಡಾ. ಎಂ. ಚಿದಾನಂದ ಮೂರ್ತಿಯವರು 'ಸುವರ್ಣ ಸಂಚಯ'ದಲ್ಲಿನ ತಮ್ಮ ಲೇಖನ 'ಹಳೆಯ ಮೈಸೂರಿನ ಕನ್ನಡ'ದಲ್ಲಿ ಗುರುತಿಸಿದ್ದಾರೆ.

ವ್ಯಂಜನ ಬಂದು ಸೇರಿಕೊಂಡಿತು. ಈ ಆಧಾರದ ಮೇಲೆ ಶ್ರೀ ಎನ್. ಕುಮಾರಸ್ವಾಮಿ ರಾಜಾ ಅವರು *NPP ರೂಪವನ್ನು ಪುನರ್ ರೂಪಿಸಿದ್ದು.[೧]

ಈ ಪ್ರದೇಶದಲ್ಲಿ ಪೋಲೀಸರಿಗೆ 'ಅರಿವೆ ಕಾಲಿನ'ವರು ಎನ್ನುತ್ತಾರೆ. ಅರಿವೆ ಕಾಲಿನವರು ಎನ್ನುವ ಪದ, ಬಹುಶಃ ಪೋಲೀಸನವರು ಹಾಕಿಕೊಳ್ಳುವ ಉದ್ದನೆಯ ಕಾಲುಚೀಲದಿಂದಾಗಿ ಬಂದಿರಬಹುದು. ಅಲ್ಲದೆ ಅರಿವೆ ಕಾಲಿನವರು ಎಂದರೆ ಕಾಲಿನ ನರ ಸತ್ತವರು ಎಂಬ ಅರ್ಥವೂ ಬರುತ್ತದೆ. ಎಂತಹ ಅದ್ಭುತ ಕಲ್ಪನೆ ! ಮಣ್ಣಿನಿಂದ ಮಾಡಿ, ರೊಟ್ಟಿ ಸುಡುವುದಕ್ಕೆ ಉಪಯೋಗಿಸುವ ಕಾವಲಿಯನ್ನು 'ಸರ್ಬಿ' ಎಂತಲೂ ಲೋಹದ ಕಾವಲಿಯನ್ನು 'ಅರ್ಲೆ' ಎಂತಲೂ ಕರೆಯುತ್ತಾರೆ. 'ಮೈ ಅರುಂಗು' ಎಂದರೆ ಹೆರಿಗೆಯಾಗುವುದು ಎಂದರ್ಥ. ಅಂದರೆ ಉಬ್ಬಿದ ಶರೀರ ಸಣ್ಣಗಾಗುವುದು. ಆ ಜನ ಎಂತಹ ನಾಜೂಕಾದ ಪದವನ್ನು ಬಳಸಿಕೊಂಡಿದ್ದಾರೆ ಎಂಬುದು ಇದರಿಂದ ಅರ್ಥವಾಗುತ್ತದೆ. 'ಹಸಗೆಡು' ಎಂದರೆ 'ಹದಗೆಡು', 'ಖುಷಾಮತ್ತು' ಎಂದರೆ 'ಸಂತೋಷ', 'ಟಾಂಪ್ಸರಿ' ಎಂದರೆ 'ಪ್ರಾಮಿಸರಿ ನೋಟ್', 'ವೈವಟ್ಟು' ಎಂದರೆ 'ವಹಿವಾಟು'; 'ಹಣತೆ ಕಚ್ಚು' ಎಂದರೆ ದೀಪಹಚ್ಚು ಮುಂತಾದ ವಿಶಿಷ್ಟಪದಗಳನ್ನು ಗಮನಿಸಬಹುದು. ಇಲ್ಲಿ ನನ್ನ ಗಮನಕ್ಕೆ ಬಂದ ಇನ್ನೊಂದು ವಿಶಿಷ್ಟ ಪ್ರಯೋಗ ವೆಂದರೆ 'ಸೀ ಕೊಡುವುದು'. ಹಾಗೆಂದರೆ ಮಾರಿಗೆ ಶಾಸ್ತ್ರೋಕ್ತವಾಗಿ ಕೊಡುವ ಬಲಿ. ಮಲೆನಾಡಿನ ಕಡೆಯಲ್ಲಿ ದಣಿದು ಬಂದವರಿಗೆ ದಣಿವಾರಲು ಸ್ವಲ್ಪ ಬೆಲ್ಲವನ್ನು ಕೊಟ್ಟು, ಅನಂತರ ಕುಡಿಯಲು ನೀರುಕೊಡುವ ಅಭ್ಯಾಸ ಇಂದಿಗೂ ಇದೆ. ಅಂತೆಯೇ ಇಲ್ಲಿ ದೇವರ ಆಯಾಸ ಪರಿಹಾರಕ್ಕೆ ಕೊಡುವ ಬಲಿಗೆ 'ಸೀ ಕೊಡುವುದು' ಎನ್ನುತ್ತಾರೆ. ಜನಪದದ ಕಲ್ಪನೆ ಎಂತಹ ಅಗಾಧವಾದುದು ಎಂಬುದನ್ನು ಇಲ್ಲಿ ನೋಡಬಹುದು. ಅತ್ಯಂತ ಕುತೂಹಲಕರವಾದ ಇನ್ನೊಂದು ಪದವೆಂದರೆ 'ಹೂರಿಗ' ಎನ್ನುವುದು. ಹುಣ್ಣಿಮೆಯ ಹಿಂದಿನ ದಿನವನ್ನು 'ಹೂರಿಗ' ಎಂದು ಕರೆಯುತ್ತಾರೆ. ಯಾರನ್ನಾದರೂ ಬಯ್ಯುವಾಗ ಅವನ ವಂಶ ಹಾಳಾಗಲಿ ಎನ್ನುವುದಕ್ಕೆ 'ಅವನ್ಹಡೆ ಹಾಳಾಗ' ಎನ್ನುತ್ತಾರೆ. ಇಲ್ಲಿಯ ಹಡೆ ಎನ್ನುವ ನಾಮಪದ, ಕ್ರಿಯಾಪದದ ಸಾಧಿತರೂಪ ಎಂಬುದನ್ನು ಇಲ್ಲಿ ಗಮನಿಸಬೇಕು. ಹೀಗೆ ಅರಕಲಗೂಡಿನ ಸುತ್ತಮುತ್ತಲ ಪ್ರದೇಶ ಎಷ್ಟೆಷ್ಟೋ ಹೊಸಹೊಸ ಸುಳುಹುಗಳನ್ನು ಕೊಡುವ ಪದಾವಳಿಗಳನ್ನು ಹಳ್ಳಿಗರ ಬಾಯಲ್ಲಿ ಅಡಗಿಸಿಟ್ಟಿದೆ.

ಮಲೆನಾಡಿನ ಅಂಚಿನಲ್ಲಿರುವ ಸಕಲೇಶಪುರದ ಕಡೆ ತುಳು ಮತ್ತು ಹವ್ಯಕ ಕನ್ನಡದ ಪ್ರಭಾವವನ್ನು ಕಾಣುತ್ತೇವೆ. ಅಲ್ಲಿ ಹಿತ್ತಿಲಿಗೆ ಕಟ್ಟುವ ಬಾಗಿಲನ್ನು

೧ N= ಅನುನಾಸಿಕ, P= ಸ್ಪರ್ಶ. ನೋಡಿ: Post nasal voiceless plosives in Dravidian By N. Kumara Swamy Raja. ಅಣ್ಣಾಮಲೈ ವಿಶ್ವವಿದ್ಯಾನಿಲಯದ ಪ್ರಕಟಣೆ.

'ಉಣುಗ್ಲು' ಎನ್ನುತ್ತಾರೆ. ಬೀಜವನ್ನು ಒಟ್ಟು ಹಾಕುವುದಕ್ಕೆ 'ಅಗೆ' ಎನ್ನುತ್ತಾರೆ. ತೆಂಗಿನಕಾಯಿಯ ನಾರಿಗೆ 'ಕತ್ತ' ಎನ್ನುತ್ತಾರೆ. ಹುಲ್ಲಿನ ಮೆದೆಗೆ 'ಮುಂಡ', ಭತ್ತಕ್ಕೆ 'ನೆಲ್ಲು' ಎಂದೂ ಹೇಳುತ್ತಾರೆ. ಅರವತ್ತು ಸೇರು ಧಾನ್ಯಕ್ಕೆ 'ಕೊಟ್ಲೆ' ಎಂತಲೂ ಇನ್ನೂರ ನಲವತ್ತು ಸೇರು ಧಾನ್ಯಕ್ಕೆ 'ಹೇರು' ಎಂತಲೂ ಕರೆಯುತ್ತಾರೆ. ಉಚ್ಚಾರಣೆಯ ದೃಷ್ಟಿಯಿಂದ ಇಲ್ಲಿಯವರ ನುಡಿ, ಹಾಸನದ ಬೇರೆ ಭಾಗದವರಿಗಿಂತ ಸ್ಪಷ್ಟವಾಗಿರುತ್ತದೆ. ಹೆಚ್ಚಿನ ಸಂಯುಕ್ತಾಕ್ಷರಗಳು ಕಂಡುಬರುವುದಿಲ್ಲ.

ಇಲ್ಲಿಯ ವರೆಗೆ ಸ್ಥೂಲವಾಗಿ 'ಹಾಸನ ಜಿಲ್ಲೆಯ ಕನ್ನಡ'ದ ಬಗ್ಗೆ ವಿವರಣೆ ನೀಡಿದ್ದೇನೆ. ಇಲ್ಲಿ ಪಟ್ಟಿಮಾಡಿರುವ ಪದಾವಳಿಗಳಿಂದಲೇ ಅಲ್ಲಿಯ ಪ್ರಾದೇಶಿಕ ಪ್ರಭೇದವನ್ನು ಅರಿತುಕೊಳ್ಳಬಹುದು. ಇದನ್ನು ವ್ಯಾಪಕವಾಗಿ ಅಧ್ಯಯನ ಮಾಡಿದಲ್ಲಿ ಇನ್ನೂ ಕುತೂಹಲಕಾರಿ ಪದಗಳು, ಬಳಕೆಗಳು ಕಂಡುಬರಬಹುದು. ಬಹಳ ಕಡಿಮೆ ಕಾಲದಲ್ಲಿ ಈ ಲೇಖನವನ್ನು ಸಿದ್ಧಪಡಿಸಬೇಕಾಗಿ ಬಂದದ್ದರಿಂದ ಭಾಷಿಕವಾಗಿ ಸೂಕ್ಷ್ಮ ವಿಶ್ಲೇಷಣೆ ಸಾಧ್ಯವಾಗಲಿಲ್ಲವಲ್ಲ ಎಂಬ ಕೊರತೆ ಇದ್ದೇ ಇದೆ.

• •

ತುಮಕೂರು ಜಿಲ್ಲೆಯ ಕನ್ನಡ

● ಲಿಂಗದೇವರು ಹಳೆಮನೆ

೧ ತುಮಕೂರು ಜಿಲ್ಲೆಯ ಕನ್ನಡದ ಬಗೆಗೆ ಇಲ್ಲಿಯ ವರೆಗೆ ಹೆಚ್ಚಿನ ಅಧ್ಯಯನ ನಡೆಯದೇ ಇರುವದಕ್ಕೆ ಮುಖ್ಯ ಕಾರಣ, ಇದು ಹಳೆಯ ಮೈಸೂರಿನ ಉಪಭಾಷೆ ಎಂದು ತೀರ್ಮಾನಿಸಿರುವುದು. ವಾಸ್ತವವಾಗಿ ಅದು ಹೌದು ಎನ್ನಿಸಿದರೂ ಕೂಲಂಕಷ ಅಧ್ಯಯನ ಮಾಡುವವರಿಗೆ ಅಲ್ಲಿಯ ಪ್ರಾದೇಶಿಕಪ್ರಭೇದಗಳ ಅರಿವಾಗದೆ ಇರದು. ತುಮಕೂರು ಜಿಲ್ಲೆ ಮುಖ್ಯವಾಗಿ ಬಯಲುನಾಡು. ತುಮಕೂರು ಮತ್ತು ಮಧುಗಿರಿ ತಾಲೂಕುಗಳಲ್ಲಿ ಸುಮಾರು ಗುಡ್ಡಗಳಿದ್ದರೂ ಅವು ಜನಸಂಪರ್ಕಕ್ಕೆ ಯಾವ ಅಡಚಣೆ ಯನ್ನೂ ಉಂಟುಮಾಡಿಲ್ಲ. ಈ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ಪ್ರಾಂತೀಯ ಹೆದ್ದಾರಿಗಳು ಹಾದುಹೋಗುವುದರಿಂದ ಜನಸಂಪರ್ಕಕ್ಕೆ ಅಡಚಣೆ ಯಾಗದೆ. ಭಾಷಾವೈವಿಧ್ಯ ತುಂಬಾ ಹೆಚ್ಚಾಗಿ ಕಂಡುಬರುವುದಿಲ್ಲ ಅನಿಸುತ್ತದೆ. ಆದರೆ ಇಲ್ಲಿ ಭೌಗೋಲಿಕವಾಗಿ ಹೆಚ್ಚಿನ ವ್ಯತ್ಯಾಸ ಕಂಡುಬರದಿದ್ದರೂ ಸಾಮಾಜಿಕವಾಗಿ ಹೆಚ್ಚಿನ ಭಿನ್ನತೆ ಕಂಡುಬರುತ್ತದೆ. ಈ ಲೇಖನದಲ್ಲಿ ಪ್ರಾದೇಶಿಕಪ್ರಭೇದತೆಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದರೂ ಅಲ್ಲಲ್ಲಿ ಪ್ರಮುಖ ಪ್ರಭಾವ ಬೀರಿರುವ ಸಾಮಾಜಿಕಪ್ರಭೇದ ವನ್ನೂ ಕುರಿತು ವಿವೇಚಿಸಿದ್ದೇನೆ. ನಮ್ಮ ಸಮಾಜದ ತೆಕ್ಕೆಗೆ ಸಿಕ್ಕದ ವಸ್ತುಗಳೇ ಅಪರೂಪವಾಗಿರುವ ಇಂದು, ಭಾಷೆ ಸಹ ಅದಕ್ಕೆ ಹೊರತಾಗಿಲ್ಲ.

೨. ತುಮಕೂರು ಜಿಲ್ಲೆಯ ಕನ್ನಡವನ್ನು ಶಿಷ್ಟಭಾಷೆಗೆ ಹೋಲಿಸಿ ನೋಡು ವಾಗ ನಮಗೆ ಮುಖ್ಯವಾಗಿ ಕಾಣುವ ಧ್ವನಿಮಾವ್ಯವಸ್ಥೆಯನ್ನೂ, ವ್ಯಾಕರಣವ್ಯವಸ್ಥೆ ಯನ್ನೂ ಈಗ ವಿವೇಚಿಸೋಣ.

೨.೧ ಧ್ವನಿಮಾವ್ಯವಸ್ಥೆ :

ತುಮಕೂರು ಜಿಲ್ಲೆಯ ಕನ್ನಡದ ಧ್ವನಿಮಾವ್ಯವಸ್ಥೆಯನ್ನು ಹೀಗೆ ನೋಡ ಬಹುದು.

೨.೨ ಸ್ವರಗಳು :

i		u
e	ə	o
	a	

/ ದೀರ್ಘ /

ಈ ಸ್ವರಧ್ವನಿಮಾಗಳಿಗಿರುವ ವೈದೃಶ್ಯವನ್ನು ಕೆಳಗಿನ ಉದಾಹರಣೆಗಳಿಂದ ಕಂಡುಕೊಳ್ಳಬಹುದು.

/i e/	/kirɨ̇du/	'small one'	/ki:ḷu/	'to pluck'
	/kere/	'tank'	/ke:ḷu/	'to ask or listen'
/a ə/	/agi/	'to dig'	/kari/	'to call'
	/əgi/	'to chew'	/kəri/	'to fry'
/u o/	/kuḍi/	'to drink'	/ku:ḍu	'to join'
	/koḍu/	'to give'	/ko:ḍu/	'horn'

೨.೩ ಮೂರು ಅಕ್ಷರಗಳಿರುವ ಪದದ ಎರಡನೆಯ ಅಕ್ಷರದಲ್ಲಿ ಬೇರೆ ಯಾವ ಸ್ವರಗಳಿದ್ದರೂ ಮಾತಾಡುವಾಗ ಅವು / ɨ̇ / ಆಗಿ ಬದಲಾಗುತ್ತವೆ. ಇಂತಹ ಪದಗಳನ್ನು ಗಮನಿಸಿದಾಗ ಸಂಯುಕ್ತಾಕ್ಷರಗಳು ಉಂಟಾದುವೆಂದು ಅನಿಸಿದರೂ ಅಲ್ಲಿ / ɨ̇ / ಬಳಕೆಯಾಗುತ್ತದೆ. ಉದಾ :

malagu	>	malɨ̇gu	'to sleep'
karedu	>	karɨ̇du	'having called'
koḍisu	>	koḍɨ̇su	'cause to give'
baduku	>	badɨ̇ku	'life'

೨.೪ **ವ್ಯಂಜನಗಳು :** ವ್ಯಂಜನಗಳಲ್ಲಿ ಮಹಾಪ್ರಾಣಗಳು ಬಳಕೆಯಲ್ಲಿ ಇಲ್ಲ. ಕೆಲವೊಮ್ಮೆ ಜಗಳವಾಡುವಾಗ ಜನರು ತಮ್ಮ ಮಾತಿನ ಮೇಲೆ ಹೆಚ್ಚು ಒತ್ತು ಕೊಡುವುದಕ್ಕೋಸ್ಕರ ಮಹಾಪ್ರಾಣಗಳನ್ನು ಬಳಸುವುದುಂಟು. ಉದಾ : 'ಭೋಳೀ ಮಗನೆ' ಇತ್ಯಾದಿ.

ಮಹಾಪ್ರಾಣಗಳನ್ನು ಬಿಟ್ಟು ವ್ಯಂಜನಧ್ವನಿಮಾವ್ಯವಸ್ಥೆಯಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬಾರದೇ ಇರುವುದರಿಂದ, ವ್ಯಂಜನಧ್ವನಿಮಾಗಳ ಪಟ್ಟಿಯನ್ನು ಇಲ್ಲಿ ಕೊಟ್ಟಿಲ್ಲ. ಏಕೆಂದರೆ, ಎಲ್ಲಕ್ಕಿಲ್ಲ ಧ್ವನಿಮಾಗಳು ಶಿಷ್ಟಭಾಷೆಯ ಧ್ವನಿಮಾಗಳಂತೆಯೇ ಇವೆ.

೨.೫ ತುಮಕೂರು ಜಿಲ್ಲೆಯ ಕನ್ನಡವನ್ನು ಶಿಷ್ಟಭಾಷೆಗೆ ಹೋಲಿಸಿ ನೋಡುವಾಗ ನಮಗೆ ಕಾಣುವ ಇನ್ನಿತರ ಪ್ರಮುಖ ಪ್ರಭೇದವೆಂದರೆ ಪದದಾದಿಯ 'ಹ'ಕಾರ ಮತ್ತು 'ಇ' ಸ್ವರವನ್ನು ಹಿಂಬಾಲಿಸಿ ಬರುವ ಪದದಾದಿಯ 'ವ'ಕಾರ ಬಿದ್ದುಹೋಗುವುದು. ಉದಾ :

ಹಾಲು > ಆಲು
ಹೊರೆ > ಒರೆ
ಹೀರು > ಈರು

ವಿಶ್ವನಾಥ > ಇಸ್ವನಾತ
ವಿಭೂತಿ > ಇಬೂತಿ

ಅಂದರೆ ಇಲ್ಲಿ 'ಹ'ಕಾರ ಮತ್ತು 'ವ' ಕಾರ '∅' (ಶೂನ್ಯ) ದೊಂದಿಗೆ ನಿಯಮಿತವಾಗಿ ಸ್ವಚ್ಛಂದ ಬಳಕೆಯನ್ನು (Free variation) ಹೊಂದಿವೆ. ಆದರೆ ವಿದ್ಯಾವಂತರ ಮತ್ತು ಬ್ರಾಹ್ಮಣರ ಮಾತಿನಲ್ಲಿ ಈ ಬದಲಾವಣೆ ಕಂಡುಬರದೆ, ಅವರು 'ಹಾಲು', 'ವಿಭೂತಿ' ಎಂದೇ ಬಳಸುತ್ತಾರೆ.

೩. ವ್ಯಾಕರಣ ವ್ಯವಸ್ಥೆ :

ವ್ಯಾಕರಣವ್ಯವಸ್ಥೆಯಲ್ಲಿ ಶಿಷ್ಟಭಾಷೆಗಿಂತ ಭಿನ್ನವಾದ ರೂಪಗಳನ್ನು ಮಾತ್ರ ತೆಗೆದುಕೊಂಡು ಇಲ್ಲಿ ವಿವೇಚಿಸಿದ್ದೇನೆ. ಶಿಷ್ಟಭಾಷೆಯಲ್ಲಿ ಇರುವಂತೆಯೇ ಉಪಯೋಗಿಸಲ್ಪಡುವ ವ್ಯಾಕರಣಾಂಶಗಳನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

೩.೧ **ಬಹುವಚನಪ್ರತ್ಯಯಗಳು :** ನಪುಂಸಕಲಿಂಗಗಳಿಗೆ ಬಹುವಚನ ಪ್ರತ್ಯಯಗಳು ಹತ್ತುತ್ತವೆ. ಸ್ವರಸಾಮ್ಯವಿಧಿಗೆ ಇದು ಒಳ್ಳೆಯ ಉದಾಹರಣೆ. ಗ್ರಾಂಥಿಕಕನ್ನಡದ -ಗಳು, ಆಡುಮಾತಿನಲ್ಲಿ -ಗುಳು ಆಗಿ ಬದಲಾವಣೆಗೊಂಡಿದೆ. ಉದಾ : ಮರಗುಳು

ಬಂಧುವಾಚಕಗಳಿಗೆಲ್ಲ -ದೀರು ಬಹುವಚನಪ್ರತ್ಯಯ ಹತ್ತುತ್ತವೆ. ಉದಾ :

ಅಕ್ಕದೀರು, ಸೊಸೇದೀರು

ಬಂಧುವಾಚಕಗಳಲ್ಲದ 'ಅ'ಕಾರಾಂತ ಮಹತ್‌ಪದಗಳು -ರು ಬಹುವಚನ ಪ್ರತ್ಯಯ ಪಡೆದುಕೊಳ್ಳುತ್ತವೆ. ಉದಾ : ಹುಡುಗರು

೩.೨ **ವಿಭಕ್ತಿಪ್ರತ್ಯಯಗಳು :** ಪ್ರಥಮಾ ವಿಭಕ್ತಿಪ್ರತ್ಯಯ ಇಲ್ಲ. ದ್ವಿತಿಯಾ ವಿಭಕ್ತಿಪ್ರತ್ಯಯ, ಮಹತ್‌ಪದಗಳು ಮತ್ತು ಸರ್ವನಾಮಗಳೊಂದಿಗೆ ಮಾತ್ರ ಬಳಸಲ್ಪಡುತ್ತದೆ. ಆದರೆ ನಪುಸಕಲಿಂಗಗಳೊಂದಿಗೆ ಬಳಸಲ್ಪಡುವುದಿಲ್ಲ. ದ್ವಿತಿಯಾ ವಿಭಕ್ತಿ ಪ್ರತ್ಯಯ - 'ನ್ನ'. ಉದಾ :

ರಾಮನ್ನ ಕರಿ.
ಅವನ್ನ ಕೇಳು.

ತೃತಿಯಾ ಮತ್ತು ಪಂಚಮಿ – 'ಇಂದ'.

ಚತುರ್ಥಿ ವಿಭಕ್ತಿಪ್ರತ್ಯಯ ಎರಡು : –'ಕ್ಕೆ' ಮತ್ತು –'ಗೆ'.

–ಕ್ಕೆ ಸಂಖ್ಯಾನಾಮಗಳ ಮುಂದೆಯೂ, 'ಅ' ಕಾರಾಂತ ನಪುಂಸಕಲಿಂಗಗಳ ಮುಂದೆಯೂ ನಪುಂಸಕಲಿಂಗ ಸರ್ವನಾಮಗಳ ಮುಂದೆಯೂ ಬಳಸಲ್ಪಡುತ್ತದೆ. ಉದಾ:

ಮೂರಕ್ಕೆ, ಮರಕ್ಕೆ, ಅದಕ್ಕೆ.

ಮಿಕ್ಕ ಎಲ್ಲೆಡೆಯಲ್ಲಿ –ಗೆ ಬಳಸಲ್ಪಡುತ್ತದೆ. ಉದಾ :

ನನಗೆ, ಮನೆಗೆ, ರಾಮುನಗೆ

ಷಷ್ಠಿ ವಿಭಕ್ತಿಪ್ರತ್ಯಯ –'ಅ'.

ಇ, ಎ, ಉಕಾರಾಂತ ನಾಮಗಳಿಗೆ ಷಷ್ಠಿಯನ್ನು ಸೇರಿಸಿದಾಗ ಆ ಸ್ವರಗಳು ದೀರ್ಘವಾಗುತ್ತವೆ. ಉದಾ :

ಮನೇ ಮುಂದೆ ಮರ ಐತೆ.
ಕುರೀ ತುಪ್ಪ್ಟ
ಗುರೂ ಹತ್ರ ಪಾಟ ಕಲಿ.

ಸಪ್ತಮಿ ವಿಭಕ್ತಿಪ್ರತ್ಯಯ –'ಲಿ'. ಉದಾ :

ಊರ್‌ಲಿ, ಮನೇಲಿ.

೩.೩ ಕ್ರಿಯಾಪದಗಳು :

೩.೪ ವಿಧ್ಯರ್ಥರೂಪ : –'ಆನ'. ಉದಾ :

ಓಗಾನ, ಬರಾನ

೩.೫ ಆಖ್ಯಾತಪ್ರತ್ಯಯಗಳು : ವರ್ತಮಾನಕಾಲದಲ್ಲಿ

	ಏಕವಚನ	ಬಹುವಚನ
ಪ್ರಥಮಪುರುಷ	– ಈನಿ	– ಈವಿ
ದ್ವಿತೀಯಪುರುಷ	– ಈಯ	– ಈರಿ
ತೃತೀಯಪುರುಷ		
ಪುಲ್ಲಿಂಗ	– ಆನೆ	– ಅರೆ
ಸ್ತ್ರೀಲಿಂಗ	– ಆಳೆ	
ನಪುಂಸಕಲಿಂಗ	– ಎ, – ಅದೆ	– ಅವೆ

ಗ್ರಾಮೀಣಪ್ರದೇಶದಲ್ಲಿ ತೃತಿಯಪುರುಷದಲ್ಲಿ ಹಿರಿಯರನ್ನು ಕುರಿತು ಹೇಳುವಾಗ ನಪುಂಸಕಲಿಂಗ ಏಕವಚನದ ಆಖ್ಯಾತಪ್ರತ್ಯಯವನ್ನು ಬಳಸಲಾಗುತ್ತದೆ. ಇದು ಗೌರವ ಸೂಚಕವೇ ಹೊರತು ಹಿರಿಯರ ಬಗೆಗೆ ತೋರಿಸುವ ಅಗೌರವ ಸೂಚಕವಲ್ಲ. ಉದಾ :

ನಮ್ಮಯ್ಯ ತೋಟಕ್ಕೆ ಓಗೈತೆ.
ನಮ್ಮಜ್ಜಿ ಓಯ್ತು.

೩.೬ ಭೂತಕಾಲದಲ್ಲಿ ಪ್ರಥಮಪುರುಷ ಬಹುವಚನದ ಆಖ್ಯಾತಪ್ರತ್ಯಯ ಮತ್ತು ತೃತಿಯಪುರುಷ ನಪುಂಸಕಲಿಂಗ ಬಹುವಚನದ ಅಖ್ಯಾತಪ್ರತ್ಯಯಗಳೆರಡೂ – ಉ. ಮಿಕ್ಕ ಆಖ್ಯಾತಪ್ರತ್ಯಯಗಳೆಲ್ಲಾ ಶಿಷ್ಟಭಾಷೆಯಂತೆಯೇ ಇವೆ. ಉದಾ :

ನಾವ್ ಓದು.
ಅವ್ ಬಂದು.


೩.೭ ಭೂತಕಾಲಸೂಚಕದಲ್ಲಿ –'ಇದೆ' ಪ್ರತ್ಯಯವನ್ನು ಸ್ತ್ರೀಲಿಂಗದೊಂದಿಗೆ ಪೂರ್ತಿ ಬಳಸುವುದಿಲ್ಲ. –'ಇದೆ' ಪ್ರತ್ಯಯವನ್ನು ಬಳಸಿದಾಗಲೆಲ್ಲಾ –'ದ' ವ್ಯಂಜನ ಬಿದ್ದುಹೋಗಿ –'ಇ' ಸ್ವರ ದೀರ್ಘವಾಗುತ್ತದೆ. ಉದಾ :

ನೋಡಿದಳು ನೋಡೀಳು
ಮಾತಾಡಿದಳು ಮಾತಾಡೀಳು

೩.೮ ಮೇಲೆ ತಿಳಿಸಿದ ಈ ವ್ಯತ್ಯಾಸಗಳು ಬಹಳ ಪ್ರಧಾನವಾಗಿ ಕಂಡು ಬರುವಂತಹವುಗಳು. ಗ್ರಾಮೀಣಪ್ರದೇಶಕ್ಕೆ ಹೋಗಿ ಹರಿಜನರ ಮತ್ತು ಸಾಮಾಜಿಕವಾಗಿ ಕೆಳಮಟ್ಟದಲ್ಲಿರುವ ಇತರ ಜನಾಂಗದವರ ಭಾಷೆಯನ್ನು ಗಮನಿಸಿದಾಗ, ಅತಿ ಹೆಚ್ಚಿನ ಬದಲಾವಣೆಯನ್ನು ನೋಡಬಹುದು. ಉದಾಹರಣೆಗೆ ಪರಿಮಾಣವಾಚಕಗಳಾದ ಅಷ್ಟು, ಇಷ್ಟು, ಎಷ್ಟುಗಳು ಆಟು, ಈಟು, ಏಟುಗಳಾಗಿವೆ. ಹಾಗೆ, ಹೀಗೆ ಹೇಗೆಗಳು ಅಂಗೆ, ಇಂಗೆ, ಎಂಗೆ ಗಳಾಗಿವೆ. ಗಮನಿಸುತ್ತಾ ಹೋದಂತೆಲ್ಲಾ ಅವರ ಭಾಷೆ ಸಂಕೀರ್ಣವಾದ ವ್ಯಾಕರಣವ್ಯವಸ್ಥೆಯನ್ನು ಸರಳಗೊಳಿಸಿದೆ ಅನಿಸುತ್ತದೆ. ಈ ಲೇಖನದಲ್ಲಿ ಹೆಚ್ಚಾಗಿ ತುಮಕೂರಿನ ಪ್ರಾದೇಶಿಕಪ್ರಭೇದಕ್ಕೆ ಹೆಚ್ಚಿಗೆ ಗಮನ ಕೊಟ್ಟಿರುವುದರಿಂದ ತುಮಕೂರು ಜಿಲ್ಲೆಯ ಕನ್ನಡ, ಇಡಿಯಾಗಿ ಹೇಗೆ ಗ್ರಾಂಥಿಕ ಕನ್ನಡಕ್ಕಿಂತ ಭಿನ್ನ ಎಂಬುದನ್ನು ಇಷ್ಟಕ್ಕೇ ಮಿತಿಗೊಳಿಸಿಕೊಂಡಿದ್ದೇನೆ.

೪ ತುಮಕೂರು ಜಿಲ್ಲೆಯಲ್ಲಿ ಹತ್ತು ತಾಲೂಕುಗಳಿವೆ. ತುಮಕೂರು, ಪಾವಗಡ, ಶಿರ, ಮಧುಗಿರಿ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ, ಗುಬ್ಬಿ ಮತ್ತು ಕುಣಿಗಲ್ಲು. ಈ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ಪ್ರಾಂತೀಯ ಹೆದ್ದಾರಿ ಹಾದುಹೋಗುತ್ತವೆಂದು ಓಂದೆಯೇ ತಿಳಿಸಿದೆ. ಈ ಹೆದ್ದಾರಿ

ಗಳ ಪ್ರಭಾವ ಕುಣಿಗಲ್ಲು ಮತ್ತು ಪಾವಗಡ ತಾಲೂಕುಗಳನ್ನುಳಿದು ಮಿಕ್ಕೆಲ್ಲ ತಾಲೂಕುಗಳ ಮೇಲೂ ಆಗಿದೆ. ಆ ದೃಷ್ಟಿಯಿಂದ ಈ ಹೆದ್ದಾರಿಗಳನ್ನೇ ನಾನು ಪ್ರಾದೇಶಿಕ ಪ್ರಭೇದಗಳನ್ನು ಗುರುತಿಸಲು ಬಳಸಿಕೊಂಡಿದ್ದೇನೆ. ಭೌಗೋಲಿಕ ಹಾಗೂ ಸಾಮಾಜಿಕ ಮಹತ್ವದ ದೃಷ್ಟಿಯಿಂದ ತುಮಕೂರು ಜಿಲ್ಲೆಯ ಕನ್ನಡವನ್ನು ನಾಲ್ಕು ಪ್ರಭೇದಗಳಾಗಿ ಗುರುತಿಸಬಹುದು. ೧) ರಾಷ್ಟ್ರೀಯ ಹೆದ್ದಾರಿ ಹಾದುಹೋಗುವ ಆಸುಪಾಸಿನ ತಾಲೂಕುಗಳು. ೨) ಪ್ರಾಂತೀಯ ಹೆದ್ದಾರಿ ಹಾದುಹೋಗುವ ಆಸುಪಾಸಿನ ತಾಲೂಕುಗಳು. ೩) ಕುಣಿಗಲ್ಲು ತಾಲೂಕು. ೪) ಪಾವಗಡ ತಾಲೂಕು (ನಕಾಶೆಯನ್ನು ನೋಡಿ).



ಕುಣಿಗಲ್ಲು ತಾಲೂಕಿನ ಭಾಷಾಪ್ರಭೇದವನ್ನು ಗುರುತಿಸಲು ನಾನು ಸಾಮಾಜಿಕ ಪ್ರಭೇದದ ಮೊರೆಹೊಕ್ಕಿದ್ದೇನೆ. ಏಕೆಂದರೆ ಭಾರತದಂತಹ ಸನ್ನಿವೇಶದಲ್ಲಿ ಯಾವ ಬೆಳವಣಿಗೆಯನ್ನೇ ಆಗಲಿ ಲಂಬವಾಗಿ (verticle) ಮತ್ತು ಸಮಾನಾಂತರವಾಗಿ (horizontal) ಗುರುತಿಸಬೇಕಾಗುತ್ತದೆ. ಸಮಾನಾಂತರ ಬೆಳವಣಿಗೆಯನ್ನು ಭೌಗೋಲಿಕಬೆಳವಣಿಗೆಗೂ ಲಂಬಬೆಳವಣಿಗೆಯನ್ನು ಸಾಮಾಜಿಕ ಬೆಳವಣಿಗೆಗೂ ಅನ್ವಯಿಸಿ, ಈ ವಿಭಾಗವನ್ನು ಮಾಡಲಾಗಿದೆ. ಭಾಷಾಪ್ರಭೇದ ಉಂಟಾಗುವುದು ಭೌಗೋಲಿಕ ಅಥವಾ ಸಾಮಾಜಿಕ ಅಂತರಗಳಿಂದ.

ಸಾಮಾಜಿಕವಾಗಿ ಭಾಷಾಪ್ರಭೇದ, ವ್ಯಕ್ತಿಯ ಪರಿಸರಕ್ಕನುಗುಣವಾಗಿ ಬೆಳೆಯುತ್ತಾ ಹೋಗುತ್ತದೆ. ನಮ್ಮ ಸಮಾಜದಲ್ಲಿ ಅತ್ಯಂತ ಉಚ್ಚಜಾತಿಯೆಂದು ಪರಿಗಣಿಸಲ್ಪಟ್ಟಿರುವ ಬ್ರಾಹ್ಮಣರ ಭಾಷೆ ಗ್ರಂಥಸ್ಥ ಭಾಷೆಗೆ ತೀರ ಹತ್ತಿರವಾಗಿರುವುದು, ಹರಿಜನರ ಭಾಷೆ ಗ್ರಂಥಸ್ಥಭಾಷೆಗಿಂತ ತೀರ ಭಿನ್ನವಾಗಿರುವುದು ಅವರವರ ಪರಿಸರದ ಪ್ರಭಾವದಿಂದ. ಯಾವ ಭೂಪ್ರದೇಶದಲ್ಲಿ ಒಂದೇ ಜನಾಂಗದವರು ಅತಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ ಅಲ್ಲಿ ಅವರದೇ ಆದ ಭಾಷೆ ರೂಪುಗೊಂಡು, ಅದೊಂದು ಉಪಭಾಷೆಯಾಗುತ್ತದೆ. ಕುಣಿಗಲ್ಲು ತಾಲೂಕು ಬಹುತೇಕ ಒಕ್ಕಲಿಗರನ್ನು ಒಳಗೊಂಡಿದೆ. ಮೇಲಾಗಿ ಮಂಡ್ಯ ಜಿಲ್ಲೆಯ ಗಡಿ ತಾಲೂಕಾಗಿದೆ. ಈ ದೃಷ್ಟಿಯಿಂದ ಅದು ತನ್ನದೇ ಆದ ವೈಶಿಷ್ಟ್ಯಗಳನ್ನು ಪಡೆದಿರುವುದರಿಂದ ಅದನ್ನು ಒಂದು ಉಪಭಾಷಾಪ್ರಾಂತವನ್ನಾಗಿ ಮಾಡಿಕೊಂಡಿದ್ದೇನೆ.

ತುಮಕೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತುಂಬಾ ವಿಚಿತ್ರವಾದ ಪರಿಸರದಲ್ಲಿರುವುದೆಂದರೆ ಪಾವಗಡ. ಇದು, ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಗಡಿ ತಾಲೂಕು. ಇದು ಆಂಧ್ರಪ್ರದೇಶದ ಒಳಗೆ ಇರುವ ಕನ್ನಡ ತಾಲೂಕು ಎಂದರೂ ನಡೆಯುತ್ತದೆ. ಪಾವಗಡಕ್ಕೆ ಹೋಗುವಾಗ ಆಂಧ್ರಪ್ರದೇಶದ ಟೋಲ್‌ಗೇಟ್ ದಾಟಿಯೇ ಹೋಗಬೇಕಾದಂತಹ ಪರಿಸರದಲ್ಲಿರುವ ಈ ತಾಲೂಕು, ಭಾಷಾಧ್ಯಯನದ ದೃಷ್ಟಿಯಿಂದ ಅತಿ ಮಹತ್ವದ್ದಾದ್ದರಿಂದ ಅದನ್ನು ಒಂದು ಉಪಭಾಷಾ ವಿಭಾಗವನ್ನಾಗಿ ಮಾಡಿಕೊಂಡಿದ್ದೇನೆ.

೪.೧ ನಾನೇ ಸ್ವತಃ ಎಲ್ಲಾ ತಾಲೂಕುಗಳಿಗೆ ಹೋಗಿ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಸಾಧ್ಯವಾಗಿಲ್ಲ. ಮೈಸೂರಿನಲ್ಲಿ ಓದುತ್ತಿರುವ ಕೆಲವು ವಿದ್ಯಾರ್ಥಿಗಳು ಮತ್ತು ತುಮಕೂರಿನಲ್ಲಿ ಓದುತ್ತಿರುವ ಕೆಲವು ವಿದ್ಯಾರ್ಥಿಗಳನ್ನು ಸಂದರ್ಶಿಸಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ, ಈ ಲೇಖನವನ್ನು ಬರೆದಿದ್ದೇನೆ. ಹೀಗಾಗಿ ನನ್ನ ಹೇಳಿಕೆಗೆ ಕೆಲವೊಮ್ಮೆ ವಿಸ್ತೃತವಾದ ಆಧಾರ ಸಿಗದೇ ಹೋಗಬಹುದು.

೫. ರಾಷ್ಟ್ರೀಯ ಹೆದ್ದಾರಿ ಹಾಗೂ ಪ್ರಾಂತೀಯ ಹೆದ್ದಾರಿಗಳು ಹಾದು ಹೋಗುವ ಆಸುಪಾಸಿನ ತಾಲೂಕುಗಳಲ್ಲಿ ಬಳಕೆಯಾಗುತ್ತಿರುವ ಕೆಲವು ವಿಶಿಷ್ಟ ಪದಾವಳಿಗಳನ್ನು ಈಗ ಗಮನಿಸೋಣ. ಈ ವಿಶಿಷ್ಟಪದಗಳ ಮೇಲೆಯೇ ನಾನು ಈ ಎರಡೂ ಉಪಭಾಷಾಗಡಿಗಳನ್ನು ಗುರುತಿಸಿರುವುದು.

೫.೧ ಪ್ರಾಂತೀಯ ಹೆದ್ದಾರಿ ಹಾದುಹೋಗುವ ತಿಪಟೂರು, ಚಿಕ್ಕನಾಯಕನ ಹಳ್ಳಿ, ತುರುವೇಕೆರೆ ತಾಲೂಕುಗಳಲ್ಲಿ ಕಣಕ್ಕೆ ಹುಲ್ಲು ಹಾಕಿ ದನಗಳನ್ನು ಕಟ್ಟಿ ಪೈರಿನಿಂದ ಕಾಳನ್ನು ಬೇರ್ಪಡಿಸುವುದಕ್ಕೆ 'ಎಣೆಕಟ್ಟೋದು' ಎನ್ನುತ್ತಾರೆ. ಅದನ್ನೇ ರಾಷ್ಟ್ರೀಯ ಹೆದ್ದಾರಿಯ ಆಸುಪಾಸಿನ ತಾಲೂಕುಗಳಲ್ಲಿ 'ಒಕ್ಕಿ ಆಕೋದು' ಎನ್ನುತ್ತಾರೆ. ತುಮಕೂರು ಮತ್ತು ಗುಬ್ಬಿ ತಾಲೂಕುಗಳು ಒಂದು ರೀತಿಯಲ್ಲಿ 'ಸಂಕ್ರಮಣಕ್ಷೇತ್ರ' ಗಳು. ಈ ಎರಡೂ ತಾಲೂಕಿನಲ್ಲಿ ಮೇಲೆ ತಿಳಿಸಿದ ಎರಡೂ ರೂಪಗಳನ್ನು ಕಾಣ ಬಹುದು. ರಾಷ್ಟ್ರೀಯ ಹೆದ್ದಾರಿಯ ತಾಲೂಕುಗಳಲ್ಲಿ ಬೇಸಾಯ ಹೂಡುವುದಕ್ಕೆ 'ಮಡಕೆ ಕಟ್ಟೋದು' ಎನ್ನುತ್ತಾರೆ.' ಮಡಕೆ' ಎಂದರೆ ನೇಗಿಲು ಎಂದರ್ಥ. ತೆಲಗು ರಾಯಲ್‌ಸೀಮಾ ಉಪಭಾಷೆಯಲ್ಲಿ ಈಗಲೂ 'ಮಡಕ' ಎಂದೇ ಬಳಸುತ್ತಾರೆ. ಆದ್ದರಿಂದ ಇದು ತೆಲುಗಿನಿಂದ ಸ್ವೀಕರಿಸಿದ ಪದ ಇರಬಹುದು. ಈ 'ಮಡಕೆ' ಪದ ಇಂದು ಹೆಚ್ಚು ಕಡಿಮೆ ತುಮಕೂರಿನ ಹತ್ತಿರ ಹತ್ತಿರಕ್ಕೆ ವ್ಯಾಪಿಸಿದೆ. ಹೀಗೆ ಈ ಪ್ರದೇಶದಲ್ಲಿ ಅನೇಕ ತೆಲಗುಪದಗಳು ಕನ್ನಡಪದಗಳೇ ಆಗಿ ಬಳಕೆಯಾಗುತ್ತಿವೆ. ಪ್ರಾ. ಹೆ. ಯ ಪ್ರದೇಶಗಳಲ್ಲಿ ಇದಕ್ಕೆ 'ಆರು ಊಡೋದು' ಎನ್ನುತ್ತಾರೆ. ರಾ. ಹೆ. ಯ ಪ್ರದೇಶದಲ್ಲಿ ಇರುವೆಗೆ 'ಸೀಮೆ' ಎಂದು ಕರೆಯುತ್ತಾರೆ. ಪ್ರಾ. ಹೆ. ಯ ಪ್ರದೇಶದಲ್ಲಿ ಇರುವೆಯೇ ಇದೆ. ತುಮಕೂರಿನಿಂದ ಇಪ್ಪತ್ತೈದು ಮೈಲು ರಾ. ಹೆ. ಯಲ್ಲಿ ಶಿರಾದ ಕಡೆಗೆ ಹೋದರೆ 'ಗಾಡಿದಿ ಮಗನೆ' (ಹರಿಜನರಲ್ಲಿ) ಎಂಬ ಬೈಗಳವನ್ನೂ ಕೇಳಬಹುದು. 'ಕತ್ತೆ ಮಗನೆ' ಎಂಬ ಪದಕ್ಕ ಸಂವಾದಿಯಾಗಿ ಅವರು ತೆಲುಗು, ಕನ್ನಡ ಪದಗಳ ಸಮ್ಮಿಶ್ರಣ ಬೈಗಳವಾದ 'ಗಾಡಿದಿ ಮಗನೆ' ಯನ್ನು ಬಳಸುತ್ತಾರೆ. ಆದರೆ ಅದು ಪ್ರಾ. ಹೆ. ಯ ಪ್ರದೇಶಗಳಲ್ಲಿ ಇಲ್ಲ. ಶಿರಾದ ಸುತ್ತಮುತ್ತ 'ನಾಲ್ನಾರು' ಎಂದರೆ ನಾಲ್ಕುಮಂದಿ ಎಂದರ್ಥ. ಆದರೆ ತಿಪಟೂರು ಕಡೆ ಅದು 'ನಾಲಾರು' ಆಗಿದೆ.

೫.೨ ತೆಲುಗಿನ ಪದಗಳಷ್ಟೇ ಅಲ್ಲದೆ ಈ ಎರಡೂ ಪ್ರದೇಶಗಳಲ್ಲಿ ಕಂಡು ಬರುವ ಭಿನ್ನಪದಗಳನ್ನು ಈಗ ನೋಡಬಹುದು. ಉದಾ : ಪ್ರಾ. ಹೆ. ಯ ಪ್ರದೇಶದಲ್ಲಿ ಕಂಡುಬರುವ 'ಒತಿಕ್ಯಾತ' ಬೇರೆಕಡೆ 'ಒಣ್ಣೇಕ್ಯಾತ'ವಾಗುತ್ತದೆ. ರಾ. ಹೆ.ಯ ಪ್ರದೇಶದಲ್ಲಿರುವ 'ಸೀಗೆ ಸೀಮೆ ಗಿಡ' ಅಥವಾ 'ಬೇಲಿ ಗಿಡ' ಬೇರೆಡೆ 'ರೋಜಾಲ್ಡ್ ಗಿಡ'ವಾಗುತ್ತದೆ. ಪ್ರಾ.ಹೆ.ಯ ತಾಲೂಕುಗಳಲ್ಲಿ ಗುತ್ತಿಗೆಯ ಮೇಲೆ ತೆಂಗಿನಕಾಯಿಯನ್ನು ಕಿತ್ತುಕೊಡುವವನು 'ಗೊನೆಕಾರ'ನಾದರೆ ರಾ.ಹೆ.ಯ ತಾಲೂಕು

ಗಳಲ್ಲಿ 'ಕೇಣಿಕಾರ'ನಾಗುತ್ತಾನೆ. ನೀರುಹಾವಿಗೆ ಶಿರಾ, ಮಧುಗಿರಿಯಲ್ಲಿ 'ಗರೆ ಆವು' ಎಂದರೆ ತಿಪಟೂರು ಕಡೆ 'ಕರೆ ಆವು' ಎನ್ನುತ್ತಾರೆ. ಇಲ್ಲಿ ಪದದಾದಿಯ 'ಕ' ಕಾರ ಗಕಾರವಾಗಿರುವುದನ್ನು ನೋಡಬಹುದು. ವರ್ಷಕ್ಕೊಮ್ಮೆ ದೇವರ ಹೆಸರಿನಲ್ಲಿ ಉತ್ಸವ ವನ್ನೋ ಜಾತ್ರೆಯನ್ನೋ ಮಾಡಿ ಸಾರ್ವಜನಿಕವಾಗಿ ಅಲ್ಲಿ ನೆರೆದ ಮಂದಿಗೆಲ್ಲ ಊಟ ಹಾಕುವುದು ಈಗಲೂ ಕೆಲವೆಡೆಯಲ್ಲಿದೆ. ಇದನ್ನು ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲೂಕುಗಳಲ್ಲಿ 'ಪರ' ಎಂದು ಕರೆಯುತ್ತಾರೆ. ಆದರೆ ಗುಬ್ಬಿ, ತುಮಕೂರು, ಶಿರಾ ಸುತ್ತಮುತ್ತ 'ಕೊಪ್ಪಲು' ಎಂದು ಕರೆಯುತ್ತಾರೆ. ಕೆಲವೊಮ್ಮೆ ದಾನಿಗಳು ಮುಂದೆ ಬಂದು ತಮ್ಮ ಖರ್ಚಿನಲ್ಲಿ ಅನ್ನ ಸಂತರ್ಪಣೆ ನಡೆಸುತ್ತಾರೆ. ಅಂಥವರನ್ನು ಕೊಪ್ಪಲಿನವರು ಎಂದು ಕರೆಯುವುದು ರೂಢಿ. ಶಿರಾ, ಮಧುಗಿರಿ ಕಡೆ ಕಾಮನಬಿಲ್ಲಿಗೆ 'ಕಾವನಬಿಲ್ಲು' ಎಂದು ಕರೆಯುತ್ತಾರೆ. ಸ್ವರ ಮಧ್ಯದಲ್ಲಿ 'ಮ' ಕಾರ 'ವ'ಕಾರವಾಗಿ ಹಾಗೆಯೇ ಉಳಿದಿರುವುನ್ನು ಇಲ್ಲಿ ಕಾಣಬಹುದು. ಆಂಡಯ್ಯ ತನ್ನ 'ಕಬ್ಬಿಗರ ಕಾವ'ದಲ್ಲಿ ಮನ್ಮಥನನ್ನು 'ಕಾವ' ಎಂದೇ ಕರೆದಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಮಧುಗಿರಿಯ ಕಡೆ ಬಡಗಿಗಳು ಮರವನ್ನು ಉಜ್ಜಿ ನಯ ಮಾಡಲು ಉಪಯೋಗಿಸುವ ಸಾಧನಕ್ಕೆ 'ತೋಬ್ಡಾ' ಎಂದು ಕರೆಯುತ್ತಾರೆ. ಮಿಕ್ಕೆಡೆ ಅದಕ್ಕೆ 'ಅತ್‌ರಿ' ಎಂದು ಹೇಳುತ್ತಾರೆ. ಕೆಲವೊಮ್ಮೆ ಸಿಟ್ಟಿನಿಂದಲೋ ಅಥವಾ ವ್ಯಂಗ್ಯ ದಿಂದಲೋ ಮಾತನಾಡುವಾಗ 'ತೋಬ್ಡಾ ನಿಕಾಲ್' ಮಾಡ್ತೀನಿ ಎಂದು ಹೇಳುವು ದುಂಟು. ಅಂದರೆ ಹಣ್ಣುಗಾಯಿ ನೀರುಗಾಯಿ ಮಾಡ್ತೀನಿ ಎಂದರ್ಥ. ಅದನ್ನೇ ಬೇರೆಡೆಯಲ್ಲಿ 'ತೋಮ್ಟಾ ನಿಕಾಲೆ ಮಾಡ್ತೀನಿ' ಎಂದು ಬಳಸುತ್ತಾರೆ.

೬. ಕುಣಿಗಲ್ ಉಪಭಾಷೆ :

ಕುಣಿಗಲ್ ತಾಲೂಕಿನಲ್ಲಿ ಮಾತನಾಡುವ ಭಾಷೆಯನ್ನು 'ಗೌಡ ಉಪಭಾಷೆ' ಅಥವಾ 'ಒಕ್ಕಲಿಗ ಭಾಷೆ' ಎಂದು ಕರೆಯಬಹುದು. ಒಕ್ಕಲಿಗ ಎನ್ನುವುದು ಹಿಂದೆ ವೃತ್ತಿಸೂಚಕಪದವಾಗಿದ್ದು, ಈಗ ಜಾತಿಸೂಚಕಪದವಾಗಿ ಬಳಕೆಯಾಗುತ್ತಿದೆ. ನಾನು ಈ ಭಾಗದಿಂದ ಹೆಚ್ಚಿನ ಮಾಹಿತಿಯನ್ನು ಸಂಗ್ರಹಮಾಡಿಲ್ಲವಾದ್ದರಿಂದ ಒಂದೆರಡು ವಾಕ್ಯಗಳನ್ನು ಮಾತ್ರ ಉದಾಹರಣೆಗಾಗಿ ಕೊಡುತ್ತಿದ್ದೇನೆ.

'ಹಳೆಯ ಮೈಸೂರು' ಪ್ರದೇಶದಲ್ಲಿ ಒಕ್ಕಲಿಗರದೇ ಒಂದು ವಿಶಿಷ್ಟವಾದ ಉಪ ಭಾಷೆಯಾಗಿ ಉಳಿದುಕೊಂಡಿದೆ. ಅವರು ಮಾತನಾಡುವಾಗ ಉಂಟಾಗುವ ಸ್ವರಗಳ ಏರಿಳಿದಾಟ, ಒಮ್ಮೊಮ್ಮೆ ಪದಗಳನ್ನು ಎಳೆದೆಳೆದು ಮಾತನಾಡುವುದು. ಅನುನಾಸಿಕ ಧ್ವನಿಯನ್ನು ವ್ಯಾಪಕವಾಗಿ ಉಚ್ಚರಿಸುವುದು. ತಮ್ಮದೇ ವಿಶಿಷ್ಟವಾದ ಪದಗಳನ್ನು ಬಳಸುವುದು ಮುಂತಾದವುಗಳೆಲ್ಲ ಆ ಭಾಷೆಯನ್ನು ಎದ್ದುಕಾಣುವಂತೆ ಮಾಡಿವೆ. ಉದಾ :

ನೀ ಊರ್ಗೆ ಓತಿಯಾ ಅಥವಾ ಓಯ್ತೀಯಾ.
ನಾನ್ ಅಲ್ಗಿ ಬತ್ತಿವ್ನಿ.
ನಾವ್ ಬಂದೋ– ಮುಂತಾದ ವಾಕ್ಯಗಳನ್ನು ನೋಡಬಹುದು.

೭. ಪಾವಗಡ ಉಪಭಾಷೆ :

ಹಿಂದೆ ತಿಳಿಸಿದಂತೆಯೇ ಪಾವಗಡ ತಾಲೂಕು ಭೌಗೋಲಿಕವಾಗಿ ಬಹಳ ವಿಚಿತ್ರವಾದ ಪರಿಸರದಲ್ಲಿದೆ. ಆಂಧ್ರಪ್ರದೇಶದಲ್ಲಿರುವ ಈ ತಾಲೂಕು, ಆಡಳಿತದ ದೃಷ್ಟಿಯಿಂದ ಹೇಗೆ ತುಮಕೂರು ಜಿಲ್ಲೆಗೆ ಸೇರಿಸಲ್ಪಟ್ಟಿತೋ ತಿಳಿಯದು. ಈ ತಾಲೂಕಿನಲ್ಲಿರುವ ಪ್ರಮುಖ ಜನಾಂಗಗಳೆಂದರೆ ಕಮ್ಮ ಒಕ್ಕಲಿಗರು, ಗೊಲ್ಲರು, ನೇಕಾರರು, ಕುರುಬರು, ಲಂಬಾಣಿಗಳು, ರೆಡ್ಡಿಗಳು ಮತ್ತು ಬ್ರಾಹ್ಮಣರು. ಇವರಲ್ಲಿ ಬಹುಶಃ ಎಲ್ಲರಿಗೂ ತೆಲುಗು ಗೊತ್ತು. ಗ್ರಾಮೀಣಪ್ರದೇಶಗಳಲ್ಲಿ ಅದರಲ್ಲೂ ಹರಿಜನರು ಹೆಚ್ಚಾಗಿ ತೆಲುಗನ್ನೇ ಮಾತನಾಡುತ್ತಾರೆ. ಅಲ್ಲಿಯ ಜನ ಕನ್ನಡವನ್ನು ಮಾತನಾಡುವಾಗ ತೆಲುಗಿನಿಂದ ಸ್ವೀಕರಿಸಿದ ಪದಗಳನ್ನೂ ವ್ಯಾಕರಣಾಂಶಗಳನ್ನೂ ಕಾಣಬಹುದು. ನಾನು ಸಂಗ್ರಹಿಸಿರುವ ಪದಗಳು ಮತ್ತು ವಾಕ್ಯಗಳು ಬಹಳ ಕಡಿಮೆ ಇದ್ದರೂ ಅಲ್ಲಿ ನಡೆದಿರಬಹುದಾದ ಭಾಷಾಸಂಪರ್ಕದ ಅರಿವಾಗದೆ ಇರದು.

೭.೧ ಪಾವಗಡ ತಾಲೂಕಿನಲ್ಲಿ ಕಟ್ಟಿರುವೆಗೆ 'ಸೇಳ್‌ಕುಟ್ರಿ' ಎಂದು ಕರೆಯುತ್ತಾರೆ. 'ಸೇಳ್' ಎನ್ನುವುದು ಕನ್ನಡದ ಚೇಳಿನ ರೂಪ. 'ಕುಟ್ಟು' ಎಂದರೆ ತೆಲುಗಿನಲ್ಲಿ ಚುಚ್ಚುವುದು ಎಂದರ್ಥ. ಇವೆರಡನ್ನೂ ಸೇರಿಸಿ ಕಟ್ಟಿರುವೆಯನ್ನು ಕರೆಯುವುದಕ್ಕೆ ಉಪಯೋಗಿಸುತ್ತಾರೆ. ತೆಂಗಿನಕಾಯನ್ನು ಕೀಳುವ ಬಿದಿರುಕಡ್ಡಿಗೆ ಚಿಕ್ಕನಾಯಕನಹಳ್ಳಿ, ತಿಪಟೂರು, ತುರುವೇಕೆರೆ ತಾಲೂಕುಗಳಲ್ಲಿ 'ಜವಣಿಗೆ' ಎಂದು ಕರೆಯುತ್ತಾರೆ. ಅದೇ 'ಜವಣಿಗೆ' ಪಾವಗಡ ತಾಲೂಕಿನಲ್ಲಿ 'ಜವನಿಗೆ' ಆಗಿದೆ. ಅಂದರೆ ತೆಲುಗಿನಲ್ಲಿ ಪದಮಧ್ಯದಲ್ಲಿ ಮೂರ್ಧನ್ಯ ಅನುನಾಸಿಕಗಳು ಇಲ್ಲ. ಆದ್ದರಿಂದ ಕನ್ನಡದ 'ಣ' ಅಲ್ಲಿ 'ನ' ಆಯಿತು. ಈ ಬದಲಾವಣೆಯನ್ನು ಕೆಲವು ನಾಮವಾಚಿಗಳಲ್ಲೂ ಕಾಣಬಹುದು. ಕನ್ನಡದ ಸಣ್ಣಮಲ್ಲಪ್ಪ, ಸಣ್ಣಯ್ಯಪ್ಪ. ಅಲ್ಲಿ ಸನ್ನಮಲ್ಲಪ್ಪ ಮತ್ತು ಸನ್ನಯ್ಯಪ್ಪಗಳಾಗಿವೆ.

೭.೨ ಕನ್ನಡವಾಕ್ಯದಲ್ಲಿ ಕೆಲವೊಮ್ಮೆ ತೆಲುಗಿನ ಪದಗಳನ್ನೂ. ವ್ಯಾಕರಣಾಂಶಗಳನ್ನೂ ಕಾಣಬಹುದು.

'ಪಾಂಬು ಬತ್ತೈತೆ' ಎಂದರೆ ಹಾವು ಬರ್‍ತಾ ಇದೆ ಎಂದು ಅರ್ಥ. ಇಲ್ಲಿ ಪಾಂಬು ತೆಲುಗುಪದ, 'ಬತ್ತೈತೆ' ಕನ್ನಡ ಕ್ರಿಯಾಪದ. ಇದೇ ವಾಕ್ಯವನ್ನು ಇತರ ತಾಲೂಕಿನಲ್ಲಿ ಸಣ್ಣ ಮಕ್ಕಳು ಅಳುವಾಗ ಅವರನ್ನು ಸುಮ್ಮನಿರಿಸುವುದಕ್ಕೆ 'ಪಾವಿ ಬಂತು' ಎಂದು

ಕರೆಯುವುದು ರೂಢಿಯಲ್ಲಿದೆ. ಪೈರನ್ನು ನಾಟಿಹಾಕುವಾಗ ಸಾಲು ಹೊಡೆಯು ವುದನ್ನು 'ಗೊರ್ರೊಡೆಯೋದು' ಎಂದು ಕರೆಯುತ್ತಾರೆ. 'ಗೊರ್ರು' ಎಂದರೆ ತೆಲುಗಿನಲ್ಲಿ ಸಾಲು ಹೊಡೆಯುವ ಸಾಧನ, 'ಹೊಡೆಯೋದು' ಕನ್ನಡದ ಕ್ರಿಯಾವಾಚಿ. ಅದೇ ರೀತಿಯಲ್ಲಿ 'ನೆಗಡಾಯಿಂದ' ಸಹ. ಕನ್ನಡದ 'ನೆಗಡಿ', ತೆಲುಗಿನ 'ಆಯಿಂದ'. ಇಲ್ಲಿ ತೆಲುಗಿನ ಕ್ರಿಯಾವಾಚಿಯನ್ನು ಕಾಣಬಹುದು. 'ನೀಳ್ಳು ತಗೊಂಬಾ' ಎಂದರೆ ನೀರು ತೆಗೆದುಕೊಂಡು ಬಾ ಎಂದರ್ಥ. 'ಕೂದಲು ದುಬ್ಬಾರಾ' ಎಂದರೆ 'ತಲೆ ಬಾಚಿಕೊ ಬಾ' ಎಂದರ್ಥ. 'ದುಬ್ಬಾ' ಎಂದರೆ ಬಾಚಿಕೊ ಎಂದೂ 'ರಾ' ಎಂದರೆ 'ಬಾ' ಎಂದೂ ಅರ್ಥೈಸಿಕೊಳ್ಳಬೇಕು. 'ಶೆಲ್ಕೋಲ್ ತಗೊಂಬಾ' ಎಂದರೆ ಬಾರುಕೋಲು ತೆಗೆದು ಕೊಂಡು ಬಾ ಎಂದರ್ಥ. ಬಹುಶಃ ಇಲ್ಲಿ ವ್ಯಾಪಕವಾದ ಅಧ್ಯಯನ ನಡೆಸಿದಲ್ಲಿ ಈ ಎರಡು ಭಾಷೆಗಳ ಮಧ್ಯೆ ನಡೆದಿರಬಹುದಾದ ಪರಸ್ಪರ ಸಂಪರ್ಕವನ್ನು ಕುರಿತಾದ ಒಳ್ಳೆಯ ಸಮೀಕ್ಷೆಯೊಂದು ಹೊರಬರುವುದರಲ್ಲಿ ಸಂದೇಹವಿಲ್ಲ. ನನಗೆ ಇದ್ದ ಮಿತಿಯಿಂದಾಗಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ.

೭.೩ ಇಲ್ಲಿ ವಾಸಿಸುವ ಲಂಬಾಣಿಗಳು ಲಂಬಾಣಿ, ತೆಲುಗು ಮತ್ತು ಕನ್ನಡ ಮಿಶ್ರಿತ ಭಾಷೆಯನ್ನು ಮಾತನಾಡುತ್ತಾರೆಂದು ಕೇಳಿದ್ದೇನೆ. ಆದರೆ ಅದನ್ನು ಸಂಗ್ರಹಿ ಸಲು ಸಾಧ್ಯವಾಗಲಿಲ್ಲ. ಒಂದೇ ಜನಾಂಗದವರು ಮೂರು ಭಿನ್ನಭಾಷೆಗಳನ್ನು ಒಟ್ಟಿಗೆ ಸೇರಿಸಿ ಮಾತನಾಡುವುದು ನಿಜಕ್ಕೂ ಕುತೂಹಲಕಾರಿಯೇ ಹೌದು.

೮. ಇಲ್ಲಿಯವರೆಗೆ ಬಹು ಸ್ಥೂಲವಾಗಿ ತುಮಕೂರು ಜಿಲ್ಲೆಯ ಕನ್ನಡದ ಪ್ರಾದೇ ಶಿಕ ಪ್ರಭೇದವನ್ನು ಮಾಡಿಕೊಟ್ಟಿದ್ದೇನೆ. ಈಗೀಗ ಗ್ರಾಮೀಣಪ್ರದೇಶದಲ್ಲಿಯ ವಿಶಿಷ್ಟ ಕನ್ನಡಪದಗಳು ಬಳಕೆಯಿಂದ ಮರೆಯಾಗುತ್ತಿವೆ. ನಾನು ಚಿಕ್ಕಂದಿನಲ್ಲಿ ಕೇಳಿದ್ದ ಅನೇಕ ಶಬ್ದಗಳು ಈಗಾಗಲೇ ನಶಿಸಿಹೋಗಿವೆ. ವ್ಯಾಪಕವಾದ ಪರಿವೀಕ್ಷಣೆಯ ಮುಖಾಂತರ ಇವೆಲ್ಲವನ್ನೂ ಸಂಗ್ರಹಿಸಿದಲ್ಲಿ ಮುಂದೆ, ಐತಿಹಾಸಿಕ ಮಹತ್ವವುಳ್ಳವಾಗಿ ಉಪಯೋಗಕ್ಕೆ ಬರಬಹುದು. ಅಲ್ಲದೆ ಸಾಮಾಜಿಕಪ್ರಭೇದಗಳ ಅಧ್ಯಯನ ಕೈಗೊಂಡರೆ ಅವು ಸಾಂಸ್ಕೃ ತಿಕವಾಗಿ ಮಹತ್ವದ್ದಾಗಬಹುದು.

• •

ಕೋಲಾರ ಜಿಲ್ಲೆಯ ಕನ್ನಡ

● ಕೆ. ನಾರಾಯಣ

ಕೋಲಾರ ಜಿಲ್ಲೆಯು ಪಶ್ಚಿಮಕ್ಕೆ ಬೆಂಗಳೂರು, ತುಮಕೂರು ಜಿಲ್ಲೆಗಳಿಂದಲೂ ಉತ್ತರ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶಂದಿದಲೂ ದಕ್ಷಿಣದ ಸ್ವಲ್ಪ ಭಾಗ ತಮಿಳು ನಾಡಿನಿಂದಲೂ ಸುತ್ತುಪಡೆದಿದೆ. ಪ್ರಸ್ತುತ ಅಧ್ಯಯನಕ್ಕೆ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನಲ್ಲಿ ಆಡುವ ಭಾಷೆಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಇದು ತಮಿಳುನಾಡಿನ ಎಲ್ಲೆಗೆ ೧೦ ಮೈಲಿಗಳ ಮತ್ತು ಆಂಧ್ರಪ್ರದೇಶದ ಎಲ್ಲೆಗೆ ೩೦ ಮೈಲಿಗಳ ದೂರದಲ್ಲಿದೆ. ಈ ಲೇಖನದಲ್ಲಿ ಮಾಲೂರು ತಾಲೂಕಿನ ಹರಿಜನರ ಕನ್ನಡವನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಇದಕ್ಕೆ ಭಾಷಾಸಾಮಗ್ರಿಯನ್ನು ಒದಗಿಸಿ ಕೊಟ್ಟವರಲ್ಲಿ ಮುಖ್ಯರಾದವರು ಶ್ರೀಮಾನ್ ವೆಂಕಟಸ್ವಾಮಿ ಅವರು. ಈ ಭಾಷಾ ಸಾಮಗ್ರಿಯನ್ನು ಆ ಸ್ಥಳದಿಂದ ಬಂದ ಇನ್ನಿಬ್ಬರ ಆಡುಮಾತಿನ ಜೊತೆಯೂ ಪರೀಕ್ಷಿಸ ಲಾಗಿದೆ. ಕೋಲಾರ ಜಿಲ್ಲೆಯ ಕನ್ನಡಭಾಷೆಯ ಅಧ್ಯಯನ, ಈ ಮುಂಚೆ ನಡೆದಿಲ್ಲ. ಕೋಲಾರ ಜಿಲ್ಲೆಯ ಕೆಲವು ಭಾಗಗಳು ಈಗಿನ ಪ್ರಾಂತ ಪುನರ್ವಿಂಗಡನೆ ನಡೆಯುವು ದಕ್ಕೆ ಮುಂಚೆ ಆಂಧ್ರಪ್ರದೇಶದಲ್ಲೂ, ತಮಿಳುನಾಡಿನಲ್ಲೂ ಹಂಚಿಹೋಗಿದ್ದವು. ರಾಜಕೀಯವಾಗಿ ಮತ್ತು ಆಡಳಿತ ದೃಷ್ಟಿಯಿಂದ ಬೇರೆ ಪ್ರಾಂತಗಳಲ್ಲಿ ಸೇರಿಹೋಗಿ ದ್ದರೂ ಸಾಂಸ್ಕೃತಿಕವಾಗಿ ತನ್ನತನವನ್ನು ಉಳಿಸಿಕೊಂಡು ಬಂದಿದೆ. ಇದು ಈ ಕೆಳಗಿನ ಅಧ್ಯಯನದಿಂದ ಪ್ರತಿಪಾದಿತವಾಗುತ್ತದೆ. ಈ ಲೇಖನದಲ್ಲಿ ಈ ಕನ್ನಡ ಉಪಭಾಷೆ ಯಲ್ಲಿರುವ ಗುಣವಿಶೇಷತೆಯನ್ನು ವ್ಯಾಕರಣರೂಪದಲ್ಲಿ ಬರೆಯಲಾಗಿದೆ. ಅವತರಣಿಕೆ ಚಿಹ್ನೆಯಲ್ಲಿ ಬರೆದ ಪದಗಳು ಗ್ರಾಂಥಿಕಕನ್ನಡವನ್ನು ಸೂಚಿಸುತ್ತವೆ. ಇದರಿಂದ ಈ ಉಪಭಾಷೆಯ ವ್ಯತ್ಯಾಸವನ್ನು ಗ್ರಾಂಥಿಕಭಾಷೆಯೊಂದಿಗೆ ಹೋಲಿಸಿ ತಿಳಿಯಬಹುದು.

I
ವರ್ಣಸಮಾಮ್ನಾಯ

ಸ್ವರಗಳು :

ಇ	ಈ	ಉ	ಊ
ಎ	ಏ	ಒ	ಓ
ಅ	ಆ	—	—

ಅ ಆ

ವ್ಯಂಜನಗಳು :

ಪ್	ತ್	ಟ್	ಚ್	ಕ್		
ಬ್	ದ್	ಡ್	ಜ್	ಗ್		
ಮ್	ನ್	ಣ್				
		ಸ್				
		ರ್				
		ಲ್	ಳ್			
ವ್				ಯ್		

ವರ್ಣಗಳ ವರ್ಣನೆ :

/ಇ/ ವಿಸ್ತೃತೌಷ್ಠ ಪೂರ್ವಸಂವೃತಸ್ವರ
/ಈ/ ವಿಸ್ತೃತೌಷ್ಠ ಪೂರ್ವಸಂವೃತ ದೀರ್ಘಸ್ವರ
/ಸ್+ಇ+ಕ್+ಎ/ ಸಿಕೆ 'ಶಿಖೆ'
/ಸ್+ಈ+ಕ್+ಎ/ ಸೀಕೆ 'ಸೀಗೆಕಾಯಿ'

/ಎ/ ವಿಸ್ತೃತೌಷ್ಠ ಪೂರ್ವ ಅರ್ಧಸಂವೃತಸ್ವರ
/ಏ/ ವಿಸ್ತೃತೌಷ್ಠ ಪೂರ್ವ ಸಂವೃತದೀರ್ಘಸ್ವರ
/ಎ+ಳ್+ಎ/ ಎಳೆ 'ಎಳೆ'
/ಏ+ಳ್+ಎ/ ಏಳೆ 'ಏಳು' (ಸ್ತ್ರೀ)

/ಆ್ಯ/ ವಿಸ್ತೃತೌಷ್ಠ ಪೂರ್ವ ಅರ್ಧವಿವೃತಸ್ವರ
/ಆ್ಯ/ ವಿಸ್ತೃತೌಷ್ಠ ಪೂರ್ವ ಅರ್ಧವಿವೃತಸ್ವರ
/ಬ್+ಆ್ಯ+ರ್+ಎ/ ಬ್ಯರೆ 'ಬೆರೆ'
/ಬ್+ಆ್ಯ+ರ್+ಎ/ ಬ್ಯಾರೆ 'ಬೇರೆ'

/ಅ/ ವಿಸ್ತೃತೌಷ್ಠ ಮಧ್ಯಸ್ವರ
/ಆ/ ವಿಸ್ತೃತೌಷ್ಠ ಮಧ್ಯದೀರ್ಘಸ್ವರ
/ಕ್+ಅ+ರ್+ಉ/ ಕರು 'ಕರು'
/ಕ್+ಆ+ರ್+ಉ/ ಕಾರು 'Car'

/ಉ/ ವೃತ್ತೌಷ್ಠ ಪಶ್ಚ ಅರ್ಧಸಂವೃತಸ್ವರ
/ಊ/ ವೃತ್ತೌಷ್ಠ ಪಶ್ಚ ಅರ್ಧ ದೀರ್ಘಸ್ವರ
/ಕ್+ಉ+ರ್+ಇ/ ಕುರಿ 'ಕುರಿ'
/ಕ್+ಊ+ರ್+ಇ/ ಕೂರಿ 'ಕುಳಿತುಕೊಳ್ಳಿ'

/ಒ/ ವೃತ್ತೌಷ್ಠ ಪಶ್ಚ ಅರ್ಧಸಂವೃತಸ್ವರ
/ಓ/ ವೃತ್ತೌಷ್ಠ ಪಶ್ಚ ಅರ್ಧಸಂವೃತ ದೀರ್ಘಸ್ವರ
/ಕ್+ಒ+ರ್+ಎ/ ಕೊರೆ 'ಕೊರೆ'
/ಕ್+ಓ+ರ್+ಎ/ ಕೋರೆ 'ಡೊಂಕು'

ಸಾಮಾನ್ಯ ಸ್ವನಪ್ರಭೇದಗಳು :

೧. ಎಲ್ಲ ಹ್ರಸ್ವಸ್ವರಗಳೂ ಪದದ ಅಂತ್ಯದಲ್ಲಿ ಸ್ವಲ್ಪ ದೀರ್ಘತ್ವವನ್ನು ಪಡೆಯುತ್ತವೆ.

೨. ಪದದ ಆದಿಯಲ್ಲಿ ಇ, ಈ, ಎ, ಏ ವಿಸ್ತೃತೌಷ್ಠ ಪೂರ್ವಸ್ವರಗಳು 'ಯ್' ಕಾರದ ಒತ್ತಡವನ್ನೂ ಎಲ್ಲ ವಿಸ್ತೃತೌಷ್ಠ ಪಶ್ಚ ಪೂರ್ವಸ್ವರಗಳು 'ವ್' ಕಾರದ ಒತ್ತಡವನ್ನೂ ಪಡೆದಿರುತ್ತವೆ.

ಯ್ಇಲಿ 'ಇಲಿ'
ವ್ಒಂದು 'ಒಂದು' ಮುಂತಾಗಿ

ವ್ಯಂಜನಗಳು :

ಈ ಉಪಭಾಷೆಯಲ್ಲಿ ಅಲ್ಪಪ್ರಾಣ ವ್ಯಂಜನಗಳಿರುತ್ತವೆ; ಮಹಾಪ್ರಾಣ ವ್ಯಂಜನಗಳಿಲ್ಲ. ಸ, ಶ, ಷ ವ್ಯಂಜನ ಭೇದಗಳಿಲ್ಲ. ಶ, ಷ ಗಳು 'ಸ' ಗಳಾಗಿವೆ. 'ಹ' ವ್ಯಂಜನ ಪೂರ್ತಿ ಕಳೆದುಹೋಗಿದೆ.

/ಪ್/ ಅಘೋಷ ಅಲ್ಪಪ್ರಾಣ ಓಷ್ಠ್ಯವ್ಯಂಜನ
ಪಟ 'ಫೋಟೊ', ಕಾಪಿ 'ಕಾಫಿ', ಅಪ್ಪ 'ಅಪ್ಪ'

/ತ್/ ಅಘೋಷ ಅಲ್ಪಪ್ರಾಣ ಮೂರ್ಧನ್ಯವ್ಯಂಜನ
ತಂಗಿ 'ತಂಗಿ', ತಾತಿ 'ತಾಯಿತ', ಅತ್ತೆ 'ಅತ್ತೆ'

/ಟ್/ ಅಘೋಷ ಅಲ್ಪಪ್ರಾಣ ಮೂರ್ಧನ್ಯವ್ಯಂಜನ
ಟಗ್ರು 'ಟಗರು', ಕಲ್ಟ 'ಕರಟ', ಪಟ್ಟಿ 'ಪಟ್ಟಿ'

/ಚ್/ ಅಘೋಷ ಅಲ್ಪಪ್ರಾಣ ತಾಲವ್ಯವ್ಯಂಜನ
ಚಡ್ಡಿ 'ಚಡ್ಡಿ', ಕಾಚ 'ಕಾಚ', ಕಚ್ಚೆ 'ಕಚ್ಚೆ'

/ಕ್/ ಅಘೋಷ ಅಲ್ಪಪ್ರಾಣ ಕಂಠ್ಯವ್ಯಂಜನ
ಕರಿ 'ಕರಿ', ಮಕರಿ 'ಮಂಕರಿ', ಅಕ್ಕ 'ಅಕ್ಕ'

/ಬ್/, /ದ್/, /ಡ್/, /ಜ್/, /ಗ್/ – ಇವುಗಳು ಪ್ರಯತ್ನ, ಸ್ಥಾನ, ಕರಣಗಳನ್ನು /ಪ್/, /ತ್/, /ದ್/, /ಚ್/, /ಕ್/ ಗಳಂತೆಯೇ ಹೊಂದಿರುತ್ತವೆ. ಆದರೆ ಇವು ಘೋಷಗಳು.

/ಬ್/ ಬರಿ 'ಬರಿ', ತಂಬು 'ತುಂಬು', ಅಬ್ಬ 'ಹಬ್ಬ'

/ದ್/ ದಡ್ಡ 'ದಡ್ಡ', ಕದ 'ಬಾಗಿಲು', ಸಿದ್ದ 'ಸಿದ್ಧ'

/ಡ್/ ಡಬ್ಬ 'ಡಬ್ಬ', ಅಡೆ 'ಅಡೆ', ಅಂಡೆ 'ಹಂಡೆ'

/ಜ್/ ಜಂಬ 'ಜಂಬ', ಅಜ್‌ನು 'ಅಜ್ಜ', ಕಜ್ಜ 'ಕಜ್ಜಿ'

/ಗ್/ ಗಂಟೆ 'ಘಂಟೆ', ಮಗ 'ಮಗು', ಅಗ್ಗ 'ಹಗ್ಗ'

/ಮ್/ ನಾಸಿಕ್ಯ ಓಷ್ಠ್ಯ ವ್ಯಂಜನ
ಮನೆ 'ಮನೆ', ಸುಮ್ನೆ 'ಸುಮ್ಮನೆ', ಅಮ್ಮ 'ಅಜ್ಜಿ'

/ನ್/ ನಾಸಿಕ್ಯ ದಂತ್ಯವ್ಯಂಜನ
ಇದಕ್ಕೆ ಮೂರು ಸ್ವನಭೇದಗಳಿವೆ.

[ನ್] ನಾಕು 'ನಾಲ್ಕು', ಅದ್‌ನೇಳು 'ಹದಿನೇಳು', ಕನ್ನಡಿ 'ಕನ್ನಡಿ'

[ಞ] /ಚ್/ ಮತ್ತು /ಜ್/ ಗಳ ಹಿಂದೆ ಬಂದಾಗ ಮಾತ್ರ
ಎಂಞಚು 'ಹಂಚು', ಗಞಜಿ 'ಗಂಜಿ'

/ಙ/ ಮೆಣಸಿಙ್‌ಕಾಯಿ 'ಮೆಣಸಿನಕಾಯಿ', ಅಙಗ್ಲ 'ಅಂಗುಲ'

/ಣ್/ ನಾಸಿಕ್ಯ ಮೂರ್ಧನ್ಯವ್ಯಂಜನ
ಅಣೆ 'ಹಣೆ', ಕಾಣ್‌ಸು 'ಕಾಣಿಸು', ಅಣ್ಣ 'ಅಣ್ಣ'

/ಸ್/ ಅಘೋಷ ಊಷ್ಮ ದಂತ್ಯವ್ಯಂಜನ
ಸಕ್ತಿ 'ಶಕ್ತಿ', ಬಸ್‌ರಿ 'ಬಸುರಿ', ಬಸ್ಸು 'bus'

/ರ್/ ಸಕೃತ್ ತಾಡಿತ ದಂತ್ಯವ್ಯಂಜನ
ರಾತ್ರೆ 'ರಾತ್ರಿ', ಕರ್‌ಗೆ 'ಕರ್‍ರಗೆ'

/ಲ್/ ಘೋಷ ವರ್ತ್ಸ್ಯ ಪಾರ್ಶ್ವಿಕವ್ಯಂಜನ
ಲಂಗ 'ಲಂಗ', ಇಲಿ 'ಇಲಿ', ಇಲ್ಲ 'ಇಲ್ಲ'

/ಳ್/ ಘೋಷ ಪ್ರತಿವೇಷ್ಟಿತ ಪಾರ್ಶ್ವಿಕವ್ಯಂಜನ
ಕಳಿ 'ಕಳಿ', ಬಿಳ್‌ಪು 'ಬಿಳುಪು', ಬೆಳ್ಳಿ 'ಬೆಳ್ಳಿ'

/ವ್/ ಘೋಷ ಓಷ್ಠ್ಯ ಘರ್ಷರಹಿತ ನಿರಂತರ ವ್ಯಂಜನ
ವಾರ 'ವಾರ', ಅವ್ರೆ 'ಇದ್ದಾರೆ', ಅವ್ವ 'ತಾಯಿ'

/ಯ್/ ಘೋಷ ತಾಲವ್ಯ ಘರ್ಷರಹಿತ ನಿರಂತರ ವ್ಯಂಜನ
ಯಾರು 'ಯಾರು', ಕಾಯ್‌ಲಿ 'ಖಾಯಿಲೆ', ಅಯ್ಯ 'ಅಜ್ಜ'

ಆಕೃತಿಮಾಶಾಸ್ತ್ರ

ನಾಮಪದ ;

ವಚನಗಳು :

ನಾಮಪ್ರಕೃತಿಯು ಏಕವಚನವನ್ನು ನಿರ್ದೇಶಿಸುತ್ತದೆ. ಇದು ಬಹುವಚನದಲ್ಲಿ –ರು, –ಗ್ಳು ಮತ್ತು –ಏವು ಪ್ರತ್ಯಯಗಳನ್ನು ಹೊಂದುತ್ತವೆ.

–ರು

ಮಾನವಜೀವಿಗಳು –ರು ಪ್ರತ್ಯಯವನ್ನು ಹೊಂದುತ್ತವೆ.

ಮನ್ಸ 'ಮನುಷ್ಯ' > ಮನ್ಸ್ರು 'ಮನುಷ್ಯರು'
ಅಯ್ದ 'ಹುಡುಗ' > ಅಯ್ದ್ರು 'ಹುಡುಗರು'
ಅತ್ತೆ 'ಅತ್ತೆ' > ಅತ್ತೇರು 'ಅತ್ತೆಯರು'

(/ಎ/ ಇಂದ ಕೊನೆಗೊಳ್ಳುವ ಪ್ರಕೃತಿ, /ಏ/ ಕಾರವನ್ನು ಹೊಂದುತ್ತದೆ)

ಮಾವ 'ಮಾವ' > ಮಾವ್ರು 'ಮಾವಂದಿರು'

–ಗ್ಳು

ನಪುಂಸಕ ಜೀವರಹಿತ ನಾಮಪ್ರಕೃತಿಗಳು –ಗ್ಳು ಬಹುವಚನಪ್ರತ್ಯಯವನ್ನು ಹೊಂದುತ್ತವೆ.

ಮನೆ 'ಮನೆ' > ಮನೆಗ್ಳು 'ಮನೆಗಳು'
ಹೊಲ 'ಹೊಲ' > ಹೊಲಗ್ಳು 'ಹೊಲಗಳು'

–ಏವು

ನಪುಂಸಕ ಪ್ರಾಣಿಜೀವಿಗಳು –ಏವು ಬಹುವಚನಪ್ರತ್ಯಯವನ್ನು ಹೊಂದುತ್ತವೆ.

ಅಸ 'ಹಸು' > ಅಸೇವು 'ಹಸುಗಳು'
ಕರ 'ಕರು' > ಕರೇವು 'ಕರುಗಳು'
ಕಡ್ಡಿ 'ಕರಡಿ' > ಕಡ್ಡೇವು 'ಕರಡಿಗಳು'
ಕುರಿ 'ಕುರಿ' > ಕುರೇವು 'ಕರುಗಳು'
ಕುದ್ರೆ 'ಕುದುರೆ' > ಕುದ್ರೇವು 'ಕುದುರೆಗಳು'

ಲಿಂಗಗಳು :

ಕೆಲವು ಪುಲ್ಲಿಂಗನಾಮಪ್ರಕೃತಿಗಳಿಗೆ ಸ್ತ್ರೀಲಿಂಗಪ್ರತ್ಯಯಗಳು ಸೇರುತ್ತವೆ. ಆಗ ಪುಲ್ಲಿಂಗಪ್ರಕೃತಿಗಳಲ್ಲಿ ಕೆಲವುಸಲ ಬದಲಾವಣೆಯುಂಟಾಗುತ್ತದೆ.

–ಇ, –ಎ, –ಓಳು, –ತಿ, –ಳು ಇವು ಸ್ತ್ರೀಲಿಂಗಪ್ರತ್ಯಯಗಳು.

–ಇ

ಕಳ್ಳ 'ಕಳ್ಳ' > ಕಳ್ಳಿ 'ಕಳ್ಳಿ'
ಕಿವ್ಡ 'ಕಿವುಡ' > ಕಿವ್ಡಿ 'ಕಿವುಡಿ'

–ಎ

ಬುದ್‌ಮಂತ 'ಬುದ್ಧಿವಂತ' > ಬುದ್‌ಮಂತೆ 'ಬುದ್ಧಿವಂತೆ'

ಜಾಣ 'ಜಾಣ' > ಜಾಣೆ 'ಜಾಣೆ'

–ಓಳು

(ಈ ಪ್ರತ್ಯಯವು ಸೇರುವಾಗ ನಾಮಪ್ರಕೃತಿಗೆ –ರ ಷಷ್ಠಿ ವಿಭಕ್ತಿಪ್ರತ್ಯಯ ಸೇರುತ್ತದೆ)

ಅಗ್‌ಸ 'ಅಗಸ' > ಅಗಸ್‌ರೋಳು 'ಅಗಸಗಿತ್ತಿ'

ಆಚಾರಿ 'ಆಚಾರಿ' > ಆಚಾರೋಳು 'ಆಚಾರಗಿತ್ತಿ'

ಬ್ರಾಮರ್‌ಣ 'ಬ್ರಾಹ್ಮಣ' > ಬ್ರಾಮ್ರೋಳು 'ಬ್ರಾಹ್ಮಣಿತಿ'

–ತಿ

ಬೀಗ 'ಬೀಗ' > ಬೀಗ್‌ತಿ 'ಬೀಗಿತ್ತಿ'

–ಳು

ಮಗ 'ಮಗ' > ಮಗ್‌ಳು 'ಮಗಳು'

ಸರ್ವನಾಮಗಳು :

ಈ ಕೆಳಗೆ ಕೊಟ್ಟಿರುವ ಪದಗಳು ವಿವಿಧ ಪುರುಷ, ವಚನ, ಲಿಂಗಗಳಲ್ಲಿ ಸರ್ವನಾಮಗಳಾಗಿವೆ.

		ಏಕವಚನ	ಬಹುವಚನ
ಉತ್ತಮಪುರುಷ		ನಾನು	ನಾವು
ಮಧ್ಯಮಪುರುಷ		ನೀನು	ನೀವು
ಪ್ರಥಮಪುರುಷ	ಪುಲ್ಲಿಂಗ	ಅವನು	ಅವರು
	ಸ್ತ್ರೀಲಿಂಗ	ಅವಳು	
	ನಪುಂಸಕಲಿಂಗ	ಅದು	ಅವು

ದರ್ಶಕಸರ್ವನಾಮಗಳು :

ದೂರಸೂಚಿ	ಸಮೀಪಸೂಚಿ	ಪ್ರಶ್ನಾರ್ಥಕಸೂಚಿ
ಅಲ್ಲಿ	ಇಲ್ಲಿ	ಎಲ್ಲಿ (ಸ್ಥಾನ)
ಅಸು	ಈಸು	ಏಸು (ಪ್ರಮಾಣ)
ಆಗ	ಈಗ	ಯಾವಾಗ (ಕಾಲ)

ವಿಭಕ್ತಿಪ್ರತ್ಯಯಗಳು :

ಪ್ರಥಮಾ ವಿಭಕ್ತಿಪ್ರತ್ಯಯ –'ನು',

–ಅದಿಂದ ಕೊನೆಗೊಳ್ಳುವ ಪುಲ್ಲಿಂಗಪ್ರಕೃತಿಗೆ –ನು ಪ್ರತ್ಯಯ ಇರುತ್ತದೆ.

ಮಾವ 'ಮಾವ' > ಮಾವ್‌ನು
ತಮ್ಮ 'ತಮ್ಮ' > ತಮ್‌ನು

ಉಳಿದ ಕಡೆಗಳಲ್ಲಿ ಶೂನ್ಯ ಆಕೃತಿ ಇರುತ್ತದೆ.

ದ್ವಿತೀಯಾ ವಿಭಕ್ತಿಪ್ರತ್ಯಯ : –'ನ್'

ಕುರಿ 'ಕುರಿ' > ಕುರಿನ್ 'ಕುರಿಯುನ್ನು'
ಮರಿ 'ಮರಿ' > ಮರಿನ್ 'ಮರಿಯುನ್ನು'
ಊರು 'ಊರು' > ಊರುನ್ 'ಊರನ್ನು'
ಕರು 'ಕರು' > ಕರುನ್ 'ಕರುವನ್ನು'
ಕೆರೆ 'ಕೆರೆ' > ಕೆರೆನ್ 'ಕೆರೆಯುನ್ನು'
ಕತೆ 'ಕತೆ' > ಕತೆನ್ 'ಕತೆಯುನ್ನು'

ತೃತೀಯಾ ವಿಭಕ್ತಿಪ್ರತ್ಯಯ : –'ಆ್ಯಗಿಂದ್'

ಕುರಿ 'ಕುರಿ' > ಕುರ್‌ಆ್ಯಗಿಂದ್ 'ಕುರಿಯಿಂದ'
ಮರಿ 'ಮರಿ' > ಮರ್‌ಆ್ಯಗಿಂದ್ 'ಮರಿಯಿಂದ'
ಊರು 'ಊರು' > ಊರ್‌ಆ್ಯಗಿಂದ್ 'ಊರಿನಿಂದ'
ಕರು 'ಕರು' > ಕರ್‌ಆ್ಯಗಿಂದ್ 'ಕರುವಿನಿಂದ'
ಕತೆ 'ಕತೆ' > ಕತ್‌ಆ್ಯಗಿಂದ್ 'ಕತೆಯಿಂದ'

ಚತುರ್ಥೀ ವಿಭಕ್ತಿಪ್ರತ್ಯಯ : –'ಆ್ಯಕ್'

ಕುರಿ 'ಕುರಿ' > ಕುರ್‌ಆ್ಯಕ್ 'ಕುರಿಗೆ'
ಮರಿ 'ಮರಿ' > ಮರ್‌ಆ್ಯಕ್ 'ಮರಿಗೆ'
ಊರು 'ಊರು' > ಊರ್‌ಆ್ಯಕ್ 'ಊರಿಗೆ'
ಕರು 'ಕರು' > ಕರ್‌ಆ್ಯಕ್ 'ಕರುವಿಗೆ'
ಊಟ 'ಊಟ' > ಊಟ್‌ಆ್ಯಕ್ 'ಊಟಕ್ಕೆ'
ಗಲ್ಲ 'ಗಲ್ಲ' > ಗಲ್‌ಆ್ಯಕ್ 'ಗಲ್ಲಕ್ಕೆ' ಇತ್ಯಾದಿ.

ಷಷ್ಠಿ ವಿಭಕ್ತಿಪ್ರತ್ಯಯ : –'ದ್', –'ನ್', – ф

–ಅ ದಿಂದ ಕೊನೆಗೊಳ್ಳುವ ನಾಮಪ್ರಕೃತಿಗಳು ಮಾತ್ರ –ದ್ ಪ್ರತ್ಯಯುವನ್ನು ತೆಗೆದುಕೊಳ್ಳುತ್ತವೆ.

ಮರ 'ಮರ' > ಮರದ್ 'ಮರದ'
ಗಿಡ 'ಗಿಡ' > ಗಿಡದ್ 'ಗಿಡದ'

–ನ್

ಮನ್‌ಸ 'ಮನುಷ್ಯ' > ಮನ್‌ಸನ್ 'ಮನುಷ್ಯನ'

ಉಳಿದ ಕಡೆಗಳಲ್ಲಿ ಶೂನ್ಯ ಆಕೃತಿಗಳಿರುತ್ತವೆ.

ಸಪ್ತಮಿ ವಿಭಕ್ತಿಪ್ರತ್ಯಯ : –'ಗ್'

ಮನೆ 'ಮನೆ'	>	ಮನ್‌ಆ್ಯಗ್	'ಮನೆಯಲ್ಲಿ'
ಕುರಿ 'ಕುರಿ'	>	ಕುರ್‌ಆ್ಯಗ್	'ಕುರಿಯಲ್ಲಿ'
ಊರು 'ಊರು'	>	ಊರ್‌ಆ್ಯಗ್	'ಊರಲ್ಲಿ'
ಕರು 'ಕರು'	>	ಕರ್‌ಆ್ಯಗ್	'ಕರುವಿನಲ್ಲಿ' ಇತ್ಯಾದಿ.

ಕ್ರಿಯಾಪದ :

ಕಾಲಗಳು :

ಅಭೂತ ಕಾಲ : ವರ್ತಮಾನ ಮತ್ತು ಭವಿಷತ್ ಕಾಲಗಳಲ್ಲಿ ಯಾವ ಭೇದವೂ ಇಲ್ಲದಿರುವುದರಿಂದ ಅಭೂತಕಾಲ ಎಂದು ಕರೆದಿದೆ.

ಅಭೂತ ಪ್ರತ್ಯಯ : –'ತ್'

ಧಾತು + ಅಭೂತ ಕಾಲ ಪ್ರತ್ಯಯ + ಆಖ್ಯಾತ ಪ್ರತ್ಯಯ

ಮಾಡ್ + ತ್ + ಈನಿ

	ಏಕವಚನ	ಬಹುವಚನ
ಉತ್ತಮಪುರುಷ	ನಾನ್ ಮಾಡ್ತೀನಿ	ನಾವ್ ಮಾಡ್ತೇವಿ
ಮಧ್ಯಮಪುರುಷ	ನೀನ್ ಮಾಡ್ತಿ	ನೀವ್ ಮಾಡ್‌ತೀರಿ.
ಪ್ರಥಮಪುರುಷ :		
ಪುಲ್ಲಿಂಗ :	ಅವನ್ ಮಾಡ್ತಾನೆ	ಅವರ್ ಮಾಡ್ತಾರೆ
ಸ್ತ್ರೀಲಿಂಗ :	ಅವಳ್ ಮಾಡ್ತಾಳೆ	
ನಪುಂಸಕಲಿಂಗ :	ಅದ್ ಮಾಡ್ತದೆ	ಅವು ಮಾಡ್ತವೆ

ಅಭೂತ ಆಖ್ಯಾತಪ್ರತ್ಯಯಗಳು :

		ಏ. ವ	ಬ. ವ
ಉ. ಪು		–ಈನಿ	–ಏವಿ
ಮ. ಪು		–ಈಯ	–ಈರಿ
ಪ್ರ. ಪು :	ಪು.	–ಆನೆ	–ಆರೆ
	ಸ್ತ್ರೀಲಿಂಗ	–ಆಳೆ	
	ನ.ಲಿಂಗ	– ಅದೆ	– ಅವೆ

ಭೂತಕಾಲ : ಭೂತಕಾಲ ಪ್ರತ್ಯಯಗಳು –'ದ್', –'ತ್', –'ಡ್', –'ಟ್'ಗಳು.

ಧಾತು + ಭೂತಪ್ರತ್ಯಯ + ಆಖ್ಯಾತಪ್ರತ್ಯಯ

–ದ್ :

ಕುಡ್+ದ್+ನಿ > ಕುಡ್ದ್ನಿ 'ಕುಡಿದೆ'
ಮಾಡ್+ದ್+ನಿ > ಮಾಡ್ದ್ನಿ 'ಮಾಡಿದೆ'

–ತ್ :

ಕಲ್+ತ್+ನಿ > ಕಲ್ತ್ನಿ 'ಕಲಿತೆ'
ಕೂರ್+ತ್+ನಿ > ಕೂತ್ನಿ 'ಕೂತೆ'

–ಡ್ :

ಉಣ್+ಡ್+ನಿ > ಉಂಡ್ನಿ 'ಊಟ ಮಾಡಿದೆ'
ಕಣ್+ಡ್+ನಿ > ಕಂಡ್ನಿ 'ಕಂಡೆ'

–ಟ್ :

ಕೊ(ಡು)+ಟ್+ನಿ > ಕೊಟ್ನಿ 'ಕೊಟ್ಟೆ'
ಬು(ಡು)+ಟ್+ನಿ > ಬುಟ್ನಿ 'ಬಿಟ್ಟೆ'

–ø : ಪ್ರಥಮಾ ವಿಭಕ್ತಿಯ ನಪುಂಸಕಲಿಂಗ ಏಕವಚನದಲ್ಲಿ ಶೂನ್ಯ ಆಕೃತಿ ಇರುತ್ತದೆ.

ತಿನ್+ತು > ತಿಂತು 'ತಿಂದಿತು'
ಉಣ್+ತು > ಉಣ್ತು 'ಉಂಡಿತು'

		ಏಕವಚನ	ಬಹುವಚನ
ಉ. ಪು		ನಾನ್ ತಿಂದ್ನಿ	ನಾವ್ ತಿಂದ್ವು
ಮ. ಪು		ನೀನ್ ತಿಂದೆ	ನೀವ್ ತಿಂದ್ರಿ
ಪ್ರ. ಪು :	ಪು.	ಅವನ್ ತಿಂದ್ನು	ಅವರ್ ತಿಂದ್ರು
	ಸ್ತ್ರೀ.	ಅವಳ್ ತಿಂದ್ಳು	
	ನ.ಲಿಂಗ	ಅದ್ ತಿಂತು	ಅವ್ ತಿಂದ್ವು

ಭೂತ ಆಖ್ಯಾತಪ್ರತ್ಯಯಗಳು :

		ಏ. ವ	ಬ. ವ
ಉ. ಪು		–ನಿ	–ವು
ಮ. ಪು		–ಎ	–ರಿ
ಪ್ರ. ಪು :	ಪು.	–ನು	–ರು
	ಸ್ತ್ರೀ.	–ಲು, –ಳು	
	ನ.ಲಿಂಗ	–ತು	ವು

ವಿಧ್ಯರ್ಥ : ವಿಧ್ಯರ್ಥ ಪ್ರತ್ಯಯಗಳು ಬೇರೆಬೇರೆ ಪುರುಷ, ವಚನಗಳಿಗೆ ಈ ರೀತಿ ಹತ್ತುತ್ತವೆ.

	ಏ. ವ	ಬ. ವ
ಉ. ಪು.	φ	ಓಮು
ಮ. ಪು.	φ	φ
ಪ್ರ. ಪು : ಪು. ಸ್ತ್ರೀ. ನ್ಪು.ಲಿಂಗ	–ಲಿ, –ಳಿ	–ಲಿ, –ಳಿ

ಉತ್ತಮಪುರುಷ ಬಹುವಚನ :

ನಾವ್ ಮಾಡೋಮು 'ನಾವು ಮಾಡೋಣ'

ಪ್ರಥಮಪುರುಷ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ :

ಅವ್‌ನ್ ತಿನ್ಲಿ 'ಅವನು ತಿನ್ನಲಿ'
ಅವಳ್ ಮಾಡ್ಳಿ 'ಅವಳು ಮಾಡಲಿ'
ಅದ್ ತಿನ್ನಿ 'ಅದು ತಿನ್ನಲಿ'

ಪಕ್ಷಾರ್ಥ : ಭೂತಕಾಲ ಧಾತುವಿಗೆ –ರೆ ಸೇರಿದರೆ ಪಕ್ಷಾರ್ಥ ಉಂಟಾಗುತ್ತದೆ.

ಅಳು– ಅತ್‌ರೆ 'ಅತ್ತರೆ'
ನಗು– ನಕ್‌ರೆ 'ನಕ್ಕರೆ'
ಬೀಳು– ಬಿದ್‌ರೆ 'ಬಿದ್ದರೆ'

ಪಕ್ಷಾರ್ಥ ನಿಷೇಧ :

ಭೂತಕಾಲ ಧಾತು+ನಿಷೇಧ ಧಾತು+ಇದ್+ಆಖ್ಯಾತ ಪ್ರತ್ಯಯ
ಕೊಡ್+ದೆ+ಇದ್+ರೆ = ಕೊಡ್‌ದೆ ಇದ್ರೆ 'ಕೊಡದೆ ಇದ್ದರೆ'.

ಕೃದಂತ :

i. ಅಭೂತ ಕೃದಂತ : –'ಅದು'

ಅಳ್+ಅದ್+ಉ = ಅಳದು 'ಅಳುವುದು'.

ii. ಭೂತ ಕೃದಂತ :

ಅತ್+ಇದ್+ಉ = ಅತ್ತಿದು 'ಅತ್ತಿದ್ದು'.

iii. ನಿಷೇಧ ಕೃದಂತ :

ಅತ್+ಇಲ್+ದ್+ಉ = 'ಅತ್ತಿಲ್‌ದು' 'ಅತ್ತಿಲ್ಲದ್ದು'.

ಸಂಬಂಧಾರ್ಥಕ ಸರ್ವನಾಮ :

i. ಅಭೂತ : ಮಾಡೋನು 'ಮಾಡುವವನು'.

ii. ಭೂತ : ಮಾಡ್ದೋನು 'ಮಾಡಿದವನು'.

ಅಪೂರ್ಣ ವರ್ತಮಾನಕಾಲ : –'ತ್'

ಧಾತು+ಅಪೂರ್ಣ ವರ್ತಮಾನ ಪ್ರತ್ಯಯ+ಅವ್‌ನೆ
ಓಯ್+ತ್+ಅವ್+ನೆ = ಓಯ್ತವ್‌ನೆ 'ಹೋಗುತ್ತಾ ಇದ್ದಾನೆ'.

ಅಪೂರ್ಣ ಭೂತಕಾಲ : –'ತ್'

ಧಾತು+ಅಪೂರ್ಣ ಭೂತಪ್ರತ್ಯಯ+ಇದ್+ನು
ಓಯ್+ತ್+ಇದ್+ನು = ಓಯ್‌ತಿದ್ನು 'ಹೋಗುತ್ತಿದ್ದ'.

ಅಪೂರ್ಣ ವರ್ತಮಾನ ಮತ್ತು ಅಪೂರ್ಣ ಭೂತಕಾಲ ನಿಷೇಧಗಳು ಈ ರೀತಿ ಉಂಟಾಗುತ್ತವೆ.

ಅಪೂರ್ಣ ವರ್ತಮಾನ ನಿಷೇಧ :

ಒಯ್+ತ್+ಇಲ್ಲ = ಓಯ್‌ತಿಲ್ಲ 'ಹೋಗುತ್ತಾ ಇಲ್ಲ'.

ಅಪೂರ್ಣ ಭೂತ ನಿಷೇಧ :

ಓಯ್+ತ್+ಇತ್+ಇಲ್ಲ = ಓಯ್‌ತಿತ್ತಿಲ್ಲ 'ಹೋಗುತ್ತಿರಲಿಲ್ಲ'

ಪೂರ್ಣಕ್ರಿಯಾದರ್ಶಕ :

ಅಭೂತ : ಕೊಟ್+ಇವ್+ನಿ = ಕೊಟ್ಟಿವ್ನಿ 'ಕೊಟ್ಟಿದ್ದೀನಿ'.
ಭೂತ : ಕೊಟ್+ಇದ್+ನು = ಕೊಟ್ಟಿದ್ನು 'ಕೊಟ್ಟಿದ್ದೀನಿ'
ನಿಷೇಧ : ಕೊಟ್+ಇಲ್ಲ = ಕೊಟ್ಟಿಲ್ಲ 'ಕೊಟ್ಟಿಲ್ಲ'.

ಕೃನ್ನಾಮ :

ಕೊಡ್+ಓದ್ = ಕೊಡೋದ್ 'ಕೊಡುವುದು'

II

ಗ್ರಾಂಥಿಕಕನ್ನಡಕ್ಕೂ ಕೋಲಾರ ಜಿಲ್ಲೆಯ ಕನ್ನಡಕ್ಕೂ ಇರುವ ವ್ಯತ್ಯಾಸಗಳು :

(ಈ ಕೆಳಗೆ ಕೊಟ್ಟಿರುವ [ ] ಚಿಹ್ನೆಗೂ Iರ ವರ್ಣಸಮಾಮ್ನಾಯದಲ್ಲಿ ಕೊಟ್ಟಿರುವ ಸ್ವನಭೇದಗಳನ್ನು ಸೂಚಿಸುವ [ ] ಚಿಹ್ನೆಗೂ ಯಾವ ಸಂಬಂಧವಿಲ್ಲ)

ಸ್ವರಗಳು :

i. [ಎ / ಏ] → [ಆ್ಯ / ಆ್ಯ] ಕೆಳಗೆ ಕೊಟ್ಟಿರುವ ರೀತಿಯಲ್ಲಿ ಮಾತ್ರ

ವ್ಯಂ + [ಎ / ಏ] + ವ್ಯಂ + ಸ್ವ → ವ್ಯಂ + [ಆ್ಯ / ಆ್ಯ] + ವ್ಯಂ + ಸ್ವ

ಬ್ + ಎ + ರ್ + ಎ → ಬ್ + ಆ್ಯ + ರ್ + ಎ

ಬ್ + ಏ + ರ್ + ಎ → ಬ್ + ಆ್ಯ + ರ್ + ಎ

ii. ಸ್ವರಲೋಪ : ಈ ಕೆಳಗಿನ ರೀತಿಯಲ್ಲಿ ಬರುವ ಪದಗಳು ಸ್ವರಲೋಪ ಹೊಂದುತ್ತವೆ.

(ವ್ಯಂ) + ಸ್ವ + ವ್ಯಂ + ಸ್ವ + ವ್ಯಂ + ಸ್ವ → (ವ್ಯಂ) + ಸ್ವ + ವ್ಯಂ + ವ್ಯಂ + ಸ್ವ

ವ್ + ಅ + ರ್ + ಅ + ಣ್ + ಅ → ವ್ + ಅ + ರ್ + ಣ್ + ಅ

ಅ + ವ್ + ಅ + ನ್ + ಉ → ಅ + ವ್ + ನ್ + ಉ

ವ್ಯಂಜನಗಳು :

i. ಮಹಾಪ್ರಾಣಗಳು ಕಂಡುಬರುವುದಿಲ್ಲ.

ii. ಸ, ಶ, ಷ ವ್ಯಂಜನಗಳು 'ಸ' ವ್ಯಂಜನದೊಡನೆ ವಿಲೀನಗೊಂಡಿವೆ.

iii. 'ಹ' ವ್ಯಂಜನ ಪೂರ್ಣ ಬಿಟ್ಟುಹೋಗಿದೆ.

iv. ಈ ಕೆಳಗಿನ ಸಂದರ್ಭಗಳಲ್ಲಿ ರ್ → ಲ್ ಆಗಿ ಪರಿವರ್ತನೆಹೊಂದುತ್ತದೆ :

ವ್ಯಂ+ಸ್ವ+ರ್+(ವ್ಯಂ)+ಟ್+ಸ್ವ → ವ್ಯಂ+ಸ್ವ+ಲ್+ಟ್+ಉ

ಶ್+ಅ+ರ್+ಅ+ಟ್+ಉ → ಸ್+ಅ+ಲ್+ಟ್+ಉ

ಕ್+ಓ+ರ್+ಟ್+ಉ → ಕೋ+ಲ್+ಟ್+ಉ

ಆಕೃತಿಮಾಗಳು :

i. ನಪುಂಸಕ ಪ್ರಾಣಿಜೀವಿಗಳಿಗೆ ಕೋಲಾರ ಜಿಲ್ಲೆಯ ಕನ್ನಡದಲ್ಲಿ ಮಾತ್ರ –ವಿವು ಬಹುವಚನ ಪ್ರತ್ಯಯ ಹತ್ತುತ್ತದೆ.

ii. ದರ್ಶಕ ಪ್ರಮಾಣಸೂಚಿ ಸರ್ವನಾಮಪದದ ಪೂರ್ವಾಂತ್ಯ ವ್ಯಂಜನವು ಬಿಟ್ಟುಹೋಗುತ್ತದೆ. ಮತ್ತು ಪದದ ಆದಿಸ್ವರವು ದೀರ್ಘವಾಗುತ್ತದೆ.

$$\begin{bmatrix} ಅ \\ ಇ \\ ಎ \end{bmatrix} + ಷ್ + ಟ್ + ಉ \rightarrow \begin{bmatrix} ಆ \\ ಈ \\ ಏ \end{bmatrix} + ಸ್ + ಉ$$

iii. ಪ್ರಥಮಾ ವಿಭಕ್ತಿಪ್ರತ್ಯಯ :

–ಅದಿಂದ ಕೊನೆಗೊಳ್ಳುವ ಪ್ರಥಮಾ ವಿಭಕ್ತಿಪ್ರತ್ಯಯ –ನು, ಗ್ರಾಂಥಿಕ ಭಾಷೆಯಲ್ಲಿಯಂತೆಯೇ ಕಡ್ಡಾಯವಾಗಿ ಬರುತ್ತದೆ.

iv. ದ್ವಿತೀಯಾ ವಿಭಕ್ತಿಪ್ರತ್ಯಯ : $\begin{bmatrix} –ಅನ್ನು \\ –ಯನ್ನು \end{bmatrix} \rightarrow$ –ನ್

v. ತೃತೀಯಾ ವಿಭಕ್ತಿ ಪ್ರತ್ಯಯ : $\begin{bmatrix} –ಇಂದ \\ –ದಿಂದ \end{bmatrix} \rightarrow$ – ಆ್ಯಗಿಂದ

vi. ಚತುರ್ಥೀ ವಿಭಕ್ತಿಪ್ರತ್ಯಯ : $\begin{bmatrix} –ಗೆ \\ –ಕ್ಕೆ \\ –ಇಗೆ \end{bmatrix} \rightarrow$ – ಆ್ಯಕ್

vii. ಸಪ್ತಮೀ ವಿಭಕ್ತಿಪ್ರತ್ಯಯ : $\begin{bmatrix} –ಅಲ್ಲಿ \\ –ಯಲ್ಲಿ \end{bmatrix} \rightarrow$ – ಆ್ಯಗ್

viii. ಅಭೂತ ಆಖ್ಯಾತ ಉತ್ತಮಪುರುಷ ಬಹುವಚನ: [–ಈ] ವಿ → -ಏವಿ

ix. ಅಭೂತ ನಪುಂಸಕ ಏಕವಚನ : [–ಇ] ದೆ → [ಅ]ದೆ

x. ಭೂತ ಆಖ್ಯಾತ ಉತ್ತಮಪುರುಷ ಏಕವಚನ : –ಎ → –ನಿ

xi. ವಿಧ್ಯರ್ಥ ಉತ್ತಮಪುರುಷ ಬಹುವಚನ : –ಓಣ → ಓಮ

xii. ಅಪೂರ್ಣ ಅಭೂತಕಾಲಪ್ರತ್ಯಯ : $\begin{bmatrix} –ತ್ತಾ \\ –ಉತ್ತಾ \end{bmatrix} \rightarrow$ ತ್

xiii. ಪೂರ್ಣಕ್ರಿಯಾದರ್ಶಕ :

ಧಾತು + [ಇದ್] + ಈನಿ → ಧಾತು + [ಇವ್] + ನಿ

ಕೊಟ್+ [ಇದ್] + ಈನಿ → ಕೊಟ್ + [ಇವ್] + ನಿ

(ಈ ಲೇಖನದಲ್ಲಿ ಸಂಧಿಕ್ರಿಯೆಯನ್ನು ಪ್ರತ್ಯೇಕವಾಗಿ ತಿಳಿಸಿಲ್ಲ. ಸಂಧಿಕಾರ್ಯ ನಡೆಯುವುದನ್ನು ಆಯಾ ಸ್ಥಳದಲ್ಲೇ ಸೂಚಿಸಲಾಗಿದೆ. φ = ಶೂನ್ಯ ಆಕೃತಿ).

ಗ್ರಂಥಋಣ

ಡಾ. ಬಿಳಗಿರಿ ಎಚ್. ಎಸ್. : ಖಡಿಯಾ ವರ್ಣಸಮಾಮ್ನಾಯ, ಉಪಾಯನ ೧೯೬೭ ಡಾ. ಡಿ. ಎಲ್. ಎನ್. ಸಂಭಾವನಾ ಗ್ರಂಥಪ್ರಕಾಶನ ಸಮಿತಿ, ಬೆಂಗಳೂರು.

,, ವರ್ಣನಾತ್ಮಕ ವ್ಯಾಕರಣದ ಮೂಲತತ್ವಗಳು, ೧೯೭೦ ಬೆಂಗಳೂರು ವಿಶ್ವವಿದ್ಯಾಲಯ.

ನಾರಾಯಣ ಕೆ. : ಸಂಕೇತಿಭಾಷೆಯ ವರ್ಣಸಮಾಮ್ನಾಯ, ಪ್ರಬುದ್ಧ ಕರ್ನಾಟಕ ೧೯೭೩ ಸಂಪುಟ : ೫೫, ಸಂಚಿಕೆ : ೨

ಡಾ. ರಾಜಪುರೋಹಿತ ಬಿ.ಬಿ. : *An Intensive Course in Kannada*, 1975 Publisher : D. V. K. Murthy, Mysore.

ಶ್ರೀಕಂಠಯ್ಯ ತೀ. ನಂ. : ಕನ್ನಡ ಮಧ್ಯಮ ವ್ಯಾಕರಣ, ೧೯೪೬ ಬೆಂಗಳೂರು.

ಬೆಂಗಳೂರು ಜಿಲ್ಲೆಯ ಕನ್ನಡ

● ಕೃಷ್ಣ ಪರಮೇಶ್ವರ ಭಟ್ಟ

ಬೆಂಗಳೂರು ಜಿಲ್ಲೆಯಲ್ಲಿ ಬಳಕೆಯಾಗುತ್ತಿರುವ ಕನ್ನಡವನ್ನು ವಿವರವಾಗಿ ವರ್ಣಿಸುವುದು ಈ ಲೇಖನದ ಉದ್ದೇಶವಲ್ಲ. ಅದು ಇಲ್ಲಿ ಸಾಧ್ಯವೂ ಇಲ್ಲ. ಇಲ್ಲಿಯ ಸ್ವನಿಮವ್ಯವಸ್ಥೆಯನ್ನು, ಸಂಖ್ಯೆ, ಗುಣ, ಪ್ರಸಾರವನ್ನು ಸ್ಥೂಲವಾಗಿ ವರ್ಣಿಸಲಾಗಿದೆ. ಅವುಗಳ ಪ್ರಭೇದಗಳ (allophones) ಸಂಖ್ಯೆ, ಪ್ರಸಾರಗಳನ್ನು ಮತ್ತಷ್ಟು ಖಚಿತವಾಗಿ ವಿವರಿಸುವ ಸಾಧ್ಯತೆಯಿದೆ. ಈ ಜಿಲ್ಲೆಯನ್ನು ಭಾಷೆಯ ದೃಷ್ಟಿಯಿಂದ ಮತ್ತೆ ಉಪವಿಭಾಗಗಳಾಗಿ ವಿಂಗಡಿಸುವಾಗ, ಮುಖ್ಯವಾಗಿ ಶಬ್ದಕೋಶವನ್ನೂ ಸ್ವಲ್ಪ ಮಟ್ಟಿಗೆ ಶಿಷ್ಟಕನ್ನಡದ (standard kannada) ಪದಗಳನ್ನು ಅಳವಡಿಸಿಕೊಳ್ಳುವ ರೀತಿಗಳನ್ನು ಆಧಾರವಾಗಿಟ್ಟುಕೊಂಡಿದೆ. ಶಬ್ದಕೋಶವನ್ನು ಆಧರಸಿ ವಿಭಾಗಿಸುವ ಕ್ರಮ ಅಷ್ಟು ಉಚಿತವಾದುದೇನೂ ಅಲ್ಲ. ಇದು ಸಧ್ಯ ಜನಪ್ರಿಯವಾದ ವಿಧಾನವಷ್ಟೇ. ಆದರೆ ಸಾಕಷ್ಟು ಸಾಮಗ್ರಿಗಳನ್ನು ಕಲೆಹಾಕುವ ವರೆಗೆ, ಅದರ ನಿಕೃಷ್ಟತೆಯನ್ನು ಖಚಿತಪಡಿಸಿಕೊಳ್ಳುವ ವರೆಗೆ ಇದಕ್ಕಿಂತ ಹೆಚ್ಚಿನದನ್ನೇನೂ ಮಾಡುವುದು ಸಾಧ್ಯವಿಲ್ಲ.

ಬೆಂಗಳೂರು ಜಿಲ್ಲೆಯ ಹನ್ನೊಂದು ತಾಲೂಕುಗಳಲ್ಲಿ ಆನೇಕಲ್ ಹಾಗೂ ಕನಕಪುರ ತಾಲೂಕುಗಳ ಕೆಲವು ಭಾಗಗಳನ್ನು ಬಿಟ್ಟರೆ, ಉಳಿದ ಭಾಗಗಳಿಗೆಲ್ಲ ಕರ್ನಾಟಕದ ಇತರ ಭಾಗಗಳೇ ಗಡಿಯಾಗಿ ಬರುತ್ತವೆ. ಆನೇಕಲ್ ಮತ್ತು ಕನಕಪುರಗಳು ಮಾತ್ರ ತಮಿಳುನಾಡಿನ ಗಡಿಪ್ರದೇಶದಲ್ಲಿ ಬರುತ್ತವೆ. ಈ ಗಡಿಪ್ರದೇಶದಲ್ಲಿ ಬರುವ ತಮಿಳುನಾಡಿನ ಹೊಸೂರು ತಾಲೂಕಿನಲ್ಲಿಯೂ ಕನ್ನಡ-ತೆಲುಗುಗಳ ಬಳಕೆಯೇ ಹೆಚ್ಚಾಗಿರುವುದರಿಂದ, ಬೆಂಗಳೂರಿನ ಕನ್ನಡದ ಮೇಲೆ ತಮಿಳಿನ ಪ್ರಭಾವ ಇಲ್ಲವೆನ್ನುವಷ್ಟು ಕಡಿಮೆ. ಆದರೆ ಪೂರ್ವದ ಕೋಲಾರ ಜಿಲ್ಲೆಯೊಡನೆ ನೇರ ಸಂಪರ್ಕ ಪಡೆದಿರುವ ಬೆಂಗಳೂರಿನ ಪೂರ್ವಭಾಗದ ಕೆಲವು ತಾಲೂಕುಗಳಲ್ಲಿ ತೆಲುಗಿನ ಪ್ರಭಾವ ಸಾಕಷ್ಟಿದೆ. ಈ ತಾಲೂಕುಗಳಲ್ಲಿ ಕನ್ನಡವನ್ನು ಮೊದಲುಭಾಷೆಯಾಗಿ (first language) ಉಳ್ಳವರಲ್ಲಿ ಸುಮಾರು ಅರ್ಧದಷ್ಟು ಜನ ತೆಲುಗು ಮಾತನಾಡಬಲ್ಲ ದ್ವಿಭಾಷಿಗಳು. ಇಲ್ಲಿ ತೆಲುಗನ್ನು ಮನೆಮಾತನ್ನಾಗಿ ಬಳಸುವವರು ಸಂಖ್ಯೆ ಗಮನಾರ್ಹವಾದುದರಿಂದ, ಶಾಲೆ-ಕಾಲೇಜು, ಸಭೆ, ಕೋರ್ಟು ಮುಂತಾದ ಶಿಷ್ಟಸಂದರ್ಭ (Formal context) ಗಳ ಹೊರತಾಗಿ

ಉಳಿದ ವೇಳೆಯಲ್ಲಿ ತೆಲುಗನ್ನೇ ಹೆಚ್ಚಾಗಿ ಬಳಸುವುದರಿಂದ ಇಲ್ಲಿಯ ದ್ವಿಭಾಷಿಕತೆ ಹೆಚ್ಚು ಕಾಲ ಬಾಳುವಂಥಾದ್ದು (Quite stable). ತೆಲುಗು ವೃತ್ತಪತ್ರಿಕೆ, ಸಿನೇಮಾಗಳೂ ಈ ದಿಸೆಯಲ್ಲಿ ಮುಖ್ಯವಾದ ಪಾತ್ರವಹಿಸುತ್ತಿವೆ.

ಈ ಜಿಲ್ಲೆಯ ಪೂರ್ವಭಾಗದಿಂದ ಪಶ್ಚಿಮಕ್ಕೆ ಬಂದಂತೆ ತೆಲುಗಿನ ಪ್ರಭಾವ ಕಡಿಮೆಯಾಗುತ್ತ ಹೋಗುತ್ತದೆ. ಚೆನ್ನಪಟ್ಟಣ ತಾಲೂಕು ಮಂಡ್ಯದ ಜೊತೆ ಹೆಚ್ಚು ಸಂಪರ್ಕ ಪಡೆದಿರುವುದರಿಂದ ಅಲ್ಲಿಯ ಕನ್ನಡ, ಮಂಡ್ಯದ ಕನ್ನಡಕ್ಕೆ ಹೆಚ್ಚು ಸಮೀಪವಾಗುತ್ತದೆ. ಹೊಸಕೋಟೆ, ದೊಡ್ಡಬಳ್ಳಾಪುರ ತಾಲೂಕುಗಳಲ್ಲಿಯ ಕನ್ನಡ ಕೋಲಾರದ ಚಿಂತಾಮಣಿ, ಚಿಕ್ಕಬಳ್ಳಾಪುರ ತಾಲೂಕಗಳಲ್ಲಿಯ ಕನ್ನಡಕ್ಕೆ ಹೆಚ್ಚು ಸಮೀಪವಾಗಿದೆ. ಆದ್ದರಿಂದ ಇಡೀ ಜಿಲ್ಲೆಯನ್ನು ತಾತ್ಕಾಲಿಕವಾಗಿ ಮತ್ತೆ ಮೂರು ವಿಭಾಗಗಳಾಗಿ ವಿಂಗಡಿಸಿಕೊಳ್ಳಬಹುದು : A. ತೆಲಗು ಪ್ರಭಾವ ಹೆಚ್ಚಿರುವ ಆನೇಕಲ್, ಹೊಸಕೋಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ ತಾಲೂಕುಗಳು; B. ಇಷ್ಟೊಂದು ಪ್ರಭಾವವಿರದ ಬೆಂಗಳೂರು ದಕ್ಷಿಣ ಹಾಗೂ ಉತ್ತರ ತಾಲೂಕುಗಳು, ಹಾಗೂ ಕನಕಪುರ ತಾಲೂಕಿನ ಪೂರ್ವಭಾಗದ (ಅರ್ಕಾವತಿಯ ಎಡಭಾಗದ) ಪ್ರದೇಶಗಳು; C. ಮಾಗಡಿ, ರಾಮನಗರ, ನೆಲಮಂಗಲ, ಚನ್ನಪಟ್ಟಣ ಹಾಗೂ ಕನಕಪುರದ ಉಳಿದ ಭಾಗಗಳು. ಆದರೆ ತಾಲೂಕುಗಳನ್ನು ಆಧಾರವಾಗಿಟ್ಟುಕೊಂಡು ಮಾಡಿದ ಗಡಿ, ಭಾಷೆಯ ದೃಷ್ಟಿಯಿಂದ ಅಷ್ಟೊಂದು ಖಚಿತವಾದುದಲ್ಲ ಎಂಬುದನ್ನು ಮರೆಯಬಾರದು. ಉದಾಹರಣೆಗೆ ರಾಮನಗರ ತಾಲೂಕಿನ ಕೆಲವು ಭಾಗಗಳ ಕನ್ನಡ, ಬೆಂಗಳೂರು ತಾಲೂಕಿನ ಕನ್ನಡಕ್ಕೇ ಹೆಚ್ಚು ಹೋಲುತ್ತದೆ.

ಬೆಂಗಳೂರು ಜಿಲ್ಲೆಯ ಬೇರೆಬೇರೆ ತಾಲೂಕುಗಳು ಬೇರೆಬೇರೆ ಜಿಲ್ಲೆಗಳೊಡನೆ ಇಟ್ಟುಕೊಂಡ ಸಂಪರ್ಕದಿಂದಾಗಿ ಭಿನ್ನಮೂಲಗಳು ಇಲ್ಲಿಯ ಕನ್ನಡಗಳಿಗೆ ಮೂಲವಾಗಿವೆ. ಆದರೆ ವೃತ್ತಪತ್ರಿಕೆಗಳ ಪ್ರಸಾರ, ಆಕಾಶವಾಣಿ, ಪಠ್ಯಪುಸ್ತಕ, ಕಾನೂನುಗಳಿಗೆ ಸಂಬಂಧಪಟ್ಟ ಕಾಗದಪತ್ರಗಳ ತಯಾರಿ— ಇವುಗಳಿಗೆಲ್ಲ ಬೆಂಗಳೂರು ಕೇಂದ್ರವಾಗಿರುವುದರಿಂದ ಇಲ್ಲಿಯ ಭಾಷೆ, ಜಿಲ್ಲೆಯ ಉಳಿದ ಭಾಗಗಳ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿದೆ. ಪರಿಣಾಮವಾಗಿ ಜಿಲ್ಲೆಯ ಬೇರೆಬೇರೆ ಭಾಗಗಳಲ್ಲಿ ಶಿಷ್ಟ ಸಂದರ್ಭ(formal context)ಗಳಲ್ಲಿ ಬಳಸುವ ಕನ್ನಡಗಳಿಗೆ ಇದು ಮಾದರಿ (model) ಯಾಗುತ್ತಿದೆ (ರಾಜ್ಯದ ಉಳಿದ ಭಾಗಗಳ ಮೇಲೆಯೂ ಇದು ಉಂಟು ಮಾಡುತ್ತಿರುವ ಪ್ರಭಾವ ಗಮನಾರ್ಹ). ಉದಾಹರಣೆಗೆ, 'ಐತೆ', 'ಊನಿ', 'ಉಡ್ತಿ'– ಮುಂತಾದವು ವ್ಯವಹಾರದಲ್ಲಿ ಬಳಸುವ ಪದಗಳಾದರೆ 'ಇದೆ', 'ಬೆಕ್ಕು', 'ಅಳಿಲು'– ಇವು ಅವುಗಳಿಗೆ ಬದಲಾಗಿ ಶಿಷ್ಟಸಂದರ್ಭದಲ್ಲಿ ಬಳಸುವ ಪದಗಳಾಗುತ್ತಿವೆ.

ಧ್ವನಿಮಾವ್ಯವಸ್ಥೆಯನ್ನು ಆಧರಿಸಿ A ಯನ್ನು ಒಂದು ವಿಭಾಗವಾಗಿಯೂ BC

ಗಳನ್ನು ಇನ್ನೊಂದು ವಿಭಾಗವಾಗಿಯೂ ಕಲ್ಪಿಸಿಕೊಳ್ಳಬಹುದು. ಧ್ವನಿಮಾಗಳ ಸಂಖ್ಯೆ ಎರಡೂ ವಿಭಾಗಗಳಿಗೆ ಒಂದೇ ಆಗಿದ್ದರೂ ಅವುಗಳ ಪ್ರಸಾರದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿವೆ.

ಸ್ವರವ್ಯವಸ್ಥೆ :	i		u	
	e	ə	o	
	æ	a	ɔ	ಹಾಗೂ ಇವುಗಳ ದೀರ್ಘ ರೂಪಗಳು.

(ಸ್ವನಿಮಾವನ್ನು ಸೂಚಿಸಲು ಓರೆಗೀಟುಗಳನ್ನು ಬಳಸಿಲ್ಲ).

ಇವುಗಳಲ್ಲಿ i (ಇ) ಗೆ ಮೂರು ಪ್ರಭೇದಗಳಿವೆ. ಒಂದು: ಸಂವೃತ (ಇ$_{ᴖ}$) ರೂಪ. ಎರಡು: ವಿವೃತ (ಇ$_{_3}$) ರೂಪ. ಮೂರು: ಮಧ್ಯಇ (ಇ$_{_\text{ಇ}}$). e (ಎ) ಗೆ ಎರಡು ಪ್ರಭೇದಗಳಿವೆ. ಒಂದು ಇನ್ನೊಂದಕ್ಕಿಂತ ಹೆಚ್ಚು ವಿವೃತರೂಪ (ಎ$_{ᴖ}$ ಎ$_3$). ಈ ಎರಡು ಪ್ರಭೆದಗಳ ಪ್ರಸಾರ ಮುಂದಿನ ಅಕ್ಷರದಲ್ಲಿಯ ಸ್ವರದ ಸಂವೃತ–ವಿವೃತ ಗುಣವನ್ನವಲಂಬಿಸಿರುತ್ತದೆ.

ಸ್ವರಗಳಲ್ಲಿ ಇ, ಉ, ಅ (a) ಗಳು ಎಲ್ಲ ಪರಿಸರಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ಅ̆(ə) ಪದಾದಿ ಮತ್ತು ಪದಮಧ್ಯದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ಆ್ಯ (æ) ಪದಾದಿಯಲ್ಲಿ ಮಾತ್ರ ಬರುವಂಥದು (ಇದು ಐಚ್ಛಿಕವಾಗಿ ಯಾ ಆಗುತ್ತದೆ). ಒ$_3$(ɔ) A ವಿಭಾಗದ ಆನೇಕಲ್ ತಾಲೂಕನ್ನುಳಿದು ಇತರ ಕಡೆ, ಪದಮಧ್ಯದಲ್ಲಿ ಮಾತ್ರ ಬರುತ್ತದೆ. ಆನೇಕಲ್ ತಾಲೂಕಿನಲ್ಲಿ ಪದಾಂತ್ಯದಲ್ಲಿಯೂ ಬರುತ್ತದೆ. ಒ$_{ᴖ}$ (O) A ವಿಭಾಗದಲ್ಲಿ ಪದಾದಿ, ಪದಮಧ್ಯ ಪರಿಸರಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. BC ವಿಭಾಗದಲ್ಲಿ ಪದಮಧ್ಯದಲ್ಲಿ ಮಾತ್ರ ಬರುತ್ತದೆ. ಎ ಸ್ವರ A ದಲ್ಲಿ ಎಲ್ಲ ಪರಿಸರ ಗಳಲ್ಲಿಯೂ ಕಾಣಿಸಿಕೊಂಡರೆ BC ಗಳಲ್ಲಿ ಪದಮಧ್ಯ ಮತ್ತು ಪದಾಂತ್ಯಗಳಲ್ಲಿ ಮಾತ್ರ ಬರುತ್ತದೆ.

ಇವುಗಳಿಗೆ ನಿದರ್ಶನವಾಗಿ ಕೆಲವು ಪದಗಳನ್ನು ಗಮನಿಸಬಹುದು.

(ಮುಂದೆ ಆವರಣದಲ್ಲಿ A ಅಥವಾ BC ಅಥವಾ ಆ (ಆನೇಕಲ್) ಎಂದು ಸೂಚಿಸಿದ್ದರೆ, ಆ ರೂಪಗಳು ಆಯಾ ವಿಭಾಗಗಳಿಗೆ ಮಾತ್ರ ಸೀಮಿತ ಎಂದರ್ಥ).

ಕರಿ, ಅ̆ಡಿಗೆ, ಅ̆ಸ, ಕೀವು, ಇಕ್ಕು, ಉದುಕು, ಅ̆ಕ್ಕಿ, ತೆಂದಿ (ತ್ ಅ̆ನ್ ದ್ ಅ̆), ಅರಡು, ಸೋರು, ಕೊಲ್ಲು, ಕೊರೆ(ಕ್ ಒ$_3$ರೆ), ತೊಲೆ(ತ್ ಒ$_3$ಲೆ), ಒ$_{ᴖ}$ಸಿ (A), ಓ$_{ᴖ}$ರಿ (A), ವಸಿ (BC) ವೋರಿ (BC), ಎ$_{ᴖ}$ಲ್ಲಿ (A) ಯೆಲ್ಲಿ (BC), ತೆರು, ತೇರು, ಉಳು, ಊಳು, ಬಂದ್ ಒ$_3$ (ಆ) ಓದ್ ಒ$_3$ (ಆ).

ವ್ಯಂಜನಗಳಲ್ಲಿ ಮಹಾಪ್ರಾಣಗಳು ಹಾಗೂ ಹ್ ಗಳನ್ನು ಹೊರತುಪಡಿಸಿ, ಶಿಷ್ಟ ಕನ್ನಡದ ವ್ಯಂಜನಗಳೆಲ್ಲ ಕಂಡುಬರುತ್ತವೆ. ಆದರೆ ಅವುಗಳಲ್ಲಿ ಸ್, ಶ್ ಗಳು ಪ್ರತ್ಯೇಕ ಸ್ವನಿಮಾಗಳಾಗಿರದೆ ಒಂದೇ ಸ್ವನಿಮಾ (ಸ್) ಆಗಿ ಕಾಣಿಸಿಕೊಳ್ಳುತ್ತವೆ. ಕೆಲವೆಡೆಗಳಲ್ಲಿ ಮಾತ್ರ ಸ್ ದ ಸ್ಥಾನದಲ್ಲಿ ಶ್ ಸ್ವಚ್ಛಂದವಾಗಿ (freely) ಬರುವುದುಂಟು. ಈ ಸ್ ~ ಶ್ ಗಳ ವ್ಯವಹಾರ ಸಾಮಾನ್ಯವಾಗಿ ಸ್ವರಮಧ್ಯದಲ್ಲಿ ಎಂದು ಹೇಳಬಹುದು. ಉದಾ : ಮನಸ ~ ಮನಶ, ಅರಿಸ್ಣ ~ ಅರಿಶಿನ, ವಿಸ ~ ವಿಶ, ಪಾಸಾಣ ~ ಪಾಶಾಣ.

ಅನುನಾಸಿಕಗಳಲ್ಲಿ ಮ್, ನ್, ಙ್– ಈ ಮೂರು ಸ್ವನಿಮಾಗಳನ್ನು ಗುರುತಿಸ ಬಹುದು. ಉದಾ : ಮನೆ, ಅಣ, ನಲ, ಮಞ್ಜು, ಅಙ್ಗ್ಳ, ಮಙ್ಕು.

A ಭಾಗದಲ್ಲಿ ಚ್, ಜ್‌ಗಳಿಗೆ ಎರಡೆರಡು ಪ್ರಭೇದಗಳಿವೆ. ಒಂದು, ತಾಲವ್ಯ ಪ್ರಭೇದ (ಉದಾ : ಚೀಲ, ಚೆಕ್ಕೆ); ಇನ್ನೊಂದು ವರ್ತ್ಸ್ಯಪ್ರಭೇದ (˘ಚ್) (ಉದಾ : ˘ಚೂರು, ˘ಚಾಪೆ, ˘ಚಾಕು). ಪೂರ್ವಸ್ವರಗಳ ಹಿಂದೆ ತಾಲವ್ಯಪ್ರಭೇದವೂ ಪೂರ್ವೇತರ ಸ್ವರಗಳ ಹಿಂದೆ ವರ್ತ್ಸ್ಯಪ್ರಭೇದವೂ ಕಾಣಿಸಿಕೊಳ್ಳುತ್ತದೆ ಎಂದು ಹೇಳ ಬಹುದಾದರೂ ಇದಕ್ಕೆ ಅಪವಾದಗಳು ಸಿಗುತ್ತವೆ ಎಂಬುದನ್ನು ಮರೆಯುವಂತಿಲ್ಲ. ಉದಾ : 'ಕೆನ್ನೆ' ಎಂಬರ್ಥದ ˘ಚೆಂಪೆ.

ಚ್ ಸ್ವನ, A ಭಾಗದಲ್ಲಿ ಐಚ್ಛಿಕವಾಗಿ ಸ್ ಆಗುವುದುಂಟು. ಹೀಗಾದಾಗ ಸ್ ಸ್ವರಗಳ ಮಧ್ಯೆ (ಅಥವಾ ಮೌನಸ್ವರಗಳ ಮಧ್ಯೆ) ಬಂದಾಗ ಮತ್ತೆ ಐಚ್ಛಿಕವಾಗಿ ಸ್ ಆಗಬಹುದು. ಉದಾ : ˘ಚೆಂಪೆ ൶ ಸೆಂಪೆ ൶ ಶೆಂಪೆ

ಚಾಟ (൶ ಸೌಟ) ൶ ಶೌಟ

(ಆವರಣದಲ್ಲಿಯ ರೂಪ ಕೇಳಿಬರುತ್ತಿಲ್ಲ.)

ಶಬ್ದಕೋಶವನ್ನು ಗಮನಿಸಿದರೆ ಕೆಲವು ಪದಗಳು A, B, C ಮೂರೂ ಭಾಗ ಗಳಿಗೂ ಒಂದೇ ಆಗಿರುವುದನ್ನೂ ಇನ್ನು ಕೆಲವು ಪದಗಳು A ಹಾಗೂ C ಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡು B ಯಲ್ಲಿ ಈ ಎರಡೂ ರೂಪಗಳಲ್ಲಿ ಕಾಣಿಸಿಕೊಳ್ಳು ವುದನ್ನೂ ನೋಡಬಹುದು. ಅನೇಕ ವೇಳೆ B ಭಾಗದ ಬೆಂಗಳೂರು ದಕ್ಷಿಣ, ಉತ್ತರ ತಾಲೂಕುಗಳು A ದ ಜೊತೆಗೆ ಸೇರುತ್ತವೆ. ಕನಕಪುರ ಮಾತ್ರ ಕೆಲವೊಮ್ಮೆ ಪ್ರತ್ಯೇಕವಾಗಿ ನಿಲ್ಲುತ್ತದೆ (ಮುಂದೆ ಹೊಸಕೋಟೆ, ಆನೇಕಲ್, ದೇವನಹಳ್ಳಿ, ದೊಡ್ಡಬಳ್ಳಾಪುರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ನೆಲಮಂಗಲ, ಕನಕಪುರ, ರಾಮನಗರ, ಚೆನ್ನಪಟ್ಟಣ, ಮಾಗಡಿಗಳನ್ನು ಅನುಕ್ರಮವಾಗಿ ಹೊ, ಆ, ದೇ, ದೊ, ಬೆದ, ಉವ, ನೆ, ಕ, ರಾ, ಚೆ, ಮಾ ಎಂದು ಸಂಕೇತಿಸಲಾಗುತ್ತದೆ).

ಶಿಷ್ಟಕನ್ನಡದ ಕೆಲವು ಪದಗಳನ್ನು ತೆಗೆದುಕೊಂಡು ಅವುಗಳಿಗೆ ಸಂವಾದಿಯಾಗಿ ಆಯಾ ಭಾಗಗಳಲ್ಲಿರುವ ಪ್ರಾದೇಶಿಕರೂಪಗಳನ್ನಿಲ್ಲಿ ನೋಡಬಹುದು (ಆಯಾ ವಿಭಾಗದ ಕೆಳಗೆ ಪ್ರಾದೇಶಿಕರೂಪಗಳನ್ನು ಕೊಟ್ಟು ಅವುಗಳ ಮುಂದೆ ತಾಲೂಕುಗಳನ್ನು ಪಸರಿಸದಿದ್ದರೆ, ಆ ವಿಭಾಗದಲ್ಲಿ ಬರುವ ಎಲ್ಲ ತಾಲೂಕುಗಳಲ್ಲಿಯೂ ಈ ರೂಪವಿದೆ ಎಂದರ್ಥ. ಉದಾಹರಣೆಗೆ, ಕೆಳಗೆ 'ಹತ್ತರಿ' ಎಂಬ ಪದಕ್ಕೆ ಸಂವಾದಿಯಾಗಿ A,B ವಿಭಾಗಗಳ ಕೆಳಗೆ 'ತೋಪ್ಡ' ಎಂಬ ರೂಪ ಕೊಟ್ಟಿದೆ. ಇದು A, B ವಿಭಾಗಗಳಲ್ಲಿ ಬರುವ ಎಲ್ಲ ತಾಲೂಕುಗಳಲ್ಲಿಯೂ ಕಂಡುಬರುತ್ತದೆ. ಹೀಗಿಲ್ಲದೆ ಆಯಾ ವಿಭಾಗದ ಒಂದೆರಡು ತಾಲೂಕುಗಳಲ್ಲಿ ಮಾತ್ರ ಭಿನ್ನರೂಪವಿದ್ದು, ಉಳಿದೆಲ್ಲ ತಾಲೂಕುಗಳಲ್ಲಿಯೂ ಒಂದೇ ರೂಪವಿದ್ದರೆ ಈ ಭಿನ್ನರೂಪಗಳ ಮುಂದೆ ಅವು ಬಳಕೆಯಿರುವ ತಾಲೂಕನ್ನು ಸಾಂಕೇತಿಸಲಾಗುತ್ತದೆ).

ಶಿಷ್ಟಕನ್ನಡದ ಪದಗಳು	A ವಿಭಾಗದಲ್ಲಿಯ ರೂಪಗಳು	B ವಿಭಾಗದಲ್ಲಿಯ ರೂಪಗಳು	C ವಿಭಾಗದಲ್ಲಿಯ ರೂಪಗಳು
೧. ಕಿವಿ	ಕಿವಿ	ಕಿವಿ	ಕಿವಿ
೨. ಮದುಮಗ	ಮದ್ವೆಗಂಡು	ಮದ್ವೆಗಂಡು	ಮದ್ವೆಗಂಡು
೩. ಅಜ್ಜ	ತಾತ	ತಾತ	ತಾತ, ಅಯ್ಯ(ಕ)
೪. ಚಿಲುಕ	ಚಿಲ್ಕು (ಹೊ), ಚಿಲ್ಕ	ಚಿಲ್ಕ	ಚಿಲ್ಕ
೫. ಪಪ್ಪಾಯಿ	ಪರಂಗಿ	ಪರಂಗಿ	ಪರಂಗಿ
೬. (ಗಾಡಿಯ ಚಕ್ರದ ಸುತ್ತು ಹಾಕುವ) ಬಳೆ	ಪಟ್ಟಿ	ಪಟ್ಟಿ	ಪಟ್ಟಿ, ಬಳೆ (ಕ)
೭. ವ್ಯವಸಾಯ	ಆರಂಬ	ಆರಂಬ	ಜಿರಾಯ್ತಿ/ಜಿರಾತಿ
೮. ಓತಿ	ತೊಣ್ಣೆಕ್ಯಾತ (ಹೊ.ಆ.), ತೊಣ್ಣೆ(ನ್ನೆ)ಕಾತ (ದೇ.ದೊ)	ತೊಣ್ಣೆ(ನ್ನೆ)ಕಾತ	ವಣ್ಣೆ(ನ್ನೆ)ಕ್ಯಾತ (ಮಾ.ರಾ.), ವಣ್ಣೆ ಕ್ಯಾತ/ವಣ್ಣೆಕೆತ್ತ (ನೆ.)ಅಂಟೆಗೊದ್ದ(ಕ)
೯. ಬೈತಲೆ	ಪಾಪ್ಡಿ	ಬಾಸ್‌ಪಟ್ಟೆ	ಬಾಚ್ ಬಟ್ಟು (ರಾ) ಬಾಚಲ್ ಪಟ್ಟೆ
೧೦. ಹತ್ತರಿ	ತೋಪ್ಡ	ತೋಪ್ಡ	ಅತ್ತಿ

ಶಿಷ್ಟಕನ್ನಡದ ಪದಗಳು	A ವಿಭಾಗದಲ್ಲಿಯ ರೂಪಗಳು	B ವಿಭಾಗದಲ್ಲಿಯ ರೂಪಗಳು	C ವಿಭಾಗದಲ್ಲಿಯ ರೂಪಗಳು
೧೧. ಆಕಾಶ	ಬಾಣ	ಬಾಣ	ಆಕಾಸ (ಮಾ), ಮುಗ್ಲು (ನೆ), ಬಾಣ
೧೨. ಕಾಗೆ	ಕಾಕಿ(ಹೊ.ಆ.ದೊ), ಕಾಕೆ (ದೇ)	ಕಾಕಿ	ಕಾಗೆ
೧೩. ಅಳಿಲು	ಉಡ್ತೆ(ಆ), ಉಡ್ತಿ	ಉಡ್ತಿ	ಅಳ್ಳುವ(ಕ), ಅರ್ಲು(ಮಾ), ಅಳ್ಳುಳ್ಳು(ನೆ), ಅಳುವ
೧೪. ಸವತೆಕಾಯಿ	ಚವ್ತೆಕಾಯಿ(ಆ), ದ್ವಾಸ್‌ಕಾಯಿ	ಸವ್ತೆಕಾಯಿ	ಸವ್ತೆಕಾಯಿ(ರಾ.ಚೆ), ಸೋತೇಕಾಯಿ (ಕ), ಸವ್ತೆಕಾಯಿ/ಸೌದೇ ಕಾಯಿ (ನೆ)
೧೫. ತರಗೆಲೆ (ಒಣಗಿದ ಎಲೆ)	ತರ್ಗು (ದೊ.ಆ), ಸುರ್ಗು	ಸುರ್ಗು(ದಬೆ), ತರ್ಗು(ಉಬೆ)	ತರ್ಗು
೧೬. ಅರಳಿ ಮರ	ಅರ್ಳೀಮರ(ಆ.ದೇ), ರಾಗೀಮರ	ಅಳ್ಳಿಮರ	ಅಳ್ಳಿಮರ
೧೭. (ಗಾಡಿಯ ಚಕ್ರದ) ಕೀಲು	ಕಡಾಣಿ	ಕಡಾಣಿ	ಕಡಾಣಿ
೧೮. ಏಡಿ	ಏಡೀಕಾಯಿ(ಆ), ಎಂಡ್ರ್‌ಕಾಯಿ	ಯೇಡೀಕಾಯಿ	ಯೇಡೀಕಾಯಿ, ನಳ್ಳಿ (ಕ)
೧೯. ಇರುವೆ	ಸೀಮೆ (ದೊ.ಆ.), ಇರ್ಬು	ಇರ್ಬು (ದಬೆ), ಚೀಮೆ (ಉಬೆ)	ಇರ/ಇರ್ಬು
೨೦. ಬೆಕ್ಕು	ಬೆಕ್ಕು(ಆ), ಊನಿ(ಹೊ.ದೇ), ಊನಿ/ಶೀಬಿ(ದೊ.)	ಬೆಕ್ಕು (ದಬೆ), ಊನೆ (ಉಬೆ)	ಕೊತ್ತಿ(ಕ), ಬೆಕ್ಕು
೨೧. ಗೋಸುಂಬೆ	ಈಸ್ರುಳ್ಳಿ (ಹೊ), ಊಸ್ರುಳ್ಳಿ	ಊಸ್ರುಳ್ಳಿ	ಉರ್‌ಸಿಂಗಿ (ಕ), ಊಸರ್‌ಬಳ್ಳಿ

ಮೇಲಿನ ಪಟ್ಟಿಯನ್ನು ಗಮನಿಸಿದರೆ A ವಿಭಾಗ ಒಂದು ತುದಿಯಲ್ಲಿಯೂ C ವಿಭಾಗ ಇನ್ನೊಂದು ತುದಿಯಲ್ಲೂ ಇರುವುದು ತಿಳಿಯುತ್ತದೆ. B ವಿಭಾಗ ಕೆಲವೊಮ್ಮೆ C ಯ ಜೊತೆಗೂ ಹೆಚ್ಚಿನ ಸಂದರ್ಭಗಳಲ್ಲಿ A ಯ ಜೊತೆಗೂ ಕೂಡಿ ಕೊಳ್ಳುವುದು ಎಂಬ ಸಂಗತಿಯೂ ವ್ಯಕ್ತವಾಗುತ್ತದೆ. ಆದ್ದರಿಂದ ಮೇಲಿನ ಪಟ್ಟಿಯನ್ನು ಗಮನದಲ್ಲಿಟ್ಟುಕೊಂಡರೆ B ಯು C ಗಿಂತ A ಗೆ ಹತ್ತಿರವಾಗಿದೆ ಎಂಬ ನಿರ್ಣಯಕ್ಕೆ ಬರಬಹುದು. ಆದರೆ ಈ ಹಿಂದೆ ಬೆಂಗಳೂರು ಜಿಲ್ಲೆಯಲ್ಲಿ A ಪ್ರದೇಶವನ್ನು ಒಂದು ಮುಖ್ಯ ಉಪವಿಭಾಗವಾಗಿಯೂ BC ಗಳನ್ನು ಇನ್ನೊಂದು ಮುಖ್ಯ ಉಪವಿಭಾಗವಾಗಿಯೂ ಕಲ್ಪಿಸಿಕೊಂಡಿದ್ದನ್ನು ಜ್ಞಾಪಿಸಿಕೊಳ್ಳಬಹುದು. ಈ ವಿರೋಧಕ್ಕೆ ವಿವರಣೆಯನ್ನು ಹೇಗೆ ಕೊಡುವುದು ? ಶಬ್ದಕೋಶದಲ್ಲಿ ತೋರಿಬರುವ ವ್ಯತ್ಯಾಸವನ್ನು ಸ್ವನಿಮಾವ್ಯವಸ್ಥೆ, ವ್ಯಾಕರಣವ್ಯವಸ್ಥೆ ಹಾಗೂ (ಶಿಷ್ಟಭಾಷೆಗೂ ಆಯಾ ಪ್ರಭೇದಗಳಿಗೂ ಇರಬಹುದಾದ) ಧ್ವನಿವ್ಯತ್ಯಾಸ-ಇವುಗಳನ್ನು ಆಧರಿಸಿ ಮಾಡಿದ ವರ್ಗೀಕರಣಕ್ಕೆ ಪೂರಕವಾಗಿ ತೆಗೆದುಕೊಳ್ಳಬಹುದೇ ಹೊರತು, ಅದಕ್ಕೇ ಪ್ರಾಮುಖ್ಯವನ್ನು ಕೊಲಬೇಕಾಗಿಲ್ಲ. ಕಾರಣ ವ್ಯಾಕರಣವ್ಯವಸ್ಥೆ, ಧ್ವನಿವ್ಯತ್ಯಾಸಗಳಿಗೆ ಸಂಬಂಧಿಸಿದ ಸೀಮಾರೇಖೆಗಳು (Isoglosses) ತುಲನಾತ್ಮಕವಾಗಿ ಹೆಚ್ಚು ಗಟ್ಟಿಮುಟ್ಟಾದವುಗಳು (Stable).

ಶಿಷ್ಟಕನ್ನಡದ ಪದಗಳನ್ನು ಅಳವಡಿಸಿಕೊಳ್ಳುವಾಗ ಆಗಬಹುದಾದ ಧ್ವನಿವ್ಯತ್ಯಾಸಗಳಲ್ಲಿ ಕೆಲವು ಇಡೀ ಜಿಲ್ಲೆಗೆ (A, B, C) ಅನ್ವಯಿಸುವುದನ್ನೂ ಇನ್ನು ಕೆಲವು A ಹಾಗೂ BC ಗಳಿಗೆ ಪ್ರತ್ಯೇಕವಾಗಿರುವುದನ್ನೂ ಗಮನಿಸಬಹುದು.

೧. ಶಿಷ್ಟಕನ್ನಡದಲ್ಲಿಯ ಮಹಾಪ್ರಾಣಗಳು ಇಲ್ಲಿ ಅಲ್ಪಪ್ರಾಣಗಳಾಗುತ್ತವೆ.

ಉದಾ : ಭೂಮಿ – ಬೂಮಿ   ದುಃಖ – ದುಕ್ಕ
ಮುಖ – ಮಕ   ಸುಖ – ಸುಕ

೨. ಶಿಷ್ಟಕನ್ನಡದ ಹ್, ಇಲ್ಲಿ ಶೂನ್ಯವಾಗುತ್ತದೆ (ಪದಾದಿಯಲ್ಲಿ ನಿತ್ಯವಾಗಿ, ಉಳಿದ ಪರಿಸರಗಳಲ್ಲಿ ಬಹುತೇಕವಾಗಿ ಶೂನ್ಯವಾಗುತ್ತದೆ).

ಉದಾ : ಹಾಲು – ಆಲು   ಆಹಾರ – ಆಆರ (ಗ ಆಹಾರ)
ಹಾಕು – ಆಕು   ದಾಹ – ದಾಅ (ಗ ದಾಹ)
ಹಕ್ಕಿ – ಅಕ್ಕಿ   ಸ್ನೇಹಿತ – ಸ್ನೇಯಿತ (ಗ ಸಿನೇಯಿತ)
ಹತ್ತಿರಿ – ಅತ್ತಿ

೩. ಶಿಷ್ಟಕನ್ನಡದ ಪದಾದಿಯ ಒ್ರ(ು), ವ ಆಗುತ್ತದೆ.

ಉದಾ : ಒ್ವಲೆ – ವಲೆ
ಒ್ವಡೆ – ವಡೆ
ಒ್ವಪ್ಪಾರ – ವಪ್ಪಾರ

೪. ಪದಾದಿಯ ಒ್ಗ(o), ಎ್ಗ(e)ಗಳು BCಯಲ್ಲಿ ಕ್ರಮವಾಗಿ ವೊ (ಅ ವ), ಯೆ ಗಳಾಗುತ್ತವೆ.

ಉದಾ : ಒಂದು – ವೊಂದು (ಅ ವಂದು) ಎಲಿ – ಯೆಲಿ
ಒಟ್ಟು – ವೊಟ್ಟು ಎಂಬತ್ತು – ಯೆಂಬತ್ತು
ಒಬ್ಬ – ವೊಬ್ಬ (ಅ ವಬ್ಬ)

೫. ಪದಾದಿಯ ಏ, ಮುಂದಿನ ಅಕ್ಷರದಲ್ಲಿ ಅ ಇಲ್ಲದಿದ್ದಾಗ BC ಯಲ್ಲಿ ಯೇ ಆಗುತ್ತದೆ.

ಉದಾ : ಏರು – ಯೇರು ಏಣಿ – ಯೇಣಿ

೬. ಮುಂದಿನ ಅಕ್ಷರದಲ್ಲಿ ಅ ಇದ್ದಾಗ ABC ಗಳಲ್ಲಿ ಪದಾದಿಯ ಏ, ಯಾ ಆಗುತ್ತದೆ.

ಉದಾ : ಏತ – ಯಾತ ಏಲಕ್ಕಿ – ಯಾಲಕ್ಕಿ

೭. ಪದಾದಿಯ ಇ, BC ಗಳಲ್ಲಿ ಯಿ ಆಗುತ್ತದೆ.

ಉದಾ : ಇಲಿ – ಯಿಲಿ ಇಳಿ – ಯಿಳಿ

೮. ಪದಾದಿಯಲ್ಲಿ ಹ್ ಇದ್ದು ಅದರ ಮುಂದೆ ಇ, ಎ, ಏ, ಒ್ಗ ಒ್ವ ಸ್ವರ ಗಳು ಬಂದಾಗ ಹ್ ಶೂನ್ಯವಾಗಿ ನಂತರ ೩, ೪, ೫, ೬, ೭ ನೆಯ ನಿಯಮಗಳಲ್ಲಿ ಹೇಳಿದ ಬದಲಾವಣೆಗಳಾಗುತ್ತವೆ.

ಉದಾ : ಹೇಳು – ಯೇಳು ಹಿಗ್ಗು – ಯಿಗ್ಗು
ಹೇರು – ಯೇರು ಹಿಮ್ಮಡಿ – ಯಿಮ್ಡಿ
ಹೊಲ – ವೊಲ (ಅ ವಲ)
ಹೋರಿ – ವೋರಿ

ವ್ಯಾಕರಣವ್ಯವಸ್ಥೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಗುರುತಿಸಬಹುದು.

A ವಿಭಾಗದ ತಾಲೂಕುಗಳಲ್ಲಿ ಅಸ್ವರ್ಥನಾಮಗಳಿಗೆ –ನು ಎಂಬ ಪುರುಷವಾಚಕ ಪ್ರತ್ಯಯ ಹತ್ತಿಸಿ ಬಳಸುತ್ತಾರೆ (ಹಿಂದಿನ ವ್ಯಂಜನಕ್ಕನುಸಾರವಾಗಿ –ನ್ ಬದಲಾ ಗುತ್ತದೆ). ಉದಾ :

ಶಿಷ್ಟಕನ್ನಡ	B, C	A
ಕಿವುಡ	ಕಿವ್ಡ	ಚೌಟ್ನು/ಶೌಟ್ನು
ಕುರುಡ	ಕುರ್ಡ	ಗುಡ್ಡೋನು/ಗುಡ್ನು
ಮೂಗ	ಮೂಗ	ಮೂಗ್ನು

ಇದು, ತೆಲುಗಿನ ಪ್ರಭಾವದಿಂದಾದುದು. ತೆಲುಗಿನಲ್ಲಿ –ವಾಡು ಪುರುಷವಾಚಕ ಪ್ರತ್ಯಯ ಹತ್ತಿಸುವ ರೂಢಿಯಿದೆ. ತೆಲುಗಿನಿಂದ ಅನ್ವರ್ಥನಾಮಪದಗಳನ್ನು ಸ್ವೀಕರಿಸುವಾಗ (ಹಾಗೂ ಕನ್ನಡದ ನಾಮಪದಗಳಿಗೂ ಕೂಡ) –ವಾಡು ಪ್ರತ್ಯಯದ ಬದಲು –ನು ಪ್ರತ್ಯಯವನ್ನು ಸೇರಿಸಲಾಗುತ್ತದೆ. ಆದ್ದರಿಂದ

ತೆ. ಗ್ರುಡ್ಡಿವಾಡು (> ಗುಡ್ಡಿವಾಡು) > ಕ. ಗುಡ್ಡೋನು
ತೆ. ಚೆವಿಟಿವಾಡು (> ಚೌಟಿವಾಡು) > ಕ. ಚೌಟ್ನು ಆಗುತ್ತವೆ.

ಆನೇಕಲ್ ತಾಲೂಕಿನ ಉತ್ತಮಪುರುಷ ಬಹುವಚನಸೂಚಕ –ಎವು ಪ್ರತ್ಯಯ ಹಾಗೂ ಪ್ರಥಮಪುರುಷ ನ. ಲಿಂಗ ಬಹುವಚನಸೂಚಕ –ಅವು ಪ್ರತ್ಯಯಗಳಿಗೆ ಬದಲಾಗಿ –ಒ(ೊ) ಕಂಡುಬರುತ್ತದೆ.

ಉದಾ : ನಾವು ಬಂದೆವು – ನಾವ್ ಬಂದೊ
ಅವು ಹೋದವು – ಅವ್ ಓದೊ

ಈ ಕಾರಣದಿಂದ ಆನೇಕಲ್ ತಾಲೂಕು A ವಿಭಾಗದಿಂದ ಮತ್ತೆ ಕವಲೊಡೆದು ನಿಲ್ಲುತ್ತದೆ. ಹೀಗೆ ಕನಕಪುರ (ಕೆಲವು ಭಾಗ) C ಯಿಂದ ಕವಲೊಡೆದು ನಿಲ್ಲುತ್ತದೆ. ಈ ಹಿಂದೆ ಕೊಟ್ಟ ಶಬ್ದಗಳ ಪಟ್ಟಿಯನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಆದರೆ ಆನೇಕಲ್ ಪ್ರತ್ಯೇಕವಾಗುತ್ತದೆಯೆಂಬುದು ಮುಖ್ಯವಾದ ಸಂಗತಿ. ಕನಕಪುರ C ಯಿಂದ ಪ್ರತ್ಯೇಕವಾಗುತ್ತದೆಯೆಂಬುದು ಗೌಣವಾದ ಸಂಗತಿ. ಆದ್ದರಿಂದ ಕನಕಪುರ ಪ್ರತ್ಯೇಕವಾಗುವುದಕ್ಕೆ ಕಾರಣ ಶಬ್ದಕೋಶದಲ್ಲಿಯ ವ್ಯತ್ಯಾಸ ಮಾತ್ರ.

ಮಂಡ್ಯ ಜಿಲ್ಲೆಯ ಕನ್ನಡ

• ಕೆ. ಕೆಂಪೇಗೌಡ

ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳ ನಡುವಿನ ಜಿಲ್ಲೆಯೇ ಮಂಡ್ಯ. ಇದು ಕರ್ನಾಟಕದ ದಕ್ಷಿಣಭಾಗದಲ್ಲಿದ್ದು, ಈ ಜಿಲ್ಲೆಯಲ್ಲಿ ಹಳ್ಳಿಗಳು ಹೆಚ್ಚು. ಮಂಡ್ಯದ ಸುತ್ತಮುತ್ತಣ ಪ್ರದೇಶದಲ್ಲಿ ಆಡುವ ಕನ್ನಡವನ್ನು 'ಮಂಡ್ಯ ಜಿಲ್ಲೆಯ ಕನ್ನಡ' ಎನ್ನುತ್ತೇವೆ. ಈ ಕನ್ನಡ, ಮೈಸೂರು ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ದೊರೆಯುವ ಕನ್ನಡಕ್ಕಿಂತ ಬೇರೆಯಾಗಿದೆ.

ಇಲ್ಲಿನ ಹಳ್ಳಿಗಳಲ್ಲಿ ಒಕ್ಕಲಿಗರೇ ಹೆಚ್ಚು. ಅಲ್ಲಲ್ಲಿ ಕೆಲವುಕಡೆ ಹರಿಜನರು, ಬೆಸ್ತರು, ಕುರುಬರು, ಗಾಣಿಗರು ಇರುವುದನ್ನು ಕಾಣಬಹುದು. ಇವರ ಮನೆ ಮಾತು ಕನ್ನಡ. ಇವರ ವ್ಯವಹಾರವೆಲ್ಲಾ ಕನ್ನಡದಲ್ಲಿಯೇ ನಡೆಯಬೇಕು. ಇಲ್ಲಿ ವಾಸಿಸುವ ಬೇರೆಬೇರೆ ಕೋಮಿನ ಜನರು ವ್ಯವಹಾರಕ್ಕಾಗಿ ಆಡುವ ಕನ್ನಡದಲ್ಲಿಯೂ ವ್ಯತ್ಯಾಸ ಕಂಡುಬರುವುದು. ಈ ಪ್ರದೇಶದ ಕನ್ನಡ, ಮೈಸೂರುಕನ್ನಡಕ್ಕೆ ಬಹು ಹತ್ತಿರವಾಗಿದೆಯಾದರೂ ತನ್ನದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ.

ಮಂಡ್ಯ ಜಿಲ್ಲೆಯ ಹಳ್ಳಿಗಳಲ್ಲಿ ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಂತೆ ಒಂದೇ ಕೋಮಿನ ಜನರು ವಾಸಿಸುವುದು ರೂಢಿ. ಕೆಲವು ದೊಡ್ಡದೊಡ್ಡ ಹಳ್ಳಿ ಮತ್ತು ಪಟ್ಟಣಗಳಲ್ಲಿ ಮಾತ್ರ ಇತರ ಕೋಮಿನ ಜನರು ವಾಸಿಸುವರು. ಈ ಜಿಲ್ಲೆಯ ಪಟ್ಟಣಗಳಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರು, ಲಿಂಗಾಯತರು, ಒಕ್ಕಲಿಗರು, ಹರಿಜನರು, ಬೆಸ್ತರು, ಮುಸಲ್ಮಾನರು, ಕುರುಬರು, ಅಗಸರು, ಗಾಣಿಗರು, ಕುಂಬಾರರು, ನಾಯಿಂದರು, ಮಾದಿಗರು, ವ್ಯಾದರು, ದರ್ಜಿಗಳು, ಶೇಟುಗಳು, ಮಾರವಾಡಿಗಳು, ಸಿಂಧಿಗಳು, ಉಡುಪಿಯವರು, ಕಾಕಾಗಳು, ಕ್ರಿಶ್ಚಿಯನ್‌ರು, ಬಣಜಿಗ ಶೆಟ್ಟರು, ಕೊರಮರು, ಜಾತಮಾಲಿಗಳು, ಒಡ್ಡರು, ಹಂದಿಗಾಡಿಗರು, ಗಾಡಿಗರು— ಹೀಗೆ ಬೇರೆಬೇರೆ ಜಾತಿಯ ಜನರು ವಾಸಿಸುವುದನ್ನು ಕಾಣಬಹುದಾಗಿದೆ.

ಇದರ ಸುತ್ತಮುತ್ತಲ ಪ್ರದೇಶಗಳಲ್ಲಿ ದೊಂಬರು, ದೊಂಬಿದಾಸರು, ಗೊಲ್ಲರು, ಹಕ್ಕಿಪಿಕ್ಕಿಯವರು, ಲಂಬಾಣಿಗಳು, ಗೊಂಬೆರಾಮರು, ಬುಡುಬುಡುಕೆಯವರು, ಕೋಲೆ

ಬಸವನವರು, ಗೊಡಬಡ್ಡಗಳು ಮುಂತಾದ ಅಲೆಮಾರಿ ಜನರನ್ನು ಅಲ್ಲಲ್ಲಿ ಕಾಣಬಹುದಾದರೂ ಇವರ ಜನಸಂಖ್ಯೆ ಬಹಳ ಕಡಿಮೆ. ಇವರಲ್ಲಿ ಕೆಲವರು ಕನ್ನಡವನ್ನು ತಮ್ಮ ಮನೆಮಾತನ್ನಾಗಿ ಆಡಿದರೆ, ಮತ್ತೆ ಕೆಲವರು ಬೇರೆಬೇರೆ ಭಾಷೆಗಳನ್ನು ಮನೆಮಾತನ್ನಾಗಿ ಆಡುವವರಾಗಿದ್ದಾರೆ.

ಮೇಲೆ ಹೇಳಿದ ಆ ಬೇರೆಬೇರೆ ಕೋಮಿನ ಜನರು ಆಡುವ ಕನ್ನಡವನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಹೊರಟಾಗ, ಅವರ ಭಾಷೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಬ್ರಾಹ್ಮಣರ ಹಾಗೂ ಲಿಂಗಾಯತರ ಕನ್ನಡ ಒಕ್ಕಲಿಗರು, ಹರಿಜನರು, ಬೆಸ್ತರು, ಕುರುಬರು, ಕುಂಬಾರರು, ಅಗಸರು ಆಡುವ ಕನ್ನಡಕ್ಕಿಂತ ಬೇರೆಯಾಗಿರುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಈ ವಿವಿಧ ಕೋಮಿನಲ್ಲಿಯೂ ಸಾಕಷ್ಟು ಒಳಪಂಗಡಗಳು ಇಲ್ಲದಿಲ್ಲ. ಕುರುಬರಲ್ಲಿ ನಾಲ್ಕು ಒಳಪಂಗಡಗಳಿದ್ದರೆ, ಬ್ರಾಹ್ಮಣರಲ್ಲಿ ಮೂರು ಒಳಪಂಗಡಗಳಿವೆ. ಹರಿಜನರಲ್ಲಿ ಎರಡು ಒಳಪಂಗಡಗಳಿದ್ದರೆ ಒಕ್ಕಲಿಗರಲ್ಲಿ ಎರಡಕ್ಕೂ ಹೆಚ್ಚು ಒಳಪಂಗಡಗಳಿವೆ. ಹೀಗೆ ಒಂದೊಂದು ಜಾತಿಗೂ ಒಳಪಂಗಡಗಳು ಹತ್ತಾರು, ನೂರಾರು. ಹರಜನರಲ್ಲಿ ಒಂದು ಹೊಲೆಯ, ಮತ್ತೊಂದು ಮಾದಿಗ. ಇವರನ್ನೇ ಈ ಪ್ರದೇಶದಲ್ಲಿ ಎಡಗೈನವರು ಮತ್ತು ಬಲಗೈನವರು ಎನ್ನುವುದು. ಮಾದಿಗರ ಮುಖ್ಯ ಕಸುಬು ಚರ್ಮ ಹದಮಾಡುವುದು, ಚಪ್ಪಲಿ ತಯಾರಿಸುವುದು. ಹೊಲೆಯರಲ್ಲಿ ಕೆಲವರು ಕೂಲಿಗಳೂ, ಕೆಲವರು ವ್ಯವಸಾಯಗಾರರೂ ಆಗಿದ್ದಾರೆ. ಕುರುಬರಲ್ಲಿ ಹಂಡೆಕುರ್ಬ, ಕಂಬ್ಳಿಕುರ್ಬ, ವಡ್ಡಕುರ್ಬ, ಹಾಲುಗುರ್ಬ ಮುಂತಾದ ಒಳಪಂಗಡಗಳೂ ಬ್ರಾಹ್ಮಣರಲ್ಲಿ ನಾಮುದವರೂ, ಮುದ್ರೆಯವರೂ, ವಿಭೂತಿಧಾರಿಗಳೂ ಇದ್ದಾರೆ. ಇವರಲ್ಲಿ ನಾಮುದವರನ್ನೇ ಐಯ್ಯಂಗಾರ್ರು ಅಥವಾ ಅಯ್ಯಂಗಾರಿಗಳು ಎನ್ನುವರು. ಇವರಲ್ಲಿಯೂ ಒಳಪಂಗಡಗಳು ಇಲ್ಲದಿಲ್ಲ. ಈ ಮೂರು ವರ್ಗಕ್ಕೆ ಸೇರಿದ ಬ್ರಾಹ್ಮಣರು ಸಾಮಾನ್ಯವಾಗಿ ಪಟ್ಟಣಗಳಲ್ಲಿ ವಾಸಿಸುತ್ತಾರೆ. ಆದ್ದರಿಂದ ಹಳ್ಳಿಗಳಲ್ಲಿ ಈ ಮೂರು ಪಂಗಡಗಳೂ ವಾಸಿಸುವುದು ಅಪರೂಪ. ತುಳು ಆಡುವ ಉಡುಪಿಬ್ರಾಹ್ಮಣರನ್ನು ತಮಿಳು ಆಡುವ ಐಯಂಗಾರಿಗಳನ್ನು, ಕನ್ನಡ ಆಡುವ ಹರಿಜನರನ್ನು, ಒಕ್ಕಲಿಗರನ್ನು ಪಟ್ಟಣಗಳಲ್ಲಿ ಕಾಣಬಹುದಾದರೂ ಇವರ ಜನಸಂಖ್ಯೆ ಬಹಳ ಕಡಿಮೆ. ಒಕ್ಕಲಿಗರು, ಲಿಂಗಾಯತರು, ಬೆಸ್ತರು ಮುಂತಾದ ಬೇರೆಬೇರೆ ಕೋಮಿನಲ್ಲಿ ಸಾಕಷ್ಟು ಒಳಪಂಗಡಗಳು ಇರುವುದು ಕಾಣಸಿಗುತ್ತದೆ. ಲಿಂಗಾಯತರಲ್ಲಿ ಜಂಗಮರು, ಸಾಧುಗಳು, ಆರಾಧ್ಯರು ಎಂದು ಒಕ್ಕಲಿಗರಲ್ಲಿ ಗಂಗಡಿಕಾರರು, ಮರಸೊಕ್ಕಲಿಗರು, ಕುಂಚಟಿಗರು, ನಾಮಧಾರಿಗಳು ಎಂದೂ ಒಳಪಂಗಡಗಳು ಕಂಡುಬರುತ್ತವೆ.

ಈ ಎಲ್ಲಾ ಒಳಪಂಗಡದವರು ಬೇರೆಬೇರೆ ಮನೆದೇವರು, ಗುರು, ಕುಲಗುರುಗಳನ್ನು ಹೊಂದಿರುವ ಬೇರೆಬೇರೆ ಒಕ್ಕಲುಗಳಾಗಿದ್ದಾರೆ. ಮೇಲೆ ಹೇಳಿದ ಬೇರೆ

ಬೇರೆ ಕೋಮಿನ ಬೇರೆಬೇರೆ ಪಂಗಡದ ಜನರು ಮನೆದೇವರು, ಗುರು, ಕುಲ ಗುರುಗಳನ್ನು ಹೊಂದಿದ್ದಾರೆಯಾದರೂ ಆ ಒಕ್ಕಲುಗಳು ತಮ್ಮ ಹೆಸರುಗಳನ್ನು ಸಹ ಸಾಮಾನ್ಯವಾಗಿ ಆ ದೇವತೆ ಹಾಗೂ ಗುರುಗಳಿಗೆ ಅಂಕಿತ ಇಲ್ಲವೆ ಅನ್ವರ್ಥನಾಮ ಗಳಾಗಿ ಇಟ್ಟಿರುವುದನ್ನು ಕಾಣಬಹುದು. ಹಾಗೆಯೇ ಕುಂಬಾರರು, ಬೆಸ್ತರು, ಅಗಸರು, ನಾಯಿಂದರು, ಕೊರಮರು, ಮ್ಯಾದರು, ಗಾಡಿಗರು ಮುಂತಾದ ಕೋಮುಗಳಲ್ಲಿಯೂ ಒಳಪಂಗಡಗಳು ಇದ್ದೇ ಇರುತ್ತವೆಯಾದರೂ ಅವು ಇಲ್ಲಿ ಮುಖ್ಯವಲ್ಲ. ಆದರೂ ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅವರ ಭಾಷಾವಿಚಾರವನ್ನು ತಿಳಿಯಬೇಕಾದುದು ಅತ್ಯಾವಶ್ಯಕ.

ಮಂಡ್ಯ ಜಿಲ್ಲೆ ಎಷ್ಟೊಂದು ಫಲವತ್ತಾದ ಭಾಗವಾಗಿದೆಯೋ ಹಾಗೆಯೆ ಎಲ್ಲಾ ಜಾತಿಯ ಜನರನ್ನು ಹೊಂದಿರುವ ಪ್ರದೇಶವೂ ಆಗಿದೆ. ಒಡ್ಡರು, ಬಣಜಿಗರು, ಶೆಟ್ಟರು, ನಾಯಿಂದರು, ಮ್ಯಾದರು ತೆಲುಗುಭಾಷೆಯನ್ನೂ, ಮುಸಲ್ಮಾನರು ಉರ್ದು ಭಾಷೆಯನ್ನೂ, ಕ್ರಿಶ್ಚಿಯನ್‌ರು ಇಂಗ್ಲೀಷನ್ನೂ, ಮಾರವಾಡಿಗಳು ರಾಜಾಸ್ತಾನಿಯನ್ನೂ, ಉಡುಪಿಯವರು ತುಳುವನ್ನೂ, ಕಾಕಾಗಳು ಮಲೆಯಾಳಂ ಅನ್ನೂ, ದರ್ಜಿಗಳು, ಬುಡುಬುಡುಕೆಯವರು, ಹಕ್ಕಿಪಿಕ್ಕೆಯವರು ಮರಾಠಿಭಾಷೆಯನ್ನೂ, ಸಿಂಧಿಗಳು ಸಿಂಧಿ ಭಾಷೆಯನ್ನು, ಶೇಟುಗಳು ಗುಜರಾತಿಯನ್ನೂ, ಲಂಬಾಣಿಗಳು ಲಂಬಾಣಿಭಾಷೆ ಯನ್ನೂ, ಸಂಕೇತಿಗಳು ಸಂಕೇತಿಭಾಷೆಯನ್ನೂ, ಹಂದಿಕೊರಮರು, ಗಾಡಿಗರು, ಹಂದಿಗಾಡಿಗರು, ಮ್ಯಾದರು, ಗೊಲ್ಲರು, ದೊಂಬಿದಾಸರು, ದೊಂಬರು ಮುಂತಾದವ ರಲ್ಲಿ ಕೆಲವರು ತೆಲುಗುಭಾಷೆಯನ್ನು, ಮತ್ತೆ ಕೆಲವರು ತಮಿಳು–ತೆಲುಗುಭಾಷೆಯನ್ನೂ ಆಡುವವರು ಆಗಿದ್ದಾರೆ. ಹೀಗೆ ಮೇಲೆ ಹೇಳಿದ ಆ ಬೇರೆಬೇರೆ ಕೋಮಿನ ಜನರು ಬೇರೆಬೇರೆ ಭಾಷೆಗಳನ್ನು ಮನೆಮಾತನ್ನಾಗಿ ಆಡುವವರೇ ಆಗಿದ್ದರೂ ತಮ್ಮ ವ್ಯವಹಾರಕ್ಕಾಗಿ ಕನ್ನಡವನ್ನು ಆಡಲೇಬೇಕಾಗಿದೆ. ಈ ಜನರು ಆಡುವ ಕನ್ನಡದಲ್ಲಿ ಇತರ ಭಾಷಾಪ್ರಭಾವ ಸಹಜವಾಗಿ ಎದ್ದುಕಾಣುವುದು. ಈ ದೃಷ್ಟಿಯಿಂದ ಆ ವಿವಿಧ ಜಾತಿಯ ಬೇರೆಬೇರೆ ಭಾಷೆ ಆಡುವ ಜನರ ಕನ್ನಡವನ್ನು ಪರೀಕ್ಷಿಸಿ, ಪರಿಶೀಲಿಸಿ, ವಿವೇಚಿಸಬೇಕಾದುದು ಅತ್ಯಗತ್ಯ.

ಮಂಡ್ಯ ಜಿಲ್ಲೆಯ ಪಟ್ಟಣಗಳಲ್ಲಿ ಮರಾಠಿ, ಸಿಂಧಿ, ಹಿಂದೀ, ಕೊಂಕಣಿ, ರಾಜಾಸ್ತಾನಿ, ಗುಜರಾತಿ, ಮಲೆಯಾಳಂ, ತುಳು, ಲಂಬಾಣಿ ಮುಂತಾದ ಭಾಷೆ ಗಳನ್ನು ಆಡುವವರ ಸಂಖ್ಯೆ ಬಹಳ ಕಡಿಮೆ. ಆದರೆ ತಮಿಳು, ತೆಲುಗು, ಸಂಕೇತಿ, ಉರ್ದು ಮುಂತಾದ ಭಾಷೆಗಳನ್ನು ಆಡುವ ಜನರು ಸಾಕಷ್ಟು ಇದ್ದಾರೆಯಾದರೂ ಇವರು ಹಳ್ಳಿಗಳಲ್ಲಿ ಬಹಳ ಕಡಿಮೆ. ಇಲ್ಲಿ ವಾಸಿಸುವ ಹೆಚ್ಚು ಜನರ ತಾಯಿಭಾಷೆ ಕನ್ನಡವೇ ಆಗಿರುವುದರಿಂದ ಬೇರೆಬೇರೆ ಕೋಮಿನ ಜನರು ಅನಿವಾರ್ಯವಾಗಿ

ತಮ್ಮ ವ್ಯವಹಾರಕ್ಕಾಗಿ ಕನ್ನಡವನ್ನೇ ಆಶ್ರಯಿಸಿ ಬಳಸಬೇಕಾಗಿದೆ. ಈ ಜಿಲ್ಲೆಯ ಸುತ್ತಮುತ್ತಲ ಪ್ರದೇಶದಲ್ಲಿ ದೊರೆಯುವ ಎಲ್ಲ ಜನರ, ಎಲ್ಲ ಜಾತಿಯ, ಎಲ್ಲ ಕಸಬಿನ, ಎಲ್ಲ ಸಂಸ್ಕೃತಿಯ, ಎಲ್ಲ ಭಾಷೆಯ ಜನರನ್ನೂ ಸಂದರ್ಶಿಸಿ ಸಾಮಗ್ರಿಯನ್ನು ಸಂಗ್ರಹಿಸಿ ಅಭ್ಯಸಿಸುವುದು ಸುಲಭವೇನಲ್ಲ. ಅನೇಕ ಜಾತಿಯ, ಅನೇಕ ಕಸಬಿನ, ಅನೇಕ ವಯೋಮಾನದ, ವಿದ್ಯಾವಂತರ, ಅವಿದ್ಯಾವಂತರ ಆಡುವ ಕನ್ನಡವನ್ನು ಪರಿಶೀಲಿಸಲು ಯತ್ನಿಸಿದಾಗ ಮಾತ್ರ ಆ ಜನರು ಆಡುವ ಕನ್ನಡದ ಸ್ವರೂಪವನ್ನು ಸಂಪೂರ್ಣವಾಗಿ ತಿಳಿಯಲು ಸಾಧ್ಯ. ಈ ಜಿಲ್ಲೆ ಮೇಲೆ ಹೇಳಿದ ಎಲ್ಲ ಜಾತಿಯ, ಅನೇಕ ಕಸಬಿನ, ಅನೇಕ ಭಾಷೆ ಆಡುವ ಜನರನ್ನು ಹೊಂದಿರುವ ಒಂದು ಬಹು ಭಾಷಾಕ್ಷೇತ್ರವೆನಿಸಿಕೊಂಡಿದೆ. ಆದ್ದರಿಂದ ಇಲ್ಲಿ ಕೆಲವು ಜಾತಿ, ಕಸಬು, ಪಂಗಡ ಗಳಿಗೆ ಮಾತ್ರ ಸೀಮಿತಗೊಳಿಸಿ ಕೆಲವು ವಿಷಯಗಳನ್ನು ತಿಳಿಯಲು ಪ್ರಯತ್ನಿಸೋಣ.

ಬೆಂಗಳೂರು, ತುಮಕೂರು, ಶಿವಮೊಗ್ಗ ಮುಂತಾದ ಜಿಲ್ಲೆಗಳ ಕನ್ನಡಗಳಂತೆ ಮಂಡ್ಯ ಜಿಲ್ಲೆಯ ಹೆಚ್ಚಿನ ಜನರ ಭಾಷೆ ಕನ್ನಡ. ಇದರ ಜೊತೆಗೆ ಬೇರೆಬೇರೆ ಕೋಮಿನ ಜನ ವ್ಯವಹಾರಕ್ಕಾಗಿ ಕನ್ನಡ ಬಳಸುತ್ತಾರೆ. ಈ ಜಿಲ್ಲೆಯ ಅಲ್ಲಲ್ಲಿ ತಮಿಳು, ತೆಲುಗು, ಮಲೆಯಾಳ, ತುಳು, ಮರಾಠಿ, ಗುಜರಾತಿ, ರಾಜಸ್ತಾನಿ, ಸಿಂಧಿ, ಹಿಂದೀ, ಕೊಂಕಣಿ, ಲಂಬಾಣಿ, ಉರ್ದು ಮುಂತಾದ ಭಾಷೆಗಳನ್ನು ಆಡುವ ಜನ ಇದ್ದಾರೆ. ಆದರೂ ಇವರ ಜನಸಂಖ್ಯೆ ಬಹಳ ಕಡಿಮೆ. ಇಲ್ಲಿ ಅವು ಅಷ್ಟೊಂದು ಪ್ರಚಲಿತವಾಗಿಲ್ಲ. ಕನ್ನಡವನ್ನು ಹೆಚ್ಚಿನ ಜನರು ಬಳಸುವುದರಿಂದ ಅದರಲ್ಲಿ ವ್ಯತ್ಯಾಸ ಕಾಣಿಸಿಕೊಂಡರೆ ಅತಿಶಯವೇನಲ್ಲ. ಬೇರೆಬೇರೆ ಭಾಷೆ ಆಡುವ ಜನರು ವ್ಯವಹಾರ ಕ್ಕಾಗಿ ಬಳಸುವ ಕನ್ನಡ, ಒಂದು ವಿಧದಲ್ಲಿ ತುಂಬ ವಿಚಿತ್ರವಾಗಿದೆ. ಇಲ್ಲಿಯ ಹರಿಜನ, ಒಕ್ಕಲಿಗ, ಬೆಸ್ತರಲ್ಲಿ ಕನ್ನಡವೇ ಮನೆಮಾತಾಗಿದ್ದರೂ ಅದು ತುಂಬ ಗ್ರಾಮ್ಯವಾಗಿರುವುದು ಗೋಚರಿಸುತ್ತದೆ. ಅಂತೆಯೇ ಬೇರೆಬೇರೆ ಭಾಷೆಗಳನ್ನು ಆಡುವ ಜನರ ಕನ್ನಡದಲ್ಲಿ ಇತರ ಭಾಷಾಪ್ರಭಾವ ಸಾಕಷ್ಟು ಇರುವುದರಿಂದ ಅದು ತನ್ನದೇ ಆದ ರೀತಿಯಲ್ಲಿ ಭಾಷಾಪ್ರಭೇದವಾಗಿ ಕಾಣಿಸಿಕೊಂಡು ಅವರು ಬಳಸುವ ಕನ್ನಡದ ಉಚ್ಚಾರ, ಮಾತಿನ ರೀತಿ, ಸ್ವರವಿಧಾನ ವಿಶಿಷ್ಟವಾಗಿ ಕಂಡುಬರುತ್ತದೆ. ಹೀಗೆ ಹತ್ತಾರು ಭಾಷೆಯ ಪ್ರಭೇದಗಳು ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ಅಂತಹ ಪ್ರತಿಯೊಂದು ಭಾಷಾಪ್ರಭೇದವೂ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ.

ಮಂಡ್ಯ ಜಿಲ್ಲೆಯ ಕನ್ನಡ ಎಂದ ತಕ್ಷಣವೇ ಆ ಜಿಲ್ಲೆಯ ಮಳವಳ್ಳಿ ಕನ್ನಡದ ಕಡೆ ಗಮನ ಹರಿಸದೆ ಬಿಡುವಂತಿಲ್ಲ. ಈ ಜಿಲ್ಲೆಯಲ್ಲಿ ಮಳವಳ್ಳಿ ಕನ್ನಡ ತುಂಬ ವಿಚಿತ್ರ ವಾದದ್ದು. ಮೈಸೂರಿನ ಟಿ.ನರಸೀಪುರ, ಕೊಳ್ಳೇಗಾಲ, ಯಳಂದೂರು, ಚಾಮರಾಜ ನಗರ, ಗುಂಡ್ಲುಪೇಟೆ, ನಂಜನಗೂಡುಗಳ ಕಡೆ ದೊರೆಯುವ ಕನ್ನಡವು ಮೈಸೂರು ಕನ್ನಡಕ್ಕಿಂತ ಬೇರೆಯಾಗಿದೆ. ಮೈಸೂರು, ಮಂಡ್ಯ ಜಿಲ್ಲೆಯ ಕನ್ನಡಗಳಲ್ಲಿ ಇವು

ಬೇರೆಬೇರೆ ಉಪಭಾಷಾಪ್ರಭೇದಗಳಾಗಿ ಕಂಡುಬರುವಂತೆಯೇ ಬೆಂಗಳೂರು ಕನ್ನಡದಲ್ಲಿ ದೇವನಹಳ್ಳಿ, ಆನೇಕಲ್ಲು,ಕೋಲಾರಗಳ ಕನ್ನಡವೇ ಬೇರೊಂದು ಭಾಷಾಪ್ರಭೇದವಾಗಿ ಕಾಣಸಿಗುವುದು. ಈ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಯ ಕನ್ನಡದಲ್ಲಿಯೂ ಸಾಕಷ್ಟು ಒಳಪ್ರಭೇದಗಳು ಇರುತ್ತವೆ ಎಂಬುದನ್ನು ಮರೆಯಲಾಗದು. ಮೈಸೂರು ಕನ್ನಡದಲ್ಲಿ ಯಳಂದೂರು, ಚಾಮರಾಜನಗರ, ಕೊಳ್ಳೇಗಾಲ, ಟಿ.ನರಸೀಪುರ, ನಂಜನ ಗೂಡುಗಳ ಕನ್ನಡ; ಮಂಡ್ಯ ಕನ್ನಡದಲ್ಲಿ ಮಳವಳ್ಳಿ ಕನ್ನಡ; ಬೆಂಗಳೂರು ಕನ್ನಡದಲ್ಲಿ ಆನೇಕಲ್ಲು, ದೇವನಹಳ್ಳಿಗಳ ಕನ್ನಡ ತಮ್ಮದೇ ಆದ ವೈಶಿಷ್ಟ್ಯವನ್ನು ಸಂಪಾದಿಸಿ ಕೊಂಡಿವೆ. ಈ ದೃಷ್ಟಿಯಿಂದಲೇ ಮಂಡ್ಯ, ಮೈಸೂರು, ಬೆಂಗಳೂರು ಕನ್ನಡಗಳು ಬೇರೆಬೇರೆ ಭಾಷಾಪ್ರಭೇದಗಳು ಆಗಿವೆ ಎಂದು ಹೇಳಲು ಸಾಧ್ಯವಾಗಿದೆ. ಈ ಒಳ ಪ್ರಭೇದಗಳಿಲ್ಲದಿದ್ದರೆ ಬೆಂಗಳೂರು, ಮಂಡ್ಯ, ಚನ್ನಪಟ್ಟಣ, ಮಾಗಡಿ, ಕನಕಪುರ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಕೃಷ್ಣರಾಜಪೇಟೆ, ಮೈಸೂರು ಮುಂತಾದ ಕಡೆಗಳ ಕನ್ನಡ ಒಂದೇ ಬಗೆಯ ಕನ್ನಡವಾಗಿ ;ಕಾಣಸಿಕೊಳ್ಳುತ್ತಿತ್ತು. ಈ ಎಲ್ಲಾ ಪ್ರದೇಶಗಳ ಕನ್ನಡವನ್ನು ಗಮನಿಸಿದಾಗ ಅವುಗಳಲ್ಲಿ ಹೆಚ್ಚು ವ್ಯತ್ಯಾಸ ಗೋಚರ ವಾಗದೆ ಆಗ ಅದು ಮೈಸೂರು ಕನ್ನಡ ಎನಿಸಿಕೊಳ್ಳುತ್ತಿತ್ತು.

ಬೆಂಗಳೂರು ಕನ್ನಡ ಆನೇಕಲ್ಲು, ದೇವನಹಳ್ಳಿಗಳ ಕನ್ನಡ ಬಿಟ್ಟರೆ ಅದು ಮಂಡ್ಯ ಕನ್ನಡವನ್ನೂ, ಮಳವಳ್ಳಿ ಕನ್ನಡ ಬಿಟ್ಟರೆ ಮಂಡ್ಯ ಕನ್ನಡ, ಮೈಸೂರು ಅಥವಾ ಬೆಂಗಳೂರು ಕನ್ನಡವನ್ನೂ ಹೆಚ್ಚಾಗಿ ಹೋಲುತ್ತದೆ. ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ, ನಂಜನಗೂಡುಗಳ ಕನ್ನಡವನ್ನು ಬಿಟ್ಟರೆ ಮೈಸೂರು ಕನ್ನಡ, ಮಂಡ್ಯ ಅಥವಾ ಬೆಂಗಳೂರು ಕನ್ನಡವನ್ನೇ ಸಾಮಾನ್ಯವಾಗಿ ಹೋಲುವುದು. ಹೀಗೆ ಮೇಲೆ ಹೇಳಿದ ಈ ವಿಶಿಷ್ಟ ಪ್ರಭೇದಗಳನ್ನು ಗಮನಿಸಿದಾಗ ಆನೇಕಲ್ಲು, ದೇವನಹಳ್ಳಿ ಕನ್ನಡ ತೆಲುಗುಭಾಷೆಯ ಪ್ರಭಾವದಿಂದ ಬೆಂಗಳೂರು ಕನ್ನಡಕ್ಕಿಂತ ಬೇರೆಯಾಗಿರಲು ಸಾಧ್ಯತೆಗಳಿದ್ದರೆ ಮಳವಳ್ಳಿ, ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ, ನಂಜನಗೂಡು, ಟಿ.ನರಸೀಪುರಗಳ ಕಡೆಯ ಕನ್ನಡ ತಮಿಳುಭಾಷೆಯ ಪ್ರಭಾವದಿಂದ ಮಂಡ್ಯ ಹಾಗೂ ಮೈಸೂರು ಕನ್ನಡಕ್ಕಿಂತ ಬೇರೆಯಾಗಿರಲು ಸಾಧ್ಯತೆಗಳಿವೆ.

ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಇತರ ಕನ್ನಡಗಳಂತೆ ಅ, ಆ, ಇ, ಈ, ಉ, ಊ, ಎ, ಏ, ಒ, ಓ ಎಂಬ ಹತ್ತು ಸ್ವರಧ್ವನಿಮಾಗಳು ಇವೆ. ಇವುಗಳಲ್ಲಿ ಐದು ದೀರ್ಘಸ್ವರ ಗಳು, ಐದು ಹ್ರಸ್ವಸ್ವರಗಳು. ಅವಿದ್ಯಾವಂತರ ಕನ್ನಡದಲ್ಲಿ ಈ ಹತ್ತು ಸ್ವರಧ್ವನಿಮಾಗಳ ಜೊತೆಗೆ ಅ್ಯ, ಆ್ಯ, ಒ್ವ, ಓ್ವ ಎಂಬ ನಾಲ್ಕು ಸ್ವರಧ್ವನಿಮಾಗಳು ಹೆಚ್ಚಾಗಿ ಕಾಣ ಸಿಗುತ್ತವೆ. ಕ್ಯಲ್ಸ, ವ್ಯಳೆ, ಮ್ಯಾಲೆ, ತ್ಯಾವ, ಮ್ಯಾಳೆ ಎಂಬ ಪದಗಳಲ್ಲಿ ಅ್ಯ, ಆ್ಯ, ಸ್ವರಗಳೂ ಕ್ವೊಲಿ, ಕ್ವೊಳ, ಕ್ವೊಡೆ, ಮ್ವೊರಿ, ಮ್ವೊತೆ, ಮ್ವೊಳೆ, ಮ್ವೊರ, ಕ್ವಾರೆ, ಗ್ವಾರ ಇತ್ಯಾದಿ ಪದಗಳಲ್ಲಿ ಒ್ವ, ಓ್ವ ಸ್ವರಗಳೂ ಬೇರೆಬೇರೆ ಧ್ವನಿಮಾಗಳಾಗಿ ಕಾಣಸಿ

ಕೊಳ್ಳುತ್ತವೆ. ಹಿಂದುಳಿದ ಬೇರೆಬೇರೆ ಜಾತಿ, ಕಸಬು, ಸ್ಥಳದ ಜನರು ಆಡುವ ಕನ್ನಡದಲ್ಲಿ ಈ ನಾಲ್ಕು ಸ್ವರಧ್ವನಿಮಾಗಳು ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಈ ಪ್ರದೇಶದ ಹರಿಜನ, ಬೆಸ್ತ, ಕುರುಬ, ಗಾಣಿಗ, ಒಕ್ಕಲಿಗ ಮುಂತಾದ ಜಾತಿಯ ಜನರ ಆಡುಭಾಷೆ ಇದಕ್ಕೆ ಸಾಕ್ಷಿ.

ಮೇಲೆ ಹೇಳಿದ ಹದಿನಾಲ್ಕು ಸ್ವರಧ್ವನಿಮಾಗಳ ಜೊತೆಗೆ ಇಪ್ಪತ್ತು ವ್ಯಂಜನ ಧ್ವನಿಮಾಗಳು ಕಾಣಸಿಗುತ್ತವೆ. ಇವುಗಳಲ್ಲಿ ಕ್, ಗ್, ಚ್, ಜ್, ಟ್, ಡ್, ತ್, ದ್, ಪ್ ಮತ್ತು ಬ್ ಎಂಬ ಹತ್ತು ಸ್ಪರ್ಶವ್ಯಂಜನಗಳೂ ಮ್, ನ್, ಣ್ ಎಂಬ ಅನು ನಾಸಿಕ ವ್ಯಂಜನಧ್ವನಿಮಾಗಳೂ ಸ್ ಮತ್ತು ಹ್ ಎಂಬ ಸಂಘರ್ಷಿಧ್ವನಿಮಾಗಳೂ, ಯ್, ರ್, ಲ್, ವ್, ಳ್ ಎಂಬ ಬೇರೆಬೇರೆ ವ್ಯಂಜನಧ್ವನಿಮಾಗಳೂ ಮುಖ್ಯವಾಗಿ ದೊರೆಯುತ್ತವೆ. ಕೆಲವು ಅವಿದ್ಯಾವಂತರ ಭಾಷೆಯಲ್ಲಿ ಹ್ ಧ್ವನಿಮಾ ಸಂಪೂರ್ಣ ವಾಗಿ ಕಣ್ಮರೆಯಾಗಿದೆ. ಆದರೆ ಕೆಲವು ವಿದ್ಯಾವಂತರ ಭಾಷೆಯಲ್ಲಿ ಮಹಾಪ್ರಾಣ ಧ್ವನಿಮಾಗಳು ಅಲ್ಲಲ್ಲಿ ಕಾಣಸಿಗುತ್ತವೆ.

ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಮಹಾಪ್ರಾಣಧ್ವನಿಮಾಗಳಿಲ್ಲ. ಕೆಲವು ಬ್ರಾಹ್ಮಣ ಹಾಗೂ ಲಿಂಗಾಯತರ ಆಡುಭಾಷೆಯಲ್ಲಿ ಮಹಾಪ್ರಾಣಧ್ವನಿಗಳನ್ನು ಕಾಣಬಹು ದಾದರೂ ಅವು ಪೂರ್ಣವಾಗಿ ಧ್ವನಿಮಾಗಳಲ್ಲ. ಅವಿದ್ಯಾವಂತ ಹಾಗೂ ವಿದ್ಯಾವಂತರ ಆಡುಭಾಷೆಯಲ್ಲಿ ಞ್, ಙ್, ನ್, ಧ್ವನಿಗಳು /ನ್/ ಧ್ವನಿಮಾದ ಉಪಧ್ವನಿಮಾ ಗಳಾಗಿ ಕಾಣಿಸಿಕೊಂಡರೆ, ಊಷ್ಮಧ್ವನಿಗಳಾದ ಸ್, ಶ್, ಷ್ ಎಂಬವು ಅವಿದ್ಯಾವಂತರ ಭಾಷೆಯಲ್ಲಿ /ಸ್/ ದ ಉಪಧ್ವನಿಗಳಾಗಿ ಕಾಣಿಸಿಕೊಳ್ಳುತ್ತವೆ. ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ದೊರೆಯುವ ಪದಗಳಲ್ಲಿ 'ಯ್'ಕಾರಾಂತ್ಯ ಪದಗಳನ್ನು ಬಿಟ್ಟು ಉಳಿದ ಎಲ್ಲಾ ಪದಗಳು ಸ್ವರಾಂತ್ಯವಾಗಿಯೇ ದೊರೆಯುತ್ತವೆ. ಪದಗಳ ಅಂತ್ಯದಲ್ಲಿ ಕಾಣ ಸಿಗುವ ಸ್ವರಗಳು ಉಚ್ಚಾರದಲ್ಲಿ ಅರ್ಧ ದೀರ್ಘ ಹಾಗೂ ದೀರ್ಘ ಸ್ವರಗಳಾಗಿ ಕಂಡು ಬರುತ್ತವೆ. ಈ ಕನ್ನಡದಲ್ಲಿ ಸಂಯುಕ್ತಸ್ವರಗಳಿಲ್ಲ. ಇದ್ದರೂ ಅವುಗಳನ್ನು ಅಯ್, ಅವ್ ಎಂದು ಉಚ್ಚರಿಸಲಾಗುತ್ತದೆ.

ಈಗ ಮಂಡ್ಯ ಜಿಲ್ಲೆಯ ಕನ್ನಡದ ವ್ಯಾಕರಣ ಹಾಗೂ ಪದಗಳಿಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಗಮನಿಸೋಣ. ಕನ್ನಡಭಾಷೆಯಲ್ಲಿ ಕಂಡುಬರುವ ಲಿಂಗ, ವಚನ, ವಿಭಕ್ತಿ ರೂಪಗಳು ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಕೆಲವು ರೂಪವ್ಯತ್ಯಾಸಗಳೊಡನೆ ಬಳಕೆಗೆ ಬಂದಿರುವುದನ್ನು ಕಾಣಬಹುದು. ಕೆಲವು ಬಹುವಚನ ಹಾಗೂ ಏಕವಚನ ರೂಪಗಳನ್ನು ವ್ಯತ್ಯಾಸವಿಲ್ಲದೆ ಏಕವಚನದಲ್ಲಿ ಬಳಸುವುದು ಹೆಚ್ಚು. ಇದು ಹಳ್ಳಿಯ ಅವಿದ್ಯಾವಂತರಲ್ಲಿ ಹಾಗೂ ಬೆಸ್ತರು, ಹರಿಜನರು, ಒಕ್ಕಲಿಗರು ಮುಂತಾದ ಹಿಂದುಳಿದ ವರ್ಗದಲ್ಲಿ ಸರ್ವೇಸಾಮಾನ್ಯ. ಅಪ್ಪ ಬಂದನು. ಅಪ್ಪ ಬಂದರು, ಅವ್ವ ಬಂದಳು.

ಅಮ್ಮ ಬಂದರು ಎಂಬ ರೂಪಗಳನ್ನು ವಚನವ್ಯತ್ಯಾಸವಿಲ್ಲದೆ ಅಪ್ಪ ಬಂದ, ಅಪ್ಪ ಬನ್ನ, ಅವ್ವ ಬಂದ, ಅಮ್ಮ ಬನ್ನ, ಅವ್ವ ಬನ್ನ ಎಂಬಿತ್ಯಾದಿಗಳಲ್ಲಿ ಏಕವಚನರೂಪ ಗಳೇ ಹೆಚ್ಚು ಬಳಕೆಯಲ್ಲಿವೆ. ಕೆಲವು ಕಡೆ ಅಪ್ಪ ಬಂದನು, ಅವ್ವ ಬಂದಳು ಎಂಬ ಸ್ತ್ರೀಪುಲ್ಲಿಂಗ ರೂಪಗಳನ್ನು ಲಿಂಗಭೇದವಿಲ್ಲದೆ ಅದು ಬತ್ತು, ಅದ್ ಬನ್ನ, ಅದ್ ಬಂತು ಎಂದು ಬಳಸುವುದನ್ನು ಈ ಪ್ರದೇಶದಲ್ಲಿ ಕಾಣಬಹುದಾಗಿದೆ. ಹಾಗೆಯೇ ಅವನು, ಅವಳು, ಅವರು ಎಂಬ ರೂಪಗಳನ್ನು ಯಾವ ಭೇದವೂ ಇಲ್ಲದೆ 'ಅದು' ಎಂತಲೂ ಇವನು. ಇವಳು, ಇವರು ಎಂಬ ರೂಪಗಳನ್ನು ಪುಂಸ್ತ್ರೀಲಿಂಗ ಭೇದ ವಿಲ್ಲದೆ 'ಇದು' ಎಂತಲೂ ಬಳಸುವುದು ಹರಿಜನರಲ್ಲಿ ಹೆಚ್ಚು. ಬೆಸ್ತರ, ಒಕ್ಕಲಿಗರ, ಕುರುಬರ, ಗಾಣಿಗರ. ಹಳ್ಳಿಗರ, ಅವಿದ್ಯಾವಂತರ ಆಡುಭಾಷೆಯಲ್ಲಿ ಈ ಪದಗಳ ಬಳಕೆ ಇಲ್ಲದಿಲ್ಲ. ಅವನು, ಇವನು, ಅವಳು, ಇವಳು, ಅದು, ಅವರು, ಇವರು, ಅವು ಎಂಬ ರೂಪಗಳನ್ನು ಲಿಂಗವಚನ ಭೇದವಿಲ್ಲದೆ ಬಳಸುವುದು ಮಳವಳ್ಳಿ, ಟಿ.ನರಸೀಪುರ, ನಂಜನಗೂಡು, ಕೊಳ್ಳೇಗಾಲಗಳ ಕಡೆ ಹೆಚ್ಚಾಗಿ ಕಾಣಬಹುದು. ಮೈಸೂರು, ಮಂಡ್ಯ, ಬೆಂಗಳೂರುಗಳ ಕೆಲವು ಕಡೆಗಳಲ್ಲಿ ಅವನು, ಅವಳು, ಅವರು, ಇವನು, ಇವಳು, ಇವರು ಎಂಬ ರೂಪಗಳನ್ನು ಅವ್ನ, ಅವ್ಳ, ಅವ್ರ, ಇವ್ನ, ಇವ್ಳ, ಇವ್ರ, ಇವ, ಅವ ಎಂಬಿತ್ಯಾದಿಗಳಲ್ಲಿ ಬಳಸುವರಲ್ಲದೆ ಅದು, ಅವು ಎಂತಲೂ ಬಳಸುವು ದನ್ನು ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಕಾಣಬಹುದಾಗಿದೆ. ಇದು ಅವಿದ್ಯಾವಂತರ ಆಡುಭಾಷೆಯಲ್ಲಿ ಸರ್ವೇಸಾಮಾನ್ಯ.

ಮೈಸೂರಿನ ಯಳಂದೂರು, ಚಾಮರಾಜನಗರ, ನಂಜನಗೂಡು, ಕೊಳ್ಳೇಗಾಲ, ಮಂಡ್ಯದ ಮಳವಳ್ಳಿ. ಟಿ.ನರಸೀಪುರಗಳ ಕಡೆ ದೊರೆಯುವ ಆಡುಕನ್ನಡ ತಮಿಳು ಭಾಷಾ ಪ್ರಭಾವದಿಂದಾಗಿ ತುಂಬ ವಿಚಿತ್ರವಾಗಿದ್ದು, ಈ ಪ್ರದೇಶದ ಆಡುಭಾಷೆಯ ಎಷ್ಟೋ ವ್ಯಾಕರಣ ವಿಚಾರಗಳು ಇನ್ನೂ ಅಸ್ಪಷ್ಟವಾಗಿವೆ. ಅವನು, ಅವಳು, ಇವನು, ಇವಳು, ಅವರು, ಇವರು ಎಂಬಿತ್ಯಾದಿ ಸರ್ವನಾಮರೂಪಗಳಿಂದಾದ ಕೆಲವು ರಚನೆಗಳು ಅವ ಬನ್ನ, ಇವ ಬನ್ನ, ಅದು ಬನ್ನ, ಅವ್ ಬನ್ನ, ಇವ್ ಬನ್ನ, ಅದ್ ಬನ್ನ ಎಂದೂ ಅವ್ ಬನ್ನ, ಅವ್ ಬತ್ತು, ಅದ್ ಬತ್ತು, ಅಪ್ಪ ಬನ್ನ, ಅಪ್ಪ ಬತ್ತು, ಅವ್ವ ಬನ್ನ, ಅವ್ವ ಬತ್ತು ಎಂದೂ ಬಳಸಿದರೆ ಅಕ್ಕ, ಅಮ್ಮ, ಅಣ್ಣ, ಅಯ್ಯ, ಅಜ್ಜ, ಅಜ್ಜಿ, ಅವ್ವ, ಅಪ್ಪ ಎಂಬಿತ್ಯಾದಿ ಸಂಬಂಧಸೂಚಕ ರೂಪಗಳನ್ನು ಸೇರಿಸಿ ವಚನ ಭೇದವಿಲ್ಲದೆ ಅಕ್ಕ ಬತ್ತು, ಅಕ್ಕ ಬನ್ನ. ತಮ್ಮ ಬತ್ತು. ಅಮ್ಮ ಬನ್ನ, ಅಣ್ಣ ಬನ್ನ, ಅಣ್ಣ ಬತ್ತು, ಅಯ್ಯ ಬತ್ತು, ಅಯ್ಯ ಬನ್ನ. ಅಪ್ಪ ಬನ್ನ, ಅಪ್ಪ ಬನ್ನ, ಅದು ಬನ್ನ, ಅದು ಬತ್ತು, ಅದ್ ಬನ್ನ, ಅದ್ ಬತ್ತು ಎಂಬಿತ್ಯಾದಿಗಳಲ್ಲಿ ಬಳಸುವುದು ಹೆಚ್ಚು. ಹೀಗೆ ರೂಪಗಳ ಬಳಕೆಯಲ್ಲಿ ವಚನಭೇದವಿಲ್ಲದಿದ್ದರೂ ಕೆಲವುವೇಳೆ ಲಿಂಗಭೇದವೂ ಸ್ಪಷ್ಟ ವಾಗಿರುವುದಿಲ್ಲ.

ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಅಪ್ಪ, ಅಣ್ಣ, ಅಯ್ಯ, ಗೌಡ, ಅಕ್ಕ, ಅವ್ವ, ಅಮ್ಮ ಮುಂತಾದ ಮಾತುಗಳನ್ನು ವ್ಯಕ್ತಿಯ ಹೆಸರಿನ ಅಂತ್ಯದಲ್ಲಿ ಅವರವರ ವಯಸ್ಸು ಅಂತಸ್ತು ಇತ್ಯಾದಿಗಳಿಗೆ ತಕ್ಕಂತೆ ಬಳಸಲಾಗುತ್ತಿದೆಯಾದರೂ ಇವಕ್ಕೆ ಬಂದ, ಬಂದಳು, ಬಂದರು, ಹೋದ, ಹೋದಳು, ಹೋದರು ಎಂಬ ಕ್ರಿಯಾರೂಪ ಸೇರಿಸಿ ಬಳಸುವಾಗ ಅನೇಕ ವ್ಯತ್ಯಾಸಗಳು ಗೋಚರಿಸುತ್ತವೆ. ಪರಿಜನರು ಅಪ್ಪ ಬಂದ, ಅವ್ವ ಬಂದ್ಲು, ಅಪ್ಪ ಬಂದ್ನ, ಅವ್ವ ಬಂದ್ನ, ಅಪ್ಪ ಹೋದ, ಅವ್ವ ಹೋದ್ಲು, ಅಪ್ಪ ಹೋದ್ನ, ಅವ್ವ ಹೋದ್ನ, ಅಪ್ಪ ವಾದ, ಅವ್ವ ವಾದ್ನ, ಅಮ್ಮ ವಾದ್ಲು ಮುಂತಾದ ರೀತಿಗಳನ್ನು ಬಳಸುವುದು ಕಂಡುಬರುತ್ತದೆ. ವರ್ತಮಾನ ಹಾಗೂ ಭವಿಷತ್‌ಕಾಲಸೂಚಕ ರೂಪ ಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದೆ ನಾನು ಬರುವೆ, ನಾನು ಬರುತ್ತೇನೆ, ನೀನು ಬರು ವೆಯಾ, ನೀನು ಬರುತ್ತೀಯಾ ? ಎಂಬ ರೂಪಗಳನ್ನು ನಾನ್ ಬರ್ವೆ, ನಾನ್ ಬತ್ತೀನಿ, ನಾ ಬತ್ತೀನಿ ಎಂದು ಬಳಸುವುದೂ ಭೂತಕಾಲರೂಪಗಳಾದ ನಾನು ಬಂದೆ, ನೀನು ಬಂದೆ ಎಂಬ ರೂಪಗಳನ್ನು ನಾ ಬಂದೆ, ನಾನ್ ಬಂದೆ, ನೀ ಬಂದೆ, ನೀನ್ ಬಂದೆ ಎಂದು ಬಳಸುವುದೂ ಇಲ್ಲಿ ಕಾಣುತ್ತದೆ. ಮಳವಳ್ಳಿ, ಮದ್ದೂರುಗಳ ಕಡೆಗಳಲ್ಲಿ ನಾ ಬಂದ್ನಿ, ನಾ ಬಂದೆ, ನಾ ಬಂದೆಯ್, ನಾ ಬತ್ತಿನಿ, ನಾ ಬರ್ತೀನಿ ಎಂದು ಬಳಸುವುದನ್ನೂ ಅಧಿಕ ವಾಗಿ ಕಾಣಬಹುದು.

ಈಗ ಮೇಲೆ ಹೇಳಿದ ಬೇರೆಬೇರೆ ಜಾತಿ, ವೃತ್ತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕೆಲವು ಸ್ವಾರಸ್ಯಮಯವಾದ ವಿಚಾರಗಳನ್ನು ಗಮನಿಸೋಣ. ಹಳ್ಳಿಯಲ್ಲಿ ವಾಸಿಸುವ ಹೆಚ್ಚು ಹರಿಜನ, ಬೆಸ್ತ, ಒಕ್ಕಲಿಗ, ಗಾಣಿಗ, ಕುರುಬ ಇತ್ಯಾದಿ ಜಾತಿ ಜನರ ಆಡು ಭಾಷೆಯಲ್ಲಿ ಸ್, ಶ್, ಷ್ ಧ್ವನಿ ಬಳಕೆಯಲ್ಲಿ ಭೇದವಿಲ್ಲ. ಅವರು ಶಾಲು ಎಂಬು ದನ್ನು ಸಾಲು ಎಂದೂ, ಶಾಲೆ ಎಂಬುದನ್ನು ಸಾಲೆ ಎಂದೂ ಶಂಕರ, ಶಿವ ಎಂಬವು ಗಳನ್ನು ಸಂಕ್ರ, ಸಿವ ಎಂದೂ ಶ್ರೀನಿವಾಸ ಎಂಬುದನ್ನು ಸೀನ ಎಂದೂ ಬಳಸುವರು. ಅಂತೆಯೇ ನೋಟು ಎಂಬುದನ್ನು ಲೋಟು, ಜನ್ಮ ಎಂಬುದನ್ನು ಜಲ್ಮ, ಕುಟುಂಬ ಎಂಬುದನ್ನು ಕುಳ ಎಂದೂ ಆಳು ಎಂಬುದನ್ನು ಮನುಷ್ಯ, ಕೂಲಿ ಆಳು, ಮನೆ ಆಳು ಎಂಬಿತ್ಯಾದಿ ಅರ್ಥಗಳಲ್ಲಿಯೂ ತಂಗ್ಳು ಎಂಬುದನ್ನು ತಂಗ್ಳಿಟ್ಟು, ಮೆಲ್ಲನೆ ಎಂಬು ದನ್ನು ಮೆಲ್ಗೆ, ಮೆತ್ಗೆ ಎಂದೂ ಬಳಸುವರು. ಮಳವಳ್ಳಿಯ ಕಡೆಗಳಲ್ಲಿ ಹರಿಜನ ಹಾಗೂ ಬೆಸ್ತರ ಜನಸಂಖ್ಯೆ ಹೆಚ್ಚು. ಇವರು ಬರುತ್ತೇನೆ, ಕೇಳುತ್ತೇನೆ, ನೋಡುತ್ತೇನೆ, ಮಾಡುತ್ತೇನೆ ಎಂಬಿತ್ಯಾದಿ ಕೆಲವು ಕ್ರಿಯಾರೂಪಗಳನ್ನು ಬತ್ತಿನಿ, ಕೇಳ್ತಿನಿ, ನೋಡ್ತಿನಿ, ಮಾಡ್ತಿನಿ ಎಂದರೆ ಮದ್ದೂರು, ಚನ್ನಪಟ್ಟಣಗಳ ಕಡೆ ಬತ್ತೀನಿ, ಕೇಳ್ತೀನಿ, ಮಾಡ್ತೀನಿ, ನೋಡ್ತೀನಿ ಎಂದು ಬಳಸಿದರೆ ಭೂತಕಾಲರೂಪಗಳಾದ ಹೋದನು, ಬಂದನು, ಹೇಳಿದನು, ಕೇಳಿದನು ಎಂಬ ರೂಪಗಳನ್ನು ಹೋದ, ಬಂದ, ಹೇಳ್ದ, ಕೇಳ್ದ ಎಂದು ಬಳಸುವರಲ್ಲದೆ ಮದ್ದೂರು, ನಾಗಮಂಗಲಗಳ ಕಡೆ ಹೋದ್ನ, ಬಂದ್ನ, ಕೇಳ್ದ್ನ,

ಹೇಳ್ದ್ನ ಎಂದೂ, ಹಾಗೆಯೇ ಹೋದೆ, ಬಂದೆ, ಹೇಳ್ದೆ, ಕೇಳ್ದೆ ಎಂಬ ರೂಪಗಳನ್ನು ಹೋದಿ, ಬಂದಿ, ಹೇಳ್ದಿ, ಕೇಳ್ದಿ ಎಂಬಿತ್ಯಾದಿಗಳಲ್ಲಿ ಬಳಸುವುದನ್ನೂ ಕಾಣಬಹುದಾಗಿದೆ. ಕ್ಲಿಷ್ಟ ಉಚ್ಚಾರ ಯಾರಿಗೂ ಬೇಕಾಗಿಲ್ಲ. ಉಚ್ಚಾರದಲ್ಲಿ ಸೌಲಭ್ಯಾಕಾಂಕ್ಷೆ ಆಡುವವನ ದೃಷ್ಟಿ. ಹೀಗಾಗಿ ಬಿಡು ಎಂಬುದನ್ನು ಬುಡು, ಇದ್ದಾನೆ ಎಂಬುದನ್ನು ಅವನೆ, ಅದೆ, ಅದಾನೆ ಎಂದೂ ಒಳಗೆ, ಹೊರಗೆ ಎಂಬವುಗಳನ್ನು ಒಳ್ಗಡೆ, ಹೊರ್ಗಡೆ, ವಳ್ಗಡೆ, ಒರ್ಗಡೆ ಎಂದೂ ಅಪ್ಪ ಮನೆಯಲ್ಲಿ ಇದ್ದಾನೆ ಎಂಬುದನ್ನು ಅಪ್ಪ ಮನೆಲದೆ, ಅಪ್ಪ ಮನೆಲವನೆ ಎಂದು ಮುಂತಾಗಿ ಬಳಸುತ್ತಾರೆ.

ಹಳ್ಳಿಯಲ್ಲಿ ವಾಸಿಸುವ ಹಿಂದುಳಿದ ಜಾತಿಯ ಜನರು ಹಾಗೂ ಅವಿದ್ಯಾವಂತರು ಆಡುವ ಭಾಷೆಯಲ್ಲಿ ಬಗೆಬಗೆಯ ವ್ಯತ್ಯಾಸಗಳು ಕಾಣಸಿಗುತ್ತವೆಯಾದರೂ ಅವೆಲ್ಲ ವನ್ನು ಇಲ್ಲಿ ಪಟ್ಟಿಮಾಡಲು ಸಾಧ್ಯವಿಲ್ಲ. ಅವಿದ್ಯಾವಂತರ ಕನ್ನಡದ ಉಚ್ಚಾರ, ಮಾತಿನ ಮೋಡಿ, ಸ್ವರಲಹರಿ ಮುಂತಾದವುಗಳಲ್ಲಿ ವ್ಯತ್ಯಾಸ ಸಹಜವಾಗಿರುತ್ತದೆ ಯಾದರೂ ಹಿಂದುಳಿದ ಹಳ್ಳಿಗರು ಹಂದಿ ಎಂಬುದನ್ನು ಅಂದಿ, ಹಿಡಿ ಎಂಬುದನ್ನು ಇಡಿ, ಹಾವು ಎಂಬುದನ್ನು ಆವು, ಹೆಂಡತಿ ಎಂಬುದನ್ನು ಎಡ್ತಿ ಎಂಬಿತ್ಯಾದಿಗಳಲ್ಲಿ 'ಹ್' ಧ್ವನಿ ಬಿಟ್ಟು ಉಚ್ಚಾರ ಮಾಡುವುದನ್ನು ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಹೆಚ್ಚಾಗಿ ಕಾಣಬಹುದು.

ಹಳ್ಳಿಯಲ್ಲಿ ವಾಸಿಸುವ ಹೆಚ್ಚು ಜನರು ಕರುಳು ಎಂಬುದನ್ನು ಕರ್ಳು, ಕಳ್ಳು; ಮರಳು ಎಂಬುದನ್ನು ಮರ್ಳು, ಮಳ್ಳು; ಮಡಲು ಎಂಬುದನ್ನು ಮಡ್ಲು, ಮಳ್ಳು; ಕೊರಳು ಎಂಬುದನ್ನು ಕೊರ್ಳು, ಕೊಳ್ಳು; ಕೊಡಲಿ ಎಂಬುದನ್ನು ಕೊಡ್ಲಿ, ಕೊಳ್ಳಿ; ಕುಡುಗೋಲು ಎಂಬುದನ್ನು ಕುಡ್ಲು, ಕುಳ್ಳು ಎಂದು ಬಳಸುವದನ್ನು ಹೆಚ್ಚಾಗಿ ಕಾಣ ಬಹುದಾಗಿದೆ. ಈ ಪದಗಳನ್ನು ಅವುಗಳ ಉಚ್ಚಾರದ ರೀತಿಯನ್ನು ಗಮನಿಸಿ ಮಂಡ್ಯ ಜಿಲ್ಲೆಯ ಕನ್ನಡವನ್ನು ಎರಡು ಭಾಷಾಪ್ರಭೇದಗಳನ್ನಾಗಿ ವರ್ಗೀಕರಿಸಿಕೊಳ್ಳಬಹುದು. ಮಳವಳ್ಳಿ, ಟಿ ನರಸೀಪುರಗಳ ಕಡೆ ಈ ಪದಗಳನ್ನು ಕ್ರಮವಾಗಿ ಮಳ್ಳು, ಮಳ್ಳು, ಕೊಳ್ಳು, ಕೊಳ್ಳಿ, ಕುಳ್ಳು ಎಂದೂ ಬಳಸುವುದು ಹೆಚ್ಚಾದರೆ ಮದ್ದೂರು, ಮಂಡ್ಯ, ನಾಗಮಂಗಲಗಳ ಕಡೆಗಳಲ್ಲಿ ಮರ್ಳು, ಮಡ್ಲು, ಕೊರ್ಳು, ಕೊಡ್ಲಿ, ಕುಡ್ಲು ಎಂದು ಬಳಸುವುದನ್ನು ಹೆಚ್ಚಾಗಿ ಕಾಣಬಹುದಾಗಿದೆ. ಇದೇರೀತಿ ನೂರಾರು ಉದಾಹರಣೆ ಗಳನ್ನು ಕೊಡಬಹುದು. ಇದೇರೀತಿ ವ್ಯಾಕರಣರೂಪಗಳು, ಪದಗಳು ವ್ಯತ್ಯಾಸ ಗೊಂಡು ಬಳಸುವುದನ್ನು ಆಧರಿಸಿ ಮಳವಳ್ಳಿ ಕನ್ನಡ, ಮಂಡ್ಯ ಜಿಲ್ಲೆಯ ಕನ್ನಡಕ್ಕಿಂತ ಬೇರೆ ಯಾಗಿದೆ ಎಂಬುದನ್ನು ಸಾಕಷ್ಟು ಉದಾಹರಣೆಗಳ ಸಹಾಯದಿಂದ ವಿವರಿಸಿ ತೋರಿಸ ಬಹುದು. ಮದ್ದೂರು, ಚನ್ನಪಟ್ಟಣ, ನಾಗಮಂಗಲ, ಪಾಂಡವಪುರಗಳ ಕಡೆಗಳಲ್ಲಿ ಹೆಸರು ಎಂಬುದನ್ನು ಹೆಸ್ರು, ಎಸ್ರು; ಹಸಿರು ಎಂಬುದನ್ನು ಹಸ್ರು, ಅಸ್ರು; ಕಡಲೆ

ಎಂಬುದನ್ನು ಕಡ್ಲೆ; ಮುರುಕು ಎಂಬುದನ್ನು ಮುರ್ಕು, ಮುರ್ಕುಲು, ಮುರ್ಕ್ಲ್; ಕೆದರು ಎಂಬುದನ್ನು ಕೆದ್ರು ಎಂದೂ ಬಳಸುವರು. ಆದರೂ ಇವರ ಉಚ್ಚಾರದಲ್ಲಿ ಸ್ವರಧ್ವನಿಗಳು ಲೋಪವಾಗುತ್ತವೆ. ಹಾಗೆಯೇ ಉಚ್ಚಾರದಲ್ಲಿ ವ್ಯಂಜನಗಳು ಲೋಪ ವಾಗುವ ಉದಾಹರಣೆಗಳು ಇವೆ.

ಕೆಲವು ಹಿಂದುಳಿದ ಜನರ ಆಡುಕನ್ನಡದಲ್ಲಿ 'ಕ'ಕಾರ, 'ದ'ಕಾರ, 'ತ'ಕಾರಗಳು 'ಚ'ಕಾರವಾಗಿಯೂ, 'ಗ'ಕಾರ 'ಜ'ಕಾರವಾಗಿಯೂ 'ತ'ಕಾರ' ಸ'ಕಾರವಾಗಿಯೂ ಪರಿವರ್ತನೆಗೊಂಡು ಬಳಸುವುದನ್ನು ಕಾಣಬಹುದು. ಕೆಂಡ ಎಂಬುದನ್ನು ಚೆಂಡ, ಕಿವಿ ಎಂಬುದನ್ನು ಚಿವಿ, ಗಿಡ ಎಂಬುದನ್ನು ಜಿಡ, ದಿನ ಎಂಬುದನ್ನು ಜಿನ, ಗಿಣ್ಣು ಎಂಬುದನ್ನು ಜಿಣ್ಣು, ಗೇಣು ಎಂಬುದನ್ನು ಜೇಣು ಎಂದೂ ಚಾಪೆ ಎಂಬುದನ್ನು ಸಾಪೆ, ತಗಟೆ ಎಂಬುದನ್ನು ಚಗಟೆ, ಚಗ್ಟೆ; ತಾರಿಸು ಎಂಬುದನ್ನು ಸಾರ್ಸು, ತಟ್ಟು ಎಂಬುದನ್ನು ಚಟ್ಟು ಮುಂತಾದ ರೀತಿಗಳಲ್ಲಿ ಉಚ್ಚಾರಗೊಂಡು ಬಳಸಲಾಗುತ್ತಿದೆ. ಮಳವಳ್ಳಿ, ಯಳಂದೂರು, ಟಿ.ನರಸೀಪುರ, ಕೊಳ್ಳೇಗಾಲ, ಚಾಮರಾಜನಗರ, ಮುಂತಾದ ಕಡೆಗಳಲ್ಲಿ ಅಷ್ಟು, ಇಷ್ಟು, ಎಷ್ಟು ಎಂಬ ಪದಗಳನ್ನು ಆಟು, ಈಟು, ಏಟು; ಅಟ್ಟು, ಇಟ್ಟು, ಎಟ್ಟು ಎಂದೂ ಹಾಗೆ, ಹೀಗೆ, ಹೇಗೆ ಎಂಬವುಗಳನ್ನು ಅಂಗೆ, ಇಂಗೆ, ಎಂಗೆ; ಅಂಗ, ಇಂಗ, ಎಂಗ ಎಂದೂ ಯಾಕೆ ಎಂಬುದನ್ನು ಯಾಕ ಎಂದೂ ಸಾಕೆ ಎಂಬುದನ್ನು ಸಾಕ ಎಂದೂ ಬಳಸಿದರೆ ಮಂಡ್ಯ, ನಾಗಮಂಗಲ, ಪಾಂಡವಪುರಗಳ ಸುತ್ತಮುತ್ತಲ ಪ್ರದೇಶಗಳಲ್ಲಿ ಆಟು, ಅಟ್ಟು, ಆಪಾಟಿ. ಈಟು, ಇಟ್ಟು, ಈಪಾಟಿ, ಏಟು, ಯಾಪಾಟಿ ಎಂದೂ ಬಳಸುತ್ತಾರೆ. ಕೆಲವರು ಗಂಡಸು, ಹೆಂಗಸು ಎಂಬ ರೂಪ ಗಳನ್ನು ಗಂಡ್ಸು, ಹೆಂಗ್ಸು, ಎಂಗ್ಸು, ಗನ್ಸು ಎಂದರೆ ಗಂಡ ಎಂಬುದನ್ನು ಗಂಡ್ಸು, ಹೆಂಡತಿ ಎಂಬುದನ್ನು ಹೆಂಗ್ಸು ಎಂದೂ ಬಳಸುವುದನ್ನು ಇಲ್ಲಿ ಕಾಣಬಹುದಾಗಿದೆ.

ಮಂಡ್ಯ ಜಿಲ್ಲೆಯ ಸುತ್ತಮುತ್ತಲ ಪ್ರದೇಶವಲ್ಲಿ ವಾಸಿಸುವ ಹಳ್ಳಿಗರ ಮಾತಿನಲ್ಲಿ ವಿನಯ, ಗೌರವ ಮರ್ಯಾದೆಗಳಿಗೆ ಸಂಬಂಧಪಟ್ಟ ಪದಗಳ ಬಳಕೆಯಲ್ಲಿ ಅಸ್ಪಷ್ಟತೆ ಹೆಚ್ಚು. ವಾರಗಳಲ್ಲಿ ಮಂಗಳವಾರ, ಬುಧವಾರ, ಶುಕ್ರವಾರಗಳು ಅಶುಭವಾದ ದಿನಗಳಾದರೆ ಸೋಮವಾರ, ಗುರುವಾರ ಹಾಗೂ ಭಾನುವಾರಗಳು ಉತ್ತಮ ದಿನಗಳು. ಭಾನುವಾರವನ್ನು ಆಯಿತ್ವಾರ, ಆಯ್ತಾರ ಎಂದು ಕರೆಯುತ್ತಾರೆ.''ಮಂಗ್ಳಾರ ಮಗ್ಳ ಕಳ್ಸಬ್ಯಾಡ, ಸುಕ್ರಾರ ಸೊಸೆ ಕಳ್ಸಬ್ಯಾಡ'' ಎಂಬ ಗಾದೆ ಇಲ್ಲಿ ತುಂಬ ಬಳಕೆಯಲ್ಲಿವೆ. ಮಂಗಳವಾರ ಎಂಬುದನ್ನು ಮಂಗ್ಳವಾರ, ಮಂಗ್ಳಾರ (ಮಟ್ ಮಂಗ್ಳಾರ): ಶುಕ್ರ ವಾರ ಎಂಬುದನ್ನು ಸುಕ್ರವಾರ, ಸುಕ್ರಾರ (ಸುಟ್ ಸುಕ್ರಾರ): ಬುಧವಾರವನ್ನು ಬುದ್ವಾರ (ಬೂದಿ ಬುದ್ವಾರ) ಎನ್ನುವುದು ವಾಡಿಕೆಯಲ್ಲಿದೆ. ಸೋಮವಾರ ಎಂಬು

ದನ್ನು ಸ್ವಾಮಾರ, ಸ್ವಾಮುಂವಾರ; ಶನಿವಾರ ಎಂಬುದನ್ನು ಸನ್ವಾರ, ಗುರುವಾರ ಎಂಬುದನ್ನು ಬೇಸ್ತಾರ, ಬೇಸ್ತ್ವಾರ, ಗುರ್ವಾರ, ಬ್ರೇಸ್ತ್ವಾರ ಎಂದು ಮುಂತಾಗಿ ಬಳಸುವರು.

ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಬೆಳಿಗ್ಗೆ ಎಂಬುದನ್ನು ಹೊತಾರೆ, ವೊತಾರೆ, ಒತಾರೆ, ಹೊತ್ತಾರೆ, ವೊತ್ತಾರೆ, ಒತ್ತಾರೆ ಎಂದೂ ಸುಮಾರು ಒಂಬತ್ತು ಗಂಟೆಯ ಸಮಯ ವನ್ನು ಕುಯ್ಲೊತ್ತು, ಕುಯಿಲೊತ್ತು; ಮಧ್ಯಾಹ್ನವನ್ನು ಮದ್ದಾನ, ಸುಮಾರು ನಾಲ್ಕು ಗಂಟೆಯ ಸಮಯವನ್ನು ಎಡಾಗ್ಲು, ಸಂಜೆಯನ್ನು ಸಂದೆ, ಸೂರ್ಯಾಸ್ತವಾದ ಸಂಜೆ ಯನ್ನು ಮಬ್ಬು, ಮುಸ್ಕು, ಮಸ್ಕು; ರಾತ್ರಿ ಊಟದ ಸಮಯವನ್ನು ಸರೊತ್ತು, ಸುಮಾರು ಹತ್ತುಗಂಟೆಯ ಸಮಯವನ್ನು ಸದ್ದಡ್ಗು, ಸುಮಾರು ಬೆಳಿಗ್ಗೆ ನಾಲ್ಕು ಗಂಟೆಯ ಸಮಯವನ್ನು ಕೋಳಿ ಕೂಗೊತ್ತು, ಕೋಳಿ ಕೂಗುವ ವೊತ್ತು; ರಾತ್ರಿ ಎಂಬುದನ್ನು ಇಳ್ಳು, ಇಳ್ಳೊತ್ತು; ಹಗಲು ಎಂಬುದನ್ನು ಹಗ್ಲು, ಅಗ್ಲು, ಅಗ್ಲೊತ್ತು, ಹಗ್ಲೊತ್ತು; ಸೂರ್ಯ ಅಥವಾ ಕಾಲವನ್ನು ಹೊತ್ತು, ವೊತ್ತು, ವತ್ತು ಎಂಬುದಾಗಿ ಬಳಸುವುದನ್ನು ಕಾಣಬಹುದು. ನಕ್ಷತ್ರ ಎಂಬುದನ್ನು ಚುಕ್ಕಿ ಎಂದೂ ಆಕಾಶ ಎಂಬು ದನ್ನು ಬಾಣ ಎಂದೂ ಮುಂತಾಗಿ ಉಚ್ಚರಿಸುತ್ತಾ ಬಳಸುವುದು ವಿಚಿತ್ರವಾಗಿದೆ.

ಕೆಲವು ಇಂಗ್ಲೀಷ್, ಹಿಂದೂಸ್ತಾನಿ, ಉರ್ದು, ಫಾರಸಿ ಮುಂತಾದ ಶಬ್ದಗಳ ಉಚ್ಚಾರದ ಕಡೆ ಗಮನಹರಿಸಿದಾಗಲೂ ಸಾಕಷ್ಟು ವ್ಯತ್ಯಾಸವನ್ನು ಕಾಣಬಹುದಾಗಿದೆ. ಫೋಟೋ ಎಂಬುದನ್ನು ಪೋಟ, ಕಾಫಿ ಎಂಬುದನ್ನು ಕಾಪಿ, ನರ್ಸ ಎಂಬುದನ್ನು ನರ್ಸಮ್ಮ, ಕಾಂಪೌಂಡು ಎಂಬುದನ್ನು ಕಾಂಪೋಡು, ಮಾಸ್ಟರ್ ಎಂಬುದನ್ನು ಮೇಸ್ಟ್ರು, ಡಾಕ್ಟರ್ ಎಂಬುದನ್ನು ಡಾಕ್ಟ್ರು, ದಾಕ್ಟ್ರು; ಪೌಡರ್ ಎಂಬುದನ್ನು ಪೋಡ್ರು, ಪೋಟ್ರು; ಸ್ಕೂಲ್ ಎಂಬುದನ್ನು ಇಸ್ಕೋಲು, ಇಸ್ಕೂಲು; ಹಾಸ್ಪಿಟಲ್ ಎಂಬುದನ್ನು ಆಸ್ಪತ್ರೆ, ಆಸ್ಪತ್ಲೆ; ಮೋಟಾರ ಎಂಬುದನ್ನು ಮೋಟ್ರು, ಲಾರಿ ಎಂಬುದನ್ನು ರಾರಿ, ಲಾರಿ; ಪೇಪರ್ ಎಂಬುದನ್ನು ಪೇಪ್ರು, ಹಿಯರಿಂಗ್ ಎಂಬುದನ್ನು ಹಿರಂಗು, ಇರಂಗು; ಥರ್ಮಾಸ್‌ಫ್ಲಾಸ್ಕ ಎಂಬುದನ್ನು ದರ್ಮಪ್ಲಾಸ್ಕು, ದರ್ಮ ಪಿಲಾಸ್ಕು; ಷೂ ಎಂಬುದನ್ನು ಸೂಜು, ಬೂಟ್ಸ್ ಎಂಬುದನ್ನು ಬೂಡ್ಸು, ಗ್ಲಾಸ್ ಎಂಬುದನ್ನು ಗಿಲಾಸು, ಗಳಾಸು; ಪ್ಲೇಟ್ ಎಂಬುದನ್ನು ಪಿಲೇಟು, ಪಿಲೋಟು; ಟೈಮ್ ಎಂಬುದನ್ನು ಟೇಮು ಎಂದು ಮುಂತಾಗಿ ಬಳಸುತ್ತಿದ್ದಾರೆ. ಹೀಗೆ ಇನ್ನೂ ಅನೇಕ ಇಂಗ್ಲೀಷ್ ಪದಗಳು ವ್ಯತ್ಯಾಸ ಗೊಂಡು ಬಳಕೆಯಲ್ಲಿವೆ. ಅಸಾಮತ್ ಎಂಬುದನ್ನು ಅಸಾಮತ್ತು, ಹಂಗಾಮಿ ಎಂಬು ದನ್ನು ಅಂಗಾಮಿ, ಖಜಾನೆ ಎಂಬುದನ್ನು ಕಜೇನಿ, ಜಪ್ತ್ ಎಂಬುದನ್ನು ಜಪ್ತಿ, ಕಛೇರಿ ಎಂಬುದನ್ನು ಕಚಾರಿ, ಖರೀದಿ ಎಂಬುದನ್ನು ಕರೀದಿ, ಚಾಕರಿ ಎಂಬುದನ್ನು ಚಾಕ್ರಿ ತಗಾವೆ ಎಂಬುದನ್ನು ತಗಾದಿ, ತಗಾವಿ, ಸುಸ್ತಿ; ಔಷಧಿ ಎಂಬುದನ್ನು ಓಸ್ತಿ, ಅವ್‌ಸ್ತಿ;

ಖಾತೆ ಎಂಬುದನ್ನು ಕಾತೆ, ಟೋಪಿ ಎಂಬುದನ್ನು ತೋಪಿ ಎಂದು ಬಳಸುವುದನ್ನು ಇಲ್ಲಿ ಕಾಣಬಹುದು.

ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಕನ್ನಡದಲ್ಲಿ ಸೀಬೆಹಣ್ಣು ಅಥವಾ ಪೇರ್ಲ ಎಂಬುದನ್ನು ಸೀಪಿ, ಸೀಬೆ, ಸೀಪೆ ಎಂದು ಕರೆದರೆ ಉತ್ತರಕನ್ನಡ, ಧಾರವಾಡ, ರಾಯಚೂರು, ಗುಲ್ಬರ್ಗಗಳ ಕಡೆಗಳಲ್ಲಿ ಪ್ಯಾರ್ಲ, ಪೇರ್ಲ, ಪೀರು, ಪ್ಯಾರು, ಪೇರು ಎಂದು ಕರೆಯುವರು. ದಾವಣಗೆರೆ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಸೀಪೆ, ಸೀಬೆ, ಪೇರ್ಲ, ಪಾರ್ಲ ಎಂಬ ಪದಗಳು ಬಳಕೆಯಲ್ಲಿರುವುದನ್ನು ಕಾಣಬಹುದು. ಮಂಡ್ಯ, ಮೈಸೂರು, ಬೆಂಗಳೂರು ಕನ್ನಡಗಳಲ್ಲಿ ಪರಂಗಿಹಣ್ಣು ಎಂಬುದನ್ನು ಪರಂಗಿ, ಎಂದು ಕರೆದರೆ ಅದನ್ನೇ ಹೊಸ ಮೈಸೂರು ಜಿಲ್ಲೆಗಳಲ್ಲಿ ಪಪ್ಪಾಯಿ, ಪಪ್ಪೈ, ಬಪ್ಪಂಗಾಯಿ, ಪಪ್ಲೆ, ಪಪೈ, ಪಪ್ಪಾಯಿ ಎಂಬಿತ್ಯಾದಿ ಹೆಸರುಗಳಿಂದ ಕರೆಯುವರು. ಹೀಗೆ ಹಣ್ಣು, ತರಕಾರಿ ಮುಂತಾದವುಗಳಿಗೆ ಸಂಬಂಧಿಸಿದ ಹಲವಾರು ಪದಗಳನ್ನು ಉದಾಹರಿಸಿ ವ್ಯತ್ಯಾಸವನ್ನು ತೋರಿಸಲು ಸಾಧ್ಯ. ಶಿವಮೊಗ್ಗ, ಹಾಸನ, ತುಮಕೂರು ಜಿಲ್ಲೆಗಳಲ್ಲಿ ಆಲ್ವಾಣವನ್ನು ಆಲ್ವಾಣ, ಹಾಲ್ವಾಣ, ಪಾಲ್ವಾಣ ಎಂದು ಕರೆದರೆ ಮಂಡ್ಯ, ಬೆಂಗಳೂರು ಮೈಸೂರು ಕಡೆಗಳಲ್ಲಿ ಪಾರಿವಾಳ, ಪಾರ್ವಾಳ, ಪಾಲಿವಾಣ, ಹಾಲಿವಾಣ, ಪಾಲುವಾಣ ಎನ್ನುವರು. ಕಬ್ಬಿನ ಹೂವನ್ನು ಮಂಡ್ಯ, ಮೈಸೂರುಗಳ ಕಡೆ ಸೂಲಂಗಿ ಎಂದು ಕರೆದರೆ, ದಕ್ಷಿಣ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ ಕಬ್ಬೂವು, ಕಬ್ಬುಹೂ ಎನ್ನುವರು. ಚನ್ನಪಟ್ಟಣ, ಮದ್ದೂರು, ಬೆಂಗಳೂರು, ಮೈಸೂರು ಕಡೆಗಳಲ್ಲಿ ತೆಂಗು ಮತ್ತು ಅಡ್ಕೆ ಹೂವನ್ನು ಹೊಂಬಾಳೆ, ಪೊಂಬಾಳೆ ಎಂದು ಕರೆದರೆ ಶಿವಮೊಗ್ಗ, ದಕ್ಷಿಣ ಹಾಗೂ ಉತ್ತರಕನ್ನಡ ಜಿಲ್ಲೆಯ ಬೇರೆಬೇರೆ ಕಡೆಗಳಲ್ಲಿ ಹಿಂಗಾರ, ಸಿಂಗಾರ, ಪಿಂಗಾರ ಎಂದು ಕರೆಯುವರು. ಎಳಸಾದ ತೆಂಗಿನ ನೀರನ್ನು ಮಂಡ್ಯ, ಮೈಸೂರು, ಬೆಂಗಳೂರು ಕಡೆಗಳಲ್ಲಿ ಎಳ್ನೀರು, ಎಳಸೀರು ಎಳೆನೀರು, ಎಂದರೆ ಉತ್ತರ ಹಾಗೂ ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಸೀಯಾಳ, ಸಿಂಯಾಳ ಎಂದೂ ಬಾದಾಮಿ, ಬಾಗಲಕೋಟೆಗಳ ಕಡೆಗಳಲ್ಲಿ ಟೆಂಗ್ನ ನೀರು, ಟೆಂಗ್ನೀರು, ಸಿಯಾಳ, ತೆಂಗ್ನೀರು ಎಂದೂ ತೆಂಗಿನಮರವನ್ನು ಟೆಂಗಿನ ಮರ, ಟೆಂಗ್ನ ಮರ, ತೆಂಗ್ನ ಮರ ಎಂದೂ ಕರೆಯುವುದನ್ನು ಕಾಣಬಹುದಾಗಿದೆ. ಹೀಗೆ ಪದಗಳನ್ನು ಬಳಸುವ ವಿಚಾರಕ್ಕೆ ಸಂಬಂಧಿಸಿದಂತೆ ಜಿಲ್ಲೆ ಜಿಲ್ಲೆಗೂ ವ್ಯತ್ಯಾಸಗಳು ಕಾಣಸಿಗುತ್ತವೆ. ಆಗ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಭಾಷಿಕಪ್ರಭೇದ ಇರುವುದು ಗೋಚರಿಸುತ್ತದೆ.

ಈಗ ಈ ಪ್ರದೇಶದಲ್ಲಿ ದೊರೆಯುವ ಕೆಲವು ಧಾನ್ಯಗಳ ಹೆಸರುಗಳನ್ನು ಗಮನಿಸೋಣ. ಮಂಡ್ಯ, ಮೈಸೂರು, ಬೆಂಗಳೂರು ಕಡೆಗಳಲ್ಲಿ ಕಡಲೆಪುರಿ ಎಂಬುದನ್ನು ಕಡ್ಲೆಪುರಿ, ಕಳ್ಳೆಪುರಿ ಎಂದು ಕರೆದರೆ ಚಿತ್ರದುರ್ಗ, ಬಳ್ಳಾರಿ ಕಡೆಗಳಲ್ಲಿ ಮಂಡಕ್ಕಿ ಎನ್ನು

ವರು. ನೆಲಗಡಲೆ ಎಂಬುದನ್ನು ಮಂಡ್ಯ, ಬೆಂಗಳೂರು ಕಡೆ ಕಡ್ಲೆಕಾಯಿ; ಮೈಸೂರು ಕಡೆ ಕಡ್ಲೆಕಾಯಿ, ಕಳ್ಳೆಕಾಯಿ ಎಂದೂ ಮಳವಳ್ಳಿ, ಯಳಂದೂರು, ಕೊಳ್ಳೇಗಾಲ, ಟಿ. ನರಸೀಪುರ, ಚಾಮರಾಜನಗರ, ನಂಜನಗೂಡುಗಳ ಕಡೆ ಕಳ್ಳೆಕಾಯಿ ಎಂದೂ ಕರೆಯು ವರು. ಇದನ್ನೇ ಧಾರವಾಡ, ರಾಯಚೂರು, ಗುಲ್ಬರ್ಗಗಳ ಕಡೆ ಸೇಂಗ, ಶೇಂಗ, ಸೀಂಗಾ, ಸೇಂಗಾ, ಶೇಂಗಾ ಎಂದರೆ ಬೆಳಗಾವಿಯ ಕಡೆ ಸೀಂಗ, ಶೇಂಗ, ಶೀಂಗ, ಭೈಮುಖ್,ಭೂಮಿ ಕಾಯಿ, ಬೈಮುಂಗ್, ಬಾಮುಂಗ್ ಎಂದು ಕರೆಯುವುದನ್ನು ಕಾಣಬಹುದಾಗಿದೆ. ಮಂಡ್ಯ, ಮೈಸೂರು, ಬೆಂಗಳೂರು ಕಡೆಗಳಲ್ಲಿ ಒಳ್ಳೆಮೆಣಸನ್ನು ಮೆಣಸು, ಮೆಣ್ಸು ಎಂದು ಕರೆದರೆ ಶಿವಮೊಗ್ಗ, ಉತ್ತರಕನ್ನಡಗಳ ಕಡೆ ಮೆಣ್ಸು ಎಂಬುದನ್ನು ಒಳ್ಳೆಮೆಣ್ಸು ಎಂದು ಕರೆಯುವರು. ದಕ್ಷಿಣ ಹಾಗೂ ಉತ್ತರಕನ್ನಡಗಳಲ್ಲಿ ಮೆಣ್ಸು ಎಂದರೆ ಮೆಣಸಿನ ಕಾಯಿ ಎಂಬರ್ಥ ಇದೆ. ಅದನ್ನೇ ಮೆಣಸಿನಕಾಯಿಗ ಬಳಸುವುದನ್ನು ಕಾಣಬಹುದು. ಮೆಣಸಿನಕಾಯಿ ಎಂಬುದನ್ನು ಮಳವಳ್ಳಿ, ಟಿ.ನರಸೀಪುರಗಳ ಕಡೆ ಮೆಣಸೀಕಾಯಿ; ಮದ್ದೂರು, ಮಂಡ್ಯಗಳ ಕಡೆ ಮೆಣಸಿನಕಾಯಿ, ಮೆಣ್ಸಿನ್‌ಕಾಯಿ ಎನ್ನುವರು. ಅದನ್ನೇ ಹೊನ್ನಾವರ, ಸಿರಸಿ, ಸಿದ್ಧಾಪುರಗಳ ಕಡೆ ಮೆಣ್ಸು ಎಂದು ಬಳಸುವರು. ಮಂಡ್ಯ, ಮದ್ದೂರು, ಚನ್ನಪಟ್ಟಣಗಳ ಕಡೆ ಹುಲ್ಲಿನ ರಾಶಿಯನ್ನು ಮೆದೆ ಎಂದರೆ ಹಾಸನದ ಕಡೆ ಗುಡ್ಡೆ ಎನ್ನುವರು. ಬಡಿದುಹಾಕಿದ ಹುಲ್ಲಿನ ಮೆದೆಯನ್ನು ಮಂಡ್ಯ, ಮದ್ದೂರಗಳ ಕಡೆ ಮೆದೆ ಎಂದರೆ ಕೆಲವು ಕಡೆ ಬಣವೆ, ಬಣ್ವೆ, ಬಣ್ವೆ ಎಂದೂ ಬಳಸುವರು. ಮರಗಳು ಗುಂಪಾಗಿ ಬೆಳೆದಿರುವ ಸ್ಥಳವನ್ನು ಈ ಪ್ರದೇಶದಲ್ಲಿ ತೋಪು ಎಂದರೆ, ಅದನ್ನೇ ಬೇರೆಕಡೆ ಹಾಡಿ ಎನ್ನುವರು. ಹುಲ್ಲಿನ ಸಣ್ಣಸಣ್ಣ ಕಂತೆಯನ್ನು ಮಂಡ್ಯದ ಕಡೆ ಕಂತೆ, ಹೊರೆ ಎಂದರೆ ಗುಲ್ಬರ್ಗ, ರಾಯಚೂರುಗಳ ಕಡೆ ಸೂಡು ಎನ್ನುವರು.

ಮಂಡ್ಯದ ಕಡೆ ಮುದ್ದೆ ಎಂಬುದನ್ನು ಹಿಟ್ಟು, ಇಟ್ಟು ಎಂದು ಕರೆದರೆ ಸಾರನ್ನು ಹೆಸ್ರು, ಎಸ್ರು, ಯಸ್ರು, ಸಾರು, ಉತ್ಕ ಎನ್ನುವರು. ದೊನ್ನೆಯನ್ನು ಜೊನ್ನೆ, ಜುನ್ನಿ, ಜನ್ನೆ ಎಂದೂ ಪಲ್ಯ ಅಥವಾ ಕೂಟನ್ನು ತಾಳ್ದ, ಉಪ್ಪಿನಸಾರನ್ನು ಉಪ್ನೆಸ್ರು ಎಂದು ಮುಂತಾಗಿ ಬಳಸುವರು. ತಟ್ಟೆಯನ್ನು ತಣ್ಗೆ, ತಣಗೆ ಎಂದರೆ ಅದನ್ನೇ ಕೆಲವು ಕಡೆ ಗಂಗಾಳ, ಗಂಗಳ, ಗಂಗ್ಳ ಎಂದೂ ಗ್ಲಾಸನ್ನು ಲೋಟ, ಬಟ್ಲು, ಬಟ್ಟಲು; ತಂಬಿಗೆ ಯನ್ನು ಚೊಂಬು, ಚೆಂಬು ಎಂದೂ ಕರೆಯುವುದು ರೂಢಿಯಲ್ಲಿದೆ.

ಹಾಗೆಯೇ ಈ ಪ್ರದೇಶದಲ್ಲಿ ದೊರೆಯುವ ಗುಣವಾಚಕಗಳ ಕಡೆ ಕಣ್ಣಾಡಿಸಿದಾಗ ಕೊಂಚ ಅಥವಾ ಸ್ವಲ್ಪ ಎಂಬುದನ್ನು ಇಂಕ್ರ, ಚಿಂಕ್ರ, ವಸಿ, ಸ್ವಲ್ಪ ಎಂದೂ ಹೆಚ್ಚು ಅಥವಾ ತುಂಬ ಎಂಬುದನ್ನು ಜಾಸ್ತಿ, ಅಪಾರ, ಅಪಾಟಿ, ಅಪ್ಪಾರ; ಬಹಳ ಎಂಬು ದನ್ನು ಬಾಳ, ಮಸ್ತಾಗಿ; ಹಿಂದೆ, ಮುಂದೆ, ಎಡ, ಬಲ, ಎದುರು ಎಂಬವುಗಳನ್ನು ಹಿಂದ್ಗಡೆ, ಮುಂದ್ಗಡೆ, ಎಡ್ಗಡೆ, ಬಲ್ಗಡೆ, ಎದ್ರುಗಡೆ ಎಂದು ಕಡೆ ಸೇರಿಸಿ ಬಳಸುವುದು

ಹೆಚ್ಚು. ಅಭ್ಯಾಸ ಅಥವಾ ಚಾಲು ಎಂಬುದನ್ನು ಪಾಟ, ಚಾಲು ಎಂದೂ ಗುಣ ಚೆನ್ನಾಗಿಲ್ಲ ಎನ್ನುವುದಕ್ಕೆ ಚಾಲು ಚನ್ನಾಗಿಲ್ಲ, ಜೋಪಾನ ಎಂಬುದನ್ನು ಜ್ವಾಪಸ, ಜ್ವಾಪಾನ, ಬದ್ರ ಎಂದೂ ಎಚ್ಚರಿಕೆ ಎಂಬುದನ್ನು ಪುರ್ತಬುಟ್ಟಿ, ಗಮ್ನ, ಗಮನ, ಗಮ್ನ ಇಲ್ಲಿ; ಬಾಗಿಲು ಎಂಬುದನ್ನು ಕದ, ಬಾಗ್ಲು ಬಾಕ್ಲು ಎಂದೂ ಚಿಲುಕ ಎಂಬುದನ್ನು ಚಿಲ್ಕ, ಬೀಗದಕೈಯನ್ನು ಬೀಗ್ದೆಸಳು, ಬೀಗ್ದೆಸ್ಳು, ಬೀಗ ಎಂದೂ ಪಾಸಿ ಎಂಬುದನ್ನು ಪಾನಿ, ಪಾನೆ, ಬಾಸಿ, ಬಾನೆ ಎಂದೂ ಬಳಸುವರು. ಹೀಗೆ ಅನೇಕ ಪದಗಳು ಉಚ್ಚಾರ ದಲ್ಲಿ ವ್ಯತ್ಯಾಸಗೊಂಡು ಬಳಕೆಯಲ್ಲಿರುವುದನ್ನು ಹೆಚ್ಚಾಗಿ ಕಾಣಬಹುದು.

ಮೈಸೂರಿನ ಯಳಂದೂರು, ಚಾಮರಾಜನಗರ, ನಂಜನಗೂಡುಗಳ ಕಡೆಗಳಲ್ಲಿ ಮಗು ಎಂಬುದನ್ನು ಕೂಸು ಎಂದರೆ ಮಂಡ್ಯ, ಬೆಂಗಳೂರು ಕಡೆಗಳಲ್ಲಿ ಮಗ, ಮಗು ಎನ್ನುವರು. ಮಳವಳ್ಳಿ, ಯಳಂದೂರು, ನಂಜನಗೂಡುಗಳ ಕಡೆ ಮಗುವನ್ನು ಕರೆಯುವಾಗ ಲೋ ಕೂಸೂ, ಲೋ ಕೂಸೇ, ಕೂಸೂ, ಕೂಸೇ, ಲೇ ಕೂಸು ಎಂದರೆ ಮಂಡ್ಯ, ಬೆಂಗಳೂರು, ಮೈಸೂರುಗಳ ಕಡೆ ಮಗಾ, ಮಗಲೋ, ಲೋ ಮಗ, ಲೇ ಮಗಾ ಎಂದು ಕರೆಯುವರು. ನಂಜನಗೂಡಿನ ಕಡೆ ಮಗಳನ್ನು ಮಗ ಎಂದರೆ, ಅದೇ ಕಡೇಮಗ ಎಂಬುದನ್ನು ಮಂಗ, ಮಗ ಎಂದು ಕರೆಯುವರು. ಎಳೆಮಗು ಎಂಬುದನ್ನು ಮಂಡ್ಯದ ಕಡೆ ಎಳೆಮಗ, ಗೊಂಪೆ; ಮೈಸೂರಿನ ಕಡೆ ಎಳೆ ಮಗ, ಮಳವಳ್ಳಿಯ ಕಡೆ ಎಳೆಕೂಸು, ಪಿಳ್ಳೆಕೂಸು; ಮಗಳನ್ನು ಹಿಂದುಳಿದ ಜನಾಂಗದವರು ಮಗ, ಮಗಮೇ, ಮಗಮೀ, ಮಗಾ ಎಂದು ಕರೆದರೆ ಮುಂದುವರಿದ ಜನ ಮಗು, ಅಕ್ಕ, ಅಮ್ಮ ಎನ್ನುವರು. ಕೆಲವರು ಮಗನನ್ನು ತಮ್ಮಯ್ಯ, ಪುಟ್ಟು, ಮರಿ, ಪುಟ್ಟ, ಮಗ ಎಂದರೆ ಹಿಂದುಳಿದವರು ನಮ್ಮೈದ, ಹೈದ; ಮಗಳನ್ನು ಹೈದ್ಲು, ನಮ್ಮೈದ್ಲು ಎಂದು ಕರೆಯುವುದನ್ನು ಇಲ್ಲಿ ಕಾಣಬಹುದು. ಹಾಗೆಯೇ ಕೆಲವರು ಮಕ್ಕಳು ಎಂಬುದನ್ನು ಹೈಕ್ಳು, ಮಕ್ಳು, ಐಕ್ಳು, ಮಕ್ಲು: ಗಂಡಾದರೆ ಹೈದ, ಹೆಣ್ಣಾದರೆ ಹೈದ್ಲು ಎಂದು ಕರೆಯುವರು. ಅದನ್ನೇ ಟಿ.ನರಸೀಪುರ, ಕೊಳ್ಳೇಗಾಲ, ಮಳವಳ್ಳಿಗಳ ಕಡೆ ಗಳಲ್ಲಿ ಐಕಮಕ್ಕ ಎಂದರೆ, ಅದೇ ಸ್ಥಳದಲ್ಲಿ ಬೇಕೆ, ಸಾಕೆ, ಯಾಕೆ, ಕೊಡಲು, ಬರಲು, ಹೋಗಲು ಎಂಬ ರೂಪಗಳನ್ನು ಬ್ಯಾಕ, ಸಾಕ, ಯಾಕ, ಕೊಡಕಾ, ಬರಕಾ, ಹೋಕಾ, ಹೋಗಕಾ ಎಂದು ಬಳಸುವರು. ಅಲ್ಲದೆ ಅವನು, ಇವನು, ಇವಳು, ಅವಳು ಎಂಬು ವುಗಳನ್ನು ಆವ, ಈವ, ಇಂವ, ಅಂವ, ಅದ್, ಇದ್ ಎಂದು ಕರೆಯುವುದು ರೂಢಿ ಯಲ್ಲಿದೆ.

ಮೈಸೂರಿನ ಕೊಳ್ಳೇಗಾಲ, ಯಳಂದೂರು, ಟಿ.ನರಸೀಪುರ, ನಂಜನಗೂಡು, ಮಂಡ್ಯ, ಮಳವಳ್ಳಿ ಕಡೆಗಳಲ್ಲಿ ಪ್ರತಿಯೊಂದು ಕ್ರಿಯಾರೂಪಕ್ಕೂ ಹೇಳಿ ಸೇರಿಸಿ ಆಡುವುದು ರೂಢಿ. ಕೊಡಲಿ, ಬರಲಿ, ಇರಲಿ, ಕೇಳಲಿ, ಹೇಳಲಿ ಎಂಬ ಭಾವಾರ್ಥಕ

ಕ್ರಿಯಾ ಹಾಗೂ ಇತರ ರೂಪಗಳಿಗೆ ಪೇಳಿ ಸೇರಿಸಿ, ಕೊಡ್ಲೇಳಿ, ಬರ್ಲೇಳಿ, ಇರ್ಲೇಳಿ, ಕೇಳ್ಲೇಳಿ, ತಿನ್ಲೇಳಿ, ಅಲ್ಲೇಳಿ, ಇಲ್ಲೇಳಿ, ಗೊತ್ತಿಲ್ಲೇಳಿ, ಮಾಡ್ಲಿಲ್ಲೇಳಿ, ಕೊಡ್ಲಿಲ್ಲೇಳಿ ಎಂದು ಬಳಸುವರು. ಇದೇ ಪ್ರದೇಶಗಳಲ್ಲಿ ಹೋದನು, ಬಂದನು, ತಿಂದನು, ಹೇಳಿದನು, ಕೇಳಿದನು ಎಂಬ ಭೂತಕಾಲರೂಪಗಳನ್ನು ಹೋದ್ನ, ಬಂದ್ನ, ತಿಂದ್ನ, ಪೇಳ್ದ್ನ, ಕೇಳ್ದ್ನ ಅಲ್ಲದೆ ಪೋನ, ವಾದ, ಬನ್ನ, ತಿನ್ನ, ಹೇಳ್ನ, ಕೇಳ್ನ ಎಂದೂ ಬಳಸುವುದನ್ನು ಕಾಣಬಹುದು. ಹೋದನು, ಬಂದನು, ತಿಂದನು, ಹೇಳಿದನು, ಕೇಳಿದನು ಎಂಬಿತ್ಯಾದಿ ರೂಪಗಳನ್ನು ಹುಣಸೂರು, ಮಂಡ್ಯ, ಕೃಷ್ಣರಾಜಪೇಟೆ, ಚನ್ನಪಟ್ಟಣ, ಮದ್ದೂರುಗಳ ಕಡೆಗಳಲ್ಲಿ ಹೋದ, ಬಂದ, ತಿಂದ, ಹೇಳ್ದ, ಕೇಳ್ದ ಎಂದೂ ಹೋದಳು, ಬಂದಳು, ಇದ್ದಳು, ಕೇಳಿದಳು ಎಂಬ ರೂಪಗಳನ್ನು ಹೋದ್ಲು, ಬಂದ್ಲು, ಇದ್ಲು, ಕೇಳದ್ಲು ಎಂದೂ ಬಳಸಿದರೆ ನಂಜನಗೂಡು, ಯಳಂದೂರುಗಳ ಕಡೆ ಲಿಂಗಭೇದವಿಲ್ಲದೆ ಪೋಯ್ತು, ವಾಯ್ತು, ಬತ್ತು, ಕೇಳ್ತು, ಹೇಳ್ತು, ತಿಂತು ಎಂದು ಬಳಸುವುದನ್ನು ನೋಡಬಹುದು.

ಮಂಡ್ಯ ಜಿಲ್ಲೆಯ ಕನ್ನಡದಲ್ಲಿ ಹಾವಿನ ಹೆಡೆ ಎಂಬುದನ್ನು ಹಾವ್ನ ಸೆಡೆ, ಹಾವ್ನ ಸಡೆ, ಆವ್ನ ಸಡೆ ಎಂದರೆ ಹಾವು ಎಂಬುದನ್ನು ಆವ್ರ, ಹಾವು ಎಂದು ಕರೆಯುವರು. ಸೀಮೆಎಣ್ಣೆ ಹಾಕುವ ಆಲಿಕೆಯನ್ನು ಬುದ್ವಂತ, ಬುದ್ಧಿವಂತ ಎಂದೂ ಪರಕೆಯನ್ನು ಬರ್ಲು, ಗುಡುಸಲನ್ನು ಗುಡ್ಸಲು, ಗುಡ್ಲು, ಗುಳ್ಳು ಎಂದೂ ಮಣ್ಣನ್ನು ವೊಣ್ಣು ಎಂದೂ ಗಂಡುಕೋಳಿಯನ್ನು ಹುಂಜ, ವುಂಜ ಎಂದೂ ಹೆಣ್ಣುಕೋಳಿಯನ್ನು ಯಾಟೆ, ಯ್ಯಾಟೆ, ಹ್ಯಾಟೆ, ಯ್ಯಾಂಟೆ ಎಂದೂ ವೊಟ್ಟೆ ಹಾಕುವ ಕೋಳಿಯನ್ನು ಕಡ್ತಿ, ಕಡತಿ, ವೊಟ್ಟೆಕೋಳಿ, ಮಟ್ಟೆಕೋಳಿ ಎಂದೂ ವೊಟ್ಟೆ ಎಂಬುದನ್ನು ಮಟ್ಟೆ, ವೊಟ್ಟೆ ಎಂದೂ ಕೋಳಿಮರಿಯನ್ನು ಹೂಮರಿ, ಮರಿ, ಕೊಳ್ಮರಿ ಎಂದೂ ವೊಟ್ಟೆ ಮಾಡಲು ಕುಳ್ಳಿರಿಸುವ ಕೋಳಿಯನ್ನು ಕಾವ್ಗೋಳಿ, ಕಾವಿಕೋಳಿ, ಕಾವ್‌ಗೋಳಿ ಎಂದೂ ಕೋಳಿಗರಿಯನ್ನು ಕೋಳಿಪುಕ್ಕ, ಕೋಳಿರೆಕ್ಕೆ ಎಂದೂ ಹುಂಜದ ತಲೆಯ ಮೇಲಿರುವ ಕೆಂಪಿನ ವಸ್ತುವನ್ನು ಬಾಸಿಂಗ ಎಂದೂ ಕರೆಯುವುದನ್ನು ಕಾಣಬಹುದು.

ಮಂಡ್ಯದ ಸುತ್ತಮುತ್ತಲ ಪ್ರದೇಶಗಳಲ್ಲಿ ಧಾನ್ಯ ತುಂಬಲು ಮಾಡಿರುವ ಹೊಲದ ನೆಲಗಣಜವನ್ನು ಹಗ, ಹಗೇವು, ಅಗ, ಅಗೇವು ಎಂದರೆ ಮನೆಯಲ್ಲಿ ಗೋಡೆಹಾಕಿ ಮಾಡಿರುವ ಕಣಜವನ್ನು ಕಣ್ಜ, ಕಣಜ ಎಂದೂ ಕರೆಯುವರು. ಬಿದಿರಿನ ದಬ್ಬೆಯಲ್ಲಿ ಮಾಡಿದ ಕಣಜವನ್ನು ಪೆಟ್ಟೆ, ಪೆಂಟೆ ಎಂದೂ ಕಾಳು ಹುಳಿತು ಹಾಳಾಗದ ಹಾಗೆ ಕಟ್ಟುವ ಮೂಟೆಯನ್ನು ಮೂಡೆ ಎಂದೂ ಮಣ್ಣಿನಿಂದ ಮಾಡಿದ ಧಾನ್ಯದ ಮಡಕೆಯನ್ನು ಹಳಗೆ, ಹಳ್ಗೆ, ಅಳ್ಗೆ ಎಂದೂ ಮಣ್ಣಿನಲ್ಲಿ ಮಾಡಿದ ಅದಕ್ಕಿಂತ ಸ್ವಲ್ಪ ದೊಡ್ಡದನ್ನು ಗುಡಾಣ, ಅದಕ್ಕಿಂತ ದೊಡ್ಡದನ್ನು ವಾಡೆ ಎಂದೂ ಕರೆಯುವರು. ದನವನ್ನು ಕಟ್ಟುವ

ಮನೆಯನ್ನು ಹಟ್ಟಿ, ದನಿನಟ್ಟಿ, ದನದಟ್ಟಿ; ಹಟ್ಟಿಯಲ್ಲಿ ದನಕ್ಕೆ ಮೀಸಲಾಗಿಡುವ ಸ್ಥಳವನ್ನು ಕೊಟ್ಗೆ, ಕೊಟ್ಟಿಗೆ; ದನಗಳನ್ನು ಕಟ್ಟಿ ಹಾಕುವ ಸ್ಥಳವನ್ನು ಗೊತ್ತು, ಗೊಂತು; ದನಗಳಿಗೆ ಹುಲ್ಲು ಹಾಕುವ ಸ್ಥಳವನ್ನು ಚರಣಿ, ಚರ್ಣಿ; ಅದನ್ನೇ ಬೇರೆಬೇರೆ ಕಡೆಗಳಲ್ಲಿ ಗ್ವಾದ್ಲೆ, ಗ್ವಾದ್ಲಿ, ಗೊಂದಲಿಗೆ ಎಂದೂ ದನಕಟ್ಟುವ ಗೂಟಕ್ಕೆ ಗುಂಟ, ಗೂಟ, ಗುಟ್ಟ ಎಂದೂ ಕರೆಯುವರು. ಇಲ್ಲಿ ದನದ ಮೂತ್ರವನ್ನು ಹುಚ್ಚೆ, ಉಚ್ಚೆ, ಗಂಜಳ, ಗಂಜ್ಲ ಎಂದೂ ಸಗಣಿಯನ್ನು ತೊಪ್ಪೆ ಎಂದೂ ತೊಪ್ಪೆ ಹಾಗೂ ಕಸಕಡ್ಡಿಗಳ ರಾಶಿಯನ್ನು ತಿಪ್ಪೆ ಎಂದೂ ಹೇಳುವುದನ್ನು ಕಾಣಬಹುದು. ಮಂಡ್ಯ, ಮದ್ದೂರು, ಬೆಂಗಳೂರುಗಳ ಕಡೆ ನೇಗಿಲು ಊಡು ಎಂಬುದನ್ನು ಏರ್ಕಟ್ಟು, ಏರುಕಟ್ಟು ಎಂದರೆ ಪಾಂಡವಪುರ, ಶ್ರೀರಂಗಪಟ್ಟಣ, ಮಳವಳ್ಳಿ, ನಾಗಮಂಗಲ ಮುಂತಾದ ಕಡೆಗಳಲ್ಲಿ ಆರ್ಕಟ್ಟು, ಆರುಕಟ್ಟು ಎನ್ನುವರು. ಹಸುವನ್ನು ಹಸ, ಅಸ, ದನ; ಎತ್ತುಗಳನ್ನು ಎತ್ತು, ದನ; ಹಸುವಿನ ಗಂಡುಕರುವನ್ನು ಹೋರಿ, ಓರಿ, ವೋರಿ, ಹೋರ್ಗರ, ಓರ್ಗರ, ವೋರ್ಗರ, ಓರಿಕರ; ಹೆಣ್ಣುಕರುವನ್ನು ಹೆಂಗರ, ಎಂಗರ, ಹೆಣ್ಗರ, ಎಣ್ಗರ; ಎರಡು ವರ್ಷದ ಹೆಣ್ಣುಕರುವನ್ನು ಕಡ್ಸು, ಕಡಸು; ಆಡಿನಮರಿಯನ್ನು ಅಡ್ಮರಿ, ಗಂಡು ಆಡನ್ನು ಹೋತ, ವಾತ, ವೋತ; ಹೆಣ್ಣು ಆಡನ್ನು ಆಡು, ಎರಡು ವರ್ಷದ ಆಡನ್ನು ಮಣ್ಣೆ, ಮಳ್ಕ, ಮಣ್ಕೆ ಅದೇರೀತಿ; ಒಂದು ಅಥವಾ ಎರಡು ವರ್ಷದ ಹೆಣ್ಣುಕುರಿ ಯನ್ನು ಕರಗಿ, ಕರ್ಗಿ, ಕಳ್ಗಿ; ಹೆಣ್ಣುಕುರಿಯನ್ನು ಕುರಿ, ಗಂಡುಕುರಿಯನ್ನು ಟಗ್ರು, ಟಗರು ಎಂಬಿತ್ಯಾದಿಗಳಲ್ಲಿ ಕರೆಯುತ್ತಿದ್ದಾರೆ.

ಈ ಪ್ರದೇಶದಲ್ಲಿ ಹರಿಜನ ಅಥವಾ ಬೆಸ್ತರು ಊರಿನ ಗೌಡ ಅಥವಾ ಪಟೇಲನ ಜೊತೆಯಲ್ಲಿ ವ್ಯವಹರಿಸುವಾಗ ಏನಪ್ಪ, ಏನ್ರಪ್ಪ, ಯೇನಪ್ಪ, ಯೇನ್ರಪ್ಪ, ಯ್ಯಾಕ್ರಪ್ಪ, ಯೇನ್ರ, ಯಾಕ್ರ, ಯ್ಯಾಕಪ್ಪ, ಯಾಕ್ರಪ್ಪ, ಯಾಕ್ರೆ, ಯ್ಯಾಕ್ರೆ ಎಂದು ಮುಂತಾಗಿ ಬಳಸುವರು. ಅದೇ ಹರಿಜನನು ಬ್ರಾಹ್ಮಣನೊಡನೆ ವ್ಯವಹರಿಸುವಾಗ ಏನ್ಬುದ್ದಿ, ಯೇನ್ಬುದ್ದಿ, ಯಾಕ್ಬುದ್ದಿ ಎಂದೂ ಲಿಂಗಾಯತರೊಡನೆ ವ್ಯವಹರಿಸುವಾಗ ಯಾಕ್ಸಾಮಿ, ಏನ್ಸಾಮಿ, ಏನುಸ್ವಾಮಿ ಎನ್ನುತ್ತಾರೆ. ಗೌಡರು, ಪಟೇಲರು, ಶ್ಯಾನುಭೋಗರು ವ್ಯವಹರಿಸುವಾಗ ಗೌಡನು ಶ್ಯಾನುಭೋಗನ್ನುನ್ನು ಸ್ವಾಮಿ, ಸಾಮಿ ಎಂದೂ ಶ್ಯಾನುಭೋಗನು ಪಟೇಲ ಅಥವಾ ಗೌಡನನ್ನು ಏನಯ್ಯ, ಏನಪ್ಪ, ಯಾಕಯ್ಯ, ನೋಡಯ್ಯ, ಬಾರಯ್ಯ ಎಂದೂ ಪಟೇಲನು ತೋಟಿ(ಹರಿಜನ)ಯೊಡನೆ ವ್ಯವರಿಸು ವಾಗ ಬಾಲಾ, ಬಾರ್ಲಾ, ಬಾಲಲೇ, ಕೇಳ್ಕಾ, ಹೇಳ್ಕಾ, ಹೋಗ್ಲ, ಕೇಳ್ಕಾಲೇ, ಹೇಳ್ಕಾಲೇ, ಹೋಗ್ಲಲೇ ಎಂದೂ ಕರೆಯುವುದನ್ನು ಕಾಣಬಹುದು. ಹಿಂದುಳಿದ ವರ್ಗದಲ್ಲಿ ಸಮವಯಸ್ಕರು ಯೇನ್ಲಾ, ಏನ್ಲ, ಯಾಕ್ಲ, ಯಾಕ್ಲಾ, ಬಾರ್ಲಾ. ಬಾರ್ಲ, ಬಾಲಾ, ಬುಡ್ಲ, ಕೊಡ್ಲ, ಬುಡ್ಲಾ, ಕೊಡ್ಲಾ, ನೋಡ್ಲ. ನೋಡ್ಲಾ ಎಂದು ಮುಂತಾಗಿ ಹೇಳುವರು. ನಂಜನಗೂಡು, ಯಳಂದೂರು, ಟಿ.ನರಸೀಪುರಗಳ ಕಡೆ ಬಿಡು ಎಂಬು

ವನ್ನು ಬುಳ್ಳ, ಕೊಡು ಎಂಬುದನ್ನು ಕೊಳ್ಳಾ, ನೋಡು ಎಂಬುದನ್ನು ನೋಡ್ಲ, ನೋಳ್ಳಾ ಎಂದೂ ಕರೆದು ವ್ಯವಹರಿಸುವುದನ್ನು ಕಾಣಬಹುದಾಗಿದೆ.

ಈ ಪ್ರದೇಶದ ಬ್ರಾಹ್ಮಣರು ಒಕ್ಕಲಿಗರೊಡನೆ ವ್ಯವಹರಿಸುವಾಗ ಏನೋ, ಬಾರೋ, ಕೇಳೊ, ಹೇಳೊ, ಏನಯ್ಯ, ಬಾರಯ್ಯ, ಕೇಳಯ್ಯ ಎಂದೂ ಅದೇ ಬ್ರಾಹ್ಮಣ, ಲಿಂಗಾಯತರೊಡನೆ ವ್ಯವಹರಿಸುವಾಗ ಏನಯ್ಯ, ಹೋಗೋಣ, ಬಾರಯ್ಯ, ಬರೋಣ, ಹೇಳಯ್ಯ, ಕೇಳೋಣ, ಕೇಳಯ್ಯ, ಹೇಳೋಣ ಎಂದೂ ಹಳ್ಳಿಯ ಅವಿದ್ಯಾವಂತರು ಸಮವಯಸ್ಕ ಅಥವಾ ಕಿರಿಯರೊಡನೆ ವ್ಯವಹರಿಸುವಾಗ ಲೋ ಬಾರ‍್ಲಾ, ಲೋ ಕೇಳ್ಳಾ, ಲೋ ಹೇಳ್ಳಾ, ಲೋ ನೋಡ್ಲಾ, ಲೋ ಮಾಡ್ಲಾ; ಲೇ ಮಾಡ್ಲಲೇ, ಲೇ ಬಾರ‍್ಲಲೇ, ಲೇ ಕೇಳ್ಳಲೇ, ಲೇ ಹೇಳ್ಳಲೇ; ಬಾರ‍್ಲೆಲೇ, ಕೆಳ್ಳೆಲೇ, ಮಾಡ್ಲಲೇ, ಬುಡ್ಲಲೇ, ಕೊಡ್ಲ, ಬುಡ್ಲ, ಹೇಳ್ಳ, ಮಾಡ್ಲ, ಕುಡಿಲಾ ಮುಂತಾಗಿ ಕರೆಯುವುದನ್ನು ಕಾಣುತ್ತೇವೆ. ಅದೇ ಅವಿದ್ಯಾವಂತ ಹಿರಿಯರನ್ನು ಸಿದ್ದಪ್ಪ, ಸಿದ್ದಣ್ಣ, ಸಿದ್ದಯ್ಯ, ದೊಡ್ಡಣ್ಣ, ದೊಡ್ಡಪ್ಪ, ದೊಡ್ಡಯ್ಯ ಎಂದೂ ಕಿರಿಯವರೊಡನೆ ಸಿದ್ದ, ದೊಡ್ಡ, ಕರಿಯ, ಜೋರ ಎಂದೂ ಹೆಂಗಸು ಹಿರಿಯಳಾದರೆ ಮಾದವ್ವ, ಮಾದಕ್ಕ, ಮಾದಮ್ಮ ಎಂದೂ ಕಿರಿಯವಳಾದರೆ ಮಾದಿ, ಬೋರಿ, ಸಿದ್ದಿ, ತಿಮ್ಮಿ ಇತ್ಯಾದಿಗಳಲ್ಲಿ ಕರೆಯುವುದನ್ನು ಕಾಣುತ್ತೇವೆ. ವ್ಯಕ್ತಿ ಹಿರಿಯನಾಗಿರಲಿ, ಕಿರಿಯನಾಗಿರಲಿ, ವಿದ್ಯಾವಂತನಾಗಿರಲಿ ಅವನ ಜೀವನದ ಮಟ್ಟ, ಅಂತಸ್ತು ಇತ್ಯಾದಿಗಳಿಗೆ ತಕ್ಕಂತೆ ಗೌರವಕ್ಕೆ ತಕ್ಕಂತೆ ಸಿದ್ದೇಗೌಡ್ರೆ, ದೊಡ್ಡೇಗೌಡ್ರೆ, ಕರಿಯಪ್ಪನವರೇ ಎಂದೂ ಕರೆಯುವುದು ರೂಢಿಯಲ್ಲಿದೆ. ಬ್ರಾಹ್ಮಣ ಅಥವಾ ಲಿಂಗಾಯತ ತನ್ನ ಮಗಳನ್ನು ಬಾರಮ್ಮ, ಬಾಮ್ಮಾ, ಬಾಮ್ಮ, ಬಾರಕ್ಕ, ಬಾರೆ, ಯಾಕಮ್ಮ ಎಂದರೆ ಮಗನನ್ನು ಏನಯ್ಯ, ಯಾಕಯ್ಯ, ಬಾರೋ, ಸೋಡೋ, ಇಲ್ಲ ಕಣೋ, ನೋಡ್ತಾರೆ ಕಣೋ, ಬರ‍್ತರೆ ಕಣೋ, ಬರತ್ತೆ ಕಣೋ, ನೋಡುತ್ತೆ ಕಣೋ ಎಂಬಿತ್ಯಾದಿಗಳಲ್ಲಿ ಕರೆಯುವರು. ಕೆಲವು ಬ್ರಾಹ್ಮಣರೂ, ಲಿಂಗಾಯತರೂ ಹೆಂಡತಿಯನ್ನು ಹೆಸರು ಹಿಡಿದು ಕರೆದರೆ, ಅದೇ ಜಾತಿಯ ಕೆಲವು ಹೆಂಗಸರು ಗಂಡಂದಿರ ಹೆಸರನ್ನು ಹಿಡಿದು ಕರೆಯುವುದು ಬಳಕೆಯಲ್ಲಿದೆ. ಅವರ ಮಗ ತಂದೆಯನ್ನು ಅಣ್ಣ, ಅಪ್ಪ, ಅಪ್ಪಾಜಿ, ಅಯ್ಯ ಎಂದರೆ ತಾಯಿಯನ್ನು ಅಕ್ಕ, ಅಮ್ಮ ಎಂದೂ ಕರೆಯುತ್ತಾನೆ.

ಮಳವಳ್ಳಿ, ಟಿ. ನರಸೀಪುರ, ಯಳಂದೂರು, ಕೊಳ್ಳೇಗಾಲ ಮುಂತಾದ ಸ್ಥಳಗಳ ಕಡೆ ಹಿಂದುಳಿದ ಅವಿದ್ಯಾವಂತರು ಆಡುವ ಕನ್ನಡವನ್ನು ಗಮನಿಸಿದಾಗ ಪ್ರತಿಯೊಂದು ಪದಕ್ಕೂ 'ಹೇಳಿ' ಎಂಬುದನ್ನು ಸೇರಿಸುವುದು ಅಲ್ಲದೆ ಉಡೋ, ಅಜೋ, ಉಡ, ಅಜ ಎಂಬ ರೂಪಗಳನ್ನು ಸೇರಿಸಿ ಹೇಳುವುದು ಹೆಚ್ಚಾಗಿ ಕಂಡುಬರುವುದು. ವ್ಯಕ್ತಿ ಸಮವಯಸ್ಕ ಅಥವಾ ಕಿರಿಯನಾಗಿದ್ದರೆ ಮಳವಳ್ಳಿಯ ಕಡೆ ಎನ್ಜಾ, ಎನಜ, ಯಾನಜಾ, ಯಾಕಜ, ಹೋಗಜಾ, ಹೋಗಜ, ವಾಗಜ, ವಾಗಜೋ, ಏನಜೋ, ಯಾನಜೋ,

ಯಾಕಜೋ ಎಂದೂ ಕರೆದರೆ ಟಿ. ನರಸೀಪುರ, ಕೊಳ್ಳೇಗಾಲ ಕಡೆಗಳಲ್ಲಿ ಏನುಡಾ, ಯ್ಯಾನುಡ, ಯ್ಯಾನುಡೋ, ಯಾಕುಡ, ಯಾಕುಡೋ, ಯ್ಯಾಕುಡಾ, ಬಾವುಡೋ, ಬಾವುಡ, ಬಾವುಡಾ, ಹೋಗುಡ, ಹೋಗುಡೋ, ಹೋಗುಡಾ, ಕೇಳುಡ, ಕ್ಯಾಳುಡೋ, ಕೇಳುಡಾ ಎಂದೂ ಕರೆಯುವರು. ವ್ಯಕ್ತಿಗಳು ಹಿರಿಯರಾಗಿದ್ದರೆ ಬಂದೇಳಿ, ಇಲ್ಲೇಳಿ, ಕೇಳ್ದೇಳಿ, ನೋಡ್ದೇಳಿ, ಬರ್ತಾನೇಳಿ, ಕೊಡ್ತಾನೇಳಿ, ಹೋಗ್ತಾನೇಳಿ, ಮಾಡ್ತ ನೇಳಿ ಎಂದೂ ಹೆಂಗಸಾಗಿದ್ದು ಹಿರಿಯಳಾಗಿದ್ದರೆ ಯ್ಯಾಕವ್ವ, ಯ್ಯಾಕವಾ. ಯ್ಯಾನವ್ವ, ಯ್ಯಾನವ್ವಾ, ಕಿರಿಯಳಾಗಿದ್ದರೆ ಅದ್ಯಾಕೆಣ್ಣೇ, ಹೆಣ್ಣೇ, ಏಣ್ಣೇ ಕೇಳೆಣ್ಣೇ. ಬಾರೆಣ್ಣೇ, ನೋಡೆಣ್ಣೆ, ಹೋಗೆಣ್ಣೆ ಎಂದೂ ಕರೆಯುವುದನ್ನು ಕಾಣಬಹುದು. ಹೀಗೆ ಊರಿ ಗೊಂದು, ಜಾತಿಗೊಂದು, ಕೇರಿಗೊಂದು ಭಾಷಾಪ್ರಭೇದ ಇರುವುದನ್ನು ವಿವರಿಸಿ ತೋರಿಸಲು ಸಾಧ್ಯತೆಗಳು ಇಲ್ಲಿ ಹೆಚ್ಚಾಗಿವೆ.

ಇಲ್ಲಿ ತಿಂದ, ಬಂದ, ಹೋದ, ಕೇಳ್ದ, ಹೇಳ್ದ, ಮಾಡ್ದ ಎಂಬ ಭೂತಕಾಲ ರೂಪಗಳನ್ನು ಬನ್ನ, ತಿನ್ನ, ಹೋದ್ನ, ಕೇಳ್ದ್ನ, ಹೇಳ್ದ್ನ, ಮಾಡ್ನ ಎಂದೂ ಮಳವಳ್ಳಿ, ಟಿ.ನರಸೀಪುರ, ಯಳಂದೂರುಗಳಲ್ಲಿ ಇದೇ ರೂಪಗಳನ್ನು ಕೇಳ್ದ್ನೇಸಿ, ಹೇಳ್ದ್ನೇಳಿ, ಮಾಡ್ದ್ನೇಳಿ, ಹೋದ್ನೇಳಿ, ವಾದ್ನೇಳಿ, ತಿಂದ್ನೇಳಿ ಎಂದೂ ಕೊಟ್ಟೇಳಿ, ಕೇಳ್ದೇಳಿ, ನೋಡ್ದೇಳಿ, ಮಾಡ್ದೇಳಿ ಎಂದೂ ಬಳಸುವುದು ಒಂದೇ ಜಾತಿಯಲ್ಲಿ ಮಾತ್ರ ವಲ್ಲದೆ ಎಲ್ಲಾ ಹಿಂದುಳಿದ ಬೆಸ್ತ, ಕುಂಬಾರ, ಒಕ್ಕಲಿಗ, ಹರಿಜನ ಮುಂತಾದ ಜಾತಿ ಜನರಲ್ಲಿ ಬಳಸುವುದನ್ನು ಕಾಣಬಹುದು. ಮದ್ದೂರು, ನಾಗಮಂಗಲಗಳ ಕಡೆ ಕೊಟ್ಟೆ, ಬಂದ, ಇದ್ದೆ, ಕೇಳ್ದೆ, ಹೇಳ್ದೆ ಎಂಬ ರೂಪಗಳನ್ನು ಕೊಟ್ಟಿ, ಬಂದಿ, ಇದ್ದಿ, ಕೇಳ್ದಿ, ಹೇಳ್ದಿ ಎಂದೂ ಕೊಟ್ಟನು, ಬಂದನು, ಇದ್ದನು, ಕೇಳಿದನು, ಹೇಳಿ ದನು ಎಂಬವುಗಳನ್ನು ಕೊಟ್ನ, ಬಂದ್ನ, ಬನ್ನ, ಇದ್ನ, ಕೇಳ್ದ್ನ, ಹೇಳ್ದ್ನ ಎಂದೂ ಕೊಟ್ಟ, ಬಂದ, ಇದ್ದ, ಕೇಳ್ದ, ಹೇಳ್ದ ಎಂದೂ ಬಳಸುವುದು ತುಂಬ ರೂಢಿಯಲ್ಲಿವೆ.

ಒಕ್ಕಲಿಗರ, ಕುರುಬರ, ಬೆಸ್ತರ ಅವಿದ್ಯಾವಂತರು ಆಡುವ ಕನ್ನಡದಲ್ಲಿ ಸಾಕಷ್ಟು ವ್ಯತ್ಯಾಸ ಇರುವುದನ್ನು ಕಾಣಬಹುದು. ಮಳವಳ್ಳಿ, ಟಿ.ನರಸೀಪುರ, ಯಳಂದೂರು, ನಂಜನಗೂಡುಗಳ ಕಡೆ ಹರಿಜನ ಹಾಗೂ ಬೆಸ್ತರ ಜನಸಂಖ್ಯೆ ಹೆಚ್ಚು. ಅದೇ ಸ್ಥಳದಲ್ಲಿ ಕುರುಬರೂ, ಕುಂಬಾರರೂ ಇದ್ದಾರೆ. ಆದರೆ ಅವರ ಜನಸಂಖ್ಯೆ ಬಹಳ ಕಡಿಮೆ. ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಒಕ್ಕಲಿಗರ ಜನಸಂಖ್ಯೆ ಹೆಚ್ಚು. ಇವರ ಕನ್ನಡದಲ್ಲಿ ಸಾಕಷ್ಟು ವ್ಯತ್ಯಾಸವನ್ನು ಕಾಣಬಹುದು. ಒಕ್ಕಲಿಗ ಹೆಂಡತಿ ಯನ್ನು ಕರೆಯುವಾಗ ಲೇ, ಮೇ, ಮೀ, ಯಾರಮೇ, ಯಾರಮೀ, ಯಾರೇ, ಬಾರೆ, ಹೋಗೆ ಎಂದು ಕರೆದರೆ ಹೆಂಡತಿ ಗಂಡನನ್ನು ಬನ್ನಿ. ಹೋಗಿ, ಕೇಳಿ. ಹೇಳಿ ಎಂದು ಬಹುವಚನದಲ್ಲಿ ಕರೆಯುವಳು. ಕೆಲವು ಹಿಂದುಳಿದ ವರ್ಗದ ಹೆಂಗಸರು ಗಂಡನನ್ನು ತಿನ್ನು, ಹೇಳು, ಕೇಳು, ನೀನು, ಬಾ, ಹೋಗು ಎಂದು ಏಕವಚನದಲ್ಲಿ ಕರೆಯುವುದನ್ನು

ಇಲ್ಲಿ ಕಾಣುತ್ತೇವೆ. ಹಿಂದುಳಿದವರಲ್ಲಿ ಗಂಡನು ಹೆಂಡತಿಯನ್ನು ಕರೆಯುವಾಗ ನಮ್ಮೊಳು, ನಮ್ಮ ಸಯೊಳು, ನಮ್ಮಂಗ್ಸು ಎಂದೂ ಕೆಲವು ವಿದ್ಯಾವಂತರು, ಹೆಂಡತಿಯನ್ನು ಲೇ, ಬಾರೆ, ಹೋಗೆ ಎಂದೂ ಗಂಡನನ್ನು ಹೆಂಗಸರು ಬನ್ನಿ, ಬರ್ರಿ, ರ್ರೀ, ಯಾಕ್ರೀ ಎಂದೂ ಕರೆಯುವುದು ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹಿಂದುಳಿದವರು ಮಗನನ್ನು ಮಗ, ತಮ್ಮಯ್ಯ, ಪುಟ್ಟ, ಮಗಮರಿ, ಲೋ ತಮ್ಮಯ್ಯ, ಲೇ ಮಗ, ಲೇ ಮರಿ ಎಂದು ಕರೆದರೆ ಮಗಳನ್ನು ಯಾಕವ್ವ, ಯಾಕ ಮಗ, ಏನಮ್ಮ, ಏನಮ್ಮೆ, ಯೇನಮ್ಮಿ, ಯೇನಮ್ಮೇ, ಏನವ್ವ, ಬಾರವ್ವ ಎಂದು ಕರೆಯುವುದನ್ನು ಕಾಣಬಹುದು. ತಂದೆಯನ್ನು ಮಗ ಅಪ್ಪ, ಅಣ್ಣ, ಏನಪ್ಪ, ಏನಣ್ಣ, ಯಾನಪ್ಪ, ಯಾಕಪ್ಪ; ತಾಯಿಯನ್ನು ಅವ್ವ, ಯೇನವ್ವ, ಯಾಕವ್ವ ಎಂದೂ ತಾತ ಮತ್ತು ಅಜ್ಜಿಯನ್ನು ಅಯ್ಯ, ಅಮ್ಮ ಎಂದರೆ ಮುಂದುವರಿದ ಜನಾಂಗ ಅಜ್ಜ, ತಾತಾ, ಅಯ್ಯ, ಅಮ್ಮ, ಅವ್ವ, ಅಜ್ಜಿ ಎಂದು ಕರೆಯುವುದನ್ನು ಇಲ್ಲಿ ಕಾಣಬಹುದಾಗಿದೆ. ಅವಿದ್ಯಾವಂತರ ಮಕ್ಕಳು ಅಪ್ಪ, ಅಯ್ಯ, ಅಣ್ಣ, ಹಾಗೂ ಅವ್ವ, ಅಮ್ಮ, ಅಕ್ಕ ಎಂಬ ಸಂಬಂಧಸೂಚಕ ರೂಪಗಳನ್ನು ಲಪ್ಪ, ಲಣ್ಣ, ಲಯ್ಯ, ಲವ್ವ, ಲಕ್ಕ, ಲಮ್ಮ ಎಂದು ಕರೆಯುವರು. ಮುಂದುವರಿದ ಜನಾಂಗವು ತಂದೆ ತಾಯಿಯನ್ನು ಅಣ್ಣ, ಅಕ್ಕ ಎಂದರೆ ಹಿಂದುಳಿದವರು ಅಪ್ಪ, ಅವ್ವ ಎಂದು ಕರೆಯುವುದು ಹೆಚ್ಚು ರೂಢಿಯಲ್ಲಿರುವುದನ್ನು ಕಾಣಬಹುದು.

ಶ್ರೀರಂಗಪಟ್ಟಣ, ಮಂಡ್ಯ, ನಾಗಮಂಗಲ, ಪಾಂಡವಪುರ ಕಡೆಗಳಲ್ಲಿ ಬೇರೆಯವರನ್ನು ಕರೆಯುವಾಗ ತುಂಬ ದೀರ್ಘವಾಗಿ ಬಾ ಅಣ್ಣಾ, ಬಾಣ್ಣಾ, ಯ್ಯಾಕಣ್ಣಾ, ಏನಣ್ಣಾ, ಯಾರಣ್ಣಾ ಎಂದು ಉಚ್ಚರಿಸಿದರೆ ಅದೇ ಪ್ರದೇಶದ ಕೆಲವು ಕಡೆಗಳಲ್ಲಿ ಯಾಕಪ್ಪಾ, ಯಾರಪ್ಪಾ, ಎಲ್ಲಪ್ಪಾ, ಯ್ಯಾರಪ್ಪ, ಯ್ಯಾಕಪ್ಪ, ಎಲ್ಲಪ್ಪ, ಎಂದೂ ಯಾಕಕ್ಕಾ, ಯಾರಕ್ಕಾ, ಬಾರಕ್ಕಾ, ಕೇಳಕ್ಕಾ, ಎಂದೂ ಕರೆಯುವರು. ಮಂಡ್ಯ, ಮದ್ದೂರು, ಚನ್ನಪಟ್ಟಣಗಳ ಕಡೆಗಳಲ್ಲಿ ಆದರೆ ಎಂಬುದನ್ನು ಆದ್ರೆ, ಇದ್ದರೆ ಎಂಬುದನ್ನು ಇದ್ರೆ, ಕೇಳಿದರೆ ಎಂಬುದನ್ನು ಕೇಳದ್ರೆ, ಕೊಟ್ಟರೆ ಎಂಬುದನ್ನು ಕೊಟ್ರೆ ಎಂದೂ ಅದೇ ಬೇರೆ ಕಡೆಗಳಲ್ಲಿ ಆದ್ಲೆ, ಇದ್ಲೆ, ಕೇಳದ್ಲೆ, ಕೊಟ್ಲೆ, ಬಂದ್ಲೆ ಎಂದೂ ಬಳಸುವುದು ರೂಢಿಯಲ್ಲಿದೆ.

ಈ ಪ್ರದೇಶದಲ್ಲಿ ಮೇಲೆ ಹೇಳಿದ ಕ್ರಿಯಾಪದಗಳ ಜೊತೆಗೆ ಇನ್ನೂ ಕೆಲವು ಕ್ರಿಯಾಪದಗಳ ಉಚ್ಚಾರವನ್ನು ಗಮನಿಸಿದಾಗ ಕೆಲವು ಹೊಸವಿಚಾರಗಳು ಬೆಳಕಿಗೆ ಬರುತ್ತವೆ. ಬ್ರಾಹ್ಮಣರು, ಲಿಂಗಾಯತರು ಬಳಸುವ ಹೋಗುತ್ತೇನೆ, ಬರುತ್ತೇನೆ, ಹೇಳುತ್ತೇನೆ, ಕೇಳುತ್ತೇನೆ, ನೋಡುತ್ತೇವೆ, ಹೋಗೋಣ, ಬರೋಣ, ಹೇಳೋಣ, ಕೇಳೋಣ, ನೋಡೋಣ ಎಂಬ ರೂಪಗಳನ್ನೂ ಹಳ್ಳಿಯ ಅವಿದ್ಯಾವಂತರು ಹಾಗೂ ಹಿಂದುಳಿದ ಜನರು ಬರ್ತೀನೀ, ಹೊಯ್ತೀನೀ, ಕೇಳ್ತೀನೀ, ಹೇಳ್ತೀನೀ, ಮಾಡ್ತೀನಿ, ಬರ್ತಿನಿ, ಹೋಯ್ತಿನಿ, ಕೇಳ್ತಿನಿ, ಹೇಳ್ತಿನಿ, ಮಾಡ್ತಿನಿ, ಬರ್ತೀನಿ, ಹೊಯ್ತೀನಿ, ಕೇಳ್ತೀನಿ,

ಹೇಳ್ತೀನಿ, ಮಾಡ್ತೀನಿ, ಎಂದೂ ಹೋಗ್ವ, ಬರ್‍ವ, ಹೇಳ್ವ, ಮಾಡ್ವ, ಕೇಳ್ವ, ಹೋಗ್ವಾ, ಬರ್‍ವಾ, ಹೇಳ್ವಾ, ಮಾಡ್ವಾ, ಕೇಳ್ವಾ ಎಂದೂ ಬಳಸುವುದು ಹೆಚ್ಚು. ನಾಗಮಂಗಲ, ಮದ್ದೂರುಗಳ ಕಡೆ ಬತ್ತೀನಿ, ಹೇಳ್ತೀನಿ, ಕೊಡ್ತೀನಿ, ನೋಡ್ತೀನಿ, ಕೇಳ್ತೀನಿ, ಹೋಗಾನ, ಹೊಗನ, ಹೊಗುನ, ಬರನ, ಬರನಾ, ಬರುನ, ಹೇಳನ, ಹೇಳನಾ, ಹೇಳುನ, ಕೇಳನ, ಕೇಳನಾ, ಕೇಳುನ, ನೋಡನ, ನೋಡನಾ ಎಂದರೆ ಅವನ್ನೇ ಮದ್ದೂರು ಕಡೆಗಳಲ್ಲಿ ಹೋಗುವು, ಬರುವು, ಹೇಳುವು, ಕೇಳುವು, ನೋಡುವು ಎಂದೂ ಇವನ್ನೇ ಚನ್ನಪಟ್ಟಣಗಳ ಕಡೆಗಳಲ್ಲಿ ಹೋಗ್ವ, ಬರ್‍ವ, ಹೇಳ್ವ, ಕೇಳ್ವ, ನೋಡ್ವ ಎಂದೂ ಮುಂತಾಗಿ ಬಳಸುವುದನ್ನು ಅಲ್ಲಲ್ಲಿ ಕಾಣುತ್ತೇವೆ. ಅಂತೆಯೇ ಮಂಡ್ಯ, ಬೆಂಗಳೂರು ಕಡೆಗಳಲ್ಲಿ ಬಳಕೆಯಲ್ಲಿರುವ ಬಂದೆ, ಹೋದೆ, ಇದ್ದೆ, ಕೇಳ್ದೆ, ಹೇಳ್ದೆ ಎಂಬ ರೂಪಗಳನ್ನು ಮದ್ದೂರಿನ ಕೆಲವು ಕಡೆ ಹೋದಿ, ಬಂದಿ, ಇದ್ದಿ, ಕೇಳ್ದಿ, ಹೇಳ್ದಿ ಎನ್ನು ವುದರ ಜೊತೆಗೆ ಮಳವಳ್ಳಿಯ ಕಡೆ ಬಂದ್ಯ, ಹೋದ್ಯ, ಇದ್ಯ, ಕೇಳ್ದ್ಯ, ಹೇಳ್ದ್ಯ ಎಂದೂ ಯಳಂದೂರು, ಚಾಮರಾಜನಗರಗಳ ಕಡೆ ಬಂದೆಯ್, ಹೋದೆಯ್, ಇದ್ದೆಯ್, ಕೇಳ್ದಯ್ ಎಂದೂ ಬಳಸುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಮಂಡ್ಯ ಜಿಲ್ಲೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ಬಂದಿದ್ದೇನೆ, ಕೇಳಿದ್ದೇನೆ, ಹೇಳಿದ್ದೇನೆ, ನೋಡಿದ್ದೇನೆ, ಮಾಡಿದ್ದೇನೆ ಎಂಬ ರೂಪಗಳನ್ನು ಬಂದಿವ್ನಿ, ಕೇಳಿವ್ನಿ, ಹೇಳಿವ್ನಿ, ನೋಡಿವ್ನಿ, ಮಾಡಿವ್ನಿ ಎಂದು ಉಪಯೋಗಿಸಿದರೆ ಅದನ್ನೇ ಬಹುವಚನದಲ್ಲಿ ಬಂದಿವಿ, ಕೇಳಿವಿ, ಹೇಳಿವಿ, ಮಾಡಿವಿ ಎಂದೂ ಬಳಸುವರು. ಹಾಗೆಯೇ ಕೇಳುವುದಿಲ್ಲ, ಹೋಗುವುದಿಲ್ಲ, ಹೇಳುವುದಿಲ್ಲ, ಮಾಡುವುದಿಲ್ಲ, ನೋಡುವುದಿಲ್ಲ ಎಂಬಿತ್ಯಾದಿ ರೂಪಗಳನ್ನು ಮದ್ದೂರು, ಚೆನ್ನಪಟ್ಟಣಗಳ ಕಡೆ ಕೇಳುದಿಲ್ಲ, ಹೇಳುದಿಲ್ಲ, ಮಾಡುದಿಲ್ಲ, ನೋಡುದಿಲ್ಲ ಎಂದರೆ ಮಂಡ್ಯ, ನಾಗಮಂಗಲಗಳ ಕಡೆಗಳಲ್ಲಿ ಬರಕ್ಕಿಲ್ಲ, ಹೇಳಕ್ಕಿಲ್ಲ, ಕೇಳಕ್ಕಿಲ್ಲ, ನೋಡಕ್ಕಿಲ್ಲ, ಮಾಡಕ್ಕಿಲ್ಲ, ಬರೊಲ್ಲ, ಹೇಳೊಲ್ಲ, ಕೇಳೊಲ್ಲ, ಮಾಡೊಲ್ಲ, ನೋಡೊಲ್ಲ ಎಂದು ಮುಂತಾಗಿ ಬಳಸುವರು.

ಈಗ ಈ ಪ್ರದೇಶದಲ್ಲಿ ದೊರೆಯುವ ಕೆಲವು ಊರಿನ ಹೆಸರುಗಳನ್ನು ಕುರಿತು ಆಲೋಚಿಸೋಣ. ಈ ಪ್ರದೇಶದ ಎಲ್ಲಾ ಊರುಗಳ ಹೆಸರುಗಳನ್ನು ಪಟ್ಟಿಮಾಡಿ ಆಲೋಚಿಸಲು ಹೊರಟಾಗ ಅನೇಕ ಹೊಸಹೊಸ ವಿಚಾರಗಳು ಬೆಳಕಿಗೆ ಬರುತ್ತವೆ. ಗೆಜ್ಜಲಗೆರೆ, ಮಂದಗೆರೆ, ಆಣೆಗೆರೆ, ಒಂದಲಗೆರೆ, ಮುಂದಗೆರೆ, ಗೌಡಗೆರೆ, ತೂಬನಕೆರೆ, ಬೂಕನಕೆರೆ, ಬೆಳ್ಕೆರೆ, ಮತ್ತಿಕೆರೆ ಮುಂತಾದ ಊರುಗಳ ಹೆಸರುಗಳನ್ನು ಪರಿಶೀಲಿಸಿದಾಗ ಕೆರೆ, ಗೆರೆ ಎಂಬ ಎರಡು ರೂಪಗಳು ಇರುವುದು ದೊರೆಯುತ್ತವೆ. ಸಂಧಿ ಕಾರ್ಯದಲ್ಲಿ ಕೆರೆ ಎಂಬುದು ಗೆರೆ ಎಂದು ವ್ಯತ್ಯಾಸಗೊಂಡಿದೆ. ಕೆರೆ ಎಂದರೆ ಗೋವುಗಳ ಸಮೂಹ, ಗೋವುಗಳ ಹಿಂಡು, ನೀರು ನಿಲ್ಲುವ ಸ್ಥಳ, ದನಗಳ ಹಟ್ಟಿ, ದನಗಳ ಕೊಟ್ಟಿಗೆ, ದನಕರಗಳನ್ನು ಕಟ್ಟುವ ಸ್ಥಳ ಮುಂತಾದ ಅರ್ಥಗಳಿವೆ. ಈ ಕೆರೆ ಎಂಬ

ಪದ ಆ ಮೇಲಿನ ಅರ್ಥವನ್ನು ಕಳೆದುಕೊಂಡು ಗ್ರಾಮ, ಹಳ್ಳಿ, ಊರು ಎಂಬ ಅರ್ಥವನ್ನು ಸಂಪಾದಿಸಿಕೊಂಡಿದೆ. ಅಲ್ಲದೆ ಆ ಬೇರೆಬೇರೆ ಊರಿನ ಹೆಸರುಗಳ ಅಂತ್ಯದಲ್ಲಿ ಬಂದಿದೆ. ಕೆರೆ ಅಥವಾ ಗೆರೆ ಎಂಬುದರ ಪೂರ್ವದಲ್ಲಿ ಕೆಲವು ವಿಶೇಷ ವಸ್ತು, ವ್ಯಕ್ತಿ, ಸ್ಥಳಗಳ ಗುಣ ಇತ್ಯಾದಿಗಳಿಗೆ ಸಂಬಂಧಿಸಿದ ರೂಪಗಳಾಗಿ ಬಂದು ಸ್ಥಳನಾಮವಾಗಿದೆ. ಕೆರೆ ಇದ್ದು ಚಿಕ್ಕದಾಗಿರುವ ಊರೇ ಚಿಕ್ಕೆರೆ, ಗೌಡನ ಹೆಸರಿನ ಊರೇ ಗೌಡಗೆರೆ. ಹೀಗೆ ಹಲವಾರು ನಾಮಪದ ಹಾಗೂ ವಿಶೇಷಣ ಮುಂತಾದವುಗಳು ಕೆರೆ ಹಾಗೂ ಗೆರೆ ಎಂಬುವುಗಳ ಪೂರ್ವದಲ್ಲಿ ಬಂದು, ಊರ ಹೆಸರುಗಳಾಗಿ ಬಳಕೆಗೆ ಬಂದಿರುವುದನ್ನು ಕಾಣುತ್ತೇವೆ.

ಹೀಗೆ ಸ್ಥಳನಾಮಗಳು ವಿಶೇಷವಾಗಿ ಯಾರಾದರೊಬ್ಬ ಗೌಡನ ಅಥವಾ ಪಟೇಲನ, ವ್ಯಕ್ತಿಯ ಅಥವಾ ಸ್ಥಳದ ಇಲ್ಲವೇ ವಸ್ತುವಿನ ವಿಶಿಷ್ಟ ಗುಣಗಳಿಂದ ಊರುಗಳ ಅಂಕಿತ ಇಲ್ಲವೇ ಅನ್ವರ್ಥನಾಮಗಳಾಗಿದ್ದು ಆ ಹೆಸರುಗಳ ಅಂತ್ಯದಲ್ಲಿ ಪುರ, ಹಳ್ಳಿ, ದೊಡ್ಡಿ, ಊರು, ಗ್ರಾಮ, ಗಾಮ, ಗಾವ, ಗಾವಲು, ಗಾಲ, ಗಾವಿ, ಗಾಲು, ಪಲ್ಲಿ, ಸಂದ್ರ, ಕೊಪ್ಪಲು, ಗೂಡು, ವಾಡಿ, ಪೇಟೆ, ನಗರ, ಕೋಟೆ, ದುರ್ಗ, ಪಟ್ಟಣ, ಆರ, ಹುಂಡಿ, ಅಗ್ರಾರ, ಕುಂದ, ಗುಂದ ಮುಂತಾದ ರೂಪಗಳು ಬಂದು ಬೇರೆಬೇರೆ ಊರಿನ ಹೆಸರುಗಳಾಗಿವೆ ಎಂಬುದು ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

ಈಗ ಹಳ್ಳಿ, ಊರು ಎಂಬ ರೂಪಗಳುಳ್ಳ ಊರಿನ ಹೆಸರುಗಳನ್ನು ಗಮನಿಸಿ. ಹಳ್ಳಿ, ಊರು ಎಂದರೆ ಗ್ರಾಮ, ವಾಸಸ್ಥಳ ಎಂದರ್ಥ. ಹಳ್ಳಿ ಎಂಬುದು ಪಲ್ಲಿ ಅಥವಾ ಪಳ್ಳಿಯಿಂದ ಆದದ್ದು. ಪಲ್ಲಿ, ತೆಲುಗಿನ ಪದ; ಬಾಗೆಪಲ್ಲಿ. ಪಳ್ಳಿ ತಮಿಳಿನ ಪದ; ತಿರುಚನಾಪಳ್ಳಿ. ಈ ಪಲ್ಲಿ ಅಥವಾ ಪಳ್ಳಿಗಳಿಂದ ವಿಕಾಸಗೊಂಡ ಹಳ್ಳಿ ಕನ್ನಡ ಪದವಾಗಿದ್ದು ಅನೇಕ ಊರುಗಳ ಅಂತ್ಯದಲ್ಲಿ ಬಂದು ಬೇರೆಬೇರೆ ಸ್ಥಳಗಳ ಹೆಸರುಗಳಾಗಿವೆ. ಕೊಡಳ್ಳಿ, ನಗುನಳ್ಳಿ, ಶೆಟ್ಟಳ್ಳಿ, ಮೊಗೆನಳ್ಳಿ, ಬ್ಯಾಡರಹಳ್ಳಿ ಹೊಸಳ್ಳಿ, ಎರಳ್ಳಿ, ಕಾಳೆನಳ್ಳಿ, ಬಾಳೆನಳ್ಳಿ, ಕೋಗಿನಹಳ್ಳಿ, ಮಳವಳ್ಳಿ, ಕಾಡನಹಳ್ಳಿ, ಇತ್ಯಾದಿ ಊರಿನ ಹೆಸರುಗಳು ಈ ಪ್ರದೇಶದಲ್ಲಿ ದೊರೆಯುತ್ತವೆ. ಹೊಸೂರು, ಮೂಗೂರು, ಕೋಲೂರು, ಹಬ್ಬೂರು, ಹರೂರು, ಬೇವೂರು, ಕೊಡ್ಲೂರು, ಹಲಗೂರು, ಸರಗೂರು ಮುಂತಾದ ಊರುಗಳ ಹೆಸರಿನ ಅಂತ್ಯದಲ್ಲಿ ಊರು ಎಂಬ ರೂಪವಿದ್ದು ಅವು ಸ್ಥಳನಾಮಗಳಾಗಿರುವುದು ಕಾಣಸಿಗುತ್ತದೆ.

ಈಗ ಗ್ರಾಮ, ಗಾಲ, ಗಾವಿ, ಗಾವ, ಗಾಲು, ಗಾವಲು ಎಂಬ ರೂಪಗಳೆಲ್ಲವೂ ಸಂಸ್ಕೃತದ ಗ್ರಾಮ ಎಂಬುದರಿಂದ ಬಂದವುಗಳು. ಅವುಗಳ ಅರ್ಥ ಮಾತ್ರ ಒಂದೇ. ಸಾಲಿಗ್ರಾಮ, ಹೊಸಗ್ರಾಮ, ಸೀಲಗಾಮ, ಅಸಗಾವಿ, ಕೊಳ್ಳೇಗಾಲ, ಪೂರಿಗಾಲ,

ಪೂತ್ತೆಗಾಲ, ಚಂದ್ಗಾಲು, ಮುಡುವಾಗಲು ಇತ್ಯಾದಿ ಹೆಸರುಗಳ ಅಂತ್ಯದಲ್ಲಿ ಆ ವಿವಿಧ ರೂಪಗಳು ಬಂದು ಸ್ಥಳನಾಮಗಳಾಗಿವೆ. ಪುರ ಎಂಬುದು ಊರಿಗಿಂತ ದೊಡ್ಡದು, ಸ್ವಲ್ಪ ದೊಡ್ಡ ಹಳ್ಳಿ. ಪುರ ಎಂದರೆ ಗ್ರಾಮ, ಹಳ್ಳಿ, ದೊಡ್ಡಿ ಎಂಬರ್ಥ ವಿದೆ. ಹಂಪಲಾಪುರ, ಕ್ಯಾಸಪುರ, ಕವಣಪುರ, ಬಂಡಿಪುರ, ಕೀಳನಪುರ, ಮೇಗಳಪುರ, ಪಾಂಡವಪುರ ಇತ್ಯಾದಿ ಊರಿನ ಹೆಸರುಗಳಲ್ಲಿ ಪುರ ಎಂಬ ರೂಪವು ಇದೆ. ಇದೇ ಪ್ರದೇಶದಲ್ಲಿ ನಗರ, ದುರ್ಗ, ಕೋಟೆ, ಕುಂದ, ಗುಂದ, ಗಿರಿ ಎಂಬ ರೂಪಗಳು ಕೂಡ ಊರು, ಹಳ್ಳಿ, ಗ್ರಾಮ ಎಂಬ ರೂಪಗಳಿಗೆ ಸಂವಾದಿಯಾಗಿ ಬಳಸಲ್ಪಡುತ್ತಿವೆ. ಆದರೆ ಅವು ನಿವಾಸ, ಗ್ರಾಮ, ವಾಸಸ್ಥಳ ಎಂಬರ್ಥ ಪಡೆದುಕೊಂಡಿವೆ. ದುರ್ಗ, ಕೋಟೆ, ಗಿರಿ, ಕುಂದ, ಗುಂದ ಎಂಬ ರೂಪಗಳು ಸಾಮಾನ್ಯವಾಗಿ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ ನಿರ್ಮಿಸಿಕೊಂಡ ಊರುಗಳು. ಕೋಟೆಯುಳ್ಳ ಊರು ಅಥವಾ ಕೋಟೆ ಯಂತಿರುವ ಊರು, ಇಲ್ಲವೇ ಯಾವುದಾದರೂ ಒಬ್ಬ ಪಾಳೆಗಾರನ ಕೋಟೆ ಇದ್ದು ಅದು ಆ ಊರಿನ ಹೆಸರಾಗಿರುವುದು ಇಲ್ಲಿ ಕಂಡುಬರುವುದು ಹೆಚ್ಚು. ಹೆಗ್ಗಡದೇವನ ಕೋಟೆ, ಹೊಸಕೋಟೆ, ಮೇಲುಕೋಟೆ ಎಂಬಿತ್ಯಾದಿಗಳಲ್ಲಿ ಕೋಟೆ ಎಂಬುದೂ ಹುಲಿಯೂರುದುರ್ಗ, ರಾಮದುರ್ಗ ಎಂಬಿತ್ಯಾದಿಗಳಲ್ಲಿ ದುರ್ಗ ಎಂಬ ರೂಪವೂ ಮಾದಯ್ಯನಗಿರಿ, ರಾಮಗಿರಿ, ಬಿಳಿಗಿರಿ, ಹೇಮಗಿರಿ ಎಂಬಿತ್ಯಾದಿಗಳಲ್ಲಿ ಗಿರಿ ಎಂಬ ರೂಪವೂ ಮಂಕುಂದು, ಉಕುಂದ, ಸವಲಗುಂದ ಮುಂತಾದವುಗಳಲ್ಲಿ ಕುಂದ, ಗುಂದ ಎಂಬ ರೂಪಗಳೂ ಸಿದ್ಧವಾಗಿರುವ ಸ್ಥಳನಾಮಗಳು ಮಂಡ್ಯದ ಕೆಲವು ಕಡೆ ಕಾಣಸಿಗುತ್ತವೆ. ನಗರ ಪಟ್ಟಣಕ್ಕಿಂತ ದೊಡ್ಡದು. ಪಟ್ಟಣ, ಪೇಟೆಯುಳ್ಳ ಸ್ಥಳ. ಪೇಟೆ ಎಂದರೆ ಅಂಗಡಿಬೀದಿ ಇರುವ ಎಂದರ್ಥವಿದೆ. ಶ್ರೀರಂಗಪಟ್ಟಣ, ಬೈರಾ ಪಟ್ಟಣ, ಬಸವಾಪಟ್ಟಣ, ಚನ್ನಪಟ್ಟಣ, ಮಲ್ಲಿಪಟ್ಟಣ ಇತ್ಯಾದಿಗಳಲ್ಲಿ ಪಟ್ಟಣ ಎಂಬ ರೂಪವೂ ಚಾಮರಾಜನಗರ, ರಾಮನಗರ, ಕೆ.ಆರ್.ನಗರ ಎಂಬಿತ್ಯಾದಿಗಳಲ್ಲಿ ನಗರ ಎಂಬ ರೂಪವೂ ಸೋಮವಾರಪೇಟೆ, ಶನಿವಾರಪೇಟೆ, ಮಂಗಳವಾರಪೇಟೆ ಎಂಬಿತ್ಯಾದಿ ಸ್ಥಳನಾಮಗಳಲ್ಲಿ ಪೇಟೆ ಎಂಬ ರೂಪವೂ ಇರುವುದನ್ನು ಈ ಪ್ರದೇಶದ ಕೆಲವು ಭಾಗಗಳಲ್ಲಿ ನೋಡುತ್ತೇವೆ.

ಆ ಬೇರೆಬೇರೆ ಊರುಗಳ ಅಂತ್ಯದಲ್ಲಿ ದೊರೆಯುವ ಪದಗಳಲ್ಲಿ ಕೆಲವು ಸಂಸ್ಕೃತ ಪದಗಳು ಕೆಲವು ದ್ರಾವಿಡ ಪದಗಳು ದೊರೆಯುತ್ತವೆಯಾದರೂ ಅವು ತಮ್ಮ ತಮ್ಮ ಮೂಲ ಅರ್ಥವನ್ನು ಕಳೆದುಕೊಂಡು ಪರಿಸರಕ್ಕೆ ತಕ್ಕ ಅರ್ಥವನ್ನು ಸಂಪಾದಿಸಿ ಕೊಂಡಿವೆ. ನಗರ ಎನ್ನುವ ಸಂಸ್ಕೃತಪದ; ಪಟ್ಟಣಕ್ಕಿಂತ ದೊಡ್ಡದು. ಹಾಗೆಯೇ ಪುರ ಎಂಬ ಸಂಸ್ಕೃತಪದ ಊರು, ಹಳ್ಳಿ, ದೊಡ್ಡಿಗಳಿಗಿಂತ ದೊಡ್ಡದು. ಈ ರೀತಿ ಯಲ್ಲಿ ಆ ಮೇಲಿನ ಬೇರೆ ಬೇರೆ ರೂಪಗಳ ಅರ್ಥವನ್ನು ಪರಿಸರಕ್ಕೆ ತಕ್ಕಂತೆ ವ್ಯತ್ಯಾಸ ಮಾಡಿಕೊಳ್ಳುತ್ತಾ ಹೋಗಬೇಕಾಗುತ್ತದೆ. ಇವುಗಳ ಹಿನ್ನೆಲೆಯಲ್ಲಿ ಅಲ್ಲಿನ ಜನರ ಸಮಾಜ,

ಸಂಸ್ಕೃತಿ, ಸಂಪ್ರದಾಯ, ಜೀವನ, ಆಚಾರ-ವ್ಯವಹಾರ ಇತ್ಯಾದಿಗಳ ಪ್ರಭಾವ ಇದ್ದೇ ಇರುತ್ತವೆಯಾದರೂ ಅದನ್ನು ಸೂಕ್ಷ್ಮವಾಗಿ ತಿಳಿಯಲು ಹೊರಟಾಗ ಸ್ಥಳನಾಮಗಳ ಹಿನ್ನೆಲೆಯ ಪೂರ್ಣಚಿತ್ರ ತಿಳಿದುಬರುವುದರಲ್ಲಿ ಸಂಶಯವಿಲ್ಲ.

ಪನ್ನೆದೊಡ್ಡಿ, ಹುಚ್ಚಯ್ಯನದೊಡ್ಡಿ, ಕಟ್ಟೆದೊಡ್ಡಿ, ಕಾಳಮುದ್ದನದೊಡ್ಡಿ, ವೊಟ್ಟೆದೊಡ್ಡಿ ಮುಂತಾದ ಊರಿನ ಹೆಸರುಗಳ ಅಂತ್ಯದಲ್ಲಿ ದೊಡ್ಡಿ ಎಂಬ ಕನ್ನಡಪದವಿದೆ. ಇದು ಊರಿಗಿಂತ ಅಥವಾ ಹಳ್ಳಿಗಿಂತ ತುಂಬ ಚಿಕ್ಕದು. ಅಲ್ಲಿ ಜನಸಂಖ್ಯೆ, ಮನೆಗಳು ಬಹಳ ಕಡಿಮೆ ಇರುತ್ತವೆ. ಇವು ಊರಿಗೊಂದು, ಹಳ್ಳಿಗೊಂದು ಹೊಸದಾಗಿ ಹುಟ್ಟಿಕೊಂಡ ದೊಡ್ಡಿಗಳು. ಅವೇ ಆ ಊರಿನ ಹೆಸರುಗಳು ಆಗಿವೆ. ಹನುಮಾಪುರ ದೊಡ್ಡಿ. ಹಬ್ಬೂರುದೊಡ್ಡಿ, ಹೊಸೂರುದೊಡ್ಡಿ, ಮೂಡಲ್ಲಳ್ಳಿದೊಡ್ಡಿ, ಕ್ಯಾಸಪುರ ದೊಡ್ಡಿ, ಕಟ್ಟೆಹಳ್ಳಿದೊಡ್ಡಿ ಮುಂತಾದ ಊರಿನ ಹೆಸರುಗಳಲ್ಲಿ ಆ ವಿಚಾರವನ್ನು ತಿಳಿಯಲು ಸಾಧ್ಯ. ಇವುಗಳಿಂಧ ತಿಳಿಯಬಹುದಾದ ವಿಚಾರವೇನೆಂದರೆ ದೊಡ್ಡಿ ಮತ್ತು ಹಳ್ಳಿ, ದೊಡ್ಡಿ ಮತ್ತು ಊರು ಎಂಬ ರೂಪಗಳು ಇಲ್ಲಿ ದೊರೆಯುತ್ತವೆಯಾದರೂ ಅವು ಊರಿಗೊಂದು, ಹಳ್ಳಿಗೊಂದು ಹೊಸದಾಗಿ ಹುಟ್ಟಿಕೊಂಡವುಗಳೇ ಆಗಿರುತ್ತವೆ. ಹೊಸಹಳ್ಳಿಗೊಂದು ದೊಡ್ಡಿಯೇ ಹೊಸಳ್ಳಿದೊಡ್ಡಿ, ಹಬ್ಬೂರಿಗೊಂದು ದೊಡ್ಡಿಯೇ ಹಬ್ಬೂರುದೊಡ್ಡಿ ಎಂದಾಗಿರಲು ಸಾಧ್ಯತೆಗಳಿವೆ. ಅಂತೂ ದೊಡ್ಡಿಯು ಹಳ್ಳಿ ಅಥವಾ ಊರಿಗಿಂತ ತುಂಬ ಚಿಕ್ಕದು. ಒಕ್ಕಲು ಕಡಿಮೆ. ಮನೆಗಳು ಕಡಿಮೆ. ಅಲ್ಲಿ ಹಳ್ಳಿ, ಊರು, ಪುರಗಳು ಹಿಂದೆ ಇದ್ದು ಅವು ಕಾಲಕ್ರಮೇಣ ಹಾಳಾಗಿ ಅವುಗಳ ಸ್ಥಾನದಲ್ಲಿ ಇಂತಹ ದೊಡ್ಡಿಗಳು ಹುಟ್ಟಿಕೊಂಡಿರಲು ಸಾಧ್ಯತೆಗಳಿವೆ ಎಂದರೆ ಅತಿಶಯೋಕ್ತಿಯೇನಲ್ಲ.

ಇರಪ್‌ಸಂದ್ರ, ತಿಮ್ಮಸಂದ್ರ, ಚನ್ನಸಂದ್ರ, ಕ್ಯಾತಸಂದ್ರ, ಹಳ್ಳಸಂದ್ರ, ಇಳಿಸಂದ್ರ ಮುಂತಾದ ಊರಿನ ಹೆಸರುಗಳಲ್ಲಿ 'ಸಂದ್ರ' ಎಂಬ ರೂಪವಿದೆ. ಈ ರೂಪ 'ಸಮುದ್ರ' ಎಂಬುದರಿಂದ ಬಂದು ಎಂದುದು ಕೆಲವು ವಿದ್ವಾಂಸರ ಅಭಿಪ್ರಾಯವಾದರೆ, ಮತ್ತೆ ಕೆಲವು ವಿದ್ವಾಂಸರು ಸಂಸ್ಕೃತದ ಸಾಂದ್ರ ಅಥವಾ ಸಾಂದ್ರತೆ ಎಂಬುವಿಂದ ಬಂದುದು ಎನ್ನುತ್ತಾರೆ. ಸಮುದ್ರ ಎಂಬುದು ತನ್ನ ಹಿಂದಿನ ಅರ್ಥವನ್ನು ಕಳೆದುಕೊಂಡು ಇಲ್ಲಿ ಗ್ರಾಮ, ಹಳ್ಳಿ, ಊರು ಎಂಬರ್ಥವನ್ನು ಸಂಪಾದಿಸಿಕೊಂಡಿದೆ. ಸಿದ್ದಯ್ಯನ ಹುಂಡಿ, ಸಾಹುಕಾರ ಹುಂಡಿ. ಕೆಂಪಯ್ಯನ ಹುಂಡಿ, ಪುಟ್ಟಯ್ಯನ ಹುಂಡಿ ಮುಂತಾದ ಊರಿನ ಹೆಸರುಗಳ ಅಂತ್ಯದಲ್ಲಿ ಹುಂಡಿ ಎಂಬ ಕನ್ನಡಪದವಿದೆ. ಹುಂಡಿ ಎಂಬುದು ಗುಂಡಿ ಎಂಬುದರಿಂದ ಬಂದದ್ದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಮತಭೇದಗಳಿವೆ. ಆದರೂ ಈ ಹೆಸರಿನ ಸ್ಥಳಗಳು ಮೈಸೂರು ಜಿಲ್ಲೆಯಲ್ಲಿ ಸರ್ವೇಸಾಮಾನ್ಯ. ದಾಸನಕೊಪ್ಪಲು, ದೊಡ್ಡಕೊಪ್ಪಲು, ಕಸ್ತೂರಕೊಪ್ಪಲು, ಸಾಲೆಕೊಪ್ಪಲು, ಸಿದ್ದೇಗೌಡನಕೊಪ್ಪಲು, ಕುಂಬಾರಕೊಪ್ಪಲು, ಕನ್ನೇಗೌಡನ

ಕೊಪ್ಪ್ಲು ಮುಂತಾದ ಊರಿನ ಹೆಸರುಗಳ ಅಂತ್ಯದಲ್ಲಿ ಕೊಪ್ಪಲು ಎಂಬ ರೂಪವಿದೆ. ಕೊಪ್ಪಲು ಎಂದರೆ ಗಿಡಮರಗಳ ಗುಂಪು, ತೋಪು, ಕೊಂಪೆ, ಗೊಂಪೆ, ದನಗಳ ಹಟ್ಟಿ, ಮುಂತಾದ ಅರ್ಥಗಳಿವೆ. ಆದರೂ ಇದು ಈಗ ಹಳ್ಳಿ, ಗ್ರಾಮ, ಊರು ಎಂಬರ್ಥ ವನ್ನು ಸಂಪಾದಿಸಿಕೊಂಡಿದೆ. ಈ ಹೆಸರಿನ ಸ್ಥಳನಾಮಗಳು ಮೈಸೂರು ಜಿಲ್ಲೆಯಲ್ಲಿ ಹೆಚ್ಚಾಗಿ ದೊರೆಯುತ್ತವೆ ಎನ್ನಬಹುದು.

ಕೆರ್ಗೋಡು, ಹತ್ಗೋಡು, ಕುಂಬಗೋಡು, ಸಂಜನಗೂಡು, ಅರಕಲಗೂಡು, ಇಟ್ಟಿಗೆಗೂಡು ಮುಂತಾದ ಊರಿನ ಹೆಸರುಗಳನ್ನು ಗಮನಿಸಿದರೆ, ಇಲ್ಲಿ ಗೋಡು, ಗೂಡು ಎಂಬ ಎರಡು ರೂಪಗಳು ದೊರೆಯುತ್ತವೆ. ಗೂಡು ಎಂಬುದು ಸಂಧಿ ಕಾರ್ಯದಲ್ಲಿ ಗೋಡು ಎಂದಾಗಿದೆ. ಗೂಡು ಎಂಬುದಕ್ಕೆ ಪಕ್ಷಿಗಳ ನೆಲೆ, ಆಶ್ರಯ ನೀಡು, ಗೋಡೆಗಳುಳ್ಳ ಹಟ್ಟಿ, ಇತ್ಯಾದಿ ಅರ್ಥ ಇವೆಯಾದರೂ ಆ ವಿಶಿಷ್ಟ ಅರ್ಥ ವನ್ನು ಕಳೆದುಕೊಂಡು ಇದು ಗ್ರಾಮ, ಹಳ್ಳಿ, ಎಂಬರ್ಥವನ್ನು ಪಡೆದುಕೊಂಡಿದೆ.

ಹೊಸ ಅಗ್ರಾರ, ಆಲ್ಕೆರೆ ಅಗ್ರಾರ, ಶ್ರೀನಿವಾಸ ಅಗ್ರಾರ, ಜಗದಾಂಬ ಅಗ್ರಾರ, ಮುಂತಾದ ಸ್ಥಳನಾಮಗಳಲ್ಲಿ 'ಅಗ್ರಾರ' ಎಂಬ ರೂಪ ಇರುವುದನ್ನು ಕಾಣಬಹುದು. ಅಗ್ರಾರ ಎಂದರೆ, ಬ್ರಾಹ್ಮಣರ ಕೇರಿ, ದಾನಕೊಟ್ಟ ಭೂಮಿ, ಕೊಡಿಗೆ, ಬ್ರಾಹ್ಮಣರು ವಾಸಿಸುವ ಊರು ಎಂಬರ್ಥ ಇದ್ದು, ಈಗ ಅದು ಊರು ಎಂಬರ್ಥವನ್ನು ಪಡೆದು ಕೊಂಡಿದೆ. ನಾಗವಾರ, ದಸ್ವಾರ, ಕೈವಾರ, ಮುಂತಾದ ಸ್ಥಳನಾಮಗಳಲ್ಲಿ ಆರ ಎಂಬ ರೂಪವಿದೆ. ಅಗ್ರಾರ ಎಂಬುದನ್ನು ಅವಿದ್ಯಾವಂತರು ಉಚ್ಚಾರದಲ್ಲಿ ಆರ ಎಂದು ಉಚ್ಚರಿಸುತ್ತಿರುವ ಸಾಧ್ಯತೆಗಳು ಹೆಚ್ಚು. ಹುಲುವಾಡಿ, ಹೊನ್ನವಾಡಿ, ಮಾನಂದ್ವಾಡಿ, ಮುಂತಾದ ಊರಿನ ಹೆಸರುಗಳ ಅಂತ್ಯದಲ್ಲಿ ವಾಡಿ ಎಂಬ ರೂಪವಿದೆ. ಇದು ಸಂಸ್ಕೃತದ ವಾಟಿಕ ಎಂಬುದರಿಂದ ಬಂದಿದ್ದು, ವಾಟಿಕ ಎಂದರೆ, ವನ, ಕೈದೋಟ, ಮನೆ, ಎಂಬರ್ಥ ಇದೆ. ಆದರೂ ಇದು ಈಗ ಹಳ್ಳಿ, ಊರು ಎಂಬರ್ಥವನ್ನು ಪಡೆದುಕೊಂಡಿದೆ. ಹೆಬ್ಬಾಳು, ಕಡ್ತನಾಳು, ಹಸಬಾಳು, ಕತ್ತಾಳು, ತರಳಬಾಳು, ಮುಂತಾದ ಸ್ಥಳನಾಮಗಳಲ್ಲಿ ಆಳು ಎಂಬ ರೂಪವಿದೆ. ಇದು ಆರ ಅಥವಾ ಆಲ ಎಂಬುದರಿಂದ ಬಂದುದು ಎಂದು ಹಲವು ವಿದ್ವಾಂಸರ ಅಭಿಪ್ರಾಯ. ಆಳು ಎಂಬು ದಕ್ಕೆ ಊರು, ಕೇರಿ, ಊರಿನ ಒಂದು ಭಾಗ ಎಂಬರ್ಥ ಇದೆ. ಅದೇ ಆಳು, ಅಗ್ಲು ಎಂದಾಗಿ ತಡಕೋಗ್ಲು, ನಿಲವಾಗ್ಲು, ಮುಡುವಾಗ್ಲು, ಮುಳಬಾಗ್ಲು ಎಂದು ಮುಂತಾಗಿ ಊರಿನ ಹೆಸರುಗಳಾಗಿವೆ ಎಂಬುದು ಇಲ್ಲಿ ಸ್ಪಷ್ಟವಾಗಿವೆ.

ಮೇಲೆ ಹೇಳಿದ ಗ್ರಾಮ, ಗಾಮ, ಗಾವ, ಗಾವಲು, ಗಾಲು, ಪುರ. ಪೇಟೆ, ನಗರ, ಪಟ್ಟಣ, ಹಳ್ಳಿ, ಊರು, ದೊಡ್ಡಿ, ವಾಡಿ, ವಾರ, ಅಗ್ಲು, ಆಳು, ಸಂದ್ರ, ಪಲ್ಲಿ, ಪಳ್ಳಿ, ಹುಂಡಿ, ಗಿರಿ, ದುರ್ಗ, ಕೋಟೆ, ಕೊಪ್ಪಲು, ಗೂಡು, ಅಗ್ರಾರ, ಆರ,

ಅಲ. ಮುಂತಾದ ರೂಪಗಳು ಕೊಡುವ ಅರ್ಥವನ್ನು ಗಮನಿಸಿದರೆ ಅವು ಒಂದೇ ಅರ್ಥ ಹೊಂದಿದ್ದು ಪರ್ಯಾಯಪದಗಳಾಗಿ ಕಾಣಿಸಿಕೊಳ್ಳುತ್ತವೆ. ಇವು ಇಲ್ಲಿ ತಮ್ಮ ತಮ್ಮ ಮೂಲ ಅರ್ಥವನ್ನು ಕಳೆದುಕೊಂಡು ಹೊಸ ಬೇರೊಂದು ಅರ್ಥವನ್ನು ಸಂಪಾದಿಸಿಕೊಂಡಿವೆ ಎಂಬುವನ್ನು ಕಾಣಬಹುದು.

ಮೇಲೆ ಹೇಳಿದ ಆ ಬೇರೆ ಬೇರೆ ಊರುಗಳ ಹೆಸರುಗಳನ್ನು ಗಮನಿಸಿ ಅವುಗಳ ಅರ್ಥ. ಅವುಗಳ ಸಾಂಸ್ಕೃತಿಕ ಹಿನ್ನೆಲೆ ಮುಂತಾದವುಗಳನು ಪರಿಶೀಲಿಸುತ್ತಾ ವಿಶ್ಲೇಷಿಸುತ್ತಾ, ವಿವರಿಸಿ ವಿವೇಚಿಸುತ್ತಾ ಹೋದಂತೆಲ್ಲಾ ಅವುಗಳ ವಿಶೇಷತೆಯ ಹಿನ್ನೆಲೆ, ಆ ಹೆಸರುಗಳ ವಿಶಿಷ್ಟತೆ ಪೂರ್ಣವಾಗಿ ತಿಳಿದುಬರುವುದರಲ್ಲಿ ಅನುಮಾನವೇನಿಲ್ಲ. ಈ ದಿಕ್ಕಿನಲ್ಲಿ ಪಾಶ್ಚಿಮಾತ್ಯರು ಸಾಕಷ್ಟು ಪ್ರಯತ್ನನಡೆಸಿದ್ದಾರೆಯಾದರೂ ಇವುಗಳ ಬಗ್ಗೆ ಖಚಿತವಾದ ನಿರ್ಧಾರವನ್ನು ಹೇಳುವ ಕಾರ್ಯ ಆಗಿಲ್ಲ. ಪ್ರೊ. ದೇಜಗೌ ಅವರು "ಊರ ಹೆಸರುಗಳು" ಎಂಬ ಲೇಖನದಲ್ಲಿ ಅವುಗಳ ಹಿನ್ನೆಲೆಯಲ್ಲಿ ಅಡಗಿರುವ ವಿಷಯ ವಸ್ತು, ಸ್ಥಳ, ವ್ಯಕ್ತಿ, ಸಂಸ್ಕೃತಿ ಮುಂತಾದ ಅಂಶಗಳನ್ನು ಕುರಿತು ಆಲೋಚಿಸುವ ಪ್ರಯತ್ನ ನಡೆಸಿದ್ದಾರೆ. ಊರ ಹೆಸರುಗಳು ಅಂಕಿತನಾಮವಾಗಿರಬಹುದು, ಇಲ್ಲವೇ ಅನ್ವರ್ಥನಾಮವಾಗಿರಬಹುದು. ಅವು ಏನೇ ಆಗಿದ್ದರೂ ಬಳಕೆಗೆ ಬಂದು ರೂಢ ನಾಮಗಳಾಗಿವೆ. ಊರಿನ ಯಾವುದಾದರೊಂದು ಹೆಸರನ್ನು ತೆಗೆದುಕೊಂಡು ಅದರ ಪೂರ್ವಾಪರ ಇತಿಹಾಸಸಂಬಂಧಿ ವಿಶೇಷತೆಗಳನ್ನು ಚರ್ಚಿಸುತ್ತಾ ಹೋದಂತೆಲ್ಲ ಆ ಸ್ಥಳದಲ್ಲಿ ವಾಸಿಸುವ ವ್ಯಕ್ತಿಗಳ ಜನಜೀವನ, ಆಚಾರ, ವ್ಯವಹಾರ, ಸಂಸ್ಕೃತಿ ಇತ್ಯಾದಿಗಳಿಗೆ ಸಂಬಂಧಿಸಿದ ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತವೆ. ಕೆಲವು ಸ್ಥಳನಾಮಗಳು ಅವುಗಳ ಮೂಲ ಅರ್ಥವನ್ನು ಕಳೆದುಕೊಂಡು ಬೇರೊಂದು ಹೊಸ ಅರ್ಥವನ್ನು ಪಡೆದಿರಬಹುದು, ಇಲ್ಲವೇ ಮೂಲ ಅರ್ಥ ಉಳಿಸಿಕೊಂಡಿರಬಹುದು. ಈ ಹೆಸರುಗಳಲ್ಲಿ ಯಾವುದು ಅಂಕಿತನಾಮ, ಯಾವುದು ಅನ್ವರ್ಥನಾಮ, ಯಾವುದು ರೂಢನಾಮ ಎಂದು ಹೇಳಲು ಬರುವುದಿಲ್ಲ. ಈ ದಿಕ್ಕಿನಲ್ಲಿ ಆಲೋಚಿಸಬೇಕಾದ ಅಂಶಗಳು ಅಪಾರ; ಮಾಡಬೇಕಾದ ಕೆಲಸ ಅಗಾಧವಾಗಿದೆ. ಈಗಾಗಲೇ ಸ್ಥಳ ನಾಮಗಳನ್ನು ಕುರಿತ ಗ್ರಂಥ ಹಾಗೂ ಲೇಖನಗಳು ಹೊರಬಂದಿವೆ; ಹೊರ ಬರುತ್ತಲೇ ಇವೆ. ಆದರೂ ನಡೆದಿರುವ ಕೆಲಸ ಅತ್ಯಲ್ಪ. ಈ ದಿಸೆಯಲ್ಲಿ ಇನ್ನೂ ಬಿಡಿಸಲಾಗದ ಎಷ್ಟೋ ಸಮಸ್ಯೆಗಳು ಹಾಗೇ ಉಳಿದಿವೆ ಎನ್ನಬಹುದು.

ಈಗ ಈ ಪ್ರದೇಶದಲ್ಲಿ ದೊರೆಯುವ ಕೆಲವು ವ್ಯಕ್ತಿನಾಮಗಳನ್ನು ಕುರಿತು ಆಲೋಚಿಸೋಣ. ಮಂಡ್ಯ, ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿ ದೊರೆಯುವ ವ್ಯಕ್ತಿಯ ಹೆಸರುಗಳು ಸಾಮಾನ್ಯವಾಗಿ ಅವರವರ ಮನೆತನದವರು ಪೂಜಿಸುವ ಮನೆ ದೇವತೆಗಳ ಅಂಕಿತನಾಮ ಇಲ್ಲವೇ ಅನ್ವರ್ಥನಾಮಗಳಾಗಿರುತ್ತವೆ. ಇವುಗಳ ಜೊತೆಗೆ ಕೆಲವು ವ್ಯಕ್ತಿಗಳ ಅನ್ವರ್ಥನಾಮಗಳೂ ಸೇರಿಕೊಂಡಿರುವುದನ್ನು ಅಲ್ಲಲ್ಲಿ ಕಾಣ

ಬಹುದು. ಹೀಗೆ ಕೆಲವು ವ್ಯಕ್ತಿನಾಮಗಳು ದೇವರಿಗೆ ಅಂಕಿತ ಇಲ್ಲವೇ ಅನ್ವರ್ಥನಾಮ ಗಳಾಗಿದ್ದರೆ, ಮತ್ತೆ ಕೆಲವು ವ್ಯಕ್ತಿಗೆ ಅನ್ವರ್ಥನಾಮಗಳಾಗಿ ಬಳಕೆಯಲ್ಲಿರುವುದು ಈ ಪ್ರದೇಶದಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಅವುಗಳನ್ನು ಗಮನಿಸಬೇಕಾದುದು ಇಲ್ಲಿ ಅತ್ಯಗತ್ಯ.

ವ್ಯಕ್ತಿ ಗಂಡಾಗಿರಲಿ, ಹೆಣ್ಣಾಗಿರಲಿ ಅವರವರ ಮನೆ ದೇವ ಹಾಗೂ ದೇವತೆಗಳ ಹೆಸರುಗಳನ್ನು ಇಡುವುದು ರೂಢಿ. ಗಂಡಸರಿಗೆ ಶಿವ, ಕೃಷ್ಣ, ನಾರಾಯಣ, ಶ್ರೀಕಂಠ ಮುಂತಾದ ಗಂಡುದೇವರ ಹೆಸರುಗಳನ್ನು ಹೆಂಗಸರಿಗೆ ಪಾರ್ವತಿ, ಗೌರಿ, ಲಕ್ಷ್ಮೀ, ಪದ್ಮಾವತಿ, ಶಾರದ ಮುಂತಾದ ಹೆಣ್ಣುದೇವರ ಹೆಸರುಗಳನ್ನು ಇಡುವುದು ಈ ಪ್ರದೇಶದ ಜನರಲ್ಲಿ ರೂಢಿಯಲ್ಲಿದೆ. ಈ ಹೆಸರುಗಳು ಏನೇ ಆಗಿದ್ದರೂ ಆ ದೇವದೇವತೆಗಳಿಗೆ ಅಂಕಿತ ಹಾಗೂ ಅನ್ವರ್ಥನಾಮಗಳಾಗಿದ್ದು ವ್ಯಕ್ತಿನಾಮಗಳಾಗಿರು ವುದು ಹೆಚ್ಚು. ಇಲ್ಲಿ ಬೇರೆ ಬೇರೆ ದೇವರನ್ನು ಪೂಜಿಸುವ ಜನರನ್ನು ಒಕ್ಕಲು, ದೇವರ ಒಕ್ಕಲು, ಕುಳ ಎಂದು ಕರೆಯಲಾಗುತ್ತದೆ. ಒಂದೇ ದೇವರನ್ನು ಪೂಜಿಸುವ ಮನೆತನಗಳಲ್ಲಿ ಪರಸ್ಪರ ವಿವಾಹ ಸಂಬಂಧ ಇಲ್ಲ. ಅವರೆಲ್ಲ ಅಣ್ಣತಮ್ಮಂದಿರು, ಅಕ್ಕತಂಗಿಯರೆಂಬ ಭಾವನೆ ಇಲ್ಲಿಯ ಜನರ ನಂಬಿಕೆ. ಶಿವನಿಗೆ ಅನೇಕ ಬಗೆಯ ಅಂಕಿತ ಹಾಗೂ ಅನ್ವರ್ಥ ನಾಮಗಳಿರುವಂತೆಯೇ ಪಾರ್ವತಿಗೂ ಅನೇಕ ಬಗೆಯ ಅಂಕಿತ ಹಾಗೂ ಅನ್ವರ್ಥ ನಾಮಗಳಿವೆ. ಅವು ವ್ಯಕ್ತಿಗಳಿಗೆ ಅಂಕಿತ ನಾಮಗಳಾಗಿ ಕಂಡುಬಂದರೆ ಮತ್ತೆ ಕೆಲವು ವ್ಯಕ್ತಿಗಳಿಗೆ ಅನ್ವರ್ಥನಾಮಗಳಾಗಿ ಕಂಡುಬರುತ್ತವೆ ಎಂಬು ದನ್ನು ಇಲ್ಲಿ ಮರೆಯುವಂತಿಲ್ಲ. ಈ ದಿಕ್ಕಿನಲ್ಲಿ ಅನೇಕ ಹೆಸರುಗಳ ದೊಡ್ಡ ಪಟ್ಟಿ ಯೊಂದನ್ನು ತಯಾರಿಸಿ ವಿವರಿಸಿ ತೋರಿಸಬಹುದು.

ಒಕ್ಕಲಿಗರಲ್ಲಿ ಅನೇಕರು ದೇವ, ದೇವಿ ಎಂಬ ಹೆಸರನ್ನು ಇಟ್ಟುಕೊಂಡಿದ್ದಾರೆ. ಅವನ್ನೆ ಹಳ್ಳಿಗರು ದ್ಯಾವ, ದ್ಯಾವಿ ಎನ್ನುವರು, ಈ ಹೆಸರುಗಳಿಗೆ ಅಪ್ಪ, ಅಣ್ಣ, ಅಯ್ಯ, ಗೌಡ, ಅಮ್ಮ, ಅವ್ವ, ಅಕ್ಕ ಎಂಬ ಸಂಬಂಧರೂಪಗಳನ್ನು ಸೇರಿಸಿದಾಗ ಸಿದ್ಧವಾಗುವ ಹೆಸರುಗಳು ಅನೇಕ ಬಗೆಯಲ್ಲಿ ದೊರೆಯುತ್ತವೆ. ದೇವಪ್ಪ, ದ್ಯಾವಪ್ಪ, ದೇವಣ್ಣ, ದ್ಯಾವಣ್ಣ, ದೇವಯ್ಯ, ದ್ಯಾವಯ್ಯ, ದೇವೇಗೌಡ, ದ್ಯಾವೇಗೌಡ, ದೇವಮ್ಮ, ದ್ಯಾವಮ್ಮ, ದೇವವ್ವ, ದ್ಯಾವವ್ವ, ದೇವಕ್ಕ ದ್ಯಾವಕ್ಕ, ಎಂದು ಮುಂತಾಗಿ ವ್ಯಕ್ತಿ ನಾಮಗಳಾಗಿವೆ. ಹೀಗೆ ಅನೇಕ ವ್ಯಕ್ತಿಗಳ ಹೆಸರುಗಳು ಸಿದ್ಧವಾಗಿದ್ದು ಬಳಸುವುದನ್ನೂ ಹೆಚ್ಚಾಗಿ ಇಲ್ಲಿ ಕಾಣಬಹುದು.

ವ್ಯಕ್ತಿ ಗಂಡಾಗಿರಲಿ, ಹೆಣ್ಣಾಗಿರಲಿ, ಹಿರಿಯನಾಗಿರಲಿ, ಕಿರಿಯನಾಗಿರಲಿ, ವಿದ್ಯಾ ವಂತನಾಗಿರಲಿ, ಅವಿದ್ಯಾವಂತನಾಗಿರಲಿ, ಅವರವರ ವಯಸ್ಸು, ಅಂತಸ್ತು, ಗೌರವ ಇತ್ಯಾದಿಗಳಿಗೆ ತಕ್ಕಂತೆ ಅಪ್ಪ, ಅಣ್ಣ, ಅಯ್ಯ, ಗೌಡ, ಅವ್ವ, ಅಮ್ಮ, ಅಕ್ಕ, ದೊಡ್ಡ,

ಚಿಕ್ಕ, ಸಣ್ಣ, ಪುಟ್ಟ, ಮರಿ ಮುಂತಾದ ಸಂಬಂಧ ಹಾಗೂ ವಿಶೇಷಣ ರೂಪಗಳನ್ನು ಸೇರಿಸಿ ವ್ಯಕ್ತಿಗಳ ಹೆಸರನ್ನು ಬಳಸುವುದು ಈ ಪ್ರದೇಶದಲ್ಲಿ ತುಂಬ ರೂಢಿಯಲ್ಲಿದೆ. ಮನೆತನದ ಎಲ್ಲ ಮಕ್ಕಳಿಗೂ ಅವರವರ ಮನೆ ದೇವದೇವತೆಗಳ ಹೆಸರುಗಳನ್ನು ಇಡುವುದು ಬಹು ಹಿಂದಿನಿಂದಲೂ ಬಂದ ಸಂಪ್ರದಾಯ. ಇದರಿಂದ ಆ ಮನೆತನ ಗಳಿಗೆ ಸೇರಿದ ಅನೇಕ ವ್ಯಕ್ತಿಗಳ ವಯಸ್ಸು, ಅಂತಸ್ತು, ಗೌರವ, ಸಂಸ್ಕೃತಿ, ಆಚಾರ, ವ್ಯವಹಾರ, ಜೀವನ ಮುಂತಾದವುಗಳ ಹಿನ್ನೆಲೆ ತಿಳಿದುಬರುವುದು. ಬಸವೇಶ್ವರ ಎಂಬವನಿಗೆ ಬಸವ, ಬಸವಿ, ಮಹಾದೇಶ್ವರನಿಗೆ ಮಾದ, ಮಾದಿ, ವಿಷಕಂಠೇಶ್ವರನಿಗೆ ಶ್ರೀಕಂಠ, ನೀಲಕಂಠ ಎಂಬುವೂ, ನಂಜುಂಡೇಶ್ವರನಿಗೆ ನಂಜ, ನಂಜಿ, ಮಹೇಶ್ವರನಿಗೆ ಮಹೇಶ, ಮಲ್ಲೇಶ ಮಹಾದೇವಿ, ಮಹಾದೇವ ಎಂಬಿತ್ಯಾದಿ ಗಳೂ, ನಾಗಲಿಂಗೇಶ್ವರ, ಪಂಚಲಿಂಗೇಶ್ವರ, ಮಹಾಲಿಂಗೇಶ್ವರ ಮುಂತಾದವುಗಳಿಗೆ ಲಿಂಗ, ಲಿಂಗಿ, ನಿಂಗ, ನಿಂಗಿ, ವೆಂಕಟೇಶ್ವರನಿಗೆ ಯಂಕಟ, ಯಂಕಟಿ, ವೆಂಕಟ, ವೆಂಕಟಿ, ಮುಂತಾದ ಹೆಸರುಗಳು ಆ ದೇವ ದೇವರುಗಳ ಅಂಕಿತ ಇಲ್ಲವೇ ಅನ್ವರ್ಥನಾಮ ಗಳಾಗಿದ್ದು ಅದೇ ವ್ಯಕ್ತಿಗೂ ಅಂಕಿತನಾಮಗಳಾಗಿ ಬಳಕೆಗೆ ಬಂದಿವೆ. ಇವುಗಳಲ್ಲಿ ಕೆಲವು ದೇವರಿಗೆ ಅಂಕಿತ ಇಲ್ಲವೇ ಅನ್ವರ್ಥನಾಮಗಳಾಗಿರಬಹುದಾದರೂ ಅವೆಲ್ಲವೂ ವ್ಯಕ್ತಿಗೆ ಅಂಕಿತನಾಮಗಳಾಗಿ ಬಳಕೆಯಲ್ಲಿವೆ. ಈ ಬಗೆಯ ಹೆಸರುಗಳು ಈ ಸ್ಥಳದಲ್ಲಿ ಸರ್ವೇಸಾಮಾನ್ಯ.

ಈಗ ಶಿವ ಎಂಬ ಹೆಸರನ್ನು ತೆಗೆದುಕೊಳ್ಳಿ, ಶಿವ ಎಂಬುದು ದೇವನ ಅಂಕಿತ ನಾಮ ಮಾತ್ರವಲ್ಲದೆ ಅವನನ್ನು ಪೂಜಿಸುವ ಮನೆತನದ ವ್ಯಕ್ತಿಯ ಅಂಕಿತನಾಮ ವಾಗಿದೆ. ಇದನ್ನು ವ್ಯಕ್ತಿಯ ವಯಸ್ಸು, ಗಂಡು, ಹೆಣ್ಣು, ಅಂತಸ್ತು, ಗೌರವ ಮುಂತಾದವುಗಳಿಗೆ ತಕ್ಕಂತೆ ಆ ವಿವಿಧ ಸಂಬಂಧ ಸೂಚಕರೂಪಗಳನ್ನು ಸೇರಿಸಿ ಬಳಸುವುದು ರೂಢಿ. ಶಿವಪ್ಪ, ಶಿವಣ್ಣ, ಶಿವಯ್ಯ, ಶಿವೇಗೌಡ, ಶಿವವ್ವ, ಶಿವಮ್ಮ, ಶಿವಕ್ಕ, ಶಿವ, ಶಿವಿ ಎಂಬ ಹೆಸರುಗಳನ್ನು ಹಳ್ಳಿಯ ಅವಿದ್ಯಾವಂತನಾದವನು ಸಿವಪ್ಪ, ಸಿವಣ್ಣ, ಸಿವಯ್ಯ, ಸಿವೇಗೌಡ, ಸಿವ, ಸಿವಮ್ಮ, ಸಿವವ್ವ, ಸಿವಕ್ಕ ಎಂದು ಉಚ್ಚ ರಿಸುತ್ತಾ ಬಳಸುತ್ತಾನೆ. ಈ ಬಗೆಯಲ್ಲಿಯೇ ಬೋರ, ಬೋರಿ, ಲಿಂಗ, ಲಿಂಗಿ ಸಿದ್ದ, ಸಿದ್ದಿ, ತಿಮ್ಮ, ತಿಮ್ಮಿ, ನಾಗ, ನಾಗಿ ಎಂಬಿತ್ಯಾದಿ ಹೆಸರುಗಳನ್ನು ಆ ವಿವಿಧ ಸಂಬಂಧ ಸೂಚಕರೂಪಗಳೊಡನೆ ವಯಸ್ಸು ಅಂತಸ್ತು ಗೌರವಗಳಿಗೆ ತಕ್ಕಂತೆ ಬಳಸುವುದನ್ನು ತೋರಿಸಬಹುದು.

ಈಗ ಬಸವ, ಬಸವಿ ಎಂಬ ವ್ಯಕ್ತಿಯ ಹೆಸರುಗಳನ್ನು ಗಮನಿಸಿ. ಬಸವ, ಶಿವನ ವಾಹನ ಮತ್ತು ಒಬ್ಬ ದೈವಸಂಭೂತ ಗುರುವಿನ ಹೆಸರು (ಬಸವೇಶ್ವರ). ಇವನ ಅಂಕಿತ ನಾಮವೇ ಕೆಲವು ವ್ಯಕ್ತಿನಾಮಗಳಾಗಿವೆ. ಬಸವಿ ಎಂದರೆ ಬಜಾರಿ ಎಂಬರ್ಥವಿದೆ ಯಾದರೂ ಅದು ಬೇರೆ. ಈ ಬಸವಿ, ಬಸವ, ಬಸ್ವ, ಬಸ್ವಿ ಎಂಬ ಹೆಸರುಗಳಿಗೆ

ಆ ವಿವಿಧ ಸಂಬಂಧ ಸೂಚಕರೂಪಗಳನ್ನು ಹಚ್ಚಿ ಬಸ್ವಪ್ಪ, ಬಸ್ವಣ್ಣ, ಬಸ್ವಯ್ಯ, ಬಸವೇಗೌಡ, ಬಸ್ವವ್ವ, ಬಸ್ವಮ್ಮ, ಬಸ್ವಕ್ಕ, ಬಸವಿ ಎಂಬಿತ್ಯಾದಿ ಹೆಸರುಗಳಾಗಿವೆ. ಒಂದುಳಿದ ವರ್ಗದ ಅವಿದ್ಯಾವಂತರಲ್ಲಿ ಅನೇಕರು ಬಸ್ವ, ಬಸ್ವಿ, ಬಸಪ್ಪ, ಬಸಣ್ಣ, ಬಸವಯ್ಯ, ಬಸವೇಗೌಡ, ಬಸಮ್ಮ, ಬಸಕ್ಕ, ಬಸವ್ವ ಎಂದು ಬಳಸುವುದನ್ನು ಕಾಣಬಹುದು. ಈ ಹೆಸರುಗಳ ಪೂರ್ವದಲ್ಲಿ ದೊಡ್ಡ, ಚಿಕ್ಕ, ಪುಟ್ಟ, ಮರಿ ಎಂಬ ವಿಶೇಷಣಗಳನ್ನು ಹಚ್ಚಿ ಬಳಸುವುದು ರೂಢಿಯಲ್ಲಿದೆ. ಹಿರಿಯರಾದರೆ ದೊಡ್ಡ ಬಸವಯ್ಯ, ದೊಡ್ಡಬಸವಣ್ಣ, ದೊಡ್ಡಬಸ್ವ, ದೊಡ್ಡಬಸ್ವೇಗೌಡ, ದೊಡ್ಡಬಸ್ವಮ್ಮ ದೊಡ್ಡಬಸಮ್ಮ, ದೊಡ್ಡಬಸ್ವಕ್ಕ, ದೊಡ್ಡಬಸಕ್ಕ, ದೊಡ್ಡಬಸವ್ವ, ದೊಡ್ಡಬಸ್ವವ್ವ, ಕಿರಿಯರಾದರೆ ಚಿಕ್ಕಬಸ್ವ, ಚಿಕ್ಕಬಸವ, ಚಿಕ್ಕಬಸವಣ್ಣ, ಚಿಕ್ಕಬಸಣ್ಣ, ಚಿಕ್ಕಬಸವಯ್ಯ, ಚಿಕ್ಕಬಸಯ್ಯ, ಚಿಕ್ಕಬಸವೇಗೌಡ, ಚಿಕ್ಕಬಸಮ್ಮ, ಚಿಕ್ಕಬಸ್ವಮ್ಮ, ಚಿಕ್ಕಬಸಕ್ಕ, ಚಿಕ್ಕ ಬಸ್ವಕ್ಕ, ಚಿಕ್ಕಬಸ್ವವ್ವ, ಚಿಕ್ಕಬಸವ್ವ, ಹಾಗೆಯೇ ಮಕ್ಕಳನ್ನು ಮರಿ, ಪುಟ್ಟ ಎಂಬ ರೂಪಗಳನ್ನು ಸೇರಿಸಿ, ಪುಟ್ಟಬಸವಯ್ಯ, ಪುಟ್ಟಬಸಯ್ಯ, ಪುಟ್ಟಬಸಣ್ಣ, ಪುಟ್ಟಬಸ್ವಣ್ಣ, ಪುಟ್ಟಬಸಪ್ಪ, ಪುಟ್ಟಬಸ್ವಪ್ಪ, ಪುಟ್ಟಬಸವೇಗೌಡ, ಪುಟ್ಟಬಸ್ವಿ, ಪುಟ್ಟಬಸ್ವ, ಪುಟ್ಟ ಬಸಮ್ಮ, ಪುಟ್ಟಬಸ್ವಮ್ಮ, ಪುಟ್ಟಬಸ್ವವ್ವ, ಪುಟ್ಟಬಸವ್ವ, ಪುಟ್ಟಬಸಕ್ಕ, ಪುಟ್ಟಬಸ್ವಕ್ಕ, ಮರಿಬಸಪ್ಪ, ಮರಿಬಸವಮ್ಮ, ಮರಿಬಸವೇಗೌಡಾ, ಮರಿಬಸ್ವಯ್ಯ, ಮರಿಬಸ್ವ, ಮರಿಬಸ್ವಿ ಎಂದು ಮುಂತಾಗಿ ಸಿದ್ಧವಾದ ವ್ಯಕ್ತಿನಾಮಗಳು ಬಳಕೆಯಲ್ಲಿವೆ.

ಹಾಗೆಯೇ ಬೋರ, ಬೋರಿ, ನಂಜ, ನಂಜಿ, ಲಿಂಗ, ಲಿಂಗಿ, ಮಂಚ, ಮಂಚಿ, ಮಾದ, ಮಾದಿ ಎಂಬಿತ್ಯಾದಿ ಹೆಸರುಗಳಿಂದ ಸಿದ್ಧವಾಗುವ ನೂರಾರು ವ್ಯಕ್ತಿನಾಮಗಳನ್ನು ಪಟ್ಟಿಮಾಡಿ ತೋರಿಸಬಹುದು. ಬೋರ ಎಂಬುದು ಭೈರವ ಎಂಬುದರಿಂದ ಬಂದಿದ್ದು, ಅದೇ ಭೈರವೇಶ್ವರನ ಅಂಕಿತನಾಮ. ಹಳ್ಳಿಯವರ ಉಚ್ಚಾರದಲ್ಲಿ ಭೈರವ ಬೋರ ಎಂದಾಗಿದೆ ಅಷ್ಟೆ. ಈ ಬೋರ, ಬೋರಿ ಎಂಬ ಹೆಸರುಗಳಿಗೆ ಕ್ರಮವಾಗಿ ಆ ಎಲ್ಲಾ ಸಂಬಂಧ ಸೂಚಕ ಹಾಗೂ ವಿಶೇಷಣಗಳನ್ನು ಹಚ್ಚಿದಾಗ ಕಂಡುಬರುವ ನೂರಾರು ಹೆಸರುಗಳು ವ್ಯಕ್ತಿನಾಮಗಳಾಗಿ ಈ ಪ್ರದೇಶದಲ್ಲಿ ಬಳಕೆಯಲ್ಲಿರುವುದನ್ನು ಕಾಣಬಹುದು. ಉದಾಹರಣೆಗೆ : ಬೋರಪ್ಪ, ಬೋರಣ್ಣ, ಬೋರಯ್ಯ, ಬೋರೇಗೌಡ, ಬೋರಮ್ಮ, ಬೋರಕ್ಕ, ಬೋರವ್ವ, ಬೋರ, ಬೋರಿ ಎಂಬಿತ್ಯಾದಿಗಳಿಗೆ ದೊಡ್ಡ, ಚಿಕ್ಕ, ಪುಟ್ಟ, ಮರಿ ಎಂಬ ವಿಶೇಷಣಗಳನ್ನು ಹಚ್ಚಿದಾಗ ದೊಡ್ಡಬೋರ, ದೊಡ್ಡ ಬೋರಪ್ಪ, ದೊಡ್ಡಬೋರಯ್ಯ, ದೊಡ್ಡಬೋರೇಗೌಡ, ದೊಡ್ಡಬೋರಮ್ಮ, ದೊಡ್ಡಬೋರಕ್ಕ, ದೊಡ್ಡಬೋರವ್ವ, ಚಿಕ್ಕಬೋರ, ಚಿಕ್ಕಬೋರಪ್ಪ, ಚಿಕ್ಕ ಬೋರಣ್ಣ, ಚಿಕ್ಕಬೋರಯ್ಯ, ಚಿಕ್ಕಬೋರೇಗೌಡ, ಚಿಕ್ಕಬೋರು, ಚಿಕ್ಕಬೋರಮ್ಮ ಚಿಕ್ಕಬೋರವ್ವ, ಚಿಕ್ಕಬೋರಕ್ಕ, ಚಿಕ್ಕಬೋರಿ, ಪುಟ್ಟಬೋರ, ಪುಟ್ಟಬೋರಪ್ಪ, ಪುಟ್ಟ ಬೋರಯ್ಯ, ಪುಟ್ಟಬೋರಣ್ಣ, ಪುಟ್ಟಬೋರವ್ವ, ಪುಟ್ಟಬೋರಮ್ಮ, ಪುಟ್ಟಬೋರಕ್ಕ

ಪುಟ್ಟಬೋರಿ, ಪುಟ್ಟಬೋರು, ಪುಟ್ಟಬೋರೇಗೌಡ, ಮರಿಬೋರ, ಮರಿಬೋರಯ್ಯ, ಮರಿಬೋರಣ್ಣ, ಮರಿಬೋರೇಗೌಡ, ಮರಿಬೋರಪ್ಪ, ಮರಿಬೋರವ್ವ, ಮರಿಬೋರಕ್ಕ, ಮರಿಬೋರಿ ಆದ ಅನೇಕ ವ್ಯಕ್ತಿನಾಮಗಳು ಬಳಕೆಯಲ್ಲಿವೆ.

ಲಿಂಗಪ್ಪ, ಲಿಂಗಣ್ಣ, ಲಿಂಗೇಗೌಡ, ಲಿಂಗಮ್ಮ, ಲಿಂಗವ್ವ, ಲಿಂಗಕ್ಕ. ಲಿಂಗ, ಲಿಂಗು, ಲಿಂಗಿ ಇವನ್ನೇ ಹಳ್ಳಿಯ ಜನರು ನಿಂಗಪ್ಪ, ನಿಂಗಣ್ಣ, ನಿಂಗೇಗೌಡ, ನಿಂಗಮ್ಮ, ನಿಂಗವ್ವ, ನಿಂಗಕ್ಕ, ನಿಂಗ, ನಿಂಗು, ನಿಂಗಿ, ನಿಂಗರಾಜ, ಎಂದರೆ ಇವಕ್ಕೆ ಕ್ರಮವಾಗಿ ದೊಡ್ಡ, ಚಿಕ್ಕ, ಪುಟ್ಟ, ಮರಿ ಎಂಬ ವಿಶೇಷಣಗಳನ್ನು ಸೇರಿಸಿದಾಗ ಉಂಟಾಗುವ ವ್ಯಕ್ತಿನಾಮಗಳು ಇಲ್ಲಿ ತುಂಬ ಬಳಕೆಯಲ್ಲಿವೆ. ಹಿಂದುಳಿದ ಜನಾಂಗದವರು ಕಾಳ, ಕಾಳಿ, ಮಾದ, ಮಾದಿ, ಸಿದ್ದ, ಸಿದ್ದಿ, ಮಾರ, ಮಾರಿ, ಮಾಲ, ಮಾಲಿ, ಕೂಸ, ಕೂಸಿ, ಕಾಡ, ಕಾಡಿ, ಚೆನ್ನ, ಚೆನ್ನಿ, ಯಂಕ್ಟ, ಯಂಕ್ಟಿ, ಪೀಚ, ಈರ, ಈರಿ, ಕುಳ್ಳ, ಕುಳ್ಳಿ, ತಿಮ್ಮ, ತಿಮ್ಮಿ, ಕುಂಡ, ಕುಂಡಿ, ಮೂಗ, ಮೂಗಿ, ಕಿವುಡ, ಕಿವುಡಿ, ಬೀರ, ಬೀರಿ, ಮಂಚ, ಮಂಚಿ ಮುಂತಾದ ಹೆಸರುಗಳನ್ನು ಇಟ್ಟುಕೊಂಡಿರುವುದನ್ನು ಇಲ್ಲಿ ವಿಶೇಷವಾಗಿ ಕಾಣಬಹುದಾಗಿದೆ.

ಕೆಲವು ವ್ಯಕ್ತಿನಾಮಗಳು ಕೇವಲ ವಿಶೇಷಣಗಳಿಂದಲೇ ಆದ ವ್ಯಕ್ತಿನಾಮಗಳಾದರೆ, ಮತ್ತೆ ಕೆಲವು ವ್ಯಕ್ತಿನಾಮಗಳು ವ್ಯಕ್ತಿಯ ಅನ್ವರ್ಥನಾಮಗಳಾಗಿದ್ದು ಬಳಕೆಯಲ್ಲಿರುವುದನ್ನು ಈ ಪ್ರದೇಶದಲ್ಲಿ ಕಾಣಬಹುದು. ಹಿಂದುಳಿದ ಜಾತಿ ಜನರಲ್ಲಿ ದೊಡ್ಡ, ಚಿಕ್ಕ, ಪುಟ್ಟ, ಮರಿ ಎಂಬ ವಿಶೇಷಣಗಳಿಗೆ ಆ ವಿವಿಧ ಸಂಬಂಧ ಸೂಚಕ ರೂಪಗಳನ್ನು ಹಚ್ಚಿದಾಗ ಉಂಟಾಗುವ ಹೆಸರುಗಳು ಇಟ್ಟುಕೊಂಡಿರುವುದು ಸರ್ವೇ ಸಾಮಾನ್ಯ. ಉದಾಹರಣೆಗೆ : ದೊಡ್ಡ, ದೊಡ್ಡಪ್ಪ, ದೊಡ್ಡಯ್ಯ, ದೊಡ್ಡಣ್ಣ, ದೊಡ್ಡೇಗೌಡ, ದೊಡ್ಡಮ್ಮ, ದೊಡ್ಡವ್ವ, ದೊಡ್ಡಕ್ಕ, ದೊಡ್ಡೆ, ದೊಡ್ಡವ್ವೆ; ಗಂಡಸಾದರೆ ದೊಡ್ಡೋನು, ದೊಡ್ಡೈದ, ಹೆಣ್ಣಾದರೆ ದೊಡ್ಡೋಳು, ದೊಡ್ಡೈದ್ಲು, ಹಾಗೆಯೇ ಹಳ್ಳಿಗರು ದೊಡ್ಡೈದಣ್ಣ, ದೊಡ್ಡೈದಪ್ಪ, ದೊಡ್ಡೈದೇಗೌಡ, ದೊಡ್ಡೈದಯ್ಯ, ಚಿಕ್ಕಣ್ಣ, ಚಿಕ್ಕಪ್ಪ, ಚಿಕ್ಕೇಗೌಡ, ಚಿಕ್ಕಪ್ಪ, ಚಿಕ್ಕವ್ವ, ಚಿಕ್ಕಕ್ಕ, ಚಿಕ್ಕವ್ವ, ಚಿಕ್ಕಮ್ಮ, ಚಿಕ್ಕೈದ, ಚಿಕ್ಕೋನು, ಚಿಕ್ಕೈದ್ಲು. ಹಾಗೆಯೇ ಮರಿ ಹಾಗೂ ಪುಟ್ಟ ಎಂಬ ವಿಶೇಷಣಗಳಿಂದ ಆದ ಪುಟ್ಟಪ್ಪ, ಪುಟ್ಟೇಗೌಡ, ಪುಟ್ಟಣ್ಣ. ಪುಟ್ಟಯ್ಯ, ಪುಟ್ಟವ್ವ, ಪುಟ್ಟಮ್ಮ, ಪುಟ್ಟಕ್ಕ, ಪುಟ್ಟ, ಪುಟ್ಟೆ, ಮರಿ, ಮರಪ್ಪ, ಮರಣ್ಣ, ಮರಯ್ಯ, ಮರಮ್ಮ, ಮರಕ್ಕ, ಮರವ್ವ ಮುಂತಾದ ವ್ಯಕ್ತಿನಾಮಗಳು ಬಳಕೆಯಲ್ಲಿವೆ.

ಅಪ್ಪ, ಅಣ್ಣ, ಅಯ್ಯ, ಗೌಡ, ಅಕ್ಕ, ಅಮ್ಮ, ಅವ್ವ ಎಂಬಿತ್ಯಾದಿ ಸಂಬಂಧ ಸೂಚಕ ರೂಪಗಳಿಗೆ ಅದೇ ಬೇರೆ ಬೇರೆ ಸಂಬಂಧ ಸೂಚಕಗಳನ್ನು ಹಚ್ಚಿದಾಗ ಕೆಲವು ಹೆಸರುಗಳು ಸಿದ್ಧವಾಗಿದ್ದು ಅದೇ ವ್ಯಕ್ತಿಯ ಅನ್ವರ್ಥನಾಮಗಳಾಗಿರುವುದನ್ನು ಕಾಣ

ಬಹುದಾಗಿದೆ. ಅಯ್ಯ ಎಂಬುದಕ್ಕೆ ಅಪ್ಪ ಹಚ್ಚಿದಾಗ ಅಯ್ಯಪ್ಪ, ಅಣ್ಣ ಎಂಬುದಕ್ಕೆ ಅಯ್ಯ ಹಚ್ಚಿದಾಗ ಅಣ್ಣಯ್ಯ, ಅದಕ್ಕೆ ಗೌಡ ಹಚ್ಚಿದಾಗ ಅಣ್ಣೇಗೌಡ, ಹೀಗೆ ಗೌಡಪ್ಪ, ಗೌಡಣ್ಣ, ಗೌಡಯ್ಯ, ಗೌಡೇಗೌಡ, ಅಪ್ಪೇಗೌಡ, ಅಪ್ಪಯ್ಯ, ಅಯ್ಯಣ್ಣ, ಅಪ್ಪಣ್ಣ, ಮುಂತಾದ ವ್ಯಕ್ತಿನಾಮಗಳಾಗಿವೆ. ಇದಕ್ಕೆ ಚಿಕ್ಕ, ದೊಡ್ಡ, ಪುಟ್ಟ, ಮರಿ ಎಂಬ ವಿಶೇಷಣಗಳನ್ನು ಹಚ್ಚಿದ ಹೆಸರುಗಳು ಈ ಪ್ರದೇಶದ ಕೆಲವು ವ್ಯಕ್ತಿಗಳಲ್ಲಿ ಕಾಣ ಸಿಗುತ್ತವೆ. ಹಾಗೆಯೇ ಸ್ತ್ರೀಲಿಂಗ ರೂಪಗಳಾದ ಅಮ್ಮ, ಅವ್ವ, ಅಕ್ಕ, ತಾಯಿ ಎಂಬುವುಗಳಿಗೆ ಅದೇ ವರ್ಗದ ಬೇರೆ ಬೇರೆ ಸ್ತ್ರೀಲಿಂಗ ರೂಪಗಳನ್ನು ಹಚ್ಚಿದಾಗ ಉಂಟಾಗುವ ಕೆಲವು ವ್ಯಕ್ತಿನಾಮಗಳು ಇಲ್ಲಿ ದೊರೆಯುತ್ತವೆ. ಅಕ್ಕಮ್ಮ, ಅಕ್ಕವ್ವ, ತಾಯವ್ವ, ತಾಯಮ್ಮ, ತಾಯಕ್ಕ ಮುಂತಾದ ವ್ಯಕ್ತಿನಾಮಗಳು ಹೆಂಗಸರ ಹೆಸರೇ ಆಗಿದ್ದರೂ ಅದಕ್ಕೆ ಚಿಕ್ಕ, ದೊಡ್ಡ, ಪುಟ್ಟ ಎಂಬ ವಿಶೇಷಣಗಳನ್ನು ಹಚ್ಚಿದ ದೊಡ್ಡಮ್ಮಕ್ಕ, ಚಿಕ್ಕಮ್ಮಕ್ಕ, ಪುಟ್ಟಕ್ಕಮ್ಮ, ಪುಟ್ಟತಾಯಿ, ಪುಟ್ಟತಾಯಮ್ಮ, ಮರಿಯಮ್ಮ, ಮರಿತಾಯಿ, ದೊಡ್ಡತಾಯಮ್ಮ, ದೊಡ್ಡತಾಯವ್ವ, ದೊಡ್ಡತಾಯಕ್ಕ, ಚಿಕ್ಕತಾಯಮ್ಮ, ಚಿಕ್ಕತಾಯಕ್ಕ ಮುಂತಾದ ಹೆಸರುಗಳು ವ್ಯಕ್ತಿನಾಮಗಳಾಗಿ ಈ ಪ್ರದೇಶದಲ್ಲಿ ಬಳಕೆಯಲ್ಲಿವೆ.

ಈಗ ಕೆಲವು ಅನ್ವರ್ಥನಾಮಗಳನ್ನು ಗಮನಿಸೋಣ. ವ್ಯಕ್ತಿಯು ಹೊಟ್ಟೆ ದಪ್ಪವಾಗಿದ್ದರೆ ಹೊಟ್ಟಣ್ಣ, ಹೊಟ್ಟ, ಹೊಟ್ಟಪ್ಪ, ಹೊಟ್ಟೇಗೌಡ ಎಂದೂ, ವ್ಯಕ್ತಿ ಕುಳ್ಳಾಗಿದ್ದರೆ ಕುಳ್ಳ, ಕುಳ್ಳಿ, ಗಿಡ್ಡ, ಬುಡ್ಡ, ಬುಡ್ಡಿ, ಮೊಡ್ಡ, ಮೊಡ್ಡಿ. ಇವುಗಳಲ್ಲಿ ಕುಳ್ಳಿ, ಬುಡ್ಡಿ, ಮೊಡ್ಡಿ ಎಂಬುವು ಹೆಂಗಸರ ಹೆಸರುಗಳು. ವ್ಯಕ್ತಿಯು ಕಾಲು ಸೊತ್ತಾಗಿದ್ದರೆ ಸೊತ್ತ, ಸ್ವತ್ತ, ಸೊತ್ತಿ, ಸ್ವತ್ತಿ, ಪೊತ್ತ, ಪೊತ್ತಿ, ವ್ಯಕ್ತಿ ಮೂಕನಾಗಿದ್ದರೆ, ಮೂಗ, ಮೂಗಿ, ಕಿವುಡನಾದರೆ ಕಿವುಡ, ಕಿವುಡಿ, ಕೆಪ್ಪ, ಕಣ್ಣು ದೊಡ್ಡದಾಗಿದ್ದರೆ ಮೆಡ್ಡ, ಮೆಡ್ಡಿ, ವ್ಯಕ್ತಿ ದಪ್ಪವಾಗಿದ್ದು ಗುಂಡಾಗಿದ್ದರೆ, ಗುಂಡ, ಮೂಡೆ, ಕಾಲು ಮೋಟಾಗಿದ್ದರೆ ಮೋಟ, ಮೋಟಿ, ವ್ಯಕ್ತಿ ಕಪ್ಪಾಗಿದ್ದರೆ ಕರಿಯ, ಕರ್ರಿ, ಕೆಂಪಾಗಿದ್ದರೆ ಕೆಂಪ, ಕೆಂಪಿ, ಬೆಳ್ಳಗಿದ್ದರೆ ಬಿಳಿಯ, ಇತ್ಯಾದಿಗಳು ವ್ಯಕ್ತಿಗೆ ಅನ್ವರ್ಥನಾಮಗಳಾಗಿ ಬಳಕೆಯಲ್ಲಿವೆ. ಇವುಗಳಲ್ಲಿ ಸ್ವತ್ತಿ, ಸೊತ್ತಿ, ಪೊತ್ತಿ, ಮೂಗಿ, ಕಿವುಡಿ, ಮೆಡ್ಡಿ, ಮೋಟಿ, ಕರ್ರಿ, ಕೆಂಪಿ ಎಂಬಿತ್ಯಾದಿಗಳು ಹೆಂಗಸರ ಅನ್ವರ್ಥನಾಮಗಳು. ಇವಕ್ಕೆ ಕ್ರಮವಾಗಿ ಅಯ್ಯ, ಅಣ್ಣ, ಗೌಡ, ಅಪ್ಪ, ಅಕ್ಕ, ಅಮ್ಮ, ಅವ್ವ ಎಂಬ ರೂಪಗಳು, ದೊಡ್ಡ, ಚಿಕ್ಕ, ಪುಟ್ಟ, ಮರಿ ಎಂಬ ವಿಶೇಷಣಗಳು ಸೇರಿ ಆಗಿರುವ ವ್ಯಕ್ತಿನಾಮಗಳು ಈ ಪ್ರದೇಶದಲ್ಲಿ ಅವಿದ್ಯಾವಂತರಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

ಹೀಗೆ ದೊರೆಯುವ ವ್ಯಕ್ತಿನಾಮಗಳನ್ನು ಅನೇಕ ವರ್ಗಗಳಲ್ಲಿ ವರ್ಗೀಕರಿಸಿ ಕೊಂಡು ಅವುಗಳನ್ನು ಪರಿಶೀಲಿಸುತ್ತಾ ಹೋದಂತೆಲ್ಲಾ ಅನೇಕ ವಿಚಾರಗಳು ಹೊರ ಬರುತ್ತವೆ. ಕೆಲವು ವ್ಯಕ್ತಿನಾಮಗಳನ್ನು ವ್ಯಕ್ತಿಯ ವಯಸ್ಸು, ಅಂತಸ್ತು, ಗೌರವ

ಇತ್ಯಾದಿಗಳಿಗೆ ಅನುಗುಣವಾಗಿ ಬಳಸುವರೆ ಮತ್ತೆ ಕೆಲವನ್ನು ಹಿಂದುಳಿದವ, ಮುಂದುವರಿದವ, ಗೌಡ, ಆಳು, ಊರಯಜಮಾನ ಮುಂತಾದವರ ವ್ಯವಹಾರಗಳ ಪರಿಸ್ಥಿತಿಗಳಿಗೆ ತಕ್ಕಂತೆ ಬಳಸಲಾಗುವುದು. ಇವು ವ್ಯಕ್ತಿಗೆ ಅಂಕಿತವಾಗಿರಲಿ, ಅನ್ವರ್ಥವಾಗಿರಲಿ ಅವು ಬಳಕೆಯಲ್ಲಿ ರೂಢಿಯಾಗಿ ಬಿಟ್ಟಿವೆ. ಇಲ್ಲಿ ದೊರೆಯುವ ಎಲ್ಲಾ ವ್ಯಕ್ತಿಗಳ ಹೆಸರುಗಳನ್ನು ಪಟ್ಟಿಮಾಡಿ ವಿಚಾರ ಮಾಡುವ ಪ್ರಯತ್ನ ಮಾಡಿಲ್ಲ. ನಮ್ಮ ಗಮನಕ್ಕೆ ಬಂದ ಕೆಲವು ವ್ಯಕ್ತಿನಾಮಗಳನ್ನು ಮಾತ್ರ ಇಲ್ಲಿ ವಿಚಾರ ಮಾಡುವ ಪ್ರಯತ್ನ ಮಾಡಿದೆ. ಅಲ್ಲದೆ ಅದು ಪರಿಪೂರ್ಣವೆಂದು ಹೇಳಲು ಸಾಧ್ಯವಾಗುವುದಿಲ್ಲ. ಈ ದಿಕ್ಕಿನಲ್ಲಿ ಕೆಲಸಮಾಡಬೇಕೆಂಬ ಆಸಕ್ತಿಯುಳ್ಳವರಿಗೆ ಇದೊಂದು ರೂಪರೇಷೆ ಅಷ್ಟೇ ಎಂದು ಹೇಳಬಹುದು.

ಮೇಲೆ ಹೇಳಿರುವಂತೆ ಮೀನುಗಾರಿಕೆ, ಕುಂಬಾರಿಕೆ, ಕಬ್ಬಿಣದ ಕೆಲಸ, ಚರ್ಮದ ಕೆಲಸ, ನೆಯ್ಗೆ, ಕೃಷಿ ಮುಂತಾದ ವೃತ್ತಿಗಳಿಗೆ ಸಂಬಂಧಿಸಿದ ಅಂಶಗಳಷ್ಟನ್ನು ಮಾತ್ರ ಸೀಮಿತಗೊಳಿಸಿ ಅಭ್ಯಸಿಸಲು ಹೊರಟಾಗ ಬಳಕೆಯಲ್ಲಿರುವ ವೃತ್ತಿಸಂಬಂಧಿ ಪದಗಳಲ್ಲಿ ಸಾಕಷ್ಟು ವ್ಯತ್ಯಾಸ ಗೋಚರಿಸುತ್ತವೆ. ಆ ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ಪದಗಳನ್ನು ಪಟ್ಟಿಮಾಡಿ, ಅವನ್ನು ಬಳಸುವ ಬಗೆ, ಉಚ್ಚಾರ, ಅರ್ಥ, ಮುಂತಾದ ವಿಚಾರಗಳನ್ನು ಪರೀಕ್ಷಿಸಿ ತಿಳಿಯುತ್ತಾ ಹೋದಂತೆಲ್ಲಾ ಈ ದಿಕ್ಕಿನಲ್ಲಿ ಅನೇಕ ಭಾಷಿಕ ಸಂಬಂಧೀ ಹೊಸ ವಿಚಾರಗಳು ಬೆಳಕಿಗೆ ಬರುತ್ತವೆ. ಹೀಗೆ ಮಂಡ್ಯ ಕನ್ನಡವನ್ನು ಗಮನಿಸಿ ವಿವೇಚಿಸಲು ಹೊರಟಾಗ ಭಾಷಿಕ ಪ್ರಭೇದಗಳು ಊರಿಗೊಂದು, ಜಾತಿಗೊಂದು, ಕೇರಿಗೊಂದು, ವ್ಯಕ್ತಿಗೊಂದು ಗೋಚರಿಸುವುವು. ಇವುಗಳನ್ನು ಎಲ್ಲಾ ಜನ, ಎಲ್ಲಾ ಜಾತಿ, ಎಲ್ಲಾ ಸ್ಥಳ, ಎಲ್ಲಾ ಕಸುಬು, ಎಲ್ಲಾ ಜನಾಂಗಗಳಿಗೆ ಸಂಬಂಧಿಸಿದಂತೆ ಅಭ್ಯಸಿಸಲು ಸಾಧ್ಯವಿದ್ದರೂ ಆ ಪ್ರಯತ್ನ ತುಂಬ ಜಟಿಲವಾದದ್ದು. ಒಂದು ಭಾಷೆಯ ಎಲ್ಲಾ ಪ್ರಭೇದಗಳನ್ನು ತಿಳಿಯಲು ಯೋಗ್ಯ ಸಾಮಗ್ರಿಸಂಗ್ರಹ ಅತ್ಯಗತ್ಯ. ಸೂಕ್ತ ಸಾಮಗ್ರಿ ಸಂಗ್ರಹ ನಡೆಯದ ಹೊರತು ಅದರ ಪೂರ್ಣ ಅಧ್ಯಯನ ಅಸಾಧ್ಯ. ಇದಕ್ಕೆ ಹೆಚ್ಚು ಹಣ, ಕಾಲ, ಜನ, ಸಹಕಾರ ಬೇಕಾಗುತ್ತದೆ. ಇದು ತುಂಬ ಜಟಿಲವಾದ ಕೆಲಸವೇನೋಸರಿ. ಇದಕ್ಕೆ ಹಲವಾರು ಭಾಷಾತಜ್ಞರ ಸಹಕಾರಬೇಕು. ಆಗ ಮಾತ್ರ ಒಂದು ಭಾಷೆಯ ಭಾಷಿಕ ಪ್ರಭೇದಗಳ ಪೂರ್ಣ ಚಿತ್ರವನ್ನು ಚಿತ್ರಿಸಲು ಸಾಧ್ಯ ಮಾತ್ರವಲ್ಲದೆ ಅದನ್ನು ಆಡುವ ವ್ಯಕ್ತಿಯ ಪೂರ್ಣ ಚರಿತ್ರೆಯ ಹಿನ್ನೆಲೆ ತಿಳಿದುಬರುವುದರಲ್ಲಿ ಅನುಮಾನವಿಲ್ಲ.

ಇಲ್ಲಿ ಪ್ರಸ್ತಾಪ ಮಾಡಲಾಗಿರುವ ಭಾಷಾವಿಚಾರ ಮಂಡ್ಯ ಕನ್ನಡಕ್ಕೆ ನೇರವಾಗಿ ಸಂಬಂಧಿಸಿದ್ದು ಆಗಿದ್ದರೂ ಕೆಲವು ವಿಚಾರಗಳ ಸ್ಪಷ್ಟತೆಗಾಗಿ ಇತರ ಜಿಲ್ಲೆಗಳ ಕನ್ನಡದ ಕಡೆಯೂ ಕಣ್ಣಾಡಿಸಲಾಗಿದೆ. ಇದು ಪೂರ್ಣವಾಗಿ ಮಂಡ್ಯ ಕನ್ನಡದ ಎಲ್ಲ ಮುಖ

ಗಳನ್ನು ಪರಿಚಯ ಮಾಡಿಕೊಡುತ್ತದೆ ಎಂದು ಹೇಳಲು ಬರುವುದಿಲ್ಲ. ಮಂಡ್ಯ ಕನ್ನಡದ ಸ್ಥೂಲಪರಿಚಯವನ್ನು ಮಾಡಿಕೊಡುವ ಈ ಲೇಖನದಲ್ಲಿ ನನ್ನ ಗಮನಕ್ಕೆ ಬಂದ, ಅನುಭವಕ್ಕೆ ಸಿಲುಕಿದ ಕೆಲವು ವಿಚಾರಗಳನ್ನು ಮಾತ್ರ ಭಾಷಾಶಾಸ್ತ್ರದ ದೃಷ್ಟಿಯಿಂದ ತಿಳಿಯಪಡಿಸಲು ಪ್ರಯತ್ನ ಮಾಡಿದ್ದೇನೆ. ಇಷ್ಟರಿಂದಲೇ ಮಂಡ್ಯ ಕನ್ನಡದ ಪೂರ್ಣ ಚಿತ್ರದೊರೆಯುತ್ತದೆ ಎಂಬ ನಂಬಿಕೆ ನನಗಿಲ್ಲ. ಆದರೂ ಸಾಮಗ್ರಿ ಸಂಗ್ರಹಿಸಿ, ವೈಜ್ಞಾನಿಕವಾಗಿ ಅಭ್ಯಾಸಮಾಡಬೇಕೆಂಬ ಉತ್ಸಾಹಿ ಭಾಷಾತಜ್ಞನಿಗೆ ಇದೊಂದು ರೂಪರೇಖೆ ಎಂದು ಇದ್ದಂತೆ ಭಾವಿಸಿ ಈ ಲೇಖನ ಬರೆಯಲಾಗಿದೆ ಎಂದು ಹೇಳಿದರೆ ಸಾಕು.

● ●

ಮೈಸೂರು ಜಿಲ್ಲೆಯ ಕನ್ನಡ

● ಬಿ. ಎನ್. ಚಂದ್ರಯ್ಯ

............ಕನ್ನಡಂಗಳೊಳೆಂದುಂ
ವಾಸುಗಿಯುಮಱಿಯಲಾಱದೆ
ಬೇಸಱುಗಂ ದೇಶಿ ಬೇಱೆವೇಱಪ್ಪುದಱಿಂ ॥ ೧-೪೬ ॥ ಕರಾಮಾ

ಕವಿರಾಜಮಾರ್ಗಕಾರನ ಕಾಲಕ್ಕೆ ಬಹುಸಂಖ್ಯೆಯ ಕನ್ನಡಂಗಳು ರೂಢಿಯಲ್ಲಿದ್ದು ವಾಸುಗಿಯೂ ಬೇಸರುವಂತಾಗಿರಲು ಸಾಧ್ಯ. ಕಾರಣ, ಇಂದಿನಂತೆ ಅಂದು ಜನ ಸಂಪರ್ಕ ಇಷ್ಟು ಸುಲಭ ಸಾಧ್ಯವಿರಲಿಲ್ಲ, ಮಾತ್ರವಲ್ಲ, ರಾಜಕೀಯ ಅನುಶಾಸನ ಗಳಿಂದುಂಟಾದ ಪರಿಮಿತಿಗಳೂ ಜನಸಂಪರ್ಕಕ್ಕೆ ಸಾಕಷ್ಟು ಅಡ್ಡಿಯನ್ನುಂಟು ಮಾಡಿದ್ದವು. ಇದರಿಂದಾಗಿ ಕಾವೇರಿಯಿಂದ ಗೋದಾವರಿಯ ವರೆಗೆ ಹರಡಿ ವಿಸ್ತರಿಸಿದ್ದ ಕರ್ನಾಟಕದಲ್ಲಿ ಬಹುಸಂಖ್ಯೆಯಲ್ಲಿ ಕನ್ನಡಂಗಳು ಇದ್ದವು. ಆದರೆ ಇಂದು ಪ್ರಧಾನ ವಾಗಿ ಮೈಸೂರು ಕನ್ನಡ, ಮಂಗಳೂರು ಕನ್ನಡ ಮತ್ತು ಧಾರವಾಡ ಕನ್ನಡ ಎಂದು ಮೂರು ಭಾಗಗಳನ್ನಾಗಿ ಮಾಡಿದ್ದಾರೆ. ಇಂದು ಅವುಗಳ ಮಧ್ಯದ ಅಂತರವೂ ಬಹುಮಟ್ಟಿಗೆ ಕಡಿಮೆಯಾಗುತ್ತಿದೆ, ಜನಸಂಪರ್ಕವು ವೈಜ್ಞಾನಿಕ ಮಾಧ್ಯಮಗಳಿಂದಾಗಿ ನಿಕಟವಾಗುತ್ತಿರುವುದರಿಂದ. ಆದರೆ ಕಡಿಮೆಯಾಗುತ್ತಿರುವ ಈ ರೀತಿಯ ಅಂತರ ಸಾರ್ವತ್ರಿಕವಲ್ಲ, ಸಾರ್ವಜನಿಕವಲ್ಲ ಎಂಬುದನ್ನು ಮರೆಯಲಾಗದು. ಈಗ ಉಂಟಾಗುತ್ತಿರುವ ಸಂಪರ್ಕ ಸರ್ಕಾರದ ನೌಕರರಲ್ಲಿ ಹೆಚ್ಚು. ಅಲ್ಪಸ್ವಲ್ಪ ವರ್ತಕರಲ್ಲಿ, ಆಗಿಂದಾಗ್ಗೆ ಪ್ರವಾಸ ಮಾಡುತ್ತಿರುವ ವಿದ್ಯಾವಂತ ವರ್ಗದಲ್ಲಿ. ಆದರೆ ದೇಶದ ಅಧಿಕಸಂಖ್ಯೆಯ ಜನ ವಾಸಿಸುವುದು ಹಳ್ಳಿಗಳಲ್ಲಿ. ಈ ಅಧಿಕಸಂಖ್ಯೆಯ ಜನ ಹೊರ ಭಾಗದ ಜನಸಂಪರ್ಕದಿಂದ ದೂರವಾಗಿರುವುದು ಮಾತ್ರವಲ್ಲ, ಶಿಕ್ಷಣದಿಂದಲೂ ಇನ್ನೂ ದೂರಾಗಿದ್ದಾರೆ. ಎಲ್ಲ ಜಿಲ್ಲೆಗಳಲ್ಲೂ ಇದನ್ನು ಕಾಣುತ್ತೇವೆ. ಇದರಿಂದಾಗಿ ಜಿಲ್ಲೆ ಜಿಲ್ಲೆಗಳಲ್ಲಿ, ಜಿಲ್ಲೆಯ ಒಳಭಾಗದಲ್ಲಿ ಜನರಾಡುವ ಕನ್ನಡ ಭಾಷೆಯಲ್ಲಿ ವ್ಯತ್ಯಾಸ ಗಳನ್ನು ಇನ್ನೂ ಗುರುತಿಸಬಹುದಾಗಿದೆ. ಮೈಸೂರು ಜಿಲ್ಲೆಯ ಕೆಲವು ವಿಶೇಷ ಲಕ್ಷಣಗಳನ್ನು ಸ್ಥೂಲವಾಗಿ ಗುರುತಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಸಾಮಾನ್ಯವಾಗಿ ಯಾವುದೇ ಭಾಷೆಯ ಅಧ್ಯಯನವನ್ನು ಮಾಡುವಾಗ ಮೊಟ್ಟ ಮೊದಲು ಆ ಭಾಷೆಯಲ್ಲಿ ಕಂಡುಬರುವ ಸಾರ್ಥಕ ಧ್ವನಿಮಾಗಳನ್ನು ಕಂಡು ಹಿಡಿಯು

ತ್ತಾರೆ. ಆ ಧ್ವನಿಮಾಗಳೇ ಭಾಷೆಯ ತಳಹದಿ. ಆಯಾ ಭಾಷೆಯ ಪದಜೋಡಿಯ ಸಹಾಯದಿಂದ ಅರ್ಥೋಚ್ಚಾರಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಂಡುಹಿಡಿಯಲಾದ ಈ ಧ್ವನಿಮಾ ಸಮೂಹವನ್ನು ಧ್ವನಿಮಾಗಳು ಅಥವಾ ವರ್ಣಸಮಾಮ್ನಾಯ ಅಥವಾ ವರ್ಣಮಾಲೆ ಎಂದು ಕರೆಯುತ್ತಾರೆ. ಇದನ್ನೇ phonology ಎನ್ನುತ್ತಾರೆ. ಅನಂತರ ಭಾಷೆಯ ಸಂಧಿ (morphophonemics), ವ್ಯಾಕರಣ (morphology) ವಾಕ್ಯವಿಚಾರ (syntax) ಮುಂತಾದ ಭಾಷಾ ಭಾಗಗಳ ಅಧ್ಯಯನ ಮಾಡುತ್ತಾರೆ. ಮೈಸೂರು ಜಿಲ್ಲೆಯಲ್ಲಿ ಮಾತನಾಡುವ ಕನ್ನಡದ ಧ್ವನಿಮಾಗಳನ್ನು ಈ ರೀತಿ ಗುರುತಿಸಬಹುದು. (ಅಂತರಾಷ್ಟ್ರೀಯ ಧ್ವನಿಚಿಹ್ನೆಗಳನ್ನು ಬಳಸುವಾಗ ಕನ್ನಡದಲ್ಲ ಸ್ವಲ್ಪ ತೊಂದರೆ ಕಂಡುಬಂದುದರಿಂದ ಕನ್ನಡ ವರ್ಣಗಳ ಜೊತೆಯಲ್ಲಿ ವಿಶಿಷ್ಟ ಉಚ್ಚಾರಣೆಯನ್ನು ಗುರುತಿಸುವ ಸಲುವಾಗಿ ಮಗ್ಗುಲಲ್ಲಿಯೇ IPA ಚಿಹ್ನೆಯನ್ನು ಬಳಸಲಾಗಿದೆ).

ಸ್ವರಧ್ವನಿಮಾಗಳು :

ಇ ಉ
ಎ ಒ /ದೀರ್ಘ/ /~/
ಎɛ ಅə
ಅ್ಯæ ಅV ಒɔ
ಅ

ಅರ್ಥ ಮತ್ತು ಉಚ್ಚಾರಣೆಗಳ ಸಹಾಯದಿಂದ ಈ ಭಾಷೆಯ ಧ್ವನಿಸಮೂಹವನ್ನು ವಿಶ್ಲೇಷಿಸಿದಾಗ ಇದರಲ್ಲಿ ಹತ್ತು ಸ್ವರಧ್ವನಿಮಾಗಳು ಕಂಡುಬರುತ್ತವೆ. ದೀರ್ಘ ಮತ್ತು ಅನುನಾಸಿಕಗಳು ಧ್ವನಿಮಾಸ್ಥಾನಮಹತ್ವವನ್ನು ಪಡೆಯುತ್ತವೆ. ಈ ಪದ ಜೋಡಿಯ ಪಟ್ಟಿಕೆಯನ್ನು ಕೆಳಗೆ ಕೊಡಲಾಗಿದೆ.

/ಸಿಕ್ಲು/ /ಸೀಕ್ಲು/ ; /ಇಡು/ /ಈಡು/ ; /ತೆನೆ/ /ತೇನೆ/ ; /ನೆಗ್ಲು/ /ನೇಗ್ಲು/ ; /ಗೆದಿ/ /ಗೇದಿ/ ; /ನೆɛರ್ಕೆ/ /ನಾɛರ್ಕೆ/ ; /ಸೆɛರೆ/ /ಸಾɛರೆ/ ; /ಬೆæರೆ ಬ್ಯಾæರೆ ; /ಕೆರೆ/ /ಕ್ಯಾæರೆ/ ; /ಬəರೆ/ /ಬರೆ/ ; /ಅəತ್ತೆ/ /ಅತ್ತೆ/ ; /ಕʌಳ್ಳಿ/ /ಕಳ್ಳಿ/; /ಕದ /ಕಾದ/; /ಮದ/ /ಮಾದ/; /ಕೊɔನೆ/ /ಕೋɔಣೆ/ ; ಕೊಡು/ /ಕೋಡು ; /ಉಳು/ /ಊಳು/; /ತ್ಹಿಲು/ (ಕಿವಿಯ ಕೆಳಭಾಗ) ಆಲು/ ; ಕ̃ಾವು/ ಕಾವು .

ಹ್ರಸ್ವ ಮತ್ತು ದೀರ್ಘ ಸ್ವರಧ್ವನಿಮಾಗಳನ್ನು ಇಲ್ಲಿ ಕಾಣಬಹುದು. ಮಧ್ಯ ಪರಿಸರದಲ್ಲಿ ಅರ್ಧದೀರ್ಘವನ್ನೂ ಗುರುತಿಸಬಹುದು. ಈ ಉಪಭಾಷೆಯಲ್ಲಿ ಸಂಧ್ಯಕ್ಷರಗಳನ್ನು ಕಾಣಲಾಗುವುದಿಲ್ಲ. ಪದದಾದಿಯ 'ಎ' 'ಒ'ಗಳ ಸ್ಥಾನವಲ್ಲಿ ಅರ್ಧಸ್ವರಗಳೆನಿಸಿದ 'ಯ' 'ವ'ಗಳ ಪ್ರಯೋಗವಾಗುತ್ತದೆ.

ವ್ಯಂಜನ ಧ್ವನಿಮಾಗಳು :

	ಓಷ್ಠ್ಯ		ದಂತ್ಯ		ಮೂರ್ಧನ್ಯ		ತಾಲವ್ಯ		ಕಂಠ್ಯ		ಕಂಠ್ಯೇತರ	
	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ
ಸ್ಪರ್ಶ	ಪ್	ಬ್	ತ್	ದ್	ಟ್	ಡ್	ಚ್	ಜ್	ಕ್	ಗ್		
ಘರ್ಷ			ಸ್				ಶ್					ಹ್
ಅನುನಾಸಿಕ		ಮ್		ನ್		ಣ್						
ಅನುಘರ್ಷ (Trill)				ರ್								
ಪಾರ್ಶ್ವ				ಲ್		ಳ್						
ಅರ್ಧಸ್ವರ		ವ್						ಯ್				

ಈ ಕೆಳಗಿನ ವ್ಯಂಜನಧ್ವನಿಮಾಗಳನ್ನು ಕೆಳಗಿನ ಕನಿಷ್ಠತಮ ಯುಗ್ಮಗಳಿಂದ ಅರಿಯಬಹುದು.

	ಆದಿ	ಮಧ್ಯ	ಅಂತ್ಯ
/ಪ–ಬ/	/ಪಾಲ/	/ಸೀಪು/	/ತಪ್ಪು/
	/ಬಾಲ/	/ಸೀಬು/	/ತಬ್ಬು/
/ತ–ದ/	/ತಾರಿ/	/ಕೂತು/	/ಬುತ್ತಿ/
	/ದಾರಿ/	/ಕೂದು/	/ಬುದ್ದಿ/
/ಟ–ಡ/	—	/ಮಾಟಿ/	/ಕಟ್ಟಿ/
		/ಮಾಡಿ/	/ಕಡ್ಡಿ/
/ಚ–ಜ/	/ಚಾರಿ/	/ಬಾಚು/	/ಕಚ್ಚಿ/
	/ಜಾರಿ/	/ಬಾಜು/	/ಕಜ್ಜಿ/
/ಕ–ಗ/	/ಕಾದೆ/	/ಅಕು/	/ಅಕ್ಕ/
	/ಗಾದೆ/	/ಅಗು/	/ಅಗ್ಗ/
/ಮ–ನ–ಣ/	/ಮರ/	/ಆಮೆ/	/ಅಮ್ಮ/
	/ನರ/	/ಆನೆ/	/ಅನ್ನ/
	—	/ಆಣೆ/	/ಅಣ್ಣ/

	ಆದಿ	ಮಧ್ಯ	ಅಂತ್ಯ
/ರ–ಲ–ಳ/	/ರಂಗ/	/ಬರಿ/	/ಬರ್ರಿ/
	/ಲಂಗ/	/ಬಲಿ/	/ಬಲ್ಲಿ/
		/ಬಳಿ/	/ಬಳ್ಳಿ/
/ಸ–ಶ/	/ಸಾಲು/	—	—
	/ಶಾಲು/	—	—
/ವ–ಯ/	/ವಾತ/	—	—
	/ಯಾತ/	—	—

ಸಾಮಾನ್ಯವಾಗಿ ಸ್ಪರ್ಶವ್ಯಂಜನಗಳಲ್ಲಿ ಮಹಾಪ್ರಾಣಗಳು ಕಂಡುಬರುವುದಿಲ್ಲ.

ವ್ಯಂಜನಧ್ವನಿಮಾಗಳಲ್ಲಿ ಸಜಾತೀಯ ಹಾಗೂ ವಿಜಾತೀಯ ದ್ವಿವ್ಯಂಜನ ದ್ವಿತ್ವಗಳನ್ನು ಕಾಣುತ್ತೇವೆ. ಇಲ್ಲಿ ವ್ಯಂಜನದ್ವಿತ್ವಗಳನ್ನು ಗುರುತಿಸುವಾಗ ಕನಿಷ್ಠ ಪ್ರಕೃತಿ/ಧಾತುರೂಪ (minimum free form) ವನ್ನು ಮಾತ್ರ ಪರಿಗಣಿಸದೆ ಎರಡು ವಿರಾಮಗಳ ಮಧ್ಯದ ಉಚ್ಚಾರಣೆ (utterence between two pauses) ಯನ್ನು ಕನಿಷ್ಠ ಘಟಕವನ್ನಾಗಿ ತೆಗೆದುಕೊಳ್ಳಲಾಗಿದೆ.

ಎರಡು ವ್ಯಂಜನಗುಚ್ಛ ಅಥವಾ ಎರಡು ವ್ಯಂಜನದ್ವಿತ್ವ ವಿಧಾನವನ್ನು ಮುಂದಿನ ಪುಟದಲ್ಲಿ ಕೊಟ್ಟಿರುವ ನಕ್ಷೆಯಿಂದ ಗುರುತಿಸಬಹುದು. ಅದರಿಂದಾಗಿ ಅದಕ್ಕೆ ಉದಾಹರಣೆಗಳನ್ನು ಕೊಟ್ಟಿಲ್ಲ.

ಮೂರು ವ್ಯಂಜನ ಗುಚ್ಛ (three members consonant clusters) ಗಳಿಗೆ ಕೆಲವು ಉದಾಹರಣೆಗಳನ್ನು ಕೊಡಲಾಗಿದೆ.

–plm–	ಚಾಪ್‌ಲ್ಮೀನು	–drm–	ಇದ್‌ರ್ಮುದ್ಯ
–prc–	ಕಪ್‌ರ್ಚೆಟ್ಟಿ	–kdr–	ಸಿಕ್‌ದ್ರೆ
–prd–	ಚಪ್‌ರ್ದೌರೆ	–kst–	ಅಕ್‌ಸ್ತಿಮಿ
–bṇd–	ಕಬ್‌ಣ್ದಿರ್ಜಿ	–gḷk–	ಮೇಗ್‌ಳ್ಕೈಯ್ಯಿ
–brg–	ಸಾಬ್‌ರ್ಗಳ್ಗೆ	–gls–	ಮನ್ನುಗ್‌ಲ್ಸಾಸ್ತ್ರ
–trm–	ಪುರೋತ್‌ರ್ಮನ್ಗೆ	–gḷn–	ಮಗ್‌ಳ್ಣ
–tgḷ–	ಎತ್‌ಗ್ಳು	–gdr–	ತಗ್‌ದ್ರು
–trs–	ಪಾತ್‌ರ್ಸೋರೆ	–gḷb–	ಮಗ್‌ಳ್ಬಂದ್ಲು
–drb–	ಯದ್‌ರ್ಬ್ಯಾಡ	–gdn–	ತೆಗ್‌ದ್ನೋಡು

ವ್ಯಂಜನಗುಚ್ಛ

	p	b	t	d	ṭ	ḍ	c	j	k	g	m	n	ṇ	ɳ	l	ḷ	r	s	v	ɥ
p	×	×	×	×	×	×	×		×	×	×	×	×		×	×	×	×	×	×
b		×	×	×	×	×	×		×	×	×	×	×		×	×	×	×		
t		×	×	×					×	×	×	×					×	×		
d		×		×				×	×	×	×	×			×		×	×	×	×
ṭ		×	×	×	×	×			×	×	×		×			×	×	×	×	×
ḍ	×	×		×		×	×		×	×	×					×	×	×		
c		×	×	×		×	×		×	×	×	×	×		×	×	×	×	×	
j		×		×				×	×	×	×	×	×		×		×		×	×
k	×	×	×	×	×	×	×		×		×	×			×	×	×	×	×	×
g		×	×	×	×	×	×		×	×	×	×	×		×	×	×	×	×	×
m	×	×	×	×	×	×	×	×	×	×	×	×			×		×	×	×	
n	×	×	×	×		×	×	×	×	×	×	×			×		×	×	×	×
ṇ	×	×	×	×	×	×	×	×	×	×	×		×			×	×	×	×	×
ɳ																				
l	×	×	×	×			×	×	×	×	×	×			×			×	×	
ḷ	×	×	×	×	×	×	×	×	×	×	×					×	×	×	×	×
r	×	×	×	×	×	×	×	×	×	×	×	×	×		×	×	×	×	×	×
s	×	×	×	×	×	×	×		×	×	×	×			×		×	×	×	×
v		×	×	×	×	×	×	×	×	×	×	×	×		×	×	×	×	×	×
ɥ	×	×	×	×					×	×	×	×			×		×	×	×	×

-dsk- ಸೆರ್ಗೋದ್‌ಸಾಂಕ್ಡು -gsk- ಉಪ್ಯೋಗ್‌ಸ್ಕೊ
-drs- ಅದ್ರ್‌ಸಾಯ್‌ದಿಂದ -glm- ಯಗ್ಲ್‌ಮ್ಯಾಲೆ
-drt- ಅದ್ರ್‌ತಂದೆ........ಇತ್ಯಾದಿ.

ಧ್ವನಿವ್ಯತ್ಯಾಸ (Sound Change): ಆಡುವ ಭಾಷೆ ಕನ್ನಡವೇ ಆದರೂ ಅನೇಕ ಸಂದರ್ಭಗಳಲ್ಲಿ ಉಚ್ಚಾರಣೆಯ ವೈವಿಧ್ಯದಿಂದಾಗಿ ಭಾಷೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರಾಣಿ ಅಥವಾ ಸಸ್ಯಗಳಲ್ಲಿ, ಒಂದೇ ಜಾತಿಗೆ ಸೇರಿದ್ದರೂ, ಬೇರೆಬೇರೆ ಉಪಜಾತಿ ಅಥವಾ ಉಪವರ್ಗಗಳು ಸೃಷ್ಟಿಯಾಗುವಂತೆ ಭಾಷೆಯಲ್ಲಿಯೂ ಉಪಭಾಷೆಗಳು ಉಂಟಾಗುತ್ತವೆ. ಇವುಗಳಲ್ಲಿ ತೋರುವ ವ್ಯತ್ಯಾಸಗಳು ಕೇವಲ ಧ್ವನಿಯಲ್ಲಿ ಉಂಟಾಗಬಹುದು, ಅರ್ಥದಲ್ಲಿ ಉಂಟಾಗಬಹುದು, ಪ್ರಯೋಗದಲ್ಲಿ ಉಂಟಾಗಬಹುದು. ಕೆಲವೊಮ್ಮೆ ಹೀಗೆ ಉಂಟಾಗುವ ವ್ಯತ್ಯಾಸಗಳಿಂದ ಭಾಷೆಯು ಅರ್ಥವಾಗದೇ ಹೋಗುವ ಸಂದರ್ಭವೂ ಉಂಟು. ಇಲ್ಲಿ ಧ್ವನಿಗಳಲ್ಲಿ ಉಂಟಾಗಿರುವ ವ್ಯತ್ಯಾಸಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಉದಾ: ೧) ಕಾವ್ಲು < ಕಾಲುವೆ, ಕಾರ್ಲು < ಕಾಲರ,
ರಾಮಣ್ಯ < ರಾಮಾಯಣ, ವೊಲ್ಸು < ಹೊಸ್ತಿಲು.

ಇಲ್ಲೆಲ್ಲ ಧ್ವನಿಗಳು ಸ್ಥಾನಪಲ್ಲಟವಾಗಿರುವುದನ್ನು ಕಾಣಬಹುದು. ಇದನ್ನು ಅಕ್ಷರಪಲ್ಲಟ (Metathesis) ಎಂದು ಕರೆಯುತ್ತಾರೆ.

೨) ಪರ್ಸಾದ < ಪ್ರಸಾದ, ಕಳಾಸು < ಕ್ಲಾಸ್, ಸಿಲೇಟು < ಸ್ಲೇಟ್, ಬಿರಾಂದಿ < ಬ್ರಾಂದಿ, ತಿರ್‌ಸೂಲ < ತ್ರಿಶೂಲ.

ಎರಡು ವ್ಯಂಜನಗುಚ್ಛಗಳ ಮಧ್ಯೆ ಒಂದು ಸ್ವರವನ್ನು ಇಲ್ಲಿ ಸೇರಿಸಲಾಗಿದೆ. ಸಾಮಾನ್ಯವಾಗಿ ಅನ್ಯಭಾಷೆಯಿಂದ ಎರವಲು ತೆಗೆದುಕೊಂಡಿರುವ ಶಬ್ದಗಳಲ್ಲಿ ಈ ವಿಧಾನವನ್ನು ಕಾಣಬಹುದು.

೩) ವಾನ < ವಾಹನ, ಕೂದು < ಕುಯಿದು, ಪುರೋತ್ರು < ಪುರೋಹಿತರು, ಆಲೆ < ಆಗಲೆ, ತಾರ್ಸು < ಸಾರಿಸು.

ಮಧ್ಯೆ ಒಂದು ಅಕ್ಷರ ಬಿಟ್ಟು ಹೋಗಿರುವದನ್ನು ಇಲ್ಲಿ ಕಾಣಬಹುದು. ಇದನ್ನು Syncopation ಎಂದು ಕರೆಯುತ್ತಾರೆ.

೪) ತಾಪತ್ರ < ತಾಪತ್ರಯ, ಸಂಸ < ಸಂಶಯ, ಎರ < ಇರುವೆ.

ಅಂತ್ಯಾಕ್ಷರ ಲೋಪವಾಗಿರುವುದನ್ನು ಇಲ್ಲಿ ಕಾಣಬಹುದು. ಇದನ್ನು Apocope ಎನ್ನುತ್ತಾರೆ.

೫) ಅಳ್ಳ < ಪಳ್ಳ < ಪಡುವಲ (ಕಾಯಿ), ಇತ್ವರ್ತ < ವಿತ್ಯರ್ಥ, ಈಳ್ಯ < ವೀಳ್ಯ, ಅಪ್ಪೆ < ರೆಪ್ಪೆ, ಇಸ < ವಿಷ, ಇಂಬಿ < ನಿಂಬೆ, ಇಲಾತಿ < ವಿಲಾಯಿತಿ.

ಆದಿಸ್ವರ ಅಥವಾ ವ್ಯಂಜನ ಬಿಟ್ಟು ಹೋಗಿದೆ. ಇದನ್ನು Aphetis ಎನ್ನುತ್ತಾರೆ.

೬) ಮಳ್ಳು < ಮರ್ಳು < ಮರಳು, ಅಳ್ಳು < ಅರ್ಳು < ಹರಳು, ಸೊಳ್ಳ < ಸೊಡ್ಳ < ಸಡಿಲ, ಸೊಳ್ಳು < ಸೊಡಲು < ಸೊಡರು, ಗುಳ್ಳು < ಗುಡ್ಳು < ಗುಡಿಸಲು, ಕುಳ್ಳು < ಕುಡ್ಳು < ಕುಡುಗೋಲು, ಕೊಳ್ಳಿ < ಕೊಡ್ಳಿ < ಕೊಡಲಿ.

ಮೊದಲು ಮಧ್ಯಸ್ವರ ಲೋಪವಾಗಿ ವಿಜಾತೀಯ ಸಂಯುಕ್ತಾಕ್ಷರವಾಗಿ ಈಗ ಸಜಾತೀಯ ದ್ವಿತ್ವಾಕ್ಷರವಾಗಿರುವುದನ್ನು ಕಾಣಬಹುದು. ಇದನ್ನು Regressive assimilation ಎನ್ನುತ್ತಾರೆ.

ಕೆಲವು ಪ್ರದೇಶಗಳಲ್ಲಿ 'ಎ' ಕಾರಾಂತವಾದ ನಾಮಪ್ರಕೃತಿಗಳನ್ನು 'ಅ' ಕಾರಾಂತವಾಗಿ ಉಚ್ಚರಿಸುತ್ತಾರೆ.

ಉದಾ : ಕಳ < ಕಳೆ, ಮಳ < ಮಳೆ, ಬೆಳ < ಬೆಳೆ, ತೆನ < ತೆನೆ, ಬೆಣ < ಬೆಣೆ, ಕೆರ < ಕೆರೆ. ಇತ್ಯಾದಿ.

ಬಹುವಚನ ಪ್ರತ್ಯಯಗಳು :

–ದೀರು, –ಗೂಳು, –ರು

ಉದಾ : ಅಣ್ಣಾತಮ್ದೀರು, ತಮ್ಬ್‌ಡಿಗುಳು, ದೇವ್ರು ಇತ್ಯಾದಿ.

ನಾಮವಿಭಕ್ತಿ (ಪ್ರತ್ಯಯಗಳು) :

ಪ್ರ. ವಿ : φ, ಉ.

φ– ಮನುಸ ಬಂದ

ಉ– 'ಉ' ಪ್ರತ್ಯಯ ಏಕವಚನ ಬಹುವಚನ ಎರಡರಲ್ಲೂ ಪ್ರಯೋಗವಾಗುತ್ತದೆ. ಆಯಪ್ಪು, ಅಪ್ಪು, ಉದುಗ್ರು (ಉಡುಗ್ರು).

ದ್ವಿ. ವಿ : φ, ಅ, ನ, ಅನ್ನ.

φ– ಬತ್ತ ತಂದಿರ್ರ್ಯಾ, ರಾಗಿ ಬೆಳಿತಿವಿ........ಇತ್ಯಾದಿ.

ಅ, ನ– ಮಂತ್ರಿಯ ಕರುಸ್ದ, ಸೆಟ್ರುನ ಕರುಸ್ದ, ಮಾರಾಜ್ರುನ ಕೇಳ್ದ.
ಅನ್ನ– ವಿವೇಕುವನ್ನ, ಅವ್ರುನ್ನ........ಇತ್ಯಾದಿ.

ತೃ. ವಿ : ಇಂದ– ದೇಸುದಿಂದ.

ಚ. ವಿ : ಗೆ, ಗ್ಗ, ಕೆ, ಕ್ಕ.
ಗೆ– ರಾಜುಂಗೆ, ಗ್ಗ– ಮಗ್ಗ (ಮಗಳಿಗೆ),
ಕೆ– ರಾಜುಂ ತಾಕೆ, ದೊಡ್ಗಳ್ಳಾತ್ವೆಕ್ಕೆ, ಕ್ಕ–ಮಕ್ಕ (ಮಗನಿಗೆ).

ಷ. ವಿ : ಅ– ಸ್ನೇಹಿತುನ, ತೆಂಗುನ ಮರ.

ಸ. ವಿ : ಅಲ್ಲಿ– ಮಲ್ಲಿ (ಮನೆಯಲ್ಲಿ), ಮದ್ರಾತ್ರೇಲಿ.

ಕ್ರಿಯಾವಿಭಕ್ತಿ (ಆಖ್ಯಾತ ಪ್ರತ್ಯಯಗಳು) : ವರ್ತಮಾನ ಕಾಲ

ಏಕವಚನ	ಬಹುವಚನ
–ಇನಿ	–ಇಮಿ
–ಇ,–ಇದಿ,–ಎ	–ಇರಿ
–ಅನೆ, –ಅಳೆ,	–ಅರೆ
–ಅದೆ, –ಅಯ್ತೆ	–ಅವೆ.

'ನೋಡು' ಧಾತುವಿನ ವರ್ತಮಾನ ರೂಪಗಳು :

ನೋಡ್ತಿನಿ, ನೋಡ್ತಿವ್ನಿ	ನೋಡ್ತಿಮಿ
ನೋಡ್ತಿ, ನೋಡ್ತಿದಿ, ನೋಡ್ತಿಯೆ	ನೋಡ್ತಿರಿ
ನೋಡ್ತನೆ ನೋಡ್ತಳೆ	ನೋಡ್ತರೆ
ನೋಡ್ತದೆ, ನೋಡ್ತಯ್ತೆ	ನೋಡ್ತವೆ.

ಭೂತಕಾಲದ ಆಖ್ಯಾತ ಪ್ರತ್ಯಯಗಳು :

–ಎ, –ಇನಿ	–ಮಿ, –ಇಮಿ
–ಇ, ಎ.	–ರಿ
–ಅ, –ನು –ಲು, (ತು)	–ರು
–ತು	–ವು

'ನೋಡು' ಧಾತುವಿನ ಭೂತಕಾಲದ ರೂಪಗಳು,

ನೊಡ್ದೆ, ನೋಡಿನಿ	ನೋಡ್‌ದ್ಮು, ನೋಡಿವಿ
ನೋಡ್ದಿ, ನೋಡ್ದೆ	ನೋಡುದ್ರಿ
ನೋಡ್ದ, ನೋಡುದ್ನು ನೋಡುದ್ಲು, (ನೋಡ್ತು)	ನೋಡುದ್ರು
ನೋಡ್ತು	ನೋಡುದ್ವು

'ಇರ್' ಧಾತುವಿನ ರೂಪಗಳು ಗಮನಾರ್ಹವಾಗಿವೆ :

ಇದ್ದಿನಿ, ಇವ್ನಿ, ಅವ್ನಿ	ಇದೀವಿ, ಅದೀವಿ
ಇದಿ, ಅದಿ	ಇದ್ದೀರಿ, ಅದೀರಿ
ಅವ್ನೆ, ಇದ್ದಾನೆ ಅವ್ಳೆ, ಇದ್ದಾಳೆ	ಅದಾರೆ, ಇದ್ದಾರೆ, ಅವ್ರೆ
ಇದೆ, ಅದೆ	ಅವೆ, ಇವೆ

ಪುರುಷವಾಚಕ ಸರ್ವನಾಮಗಳು :

ಉ. ಪು.	ನಾನು–ನಾ	ನಾವು
ಮ. ಪು.	ನೀನು–ನೀ	ನೀವು
ಪ್ರ. ಪು.	ಅವ್ನ-ಅವ-ಅವು ಇವ್ನು-ಇವ-ಇವು ಅವ್ಳು-ಆಕಿ ಇವ್ಳು-ಈಕಿ	ಅವ್ರು, ಇವ್ರು
	ಅದು, ಇದು	ಅವು, ಇವು

ಸ್ಥಳವಾಚಕಗಳು :

ಅಲ್ಲಿ, ಇಲ್ಲಿ, ಆಚೊರಿ, ಈಚೊರಿ, ಬಲ್‌ಚೊರಿ, ಎಡ್‌ಚೊರಿ, ವಚ್ಚೊರಿ

ಪರಿಮಾಣವಾಚಕಗಳು :

ಅಟ್ಟು, ಆಸು, ಐಸು, ಎಸು, ಓಸು, ಓಟು, ಇಟ್ಟು, ಈಸು– ಇತ್ಯಾದಿ.

ಹಾಗೆ– ಹಂಗೆ, ಹಂಗಾರೆ; ಹೀಗೆ– ಹಿಂಗೆ, ಹಿಂಗಾರೆ, ಇಂಗಾರೆ; ಹೇಗೆ– ಹೆಂಗೆ ಇತ್ಯಾದಿ.

ಪ್ರಶ್ನಾರ್ಥಕಗಳನ್ನು ಬಳಸುವಾಗ ಮುಖ್ಯವಾಗಿ ಈ ಕೆಳಗಿನ ಪ್ರಯೋಗಗಳು ಗಮನಾರ್ಹವಾದವು. ಉದಾ : ಬಂದರ್‍ಯಾ, ಹಾದಾರ್‍ಯಾ, ಕೇಳಿರ್‍ಯಾ ಇತ್ಯಾದಿ
ಯಾಕ, ಯಾನು, ಯಾರು – ಇತ್ಯಾದಿ

ವಿಧ್ಯರ್ಥ ರೂಪಗಳು :

ವಾಗಾನ, ಬರಾನ; ವಾಗಾವ್ಮು, ಬರಾವ್ಮು ಇತ್ಯಾದಿ.

ಇಲ್ಲಿನ ಕೆಲವು ವಿಶಿಷ್ಟಪ್ರಯೋಗಗಳನ್ನು ಗಮನಿಸಬಹುದು.

ಸಾಮಾನ್ಯವಾಗಿ ಇಲ್ಲಿ ಅಕ್ಷರಗಳ ಮಧ್ಯದಲ್ಲಿ 'ಉ'ಅನ್ನು ಸೇರಿಸಿ ಉಚ್ಚರಿಸುತ್ತಾರೆ. ಉದಾ : ಮಡುಗ್ಬುಟ್ಟು ಬಂದ್ಬುಡ್ತದೆ, ತಕ್ಕುಬಂದು ಮಾರುದು, ರಾಜುಂಗೊಬ್ ಮಂತ್ರಿ, ಪ್ರೇಮುವಾದ್ ಮಂತ್ರಿ, ದೇಸುದಿಂದ, ಅರುಮನೆ, ಕೇಳುದ್ರು, ಹೊಸಬುನ ನೇಮುಸ್ಕಂಡ್ರು, ತಿಳುಸು, ಕಷ್ಟುಕ್ಕೆ, ಯಾತುಕ್ಕೆ, ತೆಂಗುನ್‌ಮರ, ಫಲ ಕಚ್ಚುದ್ ಮ್ಯಾಲೆ, ಬಿತ್ತುಬೀಜ, ಸ್ನೇಯಿತುನ, ಸುರುವನ್ನ, ರಂಗುಮಂಟ್ಪ, ಸತ್ತುವಂತೆ ಇತ್ಯಾದಿ.

ಮಾತು ಮಾತಿಗೂ ಸಾಮಾನ್ಯವಾಗಿ 'ಯೇಳಿ' ಎಂದು ಸೇರಿಸುತ್ತಾರೆ. ಬಹುಮಟ್ಟಿಗೆ ಶಿಷ್ಟರ ಜೊತೆಯಲ್ಲಿ ಮಾತನಾಡುವಾಗ ಹೀಗೆ ಸೇರಿಸಿ ಮಾತನಾಡುವುದು ವಾಡಿಕೆ ಎಂದು ತೋರುತ್ತದೆ. ಉದಾ : ಅವ್ನಿಯೇಳಿ, ಇಲ್ಲೇಳಿ, ಗೆಪ್ತಿಲ್ಲೇಳಿ, ವರ್ರ್ಸೇಳಿ, ವಾದಾರೇಳಿ, ಮಾಡಿಮೇಳಿ, ಯೋಳ್ತಿಮೇಳಿ, ಬತ್ತಿಮೇಳಿ, ಆಯ್ತೇಳಿ ಇತ್ಯಾದಿ.

ರ > ಲ : ಸಿವಲಾತ್ರಿ; (ಶಿವರಾತ್ರಿ), ಮಾಲಾಮಿ (ಮಾದನವಮಿ), ಸೆಂಕಲಾತಿ (ಸಂಕ್ರಾಂತಿ), ಪಲಕ್ರಮಿ < ಪರಾಕ್ರಮಿ, ಇತ್ಯಾದಿ.

ಹೊ, ಹೋ > ವಾ : ವಾದ್ರು, ವಾಗ್ತರೆ, ವಾದಾರು, ವಾದಾಗ, ವಾತ, ವತಾರೆ (ಹೊತ್ತಾರೆ) ಇತ್ಯಾದಿ.

ದ > ಜ : ಜಿನ < ದಿನ, ಅದಿನ್ನೈಜಿನ್ಕೆ, ಎಂಟುಜಿನ, ಜಿನವುಡೆ ಊದು, ಜವ್ನ, ಜೊನ್ನ, ಜೋತ್ರ-ಪಂಚೆ, ಪಜ್ಜೊರೆ, ಆರಾಜ್ನೆ < ಆರಾಧನೆ, ಕಾಮಜೇನು < ಕಾಮಧೇನು, ಜಿಟ < ದಿಟ, ಜಿವ್ಸ < ದಿವ್ಸ ಇತ್ಯಾದಿ.

ಓ > ವಾ : ಕ್ವಾಣೆ, ಕ್ವಾರಡ, ಕ್ವಾರಣ್ಯ, ಗ್ವಾಟೆ (ಗೋಟೆ=ಗಂಟುವುಟೆ), ಗ್ವಾರಂದ (ಗೋರಂದ=ಸ್ಥೈರ್ಯ), ಗ್ವಾರು, ಬ್ವಾನ (ಬೋನು), ಮ್ವಾರೆ, ರ್ವಾಗ, ರ್ವಾಮ, ವಾಟ, ವಾಲ್ಗ, ಸ್ವಾನ (ಸೋನೆ) ಇತ್ಯಾದಿ.

ಸ > ಚ, ಜ, ತ : ಕಡೆಚಾರಿ(ಕಡೆಸಾರಿ), ಚೂಡಿ (ಸೋಡಿ), ಚಂಚಾರ (ಸಂಚಾರ), ಚಂಚುಗಾರ (ಸಂಚುಗಾರ), ಜಮೆಯ (ಸಮಯ), ಪಿಚಾತಿ (ಪಿಶಾಚಿ) ಇತ್ಯಾದಿ.

ಚ > ಸ : ಸಳಿ (ಚಳಿ), ಸೂರಿ (ಚೂರಿ), ಸಿಂತ್ಯ (ಚಿಂತೆ), ಹಸ್ಸಿ (ಹಚ್ಚಿ) ಇತ್ಯಾದಿ.

ಡ > ಳ : ಕಳ್ಳಿ, ಗುಳ್ಳು (ಗುಡಿಸಲು), ಪಳ್ಳು (ಪಡುವಲಕಾಯಿ), ಸಳ್ಳ (ಸಡಿಲ), ಸೊಳ್ಳು (ಸೊಡರು) ಇತ್ಯಾದಿ.

ಪೂರ್ವದ್ರಾವಿಡದ ಸ್ವರೂಪ ಎನಿಸಿಕೊಂಡ 'ಎ' ಕೆಲವು ಕಡೆ ಇಲ್ಲಿ ಉಳಿದು ಕೊಂಡಿರುವುದನ್ನು ಕಾಣಬಹುದು :

ಉದಾ ; ಎರ, ಕೆಂಚೆರ, ಬೆಳಿ, ಬೆಳ್ಳಸ, ಎರಕು (ಇರಿಕು), ಸೆಪ್ಪೆ (ಸಿಪ್ಪೆ), ಬೆಲ್ಪತ್ರೆ, ಇತ್ಯಾದಿ.

ಶ > ಸ : ಐಸ್ಸಿರಿ, ಸಬ್ದ, ಸವ, ಸಾಸಾನ (ಶಾಸನ), ಸಿರುಸೇದ್ನೆ (ಶಿರಚ್ಛೇದನ), ಸೂಲ (ಶೂಲ) ಇತ್ಯಾದಿ.

ಕಾತಿ < ಕಾಗೆ, ಸಲಗು (ಸಲಹೆ) ಎಂಬ ವಿಚಿತ್ರ ಪ್ರಯೋಗಗಳನ್ನೂ ಗಮನಿಸಬಹುದು.

ವ > ಯಾ : ಯಾಸ (ವೇಷ), ಯಾಳ್ಳ (ವೇಳೆ) ಇತ್ಯಾದಿ.

ತ > ಟ : ಕೈಟಾಕು (ಕೈತಾಕು).

ನ > ರ : ಜರಣ (ಜನನ), ನಿಲುಗರಡಿ (ನಿಲುವುಗನ್ನಡಿ).

ಯ, ಲ, ವ ಗಳು ಅನುನಾಸಿಕಗಳಾಗಿ ಉಚ್ಚರಿತವಾಗುತ್ತವೆ.

ಉದಾ : ಆಮ್ಗೆ < ಆವಿಗೆ, ಇದ್ದುಮಾಂಸ < ವಿದ್ವಾಂಸ, ಕಿಮಿ < ಕಿವಿ, ಕೀಮು < ಕೀವು, ಕೆಂಡತಾಮ್ರೆ < ಕೆಂಡತಾವರೆ, ಜಾಮ < ಜಾವ, ಜೀಮ < ಜೀವ, ತಿಮಿ < ತಿವಿ, ನೀಮು < ನೀವು, ನಾಮು < ನಾವು, ಇತ್ಯಾದಿ.

ನ > ಲ : ಚಿಲುಮಯ < ಚಿನ್ಮಯ, ಜಲುಮ್‌ಸಜ < ಜನ್ಮಸಜ, ಲೋಟು < ನೋಟು, ಇತ್ಯಾದಿ.

ಲ > ನ : ನೋಕ್ಸರ < ಲೋಕಸರ, ನಿಂಗಯ್ಯ < ಲಿಂಗಯ್ಯ, ಮಾಡ್ನಾರ, ಮನಿಕಂದು, ಕ್ಯಾಳ್ನಿಲ್ಲ, ಕಟ್ಟಾಕ್ನಿಲ್ಲ. ಇತ್ಯಾದಿ.

ಎ > ಇ : ಅಗ್ನಿ < ಆಜ್ಞೆ, ಆರಾಜ್ನಿ < ಆರಾಧನೆ. ಕಾಣಿ < ಕಾಣೆ, ಬ್ಯಾದಿ < ಬಾಧೆ, ಇತ್ಯಾದಿ.

ಬ > ವ : ಗೂವೆ < ಗೂಬೆ, ತುರುವು < ತುರುಬು.

ವ > ಬ : ಬೆಳಸಾಯ < ವ್ಯವಸಾಯ, ಬ್ರತ < ವ್ರತ.

ಲ > ರ : ರಾವಣ್ಯ < ಲಾವಣ್ಯ.

ನ > ಣ : ಬಾಣ < ಬಾನು, ಮಜ್ಜಣ < ಮಜ್ಜನ, ಯೋಜೀಣ < ಯೋಜನ, ಜರಣ < ಜನನ, ವಾಸ್ಣ < ವಾಸನೆ, ಯೋಚುಣೆ < ಯೋಜನೆ, ಇತ್ಯಾದಿ.

ಣ > ಳ : ನೊಳ < ನೊಣ, ಮೇಳಿ < ಮೇಣೆ.

ಳ > ಣ : ಬೆಣಕು < ಬೆಳಕು.

ವಿಜಾತೀಯ ದ್ವಿತ್ವಗಳು ಸಜಾತೀಯವಾಗಿವೆ :

ಉದಾ : ಅಕ್ಕಸ್ತಿ < ಅಕ್ಷತೆ, ಅಗ್ಗಿದೇವ್ತಿ < ಅಗ್ನಿದೇವತೆ, ಅಗ್ರುರಮೆಂಟು < ಅಗ್ರಿಮೆಂಟ್, ಅಟ್ಟತ್ತು < ಅಷ್ಟುಹೊತ್ತು, ಅಸಯ್ಯ < ಅಸಹ್ಯ, ರುತ್ತಾಪ < ವೃದ್ಧಾಪ್ಯ, ಇತ್ಯಾದಿ.

ಆದಿ 'ವ' ಕಾರ ಮಾಯವಾಗಿರುವುದನ್ನು ಕಾಣಬಹುದು.

ಉದಾ : ಇದಿಯಮ್ಮ < ವಿಧಿಯಮ್ಮ, ಇದ್ದೆ < ವಿದ್ಯೆ, ಇದ್ದುಮಾಂಸ < ವಿದ್ವಾಂಸ, ಇಪುನ < ವಿಪಿನ, ಇಳ್ಯ < ವೀಳೆಯ, ಇಸಂಪ್ರಾಜಿ ಒತ್ತೆ < ವಿಷಾಪಹಾರಿಗುತ್ತಿ, ಇಸ್ತಾರ < ವಿಸ್ತಾರ, ಇಸ < ವಿಷ, ಇಸುಬ್ರುಮ್ಮ < ವಿಷಬ್ರಹ್ಮ, ಇಷ್ಣು < ವಿಷ್ಣು, ಈರತಮುನಿ < ವಿರಕ್ತಮುನಿ,

'ಹ' ಕಾರ ಬಿಟ್ಟು ಹೋಗಿರುವುದನ್ನು ಕಾಣಬಹುದು.

ಉದಾ : ಆರ < ಆಹಾರ, ಆರಾಗಾರ < ಹಾರಹಾರ, ಆರ್ಕ < ಹಾರ್ಕ, ಆರಾದಿ < ಆಹಾರಾದಿ, ಆಲು < ಹಾಲು, ಅವ್ತಿ < ಆಹುತಿ, ಆಸ್ಸ < ಹಾಸ್ಯ, ಅಂಬಾವ < ಅಹಂಭಾವ, ಈದುಲಿ < ಈದ ಹುಲಿ, ಉಲುಸು < ಹುಲುಸು, ಎರಂಡೆ < ಹೆರಂಡೆ, ಕಾಲ ರಣೆ < ಕಾಲಹರಣೆ, ಕಾಳೆ < ಕಹಳೆ, ಮಾದೇವ < ಮಹಾ ದೇವ, ಗರಾವು < ಗ್ರಹ, ಗಾಚಾರ < ಗ್ರಹಚಾರ, ಗಾರಟ್ಟಿ < ಗಾರೆಹಟ್ಟಿ, ಪಾರ < ಪಹರೆ.

ಹೆಣ್ಣುಮಕ್ಕಳಿಗೆ 'ಯುಮ್ಕ' ಎಂದು ಕರೆಯುತ್ತಾರೆ. ಇದೊಂದು ವಿಶಿಷ್ಟ ಪ್ರಯೋಗ. ಇಂಥ ಇನ್ನೂ ಅನೇಕ ಪ್ರಯೋಗಗಳನ್ನು ಗಮನಿಸಬಹುದು. ಉದಾ :

ಅಪೂಪುರ (ಅಪರೂಪ), ಅಳ್ಳೀ ಪರೀಕೆ (ಕಿಬೊಟ್ಟೆ), ಅವುಸೋಕ – ಲವುಸೇಕ (ಅಭಿಷೇಕ), ಅಸಹ್ವಾದ (ಅಸಾಧ್ಯವಾದ), ಆಕಳ್ಳಿ (ಹಾಗೆ ಆಗಲಿ), ಅಗನಿ (ಅಗ್ನ್ಯವಣಿ), ಇಣುಕು (ಗಟ್ಟಿಸು), ಯಕ್ಕುಟ್ಟು (ನಾಶವಾಗು, ಕಾಮತ್ಕ (ಕಾರ್ತೀಕ), ಬುಯ್ಲೋಗ (ಭೂಲೋಕ), ರಾಕಾಸಿ (ರಾಕ್ಷಸಿ), ಇತ್ಯಾದಿ ಒಂದು ದೊಡ್ಡ ಪಟ್ಟಿಯನ್ನೇ ಬೆಳೆಸ ಬಹುದು.

ಬಪ್ಪಾ, ಬಮ್ಮೀ, ಬಲಾ, ಓಲಾ ಮುಂತಾದ ಸಂಬೋಧನಾತ್ಮಕ ಪ್ರಯೋಗ ಗಳನ್ನು ಗಮನಿಸಬಹುದು. ಇವುಗಳನ್ನು ಉಚ್ಚರಿಸುವಾಗ ಒತ್ತು ಹಾಗೂ ಒಂದು ರೀತಿಯ ಗೀತಾತ್ಮಕ ಎಳೆತವನ್ನೂ ಕಾಣಬಹುದು.

ಹುಡುಗ, ಹುಡುಗಿ, ಎನ್ನುವುದಕ್ಕೆ ಉರ್ಗ ಉರ್‍ಗಿ ಎಂಬ ಪ್ರಯೋಗಗಳೂ ಇವೆ. ಊಬತ್ತಿ <ವಿಭೂತಿ, ಅವದರಿಸು <ಅವತರಿಸು, ಅಂದಾರಲೋಕ <ಅಂತರ ಲೋಕ ಮುಂತಾದ ಪ್ರಯೋಗಗಳನ್ನು ಕಾಣಬಹುದು.

ಹೀಗೆ ಮೈಸೂರು ಜಿಲ್ಲೆಯು ಕನ್ನಡದಲ್ಲಿ ತನ್ನದೇ ಆದ ಕೆಲವು ವಿಶಿಷ್ಟ ಪ್ರಯೋ ಗಗಳಿಂದ ತನ್ನ ಪ್ರಾದೇಶಿಕ ಭೇದವನ್ನು ಉಳಿಸಿಕೊಂಡಿದೆ. ಪ್ರತಿಯೊಂದು ಪ್ರಾಂತ್ಯ ದಲ್ಲಿಯೂ ಇಂಥ ಶಿಷ್ಟಭಾಷೆಯಿಂದ ಭಿನ್ನವಾದ ವಿಶಿಷ್ಟಭಾಷಿಕ ರೂಪಗಳನ್ನು ಗಮನಿಸಬಹುದು. ಈ ರೂಪಗಳನ್ನು ಅಶಿಷ್ಟ ಎಂದು ತೆಗಳಬೇಕಾದುದಿಲ್ಲ. ಯಾವುದರಲ್ಲೂ, ಹಾಗೆ ನೋಡಿದರೆ, ಶಿಷ್ಟ–ಅಶಿಷ್ಟ ಎಂಬ ಭೇದವೇ ಸಮಂಜಸವಲ್ಲ ವೇನೋ ಎಂದನ್ನಿಸುತ್ತದೆ. ಕಾರಣ, ಶಿಷ್ಟ ಎಂಬುದರಲ್ಲಿಯೇ ಅಶಿಷ್ಟವೂ ಅಡಗಿದೆ. ಅಶಿಷ್ಟ ಎಂದು ಕರೆಯಲಾಗಿರುವುದರ ಕೃತಕ ರೂಪವೇ ಶಿಷ್ಟವಲ್ಲವೇ ? ಶಿಷ್ಟರಲ್ಲಿ ಅಶಿಷ್ಟ ಪ್ರಯೋಗಗಳಿಲ್ಲವೇ ? ಅಶಿಷ್ಟವೇ ಶಿಷ್ಟದ ಮೂಲವಲ್ಲವೇ ? ಇಂದಿನ ಅಪಭ್ರಂಶವೇ ನಾಳಿನ ಸುಸಂಸ್ಕೃತ ರೂಪವಲ್ಲವೇ ? ಮಾತನಾಡಿದರೆ ಅಶಿಷ್ಟ, ಅದನ್ನೇ ವ್ಯಾಕರಣಬದ್ಧವಾಗಿ ಬರೆದರೆ ಶಿಷ್ಟ ತಾನೆ ! ಎರಡೂ ಜೊತೆಯಲ್ಲಿಯೇ ಇರುವುದು ತಾನೆ ! ಹೀಗಾಗಿ ಪ್ರತಿಯೊಂದು ಪ್ರಾಂತ್ಯದ ಭಾಷಾ ಭೇದವೂ ಉಪಾ ದೇಯುವೇ.

ಪ್ರಾರಂಭದಲ್ಲಿಯೇ ಹೇಳಿರುವಂತೆ ಇದೊಂದು ಸ್ಥೂಲವಾದ ಅಧ್ಯಯನ ಮಾತ್ರ.

• •

ಕೊಡಗು ಜಿಲ್ಲೆಯ ಕನ್ನಡ

● ಕೆ. ಕುಶಾಲಪ್ಪಗೌಡ

೦ ಪ್ರಸ್ತಾವನೆ :

೦.೧ ಕೊಡಗು ಪಶ್ಚಿಮಘಟ್ಟಗಳ ಶಿಖರದಲ್ಲಿ ಪ್ರಕೃತಿಸೌಂದರ್ಯದ ನೆಲೆಮನೆಯಾಗಿ, ದಕ್ಷಿಣ ಕಾಶ್ಮೀರವೆಂದು ಹೆಸರುಗೊಂಡಿದೆ. ಕೇಂದ್ರಸರಕಾರದ ಅಂಕಿತಕ್ಕೊಳಪಟ್ಟು ಭಾಷಾವಾರು ಪ್ರಾಂತ ರಚನೆಯಾಗುವವರೆಗೂ ಇದ್ದು, ಈಗ ಕರ್ನಾಟಕದಲ್ಲಿ ಸಮಾವೇಶವಾಗಿದೆ. ಇಲ್ಲಿಯ ನಿವಾಸಿಗಳಾದ ಕೊಡವರು ಕೊಡಗು ಮಾತನ್ನಾಡುತ್ತಾರೆ. ಗೌಡರು, ಕನ್ನಡದ ಒಂದು ಪ್ರಭೇದವಾದ 'ಗೌಡ ಕನ್ನಡ' ಎಂದು ಈಗ ಹೆಸರುಗೊಂಡಿರುವ ಮಾತನ್ನು ಆಡುತ್ತಾರೆ. ಇಲ್ಲಿಯ ಜೇನುಕುರುಬರೆಂದುಕೊಳ್ಳುವ ಜನಾಂಗದವರು ಕನ್ನಡದ ಇನ್ನೊಂದು ಪ್ರಭೇದವನ್ನಾಡುತ್ತಾರೆ. ಕೊಡಗಿನ ಪಶ್ಚಿಮ ಭಾಗವನ್ನು ದಕ್ಷಿಣಕನ್ನಡ ಜಿಲ್ಲೆ ಮತ್ತು ಕೇರಳ ಪ್ರಾಂತ್ಯ, ಉತ್ತರ ಮತ್ತು ಪೂರ್ವಭಾಗವನ್ನು ಹಳೆಯ ಮೈಸೂರಿನ ಭಾಗಗಳು ಸುತ್ತುವರಿದಿವೆ. ಕೊಡಗು ಮಾತಿಗೆ ಲಿಪಿಯಿಲ್ಲ ಆದರೆ ಅದು ಪ್ರಸಿದ್ಧವಾದ ದ್ರಾವಿಡ ಭಾಷೆಗಳಲ್ಲಿ ಒಂದು. ಹೀಗೆ ಪ್ರಾದೇಶಿಕ ಪ್ರಭಾವಶಾಲಿ ಜನಾಂಗದ ಮಾತಿಗೆ ಲಿಪಿಯಿಲ್ಲದೆ ಅದು ಗ್ರಾಂಥಿಕ ಭಾಷೆಯಾಗದೆ ಇರುವುದರಿಂದ, ಪೂರ್ವಕಾಲದಿಂದಲೂ ವ್ಯಾವಹಾರಿಕ ರಂಗದಲ್ಲಿ ಕೊಡಗಿನಲ್ಲಿ ಕನ್ನಡವೇ ಪ್ರಧಾನ ಪಾತ್ರವಹಿಸಿದೆ. ಕೊಡಗಿನಲ್ಲಿ ಸಿಗುವ ಪ್ರಾಚೀನ ಶಾಸನಗಳು– ಕ್ರಿ. ಶ. ೮೮೮ ರಿಂದಲೇ ಕನ್ನಡದಲ್ಲಿವೆ. ಬೆರಳೆಣಿಕೆಯಲ್ಲಿ ಕೆಲವು ಇತರ ಭಾಷೆಗಳಲ್ಲಿವೆ.[೧] ಹೀಗೆ ಜನಸಾಮಾನ್ಯವಾದ ವ್ಯವಹಾರದ ಕನ್ನಡ, ಶಾಲೆಗಳಲ್ಲಿ, ಕೋರ್ಟು–ಕಚೇರಿಗಳಲ್ಲಿ ಇಂದಿಗೂ ಬಳಕೆಯಲ್ಲಿದ್ದರೂ ಮಾತೃಭಾಷೆಗಳಾಗಿ, ಮುಖ್ಯವಾಗಿ ಕೊಡಗು, ಕನ್ನಡದ ಸಾಮಾಜಿಕ ಪ್ರಭೇದಗಳು, ತುಳು, ಹಾಗೂ ವಲಸಬಂದ ಇತರ ಜನರ ಮಾತುಗಳೂ ಕೊಡಗಿನಲ್ಲಿ ಸಹಜವಾಗಿದೆ. ಸಾಮಾಜಿಕ ಉಪಭಾಷೆಗಳನ್ನು ಬಿಟ್ಟರೆ ಉಳಿದ ವ್ಯವಹಾರದ ಕನ್ನಡ, ಬಹುಮಟ್ಟಿಗೆ ಕಲಿತುಬಂದ ಕನ್ನಡ. ಅದು ಶಿಷ್ಟರೂಪಕ್ಕೆ, ಅಂದರೆ ಬರವಣಿಗೆಯ ಕನ್ನಡಕ್ಕೆ ಸಮೀಪವಾದ ಮಂಗಳೂರಿನ ಕನ್ನಡಕ್ಕೆ ಹೋಲುತ್ತದೆ. ಹೀಗಾಗಿ, ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ ಎಂಬಂತಹ ಪ್ರಾದೇಶಿಕ ವಿಶಿಷ್ಟವಾದ ರೂಪವೊಂದನ್ನು ಗುರುತಿಸುವಂತೆ, 'ಕೊಡಗಿನ ಕನ್ನಡ'

ಎಂದು ಆರೋಪಿಸಿ ಕರೆಯುವುದು ಅಷ್ಟು ಸರಿಯಲ್ಲವೆಂದು ಕಾಣುತ್ತದೆ. ಏಂತಿದ್ದರೂ ಈ ಪ್ರದೇಶದಲ್ಲಿ ಬಳಸುವ ಕನ್ನಡ ಮಂಗಳೂರಿನ ಕನ್ನಡದಂತಿದೆ ಎಂದು ತೋರ ಮಟ್ಟಿಗೆ ಹೇಳಬಹುದು.

೦.೨ ಈ ಬೆಳ್ಳಿಹಬ್ಬದ ಸಂಚಿಕೆಯ ಸಂಪಾದಕರು 'ಕೊಡಗಿನ ಕನ್ನಡ'ವೆಂಬ ಶೀರ್ಷಿಕೆ ಕೊಟ್ಟು ಲೇಖನ ಬರೆಯಲು ಕೇಳಿದ ಕಾರಣ, ತಾತ್ಪೂರ್ತಿಕವಾಗಿ ಇಲ್ಲಿ ಕೊಡಗಿನಲ್ಲಿ ಈ ದೊರೆಯುವ ಶಾಸನಗಳ ಭಾಷಾವಲೋಕನ, ಹಾಗೂ ಸಾಮಾಜಿಕ ಭಾಷೆಗಳಾದ ಗೌಡಕನ್ನಡ ಮತ್ತು ಜೇನುಕುರುಬರ ಕನ್ನಡ ಎಂಬುವನ್ನು ಸ್ಥೂಲಾವಲೋಕನೆ ಮಾಡಲಾಗುತ್ತದೆ.[2] ಕ್ರಿ. ಶ. ೧೧ರಿಂದ ೧೪ರ ವರೆಗೂ ಕೊಡಗಿನ ಶಾಸನ ಭಾಷೆಯ ಅವಲೋಕನೆ A Grammar of Kannada (Based on the inscriptions of Coorg, South Kanara and North Kanara Dts. 1000 to 1400 A.D) ಎಂಬ ಪ್ರಸ್ತುತ ಲೇಖಕನ ಪ್ರಕಟಿತ ಪುಸ್ತಕದಲ್ಲಿ (Kushalappa Gowda, 1972) ಸಮಾವೇಶವಾಗಿದೆ. ಇಲ್ಲಿ ಅದನ್ನೂ ಅದಕ್ಕಿಂತ ಹಿಂದಿನ ಮತ್ತು ಮುಂದಿನ ಶತಮಾನಗಳ ಮೇಲ್ನೋಟದ ಹೇಳಿಕೆಗಳಿಗೆ E-C-1 ಸಂಪುಟದ ಪ್ರಕಟಿತ ಶಾಸನಗಳನ್ನೂ ಗೌಡಕನ್ನಡದ ಬಗ್ಗೆ ಇದೇ ಲೇಖಕನ GOWDA KANNADA, Kushalappa Gowda 1970, Annamalainagar ಮತ್ತು ಜೇನು ಕುರುಬರ ಕನ್ನಡಕ್ಕೆ Coorg Kannada (Jenu Kuruba Dialect) U.P. Upadhyaya, 1971, Poona ಎಂಬ ಪುಸ್ತಕವನ್ನೂ ಆಧಾರವಾಗಿಟ್ಟುಕೊಳ್ಳಲಾಗಿದೆ.

೧.೦ **ಶಾಸನ ಭಾಷೆಯಲ್ಲಿಯ ಧ್ವನಿಸಮುದಾಯ :**

೧.೧ **ಸ್ವರಗಳು :**

ಅ ಆ ಇ ಈ ಉ ಊ ಎ ಏ ಒ ಓ.

ಐ ಮತ್ತು ಔ ಎಂಬ ಸಂಧ್ಯಕ್ಷರಗಳು ಸಂಸ್ಕೃತದಿಂದ ಎರವಲಾದ ಪದಗಳಲ್ಲೂ ಬಂದಿಲ್ಲ. ಇವುಗಳಲ್ಲಿ ಔ ಎಂಬುದು ೧೧ನೆಯ ಶತಮಾನದಲ್ಲಿ ಆ ಎಂದಾಗಿದೆ. (Kushalappa Gowda 1972, ೧೦೯.) ಉದಾ : ಮೌಳಿ→ಮಾಳಿ (ಇದಕ್ಕೆ ಶಾಸನ ಕೊರೆಯುವವನ ಕೈತಪ್ಪೂ ಕಾರಣವಾಗಿರಬಹುದು). ಇನ್ನೊಂದು ಉದಾಹರಣೆಯಲ್ಲಿ ಔ→ ಅವು ಎಂದಾಗಿದೆ, ಉದಾ : ಚೌಟು→ಚವುಡುಮಾನೆ (ಅದೇ ೧೧೦). ಯಕಾರ ಸಂಸ್ಕೃತದ ಎರವಲು ಪದಗಳಲ್ಲಿ ಮಾತ್ರ ಬರುವಂಥದು; ೧೧ನೇ ಶತಮಾನದಲ್ಲಿ ೧, ೧೨ರಲ್ಲಿ ರ ಎಂದಾಗಿದೆ. ಕ್ರಿ. ಶ. ೧೮೧೭ರ ಶಾಸನದಲ್ಲಿ'ಯ' ಎಂಬುದರ ಸರಿಯಾದ ಪ್ರಯೋಗ ದೊರೆಯುತ್ತದೆ (ಶಾಸನ ೯, ೨). ಪೂರ್ವ ಸ್ವರಗಳಿಗೆ (Front Vowels) ಯಕಾರ ಪದಾದಿಯಲ್ಲಿ ಬರುತ್ತದೆ : ಇ→ಯಿ, ಎ→ಯೆ. (೧೨ ಮತ್ತು ೧೩ನೇ ಶತಮಾನ). ಎ ಎಂಬುದಕ್ಕೆ ಯಕಾರ ರೂಪ ೧೨ನೇ ಶತಮಾನದಲ್ಲೂ ಎ >ಯೆ

ಯೆಂಬ ಹ್ರಸ್ವರೂಪ ೧೨ನೇ ಶತಮಾನದಲ್ಲೂ ಬಂದಿದೆ. ಪಶ್ಚಸ್ವರಗಳಲ್ಲಿ ಓಕಾರಕ್ಕೆ ಮಾತ್ರ ವೊ ಎಂಬ ಹ್ರಸ್ವರೂಪವಿದೆ (ಅದೇ ೧೬೬).

೧.೨ ವ್ಯಂಜನಗಳು :

ಕ–	ಗ–	ಚ–	ಜ–			ತ–	ದ–	ಪ–	ಬ–
–ಕ–	–ಗ–	–ಚ–	–ಜ–	–ಟ–	–ಡ–	–ತ–	–ದ–	–ಪ–	–ಬ–
				–ಣ–		ನ–	–ನ–	–ಮ–	–ಮ
ಯ–	ರ–	ಲ–	ವ–	ಸ–		ಹ–	ಳ–		
–ಯ–	–ರ–	–ಲ–	–ವ–	–ಸ–		–ಹ–	–ಳ–		
(–ಱ–)						(–ೞ–)			

ಹ್ರಸ್ವವ್ಯಂಜನ ಸ್ಥಾನದಲ್ಲಿ ದ್ವಿತ್ವ ಬರುವ ಸಂದರ್ಭ ಕೆಲವೆಡೆಗಳಲ್ಲಿ ಕಾಣುತ್ತದೆ. ಹನ್ನೊಂದನೆಯ ಶತಮಾನದಿಂದಲೇ ಪಕಾರಕ್ಕೆ ಹಕಾರ ಕಂಡುಬರುತ್ತದೆ. ೞಕಾರ ಮತ್ತು ಱಕಾರ ೧೪ ನೇ ಶತಮಾನದ ಶಾಸನಗಳಲ್ಲೂ ಉಳಿದಿವೆ. ಸ, ಶ, ಗಳೊಳಗೆ ವ್ಯತ್ಯಯ ೧೧, ೧೨ ನೇ ಶತಮಾನಗಳಲ್ಲಿ ಕಂಡುಬರುತ್ತವೆ. ಖ, ಘ, ಛ, ಠ, ಥ, ಧ, ಫ, ಭ ಎಂಬ ಮಹಾಪ್ರಾಣಗಳು ಪ್ರಯೋಗವಾಗಿವೆ. ಠ → ಟ (೧೪ ನೇ ಶ), ಥ→ತ (೧೨ ನೇ ಶ), ಧ→ದ (೧೧ ನೇ ಶ), ಫ→ಪ (೧೨ ನೇ ಶ), ಭ→ಬ (೧೧ ನೇ ಶ) ದಲ್ಲಿ ಕಂಡುಬರುತ್ತದೆ. ದೇಶ್ಯಗಳಾದ –ಲ–, –ೞ– ಗಳು ಈ ಕೆಳಗಿನಂತೆ ವ್ಯತ್ಯಯ ತೋರುತ್ತವೆ :

೧) ಲ– : –ಲ್ಲ– (೧೨ನೇ ಶ), –ಳ್ಳ– (೧೩, ೧೪ನೇ ಶ) –ೞ– (೧೩ನೇ ಶ),

೨) ೞ : –ಳ (೧೧,೧೩,೧೪ನೇ ಶ) –ಡ– (೧೧ನೇ ಶ), –ಲ– (೧೩ ನೇ ಶ),

೧.೩ ಸಂಯುಕ್ತ ವ್ಯಂಜನಗಳು :

೧.೩.೧ ಎರಡು ವ್ಯಂಜನಗಳ ಸಂಯುಕ್ತತೆ : (ಪದಮಧ್ಯದಲ್ಲಿ)

ಕ್ತ್, ಕ್ರ್, ಕ್ಷ್, ಖ್ಯ್, ಗ್ಮ್, ಜ್ಗ್, ಜ್ಯ್, ಞ್ಜ್, ಡ್ಸ್, ಣ್ಟ್, ಣ್ತ್, ಣ್ಸ್, ತ್ಪ್, ತ್ನ್, ತ್ಯ್, ತ್ರ್, ತ್ವ್, ತ್ಸ್, ಥ್ವ್, ದ್ಗ್, ದ್ಧ್, ದ್ಮ್, ದ್ಯ್, ದ್ರ್, ದ್ವ್, ಧ್ಯ್, ನ್ತ್, ನ್ದ್, ನ್ಧ್, ನ್ಮ್, ನ್ಯ್, ನ್ರ್, ನ್ವ್, ಪ್ರ್, ಬ್ರ್, ಭ್ಯ್, ಂಕ್, ಂಖ್, ಂಗ್, ಂಘ್, ಂಚ್, ಂಜಿ, ಂಞ್, ಂಟ್, ಡ್ಂ, ಂಣ್, ಂತ್, ಂದ್, ಂನ್, ಂಪ್, ಂಶ್,

ಂಹ್, ಯ್ಕ್, ಯ್ದ್, ಯ್ವ್, ಯ್ಸ್, ರ್ಗ್, ರ್ಜ್, ರ್ತ್, ರ್ಥ್, ರ್ಧ್, ರ್ವ್, ರ್ಸ್, ರ್ಹ್, ಲ್ಕ್, ಲ್ಗ್, ಲ್ನ್, ವ್ರ್, ಶ್ಯ್, ಶ್ದ್, ಶ್ವ್, ಷ್ಟ್, ಷ್ಪ್, ಷ್ಯ್, ಸ್ತ್, ಸ್ಥ್, ಸ್ವ್, ಳ್ವ್, ೞ್ಗ್– ಎಂಬ ದ್ವಿವ್ಯಂಜನ ಸಂಯುಕ್ತರೂಪಗಳು ಶಾಸನಭಾಷೆಯಲ್ಲಿ ಕಂಡುಬರುತ್ತವೆ.

೧) ಅನುನಾಸಿಕ + ಸ್ಪರ್ಶ ವ್ಯಂಜನ ೨) ಅನುನಾಸಿಕ + ಅನುನಾಸಿಕ, ಸಂಯುಕ್ತತೆ ಮಾತ್ರ ದೇಶ್ಯಪದಗಳಲ್ಲಿ ಪ್ರಯೋಗವಾಗುತ್ತದೆ.

೧.೩.೨ ಮೂರು ವ್ಯಂಜನಗಳ ಸಂಯುಕ್ತತೆ : (ಪದಮಧ್ಯದಲ್ಲಿ)

ಕ್ಷ್ಮ್, ಂಗ್ಗ್, ಂತ್ತ್, ಂಕ್ರ್, ಂಗ್ರ್, ಂತ್ರ್ ಂದ್ರ್, ನ್ದ್ರ್, ಂಣ್ಡ್, ಮ್ರ್ತ್, ಂಶತ್, ರ್ಕ್ಕ್, ರ್ಗ್ಗ್, ರ್ಚ್ಚ್, ರ್ತ್ತ್, ರ್ನ್ನ್, ರ್ಮ್ಮ್, ರ್ಯ್ಯ್, ರ್ವ್ವ್, ಸ್ತ್ರ್ ಎಂಬ ಮೂರು ವ್ಯಂಜನಗಳು ಸಂಯುಕ್ತ ರೂಪದಿಂದ ಹೆಚ್ಚಾಗಿ ಸಂಸ್ಕೃತದಿಂದ ಎರವಲು ಬಂದ ಪದಗಳಲ್ಲಿ, ಅದೂ ೧೧ ನೆಯ ಶತಮಾನದ ಶಾಸನಗಳಲ್ಲಿ ಅಧಿಕವಾಗಿ ಕಂಡುಬರುತ್ತವೆ.

೨೦ ಸಂಧಿ

೨.೧ ಪದಾಂತ್ಯದಲ್ಲಿ ಪುಲ್ಲಿಂಗವಾಚಿ ಪ್ರತ್ಯಯ ಅನ್ ಎಂಬುದು ಅ ಎಂದು ವಿಕಲ್ಪವಾಗುವುದು ಕಂಡುಬರುತ್ತದೆ. (೧೧, ೧೨, ೧೩ ನೇ ಶ.) :

ಪಾಪ ನರಕ ಬಿದ್ದ (೫೨–೭), ಬ್ರಹ್ಮಾತಿಯಂ ಕೊಂಡ (೫೨–೮),

ನಾಕಣಂ ಬರದ (೫೨–೧೦).

೨.೨ ಅನ್→ಅಂ ಎಂದು ಪದಾಂತ್ಯದಲ್ಲಿ ಐಚ್ಛಿಕವಾಗಿ ಆಗುತ್ತದೆ.

ಬಿಹಗಾಮುಣ್ಡನ ಮಗಂ ೨–೧೦ ಇತ್ಯಾದಿ. ಇದು ೧೧, ೧೨, ೧೩ ಮತ್ತು ೧೪ ನೆಯ ಶತಮಾನಗಳ ಶಾಸನಗಳಲ್ಲಿ ಸಾಮಾನ್ಯವಾಗಿರುವುದು ಕಾಣಬರುತ್ತದೆ.

೨.೩ ವ್ಯಂಜನಾಂತವಾಗಿದ್ದ ಪದಗಳು ಉ ಕಾರಾಂತವಾಗಿವೆ :

* ಮಾಡಿದರ್ → ಮಾಡಿದರು ೪–೩ (೧೧ ನೇ ಶ.)
* ನಖರಂಗಳ್ → ನಖರಂಗಳು ೬–೫ (೧೨ ನೇ ಶ.)
* ದೇವರ್ → ದೇವರು ೬–೬ (೧೨ ನೇ ಶ.)
* ಕಲ್ → ಕಲ್ಲು
* ಮಕ್ಕಳ್ → ಮಕ್ಕಳು
* ಹೆಣ್ → ಹೆಣ್ಣು ಇತ್ಯಾದಿ.

೨.೪ ಕೆಲವು ಧಾತುಗಳ ಕೊನೆಯ ವ್ಯಂಜನಗಳಲ್ಲಿ ವರ್ಣಸಮೀಕರಣ ಕ್ರಿಯೆ ನಡೆಯುತ್ತದೆ.

೧) ದೀರ್ಘಸ್ವರದ ನಂತರ ಯ್, ವ್, ೞ್ ಗಳಿದ್ದು ಅವಕ್ಕೆ ತ್ ಪರವಾದರೆ ಅವೂ ತ್ ಎಂದು ಸಮೀಕರಣಗೊಳ್ಳುತ್ತವೆ.

೨) ದೀರ್ಘಸ್ವರಗಳು ಹ್ರಸ್ವಗಳಾಗುತ್ತವೆ.

೩) ಬೀೞ್ ಎಂಬ ಧಾತುಗೆ ದ್ ಪರವಾದಾಗ ೞ್→ದ್ ಆಗುತ್ತದೆ. ಸಾಯ್ → ಸಾತ್ + ತ್→ಸತ್ + ತ್ (೧೧ನೇ ಶ), ಈಯ್→ಈತ್ + ತ್ → ಇತ್ತ್ (೧೧ ನೇ ಶ), ಕೀೞ್ + ತ್ → ಕೀತ್ + ತ್ → ಕಿತ್ತ್ ಬಿೞ್ + ದ್ → ಬಿದ್ದ್ (೫೨-೭).

೨.೫ ಸಮೀಕರಣಕ್ರಿಯೆ ಕೊಡು, ಬಿಡು ಎಂಬ ಧಾತುಗಳಲ್ಲಿ ಕೊಟ್ + ಟ್, ಬಿಟ್ + ಟ್ ಎಂದು ಟಕಾರ ಪರವಾದಾಗ ಧಾತುವಿನ ಡಕಾರಕ್ಕೆ ಟಕಾರ ಬರುತ್ತದೆ; (ನಗ್ + ಕ್—> ನಕ್ಕ್, ಮಿಗ್ + ಕ್ —> ಮಿಕ್ ಆದಂತೆ). ಬರ್, ತರ್, ನಿಲ್, ಕೊಲ್, ಸಲ್ ಮೀಯ್‌ಗಳಿಗೆ ಭೂತಕಾಲವಾಚಕ ಪ್ರತ್ಯಯವಾದ ದ್ ಪರವಾದರೆ ಕೊನೆಯ ವ್ಯಂಜನಗಳಿಗೆ ನ್ ಆದೇಶವಾಗುತ್ತದೆ.

ಬರ್ + ದ್ —> ಬನ್ದ್; ತರ್ + ದ್ —> ತನ್ದ್;
ಕೊಲ್ + ದ್ —> ಕೊನ್ದ್; ಸಲ್ + ದ್ —> ಸನ್ದ್;
ಮೀಯ್ + ದ್ —> ಮಿನ್ದ್ ಇತ್ಯಾದಿ.

ಶಾಸನಭಾಷೆಗೆ ಮಾತ್ರವಲ್ಲದೆ ಈಗಲೂ ಈ ರೂಪಗಳು ಕನ್ನಡಕ್ಕೆ ಸಾಮಾನ್ಯವಾಗಿವೆ.

೨.೬ ದ್ವಿತ್ವವಿರಬೇಕಾದಲ್ಲಿ ಕ್ವಚಿತ್ತಾಗಿ ಹ್ರಸ್ವವಾಗುವ ಕೆಲವು ಉದಾಹರಣೆಗಳು ಕಂಡುಬರುತ್ತವೆ :

ಕಟ್ಟಿದವರು	—>	ಕಟಿದವರು (೧೨ ನೇ ಶತಮಾನ.)
ಕೊಟ್ಟ	—>	ಕೊಟ (೧೨ ನೇ ಶ.)
ಅಲ್ಲಿ	—>	ಅಲಿ (೧೩ ನೇ ಶ.)
ಕಾಮಣ್ಣ	—>	ಕಾಮಣ (೧೩ ನೇ ಶ.)
ಗದ್ದೆ	—>	ಗದೆ (೧೩, ೧೪ ನೇ ಶ.)
ಚಿಕ್ಕವೀರಣ್ಣ	—>	ಚಿಕವೀರಂಣ (೧೩ ನೇ ಶ.)
ಬಿದ್ದಡೆ	—>	ಬಿದಡೆ (೧೩ ನೇ ಶ.)
ಮಕ್ಕಳಿಂಗೆ	—>	ಮಕಳಿಂಗೆ (೧೩ ನೇ ಶ.)
ಕಲ್ಲಿನ	—>	ಕಲಿನ (೧೪ ನೇ ಶ.)

೧೧ನೆಯ ಶತಮಾನದ ಶಾಸನಗಳಲ್ಲೂ ಅದಕ್ಕಿಂತ ಹಿಂದಣ ಶಾಸನಗಳಲ್ಲೂ ಇಂತಹ ವ್ಯತ್ಯಯಗಳು ಕಂಡುಬರುವುದಿಲ್ಲ. ೧೬ನೆಯ ಶತಮಾನದಲ್ಲಿ ಇದಕ್ಕೆ ಸಿಗುವ ಉದಾಹರಣೆಗಳು ತುಲನಾದೃಷ್ಟಿಯಿಂದ ಅಧಿಕಸಂಖ್ಯೆಯಲ್ಲಿವೆಯೆಂಬುದನ್ನು ಗಮನಿಸಬೇಕು.

೨.೭ ಪ್ರಕೃತಿ ಮೂಲವಲ್ಲದ ಅಂತ್ಯಸ್ವರಕ್ಕೆ ಸ್ವರ ಪರವಾದಾಗ ಲೋಪವೊದಗುತ್ತದೆ. ಇದು ಶಾಸನಭಾಷೆಗೆ ಮಾತ್ರವಲ್ಲ; ಸಾಮಾನ್ಯವಾಗಿ ಎಲ್ಲ ಕನ್ನಡ ಪ್ರಭೇದಗಳಿಗೂ ಅನ್ವಯವಾಗುತ್ತದೆ.

ಆಯತಿಗೆ + ಅಂ —> ಆಯತಿಗಂ; ನಿವಾಸಕ್ಕೆ + ಅಂ —> ನಿವಾಸಕ್ಕಂ (೧೧ ನೇ ಶ.).

೨.೮ (೧) ಇಕಾರ ಎಕಾರಾಂತಗಳಿಗೆ ಸ್ವರ ಪರವಾದರೆ ಸಂಧಿಯಲ್ಲಿ ಯಕಾರಾಗಮವಾಗುತ್ತದೆ. ಕರುಣೆ + ಒ —> ಕರುಣೆಯೊ, ಕೆಱೆ + ಅಂ —> ಕೆಱೆಯುಂ (೧೧ ನೇ ಶ.), ಗಂಗೆ + ಅ —> ಗಂಗೆಯ, ಗಂಗೆ + ಆ —> ಗಂಗೆಯಾ (೧೨ ನೇ ಶ.), ಆ + ಇತು —> ಆಯಿತು ೧೧ ನೇ ಶ.).

(೨) ಉಕಾರ ಸಂಬಂಧವಾಗಿ ಮೇಲಿನಂತೆ ವಾಗಮವಾಗುತ್ತದೆ.

ಪಡು + ಅ —> ಪಡುವ (೧೨ ನೇ ಶ.) ಇವೆರಡೂ ಈಗಲೂ ಪ್ರಚಲಿತವಾಗಿರುವ ನಿಯಮಗಳು.

೨.೯ ಹ್ರಸ್ವಯುಕ್ತ ಪ್ರಕೃತಿಯ ಕೊನೆಯ ವ್ಯಂಜನಕ್ಕೆ ಸ್ವರಪರವಾದರೆ ದ್ವಿತ್ವವಾಗುವ ಕ್ರಮ ಹಳಗನ್ನಡಕಾಲದಿಂದಲೇ ಕಂಡುಬಂದುದು ಕೊಡಗಿನ ಶಾಸನಗಳಲ್ಲಿಯೂ ಇದೆ. ಇಂತಹ ರೂಪಗಳು ಹೊಸಗನ್ನಡದಲ್ಲಿ ದ್ವಿತ್ವವಾಗಿಯೇ ಇರುತ್ತವೆ. ಅಂದರೆ ಏಕವ್ಯಂಜನದ ಮೂಲರೂಪಗಳು ಈಗ ಪುನಾರಚಿತವಾದವುಗಳು ಹಳಗನ್ನಡದಲ್ಲಿ ಕಂಡುಬರುವಂತೆ ಸ್ವತಂತ್ರಪ್ರಯೋಗದಲ್ಲಿಲ್ಲದೆ ದ್ವಿತ್ವರೂಪಗಳೇ ಕಂಡುಬರುತ್ತವೆ. ಹೆಣ್ + ಇಂಗೆ —> ಹೆಣ್ಣಿಂಗೆ; ಅಲ್ + ಇ —> ಅಲ್ಲಿ ಇತ್ಯಾದಿ.

೨.೧೦ (೧) ಪದಾಂತ್ಯದಲ್ಲಿ ಬರುವ ಅನುಸ್ವಾರಕ್ಕೆ ಬೇರೊಂದು ಸ್ವರ ಪರವಾದಾಗ, ಹಳಗನ್ನಡದಲ್ಲಿ ಮಕಾರಾದೇಶವಾಗುತ್ತದೆ. ಅದು ಹೊಸಗನ್ನಡದಲ್ಲಿ ವಕಾರವಾಗುತ್ತದೆ.

ಧರ್ಮಂ + ಅನ್ —> ಧರ್ಮವನ್ (೨-೨೨) ೧೧ ನೆಯ ಶತಮಾನ
ಪುಣ್ಯಾರ್ಥಂ + ಆಗಿ —> ಪುಣ್ಯಾರ್ಥವಾಗಿ (೬-೭೫) ೧೧ ನೆಯ ಶತಮಾನ
ಸ್ವಭಾವಾರ್ಥಂ + ಆಗಿ —> ಸ್ವಭಾವಾರ್ಥವಾಗಿ (೨೦-೭೦) ೧೪ ನೇ ಶ.
ಧಾರಾಪೂರ್ವಕಂ + ಆಗಿ —> ಧಾರಾಪೂರ್ವಕವಾಗಿ (೨೩-೭೫) ೧೪ ನೇ ಶ.

೩.೦ ನಾಮಪದ ವಿಭಾಗ :

೩.೧ ಸರ್ವನಾಮಗಳು :

೩.೧.೧ ಪುರುಷವಾಚಕ ಸರ್ವನಾಮಗಳು : ಸರ್ವನಾಮ ಪ್ರತ್ಯಯಗಳು :

ಏಕ.	ಬಹು.	ಏಕ.	ಬಹು.
(ನಾನು)	(ನಾವು)	–ಎನ್(ಎನು)	(ಎವು)
(ನೀನು)	(ನೀವು)	–(ಇ)	–(ಈರಿ)
(ಅವನು)	ಅವರ್– (ಅವರು)	–ಅಂ –ಅನು	–ಅರ್ –ಅರು
ಆತಂ (ಆತನ್)	—	,,	
(ಅವಳ್–ಅವಳು)	—	–ಅಳ್	–(ಅರ್)
(ಅದು) ಇದು	(ಅವು, ಇವು)	–ಅದು	–(ಅವು)
		–ಉದು	–(ಉವು)

(ಇವನ್, ಇವಳ್, ಇವರ್, ಇವನು, ಇವಳು, ಇವರು– ಎಂಬಂತಹ ರೂಪಗಳು ಶಾಸನದಲ್ಲಿ ದೊರೆಯುವುದಿಲ್ಲವಾದರೂ ಹೊಸಗನ್ನಡದಲ್ಲಿ ಇದ್ದೇ ಇವೆ).

೩.೧.೨ ಆತ್ಮಾರ್ಥಕ :

ತಾನ್–	(ತಾಂ)
ತನ್–	ತಮ್–

ಪ್ರಥಮಪುರುಷ ಸರ್ವನಾಮಪ್ರತ್ಯಯಗಳೇ ಆತ್ಮಾರ್ಥಕ ಸರ್ವನಾಮಗಳಲ್ಲೂ ಬರುತ್ತವೆ. ಶಾಸನಗಳಲ್ಲಿ ಕಂಡುಬಾರದ ಆದರೆ ಭಾಷೆಯಲ್ಲಿ ಇದ್ದಿರಬಹುದಾದ, (ಈಗಣ ಭಾಷೆಯಲ್ಲಿ ಪ್ರಚಲಿತವಿರುವ) ರೂಪಗಳನ್ನು ಕಂಸದೊಳಗೆ ಕೊಡಲಾಗಿದೆ.

೩.೧.೩ **ಪ್ರಶ್ನಾರ್ಥಕ** : ಅರು. ಏಕವಚನದಲ್ಲೂ ಬಹುವಚನದಲ್ಲೂ ಇದಕ್ಕೆ ಸಾಮಾನ್ಯವಾಗಿ ಒಂದೇ ರೂಪ ಪ್ರಯೋಗವಾಗುತ್ತದೆ. ಪರಿಮಾಣವಾಚಕ ನಾಮಪದಗಳನ್ನು, ಪ್ರಥಮಪುರುಷ ಸರ್ವನಾಮಪ್ರತ್ಯಯಗಳನ್ನು ಸೇರಿ ವ್ಯುತ್ಪನ್ನ ಮಾಡಿದಂತಹ ಉದಾಹರಣೆಗಳು ಶಾಸನದಲ್ಲಿ ದೊರೆಯುತ್ತವೆ. ಅನಿ + ಬ್ + ಅರು —> ಅನಿಬರು (೧೧ ನೇಶ.) ಇನಿ + ಬ್ + ಅರು —> ಇನಿಬರು (೧೨ ನೇ ಶ.).[೩]

೩.೨ ದೂರಾರ್ಥಕ, ಸಮೀಪಾರ್ಥಕ ರೂಪಗಳು ಮತ್ತು ಅದರಿಂದ ತದ್ಧಿತವಾದ ರೂಪಗಳು :

ದೂರ :	ಸಮೀಪ :
ಆ (೧೧, ೧೩, ೧೪ನೇ ಶ.)	ಈ (೧೧, ೧೩ ನೇ ಶ.)
	ಯೀ (೧೨ ನೇ ಶ.)

ತದ್ಧಿತವಾದ ರೂಪಗಳು :

ದೂರ :	ಸಮೀಪ :
ಅಂತ್ತೆ (೧೧ ನೇ ಶ.)	ಇನ್ತು (೧೧ ನೇ ಶ.)
ಅನ್ತು (೧೩ ನೇ ಶ.)	ಇಂತು (೧೧ ನೇ ಶ.)
ಅಂನ್ತು (೧೩ ನೇ ಶ.)	ಯಿಂತ್ತು (೧೨ ನೇ ಶ.)
	ಯಿಂತು (೧೩ ನೇ ಶ.)
ಅಂದು (೧೨, ೧೩, ೧೪ ನೇ ಶ.)	
ಅಂಲಿ (೧೨ ನೇ ಶ.)	
ಅಲ್ಲಿ, ಅಲಿ (೧೩ ನೇ ಶ.)	
ಅಂನಬರ (೧೩ ನೇ ಶ.)	

ಪ್ರಶ್ನಾರ್ಥಕ :

ಎಂತು (೧೩ ನೇ ಶ.) ಎಲ್ಲಿ (೧೧ ನೇ ಶ.).

೩.೩ ನಾಮಪದಗಳು :

ನಾಮಪದಗಳನ್ನು ಸರಳ, ತದ್ಧಿತ ಎಂದು ರಚನಾವಿಧಾನವನ್ನನುಸರಿಸಿ ಪ್ರಧಾನವಾಗಿ ಎರಡು ವಿಭಾಗಮಾಡಿ, ಅರ್ಥವಿನ್ಯಾಸವನ್ನನುಸರಿಸಿ ಮಾನವಿಕ (Human) ಅಮಾನವಿಕ (Non–Human), ಅಂಕಿತ, ರೂಢ, ಕೌಟುಂಬಿಕ, ಅಕೌಟುಂಬಿಕ, ಸ್ತ್ರೀ, ಪುಂ, ನಪುಂ, ಮಹತ್, ಅಮಹತ್ ಎಂಬಿತ್ಯಾದಿಯಾಗಿ ವರ್ಗೀಕರಿಸಲು ಸಾಧ್ಯವಿದೆ. ಈ ವರ್ಗೀಕರಣ ಶಾಸನಗಳ ಭಾಷೆಗೆ ಮಾತ್ರ ವಿಶಿಷ್ಟವಾದುದಲ್ಲವೆಂಬುದರಿಂದ ಅದನ್ನಿಲ್ಲಿ ಕೊಟ್ಟಿಲ್ಲ. (ವಿವರಗಳಿಗೆ ನೋಡಿ : ಕುಶಾಲಪ್ಪಗೌಡ : "ಲಿಂಗವೊಂಬತ್ತು ತೆರಂ?" ತೀ. ನಂ ಶ್ರೀ ಸ್ಮಾರಕ ಗ್ರಂಥ). ಶಾಸನ ಭಾಷೆಗೂ, ಗ್ರಾಂಥಿಕ ಹಾಗೂ ಶಿಷ್ಟ ಕನ್ನಡಕ್ಕೂ ಸಾಮಾನ್ಯವಾಗಿರುವ ವಿಷಯವೆಂದರೆ ಲಿಂಗ ವಿಭಜನೆ. ಉತ್ತಮ ಮತ್ತು ದ್ವಿತೀಯ ಪುರುಷವಾಚಕ ಸರ್ವನಾಮಗಳಲ್ಲೂ, ಆ ಸರ್ವನಾಮಗಳು ಕರ್ತೃವಾಗಿರುವ ವಾಕ್ಯದಲ್ಲಿ ಬರುವ ಪೂರ್ಣಕ್ರಿಯಾಪದಗಳಲ್ಲೂ ಉತ್ತಮ ಮತ್ತು ಮಧ್ಯಮಪುರುಷಕ್ಕೆ ಲಿಂಗನಿರ್ದೇಶನವಿಲ್ಲ. ಪ್ರಥಮಪುರುಷ ಸರ್ವನಾಮಕ್ಕೆ ಮತ್ತು

ಅದಕ್ಕೆ ಸಮಾನಾಂತರವಾದ ನಾಮಪದಗಳಿಗೆ ಮಾತ್ರ ಲಿಂಗನಿರ್ದೇಶನವಿದೆ. ಹೀಗೆ ಮೂರು ಲಿಂಗಗಳು, ಎರಡು ವಚನಗಳು ಎಂಬ ಒಟ್ಟು ಐದು ವಿಭಾಗಗಳಲ್ಲಿ ನಾಮ ಪದಗಳನ್ನು ವಿಂಗಡಿಸಬಹುದು.

ಪುರುಷವಾಚಕಗಳು : ಉತ್ತಮ : –ಎ–
ಮಧ್ಯಮ : –ಇ–
ಪ್ರಥಮ : –ಅ–
–ಇ–
–ಉ–

ವಚನಪ್ರತ್ಯಯಗಳು :

ಏಕ : –ನ್; ಬಹು : –ಮ್

ಲಿಂಗ–ವಚನ ಪ್ರತ್ಯಯಗಳು :

ಪುಲ್ಲಿಂ. ಏಕ : –ಮ್, –ನ್, –ಅನ್
ಗೌರವಾರ್ಥಕ : –ತನ್
ಸ್ತ್ರೀ. ಏಕ : –ಳ್, (–ಇತಿ, –ಇ)
ಗೌರವಾರ್ಥಕ : –ಕೆ

ಪು.–ಸ್ತ್ರೀ. ಬಹುವಚನ : –ರ್, –ಅರ್, –(ಇರ್) (–ಕ್ಕಳ್)
–ಬರ್
ನಪುಂ. ಏಕವಚನ : –ತ್, –ದ್
ನಪುಂ. ಬಹುವಚನ : –ಗಳ್, (–ವ್–)
ಮಹತ್ ಬಹುವಚನ : –ರುಗಳ್

೩.೪ ವಿಭಕ್ತಿ ಪೂರ್ವಾಗಮಗಳು :

ನಾಮಪ್ರಕೃತಿಗಳಿಗೆ ವಿಭಕ್ತಿಪ್ರತ್ಯಯ ಸೇರುವುದರಿಂದ ವಾಕ್ಯದಲ್ಲಿ ಆ ನಾಮಪದ ಕ್ರಿಯಾಪದದೊಡನೆ ಹೊಂದಿರುವ ಸಂಬಂಧದ ಅರಿವಾಗುತ್ತದೆ. ಉದಾ : ದ್ವಿತೀಯಾ ವಿಭಕ್ತಿಪ್ರತ್ಯಯವಿದ್ದ ನಾಮ ಕರ್ಮಪದ, ತೃತೀಯಾ ವಿಭಕ್ತಿಯಿಂದ ಕರಣ ಇತ್ಯಾದಿ. ಕೆಲವು ಪ್ರಕೃತಿಗಳ ಅಂತ್ಯದಲ್ಲಿ ಬರುವ ಧ್ವನಿಗಳಿಗನುಸರಿಸಿ, ಇಲ್ಲವೇ ಆ ಪ್ರಕೃತಿಗಳ ಲಿಂಗವರ್ಗಕ್ಕನುಸರಿಸಿ, ವಿಭಕ್ತಿಪ್ರತ್ಯಯಗಳು ಸೇರುವಾಗ ಕೆಲವು ಆಗಮಗಳಾಗುತ್ತವೆ. ಇವನ್ನು ವಿಭಕ್ತಿಪೂರ್ವಾಗಮಗಳೆಂದು ಇಲ್ಲಿ ಕರೆಯಲಾಗುತ್ತದೆ.

–ದ್–; –ಅ–; –ಅರ್–; –ಇನ್–; –ಇಂ– ಅಥವಾ –ಇ– ಮತ್ತು ಅಣ್– ಎಂಬುವು ಆ ಆಗಮಘಟಕಗಳು. –ಅ ಇಲ್ಲವೇ –ಅಂ ಅಂತವಾಗುಳ್ಳ ನಪುಂಸಕ

ಲಿಂಗದ ಪ್ರಕೃತಿಗಳಿಗೆ –ದ್– ಆಗಮವಾಗುತ್ತದೆ. ದ್ವಿತೀಯಾ ವಿಭಕ್ತಿ ಪರವಾದಾಗ –ವ್– ಆಗಮವಾಗುತ್ತದೆ.

ಅರುಂಗಳಾನ್ವಯ(ಂ) + ಅ —> ಅರುಂಗಳಾನ್ವಯದ (೧೧ನೇ ಶ.)
ಖಟ್ಗಂ + ಇಂದಂ —> ಖಟ್ಗದಿಂದಂ (೧೧ನೇ ಶ.)
ದೋಷಂ + ಅಲಿ —> ದೋಷದಲಿ (೧೨ನೇ ಶ.)
ಕಾಳೆಗಂ + ಅಲ್ಲು —> ಕಾಳೆಗದಲ್ಲು (೧೩ನೇ ಶ.)
ವಡವಾರ + ಇ —> ವಡವಾರದಿ (೧೪ನೇ ಶ.)

ಇಂತಹ ಪ್ರಕೃತಿಗಳಿಗೆ ದ್ವಿತೀಯಾ ವಿಭಕ್ತಿಪ್ರತ್ಯಯ ಸೇರುವಾಗ ಅನುಸ್ವಾರಾಂತಕ್ಕೆ –ವ್– (ಹಳಗನ್ನಡ ರೂಪ) ಅಥವಾ –ವ್– ಆಗಮವಾಗುತ್ತದೆ :

ಚತ್ರಂ (<ಛತ್ರ) + ಅಂ —> ಚತ್ರಮಂ

–ಅ–; –ಅರ್– ಎಂಬ ಆಗಮ ಪ್ರಥಮಪುರುಷ ನಪುಂಸಕ ಸರ್ವನಾಮಕ್ಕೆ ಅಥವಾ ಸಂಖ್ಯಾವಾಚಕಗಳಿಗೆ ತೃತೀಯಾದಿ ವಿಭಕ್ತಿಪ್ರತ್ಯಯಗಳು ಹತ್ತುವಾಗ, ಚತುರ್ಥಿಯ ಮುಂದೆ ವಿಕಲ್ಪವಾಗಿ –ಅ– ಮತ್ತು –ಅರ್– ಎಂದು; ಬೇರೆಡೆಗಳಲ್ಲಿ –ಅರ್– ಎಂದು ಆಗಮಗಳು ಬರುತ್ತವೆ.

ಉದಾ : ಇದು + ಕ್ಕೆ —> ಇದ್ + ಅರ್ + ಕ್ಕೆ —> ಇದರ್ಕ್ಕೆ (೧೧ ನೇ ಶ.)
ಎಪ್ಪತ್ತು + ಕ್ಕೆ —> ಎಪ್ಪತ್‌ತ್ + ಅ + ಕ್ಕೆ —> ಎಪ್ಪತ್ತಕ್ಕೆ
ಎಪ್ಪತ್ತು + ಒಳಗೆ —> ಎಪ್ಪತ್‌ತ್ + ಅರ್ + ಒಳಗೆ —> ಎಪ್ಪತ್ತರೊಳಗೆ.

ಉಕಾರಾಂತವಾದ ಪ್ರಕೃತಿಗಳಿಗೆ, ಸ್ವರಾದಿಯಾದ ತೃತೀಯಾದಿ ವಿಭಕ್ತಿಪ್ರತ್ಯಯಗಳು ಸೇರುವಾಗ ನಿಯತವಾಗಿ –ಇನ್– ಆಗಮವಾಗುತ್ತದೆ. ಚತುರ್ಥಿಯ –ಗೆ ಪರವಾದಾಗ (ಹಳಗನ್ನಡ ರೂಪದಲ್ಲಿ) –ಇಂ– ಮತ್ತು –ಇ– ಗಳು ವಿಕಲ್ಪವಾಗುತ್ತವೆ; (ಹೊಸಗನ್ನಡದಲ್ಲಿ –ಇ– ಮಾತ್ರ ಆಗಮವಾಗುತ್ತದೆ).

ಉದಾ : ದಂಡು + ಅ —> ದಂಡ್ + ಇನ್+ಅ —> ದಂಡಿನ (೧೩ ನೇ ಶ.)
ತೊತ್ತು+ಅ —> ತೊತ್‌ತ್ + ಇನ್+ಅ —> ತೊತ್ತಿನ (೧೩ ನೇ ಶ.)
ಹೆಣ್ಣು + ಗೆ —> ಹೆಣ್ + ಇಂ + ಗ —> ಹೆಣ್ಣಿಂಗೆ (೧೩ ನೇ ಶ.)
ಮಕ್ಕಳು + ಗೆ —> ಮಕ್ಕಳ್+ಇಂ+ಗೆ —> ಮಕ್ಕಳಿಂಗೆ (೧೩ ನೇ ಶ.)
ಪಿತ್ತಿಲು + ಗೆ —> ಪಿತ್ತಿಲ್+ಇಂ+ಗೆ —> ಪಿತ್ತಿಲಿಂಗೆ (೧೩ ನೇ ಶ.)
ಮಕ್ಕಳ್ + ಗೆ —> ಮಕ್ಕಳ್+ಇ+ಗೆ —> ಮಕ್ಕಳಿಗೆ (೧೩ ನೇ ಶ.)

ದಿಗ್ವಾಚಿ ಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವಾಗ -ಅಣ್- ಆಗಮವಾಗುತ್ತದೆ.

ಉದಾ : ಕೆಬಿಗು + ಅ —> ಕೆಬಿಗ್ + ಅಣ್ + ಅ—> ಕೆಬಿಗಣ (೧೧ ನೇ ಶ.)

ಬಡಗು + ಅ—> ಬಡಗ್+ಅಣ್+ಅ—> ಬಡಗಣ (೧೩, ೧೪ ನೇ ಶ.)

೩.೫ ವಿಭಕ್ತಿಪ್ರತ್ಯಯಗಳು :

ಪ್ರಥಮಾ ವಿಭಕ್ತಿಗೆ ಪ್ರತ್ಯಯವಿಲ್ಲ. ದ್ವಿತೀಯೆಗೆ -ಅಂ/ -ಅ/ -ಅನ್ ಹಾಗೂ ∅; ತೃತೀಯೆಗೆ -ಇಂದಂ; ಚತುರ್ಥಿಗೆ -ಗೆ/ -ಗ್ಗೆ, / -ಕ್ಕೆ, / -ಕೆ,/ φ; ಸಂಯೋಗಕ್ಕೆ (Sociative) -ಇ, / -ಇಂದ, / -ಇಂದಂ, / -ಒಡನ; ಷಷ್ಠಿಗೆ -ಅ, / -ಆ, / ∅; ಸಪ್ತಮಿಗೆ -ಅ, /ಅಲಿ,/-ಅಲ್ಲಿ,/-ಅಲ್./-ಅಲ್,/ -ಅಂದು,/ -ಒಳ್./ ಮತ್ತು ಟಿ, ಎಂಬ ಪ್ರತ್ಯಯ ರೂಪಗಳಿವೆ.

೩.೫.೧ ದ್ವಿತೀಯಾ ವಿಭಕ್ತಿ : -ಅಂ, -ಅ, -ಅನ್, -φ

-ಅಂ : ಕೆಱೆ + ಅಂ —> ಕೆಱೆಯಂ; ಕೋಟೆಗಳ್ + ಅಂ —> ಕೋಟೆಗಳಂ; ಚತ್ರಂ (ಛತ್ರಂ) + ಅಂ —> ಚತ್ರಮಂ.

-ಅ : ಕ್ರಿಯಾಪದವು ಕರ್ಮಪದದೊಡನೆ ಸಮಾಸವಾದಾಗ -ಅ ಪ್ರತ್ಯಯ ಬಂದಿದೆ. ನಾಡ ಕುಡುಗೆ (= ನಾಡಂ ಕುಡುಗೆ), ಹಂದಿಯ ತಿಂಬರು (= ಹಂದಿಯಂ ತಿಂಬರು) ಪಟ್ಟವ ಕಟ್ಟಿ (ಪಟ್ಟವನ್ನು ಕಟ್ಟಿ).

φ : ಮೇಲಿನ ಸಂದರ್ಭದಲ್ಲಿ ದ್ವಿತೀಯಾ ವಿಭಕ್ತಿಪ್ರತ್ಯಯ ಲೋಪವಾಗಿದೆ. ಪರೋಕ್ಷ ವಿನೆಯಂಗೈದು (= ಪರೋಕ್ಷ ವಿನಯಮಂ ಗೈದು), ಬೆಂಕೊಂಡು (= ಬೆನ್ನಂ ಕೊಂಡು), ಪೆಸರಿಟ್ಟು (= ಪೆಸರನ್ನಿಟ್ಟು); ತಲೆಗಡಿಸಿ (= ತಲೆಯನ್ನು ಕಡಿಸಿ), ತುಱುಕೊಳೆ (= ತುಱುವನ್ನು ಕೊಳೆ).

-ಅನ್ : ವಿಭಕ್ತಿ ಪ್ರತ್ಯಯಕ್ಕೆ ಸ್ವರ ಪರವಾದರೆ -ಅನ್ ಎಂದಾಗುತ್ತದೆ.

ಉದಾ : ಯಿದನು (೧೨ ನೇ ಶ.) ಪೆಸರನ್ (೧೩ ನೇ ಶ.)

ಆತನನ್ (೧೧ ನೇ ಶ.).

೩.೫.೨ ತೃತೀಯಾ ವಿಭಕ್ತಿ : -ಇಂದಂ, -ಇಂ

-ಇಂದಂ : ಖಿಚ್ಚಿದಿಂದಂ (೧೧ನೇ ಶ.)

ಇಂ : ವ್ಯಕ್ತಿನಾಮಕ್ಕೆ ತೃತೀಯ ರೂಪವಾಗಿ -ಇಂ ಎಂಬುದು ಹತ್ತಿ, ಉದಾ: 'ಬಮ್ಮದೇವನಿಂ.... ದುದ್ಧರಸಂ ಮಾಡಿಸಿದ', (ಶಾಸನ ೬೨) ಎಂಬಲ್ಲಿ ಕರಣಾರ್ಥ

ಹಾಗೂ ಅಪಾದಾನಾರ್ಥವನ್ನೂ ಹೊಂದಿಸಿ ಹೇಳಬಹುದು. ಒಂದು ಕೆಲಸವನ್ನು ಮಾಡುವಲ್ಲಿ ಬಮ್ಮದೇವನನ್ನು ದುದ್ಧರಸ ಉಪಯೋಗಿಸಿಕೊಂಡನೆಂಬರ್ಥದಲ್ಲಿ ಇದು ಕರಣ; ಆದರೆ ಬಮ್ಮದೇವನ ಕಾರಣವಾಗಿ ಆ ಕಾರ್ಯವಾಯ್ತು ಎಂದರೆ ಅದು ಕಾರಣಾರ್ಥದ ತೃತೀಯೆಯಾಯ್ತು. ಕರಣಾರ್ಥವೆಂದು ತೆಗೆದುಕೊಳ್ಳಲು 'ಬಮ್ಮದೇವ' ಎಂಬ ನಾಮಪದ ಯಾವುದಾದರೂ ಸಾಧನಗಳನ್ನು ನಿರ್ದೇಶಿಸುವುದಿಲ್ಲ. ಕರಣಾರ್ಥವನ್ನು ತೋರಲು ನಾಮಪದಕ್ಕೆ ಕೆಲವು ವಿಶಿಷ್ಟ ಗುಣಗಳಿರಬೇಕಾಗುತ್ತದೆ. ಕರಣ ಅಥವಾ ಸಾಧನಗಳು, ಯಾರನ್ನಾದರೂ, ಯಾವುದನ್ನಾದರೂ ಸೇರಿಕೊಂಡೋ ಯಾರಿಗೋ, ಯಾವುದಕ್ಕೋ ಸ್ವಂತವಾಗಿಯೋ (ಕೌಟುಂಬಿಕ ಸಂಬಂಧಗಳನ್ನು ಬಿಟ್ಟು) ಇರುತ್ತವೆ. 'ಅವನ ಕೈಯಿಂದ ಹೊಡೆಸಿದ', 'ಇವನ ಹಣದಿಂದ ವಿದ್ಯೆ ಕಲಿತ'– ಎಂದು ಹೇಳಬಹುದು. ಆದರೆ 'ಅವನ ಬಮ್ಮದೇವನಿಂದ ಮಾಡಿಸಿದ'– ಎಂದು ಹೇಳಲಾರೆವೆಂಬುದರಿಂದ 'ಬಮ್ಮದೇವನಿಂ ದುದ್ಧರಸಂ ಮಾಡಿಸಿದ' ಎಂಬುದು ಕರಣಾರ್ಥವಲ್ಲ. ಮಾಡಿದುದು ಬಮ್ಮದೇವ, ದುದ್ಧರಸನಲ್ಲ ಎಂಬುದರಿಂದ ಅದು ಕರಣಾರ್ಥವೆಂದು ತೆಗೆದುಕೊಳ್ಳಲೂ ಬರುವಂತಿಲ್ಲ. ಹೀಗಾಗಿ ಬಮ್ಮದೇವನಿಂ ಎಂದರೆ– ಬಮ್ಮದೇವನ ಮೂಲಕ ಕೆಲಸವಾಯ್ತು; ಅಂದರೆ ಕೆಲಸಕ್ಕೆ ಬಮ್ಮದೇವನೇ ಮೂಲನೆಲೆ ಎಂಬುದಾಗಿ ಅದನ್ನು ಅಪಾದಾನಾರ್ಥದಲ್ಲಿ ತೆಗೆದುಕೊಳ್ಳಬೇಕೆಂದು ಕಾಣುತ್ತದೆ.

೩.೫.೩ **ಚತುರ್ಥಿ ವಿಭಕ್ತಿ** : –ಗೆ, –ಗ್ಗೆ, –ಕ್ಕೆ, –ಕೆ, ø

–ಗೆ : ಚಿಕಣ್ಣಯರಿಗೆ, ಕೆರೆಗೆ, ಬಸದಿಗೆ (೧೧ನೇ ಶ.), ಅರಸಂಗೆ, ಗಂಗೋಜಂಗೆ (೧೨ನೇ ಶ.), ಹೆಣ್ಣಿಂಗೆ, ಮಕ್ಕಳಿಂಗೆ (೧೩ ನೇ ಶ.).

–ಗ್ಗೆ : –ರ್– ಪೂರ್ವಸ್ಥಾನದಲ್ಲಿದ್ದರೆ –ಗ್ಗೆ ಪ್ರತ್ಯಯ ಬರುತ್ತದೆ. ಉದಾ : ಯತಿವರರ್ಗ್ಗೆ (೧೧ನೇ ಶ.) ಇದು ಹಳಗನ್ನಡ ರೂಪ. ಹಳಗನ್ನಡದಲ್ಲಿದ್ದ ಅನುನಾಸಿಕಾಂತ, ಇಲ್ಲವೇ –ರ್, –ಳ್‌ಗಳಿಂದ ಅಂತ್ಯವಾಗುತ್ತಿದ್ದ ಪದಗಳು ಉಕಾರಾಂತವಾಗುತ್ತ ಬರುತ್ತಿದ್ದು, ಮಾತಿನಲ್ಲಿ ಬರುತ್ತಿದ್ದ ಬಳಕೆ, ಬರಹದ ಭಾಷೆಗೂ ಅಳವಟ್ಟು ಉಕಾರಾಂತವಾದ ಪದಗಳು –ಇಂ– ಇಲ್ಲವೇ –ಇ– ಎಂಬ ಪೂರ್ವಾಗಮವನ್ನು ಪಡೆಯುತ್ತಿದ್ದುವು ಎಂಬುದಕ್ಕೆ, ಚಿಕಣ್ಣಯರಿಗೆ- ಎಂಬುದು ಉದಾಹರಣೆ. ಹಳಗನ್ನಡ ರೂಪವಾದ –ರ್ಗ್ಗೆ ಕೊಡಗಿನಲ್ಲಿ ೧೧ನೆಯ ಶತಮಾನದ ಅನಂತರದ ಶಾಸನಗಳಲ್ಲಿ ಕಂಡುಬಂದಿಲ್ಲ.

-ಕ್ಕೆ : ಅಕಾರಾಂತವಾದ ಇಲ್ಲವೆ ಪೂರ್ವಾಗಮವಾಗಿ –ಅ, –ಅರ್‌ಗಳು ಬರುವಲ್ಲಿ –ಕ್ಕೆ ಪ್ರತ್ಯಯ ಬರುತ್ತದೆ. ೧೩ ಮತ್ತು ೧೪ ನೆಯ ಶತಮಾನದ ಶಾಸನಗಳಲ್ಲಿ ಕೆ ಯೊಡನೆ ಇದಕ್ಕೆ ವಿಕಲ್ಪ ಪ್ರಯೋಗ ಬರುತ್ತದೆ :

ಉದಾ : –ಕ್ಕೆ ನಿವಾಸಕ್ಕೆ, ಇದರ್ಕ್ಕೆ (೧೧ನೇ ಶ.)
ಎಪ್ಪತ್ತಕ್ಕೆ, ಅಪ್ಪುದಕ್ಕೆ (೧೩ನೇ ಶ.)
–ಕೆ ನಖರಕೆ (೧೩ನೇ ಶ.)

–ø : ೧೩ ನೇ ಶತಮಾನದ ಕೊಡಗಿನ ಶಾಸನದಲ್ಲಿ 'ಪಾಪನರಕ ಬಿದ್ದ' ೫೨–೬, ಎಂಬ ಪ್ರಯೋಗ ಬಂದಿದೆ. ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಯಾವುದಾದರೂ ಒಂದು ಸ್ಥಳದ ಹೆಸರನ್ನು ಉಲ್ಲೇಖಿಸಿ ಅಲ್ಲಿ 'ಹೋದ– ಬಂದ' ಎಂಬ ಸಂದರ್ಭಗಳಲ್ಲಿ ಚತುರ್ಥಿಯ ಪ್ರತ್ಯಯ ಆ ಸ್ಥಳನಾಮಗಳಿಗೆ ಹತ್ತುವುದು ಐಚ್ಛಿಕವಾಗಿ. ಅಂದರೆ 'ನಾನು ಮದ್ರಾಸು ಹೋಗುತ್ತೇನೆ' ಎಂಬುದು ತಮಿಳು ಮತ್ತು ತೆಲುಗಿಗೆ ಸರಿಯಾಗಿದೆ. ಕನ್ನಡದಲ್ಲಿ ಹೀಗಿರಲು ಸಾಧ್ಯವಿಲ್ಲ. ಕೊಡಗು ಮಾತಿನಲ್ಲೂ ಇಲ್ಲ. ಮೇಲಿನ ವಾಕ್ಯಕ್ಕೆ ತಮಿಳಿನ ಪ್ರಭಾವ ಕಾರಣವಾಗಿರಬೇಕು. ಕಾರಣ ಕೊಡಗು ಚೋಳ ಸಾಮ್ರಾಜ್ಯಾಂಕಿತಕ್ಕೆ ಒಳಪಟ್ಟಿತ್ತೆಂದು ತಿಳಿಯುತ್ತದೆ. ಕೊಂಗಾಳ್ವ ಶಾಸನಗಳಲ್ಲಿ ಚೋಳ ಅಂಕಿತಗಳು ದೊರೆಯುತ್ತವೆ. ಮೇಲೆ ಹೇಳಿದ ಶಾಸನದಲ್ಲಿ ತಮಿಳಿನ ಉಚ್ಚಾರಣೆಯಂತೆ 'ವೈಶಾಖ' ಎಂಬ ಸಂಸ್ಕೃತ ಪದವನ್ನು ಇದೇ ಶಾಸನದಲ್ಲಿ 'ವೈಸಾಘ'– ಎಂದು ಬರೆಯಲಾಗಿದೆ. ಹೀಗಾಗಿ ಈ ಶಾಸನದ ಕರ್ತೃವಿಗೆ ತಮಿಳಿನ ಪ್ರಭಾವ ಬಿದ್ದಿದೆ ಎಂಬುದು ನಿಶ್ಚಯವಾಗುತ್ತದೆ.

೩.೫.೪ ಪಂಚಮಿಗೆ ಹಳಗನ್ನಡದಲ್ಲಿ ದೆಸೆಯಿಂದ, ಅತ್ತಣಿಂ, ಎಂಬ ಸ್ವತಂತ್ರ ರೂಪವನ್ನೇ ಉಪಯೋಗಿಸುವ ಪದ್ಧತಿಯಿದ್ದರೂ ಅನೇಕ ವೇಳೆ, ತೃತೀಯೆಯೇ ಪಂಚಮ್ಯರ್ಥವನ್ನು ಪೂರೈಸುತ್ತದೆ. ಶಾಸನಗಳಲ್ಲೂ ಇದೇ ಪ್ರಕ್ರಿಯೆ ಕಂಡುಬರುತ್ತದೆ. ಆದರೆ ಈ ಶಾಸನಗಳಲ್ಲಿ ಅವಕ್ಕೆ ಉದಾಹರಣೆ ದೊರೆಯುವುದಿಲ್ಲ.

೩.೫.೫ ಸಂಯೋಗ ವಿಭಕ್ತಿ : –ಇ, –ಇಂದ, –ಇಂದಂ, –ಒಡನೆ :

ಇದಕ್ಕೂ ಕೆಲವೇಳೆ ತೃತೀಯಾ ವಿಭಕ್ತಿಯ ಪ್ರತ್ಯಯವೇ ಪ್ರಯೋಗವಾಗುತ್ತದೆ. ಇದಲ್ಲದೆ, ಜತೆ, ಸಂಗಡ ಎಂಬ ಪದಗಳೂ, ಎರಡು ನಾಮಪದಗಳು ನಿರ್ದೇಶಿಸುವ ಕಾರ್ಯದಲ್ಲಿ ಮಗ್ನವಾಗಿರುತ್ತವೆ ಎಂಬುದನ್ನು ತೋರಿಸುತ್ತವೆ. ಒಡನೆ ಎಂಬುದೂ ಮೇಲಿನ ಪ್ರತ್ಯಯಗಳಂತೆ ಪ್ರಯೋಗವಾಗುತ್ತದೆ. –ಇ,–ಇಂ,–ಇಂದ ಎಂಬ ಪ್ರತ್ಯಯಗಳು ಭಾವನಾಮಗಳು (ಅಮೂರ್ತನಾಮ– Abstract) ಎಂಬುವಕ್ಕೆ ಸೇರುತ್ತವೆ : ಕಾರುಣ್ಯದಿಂದ, ಕಾರ್ರುಣ್ಯದೊಡನೆ ಎಂದೆಲ್ಲ ಪ್ರಯೋಗಿಸಬಹುದು. ಆದರೆ ಮೂರ್ತನಾಮ (Concrete nouns) ಗಳಲ್ಲಿ ಒಡನೆ, ಜತೆ, ಸಂಗಡ ಎಂಬುವು ಮಾತ್ರ ಬರಬಲ್ಲುವು. ಆಳಿನೊಡನೆ, ಅರಸನ ಜತೆ, ಅರಸಿಯ ಸಂಗಡ– ಎಂದಿತ್ಯಾದಿ.

ಶಾಸನಗಳ ಉದಾಹರಣೆ –ಇ : ಸಾದರದಿ (೧೧ನೇ ಶ.); –ಇಂದ : ಕಾರುಣ್ಯ

ದಿಂದ (೧೧ನೇ ಶ.) ಸ್ವರುಜಿಯಿಂದ (೧೩ನೇ ಶ.), –ಇಂದಂ : ಸಿಹಕಾರವದಿಂದಂ (೧೧ನೇ ಶ.), –ಒಡನೆ : ಆತನೊಡನೆ (೧೩ನೇ ಶ.).

೩.೫.೬ **ಷಷ್ಠೀ ವಿಭಕ್ತಿ** : ಕಾರಕ ಸಂಬಂಧವಿಲ್ಲದೆ ಹೋದರೂ, ವಿಭಕ್ತಿಗಳ ಪಟ್ಟಿಯಿಂದ ಹೊರಹಾಕಲು ಪಂಡಿತರು ಪ್ರಯತ್ನಿಸಿದರೂ, ಇದು ಸಂಪೂರ್ಣ ಹೊರಹೋಗದೆ ಉಳಿದುಕೊಂಡಿದೆ. ಇದು ನಾಮಪದಗಳೊಳಗಣ ಸಂಬಂಧವನ್ನು ತೋರಿಸುತ್ತದೆ. ಇದರ ಪ್ರತ್ಯಯ ವಿಶೇಷಣಗಳಲ್ಲಿಯೂ, ಭೂತ, ಭವಿಷ್ಯತ್‌ನ್ಯೂನ (Past & Future Relative Participle) ಕ್ರಿಯೆಗಳಲ್ಲಿ ಸಂಬಂಧವಾಚಿಯಾಗಿಯೂ ಬರುತ್ತದೆ. ಉದಾ : ದೊಡ್ಡಮನೆ, ಹಳೆಯ ಕೋಟೆ, ಎಂಬಲ್ಲಿಯ –ಅ; ಕೇಳಿದ ಕತೆ, ಹೋದ ವರುಷ ಎಂಬ ಭೂತ ನ್ಯೂನದ – ಅ; ಬರೆಯುವ ಕಥೆ, ಬರುವ ವರುಷ ಎಂಬ ಭವಿಷ್ಯತ್ ನ್ಯೂನದ –ಅ; ಇವು ಮೂರೂ ಷಷ್ಠಿಯ ಅವನ ಮನೆ, ಕಲ್ಲಿನ ಗೋಡೆ ಎಂಬಲ್ಲಿರುವ ಪ್ರತ್ಯಯವಾದ –ಅ ಕ್ಕೆ ಸಂಬಂಧಿಸಿವೆ. ಷಷ್ಠಿಯ ರೂಪ, ವಿಸ್ತಾರವಾಗಿದ್ದ ಭೂತ ಅಥವಾ ಭವಿಷ್ಯತ್ತಿನ ನ್ಯೂನರೂಪದಲ್ಲಿಯ ಸಂಬಂಧ ವಾಚಿಯಿರುವ ವಾಕ್ಯಖಂಡದಿಂದ ಸಂಕುಚಿತಗೊಂಡ ರೂಪಗಳಾಗಿರುವುದರಿಂದ– ಇದನ್ನೂ ಅಂತಃಸ್ತರದಲ್ಲಿ ಕ್ರಿಯಾಪದದೊಡನೆ ಸಂಬಂಧಿಸಿ ಹೇಳಬಹುದಾದುದರಿಂದ– ಇತರ ವಿಭಕ್ತಿಗಳಂತೆ ಇದಕ್ಕೂ ಕಾರಕ ಸಂಬಂಧವನ್ನಾರೋಪಿಸಿ ಇತರ ವಿಭಕ್ತಿಗಳೊಡನೆ ಸಹಪಂಕ್ತಿ ಕೊಡಬೇಕೆಂದು ಅಭಿಪ್ರಾಯ ವ್ಯಕ್ತವಾಗಿದೆ (Kushalappa Gowda, 1972, 383).[೪] ಹಳಗನ್ನಡದಲ್ಲಿ –ಆ ಎಂಬುದು ಷಷ್ಠಿಗೆ ಪ್ರತ್ಯಯ. ಪೂರ್ವದ ಹಳಗನ್ನಡವೆಂದು ಕರೆಯಲಾದ ಚಾರಿತ್ರಿಕ ಪ್ರಭೇದದ ಮುಖ್ಯ ಸ್ವರೂಪಗಳಲ್ಲಿ ಇದೂ ಒಂದು ಎಂದು ಪರಿಗಣಿಸಲಾಗಿದೆ. ಹೀಗೆ ದೀರ್ಘರೂಪವಿದ್ದುದು ಕಾಲಕ್ರಮದಲ್ಲಿ ಹ್ರಸ್ವವಾಗಿ, ಹಳಗನ್ನಡ ಕಾಲದಿಂದಲೇ –ಅ ಎಂಬ ಹ್ರಸ್ವರೂಪ ಪ್ರಯೋಗದಲ್ಲಿದ್ದರೂ, ಕೆಲವೆಡೆಗಳಲ್ಲಿ ಕಾವ್ಯಗಳಲ್ಲಿ ಛಂದಸ್ಸಿನ ಮಾತ್ರಾಪೂರ್ತಿಗಾಗಿ ಹ್ರಸ್ವವನ್ನು ಸಹಜವಾಗಿ ದೀರ್ಘಮಾಡಿ ಕವಿಗಳು ಪ್ರಯೋಗಿಸುವುದನ್ನು ಕಾಣಬಹುದು. ಈ ದೀರ್ಘ ರೂಪದ ಪ್ರತ್ಯಯ ಕೊಡಗಿನ ಶಾಸನಗಳಲ್ಲಿ ೧೧ ಮತ್ತು ೧೨ ನೆಯ ಶತಮಾನಗಳಲ್ಲಿ ಮಾತ್ರ ಕಂಡುಬರುತ್ತದೆ.

ಉದಾ : –ಆ : ಮಾರವೂರಾ (೧೧ನೇ ಶ.), ಗಂಗೆಯಾ (೧೨ನೇ ಶ.)

–ಅ : ಅವರ (೧೧ನೇ ಶ.), ಆದಿವಾರದ (೧೧ನೇ ಶ.), ಗಾಣದ (೧೧ನೇ ಶ.), ಅಣ್ಣತಮ್ಮಾಸ (೧೨ನೇ ಶ.) ಗಂಗೆಯ (೧೨ನೇ ಶ.) ತಡಿಯ (೧೨ನೇ ಶ.), ಜೀರಯನ (೧೨ನೇ ಶ.). ಆತನ(೧೩ನೇ ಶ.), ಚತುಸ್ಸೀಮೆಯ (೧೪ನೇ ಶ.), ದೇವಿಯ (೧೫ನೇ ಶ.), ನೆಲ್ಲಿಯ (೧೪ನೇ ಶ.).

–∅ : ಪಂಚಾಂಗಕ್ಕೆ ಸಂಬಂಧಿಸಿ, ವರ್ಷ, ತಿಂಗಳು, ದಿನ, ತಿಥಿ, ನಕ್ಷತ್ರ ಇತ್ಯಾದಿ

ಗಳನ್ನು ಹೇಳುವಾಗ, ಐಚ್ಛಿಕವಾಗಿ ಕೆಲವೆಡೆಯಲ್ಲಿ ವಿಭಕ್ತಿಪ್ರತ್ಯಯವನ್ನು ಸೇರಿಸುವುದೂ, ಕೆಲವೆಡೆಯಲ್ಲಿ ಸೇರಿಸದಿರುವುದೂ ಕಾಣುತ್ತದೆ. ಪಿಂಗಳ ಸಂವತ್ಸರ –ø (೧೧ನೇ ಶ.); ಯುವ ಸಂವತ್ಸರದ –ಅ (೧೧ನೇ ಶ.); ಸಾಧಾರಣ ಸಂವತ್ಸರದ –ಅ (೧೧ನೇ ಶ.).

೩.೫.೭ **ಸಪ್ತಮೀ ವಿಭಕ್ತಿ** : –ಅ; –ಅಲಿ; –ಅಲ್ಲಿ; –ಅಲ್; –ಅಲ್ಲ್; –ಒಳ್; –ಅಂದು; –ಟಿ

–ಅ ಎಂಬುದು ದಿಗ್ವಾಚಿ ನಾಮಗಳಲ್ಲಿ, ಉದಾ : ತೆಂಕು + ಅ —> ತೆಂಕ (೧೪ನೇ ಶ.), ಪಡು + ಅ —> ಪಡುವ (೧೪ನೇ ಶ.), ಬಡಗು + ಅ —> ಬಡಗ (೧೪ನೇ ಶ.) ಬರುತ್ತದೆ. –ಅಲಿ, –ಅಲ್ಲಿ, –ಅಲ್, –ಅಲ್ಲು ಎಂಬವುಗಳೆಲ್ಲವಕ್ಕೂ ಐಚ್ಛಿಕ ವ್ಯತ್ಯಯವಿರುವುದು ಕಂಡುಬರುತ್ತದೆ. ಉದಾ : ಪಾಪದಲಿ, ಮೈಣಸದಲ್ಲಿ, ಶರಣಗೋಡಲು, ಭಾನುವಾರದಲ್ಲು (೧೪ನೇ ಶ.), ಕಾಳೆಗದಲ್ಲು (೧೩ನೇ ಶ.). –ಒಳು ಎಂಬುದು ಹಳಗನ್ನಡ ಸಾಹಿತ್ಯರೂಪ. ಶಾಸನಗಳಲ್ಲಿಯೂ ಪ್ರಯೋಗವಾಗಿದೆ : ಪಾದದೊಳ್, ಬಸದಿಯೊಳ್ (೧೧ನೇ ಶ.), ಮಲಪರೊಳು (೧೭ನೇ ಶ.), ಅಗದೊಳು (೧೪ನೇ ಶ.). –ಒಳ್ ಅಥವಾ –ಒಳು ಎಂಬವುಗಳು ಸಮಾನಾಂತರ ರೂಪಗಳಾಗಿದ್ದರೂ, –ಒಳ್, –ಒಳು ಎಂಬವು ನಾಮಪದಗಳಿಗೆ ಮಾತ್ರ ಸೇರುತ್ತವೆ. ಅಲ್ಲಿ ಎಂಬುದು ಸ್ಥಳನಿರ್ದೇಶಕವಾಗಿ ಕ್ರಿಯಾಪದಗಳೊಡನೆ ಸಮಾಸವಾಗಿಯೂ ಉದಾ : ಇದ್ದಲ್ಲಿ, ಒಂದಲ್ಲಿ, ಹೋದಲ್ಲಿ ಪ್ರಯೋಗವಾಗುತ್ತದೆ. ಮನೆಯಲ್ಲಿ, ಊರಲ್ಲಿ ಎಂಬಂತೆ –ಅಲ್ಲಿ ಎಂಬುದನ್ನು (ಇನ್ನೊಂದು ನಾಮಪದದ ನಂತರ ಬಂದರೆ) ಕೆಲವು ಸಲ ಪ್ರತ್ಯಯವಾಗಿ ತೆಗೆದುಕೊಳ್ಳಬೇಕು. –ಅಂದು : ಇದು ಕಾಲಸೂಚಕ ಕ್ರಿಯಾವಿಶೇಷಣ (Adverb of time) ಆದರೂ ಕಾಲದ ಅಧಿಕರಣಾರ್ಥದಲ್ಲಿ ಬಂದಿರುವುದರಿಂದ ಇದನ್ನೂ ಸಪ್ತಮಿಯೆಂದು ತೆಗೆದುಕೊಳ್ಳಲಾಗಿದೆ. ಉದಾ : ಆದಿವಾರದಂದು (೧೪ನೇ ಶ.). ಟಿ : ಮರಿಯಾದೆಟಿ (೧೩ನೇ ಶ.).

೪.೦ ಕ್ರಿಯಾಪದಗಳು :

ಪೂರ್ಣ ಮತ್ತು ಅಪೂರ್ಣವೆಂದು ಕ್ರಿಯಾಪದದಲ್ಲಿ ಎರಡು ವಿಧ. ಪೂರ್ಣ ಕ್ರಿಯೆಯೆಂದರೆ ವಾಕ್ಯದಲ್ಲಿಯ ಕರ್ತೃವಿನ ಲಿಂಗ – ವಚನಗಳನ್ನು ನಿರ್ದೇಶಿಸುವ ಸರ್ವನಾಮ ಪ್ರತ್ಯಯದಿಂದ ಕೂಡಿದ್ದು, ವಾಕ್ಯವನ್ನು ಪೂರ್ಣಗೊಳಿಸುವ ಪದ. ಅಪೂರ್ಣ ಕ್ರಿಯಾಪದವಾದರೆ, ಅದರಲ್ಲಿ ಸರ್ವನಾಮ ಪ್ರತ್ಯಯವಿಲ್ಲ. ಅದರ ಮುಂದೆ ಬರುವ ಪೂರ್ಣ ಕ್ರಿಯಾಪದವನ್ನೋ, ನಾಮಪದವನ್ನೋ ವಿಶ್ಲೇಷಿಸುವ ಕಾರ್ಯವನ್ನು ಅದು ಮಾಡುತ್ತದೆ. ಇವೆರಡರಂತೆಯೂ ಇಲ್ಲದೆ, ಕಾಲವಾಚಕವನ್ನೂ ಹೊಂದಿರದೆ,

ಅನಿಶ್ಚಯತೆಯ ನಿರ್ದೇಶಕತೆಯ ಪ್ರತ್ಯಯವಿದ್ದು ವಾಕ್ಯವನ್ನು ಪೂರ್ತಿಮಾಡುವುದರಿಂದ ಪೂರ್ಣಕ್ರಿಯಾಪದಕ್ಕೆ ಸಮವಾಗಿರುವ, ಅನಿಶ್ಚಿತ ಕ್ರಿಯೆ(Aorist)ಯೂ ಕೆಲವಿವೆ. ಪೂರ್ಣಕ್ರಿಯೆಯಲ್ಲಿ ಕ್ರಿಯಾಧಾತು, ಪ್ರೇರಣಾರ್ಥಕ ಪ್ರತ್ಯಯ, ಕಾಲವಾಚಕ ಪ್ರತ್ಯಯ, ಅಥವಾ ನಿಷೇಧ ಸೂಚಕ ಪ್ರತ್ಯಯ, ಪುರುಷವಾಚಕ, ಲಿಂಗ ಮತ್ತು ವಚನಸೂಚಕ ಪ್ರತ್ಯಯಗಳಿರುತ್ತವೆ.

೪.೧ **ಪ್ರೇರಣಾರ್ಥಕ** : –ಇಸ್, –ಸ್, –ಪ್ ಮತ್ತು –ಹ್‌ಗಳು ಪ್ರೇರಣಾರ್ಥವನ್ನು ತೋರುವ ಪ್ರತ್ಯಯ ಪ್ರಭೇದಗಳು. ಕ್ರಿಯಾಧಾತುವಿನ ನಂತರ ಬರುವ ಇದನ್ನು ಅನುಸರಿಸಿ ಕಾಲವಾಚಕ, ಇಲ್ಲವೇ ನಿಷೇಧವಾಚಕ ಅಥವಾ ಸತಿಸಪ್ತಮಿಯ ರೂಪ (Infinitive) ಬರಬಹುದು.

(೧) –ಇಸ್

ಉದಾ : ಬರೆ + ಇಸ್ + ಇದ್— > ಬರೆಯಿಸಿದಂ (೧೧ ನೇ ಶ.)
ಕಟ್ಟಿ + ಇಸ್ + ಇದ್ + ಅ — > ಕಟ್ಟಿಸಿದ (೧೩ ನೇ ಶ.)
ನಿಲ್ + ಇಸ್ + ಇ — > ನಿಲಿಸಿ (೧೧ ನೇ ಶ.)

(೨) –ಸ್

ತಲೆಗಡಿ + ಸ್ + ಇ — > ತಲೆಗಡಿಸಿ (೧೧ ನೇ ಶ.)

(೩) – ಪ್

ಅಳಿ + ಪ್ + ಇದ್ + ಅಡೆ — > ಅಳಿಪಿದಡೆ (೧೩ ನೇ ಶ.)
ಮುಡಿ + ಪ್ + ಇದ್ + ಅ + ನ್ — > ಮುಡಿಪಿದನ್ (೧೧ ನೇ ಶ.)

(೪) –ಹ್

ಅಳಿ + ಹ್ + ಇದ್ + ಅಡೆ — > ಅಳಿಹಿದಡೆ (೧೨ ನೇ ಶ.)

೪.೨ **ಸತಿಸಪ್ತಮಿ** : –ಎ, –ಅಲ್. ಮತ್ತು –ಅಲ್ಕೆ ಎಂಬ ಎರಡು ರೂಪಗಳು ಮಾತ್ರ ಶಾಸನಗಳಲ್ಲಿ ಕಂಡುಬಂದಿವೆ. –ಅಲು, –ಅ ಎಂಬ ರೂಪಗಳು ಹೊಸಗನ್ನಡದಲ್ಲಿ ನಿಶ್ಚಿತ ಸಂವಿಧಾನದಲ್ಲಿ ಬರುತ್ತವೆ.

–ಎ : ಇರ್ + ಎ — > ಇರೆ (೧೩ ನೇ ಶ.),
ಬೆಸಕೆಯ್ + ಎ — > ಬೆಸಕೆಯೆ (೧೧ ನೇ ಶ.).
–ಅಲ್ : ಅಟ್ಟು + ಅಲ್ — > ಅಟ್ಟಲ್ (೧೧ ನೇ ಶ.).
–ಅಲ್ಕೆ : ನುಡಿ + ಅಲ್ಕೆ — > ನುಡಿಯಲ್ಕೆ (೧೧ ನೇ ಶ.).

೪.೩ **ಕಾಲವಾಚಕಗಳು :**

೪.೩.೧ **ಭೂತಕಾಲ :** –ತ್, –ಟ್, –ಡ್, –ದ್, –ಇದ್, –ಇ; (ಕ್)

–ತೆ : ಈ + ತ್ + ಅ + ರು —> ಇತ್ತರು (೧೧ ನೇ ಶ.),
ಸಾಯ್ + ತ್ + ಅ + ರು —> ಸತ್ತರು (೧೧ ನೇ ಶ.).

–ಟ್ : ಕೊಡ್ + ಟ್ + ಅಂ —> ಕೊಟ್ಟಂ (೧೧ ನೇ ಶ.); ಕೊಟ್ಟು (೧೩ ನೇ ಶ,). ಬಿಡ್ + ಟ್ + ಅಂ —> ಬಿಟ್ಟಂ (೧೧ನೇ ಶ.), ಬಿಟ್ಟು; ಬಿಟ (೧೩, ೧೪ ನೇ ಶ.).

–ಡ್ : ಕೊಳ್ + ಡ್ + ಉ —> ಕೊಂಡು (೧೧ ನೇ ಶ.),
ಕೊಂಡ (೧೨ ನೇ ಶ.).

(–ಕ್) ; ಕೊಡಗಿನ ಶಾಸನಗಳಲ್ಲಿ ಇದು ಬಂದಿರುವ ಪ್ರಯೋಗವಿಲ್ಲ. ಆದರೆ ನಗು, ಮಿಗು, ಹೊಗು– ಎಂಬಂತಹ ಕ್ರಿಯಾಪದಗಳಲ್ಲಿ ಹೊಸಗನ್ನಡದಲ್ಲಿ ಇದರ ಪ್ರಯೋಗವಿದೆ.

–ಇದ್ : ದೀರ್ಘ ಸ್ವರದಿಂದ ಕೂಡಿದ ಏಕವ್ಯಂಜನಾಂತ ಧಾತುಗಳು ಅಥವಾ ಹ್ರಸ್ವದಿಂದ ಕೂಡಿದ ದ್ವಿತ್ವ, ಇಲ್ಲವೇ ಸಂಯುಕ್ತವ್ಯಂಜನಗಳಿರುವ ಧಾತುಗಳು ಮತ್ತು ಸ್ವರಾದಿಯಾದ ಪ್ರತ್ಯಯಗಳ ಮಧ್ಯೆ –ಇದ್– ಭೂತಕಾಲವಾಚಕ ಬರುತ್ತದೆ. ಯಾವ ಪ್ರತ್ಯಯಗಳೂ ಬರದಿದ್ದರೆ ಇದರ –ದ್– ಲೋಪಗೊಂಡು –ಇ ಮಾತ್ರ ಸೇರಿ, ಕ್ರಿಯಾಪದವು ಭೂತಕೃದ್ವಾಚಿಯಾಗುತ್ತದೆ.

ಉದಾ : ಮಾಱ+ಇದ್+ಅ+ರ್ —> ಮಾಱಿದರು (೧೩ನೇ ಶ.)
ತಾಱ+ಇದ್+ಅ+ನ್ —> ತಾಱಿದನ್ (೧೧ನೇ ಶ.)
ಕಾದ್+ಇದ್+ಅ —> ಕಾದಿದ (೧೩ನೇ ಶ.)
ಹುಟ್+ಇದ್+ಅ —> ಹುಟ್ಟಿದ (೧೩ನೇ ಶ.)
ಆಗ್+ಇದ್+ø —> ಆಗಿ (೧೩ನೇ ಶ.)
ಕಾದ್+ಇದ್+ø —> ಕಾದಿ (೧೩ನೇ ಶ.)
ತಾಱ್+ಇದ್+ø —> ತಾಱ (೧೧ನೇ ಶ.)

–ದ್ : ಸ್ವರಾಂತ್ಯವಾದ, ಇಲ್ಲವೇ ನ್, ಯ್, ರ್, ಲ್‌ಗಳಿಂದ ಅಂತ್ಯವಾದ ಧಾತುಗಳ ನಂತರ –ದ್– ಭೂತಕಾಲವಾಚಕ ಬರುತ್ತದೆ.

ಬರ+ದ್+ಅ —> ಬರದ (೧೩ನೇ ಶ.)
ಪಡೆ+ದ್+ಉ —> ಪಡೆದು (೧೪ನೇ ಶ.)
ಎನ್+ದ್+ಉ —> ಎಂದು (೧೩, ೧೪ನೇ ಶ.)

ಕೊಲ್+ದ್+ಅ —> ಕೊಂದ (೧೧, ೧೨, ೧೪ನೇ ಶ.)
ಬರ್ + ದ್ + ಉ —> ಬಂದು (೧೩ನೇ ಶ.)
ಗೆಯ್ + ದ್ + ಉ —> ಗೆಯ್ದು (೧೩ನೇ ಶ.)
ಇರ್ + ದ್ + ಉ —> ಇರ್ದು (೧೨, ೧೩ನೇ ಶ.).

ಹಳಗನ್ನಡದಲ್ಲಿ ನಿಲ್ + ದು —> ನಿಂದು. ಕೇಳ್ + ದು —> ಕೇಳ್ದು ಎಂಬು ಕ್ರಿಯಾಪದರೂಪಗಳಿವೆ. ಹೊಸಗನ್ನಡದಲ್ಲಿ ನಿಂದು, ಎಂಬುದು ನಿಂತು, ಕೇಳ್ದು ಎಂಬುದು ಕೇಳಿ, ಕೇಳಿದ.... ಎಂದಾಗುತ್ತದೆ.

–ದ್ದ್– : ಇರ್, –ಬೀಟ್, (ಬಿಟ್) ಧಾತುಗಳಲ್ಲಿ – ದ್ದ್– ಭೂತಕಾಲ ವಾಚಕವಾಗಿ ಬರುತ್ತದೆ. ರ್, ಟ್, ಗಳು ಲೋಪಗೊಳ್ಳುತ್ತವೆ. ದೀರ್ಘಸ್ವರಗಳು ಹ್ರಸ್ವಗಳಾಗುತ್ತವೆ.

ಉದಾ : ಇರ್ + ದ್ದ್ + ಅ —> ಇದ್ದ (೧೨, ೧೩ನೇ ಶ,)
ಬೀಟ್ + ದ್ದ್ + ಅ + ನು —> ಬಿದ್ದನು (೧೩ನೇ ಶ.).

– ∅ : ಆಗು (ಮತ್ತು ಹೋಗು) ಧಾತುವಿನಿಂದ ಭೂತಕಾಲಕೃದ್ವಾಚಿಯ ರಚನೆಯಾದಾಗ – ∅ – ಭೂತಕಾಲವನ್ನು ನಿರ್ದೇಶಿಸುತ್ತದೆ.

ಉದಾ : ಆ + ∅ + ಇ + ತು —> ಆ + ಯ್ + ಇ+ತು —> ಆಯಿತು. (ಹೋಯಿತು ಎಂಬ ಹೊಸಗನ್ನಡ ರೂಪ ಶಾಸನಗಳಲ್ಲಿ ಕಂಡುಬರುವುದಿಲ್ಲ.)

೪.೩.೨ ವರ್ತಮಾನಕಾಲ :

ಶಾಸನಗಳಲ್ಲಿ ವರ್ತಮಾನಕಾಲದ ಪೂರ್ಣಕ್ರಿಯಾಪದಗಳು ಕಂಡುಬರುವುದಿಲ್ಲ. ಹಳಗನ್ನಡದ ಕಾವ್ಯಭಾಷಾಪ್ರಭೇದದಲ್ಲಿ ಭೂತಕೃದ್ವಾಚಿ –ಆಗು ಧಾತುವಿನ ಭವಿಷ್ಯತ್ ನ್ಯೂನರೂಪವಾದ ಅಪ್ಪ, ಅಪ ಎಂಬುದು ಸೇರಿದ ಸಂಯುಕ್ತರೂಪದಿಂದ ನಿರ್ದೇಶಿತ ವಾಗುತ್ತಿತ್ತು. ಹೊಸಗನ್ನಡದಲ್ಲಿ ಮಾತ್ರ ವರ್ತಮಾನ ಕಾಲಕ್ಕೆ –ಉತ್ತ –ಪ್ರತ್ಯಯಾ ನಂತರ, ವರ್ತಮಾನ ಕಾಲಕ್ಕೆ ವಿಶಿಷ್ಟವಾದ ಸರ್ವನಾಮ ಪ್ರತ್ಯಯಗಳಿಂದ ಪೂರ್ಣ ಕ್ರಿಯಾಪದದ ರಚನೆಯಾಗುತ್ತದೆ (ನೋಡಿ : ಕುಶಾಲಪ್ಪಗೌಡ, ೧೯೬೮, ಕನ್ನಡದಲ್ಲಿ ವರ್ತಮಾನ ಕ್ರಿಯೆ –ಪ್ರಬುದ್ಧ ಕರ್ಣಾಟಕ ೫೦–೨). ಕೊಡಗಿನ ಶಾಸನಗಳಲ್ಲಿ –ಉತ್– ಎಂಬ ವರ್ತಮಾನಕಾಲವಾಚಕವಿರುವ ಅಪೂರ್ಣ ಕ್ರಿಯಾಪದಗಳು ದೊರೆಯುತ್ತವೆ.

ಉದಾ : ಗೆಯ್ + ಉತ್ತ್ + ಅ —> ಗೆಯ್ಯುತ್ತ (೧೧ನೇ ಶ.)
ಬೊಗುಳ್ + ಉತ್ + ಅ → ಬೊಗುಳುತ್ತ (೧೩ನೇ ಶ.).

೪.೩.೩ **ಭವಿಷ್ಯತ್ಕಾಲ** : -ಪ್ಪ್-, -ವ್-, -ಉವ್, -ಬ್-, -ಹ್, -ø, ಎಂಬ ಪ್ರತ್ಯಯಗಳು ಭವಿಷ್ಯತ್ಕಾಲವನ್ನು ತೋರಿಸುತ್ತವೆ. ಪ್ರೇರಣಾರ್ಥಪ್ರತ್ಯಯದ ನಂತರ ಈ ಪ್ರತ್ಯಯಗಳು ಬರುತ್ತವೆ. ಪೂರ್ಣಕ್ರಿಯೆ ಮತ್ತು ಅಪೂರ್ಣಕ್ರಿಯೆ -ಎಂಬ ಎರಡು ರೂಪಗಳೂ (ಭವಿಷ್ಯತ್ಕಾಲದಲ್ಲಿ) ಇರುವುದು ಶಾಸನಗಳಲ್ಲಿ ಕಂಡು ಬರುತ್ತವೆ.

-ಬ್- :	ತಿನ್+ಬ್+ಅರು	—>	ತಿಂಬರು (೧೪ನೇ ಶ.)
	ಎನ್+ಬ್+ಅ	—>	ಎಂಬ (೧೧ನೇ ಶ.)
-ಉವ್- :	ಬಿತ್+ಉವ್+ಅ	—>	ಬಿತ್ತುವ (೧೨ನೇ ಶ.)
	ಸಲ್+ಉವ್+ಅ	—>	ಸಲುವ (೧೩ನೇ ಶ.)
-ಪ್ಪ್- :	ಅ+ಪ್ಪ್+ಅ	—>	ಅಪ್ಪ (೧೧, ೧೩, ೧೪ನೇ ಶ.)
-ಹ್- :	ಪೋ+ಹ್+ಅರು	—>	ಪೋಹರು (೧೪ನೇ ಶ.)
-ø- :	ಬರ್+ø+ಏನ್	—>	ಬರೇನ್ (೧೧ನೇ ಶ.)
-ವ್ :	ಕಾ+ವ್+ಅರು	—>	ಕಾವರು (೧೨ನೇ ಶ.)

೪.೪ **ನಿಷೇಧಕ್ರಿಯೆ** :

ಹಳಗನ್ನಡದಲ್ಲಿ ಪೂರ್ಣಕ್ರಿಯಾಪದದಿಂದ ಕಾಲವಾಚಕವನ್ನು ಕಳೆದರೆ, ಉಳಿಯುವ ರೂಪ ನಿಷೇಧಕ್ರಿಯೆಗೆ ಸಮವಾಗುತ್ತದೆಂದು ತೋರಮಟ್ಟಿಗೆ ಹೇಳಬಹುದು. ಅಂದರೆ, ಮಾಡಿದನು ಎಂಬುದರಿಂದ -ಇದ್- ಎಂಬ ಭೂತಕಾಲವಾಚಕವನ್ನಾಗಲೀ, ಮಾಡುವೆನು ಎಂಬುದರಿಂದ 'ಉವ್' ಎಂಬ ಭವಿಷ್ಯತ್ಕಾಲವಾಚಕವನ್ನಾಗಲೀ ಕಳೆದರೆ ಉಳಿಯುವ ಮಾಡನು, ಮಾಡೆನು ಎಂಬುವು ನಿಷೇಧಪೂರ್ಣಕ್ರಿಯಾಪದಗಳು. ನಪುಂಸಕಲಿಂಗದಲ್ಲಿ ಮಾತ್ರ -ಅ- ಎಂಬ ನಿಷೇಧ ಪ್ರತ್ಯಯ (ಉದಾ : ತಪ್ಪ್+ಅ+ದು —> ತಪ್ಪದು, ಬಾರ್+ಅ+ದು —> ಬಾರದು) ಬರುವ ಪೂರ್ಣಕ್ರಿಯಾ ರೂಪವಿದೆ. ನಿಷೇಧಕೃದ್ವಾಚಿ, ಇಲ್ಲವೇ ನಿಷೇಧನ್ಯೂನ (Negative Relative Participle) ಗಳಲ್ಲಿ -ಅದ್- ಎಂದು ನಿಷೇಧವಾಚಕವಿದೆ. ಹೊಸಗನ್ನಡದಲ್ಲಿ ಮೇಲೆ ಹೇಳಿದ ಪೂರ್ಣಕ್ರಿಯಾಪದ ನಿಷೇಧದಲ್ಲಿ ಪ್ರಚಾರದಲ್ಲಿಲ್ಲ. ಕೂಡದು, ಆಗದು, ಬಾರದು, ಎಂಬ ನಿಷೇಧರೂಪಗಳನ್ನು ಷತಿಸಪ್ತಮಿಯೊಡನೆ ಜೋಡಿಸಿ, ಬರಲಾಗದು, ಬರಕೂಡದು, ಬರಬಾರದು ಎಂದು, ಎಲ್ಲ ಲಿಂಗ- ವಚನಗಳಿಗೆ ಸಾಮಾನ್ಯವಾದ ರೂಪವನ್ನು ಮಾತ್ರ ಪ್ರಯೋಗಿಸುವ ಪದ್ಧತಿ ರೂಢಿಗೆ ಬಂದಿದೆ. ಭೂತ ಇಲ್ಲವೆ ಭವಿಷ್ಯತ್ಕಾಲದ ನಿಷೇಧ ವಿವಕ್ಷೆ ಮಾಡುವಲ್ಲಿ ಆಯಾ ಕಾಲವಾಚಕ ಪ್ರತ್ಯಯಗಳಿರುವ ಕ್ರಿಯಾನಾಮಕ್ಕೆ -ಇಲ್ಲ,[೮] ಎಂಬ ಈಗ ಸಂಪೂರ್ಣವಾಗಿ ನಿಷೇಧರೂಪವೆಂದು

ತಿಳಿಯಲಾದ ರೂಪವನ್ನು ಜೋಡಿಸಲಾಗುತ್ತದೆ (ಉದಾ : ಬರುವುದಿಲ್ಲ, ಬಂದುದಿಲ್ಲ, ಇತ್ಯಾದಿ). ಕೊಡಗಿನ ಶಾಸನಗಳಲ್ಲಿ ನಿಷೇಧಕ್ರಿಯೆಗೆ ಒಂದೇ ಒಂದು ಉದಾಹರಣೆ: ತಡೆ+ಅದ್+ಎ —> ತಡೆಯದೆ (೧೧ ನೆ ಶ.) ದೊರೆಯುತ್ತದೆ.

೪.೫ ಕೃದ್ವಾಚಿಗಳು :

ಭೂತಕೃದ್ವಾಚಿ (Past Participle). ನಿಷೇಧಕೃದ್ವಾಚಿ (Negative Participle), ಭೂತನ್ಯೂನ (Past Relative Participle), ಭವಿಷ್ಯತ್‌ನ್ಯೂನ(Future Relative Participle) ಅಪೂರ್ಣವರ್ತಮಾನ (Present Continuous) ಕ್ರಿಯಾರೂಪವನ್ನು ಕೃದ್ವಾಚಿಯೆಂಬ ಸಾಮಾನ್ಯ ಹೆಸರಿನಲ್ಲಿ ಕರೆಯಲಾಗಿದೆ. ಭೂತಕೃದ್ವಾಚಿಗೆ, ಹಳಗನ್ನಡ ಗ್ರಾಂಥಿಕ ಹಾಗೂ ಶಾಸನಿಕ ಪ್ರಭೇದಗಳಲ್ಲಿಯೂ, ಹೊಸಗನ್ನಡದಲ್ಲಿಯೂ, –ಇದ್– ಎಂಬ ಭೂತಕಾಲವಾಚಕವು -ಇ- ಎಂದಾಗುವು ದನ್ನು ಬಿಟ್ಟರೆ ಬೇರೆ ಪ್ರತ್ಯೇಕವಾದ ಪ್ರತ್ಯಯ ರೂಪವೇನೂ ಇಲ್ಲ. ಭೂತರೂಪವೇ ಅಂದರೆ, ಭೂತಕಾಲದ ಪೂರ್ಣಕ್ರಿಯಾಪದದ ಸರ್ವನಾಮಪ್ರತ್ಯಯವನ್ನು ಕಳೆದುಳಿದ ಭಾಗವೇ ಭೂತಕೃದ್ವಾಚಿಯಾಗುತ್ತದೆ. ಭೂತನ್ಯೂನ ಮತ್ತು ಭವಿಷ್ಯತ್ ನ್ಯೂನಗಳಲ್ಲಿ, ಆಯಾಕಾಲವಾಚಕ ಪ್ರತ್ಯಯಗಳ ನಂತರ 'ಅ' ಪ್ರತ್ಯಯ ಬರುತ್ತದೆ. ಅಪೂರ್ಣವರ್ತಮಾನವನ್ನು ತೋರಲೂ 'ಅ' ಎಂಬ ಪ್ರತ್ಯಯ ಬರುತ್ತದೆ. ಹಿಂದೆ ಹೇಳಿದಂತೆ ಭೂತಕೃದ್ವಾಚಿ ಅದರ ಮುಂದೆ ಬರುವ ಕ್ರಿಯಾಪದವನ್ನು ವಿಶೇಷಿಸು ತ್ತದ. ನಿಷೇಧಕೃದ್ವಾಚಿಯೂ ಮುಂಬರುವ ಕ್ರಿಯಾಪದಕ್ಕೆ ವಿಶೇಷಣವಾಗಿದೆ. ಭೂತನ್ಯೂನ ಮತ್ತು ಭವಿಷ್ಯತ್‌ನ್ಯೂನಗಳು ಸಂಬಂಧವಾಚಕವನ್ನು ಹೊಂದಿ, ಮುಂಬರುವ ನಾಮಪದಗಳನ್ನು ವಿಶೇಷಿಸುತ್ತವೆ. ಅಪೂರ್ಣ ವರ್ತಮಾನ ಕ್ರಿಯೆಯಲ್ಲಿ ಅಪೂರ್ಣತೆಯನ್ನು ತೋರುವ -ಅ ಪ್ರತ್ಯಯದ ಮುಂದೆ ಕ್ರಿಯಾ ಪದವೇ ಬರುತ್ತದೆ ಹೊರತು ನಾಮಪದವಲ್ಲ. ಆದುದರಿಂದ ಅದೂ ಭೂತ ಮತ್ತು ನಿಷೇಧಕೃದ್ವಾಚಿಗೆ ಸಮವಾಗಿದೆ. ಶಾಸನಭಾಷೆಯಲ್ಲಿ ಇವಕ್ಕೆ ಈ ಕೆಳಗಿನ ಉದಾಹರಣೆಗಳು ದೊರೆಯುತ್ತವೆ :

(೧) ಭೂತಕೃದ್ವಾಚಿ : ಆಗ್ + ಇದ್ + ∅ —> ಆಗಿ (೧೨, ೧೫, ೧೪ ನೇ ಶ.)
ಕಟ್ಟ್ + ಇದ್ + ∅ —> ಕಟ್ಟಿ (೧೧ನೇ ಶ.)

(೨) ನಿಷೇಧ ಕೃದ್ವಾಚಿ : ತಡ್ + ಅದ್ + ಎ —> ತಡೆಯದೆ (೧೧ನೇ ಶ.)
ಇಲ್ + ಅದ್ + ಎ —> ಇಲ್ಲದೆ (೧೧ನೇ ಶ.)

(೩) ಅಪೂರ್ಣ ವರ್ತಮಾನ : ಬೊಗುಳ್ + ಉತ್ತ್ + ಅ —> ಬೊಗಳುತ್ತ (೧೩ನೇ ಶ.)

(೪) ಭೂತನ್ಯೂನ : ಕಾದ್ + ಇದ್ + ಅ —> ಕಾದಿದ (೧೩ನೇ ಶ.)

ಮಾಡ್ + ಇಸ್ + ಇದ್ + ಅ —> ಮಾಡಿಸಿದ (೧೪ನೇ ಶ.)

ಅಗಳ್ + ಇಸ್ + ಇದ್ + ಅ —> ಅಗಳಿಸಿದ (೧೧ನೇ ಶ.)

ಬರ + ದ್ + ಅ —> ಬರದ (೧೩ನೇ ಶ.)

(೫) ಭವಿಷತ್ನ್ಯೂನ: ಎನ್ + ಬ್ + ಅ —> ಎಂಬ (೧೧ನೇ ಶ.)

ಬಿತ್ತ್ + ಉವ್ + ಅ —> ಬಿತ್ತುವ (೧೨ನೇ ಶ.)

ಸಲ್ + ಉತ್ + ಅ —> ಸಲ್ಲುತ್ತ (೧೩ನೇ ಶ.)

(೬) ನಿಷೇಧನ್ಯೂನ ರೂಪಕ್ಕೆ ಶಾಸನಪ್ರಭೇದದಲ್ಲಿ ಉದಾಹರಣೆಯಿಲ್ಲ.

೪.೬ ಪೂರಕಾರ್ಥಗಳು (Conditionals) :

–ಒಡೆ, –ಅಡೆ, –ಅರೆ ಎಂಬ ಪ್ರತ್ಯಯಗಳು ಒಂದು ಕಾರ್ಯ ನಡೆಯುವುದು ಇನ್ನೊಂದು ನಡೆಯುವುದನ್ನು ಅನುಸರಿಸುವುದನ್ನು ನಿರ್ದೇಶಿಸುತ್ತವೆ. ಇವನ್ನು ಪೂರಕಾರ್ಥಗಳೆಂದು ಇಲ್ಲಿ ಗುರುತಿಸಲಾಗಿದೆ. ಕೊಡಗಿನ ಶಾಸನಗಳಲ್ಲಿ –ಅಡೆ ಎಂಬುದರ ಪ್ರಯೋಗ ವ್ಯಾಪಕವಾಗಿದೆ. ಇದು ಮತ್ತು –ಒಡೆ ಎಂಬುದು ಹಳಗನ್ನಡ ಶೈಲಿಯಲ್ಲಿ ಕಾಣುವ ರೂಪಗಳು. –ಅರೆ ಎಂಬುದಕ್ಕೆ ಈ ಶಾಸನಗಳಲ್ಲಿ ಪ್ರಯೋಗವಿಲ್ಲವಾದರೂ ಹೊಸಗನ್ನಡದಲ್ಲಿ ಇದು ಮಾತ್ರ ಪ್ರಚಲಿತವಾಗಿದೆ. ಈ ಪ್ರತ್ಯಯಗಳು ಕಾಲವಾಚಕಗಳ ನಂತರದ ಸ್ಥಾನದಲ್ಲಿ ಬರುತ್ತವೆ. ಹೊಸಗನ್ನಡದಲ್ಲಿ ಭೂತಕಾಲದ ಪ್ರತ್ಯಯದ ನಂತರ ಮಾತ್ರ -ಅರೆ ಬರುತ್ತದೆ. ಭವಿಷತ್ಕಾಲದ ಪೂರಕ ಸೂಚನೆ ಬರಬೇಕಾದರೆ, ಭವಿಷತ್ಕಾಲದ ನಪುಂಸಕಲಿಂಗದ ಏಕವಚನವುಳ್ಳ ಪೂರ್ಣ ಕ್ರಿಯಾಪದದ ನಂತರ 'ಆದರೆ' (ಆಗ್ + ದ್ + ಅರೆ) ಎಂಬುದನ್ನು ಸಂಯೋಜಿಸಲಾಗುತ್ತದೆ : ಬರುವುದಾದರೆ, ಕೊಡುವುದಾದರೆ ಇತ್ಯಾದಿ.

ಶಾಸನ ಪ್ರಯೋಗಗಳು : –ಅಡೆ :

ಅಳಿಪ್+ಇದ್+ಅಡೆ → ಅಳಿಪಿದಡೆ (೧೩ನೇ ಶ.)

ಆಟ್+ದ್+ಅಡೆ → ಆಟ್ದಡೆ (೧೧ನೇ ಶ.)

ಎನ್+ದ್+ಅಡೆ → ಎಂದಡೆ (೧೩ನೇ ಶ.)

ಬೀಟ್+ದ್+ಅಡೆ → ಬಿದ್ದಡೆ (೧೩ನೇ ಶ.)

ಅಳಿ+ಹ್+ಇದ್+ಅಡೆ → ಅಳಿಹಿದಡೆ (೧೨ನೇ ಶ.)

೪.೭ ವಿಧ್ಯರ್ಥಕಗಳು :

ಈ ಕ್ರಿಯಾಜಾತಿಯಲ್ಲಿ ಆಶೀರ್ವಾದ, ವಿಜ್ಞಾಪನೆ, ಅಪ್ಪಣೆಕೊಡುವುದು ಮುಂತಾದ ರೀತಿಗಳಿವೆ. ವಿಜ್ಞಾಪನಾರ್ಥದಲ್ಲಿ ಕೊಡಗಿನ ಶಾಸನಭಾಷೆಯಲ್ಲಿ ಒಂದೇ ಒಂದು ರೂಪ –ಗೆ ಪ್ರತ್ಯಯ ಧಾತುವಿಗೆ ಸೇರಿ : ಕುಡು+ಗೆ→ಕುಡುಗೆ (೧೧ನೇ ಶ.) ಬಂದಿದೆ.

ನಪುಂಸಕ ಏಕವಚನದ ಭವಿಷತ್‌ಪೂರ್ಣಕ್ರಿಯಾಪದವನ್ನೂ ವಿಧ್ಯರ್ಥದಲ್ಲಿ ಪ್ರಯೋಗಿಸುವುದೂ ಇದೆ. ಉದಾ : ಸಲುವುದು (೧೩ನೇ ಶತಮಾನ). ಯಾವ ಪುರುಷನಿರ್ದೇಶವೂ ಇಲ್ಲದ ರೂಪದ ಪ್ರಯೋಗ ಮೇಲಿನ ವಿಧ್ಯರ್ಥದಲ್ಲಿ ಬಂದಿದೆ.

೪.೮ ಕೃನ್ನಾಮಗಳು :

ಪೂರ್ಣಕ್ರಿಯಾಪದಗಳು ನಾಮವಿಭಕ್ತಿಯನ್ನು ಹೊಂದಲೂ ಸಮರ್ಥವಾಗಿವೆ. ಅಂತಹ ಪದಗಳನ್ನು ಕೃನ್ನಾಮಗಳೆಂದು ಕರೆಯಲಾಗಿದೆ. ಭೂತ ಅಥವಾ ಭವಿಷತ್ಕಾಲ ವಾಚಕಗಳಿಗೆ ಪ್ರಥಮಪುರುಷ ಸರ್ವನಾಮ ಪ್ರತ್ಯಯಗಳು ಸೇರಿ ಕೃನ್ನಾಮಗಳಾಗು ತ್ತವೆ. ವಾಕ್ಯದಲ್ಲಿ ಕರ್ತೃಪದ ಯಾವುದೇ ಆಗಿದ್ದರೂ, ಕೃನ್ನಾಮ ಪ್ರಥಮಪುರುಷ ದಲ್ಲೇ ಇರುತ್ತದೆ. 'ಯಾರು ಕಟ್ಟಿದರು' ಎಂಬ ಪ್ರಶ್ನೆಯ ಉತ್ತರ 'ನಾನು ಕಟ್ಟಿದೆ' ಎಂಬಲ್ಲಿ 'ಕಟ್ಟಿದೆ'– ಎಂಬುದು ಪೂರ್ಣಕ್ರಿಯಾಪದ. 'ನಾನು ಕಟ್ಟಿಸಿದೆ' ಎಂಬಲ್ಲಿಯೂ ಕ್ರಿಯಾಪದವೇ. 'ನಾನು ಕಟ್ಟಿದವನು', 'ನಾನು ಕಟ್ಟಿಸಿದವನು' ಎಂಬಲ್ಲಿ 'ಕಟ್ಟಿ ದವನು', 'ಕಟ್ಟಿಸಿದವನು' ಎಂಬವುಗಳು ಕೃನ್ನಾಮಗಳು. 'ನಾನು ವಿದ್ಯಾರ್ಥಿ', 'ಅವನು ಹುಡುಗ', 'ಅವಳು ಹುಡುಗಿ' ಎಂಬ ಆಖ್ಯೆ – ಆಖ್ಯಾತಗಳೆರಡರಲ್ಲೂ, ಸಮಾನ ನಾಮಪದಗಳಿರುವ ವಾಕ್ಯಗಳಿಗೆ ಮೇಲಿನವು ಸರಿಯಾಗುತ್ತವೆ. ಹೊಸಗನ್ನಡದಲ್ಲಿ ಭೂತ ಮತ್ತು ಭವಿಷತ್ಕಾಲವಾಚಕಗಳ ನಂತರ ಅವನು, ಅವಳು, –ಉದು, –ಅದು, –ಉವು, –ಅವು ಎಂಬ ಪ್ರಥಮಪುರುಷ ಸರ್ವನಾಮರೂಪಗಳು ಬರುತ್ತವೆ. ಆದರೆ ಹಳಗನ್ನಡದಲ್ಲಿ ಸರ್ವನಾಮಪ್ರತ್ಯಯಗಳೇ ಬಂದರೂ, ಕೃನ್ನಾಮಗಳಾಗಿ ವರ್ತಿಸಲು ಸಾಧ್ಯವಿದೆ. ಶಾಸನದಲ್ಲಿ ಕಂಡುಬರುವ ರೂಪಗಳು ಹೀಗಿವೆ :

ಕೊಟ್ಟುದು (೧೨ನೇ ಶ.), ಅಪ್ಪುದಕ್ಕೆ (೧೩ನೇ ಶ.) ಅಳಿದಂ (೧೧ನೇ ಶ.)
ಮಾಡಿಕೊಂಡವಂ (೧೧ನೇ ಶ.), ಅಳುಪಿದವರು (೧೪ನೇ ಶ.)

೫.೦ ಶಾಸನಭಾಷಾ ಶೈಲಿ ಮತ್ತು ಮಾದರಿಗಳು :

೫.೧ ಹತ್ತನೆಯ ಶತಮಾನದ ವರೆಗೆ :

ಕೊಡಗಿನಲ್ಲಿ ದೊರೆಯುವ ಶಾಸನಗಳನ್ನವಲೋಕಿಸಿದರೆ ೧೦ನೇ ಶತಮಾನದ ವರೆಗೆ ದೊರೆಯುವ ಶಾಸನಗಳು ಸಂಸ್ಕೃತಪದಭೂಯಿಷ್ಟವಾಗಿದ್ದು ಪ್ರೌಢಶೈಲಿಯಿಂದ

ಕೂಡಿರುವುದನ್ನು ಕಾಣುತ್ತೇವೆ. ಉದಾ : "ಸತ್ಯವಾಕ್ಯ ಕೊಂಗುಣಿವರ್ಮ್ಮ ಧರ್ಮ್ಮ ಮಹಾರಾಜಾಧಿರಾಜಾ ಕೊಳಾಳಪುರವರೇಶ್ವರ ನನ್ದಗಿರಿನಾಥ ಶ್ರೀಮತ್ ರಾಚಮಲ್ಲ ಪೆರ್ಮ್ಮನಡಿಗಳ್ ತದ್ವಾರ್ಷಾಭ್ಯನ್ತರ ಫಾಲ್ಗುಣ ಸುಕ್ಲಪಕ್ಷದ ನನ್ದೀಶ್ವರಂ ತಲೆದೆವಸ ಮಾಗೆ ಸ್ವಸ್ತಿ ಸಮಸ್ತ ವೈರಿಗಜಘಟಾಟೋಪ ಕುಂಭಿ ಕುಂಭಸ್ಥಳಸ್ಫುಟಿತಾನರ್ಘ್ಯ ಮುಕ್ತಾಫಳಗ್ರಹಣಭೀಕರ ಕರಾಸಿ ಸಿವಾಸಿತ ದಕ್ಷಿಣದೋರ್ದ್ದಣ್ಡ ಮಣ್ಡಿತ ಪ್ರಚಣ್ಡಂ ಅಣ್ಣನ ಬಣ್ಣ ಬಡವರ ನಣ್ಟ...." (E. C. I.-೯೮). ಇದು ಪಂಪನ "ಎನೆ ಸಂದುಂ ವೀರವೈರಿಕ್ಷಿತಿಪ ಗಜಘಟಾಟೋಪ ಕುಂಭಸ್ಥಳೀ...." (ಪಂಪಭಾರತ ೧-೫೧) ಎಂಬುದನ್ನು ನೆನಪಿಗೆ ತರುತ್ತದೆ. ಕ್ರಿ. ಶ. ೯೭೮ಕ್ಕೆ ಸೇರಿದ ಈ ಶಾಸನಕರ್ತೃವಿಗೆ ಸುಮಾರು ಅದೇ ಕಾಲದ ಕನ್ನಡದ ವೀರಕಾವ್ಯಗಳ ಹೃದಯಂಗಮ ಶೈಲಿ ಪ್ರಭಾವ ಬೀರಿದೆ. ಅನುನಾಸಿಕ ಮತ್ತು ಸ್ಪರ್ಶವ್ಯಂಜನ ಸಂಯುಕ್ತರೂಪ, ಎಳ್ಪದಿಂಬರ್, ಅವನೊರ್ಬ್ಬನ್- ಅಱಿದೊಂ ಎಂಬ ಹಳೆಯ ರೂಪಗಳು ಸಹಜವಾಗಿ ಇದರಲ್ಲಿ ಬಂದಿವೆ.

೫.೨ ಮಧ್ಯಕಾಲ :

ಮಧ್ಯಕಾಲದಲ್ಲಿ ಹಳೆಯ-ಹೊಸ ರೂಪಗಳ ಸಮ್ಮಿಶ್ರಣ, ಅಕ್ಷರ ಸ್ಖಾಲಿತ್ಯಗಳು ಹೆಚ್ಚಾಗುತ್ತ ಬರುತ್ತವೆ. ಸ್ವಸ್ತಿ ಶ್ರೀಮನು ಮಹಾಮಂಡಲೇಶ್ವರ ಚಲುಟು ವಿಭಾಡ ಛಲದಂಕರಾಮ, ಸತ್ಯರಾಯ ಸಂವರಣಾತಿರವಜ್ರ ರುದಿರ ಮಜೀವಕ್ಕಸಕಾವ ಶ್ರೀಮನ್ ವೀರ ಮುಸಿವರಾದಿತ್ಯ ಗೋಕೂಳದೇವರಸರು...." (E. C. I.-೯೫). ಕ್ರಿ. ಶ. ೧೨೬೪ನೇ ಇಸವಿಗೆ ಸೇರಿದ ಈ ಶಾಸನದಲ್ಲಿ ದೀರ್ಘಸಮಾಸಗಳಿಲ್ಲದೆ ಸರಳ ಗದ್ಯರೂಪವಿದೆ. ರುದಿರ, ಮಜೀವಕ್ಕಸಕಾವ ಎಂಬ ಸ್ಖಾಲಿತ್ಯಗಳೂ, (ತುಜು ಹಿಡಿಸಿ ದಲ್ಲಿ ಎಂಬುದಕ್ಕೆ) "ತುಜು ಇಡಿಸಿದಲ್ಲಿ" ಎಂಬಲ್ಲಿ ಪಕಾರ ಹಕಾರವಾಗಿ, ಮತ್ತೆ ಅದೂ ಲೋಪವಾಗಿರುವುದೂ ಕಂಡುಬರುತ್ತದೆ.

೫.೩ ಹದಿನಾಲ್ಕನೆಯ ಶತಮಾನದ ನಂತರ :

ದ್ವಿತ್ವದ ಬದಲಿಗೆ ಹ್ರಸ್ವದ ಪ್ರಯೋಗ, ಮಹಾಪ್ರಾಣದ ಬದಲು ಅಲ್ಪಪ್ರಾಣದ ಉಪಯೋಗ, ಆದಿಯ ಇ, ಎ ಕಾರಗಳಿಗೆ ಯ್ ಆಗಮವಾಗಿ ಯಿ, ಯೆ ಬರುವುದು, ಸ, ಶ, ಷ ಗಳ ವ್ಯತ್ಯಯ, ಔ ಎಂಬುದಕ್ಕೆ ಅಉ ಎಂಬ ಪ್ರಯೋಗ, ಮಧ್ಯಸ್ವರ ಲೋಪ ವಾಗಿ ವ್ಯಂಜನಸಂಯುಕ್ತತೆಯೊದಗುವುದು ಮುಂತಾದ ವೈಶಿಷ್ಟ್ಯಗಳನ್ನು ಮುಂದಿನ ಶಾಸನಗಳಲ್ಲಿ ಕಾಣಬಹುದು. ೧೭ ನೇ ಶತಮಾನದ ನಂತರ ಪರ್ಶಿಯನ್-ಅರೇಬಿಕ್ ಪದಗಳ ಸಂಖ್ಯೆ ಹೆಚ್ಚಾಗಿ ಬಳಕೆಗೆ ಬರುವುದು ಕಾಣುತ್ತದೆ. ಈ ಕೆಳಗೆ ೧೪ ನೇ ಶತಮಾನದ ನಂತರ ದೊರೆಯುವ ಶಾಸನಗಳ ವಿಶಿಷ್ಟವಾದ ಉದಾಹರಣೆಗಳನ್ನು ಕೊಡಲಾಗಿದೆ :

(೧) ದ್ವಿತ್ವದ ಬದಲು ಹ್ರಸ್ವದ ಪ್ರಯೋಗ :

ಅಣನವರು ೪೪ – ೧೯೯೮; ಅಪಣೆ ೧೩ – ೧೮೦೭; ಕಟಿದವರು ೮೮ (೧೫ನೇ ಶ.); ಲಿಂಗಣೊಡೇರು ೩೫–೧೫೪೪; ಗಱುಡಿ ಹಳಿ ೪೫ – (೧೮ನೇ ಶ.); (ಹಾಕಿ) ಕೊಟದು ೪೫, ೪೬ (೧೮ನೇ ಶತಮಾನ).

(೨) ದೀರ್ಘಸ್ವರ ಹ್ರಸ್ವಸ್ವರ ವಿಕಲ್ಪ :

ಬಿಜ ೩೨– ೧೭೯೬; ಸಸಾಸವ ೪೫–೧೮ನೇ ಶತಮಾನ; ಚುಂದ್ರಾವಾರದಲ್ಲು ೨೬–೧೮೧೦; ಸ್ಥಪನ ೩೦– ೧೮೪೩; ಬೆಳ್ಯಾಪ್ಪ ೨೩– ೧೮೮೧; ಶಿವರ್ತಿ ೧೨– ೧೮೮೫.

(೩) ಅನುನಾಸಿಕದ ಬದಲಿಗೆ ಅನುಸ್ವಾರದ ಪ್ರಯೋಗ :

ನಂನ ೮೮– ೧೫ನೇ ಶತಮಾನ; ಸರ್ವಮುಂನ್ಯ ೪೦ –೧೭೩೧; ದುಂವರ್ಜ ೨೬– ೧೮೧೦; ತಂಮು ೩೦–೧೮೪೧; ಕಂನ್ನಿಕಾ ೧೭–೧೮೭೪; ಬೊಪುಂಣ ೧೪–೧೮೭೯; ತಾರ್ರಿಪಂನು ೧೩–೧೮೦೭; ನಿಂಮು ೧೩–೧೮೦೭; ಚುಂದುಂಣ ೫೯–೧೯ನೇ ಶತಮಾನ.

(೪) ಸ್ವರಲೋಪವಾಗಿ ವ್ಯಂಜನಸಂಯುಕ್ತತೆಯೊದಗುವುದು :

ವೊಪ್ಪಸ್ತ (< ಒಪ್ಪಿಸಿದ) ಕಟ್ಟಿಸ್ತ* (< ಕಟ್ಟಿಸಿದ) (*ಇದು ೧೧ನೇ ಶತಮಾನದಲ್ಲೂ ದೊರೆಯುತ್ತದೆ).

(೫) ಪದಾದಿಯ ಇಕಾರಕ್ಕೆ– ಯ್ ಆಗಮ :

ಯಿರುವರು ೩೫– ೧೫೪೪; ಯಿರಬೇಕು ೬೩–೧೭೯೬ ; ಯಿ॰.

(೬) ಒ ಕಾರದ ಬದಲು ವ ಕಾರ ಪ್ರಯೋಗ :

ವಪ್ಪಿ ೪೬ – ೧೮ನೇ ಶತಮಾನ; ವಡೆಯುರವರು ೧೦೫ – ೧೯ನೇ ಶತಮಾನ; ವಪ್ಪಿಸಿದ್ಸು ೫೯–೧೯ನೇ ಶತಮಾನ; ವಪ್ಪಿಶಿದಂತ್ತಾ ೨೬–೧೮೧೦.

(೭) ಔ ಎಂಬುದರ ಬದಲಿಗೆ ಅಉ ಪ್ರಯೋಗ :

ಗಉಡ, ಗಉಡಿಕೆ ೪೪–೧೯೯೮; ಮಉಲ್ಯ ೧೯–೧೫೪೪: ಗಉಡ ೯೯–೧೮೫೭; ಪರ್ವತಉ ೮–೧೮೧೨; ರಾಜಗ್ರುಹಉ ೬–೧೮೧೨.

(೮) ಸ–ಶ–ಷ ಗಳ ವ್ಯತ್ಯಯ :

ಸಿಲಾಸ್ತಾಪಿತ ೪೦– ೧೭೩೧; ಸಸಾನ ೪೫– ೧೮ನೇ ಶತಮಾನ; ವಪ್ಪಿಶಿದಂತ್ತಾ ೨೬– ೧೮೧೦; ಶಿವರ್ತಿ ೧೨–೧೮೮೫; ಬರಶಿ ೧೩–೧೮೦೭: ಶಿದ್ದಲಿಂಗ ಸ್ವಾಮಿ; ಶೇರಿದ ೩೨–೧೭೯೬; ಶಿಡಿಲಿನೋಪಾದಿ ೨೭–೧೮೩೪–೩೫.

(೯) ರ ಕಾರಕ್ಕೆ ರ್ರ ಪ್ರಯೋಗ :

ವರ್ರಿಗೆ ಪರ್ರಿಯಂತ, ಸರಕಾರ್ರೆಕಾರ, ತಾರ್ರಿಪಂಸು, ಸವುಸ್ತರ್ರು, ಪರ್ರಿಯಂತ್ರಕು ಎಂದು ೧೮೦೦ರ ಸುಮಾರಿಂದ ಕೊಡಗಿನಲ್ಲಿ ದೊರೆಯುವ ಶಾಸನಗಳಲ್ಲಿ ರ ಕಾರಕ್ಕೆ ದ್ವಿತ್ವವಿರುವ ಪ್ರಯೋಗಗಳು ದೊರಕುವುದೊಂದು ವಿಶಿಷ್ಟ ಪ್ರಕ್ರಿಯೆ. ೞಕಾರವು ೧೪ನೇ ಶತಮಾನದ ವರೆಗೆ ಮಾತ್ರ ಬಳಕೆಯಲ್ಲಿದ್ದು ಅಲ್ಲಿಂದಿತ್ತ ಕಣ್ಮರೆಯಾಗಿದೆ. ಱ ಕಾರದ ಪ್ರಯೋಗ ೧೮ನೇ ಶತಮಾದ ವರೆಗೆ ಉಳಿದಿರುವಂತೆ- ಕಾವಗೊಣ್ಡ ಕಲ್ಲಸಿಱಿ ಸಿದಂ ೩೮ - ೧೮ನೇ ಶತಮಾನ-ಒಂದೇ ಒಂದು ಉದಾಹರಣೆ ದೊರೆಯುತ್ತದೆ. ಬಹುಶಃ ಱಕಾರದ ವಿಷಯದಲ್ಲಿ ಅಸ್ಥಿರವಾದ ಒಂದು ನೆನವರಿಕೆ ಈ ಶಾಸನಕರ್ತನಿಗಿದ್ದುದರಿಂದ ಈ ತರ ವಿಕಲ್ಪ ಪ್ರಯೋಗವಾಗಿರಬೇಕೆಂದು ಕಾಣುತ್ತದೆ.

ಈ ಕಾಲದ ಶಾಸನಭಾಷೆಯ ಮಾದರಿಗಾಗಿ ಕೆಳಗಿನ ಶಾಸನಭಾಗವನ್ನು ನೋಡಬಹುದು : "....ಕಡಿಯತ್ತು ನಾಡ ಬಾವಲ ಗ್ರಾಮದ ಬಿದ್ದಂಡರ-ಬೋಪ್ಪ ಕೀಲಕ ಸಂವತ್ಸರದ ಮಾಘ ಬ ೫ ದಿವಸ ಅ-ರಮನೆ ಚಾಕ್ರಿಗೆ ಬಂದಂತಾವನು ಪ್ರಭವ ಸಂ-ವತ್ಸರದ ವರ್ರಿಗೆ ಹತ್ತೊಂಬತು ವರುಷ ಪರ್ರಿಯಂ-ತ್ರಕು ಆನಬೇಟೆಯಲ್ಲಿ ಹುಲಿಬೇಟೆಯಲ್ಲು ಮ್ರುಗ-ಜಾತಿಗಳ ಬೇಟೆಯಲ್ಲು ಟೀಪುಸುಲುತಾನರ ಮೇಗಳ-ಲಡಾಯಿದಲ್ಲು ಮುಂತಾದ ಅರಮನೆ ಚಾಕ್ರಿಯಲ್ಲು ಅ-ಪ್ಪಣೆ ಆದ ಮೇರ್ರೆ ದಿವಾರಾತ್ರೆಯಲ್ಲೂ ಪ್ರಾಣಪ್ರಯತ್ನದಿಂದ ಅತಿಧೈರ್ಯದಿಂದ ಬಂಟತನ ಮಾಡಿ ಸ್ವಾಮಿಕಾರ್ಯ್ಯ ಮುಖ್ಯವಾಗಿ ನಡಕೊಂಡಂತಾ ಸರಕಾರ್ರೆಕಾರ ಬೋಪ್ಪ...." ೧೩-೧೮೦೭

೪.೪ **ಪರ್ಷಿಯನ್-ಅರೇಬಿಕ್ ಶಬ್ದಗಳು :**

೮ನೇ ಶಾಸನದ(೧೮೧೨)ಮೊದಲಭಾಗವನ್ನು ಉರ್ದುಲಿಪಿಯಲ್ಲಿ ಬರೆಯಲಾಗಿದೆ. ಮತ್ತು ಅದೇ ವಿಷಯವನ್ನು ಕೆಳಗೆ ಕನ್ನಡದಲ್ಲಿ ಕೊಟ್ಟಿದೆಯೆಂಬುದರಿಂದ ಈ ಕಾಲದಲ್ಲಿ ಉರ್ದುವಿನ ಪ್ರಾಮುಖ್ಯವನ್ನರಿಯಬಹುದು. ಅದರ ಮೂಲಕ ಪರ್ಷಿಯನ್ ಅರೇಬಿಕ್ ಪದಗಳು ಸಹಜವಾಗಿ ಕನ್ನಡಕ್ಕೆ ಬಂದಿವೆಯೆನ್ನಬಹುದು. ರಾಜೇಂದ್ರನಾಮೆ ಗ್ರಂಥದಿಂದಲೂ ಇದು ಮಂದಟ್ಟಾಗುತ್ತದೆ. ಆದರೆ ಮೇಲೆ ಹೇಳಿದ ಕನ್ನಡ ವಿಭಾಗದಲ್ಲಿ ಅನ್ಯದೇಶ್ಯಪದಗಳು ಇಲ್ಲವೇ ಇಲ್ಲವೆಂಬುದು ಸೋಜಿಗವೆನಿಸುತ್ತದೆ.

ಲಡಾಯಿ, ಸರಕಾರ್ರೆಕಾರ, ಕುಹಲಾಲತನ, ತಾರ್ರಿಪಂಸ್ನು, ಕಾವಂದರು ೧೩-೧೮೦೭; ಕಬರ್‌ಸ್ಥಾನ, ದಪನ್ (ಆಗೀಷ್ಟು, ಚೀಫ್‌ಕಮೀಷನರ್ ಎಂಬ ಇಂಗ್ಲಿಷ್ ಪದಗಳೂ ಇದರಲ್ಲಿ ಬಂದಿವೆ) ಎಂಬಿತ್ಯಾದಿ ಅಂತಹ ಉದಾಹರಣೆಗಳು.

೬.೦ ಸಾಮಾಜಿಕ ಉಪಭಾಷೆಗಳು :

೬.೧ ಗೌಡಕನ್ನಡ :

೬.೧.೧ **ಧ್ವನಿನಾಂಕ :** ಗೌಡ ಕನ್ನಡದಲ್ಲಿ ಸ್ವರಗಳ ಸಂಖ್ಯೆ ಶಾಸನ ಹಾಗೂ ಗ್ರಾಂಥಿಕ ಕನ್ನಡಕ್ಕಿಂತ ಹೆಚ್ಚಾಗಿವೆ. /ɨ/, /ə/, /ɛ/, /ɔ/ ಎಂಬವುಗಳು ಆ ಹೆಚ್ಚಿನ ಸ್ವರಗಳು. ಉಳಿದ ಅ, ಇ, ಉ, ಎ, ಒ ಗಳಂತೆ ಇವಕ್ಕೆ ದೀರ್ಘರೂಪಗಳಿಲ್ಲ. ಮಹಾಪ್ರಾಣಗಳು ಸಂಸ್ಕೃತಪದಗಳ ಉಪಯೋಗದಲ್ಲಿಯೂ ಬರುವುದಿಲ್ಲ. ಐದು ಅನುನಾಸಿಕಗಳೂ ಧ್ವನಿಮಾಗಳಾಗಿವೆ. ಬಹುವರ್ಣಪದಗಳಲ್ಲಿ (Multi-Syllabic) ಎರಡನೆ ಇಲ್ಲವೆ ಮೂರನೇ ವರ್ಣದ ಸ್ವರ ಲೋಪವಾಗಿ, ಪದದ ಪರಿಮಾಣ ಚಿಕ್ಕದಾಗುತ್ತದೆ. ಪರಿಸರಕ್ಕನುಸರಿಸಿ ಸ್ವರಗಳು ಉನ್ನತ, ನಿಮ್ನ, ಪೂರ್ವ, ಪಶ್ಚ -ಇತ್ಯಾದಿಗಳಾಗುವ ಸ್ವರಸಾಮ್ಯವಿಧಿ ಇದರಲ್ಲಿ ಹೆಚ್ಚಾಗಿದೆ (ವಿವರಗಳಿಗೆ ನೋಡಿ : Kushalappa Gowda ೧೯೬೯. ೮೫–೧೦೫). ಸಮಾಸವಾದಾಗ, ಪೂರ್ವಪದದಲ್ಲಿದ್ದ ದ್ವಿತ್ವ ಹ್ರಸ್ವಗೊಳ್ಳುತ್ತದೆ. ಪೂರ್ವಪದದ ಮೊದಲವರ್ಣ 'ಹ' ಲೋಪವಾಗುತ್ತದೆ. ಪರಪದದ ದ್ವಿತ್ವ ಹ್ರಸ್ವವಾಗುತ್ತದೆ. ಉದಾ : ನೀರುಳ್ಳಿ→ನೀರುಳಿ, ಮೊದ್+ಮಜ್ಜ → ಮೊದ್ಮಜ (ಮದುಮಗ), ದೊಡ್ಡ + ಅಪ್ಪ → ದೊಡಪ, ಬಾಳೆ + ಹಣ್ಣು → ಬಾಳೆಣು ಇತ್ಯಾದಿ (Kushalappa Gowda, ೧೯೭೦, ೩೨–೩೩).

೬.೧.೨ ರೂಪಿನಾಂಕ :

ಉತ್ತಮ ಮತ್ತು ಮಧ್ಯಮಪುರುಷಗಳಲ್ಲಿ ವಚನವ್ಯತ್ಯಾಸವೂ, ಪ್ರಥಮಪುರುಷದಲ್ಲಿ ಲಿಂಗ–ವಚನ ವ್ಯತ್ಯಾಸವೂ ಇದೆ. ತದ್ಧಿತನಾಮಗಳಲ್ಲಿ ಮಾತ್ರ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳೆಂದು ವ್ಯತ್ಯಾಸಗಳನ್ನು ಕಾಣಬಹುದು. ಸರ್ವನಾಮವಲ್ಲಿ ಅಂತಹ ವ್ಯತ್ಯಾಸವಿಲ್ಲ.

ಪುಲ್ಲಿಂಗ	ಸ್ತ್ರೀಲಿಂಗ
ಮಜ್ಜ (ಮಗನು)	ಮಗ (ಮಗಳು)
ಕುರ್ಡ (ಕುರುಡ)	ಕುರ್ಡಿ (ಕುರುಡಿ)
ಜಾಣ	ಜಾಣೆ
ಕೆಲ್ಸಗಾರ (ಕೆಲಸಗಾರ)	ಕೆಲ್ಸಗಾರ್ತಿ (ಕೆಲಸಗಾತಿ)

ನಪುಂಸಕಲಿಂಗಕ್ಕೆ –ಅದ್ (ಅದು), ಇದ್ (ಇದು); ಕೃನ್ನಾಮಗಳಲ್ಲಿ ಮಾತ್ರ ಬಂದ:ದ್ (bʌndədɨ), ಹೋದ್ದ್ (ho:ddɨ) ಎಂದು ಕಂಡುಬರುತ್ತದೆ.

ಬಹುವಚನದಲ್ಲಿ ಕೌಟುಂಬಿಕ, ಮಹತ್, ಸಾಮಾನ್ಯವೆಂಬ ಮೂರು ವಿಭಾಗಗಳಿವೆ :

–ಂದರ್, ಕಳ್; ಕೌಟುಂಬಿಕ	–ø, –ರ್, –ಅರ್; ಮಹತ್	–ಕಳ್, ಗಳ್; ಸಾಮಾನ್ಯ
ಅಕ್ಕಂದ:ರ್ (ʌkkʌndər)	ಅವು	ಆನೆಗ
ಅತ್ತೆಕ	ಯಾರ್	ಕುದರೆಗ
	ಹಾರ್‌ರ್	ಮಕ್ಕ

ಪ್ರಥಮಪುರುಷ ಸರ್ವನಾಮದಲ್ಲಿ ಮಾತ್ರ ಏಕವಚನದಲ್ಲಿ ಪುಲ್ಲಿಂಗ ಮತ್ತು ನಪುಂಸಕಲಿಂಗ ಎಂಬ ಎರಡೇ ರೂಪಗಳು; ಬಹುವಚನದಲ್ಲಿ ಒಂದೇ ರೂಪ ಎಂದು ಇರುವುದು ಕಂಡುಬರುತ್ತದೆ. ಕ್ರಿಯಾಪದದ ಸರ್ವನಾಮಪ್ರತ್ಯಯ ಏಕವಚನದಲ್ಲಿ ಪುಲ್ಲಿಂಗ, ನಪುಂಸಕಲಿಂಗಗಳಿಗೆ ವ್ಯತ್ಯಾಸವಿಲ್ಲ. ಬಹುವಚನದಲ್ಲಿ ಮೂರಕ್ಕೂ ವ್ಯತ್ಯಾಸ ವಿಲ್ಲ. ಉದಾ : ಏಕವಚನ ಪುಲ್ಲಿಂಗ : ಅಂವ, ಇಂವ, (=ಅವನ್, ಇವನ್), ನಪುಂಸಕಲಿಂಗ : ಅದ್, ಇದ್ (=ಅವಳು, ಇವಳು ಅಥವಾ ಅದು, ಇದು), ಬಹುವಚನ : ಅವು (=ಅವರು ಅಥವಾ ಅವುಗಳು), ಕ್ರಿಯಾಪದ : ಏಕವಚನ : ಅಂವ ಬಾತ್, (=ಅವನು ಬಂದನು), ಅದ್ ಬಾತ್ (=ಅವಳು ಬಂದಳು ಅಥವಾ ಅದು ಬಂದಿತು), ಬಹುವಚನ : ಅವು ಬಂದೊ (=ಅವರು ಬಂದರು ಅಥವಾ ಅವುಗಳು ಬಂದುವು). ವರ್ತಮಾನ, ಭವಿಷತ್ ಕಾಲಗಳಲ್ಲೂ ಇದೇ ವ್ಯತ್ಯಾಸ ಮಾತ್ರ ಕಂಡುಬರುತ್ತವೆ.

ಕ್ರಿಯಾಪದದಲ್ಲಿ ಈ ಪ್ರಭೇದದಲ್ಲಿ ಮೂರು ಕಾಲನಿರ್ದೇಶನವಾಗುತ್ತದೆ, ಬನ್ನೆ (=ಬರುತ್ತೇನೆ), ಬಂದೆ (=ಬಂದೆನು), ಬಾವೆ (=ಬರುವೆ). ಶಿಷ್ಟಕನ್ನಡದಲ್ಲಿ ಸಾಮಾನ್ಯ ಮಾತಿನಲ್ಲಿ ಭವಿಷತ್ಕಾಲ ಪೂರ್ಣಕ್ರಿಯೆಯನ್ನು ಉಪಯೋಗಿಸುವುದಿಲ್ಲ. ಆದರೆ ಗೌಡಕನ್ನಡದಲ್ಲಿ ಅದು ಕೃತಕವಾಗಿ ಕಾಣುವುದಿಲ್ಲ. ಶಿಷ್ಟಕನ್ನಡದಂತೆ ಭವಿಷ್ಯದರ್ಥ ದಲ್ಲಿ ವರ್ತಮಾನವನ್ನೇ ತಕ್ಕ ಕ್ರಿಯಾವಿಶೇಷಣಗಳನ್ನು ತಂದು ಉಪಯೋಗಮಾಡಲೂ ಸಾಧ್ಯವಿದೆ. ಬರಬೇಕು, ಕೊಡಬೇಕು ಎಂಬ ಎಲ್ಲಾ ಸರ್ವನಾಮಗಳಿಗೂ ಸಮಾನ ವಾದ ವಿಧ್ಯರ್ಥಕರೂಪದಲ್ಲಿ ಬೇಕು ಎಂಬ ಪದದ ಬಕಾರ ಲೋಪಗೊಂಡು –ಒಕು ಎಂಬ ಪ್ರತ್ಯಯ ಮಾತ್ರ ಉಳಿಯುತ್ತದೆ. ಉದಾ : ಬರ್ + ಬೇಕು → ಬರ್ + ಒಕು → ಬರೊಕು. ಕೊಡ್ + ಬೇಕು → ಕೊಡ್ + ಒಕು → ಕೊಡೊಕು. ಆದರೆ ಬೇಡ ಎಂಬಲ್ಲಿ ಮೇಲಿನಂತೆ ಲೋಪಕ್ರಿಯೆಯಿಲ್ಲ; ಬೇಡ ಎಂಬುದು ಬಡ ಎಂದಾಗು ತ್ತದೆ. ಉದಾ : ಬರ್ + ಬೇಡ → ಬರ್ಬಡ, ಕೊಡ್ + ಬೇಡ → ಕೊಡ್ಬಡ ಇತ್ಯಾದಿ.

೬.೨ ಜೇನುಕುರುಬರ ಕನ್ನಡ :

೬.೨.೧ **ಧ್ವನಿನಮೂನೆ** : ಇದರಲ್ಲಿಯೂ /ɛ/, /ɔ/ ಗಳು ಶಿಷ್ಟ ಅಥವಾ ಗ್ರಾಂಥಿಕ ಕನ್ನಡಕ್ಕಿಂತ ಹೆಚ್ಚಿನ ಧ್ವನಿಮಾಗಳಾಗಿವೆ. ಅಲ್ಲದೆ ಅವಕ್ಕೆ ದೀರ್ಘರೂಪವೂ

ಇದೆ. ಇದರಲ್ಲಿ ಇಕಾರ ಧ್ವನಿಮಾವಾಗಿಲ್ಲ. ಗೌಡಕನ್ನಡದಲ್ಲಿ ಕಾಣುವಂತೆ ಇಲ್ಲಿಯೂ ಸ, ಶ, ಷಗಳ ಪೈಕಿ ಸ ಒಂದೇ ಧ್ವನಿಮಾವಾಗಿದೆ. ಹ ಇದರಲ್ಲಿ ಧ್ವನಿಮಾವಾಗಿಲ್ಲ. ಆದರೆ ಗೌಡ ಕನ್ನಡದಲ್ಲಿ ಅದು ಧ್ವನಿಮಾ. (Upadhyaya, 1971 : 1) ಶಿಷ್ಟಭಾಷೆಯ ಏ ಬರುವಲ್ಲೆಲ್ಲ ಈ ಪ್ರಭೇದದಲ್ಲಿ ಕೆಲವೆಡೆಯಲ್ಲಿ ಆ ಆಗುವುದು ಕಂಡು ಬರುತ್ತದೆ. ಇದು ಯಾವ ಧ್ವನಿನಿಯಮವನ್ನನುಸರಿಸಿದೆಯೆಂದು ಈಗ ಹೇಳಲು ಸಾಧ್ಯವಿಲ್ಲ. ಉದಾ : ಕೇಳು —> ಕಾಳು, ಹೇಳು —> ಆಳು, ಗೆಣಸು —> ಗಾಸು, ಬೇಡ —> ಬಾಡ, ಬೇಕು —> ಬಾಕು, ವೇಸ —> ವಾಸ, ಏಕೆ —> ಯಾಕೆ, ಏನು —> ಯಾನ, ಯಾನು; ಏಳು —> ಯಾಳು, ಏಸು —> ಯಾಸು, ಸೇಟ —> ಸಾಟ.

ಓಕಾರಕ್ಕೆ ವಾಕಾರಾದೇಶವಾಗುತ್ತದೆ. ಹೋತ —> ಓತ —> ವಾತ; ಓದು —> ವಾದು, ಓಲೆ —> ವಾಲೆ. ರೋ ಕಾರಕ್ಕೆ ರಾ ಆಗಮವಾಗುತ್ತದೆ : ರೋಮ —> ರಾಮ.

೬.೨.೨ ರೂಪಿಮಾಂಶ :

ಸರ್ವನಾಮ ಹಾಗೂ ಕ್ರಿಯಾಪದದಲ್ಲಿ ಬರುವ ಸರ್ವನಾಮಪ್ರತ್ಯಯ ರೂಪ ಶಿಷ್ಟಕನ್ನಡವನ್ನು ಹೋಲುತ್ತದೆ.

ಉತ್ತಮ : ನಾನು (ಏಕ), ನಾವು (ಬಹು); ಮಧ್ಯಮ : ನೀನು (ಏಕ), ನೀವು (ಬಹು).

ಪ್ರಥಮ : ಪುಲ್ಲಿಂಗ : ಅವ್ನು–ಇವ್ನು; ಸ್ತ್ರೀಲಿಂಗ : ಅವ, ಇವ, ನಪುಂಸಕ : ಅದು–ಇದು (ಏಕ), ಅವು–ಇವು (ಬಹು).

ಕ್ರಿಯಾಪದ ಸರ್ವನಾಮಪ್ರತ್ಯಯ : ವರ್ತಮಾನಕಾಲದಲ್ಲಿ :

	ಏಕ	ಬಹು
ಉತ್ತಮ :	ಕುಡಿತಿನಿ	ಕುಡಿತಿಗೆ
ಮಧ್ಯಮ :	ಕುಡತಿಗೆ	ಕುಡಿತಿಗೆ
ಪ್ರಥಮ :	ಕುಡಿತಾನೆ	ಕುಡಿತಾರೆ
ಪು.	ಕುಡಿತನೆ	ಕುಡಿತರೆ
ಸ್ತ್ರೀ.	ಕುಡಿತಾಳೆ ಕುಡಿತಳೆ	
ನಪುಂ.	ಕುಡಿತಾದೆ	ಕುಡಿತಾವೆ
	ಕುಡಿತದೆ	ಕುಡಿತವೆ

ಭೂತಕಾಲ :

ಉತ್ತಮ ಮತ್ತು ಮಧ್ಯಮ ಪುರುಷಕ್ಕೆರಡಕ್ಕೂ ವ್ಯತ್ಯಾಸವಿಲ್ಲ. ಪುಂ–ಸ್ತ್ರೀ ಗೂ ವ್ಯತ್ಯಾಸ ಕಾಣುವುದಿಲ್ಲ.

	ಏಕ	ಬಹು
ಉತ್ತಮ, ಮಧ್ಯಮ :	ಕುಡ್ತೆ	ಕುಡ್ಡೊ
ಪ್ರಥಮ : ಪುಂ–ಸ್ತ್ರೀ :	ಕುಡ್ತ	ಕುಡ್ತಾರು
ನಪುಂ :	ಕುಡ್ತಾತು–ಕುಡ್ತುತು	ಕುಡ್ಡೊ

(Upadhyaya ೧೯೭೧. ೧೧. ೧೨. ೧೩)

೭.೦ ಮುಕ್ತಾಯ :

ಕೊಡಗಿನ ಶಾಸನಗಳನ್ನವಲೋಕಿಸಿದರೆ ಪ್ರೌಢವಾಗಿದ್ದ ಹಳಗನ್ನಡ ಶೈಲಿ, ಕಾಲಕ್ರಮದಲ್ಲಿ ಬದಲಾಗಿ, ಶಿಥಿಲವಾಗಿ ೧೭–೧೮–೧೯ ನೇ ಶತಮಾನಗಳಲ್ಲಿ ತುಂಬ ಖಿಲವಾದಂತೆ ಕಾಣುತ್ತದೆ. ಇಲ್ಲಿಯ ಪ್ರತಿಭಾವಂತ ನಿವಾಸಿಗಳು, ಆಂಗ್ಲರ ಸಂಪರ್ಕ ಬಂದಂದಿನಿಂದ ಇಂಗ್ಲೀಷನ್ನು ಇತ್ತೀಚಿನ ವರೆಗೆ ರಾಜಭಾಷೆಯೆಂಬ ಗೌರವದಿಂದ ಕಲಿತು, ಅದರಲ್ಲಿ ಸಾಹಿತ್ಯರಚನೆಯನ್ನು ಮಾಡಿದವರು, ಇಲ್ಲವೆ ನುರಿತ ಬರಹಗಾರರು ಅಥವಾ ಆಂಗ್ಲ ಭಾಷಾಸಾಹಿತ್ಯವನ್ನು ಅಭ್ಯಾಸಮಾಡಿರುವವರು ಅಧಿಕ ಸಂಖ್ಯೆಯಲ್ಲಿ ಸಿಗಬಹುದಾದರೂ ಅಷ್ಟೇ ಒಲವಿನಿಂದ ಕನ್ನಡದಲ್ಲಿ ಪಾಂಡಿತ್ಯ ಸಂಪಾದನೆ ಹಾಗೂ ಸಾಹಿತ್ಯ ರಚನೆ ಮಾಡುವವರು ಕೇವಲ ಬೆರಳೆಣಿಕೆಯಲ್ಲಿರುತ್ತಾರೆಂದು ತೋರುತ್ತದೆ. ಕೊಡಗಿನ ಸೌಂದರ್ಯ ಹೊರಗಿನವರಿಗೆ ಕಾವ್ಯಸ್ಫೂರ್ತಿಯನ್ನು ಕೊಡಬಲ್ಲ ಕಾಂತತ್ವವನ್ನು ಹೊಂದಿದೆ. ಆದರೆ ಇಲ್ಲಿಯ ಮಣ್ಣಿನಮಕ್ಕಳಾದವರಿಗೆ 'ಈಜುವ ಮೀನಿಗೆ ನೀರಿನದೇನು ಗೊಡವೆ'ಯೆಂಬುಂತಾಗಿದೆಯೆಂದು ತೋರುತ್ತದೆ. 'ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಾದಳೋ, ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ' ಎಂಬಂತಹ ಪ್ರಕೃತಿದೇವಿಯ ಮಡಿಲಲ್ಲಿ ಕನ್ನಡ ಪೂರ್ವದಲ್ಲಿ ನೆಲೆಗಂಡು, ಬಲಗೊಂಡುದು ಜೈನ ಸಂಘಗಳಿಂದ; ಮತ್ತೆ ಮುಂದುವರಿದುದು ವೈದಿಕಪಂಥದ ರಾಜರಿಂದ. ಈ ನಾಡನ್ನು ಗಂಗ, ಕೊಂಗಾಳ್ವ, ಚೆಂಗಾಳ್ವ, ಹೊಯ್ಸಳ, ವಿಜಯನಗರ, ಬೇಲೂರು ನಾಯಕರು ಮುಂತಾದ ಹೊರಗಣ– ಅಂದರೆ ಇಲ್ಲಿಯ ಮೂಲನಿವಾಸಿಗಳಲ್ಲದ – ಇತರರಾದ ಅರಸರೇ ಆಳಿದರು. ಕೊನೆಯ ಕೊಡಗಿನ ಅರಸರೂ ವೀರಶೈವ ಮತಸ್ಥರಾಗಿ 'ಭಾರದ್ವಾಜ ಗೋತ್ರ, ಅಶ್ವಲಾಯನ ಸೂತ್ರ, ಋಕ್‌ಶಾಖೆಗಳಾದ ವೀರಶೈವಮತ ಧುರೀಣ ಪ್ರವೀಣರಾದ'ವರು (ಶಾಸನ ೯); ಮೂಲನಿವಾಸಿಗಳಾದ ಕೊಡವರಲ್ಲ. ಇವರೆಲ್ಲರ ಆಡಳಿತಭಾಷೆ ಕನ್ನಡವಾಗಿತ್ತು. ಇಂದೂ ಅದು ಕನ್ನಡವೇ ಆಗಿದೆ. ಅದು ಪ್ರಾದೇಶಿಕ ಪರಿಮಿತಿ

ಗೊಳಪಡದ ಕಾವೇರಿಯಂತೆ— ದಿಗವಲೋಕನ ಮಾಡುವ ಕನ್ನಡ— ಜೆಡಗಿನ ಕೊಡಗಿನ ಕನ್ನಡ.

ಅಡಿಟಿಪ್ಪಣಿಗಳು

೧. ಕ್ರಿ. ಶ. ೪೬೬ಕ್ಕೆ ಸೇರಿದುದೆಂದು ಹೇಳಲಾದ, ಆದರೆ ೯ನೇ ಶತಮಾನದ ಲಿಪಿಸ್ವರೂಪವನ್ನು ಹೊಂದಿ ಇದು ಕೃತಕ ಶಾಸನವೆಂದು ಡಾ. ಎ. ಎನ್. ನರಸಿಂಹಯ್ಯನವರು ಹೇಳಿರುವ ಎಪಿಗ್ರಾಫಿಯಾ ಕರ್ನಾಟಿಕ ಒಂದನೆಯ ಸಂಪುಟದ ಒಂದನೆಯ ಶಾಸನ ಕೊಡಗಿನಲ್ಲಿ ದೊರಕುವ ಅತ್ಯಂತ ಪ್ರಾಚೀನ ಶಾಸನ. ಇದರ ಮುಖ್ಯ ವಿಷಯವನ್ನು ಸಂಸ್ಕೃತದಲ್ಲೂ ದತ್ತಿಯ ವಿವರಗಳನ್ನು ಕನ್ನಡದಲ್ಲಿಯೂ ಬರೆಯಲಾಗಿದೆ. ಇದರ ನಿಜಸ್ಥಿತಿಯ ಬಗ್ಗೆ ಸಂದೇಹವಿರುವುದಾದರೂ ಸಂಸ್ಕೃತ ಭಾಷೆಯಲ್ಲಿ ಕೊಡಗಿನಲ್ಲಿ ಇದು ಒಂದೇ ಶಾಸನ ದೊರಕಿದೆ ಎಂಬುದು ಗಮನಿಸತಕ್ಕ ವಿಷಯ. ಇದೇ ಸಂಪುಟದ ೮ನೆಯ ಶಾಸನವನ್ನು ಮೊದಲು ಉರ್ದುಭಾಷೆ ಹಾಗೂ ಲಿಪಿಯಲ್ಲಿ ಬರೆಯಲಾಗಿದೆ. ೨೦ನೇ ಶಾಸನ, ಗ್ರಂಥ– ಮಲೆಯಾಳಂ ಲಿಪಿಯಲ್ಲಿ ಬರೆಯಲಾದ, ಮಲೆಯಾಳ ಭಾಷೆಯಲ್ಲಿರುವುದು. ಇದು ಕ್ರಿ. ಶ. ೧೪ನೇ ಶತಮಾನಕ್ಕೆ ಸೇರಿದೆ. ಇದರಂತೆಯೇ ಬರೆಯಲಾದ ಇನ್ನೊಂದು ಶಾಸನ ಸಂಖ್ಯೆ ೨೧ರದು. ಒಟ್ಟು ೧೦೬ ಶಾಸನಗಳಲ್ಲಿ ಈ ನಾಲ್ಕನ್ನು ಬಿಟ್ಟರೆ ಉಳಿದುವೆಲ್ಲ ಕನ್ನಡದಲ್ಲೇ ಇವೆ.

೨, ಡಾ. ಯು. ಪಿ. ಉಪಾಧ್ಯಾಯರು Coorg Kannada (Jenu Kuruba Dialect) ಎಂಬ ಶೀರ್ಷಿಕೆಯಲ್ಲಿ ಜೇನುಕುರುಬರಾಡುವ ಕನ್ನಡದ ಪ್ರಭೇದವನ್ನು ಕೊಡಗು ಕನ್ನಡ ಎಂದು ಕರೆದಿದ್ದಾರೆ. ಇದು ಸಾಮಾಜಿಕ ಉಪಭಾಷೆಯೇ ಹೊರತು ಪ್ರಾದೇಶಿಕವಲ್ಲ. ಆದುದರಿಂದ Coorg Kannada 'ಕೊಡಗಿನ ಕನ್ನಡ'ವೆಂದು ಇದನ್ನು ಹೆಸರಿಸುವುದು ಸರಿ ಕಾಣುವುದಿಲ್ಲ. ಇದಕ್ಕೆ ಪ್ರಾದೇಶಿಕ ಪ್ರಾತಿನಿಧ್ಯವಿಲ್ಲ.

೩. ಹೊಸಗನ್ನಡದಲ್ಲಿ ಇಂತಹ ರೂಪಿಮಾಘಟಕಗಳು ಸೇರಿರುವ ರೂಪದ ಬದಲು ಅಷ್ಟು, ಇಷ್ಟು ಎಂಬ ಪರಿಮಾಣವಾಚಕಕ್ಕೆ ಜನ ಎಂಬ ಪದವನ್ನು ಸೇರಿಸಿ ಅಷ್ಟು ಜನ, ಇಷ್ಟು ಜನ ಎಂದು ಪ್ರಯೋಗಿಸುವುದು ರೂಢಿ.

೪. ಶ್ರೀ ವಿಲ್ಯಂ ಮಾಡ್ತ ಇದನ್ನು ಒಪ್ಪುವುದಿಲ್ಲ. ಅವರು ಷಷ್ಠಿಗೆ ಅಂತಃಸ್ತರದಲ್ಲಿ ಕಾರಕ ಸಂಬಂಧವಿಲ್ಲ, ಷಷ್ಠಿ ಅಂತಃಸ್ತರದಲ್ಲಿ ಭೂತ ಅಥವಾ ಭವಿಷತ್ ನ್ಯೂನರೂಪಗಳಿಗೆ ಸಂಬಂಧಿಸಿರಬಹುದು – ಎಂದೆಲ್ಲ ವಿವೇಚಿಸಿ, ಷಷ್ಠೀ ವಿಭಕ್ತಿಯೆಂದು ತೆಗೆದುಕೊಂಡರೂ ಅದು ಕಾರಕವಲ್ಲ ಎಂದು ತೀರ್ಮಾನಿಸಿದ್ದಾರೆ (ನೋಡಿ : William Madtha, 1974, Case System in Kannada, Dravidian Case System — (Eds) S. Agesthialingom and Kushalappa Gowda K, Annamalai University, Annamalainagar (Forthcoming).

೫. ಇಲ್ಲ, ಅಲ್ಲ. ಎಂಬ ನಿಷೇಧರೂಪಕ್ರಿಯೆಗಳು ಇಲ್ + ಅ, ಅಲ್ + ಅ, ಎಂಬ ರಚನೆಗಳಾಗಿ, ಇಲ್, ಅಲ್ ಎಂಬವುಗಳು ಸಹಜವಾಗಿ ನಿಷೇಧಗಳಾಗಿರಲಿಲ್ಲ. ಅವುಗಳೂ ಇತರ ಕ್ರಿಯಾಧಾತುಗಳಂತೆ ಇದ್ದು ನಿಷೇಧ ಪ್ರತ್ಯಯವನ್ನು ಪಡೆದು, ನಿಷೇಧನಿರ್ದೇಶಕಗಳಾಗುತ್ತವೆ (ವಿವರಗಳಿಗೆ ನೋಡಿ : Kushalappa Gowda, 1972, 267 - 270.)

ಸಹಾಯಕ ಗ್ರಂಥಗಳು ಮತ್ತು ಲೇಖನಗಳು

ಗ್ರಂಥಗಳು :

Kushalappa Gowda K. : 1970, *Gowda Kannada*, Annamalai University, Annamalainagar.

Kushalappa Gowda K. : 1972, *A Grammar of Kannada* (Based on the inscriptions of Coorg, South Kanara and North Kanara Dts. 1000 to 1400 A.D.) Annamalai University, Annamalainagar.

Nayak, H. M. (Chief Editor) : 1972, *Epigraphia Carnatica*, Vol. 1 Mysore University, Mysore.

Upadhyaya, U. P. : 1971, *Coorg Kannada* (Jenu Kuruba Dialect) Deccan College, Poona.

ಲೇಖನಗಳು :

ಕುಶಾಲಪ್ಪಗೌಡ ಕೆ. : 1968, ಕನ್ನಡದಲ್ಲಿ ವರ್ತಮಾನಕ್ರಿಯೆ— ಪ್ರಬುದ್ಧ ಕರ್ನಾಟಕ ೫೦ – ೨.

ಕುಶಾಲಪ್ಪಗೌಡ ಕೆ. : 1975, ' ಲಿಂಗವೊಂಬತ್ತು ತೆರಂ ? ' ತೀ.ನಂ.ಶ್ರೀ ಸ್ಮಾರಕ ಗ್ರಂಥ, ಬೆಂಗಳೂರು

Kushalappa Gowda K. : 1969, "*Gowda Kannada and Standard Kannada– A synchronic comparison*" Dravidian Linguistics (Seminar Papers),Eds. S.Agesthialingom & N. Kumaraswami Raja 85-105, Annamalai University, Annamalainagar.

• •

ಈ ಲೇಖನದಲ್ಲಿ ಉಪಯೋಗಿಸಿದ φ ¢ ∅ ಗುರುತುಗಳು ಒಂದೇ ಅರ್ಥವನ್ನು ಸೂಚಿಸುತ್ತವೆ.

• ಅಂತ್ಯಶಿಲ್ಪ •

ತಮಿಳುನಾಡಿನ ಕನ್ನಡ

• ಸಿ. ರಾಮಸ್ವಾಮಿ

೦. ಒಂದು ಭಾಷೆಯಲ್ಲಿ ಪ್ರಭೇದಗಳಿರುವುದು ಸೋಜಿಗದ ಸಂಗತಿಯೇನಲ್ಲ. ಅನ್ಯಭಾಷಾ ಸಂಸರ್ಗ, ಭೌಗೋಳಿಕ ದೂರಾಂತರ ಮುಂತಾದವುಗಳಿಂದ ಒಂದು ಭಾಷೆಯೊಳಗೇ ಪ್ರಭೇದ ತಲೆದೋರಿ ಅವು ತಮ್ಮಷ್ಟಕ್ಕೇ ಬೆಳೆದುಕೊಳ್ಳುತ್ತವೆ. ಕನ್ನಡನಾಡನ್ನು ಸುತ್ತಲೂ ಮರಾಠಿ, ತೆಲುಗು, ತಮಿಳು ಮತ್ತು ಮಲೆಯಾಳ ಭಾಷಾಪ್ರದೇಶಗಳು ಸುತ್ತುವರಿದಿವೆ. ಆ ಭಾಷೆಗಳ ಪ್ರಭಾವ ಕನ್ನಡದ ಮೇಲೆ ಸಹಜವಾಗಿಯೇ ಆಗಿದೆ. ಪ್ರಾಕೃತಿಕ, ರಾಜಕೀಯ ಪ್ರತಿಬಂಧಗಳಿಂದಲೂ ಒಳನಾಡಿನಲ್ಲೇ ಒಂದು ಪ್ರದೇಶದ ಜನಕ್ಕೂ ಮತ್ತೊಂದು ಪ್ರದೇಶದ ಜನಕ್ಕೂ ಮಧ್ಯೆ ಸಂಪರ್ಕ ಕಡಿದು ಭಾಷಾಪ್ರಭೇದಕ್ಕೆಡೆಗೊಡುತ್ತದೆ. ಕೆಲವೊಮ್ಮೆ ಒಂದು ಭಾಷೆಯನ್ನಾಡುವ ಜನ ಮತ್ತೊಂದು ಭಾಷಾಪ್ರದೇಶಕ್ಕೆ ವಲಸೆಹೋಗಿ ಅಲ್ಲೇ ನೆಲಸುತ್ತಾರೆ. ತಾಯ್ನಾಡಿಗೂ ಅವರಿಗೂ ಮಧ್ಯಸಂಪರ್ಕ ಕಡಿದುಹೋಗುತ್ತದೆ. ಮಾತೃಭಾಷೆಯೊಡನೆ ಸಂಪರ್ಕ ಕಡಿದುಹೋದುದರಿಂದಲೂ, ಆ ಪ್ರದೇಶದ ಭಾಷೆಯ ಒತ್ತಡಕ್ಕೆ ಸಿಕ್ಕಿಯೂ ಆ ಗುಂಪಿನ ಭಾಷೆ ಭಿನ್ನರೀತಿಯಲ್ಲಿ ಬೆಳೆಯುತ್ತಾ ಹೋಗುತ್ತದೆ. ನೂರಿನ್ನೂರು ವರ್ಷಗಳಲ್ಲಿ ಸಾಕಷ್ಟು ಭಿನ್ನತೆಯನ್ನು ಬೆಳಸಿಕೊಂಡು ಮುಖ್ಯಪ್ರಭೇದವಾಗಿ ಪರಿಣಮಿಸುತ್ತದೆ.

ತಮಿಳುನಾಡಿನ ಎಲ್ಲ ಭಾಗಗಳಲ್ಲೂ ಕನ್ನಡ ಮಾತನಾಡುವವರು ಹರಡಿಕೊಂಡಿದ್ದಾರೆ. ತಮಿಳುನಾಡಿನ ಕನ್ನಡದಲ್ಲಿಯೂ ಜಾತಿಜಾತಿಗೂ ಪ್ರದೇಶ ಪ್ರದೇಶಕ್ಕೂ ವ್ಯತ್ಯಾಸವಿದೆ. ಮಧುರೈ ಜಿಲ್ಲೆಯಲ್ಲಿ ವಾಸಿಸುವ ಗೌಂಡರುಗಳು ಮಾತನಾಡುವ ಕನ್ನಡ ಅದೇ ಜಿಲ್ಲೆಯ ದೇವಾಂಗ ಕನ್ನಡಕ್ಕೆ ಭಿನ್ನವಾಗಿದೆ. ತಮಿಳಿನ ಪ್ರಾದೇಶಿಕಪ್ರಭೇದಗಳಿಗೆ ತಕ್ಕಂತೆ ಆಯಾ ಪ್ರದೇಶದ ಕನ್ನಡವೂ ಬದಲಾಗುತ್ತದೆ. ಉದಾ : ಸೇಲಂ, ಮಧುರೈ ತಮಿಳುಗಳಲ್ಲಿ 'ಟ'ಕಾರ ಕಳೆದುಹೋಗಿದೆ ಹಾಗೂ

* ಈ ಲೇಖನವನ್ನು ಬರೆಯುವ ಕಾಲದಲ್ಲಿ ಅಮೂಲ್ಯ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿದ ನನ್ನ ಗುರುಗಳಾದ ಡಾ॥ ಕೆ. ಕುಶಾಲಪ್ಪಗೌಡ ಅವರಿಗೂ, ಮಧುರೈ ಕನ್ನಡದ ಬಗ್ಗೆ ಮಾಹಿತಿಗಳನ್ನಿತ್ತ ನನ್ನ ಮಿತ್ರ ಸಿ. ಸುಕುಮಾರನ್, ಎಂ. ಎಸ್ಸಿ, ಬೋಡಿನಾಯ್ಕನೂರು, ಮಧುರೈ ಜಿಲ್ಲೆ ಇವರಿಗೂ ನಾನು ಋಣಿಯಾಗಿದ್ದೇನೆ.

'ಳ'ಕಾರವನ್ನೂ ಕೂಡ ನಿಯಮವಾಗಿ ಉಚ್ಚರಿಸುವುದಿಲ್ಲ. ಹೀಗೆಯೇ ಆ ಪ್ರದೇಶದ ಕನ್ನಡವೂ ಳಕಾರ, ಣಕಾರಗಳ ಉಚ್ಚಾರಣೆಯಲ್ಲಿ ಕಟ್ಟುನಿಟ್ಟಾಗಿಲ್ಲ. ಇದೇರೀತಿ ಸಾಮಾಜಿಕಪ್ರಭೇದಗಳ ಒತ್ತಡ ಕೂಡ ಆಗಿದೆ. ತಮಿಳುನಾಡಿಗೆ ವಲಸೆಬಂದ ಬ್ರಾಹ್ಮಣ ಕನ್ನಡಿಗರು ಕಲಿಯುವ ಭಾಷೆ ಬ್ರಾಹ್ಮಣತಮಿಳು. ಈ ಬ್ರಾಹ್ಮಣ ತಮಿಳಿನಲ್ಲಿ ಅನವಶ್ಯಕ ಮಹಾಪ್ರಾಣಗಳನ್ನು ಕಾಣಬಹುದು, ಹಾಗೂ ಸಂಸ್ಕೃತ ಶಬ್ದಗಳ ಬಳಕೆಯೂ ಹೆಚ್ಚು. ಹೀಗಾಗಿ ತಂಜಾವೂರು, ಕುಂಭಕೋಣಂ ಕಡೆಯ ಬ್ರಾಹ್ಮಣರ ಕನ್ನಡದಲ್ಲಿ ಮಹಾಪ್ರಾಣಗಳು ಉಳಿದಿವೆ.

ಇಡೀ ಭರತಖಂಡದಲ್ಲೇ ಕನ್ನಡ ಮಾತನಾಡುವವರು ೧೯೭೧ನೇ ಜನಗಣತಿಯ ಪ್ರಕಾರ ೨,೧೭,೦೭,೯೧೮ ಜನರಿದ್ದಾರೆ. ಇದರಲ್ಲಿ ಕರ್ನಾಟಕದಲ್ಲಿ ೧,೯೩,೨೮,೨೭೦ ಜನ ಕನ್ನಡ ಮಾತನಾಡುವವರಿದ್ದಾರೆ. ಹೊರನಾಡ ಕನ್ನಡಿಗರ ಸಂಖ್ಯೆ ೨೩,೭೯,೬೪೮. ಇದು ಕರ್ನಾಟಕವನ್ನುಳಿದು ಭಾರತದೊಳಗಿನ- ಕನ್ನಡಿಗರ ಸಂಖ್ಯೆ. ಇದರಲ್ಲಿ ತಮಿಳು ನಾಡಿನ ಕನ್ನಡಿಗರ ಸಂಖ್ಯೆ ೧೦,೫೫,೦೬೪. ಅಂದರೆ ಹೊರನಾಡ ಕನ್ನಡಿಗರಲ್ಲಿ ಸುಮಾರು ಅರ್ಧದಷ್ಟು ತಮಿಳುನಾಡಿನಲ್ಲೇ ಇದ್ದಾರೆ. ಇವರು ಬಳಸುವ ಕನ್ನಡಭಾಷೆಯ ಸಮಗ್ರ ಪರಿಚಯ ಭಾಷಾಪರಿವೀಕ್ಷಣೆಯ ವ್ಯವಸ್ಥಿತ ಮತ್ತು ವ್ಯಾಪಕಕಾರ್ಯ ನಡೆದಾಗ ಮಾತ್ರ ಸಾಧ್ಯ. ಕಾರಣ ಈ ಲೇಖನ ಕೇವಲ ಮಧುರೈ ಜಿಲ್ಲೆಯ ದೇವಾಂಗರು ಆಡುವ ಕನ್ನಡಕ್ಕೆ ಮಾತ್ರ ಸೀಮಿತವಾಗಿದೆಯೆಂದು ಪ್ರಾರಂಭದಲ್ಲಿಯೇ ಸೂಚಿಸುತ್ತೇನೆ. ಇದು ಪರಿಚಯಾತ್ಮಕ ಲೇಖನವಷ್ಟೇ. ದೇವಾಂಗರು ಮುಖ್ಯವಾಗಿ ನೇಕಾರರು. ಆದರೆ ವ್ಯವಸಾಯ, ವ್ಯಾಪಾರವನ್ನೂ ಮಾಡುತ್ತಾರೆ. ಇವರು ತಮಿಳು ನಾಡಿನ ಎಲ್ಲ ಭಾಗಗಳಲ್ಲೂ ಹರಡಿಕೊಂಡಿದ್ದಾರೆ. ಇವರಿಗೂ ಮಾತೃಭೂಮಿಯಾದ ಕರ್ನಾಟಕಕ್ಕೂ ಸಧ್ಯ ಯಾವ ಸಂಬಂಧವೂ ಇಲ್ಲ. ಭಾಷೆಯ ಏಕಮಾತ್ರ ಕಾರಣದಿಂದ ನಮಗೆ ಸಂಬಂಧಿಗಳಾಗಿ ಉಳಿದಿದ್ದಾರೆ. ಇವರು ಕರ್ನಾಟಕದಿಂದ ವಲಸೆಬಂದು ನೆಲಸಿದವರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಯಾವ ಕಾಲದಲ್ಲಿ ಎಂದು ಹೇಳುವುದು ಕಷ್ಟ. ಬಹುಶಃ ಹೈದರನ ಕಾಲದಲ್ಲಿ ಬಂದಿರಬೇಕು.

ಈ ಪ್ರದೇಶ ಕೇರಳದ ಗಡಿನಾಡಾದರೂ ಮಲೆಯಾಳದ ಪ್ರಭಾವವನ್ನು ಕಾಣ ಲಾಗುವುದಿಲ್ಲ. ಆದರೆ ತಮಿಳು ಪದಗಳು. ಯಥೇಷ್ಟವಾಗಿ ಬೆರೆತಿವೆ. ಈ ಬೆರಕೆ ಕೂಡ ತುಂಬಾ ಸಹಜವಾಗಿಯೇ ಇದೆ. ಮಧುರೈ ಕನ್ನಡದಲ್ಲಿ ಶೇ. ೨೦ ರಷ್ಟು ತಮಿಳುಪದಗಳು ಇವೆ. ಆದರೂ ಕೆಲವೊಂದು ಪುರಾತನ (ಸಧ್ಯ ಕನ್ನಡ ಕಳೆದು ಕೊಂಡಿರುವ) ಗುಣಗಳನ್ನು ಜೋಪಾನವಾಗಿ ಕಾಯ್ದುಕೊಂಡಿದೆ. ಉದಾಹರಣೆಗೆ : ಅವುಂದು 'ಹೌದು' ಶಬ್ದವನ್ನೇ ಹೇಳಬಹುದು. ಇವರಿಗೆ ಶಿಷ್ಟಕನ್ನಡವಾಗಲೀ, ಗ್ರಾಂಥಿಕಕನ್ನಡವಾಗಲೀ ಅರ್ಥವಾಗುವುದಿಲ್ಲ. ಯಾರಿಗೂ ಕನ್ನಡ ಓದಲು, ಬರೆಯಲು

ಬರುವುದಿಲ್ಲ. ಮಧುರೈ ಕನ್ನಡದ ಮಟ್ಟಿಗೆ ಹೇಳುವುದಾದರೆ ಇದೊಂದು ಶ್ರಾವಣ ಭಾಷೆ.

೧. ಧ್ವನಿಮಾವ್ಯವಸ್ಥೆ :

ಮಧುರೈ ಕನ್ನಡದಲ್ಲಿ ಐದು ಹ್ರಸ್ವಸ್ವರಗಳೂ ಐದು ದೀರ್ಘಸ್ವರಗಳೂ ಇವೆ. ಹತ್ತೊಂಬತ್ತು ವ್ಯಂಜನಗಳಲ್ಲಿ ಹತ್ತು ಸ್ಪರ್ಶಗಳು, ಮೂರು ಅನುನಾಸಿಕಗಳು, ಒಂದು ಘರ್ಷ, ಒಂದು ತಾಡಿತ, ಎರಡು ಪಾರ್ಶ್ವಿಕ ಹಾಗೂ ಎರಡು ಅರೆ ವ್ಯಂಜನಗಳು ಇವೆ.

ಮಧುರೈ ಕನ್ನಡದ ಧ್ವನಿಮಾವ್ಯವಸ್ಥೆಯನ್ನು ಹೀಗೆ ಕೊಡಬಹುದು :

ಸ್ವರಗಳು :

i ಇ	u ಉ	i: ಈ	u: ಊ
e ಎ	o ಒ	e: ಏ	o: ಓ
a ಅ		a: ಆ	

ವ್ಯಂಜನಗಳು :

p ಪ	t ತ	ṭ ಟ	c ಚ	k ಕ
b ಬ	d ದ	ḍ ಡ	j ಜ	g ಗ
m ಮ	n ನ	ṇ ಣ		
	s ಸ			
	r ರ			
	l ಲ	ḷ ಳ		
w ವ			y ಯ	

ಇವುಗಳೊಂದಿಗೆ ಅವಿಭಾಜಕ ಧ್ವನಿಮಾಗಳಾದ ಶ್ರುತಿ ಮತ್ತು ವಿರಾಮ ಎರಡೂ ಸೇರಿ ಒಟ್ಟು ಧ್ವನಿಮಾಗಳು ಮೂವತ್ತೊಂದು ಆಗುತ್ತವೆ.

೧.೧. ವಿರೋಧಪ್ರಸಾರ ಯುಗ್ಮಗಳು :

೧.೧.೧. ಸ್ವರಗಳು :

೧.೧.೧.೧ ಜಿಹ್ವೋನ್ನತಿ ವೈದೃಶ್ಯತೆ :

/ i / ÷ / e /

illi	ಇಲ್ಲಿ	belli	ಬೆಲ್ಲಿ (ಬೆಳ್ಳಿ)[೧]
elli	ಎಲ್ಲಿ	belle	ಬೆಲ್ಲೆ (ಒಗೆದ ಬಟ್ಟೆ)

/i:/ ÷ /e:/

i:ga	ಈಗ	ni:ru	ನೀರು
e:ga	ಏಗ (ಯಾವಾಗ)	be:ru	ಬೇರು

/u/ ÷ /o/

uddu	ಉದ್ದು	duḍḍu	ದುಡ್ಡು
oddu	ಒದ್ದು	doḍḍu	ದೊಡ್ಡು (ದೊಡ್ಡ)

/u:/ ÷ /o:/

u:du	ಊದು	gu:ḍe	ಗೂಡೆ
o:du	ಓದು (ಬೋಧಿಸು)	go:ḍe	ಗೋಡೆ

/e/ ÷ /a/

elli	ಎಲ್ಲಿ	bele	ಬೆಲೆ
alli	ಅಲ್ಲಿ	bela	ಬೆಲ (ಬಲ)

/e:/ ÷ /a:/

e:nga	ಏಂಗ (ಹೇಗೆ)	me:su	ಮೇಸು (ಮೇಯಿಸು)
a:nga	ಆಂಗ (ಹಾಗೆ)	ma:su	ಮಾಸು (ಮಾಡಿಸು)

/a/ ÷ /o/

alle	ಅಲ್ಲೆ (ಸೊಂಟ)	kalle	ಕಲ್ಲೆ (ಕಡಲೆ)
oḷḷe	ಒಳ್ಳೆ (ಒಳ್ಳೆಯ)	kolle	ಕೊಲ್ಲೆ (ತುಂಬಾ)

/a:/ ÷ /o:/

a:ḍu	ಆಡು	ma:su	ಮಾಸು (ಮಾಡಿಸು)
o:ḍu	ಓಡು	mo:sa	ಮೋಸ

೧.೧.೧.೨ **ಜಿಹ್ವಾಪ್ರಗತಿ ವೈದೃಶ್ಯತೆ:**

/i/ ÷ /u/

iddu	ಇದ್ದು	millu	ಮಿಲ್ಲು
uddu	ಉದ್ದು	mullu	ಮುಲ್ಲು (ಮುಳ್ಳು)

/ i: / ÷ / u: /

i:su	ಈಸು (ಇಷ್ಟು)	ni:ru	ನೀರು
u:su	ಊಸು (ಹೂಸು)	nu:ru	ನೂರು

/ e / ÷ / o /

endu	ಎಂದು	peṭṭu	ಪೆಟ್ಟು
ondu	ಒಂದು	poṭṭu	ಪೊಟ್ಟು (ಬೊಟ್ಟು)

/ e: / ÷ / o: /

e:le	ಏಲೆ (ಬಡವ)	te:lu	ತೇಲು (ಚೇಳು)
o:le	ಓಲೆ (ಓಲೆ)	to:lu	ತೋಲು (ತೋಳು)

೧.೧.೧.೩ ಹ್ರಸ್ವ ದೀರ್ಘ ವೈದೃಶ್ಯತೆ :

/ i / ÷ / i: /

iru	ಇರು	niru	ನಿರು (ತೂಕ ಹಚ್ಚು)
i:ri	ಈರಿ (ಕರುಳು)	ni:ru	ನೀರು

/ e / ÷ / e: /

bekku	ಬೆಕ್ಕು
be:kku	ಬೇಕ್ಕು (ಬೇಕು)

/ a / ÷ / a: /

aḷu	ಅಳು (ಅಲು)	baḷe	ಬಳೆ
a:lu	ಆಲು (ಹಾಲು)	ba:le	ಬಾಲೆ (ಬಾಳೆ)

/o/ ÷ /o:/

ondu	ಒಂದು	moda	ಮೊದ (ಮೊದಲು)
o:ṇḍu	ಓಂಡು (ಮಡಕೆ)	mo:ḍa	ಮೋಡ

/u/ ÷ /u:/

uṇsu	ಉಣ್ಸು (ಉಣ್ಣಿಸು)	turuvu	ತುರುವು
u:ṇsu	ಊಣ್ಸು (ಊಣಿಸು)	tu:ru	ತೂರು

೧.೧.೨. ವ್ಯಂಜನಗಳು :

/p/ ÷ /b/

peṭṭu	ಪೆಟ್ಟು	kappu	ಕಪ್ಪು
beṭṭu	ಬೆಟ್ಟು (ಬೆರಳು)	kabbu	ಕಬ್ಬು

/t/ ÷ /d/

taṭṭu	ತಟ್ಟು (ತಟ್ಟೆ)	ettu	ಎತ್ತು (ಹೆತ್ತು)
daṭṭu	ದಟ್ಟು	eddu	ಎದ್ದು

/ṭ/ ÷ /ḍ/

geṭṭe	ಗೆಟ್ಟೆ (ಗಂಟೆ)	mu:ṭu	ಮೂಟು (ಹೊಲಿ)
geḍḍe	ಗೆಡ್ಡೆ	gu:ḍu	ಗೂಡು

(ṭ – ಪದಾದಿಯಲ್ಲಿ ಬರುವುದಿಲ್ಲ)

/c/ ÷ /j/

muccu	ಮುಚ್ಚು
ujju	ಉಜ್ಜು

(c – ಪದಾದಿಯಲ್ಲಿ ಬರುವುದಿಲ್ಲ)

/k/ ÷ /g/

ke:lu	ಕೇಲು (ಕೇಳು)	akka	ಅಕ್ಕ
ge:li	ಗೇಲಿ	agga	ಅಗ್ಗ (ಹಗ್ಗ)

/m/ ÷ /n/

mu:ru	ಮೂರು
nu:ru	ನೂರು

/m/ ÷ /n/ ÷ /ṇ/

a:me	ಆಮೆ	amma	ಅಮ್ಮ
a:ne	ಆನೆ	aṇṇa	ಅಣ್ಣ
a:ṇi	ಆಣಿ (ಮೊಳೆ)		

/l/ ÷ /ḷ/ ÷ /r/

nu:ru	ನೂರು	kallu	ಕಲ್ಲು
nu:lu	ನೂಲು	kaḷḷu	ಕಳ್ಳು
ku:ḷu	ಕೂಳು		

/w/ ÷ /y/

ka:wi	ಕಾವಿ	a:mu	ಆಮು (ಹಾವು)
ka:yi	ಕಾಯಿ	a:wu	ಆವು (ಆಕಳು)

೧.೨ ಮಧುರೈ ಕನ್ನಡದ ಧ್ವನಿಮಾವ್ಯವಸ್ಥೆಯಲ್ಲಿ ಕೆಲವು ವೈಶಿಷ್ಟ್ಯಗಳು:

ಮಧುರೈ ಕನ್ನಡದಲ್ಲಿಯ ಪದಗಳಲ್ಲಿ ಶೇ. ೨೦ ರಷ್ಟು ತಮಿಳು ಪದಗಳು. ಧ್ವನಿಮಾವ್ಯವಸ್ಥೆಯ ಮೇಲೆ ತಮಿಳಿನ ಪ್ರಭಾವ ತುಂಬಾ ಆಗಿದೆ.

ಶಿಷ್ಟಕನ್ನಡದಲ್ಲಿ (ಇನ್ನು ಮೇಲೆ ಶಿ. ಕ) ದೀರ್ಘಸ್ವರಾನಂತರ ಸಾಧಾರಣವಾಗಿ ವ್ಯಂಜನದ್ವಿತ್ವ ಬರುವುದಿಲ್ಲ. ಮಧುರೈ ಕನ್ನಡದಲ್ಲಿ (ಇನ್ನು ಮೇಲೆ ಮ. ಕ) ಇದು ಸಹಜವಾಗಿ ಬರುತ್ತದೆ. ಉದಾ: ಬೋಕ್ಕೆ 'ಮಡಕೆ', ಕೂಟ್ಟ 'ಕೂಟ' ಇತ್ಯಾದಿ. ತಮಿಳಿನಿಂದ ಪದಗಳನ್ನು ಎರವಲು ಪಡೆದರೂ ಆ ಪದಗಳು ಮ. ಕ. ದ ಧ್ವನಿಮಾ ವ್ಯವಸ್ಥೆಗೆ ತಕ್ಕಂತೆ ಬದಲಾಗುತ್ತವೆ. ತಮಿಳಿನ 'ಬ'ಕಾರ ಮ. ಕ. ದಲ್ಲಿ ಳಕಾರ ಅಥವಾ ಲಕಾರವಾಗಿ ಬದಲಾಗುತ್ತದೆ. ವ್ಯಂಜನಾಂತ ಪದಗಳು ಸ್ವರಾಂತವಾಗುತ್ತವೆ. ಪದಾಂತ್ಯ 'ಐ' ಎಕಾರವಾಗಿ ಪರಿಣಮಿಸುತ್ತದೆ.

ಉದಾ: ತಮಿಳು:	ಪುಗಬ್	ಮ. ಕ: ಪುಗಳು	'ಕೀರ್ತಿ'
	ಪಟಿಕ್ಕಂ	ಪಳಕ್ಕ	'ಅಭ್ಯಾಸ'
	ಏಟ್ರೈ	ಏಲೆ	'ಬಡವ'

ಪದಾದಿ ವಕಾರ ಬಕಾರವಾಗುವುದನ್ನು ಗಮನಿಸಬಹುದು. ಆದರೆ ವ>ಬ ಬದಲಾವಣೆ ಮ.ಕದಲ್ಲಿ ಪೂರ್ಣವಾಗಿಲ್ಲ. ಎಷ್ಟೋ ಪದಗಳಲ್ಲಿ ವಕಾರವನ್ನು ಉಳಿಸಿ ಕೊಂಡಿದೆ. ಆದ್ದರಿಂದ ಈ ಬದಲಾವಣೆಗೆ ಯಾವ ನಿಯಮವನ್ನೂ ಕೊಡಲು ಸಾಧ್ಯವಿಲ್ಲ.

ಉದಾ: ಬದಲಾವಣೆಗೆ:	ವಿಸಿರಿ	> ಬಿಸಿರಿ	'ಬೀಸಣಿಗೆ'
	ವೆಂಗಾಯಂ	> ಬೆಂಗಾಯಿ	'ಈರುಳ್ಳಿ'
	ವಿರಿಚ್ಚಿ	> ಬಿರಿಚ್ಚಿ	'ತೆರೆದು'

ಬದಲಾವಣೆಯಿಲ್ಲದ್ದಕ್ಕೆ:

ಮ. ಕ:	ವಾಲು	'ಬಾಲ'
	ವೇಗ	'ಬೇಗ'
	ವಡ್ಡಿ	'ಬಡ್ಡಿ'

ಶಿ.ಕ.ದಲ್ಲಿ ಪದಾದ್ಯಕ್ಷರ(first syllable)ದ ಅಕಾರ ಮ. ಕ. ದಲ್ಲಿ ಎಕಾರ ವಾಗುತ್ತದೆ. ಈ ಬದಲಾವಣೆ ಗಕಾರಾದಿಯಲ್ಲಿ ಬರುವ ಪದಗಳಲ್ಲಿ ಮಾತ್ರ ಆಗು ತ್ತದೆ. (ಇದು ತಮಿಳಿನ ಪ್ರಭಾವದಿಂದಿರಬಹುದು. ಕರ್ನಾಟಕದ ತಮಿಳರು ಮಾತ ನಾಡುವ ಕನ್ನಡದಲ್ಲಿಯೂ ಇಂತಹ ಬದಲಾವಣೆಯನ್ನು ಕಾಣಬಹುದು).

ಉದಾ : ಶಿ.ಕ. : ಗಂಡ ಮ.ಕ. : ಗೆಂಡ
ಗತ್ತು ಗೆತ್ತು
ಗಟ್ಟಿ ಗೆಟ್ಟಿ

ಇದಕ್ಕೆ ತದ್ವಿರುದ್ಧವಾದ ಬದಲಾವಣೆಯೊಂದನ್ನು ಕಾಣಬಹುದು. ಆದರೆ ಇದಕ್ಕೆ ಒಂದೇ ಒಂದು ಉದಾಹರಣೆ ದೊರಕಿದೆ.

ಶಿ. ಕ. : ನೆಕ್ಕು. ಮ. ಕ. : ನಕ್ಕು

ಕೆಲವೊಮ್ಮೆ ಶಿ. ಕ. ದ ಆದಿಯ ಹಾಗೂ ದ್ವಿತ್ವದಲ್ಲಿರುವ ಘೋಷಧ್ವನಿಮಾಗಳು ಮ. ಕ.ದಲ್ಲಿ ಅಘೋಷವಾಗುತ್ತವೆ.

ಉದಾ : ಶಿ. ಕ. : ಬುಟ್ಟಿ ಮ. ಕ. : ಪುಟ್ಟಿ
ಡಬ್ಬಿ ಡಪ್ಪಿ

ಅದೇ ತರಹದಲ್ಲಿ ಸ್ವರಮಧ್ಯದ ಅಘೋಷಧ್ವನಿಮಾಗಳು ಘೋಷವಾಗುವುದೂ ಉಂಟು.

ಮ. ಕ. : ದೇವದೆ 'ದೇವತೆ'
ಕೋಡಿ 'ಕೋಟಿ'

ಕೆಲವು ನಾಮಪದಗಳ ಆದಿ ಅಘೋಷಧ್ವನಿಮಾಗಳು ಘೋಷವಾಗುತ್ತವೆ. ಇದು ಅತಿ ತಿದ್ದುಪಾಟಿನ (Hyper correction) ಕಾರಣದಿಂದಿರಬಹುದು.

ಉದಾ : ಗಬ್ಬಿಣ 'ಕಬ್ಬಿಣ'
ಗೊಬ್ಬು 'ಕೊಬ್ಬು'
ಗೊಡ್ಲಿ 'ಕೊಡ್ಲಿ'
ಗಾಪಿ 'ಕಾಫಿ'

ಸ್ವರಮಧ್ಯದ ಕಂಠ್ಯಸ್ಪರ್ಶಗಳಾದ ಕಕಾರ, ಕಕಾರಗಳು ಕಂಠ್ಯಘರ್ಷಗಳಾಗಿ ಉಚ್ಚಾರಗೊಳ್ಳುತ್ತವೆ. / k / ಮತ್ತು / g / ಗಳಿಗೆ ಇವು ಪೂರಕಪ್ರಸಾರದಲ್ಲಿರುವುದರಿಂದ ಉಪಧ್ವನಿಮಾಗಳು. ಅವುಗಳ ಪ್ರಸಾರವನ್ನು ಹೀಗೆ ತೋರಿಸಬಹುದು.

/ k / < [k] ಅನುನಾಸಿಕದ ಮುಂದೆ, ಸ್ವರಗಳ ಮಧ್ಯೆ ಬಿಟ್ಟು ಮಿಕ್ಕೆಡೆ
[x] ಸ್ವರಗಳ ಮಧ್ಯೆ

/ g / < [ɣ] ಸ್ವರಗಳ ಮಧ್ಯೆ
[g] ಮಿಕ್ಕೆಡೆಗೆ

ಪದಾದಿಯ ಚ > ಸ ಆಗುತ್ತದೆ. ಹೀಗಾಗಿ ಚಕಾರಾದಿ ಪದಗಳೇ ಮ. ಕ. ದಲ್ಲಿ ಇಲ್ಲ (ಈ ಬದಲಾವಣೆಯನ್ನು ತುಮಕೂರು, ಚಿತ್ರದುರ್ಗದ ಅವಿದ್ಯಾವಂತರ ಭಾಷೆಯಲ್ಲಿಯೂ ಗುರುತಿಸಬಹುದು). ಉದಾ : ಸಂದಿರ 'ಚಂದ್ರ'; ಸಲಿ 'ಚಳಿ'; ಸಕ್ಕರ 'ಚಕ್ರ'; ಸಾಪೆ 'ಚಾಪೆ'; ಸಿಟ್ಟೆ 'ಚಿಟ್ಟೆ'; ಸಿಪ್ಪು 'ಚಿಪ್ಪು'; ಸೀಲ 'ಚೀಲ' ಇತ್ಯಾದಿ. ಜೊತೆಗೆ ವ್ಯಂಜನದ್ವಿತ್ವಗಳೂ ಕೂಡ ಸ್ವರಗಳ ಸೇರ್ಪಡೆಯಿಂದ ಸರಳೀಕೃತ ವಾಗುತ್ತವೆ. ಉದಾ : ಮಿರುಗ 'ಮೃಗ', ಪತ್ತರ 'ಪತ್ರ' ಇತ್ಯಾದಿ.

ಚಕಾರದಂತೆಯೇ ಟಕಾರ ಕೂಡ ಪದಾದಿಯಲ್ಲಿ ಇಲ್ಲ. ಡಕಾರ ಪದಾದಿ ಯಲ್ಲಿ ಕ್ವಚಿತ್ತಾಗಿ ಬರುತ್ತದೆ. ಮಹಾಪ್ರಾಣಗಳು ಮತ್ತು ಹಕಾರ ಮ. ಕ. ದಲ್ಲಿ ಸಂಪೂರ್ಣವಾಗಿ ಮರೆಯಾಗಿವೆ. ಪದಾದಿಯ ಹಕಾರ ಕಳೆದು, ಬರೀ ಸ್ವರ ಮಾತ್ರ ಉಳಿದಿದೆ. ಪದಮಧ್ಯವಾದರೆ ಅದು ಗಕಾರವಾಗುತ್ತದೆ.

ಉದಾ : ಆಲು 'ಹಾಲು'
ಗ್ರಗಣ 'ಗ್ರಹಣ'

ಪ್ರತ್ಯಯದ ಗಕಾರ ಸ್ವರಗಳ ಮಧ್ಯೆ ಯಕಾರವಾಗುವುದೊಂದು ವೈಶಿಷ್ಟ್ಯ. ಉದಾ : ಆಸಿಯೆ 'ಹಾಸಿಗೆ', ಅಡಿಯೆ 'ಅಡಿಗೆ', ಮನೆಯೆ 'ಮನೆಗೆ' ಇತ್ಯಾದಿ. ಇದಕ್ಕೆ ಅಪವಾದ : ಹೊಗೆ > ಒಯ್ಯ. ಇಲ್ಲಿ ನಾಮಪ್ರಕೃತಿಯ ಗ ಬದಲಾಗಿದೆ.

ಶಿ. ಕ. ದ ಕೆಲವು ಅನುನಾಸಿಕರಹಿತ ಪದಗಳಲ್ಲಿ ಮ. ಕ. ಅನುನಾಸಿಕವನ್ನು ಹೊಂದಿದೆ. ಉದಾ : ಬೀಂಜ 'ಬೀಜ', ಕೂಂಗು 'ಕೂಗು', ಮೂಂಗು 'ಮೂಗು', ಬಂಗು 'ಬಾಗು' ಇತ್ಯಾದಿ. ಕೆಲವು ಪದಗಳಲ್ಲಿ (ಆದ್ಯಕ್ಷರದಲ್ಲಿ ದೀರ್ಘಸ್ವರವಿಲ್ಲದ ಪದಗಳಲ್ಲಿ) ಎರಡನೆಯ ಅಕ್ಷರದ ನಂತರ ಅನುನಾಸಿಕವಿದೆ. ಉದಾ : ತವುಂಡು 'ತೌಡು', ಅವುಂದು 'ಹೌದು' ಇತ್ಯಾದಿ. ಮೇಲಿನ ಪದಗಳಲ್ಲಿ ಆದ್ಯಕ್ಷರದ ದೀರ್ಘ ಸ್ವರ ಪ್ರಾಚೀನಕಾಲದಲ್ಲಿ ನಾಸಿಕ್ಯಸ್ವರವಾಗಿದ್ದು ಕಾಲಾನುಗತಿಯಲ್ಲಿ ನಾಸಿಕ್ಯವನ್ನು ಕಳೆದುಕೊಂಡು ಶಿ. ಕ. ದ ರೂಪಗಳು ಸಿದ್ಧಿಸಿರಬೇಕು. ಆದರೆ ಮ. ಕ. ದಲ್ಲಿ ನಾಸಿಕ್ಯ ಅನುನಾಸಿಕ ವ್ಯಂಜನವಾಗಿ ಮಾರ್ಪಟ್ಟಿದೆ. ಶಿ. ಕ. ದಲ್ಲಿ ಅನುನಾಸಿಕವಿರುವ ಪದ ಗಳು ಮ. ಕ. ದಲ್ಲಿ ಇಲ್ಲ. ಅಂದರೆ ಅಘೋಷಸ್ಪರ್ಶದ ಹಿಂದಿನ ಅನುನಾಸಿಕತೆ ಕಳೆದುಹೋಗುತ್ತದೆ ಮತ್ತು ಪದಾಂತ್ಯದ ಅಘೋಷಸ್ಪರ್ಶ ದ್ವಿತ್ವವನ್ನು ಹೊಂದು ತ್ತದೆ. ಉದಾ : ಬೆಕ್ಕಿ < ಬೆಂಕಿ, ಗೆಟ್ಟೆ < ಗಂಟೆ, ಮಿಚ್ಚು < ಮಿಂಚು, ಗೊಟ್ಟು < ಗಂಟು, ಎಟ್ಟು < ಎಂಟು, ಸತ್ತೆ < ಸಂತೆ, ಸತ್ತೋಷ < ಸಂತೋಷ ಇತ್ಯಾದಿ. ಮ.ಕ. ದಲ್ಲಿ ಅನುನಾಸಿಕದ ನಂತರ ಅಘೋಷಸ್ಪರ್ಶವಿರುವ ಪದಗಳೇ ಇಲ್ಲ. ಅಂಥ ಪದ ಗಳು ಎರವಲು ಬಂದರೆ, ಆ ಪದ ಅನುನಾಸಿಕವನ್ನು ಕಳೆದುಕೊಳ್ಳುತ್ತದೆ. ಇಲ್ಲದೆ ಇದ್ದರೆ ಅಘೋಷಸ್ಪರ್ಶ ಘೋಷಸ್ಪರ್ಶವಾಗಿ ಮಾರ್ಪಡುತ್ತದೆ. ಈ ಎರಡು ಬದಲಾವಣೆಗಳನ್ನು ಹೀಗೆ ನಿಯಮವಾಗಿ ಕೊಡಬಹುದು :

(೧) * ṽB —> VNB (ಮು.ಕ.)[೨]
—> VB (ಶಿ. ಕ.)

ಉದಾ : bĩ: ja —> bi:ñja (M. K.)
—> bi:ja (S. K.)

tavũḍu—> tavuṇḍu (M. K.)
tavuḍu (S. K.)

(೨) * NP —> PP/NB (M. K.)

ಉದಾ : miñcu —> miccu
mu:ŋku —> mu:kku/mu:ŋgu

ಮಧುರೈ ಕನ್ನಡದಲ್ಲಿ * NP —> NB ಆಗುವುದಕ್ಕಿಂತ PP ಆಗುವ ಸಂಭವವೇ ಹೆಚ್ಚು.

ಣ > ನ ಆಗಿಯೂ ಳ > ಲ ಆಗಿಯೂ ಬದಲಾಗುತ್ತದೆ. ಈ ಬದಲಾವಣೆಗಳು ಯಾವ ನಿಯಮಕ್ಕೂ ಒಳಪಟ್ಟಿಲ್ಲ. ಉದಾ : ಎನ್ನು 'ಹೆಣ್ಣು'; ಅನ 'ಹಣ'; ಉಲುವು 'ಹುಳು'; ಬೆಲಕು 'ಬೆಳಕು'; ಬೆಲ್ಲಿ 'ಬೆಳ್ಳಿ' ಇತ್ಯಾದಿ. ಶಿ.ಕ.ದಲ್ಲಿಯಂತೆಯೇ ಮು.ಕ.ದಲ್ಲಿಯೂ ಣ, ಳ ಪದಾದಿಯಲ್ಲಿ ಬರುವುದಿಲ್ಲ.

ಮು. ಕ. ದ ಬಹಳಷ್ಟು ಪದಗಳ ಸ್ವರಮಧ್ಯದ ವಕಾರ ಮಕಾರವಾಗುತ್ತದೆ. ಈ ಬದಲಾವಣೆ ಸಹ ಯಾವ ನಿಯಮಕ್ಕೂ ಒಳಪಡುವುದಿಲ್ಲ.

ಉದಾ : ಆಮು 'ಹಾವು'; ಬಾಮಿ 'ಬಾವಿ': ಕಿಮೆ 'ಕಿವಿ'; ಕೀಮು 'ಕೀವು'; ಸಮಿತ್ತಿ 'ಸವತಿ'; ಮಾಮಿನನ್ನು 'ಮಾವಿನ ಹಣ್ಣು': ಊಮು 'ಹೂವು' ಇತ್ಯಾದಿ. ಈ ಬದಲಾವಣೆ ಮೇಲೆ ಹೇಳಿದಂತೆ ನಿಯತವಾಗಿಲ್ಲ.

ಸ್ವರಮಧ್ಯೆ ವಕಾರವಿರುವ ಪದಗಳೂ ಇವೆ.

ಉದಾ : ಆವು 'ಆಕಳು', ಅವರೆ 'ಅವರೆಕಾಯಿ', ಅರುವಿ 'ತಾಮ್ರದ ಪಾತ್ರೆ', ದಾವನಿ 'ಲಂಗದ ಮೇಲೆ ಹಾಕುವ ತುಂಡುಸೀರೆ' ಇತ್ಯಾದಿ.

೨. ಸಂಧಿ :

ಸಂಧಿಗಳು ಎರಡು ವಿಧ : ೧. ಅಂತಸ್ಸಂಧಿ ೨. ಬಹಿಸ್ಸಂಧಿ. ಪ್ರಕೃತಿ + ಪ್ರತ್ಯಯ ಮತ್ತು ಪದ + ಪ್ರತ್ಯಯ ಸೇರುವಾಗ ನಡೆಯುವ ಸಂಧಿಕಾರ್ಯಕ್ಕೆ ಅಂತಸ್ಸಂಧಿಯೆಂದು ಹೆಸರು.

ಉದಾ : ಕೀಳ್ + ತ್ + ಎ —> ಕಿತ್ತೆ

ಹೊಗಳಿಕೆ + ಇಂದ —> ಹೊಗಳಿಕೆಯಿಂದ

ಪದ + ಪದ ಮತ್ತು ಪ್ರಕೃತಿ + ಪ್ರಕೃತಿಗಳು ಸೇರುವುದು ಬಹಿಸ್ಸಂಧಿ.

ಉದಾ : ಕಣ್ + ನೀರು —> ಕಣ್ಣೀರು

ಬೇಸಿಗೆ + ಅಲ್ಲದ —> ಬೇಸಿಗೆಯಲ್ಲದ

೨.೧ ಅಂತಸ್ಸಂಧಿ :

(i) $\bar{v} \rightarrow V / \text{—}cc$

ಉದಾ : ಸಾಯ್ + ತ್ + ಎ —> ಸತ್ತೆ (ನೋಡಿ iii)

ಕೀಳ್ + ತ್ + ಎ —> ಕಿತ್ತೆ

(ii) $r \rightarrow d / \text{—} \ \& \ d.$

ಉದಾ : ಇರ್ + ದ್ + ಎ —> ಇದ್+ದ್ + ಎ —> ಇದ್ದೆ

(iii) $\begin{bmatrix} \text{ḷ} \\ l \\ r \end{bmatrix} \rightarrow t / \text{—} \ \& \ t$

ಉದಾ : ಉಳ್ + ತ್ + ಎ —> ಉತ್ತೆ 'ಉತ್ತೆನು'

ನಿಲ್ + ತ್ + ಎ —> ನಿತ್ತೆ 'ನಿಂತೆನು'

ಬರ್ + ತ್ + ಆನ —> ಬತ್ತಾನ 'ಬರುತ್ತಾನೆ'

(iv) $B \rightarrow P / \text{—} \ \& \ P$

ಉದಾ : ಕೊಡ್ + ಟ್ + ಎ —> ಕೊಟ್ಟೆ 'ಕೊಟ್ಟೆನು'

ನೆಗ್ + ಕ್ + ಎ —> ನೆಕ್ಕೆ 'ನೆಕ್ಕೆನು'

(v) $\begin{bmatrix} l \\ r \end{bmatrix} \rightarrow n / cv \text{—} \ \& \ d$

ಉದಾ : ಕೊಲ್ + ದ್ + ಎ —> ಕೊಂದೆ 'ಕೊಂದೆನು'

ಬರ್ + ದ್ + ಎ —> ಬಂದೆ 'ಬಂದೆನು'

(vi) $\phi \rightarrow y / \begin{bmatrix} i \\ a \end{bmatrix} \text{—} \begin{bmatrix} v \end{bmatrix}$

ಉದಾ : ಕುಡಿ + ಆಕ್ಕ —> ಕುಡಿಯಾಕ್ಕ 'ಕುಡಿಯಲು'

ನಡ + ಅ —> ನಡಯ 'ನಡೆಯಲು'

(vii) $\phi \rightarrow v / \begin{bmatrix} a \\ u \end{bmatrix} — \begin{bmatrix} \bar{v} \end{bmatrix}$

ಅಂಗ + ಆ —> ಅಂಗವಾ 'ಹಾಗಾ'

ಮೆದು + ಅಂಗೆ —> ಮೆದುವಾಂಗೆ 'ಮೆಲ್ಲಗೆ'

(viii)

[ನಾನ್ ನಾವ್ ನೀನ್ ನೀವ್]	/ —	{ ನನ್ ನಮ್ ನಿನ್ ನಿಮ್ }	{ ಚತುರ್ಥೀ }	ವಿಭಕ್ತಿ ಪ್ರತ್ಯಯ
		{ ನನ್ನ ನಮ್ಮ ನಿನ್ನ ನಿಮ್ಮ }	{ ಇತರ }	

ಉದಾ : ನಾನ್ + ಗೆ —> ನಂಗೆ 'ನನಗೆ'

ನನ್ + ಆಲ —> ನನ್ನಾಲ 'ನನ್ನಿಂದ' (ತೃತೀಯ)

(ix) c —> cc/ — & u

ಉದಾ : ನಿಲ್ + ϕ + ಉ —> ನಿಲ್ಲು

ತಿನ್ + ϕ + ಉ —> ತಿನ್ನು

(x) id —> i/ — & $\begin{bmatrix} \phi \\ 1 \end{bmatrix}$

ಉದಾ : ಕತ್ + ಇದ್ + ಲು —> ಕತ್ತಿಲು

ಅಮುಕ್ + ಇದ್ + ϕ —> ಅಮುಕ್ಕಿ

೨.೨ ಬಹಿಸ್ಸಂಧಿ :

(i) ಇಕಾರ ಎಕಾರಾಂತ ಪ್ರಕೃತಿ ಅಥವಾ ಪದಗಳಿಗೆ ಸ್ವರಾದಿಯಲ್ಲುಳ್ಳ ಯಾವುದೇ ಪ್ರಕೃತಿ ಅಥವಾ ಪದ ಪರವಾದರೆ ಯಕಾರ ಆಗಮವಾಗುತ್ತದೆ.

ಉದಾ : ಉಳಿ + ಇಲ್ಲ —> ಉಳಿಯಿಲ್ಲ

ಮನೆ + ಎಲ್ಲಿ —> ಮನೆಯೆಲ್ಲಿ

(ii) $V_1 + V_2 \rightarrow V_2$

ಉದಾ : ತಪ್ಪು + ಆಟ —> ತಪ್ಪಾಟ
ಎಲ + ಅಡಿಗೆ —> ಎಲಡಿಗೆ 'ಎಲೆ ಅಡಿಕೆ'
ಬಾಲೆ + ಅಣ್ಣು —> ಬಾಲಣ್ಣು 'ಬಾಳೆ ಹಣ್ಣು'

(iii) $C_1V + C_1 \rightarrow C_1C_1$

ಉದಾ : ಪನಿ + ನೀರು —> ಪನ್ನೀರು

(iv) $C_1 + C_2 \rightarrow C_1C_1$

ಉದಾ : ತಣ್ + ನೀರು —> ತಣ್ಣೀರು
ಕಣ್ + ನೀರು —> ಕಣ್ಣೀರು

ಇವುಗಳಲ್ಲದೆ ಒಂದು ಅನಿಯತವಾದ ಬಹುಸ್ಸಂಧಿಯನ್ನೂ ಗುರುತಿಸಬಹುದು.

& p —> B/v — & V

ಉದಾ : ಸುಡು + ಕಾಡು —> ಸುಡುಗಾಡು
ಊರು + ಕಾಯಿ —> ಊರುಗಾಯಿ 'ಉಪ್ಪಿನಕಾಯಿ'
ಬೆಟ್ಟು + ಕತ್ತಿ —> ಬೆಟ್ಟುಗತ್ತಿ' ಕಡಿಯುವ ಕತ್ತಿ'

& P —> P/V — & V

ಉದಾ : ಮರ + ಕಾಲು —> ಮರಕಾಲು
ಆನೆ + ಕಾಲು —> ಆನೆಕಾಲು 'ಆನೆಕಾಲು ರೋಗ'

೩. ಆಕೃತಿವಿನಾ ವಿಚಾರ :

೩.೧ ನಾಮಪದಗಳು :

೩.೧.೧. ಸರ್ವನಾಮಗಳು :

ಕನ್ನಡದ ಮಿಕ್ಕ ಪ್ರಭೇದಗಳಲ್ಲಿರುವಂತೆಯೆ ಮಧುರೈ ಕನ್ನಡದಲ್ಲಿಯೂ ಸರ್ವನಾಮಗಳನ್ನು ತ್ರಿವಿಧವಾಗಿ ವಿಭಾಗಿಸಬಹುದು; ಪ್ರಥಮ, ದ್ವಿತೀಯ, ತೃತೀಯ ಪುರುಷಗಳೆಂದು. ಆತ್ಮಾರ್ಥಕ ಸರ್ವನಾಮಗಳು ಬಳಕೆಯಲ್ಲಿಲ್ಲ. ಪ್ರಥಮ, ದ್ವಿತೀಯ ಸರ್ವನಾಮಗಳಲ್ಲಿ ವಚನವ್ಯತ್ಯಾಸ ಮಾತ್ರವಿದೆ, ಲಿಂಗವ್ಯತ್ಯಾಸವಿಲ್ಲ. ತೃತೀಯ ಪುರುಷದಲ್ಲಿ ವಚನ ಲಿಂಗ ವ್ಯತ್ಯಾಸಗಳೊಂದಿಗೆ ದೂರಾಂತರ, ಸಮೀಪಾಂತರ, ಪ್ರಶ್ನಾರ್ಥಕ ರೂಪಗಳೂ ಇವೆ. ತೃತೀಯಪುರುಷ ಏಕವಚನ ಸರ್ವನಾಮಗಳಲ್ಲಿ ತ್ರಿವಿಧ ಲಿಂಗಭೇದವಿದೆ. ಬಹುವಚನದಲ್ಲಿ ಪ್ರಥಮಪುರುಷದಲ್ಲಿ ಅಭಿವ್ಯಾಪಕ ಮತ್ತು ವ್ಯಾವರ್ತಕ ವ್ಯತ್ಯಾಸಗಳಿಲ್ಲ. ತೃತೀಯ ನಪುಂಸಕ ಏಕವಚನ ಅದು, ಇದು, ಎದು

ಮುಂತಾದವುಕ್ಕೆ ಬಹುವಚನ ರೂಪವಿಲ್ಲ. ಈ ಸರ್ವನಾಮುಗಳಿಗೆ 'ಎಲ್ಲ' ಎಂಬ ಪದವನ್ನು ಹಚ್ಚಿ ಇದು ಎಲ್ಲ, ಅದು ಎಲ್ಲ ಎಂಬಂತೆ ಬಳಕೆಯಾಗುತ್ತವೆ.

ಸರ್ವನಾಮು ಸ್ವರೂಪ :

ಪುರುಷ	ಲಿಂಗ		ಏಕ	ಬಹು
ಪ್ರಥಮು	—		ನಾನು	ನಾವು
ದ್ವಿತೀಯ	—		ನೀನು	ನೀವು
ತೃತೀಯ	ಪುಲ್ಲಿಂಗ	ದೂರಾಂತರ	ಅವನು	ಅವರು
	ಸ್ತ್ರೀಲಿಂಗ	,,	ಅವುಲು	
	ನಪುಂಸಕ	,,	ಅದು	—
	ಪು.	ಸಮೀಪಾಂತರ	ಇವುನು	ಇವುರು
	ಸ್ತ್ರೀ.	,,	ಇವುಲು	
	ನಪುಂ.	,,	ಇದು	—
	ಪು.	ಪ್ರಶ್ನಾರ್ಥಕ	ಎವುನು	ಆರು
	ಸ್ತ್ರೀ.	,,	ಎವುಲು	
	ನಪುಂ.	,,	ಎದು	—

೩.೧.೧.೧. ಸರ್ವನಾಮು ಪ್ರತ್ಯಯುಗಳು :

ಪ್ರಥಮುಪುರುಷ :

ವರ್ತಮಾನಕಾಲ		ಭವಿಷತ್‌ಕಾಲ		ಭೂತಕಾಲ	
ಏಕ	ಬಹು	ಏಕ	ಬಹು	ಏಕ	ಬಹು
–ಅನೆ	–ಅರೆ	–ಎ	–ಇರಿ, -ಏರಿ	–ಏ	–ರಿ

ದ್ವಿತೀಯಪುರುಷ :

ವರ್ತಮಾನಕಾಲ		ಭವಿಷತ್‌ಕಾಲ		ಭೂತಕಾಲ	
ಏಕ	ಬಹು	ಏಕ	ಬಹು	ಏಕ	ಬಹು
–ಇಯೆ	–ಅರೆ	–ಎ	–ಇರಿ, -ಏರಿ	–ಎ	–ರಿ

ತೃತೀಯಪುರುಷ :

		ಏಕ	ಬಹು
ವರ್ತಮಾನ :	ಪುಲ್ಲಿಂಗ :	–ಆನ	–ಆರ
	ಸ್ತ್ರೀಲಿಂಗ :	–ಆಲ	
	ನಪುಂಸಕ :	–ಆದ	—

			ಏಕ	ಬಹು
ಭವಿಷತ್ಕಾಲ	: ಪು.	:	–ಆನು	-ಆರು
	ಸ್ತ್ರೀ.	:	–ಆಲು	
	ನಪು.	:	–ಆದು	—
ಭೂತಕಾಲ :	ಪು.	:	–ಅ	–ರು,–ಉರು
	ಸ್ತ್ರೀ.	:	–ಲು,ಉಲು	
	ನ.	:	–ತಿ, ಉತಿ	—

ಉದಾ : ಪ್ರಥಮಪುರುಷ :

ಕೊಡ್ + ಉತ್ + ಅನೆ —> ಕೊಡುತನೆ 'ಕೊಡುತ್ತೇನೆ'
ಕೊಡ್ + ಉತ್ + ಅರೆ —> ಕೊಡುತರೆ 'ಕೊಡುತ್ತೇವೆ'
ಕೊಡ್ + ಉವ್ + ಎ —> ಕೊಡುವೆ
ಕೊಡ್ + ಉವ್ + ಇರಿ —> ಕೊಡುವಿರಿ 'ಕೊಡುವೆವು'
ತೂರ್ + φ + ಏರಿ —> ತೂರೇರಿ 'ತೂರುವೆವು'
ಉಣ್ + ಡ್ + ಎ —> ಉಣ್ಡೆ
ಉಣ್ + ಡ್ + ರಿ —> ಉಣ್ಡ್ರಿ 'ಉಣ್ಡೆವು'

ದ್ವಿತೀಯ ಪುರುಷ :

ನೆಗ್ + ಉತ್ + ಇಯೆ —> ನೆಗುತಿಯೆ 'ನಗುತ್ತೀಯು'
ಕೊಡ್ + ಉತ್ + ಅರೆ —> ಕೊಡುತರೆ 'ಕೊಡುತ್ತಾರೆ'
ಬರ್ + ಉವ್ + ಎ —> ಬರುವೆ
ಬರ್ + ಉವ್ + ಇರಿ —> ಬರುವಿರಿ
ತೂರ್ + φ + ಏರಿ —> ತೂರೇರಿ 'ತೂರುವಿರಿ'
ಬನ್ + ದ್ + ಎ —> ಬಂದೆ
ಬರು + ಉವ್ + ಇರಿ —> ಬರುವಿರಿ

ತೃತೀಯಪುರುಷ :

ವರ್ತಮಾನ : ಬಿಸಿರ್+ಉತ್+ಆನ —> ಬಿಸಿರುತಾನ 'ಎಸೆಯುತ್ತಾನೆ'
ಆಡ್+ಉತ್+ಆಲ —> ಆಡುತಾಲ 'ಆಡುತ್ತಾಳೆ'
ಬತ್+ತ್+ಆರ —> ಬತ್ತಾರ 'ಬರುತ್ತಾರೆ'
ಕಡಿಯ್+ಉತ್+ಆದ —> ಕಡಿಯುತಾದ 'ಕಡಿಯುತ್ತ/ದೆ/ವೆ'

ಭವಿಷತ್ : ನೆಗ್+φ+ಆನು —> ನಗಾನು 'ನಗುವನು'
ಅಲ್+φ+ಆಲು —> ಅಲಾಲು 'ಅಳುವಳು'

ನೆಗ್ + φ + ಆರು —> ನೆಗಾರು 'ನಗುವರು'
ನೆಗ್ + φ + ಆದು —> ನೆಗಾದು 'ನಗುವುದು/ವು'

ಭೂತ : ಉಣ್ + ಡ್ + ಅ —> ಉಣ್ಡ 'ಉಣ್ಡನು'
ಅಮುಕ್ಕ್ + ಇ + ಲು —> ಅಮುಕ್ಕಿಲು 'ಅಮುಕ್ಕಿದಲು
ಉಣ್ + ಡ್ + ಉಲು —> ಉಣ್ಡುಲು 'ಉಣ್ಡಲು'
ಅಡಕ್ಕ್ + ಇ + ರು —> ಅಡಕ್ಕಿರು 'ಅಡಗಿಸಿದರು'
ಉಣ್ + ಡ್ + ಉರು —> ಉಣ್ಡುರು
ಎಕ್ + ಇ + ತಿ —> ಎಕ್ಕಿತಿ 'ಹತ್ತಿತು/ದವು'
ಉಣ್ + ಡ್ + ಉತಿ —> ಉಣ್ಡುತಿ 'ಉಣ್ಡಿತು/ಉಣ್ಡವು'

ನಪುಂಸಕ ಬಹುವಚನ ಸರ್ವನಾಮವಿಲ್ಲದಿರುವಂತೆ ಅವಕ್ಕೆ ಸಂವಾದಿಯಾದ ಸರ್ವನಾಮಪ್ರತ್ಯಯಗಳೂ ಇಲ್ಲ. ಅಂದರೆ ವಾಕ್ಯಮಟ್ಟದಲ್ಲಷ್ಟೆ ವಚನವ್ಯತ್ಯಾಸವನ್ನು ಗುರುತಿಸಲು ಸಾಧ್ಯ.

ಉದಾ : ಅದು ಎಲ್ಲಿ ಉಣ್ಡಿತಿ — 'ಅವು ಉಣ್ಡವು'
ಅದು ಉಣ್ಡಿತಿ 'ಅದು ಉಣ್ಡಿತು'

೩.೧.೨ ನಾಮಪದಗಳ ನಿಷ್ಪತ್ತಿ :

ಕ್ರಿಯಾ, ನಾಮಪ್ರಕೃತಿಗಳಿಗೆ ತದ್ಧಿತಪ್ರತ್ಯಯಗಳನ್ನು ಇಲ್ಲವೆ ಸರ್ವನಾಮ ಪ್ರತ್ಯಯಗಳನ್ನು ಹಚ್ಚಿ ಕೆಲವು ನಾಮಪದಗಳನ್ನು ನಿಷ್ಪನ್ನಗೊಳಿಸಲಾಗುತ್ತದೆ (ಗೌಡ. ೧೯೭೫).

೩.೧.೨.೧. ಕ್ರಿಯಾಪ್ರಕೃತಿಗಳಿಂದ ಸಿದ್ಧಿಸಿದ ನಾಮಪದಗಳು :

(i) -ಅಡ ಪ್ರತ್ಯಯದಿಂದ.
ಉದಾ : ಕಟ್ಟ್ + ಅಡ —> ಕಟ್ಟಡ.

(ii) ಪು, ಪ್ಪು, ಲು, ವು ಪ್ರತ್ಯಯಗಳಿಂದ :
ಕಾಯ್ + ಪು —> ಕಾಪ್ಪು 'ಕಾಯಿ ಬಿಡುವಿಕೆ'
ಅಲೆ + ಪ್ಪು —> ಅಲೆಪ್ಪು 'ಆಹ್ವಾನ'
ಕೊಯ್ + ಲು —> ಕೊಯ್ಲು
ಸಾಯ್ + ವು —> ಸಾವು

(iii) -ಕೆ, -ಇಕೆ, -ಅಣಿಕ್ಕೆ, -ಇಯೆ ಪ್ರತ್ಯಯಗಳಿಂದ :
ಅಲು } + ಕೆ —> ಅಕ್ಕೆ 'ಅಳುವಿಕೆ'
ಉಳು } + ಕೆ —> ಉಕ್ಕೆ 'ಉಕ್ಕೆ'

ನಂಬ್ + ಇಕೆ —> ನಂಬಿಕೆ

ಬಾಸ್ + ಅಣಿಕ್ಕೆ —> ಬಾಸಣಿಕ್ಕೆ 'ಬಾಚಣಿಗೆ'

ಅಡ್ + ಇಯೆ —> ಅಡಿಯೆ 'ಅಡಿಗೆ'

(iv) ಪ್ರಕೃತಿಯ ಹ್ರಸ್ವಸ್ವರ ದೀರ್ಘವಾಗುವುದರಿಂದ :

ಕೆಡು —> ಕೇಡು

ಪಡು —> ಪಾಡು

(v) ಪ್ರಕೃತಿಯ ಅಂತ್ಯ ಘೋಷಧ್ವನಿಮಾ ಅಘೋಷ+ಅ ಆಗುವುದರಿಂದ :

ನೆಡುಗು —> ನೆಡುಕ

ಆಡು —> ಆಟ

ಓಡು —> ಓಟ

೩.೧.೨.೨. ನಾಮಪ್ರಕೃತಿಯಿಂದ ನಿಷ್ಪತ್ತಿಯಾದ ನಾಮಪದಗಳು :

(i) –ಗ ಪ್ರತ್ಯಯದಿಂದ

ಮುಂದ್ + ಗ —> ಮುಂದುಗ 'ಮುಂದಕ್ಕೆ'

(ii) –ತಿ ಪ್ರತ್ಯಯದಿಂದ

ಮೂಕ್ಕು + ತಿ —> ಮೂಕ್ಕುತಿ

(iii) –ಗಾರ (ಪುಲ್ಲಿಂಗ) –ಗಾತಿ (ಸ್ತ್ರೀಲಿಂಗ) –ಸಾಲಿ (ಉಭಯಲಿಂಗ) ಪ್ರತ್ಯಯದಿಂದ :

ಆಟ + ಗಾರ —> ಆಟಗಾರ

ಬುದ್ಧಿ + ಸಾಲಿ —> ಬುದ್ಧಿಸಾಲಿ

(iv) –ತನ ಪ್ರತ್ಯಯದಿಂದ

ಬಿದ್ದರ + ತನ —> ಬಿದ್ದರತನ 'ಜಿಪುಣತನ'

(v) ಸರ್ವನಾಮಪ್ರತ್ಯಯದಿಂದ

ಒಸ + ದು —> ಒಸದು 'ಹೊಸದು'

(vi) ಸಮಾಸೀಕರಣದಿಂದಲೂ ಹೊಸನಾಮಪದಗಳು ನಿಷ್ಪನ್ನಗೊಳ್ಳುತ್ತವೆ.

೧. ಅಂತಃಕೇಂದ್ರೀಯ ಸಮಾಸ (Endo centric).

(a) ವಿಶೇಷಣ + ನಾಮಪದ

ಅಡಿಯೆ + ಮನೆ —> ಅಡಿಯೆ ಮನೆ

ದೊಡ್ಡು + ಅಪ್ಪ —> ದೊಡ್ಡಪ್ಪ

(b) ಕ್ರಿಯಾಪದ + ನಾಮಪದ
ಸುಡು + ಕಾಡು —> ಸುಡುಗಾಡು
ಬೆಟ್ಟು + ಕತ್ತಿ —> ಬೆಟ್ಟುಗತ್ತಿ

(c) ನಾಮಪದ + ಕ್ರಿಯಾಪದ
ಊರು + ಸುತ್ತಿ —> ಊರುಸುತ್ತಿ 'ಊರು ಸುತ್ತುವವನು'

(d) ನಾಮಪದ + ನಾಮಪದ
ದನ + ಕರುವು —> ದನಕರುವು

೨. ಬಹಿಃಕೇಂದ್ರಿಯ ಸಮಾಸ (Exo centric)
ಉದಾಹರಣೆಗಳು ದೊರಕಲಿಲ್ಲ.

೩.೧.೩ ಮಾರುಲಿಪದಗಳು (Echo-words)

ಕನ್ನಡದಲ್ಲಿ ಸಾಧಾರಣವಾಗಿ ಮಾರುಲಿಪದಗಳ ಮೂಲಪದದ ಮೊದಲ ಅಕ್ಷರ ಮಾರುಲಿತ ಪದಗಳಲ್ಲಿ ಗಿ– ಆಗಿ ಮಾರ್ಪಡುತ್ತದೆ.

ಉದಾ : ಹಾಲು ಗೀಲು
ಮರ ಗಿರ
ಹಣ್ಣು ಗಿಣ್ಣು

ಆದರೆ, ಮ. ಕ. ದ ಮಾರುಲಿತ ಪದದ ಆದಿಯಲ್ಲಿ ಬರಿ ಇ– ಮಾತ್ರ ಬರುತ್ತದೆ.

ಉದಾ : ಅಣ್ಣು ಇಣ್ಣು
ಊಟ ಈಟ
ಮರ ಇರ ಇತ್ಯಾದಿ.

ಆಸ್ತಿ ಪಾಸ್ತಿ ಎಂಬ ಒಂದು ಉದಾಹರಣೆ ಶಿ. ಕ. ದಂತೆಯೇ ಇದೆ.

೩.೧.೪. ವಿಭಕ್ತಿಗಳು :

ಪ್ರಥಮಾವಿಭಕ್ತಿಗೆ ಕನ್ನಡದಲ್ಲಿ ಪ್ರತ್ಯಯವಿಲ್ಲ. ಮ. ಕ. ಇದಕ್ಕೆ ಹೊರತಲ್ಲ. ಮಿಕ್ಕ ವಿಭಕ್ತಿಗಳ ಕ್ರಿಯೆ ಕನ್ನಡದಲ್ಲಿಯಂತೆಯೇ ನಡೆದರೂ ಕೆಲವು ವೈಶಿಷ್ಟ್ಯಗಳಿಲ್ಲದಿಲ್ಲ. ತೃತೀಯೆಯ ಪ್ರತ್ಯಯ –ಆಲ ಬಹುಶಃ ತಮಿಳಿನಿಂದ ಬಂದಿರಬೇಕು. ಉದಾ : ತಮಿಳು : ಎನ್ನಾಲ ಮುಡಿಯಾದು 'ನನ್ನಿಂದ ಸಾಧ್ಯವಿಲ್ಲ'. ಚತುರ್ಥಿಯ ಪ್ರತ್ಯಯ ಗಳಾದ –ಇಗೆ, –ಗೆ ಸ್ವರಮಧ್ಯ ಬಂದರೆ –ಇಯೆ, –ಯೆ ಆಗಿ ಬದಲಾಗುತ್ತದೆ. ವ್ಯಂಜನದ ನಂತರ ಬಂದರೆ –ಗೆ ಆಗಿಯೇ ಉಳಿಯುತ್ತದೆ. ನಾಮಪದರೂಪವೇ

ಷಷ್ಠಿಯನ್ನು ಸೂಚಿಸುತ್ತದೆ. ತೃತೀಯೆಯ ಪ್ರತ್ಯಯ ಪಂಚಮಿಗೆ ನಡೆಯುವುದಿಲ್ಲ. ಇಲ್ಲಿ ಬೇರೆಯೇ ಆದ ಪ್ರತ್ಯಯ –ದ್ದು ಸಪ್ತಮಿಯ ನಾಮಪ್ರಕೃತಿಗೆ ಹತ್ತುತ್ತದೆ.

ಉದಾ : ಮನಲಿದ್ದು 'ಮನೆಯಲ್ಲಿಂದ' (ಮನೆಯಿಂದ).

ವಿಭಕ್ತಿ	ಪ್ರತ್ಯಯ		
ಪ್ರಥಮಾ :	φ		
ದ್ವಿತೀಯಾ :	–ಅನ	/	ಪ್ರಥಮ, ದ್ವಿತೀಯ ಪುರುಷ, ಏಕ, ಬಹು ಸರ್ವನಾಮಗಳ ಮುಂದೆ.
	–ನ, –φ		ಮಿಕ್ಕೆಡೆಗೆ (ಇವರೆಡು ಸ್ವಚ್ಛಂದ ಪರಿವರ್ತನೆಯಲ್ಲಿರುತ್ತವೆ).
ತೃತೀಯಾ :	–ಆಲ		
ಚತುರ್ಥೀ :	–ಕ	/	ಅಕಾರಾಂತ ನಪುಂಸಕ ನಾಮಪದಗಳ ಮುಂದೆ.
	–ಗೆ		ವ್ಯಂಜನಾಂತ ಸರ್ವನಾಮ ಪ್ರಕೃತಿಗಳ ಮುಂದೆ.
	–ಇಯೆ		ಶೂನ್ಯ ಪ್ರತ್ಯಯ –ನ್ ಮುಂದೆ.
	–ಯೆ		ಮಿಕ್ಕೆಡೆಗೆ.
ಪಂಚಮೀ :	–ದ್ದು		
ಷಷ್ಠೀ :	–ಉ, –φ		ಸ್ವಚ್ಛಂದ ಪರಿವರ್ತನೆಯಲ್ಲಿ.
ಸಪ್ತಮೀ :	–ತ್ರ	/	ಮಾನವಿಕ ನಾಮಪ್ರಕೃತಿಗಳ ಮುಂದೆ.
	–ಲಿ		ಮಿಕ್ಕೆಡೆಗೆ.
ಸಂಯೋಗ :	–ಕೂಡ		

ಉದಾಹರಣೆ :

ದ್ವಿತೀಯಾ :	ನನ್ + ಅನ	—> ನನ್ನನ 'ನನ್ನನ್ನು'
	ನಮ್ + ಅನ	—> ನಮ್ಮನ 'ನಮ್ಮನ್ನು'
	ಅಲ್ಲು + ನ	—> ಅಲ್ಲುನ 'ಹಲ್ಲನ್ನು'
	ಅವುಲ್ + ನ	—> ಅವುಲ್ನ 'ಅವಳನ್ನು'
	ಬಾಡು + φ	—> ಬಾಡು 'ಬಾಡನ್ನು'
ತೃತೀಯಾ :	ನಿನ್ + ಆಲ	—> ನಿನ್ನಾಲ 'ನಿನ್ನಿಂದ'
	ಮರನ್ + ಆಲ	—> ಮರನಾಲ 'ಮರದಿಂದ'
ಚತುರ್ಥೀ :	ಮರ + ಕ್ + ಕ	—> ಮರಕ್ಕ 'ಮರಕ್ಕೆ'
	ನನ್ + ಗೆ	—> ನಂಗೆ 'ನನಗೆ'
	ಅಕ್ಕ + ನ್ + ಇಯೆ	—> ಅಕ್ಕನಿಯೆ 'ಅಕ್ಕನಿಗೆ'
	ಕಿವಿ + ಯೆ	—> ಕಿವಿಯೆ 'ಕಿವಿಗೆ'
ಪಂಚಮೀ :	ಮನ + ಲಿ + ದ್ದು	—> ಮನಲಿದ್ದು 'ಮನೆಯಿಂದ'
	ಅಮ್ಮ + ದ್ರ + ದ್ದು	—> ಅಮ್ಮದ್ರದ್ದು 'ಅಮ್ಮನಿಂದ'
ಷಷ್ಠೀ :	ಮಗ + ನ್ + ಉ	—> ಮಗನು 'ಮಗನ'
	ದನ + φ	—> ದನ 'ದನದ'
ಸಪ್ತಮಿ :	ಅಮ್ಮ + ತ್ರ	—> ಅಮ್ಮತ್ರ 'ಅಮ್ಮನ ಹತ್ತಿರ'
	ಮರ + ದ್ + ಲಿ	—> ಮರದ್ಲಿ 'ಮರದಲ್ಲಿ'
	ಅತ್ತು + ಲಿ	—> ಅತ್ತುಲಿ 'ಹತ್ತರಲ್ಲಿ'
ಸಂಯೋಗ :	ಅಮ್ಮ + ಕೂಡ	—> ಅಮ್ಮ ಕೂಡ 'ಅಮ್ಮನ ಕೂಡ'
	ತಂಗಿ + ಕೂಡ	—> ತಂಗಿ ಕೂಡ 'ತಂಗಿಯ ಕೂಡ'

೩.೧.೫ ಲಿಂಗ-ವಚನ ಪ್ರತ್ಯಯಗಳು :

ನಾಮಪ್ರತ್ಯಯದಲ್ಲಿ ಲಿಂಗ ಮತ್ತು ವಚನಗಳೆರಡೂ ಏಕರೂಪದಲ್ಲಿಯೇ ನಿರ್ದೇಶಿತವಾಗುತ್ತವೆ. ಪ್ರಥಮಾ ಮತ್ತು ದ್ವಿತೀಯಪುರುಷ ಸರ್ವನಾಮಗಳಲ್ಲಿ ಲಿಂಗ ವ್ಯತ್ಯಾಸವಿಲ್ಲದೆ ವಚನವ್ಯತ್ಯಾಸ ಮಾತ್ರವಿರುವುದನ್ನು ಈ ಹಿಂದೆಯೇ ನೋಡಿದೆವು. ಇಲ್ಲಿ ತೃತೀಯಪುರುಷ ಸರ್ವನಾಮಗಳಲ್ಲಿ ಹಾಗೂ ಮತ್ತಿತರ ನಾಮಪದಗಳಲ್ಲಿ ಬರುವ ಲಿಂಗ, ವಚನ ಪ್ರತ್ಯಯಗಳನ್ನು ಕೊಡಲಾಗಿದೆ.

(i) ಪುಲ್ಲಿಂಗ ಏಕವಚನ ಪ್ರತ್ಯಯಗಳು : –ನ್–, –ಅ.

ಉದಾ : ಅವ್ರು–ನ್–ಉ—> ಅವ್ರನು, ಕುರುಡ್–ಅ —> ಕುರುಡ,
ಕೊರ-ವ್-ಅ —> ಕೊರವ

(ii) ಸ್ತ್ರೀಲಿಂಗ ಏಕವಚನದ ಪ್ರತ್ಯಯಗಳು : –ಉಲು, –ತ್ತಿ, –ಚ್ಚಿ, –ಇ.

ಉದಾ : ಮಗ್–ಉಲು —> ಮಗುಲು, ಅವು–ಲು —>ಅವುಲು,
ಕೊರ–ತ್ತಿ —> ಕೊರತ್ತಿ, ಕಳ್ಳ–ಚ್ಚಿ —> ಕಳ್ಳಚ್ಚಿ 'ಕಳ್ಳಿ'.

(iii) ಉಭಯಲಿಂಗ ಬಹುವಚನ : –ಗಳು, –ಕುಲು, –ಉರು, –ಅರು.
ಮಂತ್ರಿ–ಗಳು, ಮಕ್–ಕುಲು, ಒಬ್ಬ್–ಉರು, ಕೊರ–ವ್–ಅರು.

(iv) ನಪುಂಸಕ ಏಕವಚನ : –ದ್.

ಉದಾ : ಅ–ದ್–ಉ, ಇ–ದ್–ಉ ಇತ್ಯಾದಿ.

(v) ನಪುಂಸಕ ಬಹುವಚನ : –ಗಳು.

ಉದಾ : ದನಗಳು.

ಇವಲ್ಲದೆ ಗೌರವಸೂಚಕ ಬಹುವಚನವಾಗಿ –ರು, –ಆರು ಮತ್ತು –ಗಳು ಪ್ರತ್ಯಯಗಳು ಬಳಕೆಯಲ್ಲಿವೆ,

ಉದಾ : ಅವುರು, ಅಣ್ಣಾರು, ಅಪ್ಪನಾರು, ಮಂತ್ರಿಗಳು ಇತ್ಯಾದಿ.

ಶಿ. ಕ. ದ ಗೌರವಸೂಚಕ ಏಕವಚನ ಸರ್ವನಾಮಗಳಾದ ಆತನು, ಈಕೆ ಮುಂತಾದವು ಮ. ಕ. ದಲ್ಲಿ ಇಲ್ಲ. ಶಿ. ಕ. ದಲ್ಲಿ ಸಂಬಂಧವಾಚಿಗಳಿಗೆ ಹತ್ತುವ ಬಹುವಚನಪ್ರತ್ಯಯ –ಅಂದಿರು ಮ. ಕ. ದಲ್ಲಿ ಬಳಕೆಯಲ್ಲಿಲ್ಲ. ಇದರ ಬದಲಾಗಿ –ಗಳು ಪ್ರತ್ಯಯವೇ ಬಳಕೆಯಾಗುತ್ತಿದೆ.

ಉದಾ : ಅಕ್ಕನಾರುಗಳು, ಅಣ್ಣಾರುಗಳು, ತಂಗಿಗಳು[*] ಇತ್ಯಾದಿ.

೩.೧.೬ ವಿಶೇಷಣಗಳು :

"ನಾಮಪದಗಳಲ್ಲಿ ಉಕ್ತವಾಗಿರುವ ವಸ್ತು ಅಥವಾ ವ್ಯಕ್ತಿಯ ಗುಣ, ರೂಪ, ಆಕಾರ, ಪರಿಮಾಣ ಇತ್ಯಾದಿಗಳ ತಿಳಿವುಮಾಡಿಕೊಡುವ ಕಾರ್ಯವನ್ನು ವಿಶೇಷಣಗಳು ನಿರ್ವಹಿಸುತ್ತವೆ. ಎರಡು ನಾಮಪದಗಳು ಸಮಾಸಗೊಂಡಾಗ ಮೊದಲ ನಾಮಪದ ವಿಶೇಷಣವಾಗಿ ಎರಡನೆಯದು ವಿಶೇಷ್ಯವಾಗಿರುವುದು" (ಗೌಡ, ೧೯೭೫). ಮ. ಕ. ದಲ್ಲಿ ವಿಶೇಷಣಗಳು ಶಿ. ಕ. ದಲ್ಲಿಯಂತೆಯೇ ಇವೆ. ಕೆಲವನ್ನು ತಮಿಳಿನಿಂದ ಎರವಲು ಪಡೆದಿರುವುದೂ ಕಂಡುಬರುತ್ತದೆ. ಪರಿಮಾಣ ವಿಶೇಷಣಗಳಾದ ಅಪ್ಪು,

ಇಷ್ಟು ಮುಂತಾದವು ಬಳಕೆಯಲ್ಲಿಲ್ಲ. ಅವುಗಳ ಬದಲು 'ಅವ್ವಲವು', 'ಇವ್ವಲವು' ಮುಂತಾದ ತಮಿಳು ರೂಪಗಳು ಬಳಕೆಯಲ್ಲಿವೆ. ಗುಣವಿಶೇಷಣ 'ಸಣ್ಣ' ಎಂಬುದಕ್ಕೆ ಸಿಣ್ಣು ಎಂಬ ರೂಪ ಬಳಕೆಯಲ್ಲಿದೆ. ನಿರ್ದೇಶಕವಿಶೇಷಣಗಳಲ್ಲಿ ಶಿ. ಕ. ಆ ಕಡೆ, ಈ ಕಡೆ, ಯಾವ ಕಡೆ ಎಂಬ ರೂಪಗಳ ಸ್ಥಾನದಲ್ಲಿ ಮು.ಕ ದಲ್ಲಿ ನಿರ್ದೇಶಕ ಅವ್ಯಯದ ನಂತರ ತಮಿಳಿನಂತೆ 'ಪಕ್ಕ' ಎಂಬ ರೂಪವನ್ನು ಸೇರಿಸಿ ಆ ಪಕ್ಕ, ಈ ಪಕ್ಕ, ಏ ಪಕ್ಕ (ಈ ತೆರನಾದ ರಚನೆ ತಮಿಳಿನಲ್ಲಿಲ್ಲ. ತಮಿಳು : ಅಂದ ಪಕ್ಕಂ, ಇಂದ ಪಕ್ಕಂ) ಎಂದು ಬಳಕೆಯಾಗುತ್ತದೆ.

೩.೧.೭ ಸಂಖ್ಯಾವಾಚಕ :

ಸಂಖ್ಯಾವಾಚಕಗಳಲ್ಲಿ ಎರಡು, ಎಂಟು, ಎಪ್ಪತ್ತು, ತೊಂಬತ್ತು, ಲಕ್ಷ, ಕೋಟಿಗಳಿಗೆ ಸ್ವಲ್ಪ ವ್ಯತ್ಯಾಸವಾದ ರೂಪಗಳು ಮು.ಕ.ದಲ್ಲಿ ಬಳಕೆಯಲ್ಲಿವೆ, ಮಿಕ್ಕವೆಲ್ಲ ಒಳನಾಡ ಕನ್ನಡದಂತೆಯೇ ಇವೆ. ಎರಡು ಎಂಬುದಕ್ಕೆ 'ಅಡ್ಡು' ಎಂದಿದೆ. ಇದು ಎರಡು > ಎರ್‍ಡು > ಎಡ್ಡು > ಅಡ್ಡು ಎಂದಾಗಿರಬಹುದೇ ?[೭] ಎಪ್ಪತ್ತು-ಎಳುವತ್ತು, ತೊಂಬತ್ತು–ತೊನ್ನೂರು, ಲಕ್ಷ–ಲಚ್ಚ, ಕೋಟಿ–ಕೋಡಿ (ಸ್ವರ ಮಧ್ಯೆ ಟ > ಡ ಆಗುತ್ತದೆ). ಈ ಬದಲಾವಣೆಗಳಿಗೆ ತಮಿಳಿನ ಪ್ರಭಾವವಿರಬಹುದು.[೮] ಮು.ಕ.ದಲ್ಲಿ ಕ್ರಮಾಂಕಪ್ರತ್ಯಯ – ಆವದು. ಇದು ತಮಿಳಿನಿಂದ ಎರವಲು ಪಡೆದ ರೂಪ. ಶಿ.ಕ.ದಲ್ಲಿ –ಅನೆಯ ಎಂಬ ರೂಪ ಬಳಕೆಯಲ್ಲಿದೆ.

೩.೨ ಕ್ರಿಯಾಪದಗಳು :

ಕಾಲಪ್ರತ್ಯಯಗಳನ್ನು ಸ್ವೀಕರಿಸಬಲ್ಲವುಗಳು ಕ್ರಿಯಾಪ್ರಕೃತಿಗಳು. ಕ್ರಿಯಾ ಪ್ರಕೃತಿಗಳಿಗೆ ಪ್ರೇರಣಾರ್ಥಕ, ಭಾವರೂಪ ಪ್ರತ್ಯಯ, ಸಂಭಾವನ, ಕಾಲ, ನಿಷೇಧ, ನಾಮವಿಶೇಷಣ, ಕ್ರಿಯಾವಿಶೇಷಣ –ಹೀಗೆ ಪ್ರತ್ಯಯಗಳು ಸೇರಿ ವಿವಿಧ ರೂಪಗಳು ನಿಷ್ಪನ್ನವಾಗುತ್ತವೆ.

೩.೨.೧ ಪ್ರೇರಣಾರ್ಥಕ :

ಒಳನಾಡ ಕನ್ನಡದಂತೆ ಕ್ರಿಯಾಪ್ರಕೃತಿಗೆ ನೇರವಾಗಿ ಪ್ರತ್ಯಯ ಹತ್ತಿ ಪ್ರೇರಣಾ ರ್ಥಕರೂಪ ನಿಷ್ಪನ್ನವಾಗುವುದಲ್ಲದೆ ಭಾವರೂಪದ ನಂತರ ಮಾಸು, ಇಕ್ಕು, ಮುಂತಾದ ರೂಪಗಳು ಬಂದು ಮು.ಕ.ದಲ್ಲಿ ಪ್ರೇರಣಾರ್ಥ ಸೂಚಿತವಾಗುತ್ತದೆ. ಇಕ್ಕು, ಮಾಸು ಪ್ರತ್ಯಯಗಳಲ್ಲ, ಸ್ವತಂತ್ರ ಪದಗಳು. ಮಾಸು ಎಂಬುದು ಬಹುಶಃ 'ಮಾಡಿಸು' ರೂಪದ ಅಪಭ್ರಂಶವಿರಬೇಕು.

ಉದಾ : ಬಲಯಾಕ್ಕ ಮಾಸು 'ಬೆಳಯಿಸು'
ಅಲಾಕ್ಕ ಇಕ್ಕು 'ಅಳಿಸು'

ಮ.ಕ. ದಲ್ಲಿ ಪ್ರೇರಣಾರ್ಥಕ ಪ್ರತ್ಯಯ -ಸ್.

ಉದಾ : ಉಣು-ಸ್- ಇದ್-ಎ → ಉಣುಸಿದೆ 'ಉಣಿಸಿದೆ'
ಬಲ-ಸ್-ಇದ್-ಎ → ಬಲಸಿದೆ 'ಬೆಳೆಯಿಸಿದೆ'

೩.೨.೨ ಕ್ರಿಯಾರ್ಥಕಾವ್ಯಯಗಳು (Aorist) :

ಕ್ರಿಯಾರ್ಥಕಾವ್ಯಯಗಳು ಸಾ-, ಬೇ-, ಪ್ರಕೃತಿಗಳಿಗೆ -ಕ್ಕು ಪ್ರತ್ಯಯ ಹತ್ತಿ ನಿಷ್ಪನ್ನವಾಗುತ್ತವೆ. ಶಿ. ಕ. ದಲ್ಲಿ ಪ್ರತ್ಯಯ -ಕು ಅಷ್ಟೇ (ವಿವರಕ್ಕೆ ನೋಡಿ : Caldwell, 1974; P. 513). ಮ. ಕ. ಅಘೋಷತನವನ್ನು ಉಳಿಸಿಕೊಳ್ಳಲು ದ್ವಿತ್ವವನ್ನು ಹೊಂದಿದೆ. ಉದಾ : ಸಾಕ್ಕು, ಬೇಕ್ಕು.

೩.೨.೩ ಭಾವರೂಪ :

ಭಾವರೂಪಪ್ರತ್ಯಯಕ್ಕೆ ಮ. ಕ. ದಲ್ಲಿ ಎರಡು ರೂಪಗಳಿವೆ. -ಆಕ್ಕ ಮತ್ತು φ. -ಆಕ್ಕ ಪೂರ್ಣಕ್ರಿಯಾಪದದ ಪೂರ್ವದಲ್ಲಿಯೂ φ ಮಿಕ್ಕೆಡೆಯೂ ಬರುತ್ತದೆ.

ಉದಾ : ನಡಯಾಕ್ಕ ಬಂದುರು
ನಡಯ್ಬೇಡ
ನಡಯ್ಬೇಕು
ಕೊಡುಬೇಡ

೩.೨.೪ ಕಾಲಪ್ರತ್ಯಯಗಳು :

ಕ್ರಿಯೆ ಸಂಭವಿಸುವ ಕಾಲವನ್ನು ಸೂಚಿಸಲು ಕ್ರಿಯಾಪ್ರಕೃತಿಗೆ ಸೇರುವ ಪ್ರತ್ಯಯವೇ ಕಾಲಪ್ರತ್ಯಯ. ಇವು : ಭೂತ; ಭವಿಷತ್, ವರ್ತಮಾನಗಳೆಂದು ಮೂರು ವಿಧವಾಗಿವೆ.

(i) ಭೂತಕಾಲ :

ಮಧುರೈ ಕನ್ನಡದಲ್ಲಿ ಭೂತಕಾಲಪ್ರತ್ಯಯಕ್ಕೆ ಏಳು ರೂಪಗಳಿವೆ. -ಟ್-, -ಡ್-, -ಕ್-, -ಇದ್-, -ದ್-, -ನ್ದ್-, ಮತ್ತು -ತ್-.

ಟ್	/	ಡಕಾರಾಂತ ಏಕಾಕ್ಷರ, ಹ್ರಸ್ವಸ್ವರ ಪ್ರಕೃತಿಗಳ ಮುಂದೆ.
ಡ್		ಣಕಾರಾಂತ ಪ್ರಕೃತಿಗಳ ಮುಂದೆ.
ಕ್		ಗ ಕಾರಾಂತ ಪ್ರಕೃತಿಗಳ ಮುಂದೆ.
ಇದ್		ಪ್ರಥಮಾಕ್ಷರದಲ್ಲಿ ದೀರ್ಘಸ್ವರವಿರುವ ವ್ಯಂಜನಾಂತ. ದ್ವಿತ್ವವ್ಯಂಜನಾಂತ, ವ್ಯಂಜನಾಂತ ದ್ವ್ಯಕ್ಷರ ಪ್ರಕೃತಿಗಳ ಮುಂದೆ.

ದ್ / { $C\breve{V}$ ಯ್ ; (C) $\bar{V}$ {ಗ್, ಲ್} ; V ರ್ ; CVCV } ರೂಪದ ಕ್ರಿಯಾಪ್ರಕೃತಿ.

(C)	$C\breve{V}$	ಯ್
	$\bar{V}$	ಗ್, ಲ್
	V	ರ್
	CVCV	

ನ್ದ್ / { {$\bar{V}C\bar{V}$, $C\breve{V}$} ರ್ ; CV, $C\bar{V}$ ಲ್ } ರೂಪದ ಕ್ರಿಯಾಪ್ರಕೃತಿ.

ತ್ / { V ಳ್ ; CV ಲ್ } ರೂಪದ ಕ್ರಿಯಾಪ್ರಕೃತಿ.

ಉದಾಹರಣೆ :

೧. ಕೊಡ್ + ಟ್ + ಎ —> ಕೊಟ್ಟೆ
೨. ಉಣ್ + ಡ್ + ಎ —> ಉಣ್ಡೆ
೩. ನೆಗ್ + ಕ್ + ಎ —> ನೆಕ್ಕೆ
೪. ಮೋದ್ + ಇದ್ + ಎ —> ಮೋದಿದೆ (ತಗುಲಿದೆ)
೫. ಪಿರಿಚ್ಚ್ + ಇದ್ + ಎ —> ಪಿರಿಚ್ಚಿದೆ (ವಿಭಾಗಿಸಿದೆ)
೬. ಕೆಡುಸ್ + ಇದ್ + ಎ —> ಕೆಡುಸಿದೆ
೭. ಕೊಯ್ + ದ್ + ಎ —> ಕೊಯ್ದೆ
೮. ಓಗ್ + ದ್ + ಎ —> ಓದೆ (ಹೋದೆನು)
೯. ಬೀಲ್ + ದ್ + ಎ —> ಬಿದ್ದೆ

೧೦. ಏಲ್ + ದ್ + ಎ —> ಎದ್ದೆ
೧೧. ಇರ್ + ದ್ + ಎ —> ಇದ್ದೆ
೧೨. ಬಲ + ದ್ + ಎ —> ಬಲದೆ (ಬೆಳದೆ)
೧೩. ಏಮಾರ್ + ನ್ದ್ + ಎ —> ಏಮಾನ್ದೆ
೧೪. ಬರ್ + ನ್ದ್ + ಎ —> ಬನ್ದೆ
೧೫. ಕೊಲ್ + ನ್ದ್ + ಎ —>ಕೊನ್ದೆ
೧೬. ಮಿೂ + ನ್ದ್ + ಎ —> ಮಿೂನ್ದೆ (ಸ್ನಾನ ಮಾಡಿದೆ)
೧೭. ಉಳ್ + ತ್ + ಎ—> ಉತ್ತೆ
೧೮. ನಿಲ್ + ತ್ + ಎ—> ನಿತ್ತೆ (ನಿಂತೆ)

(ii) ಭವಿಷತ್ ಕಾಲ :

ಭವಿಷತ್‌ಕಾಲಪ್ರತ್ಯಯಕ್ಕೆ ಎರಡು ರೂಪಗಳಿವೆ. ಅವು : -ಉವ್-, ಮತ್ತು -φ-. -ಉವ್- ನಿರ್ದಿಷ್ಟ ಭವಿಷತ್ತನ್ನು, -φ- ಅನಿರ್ದಿಷ್ಟ ಭವಿಷತ್ತನ್ನೂ ಸೂಚಿಸುತ್ತದೆ.

ಉದಾ : ಕೊಡ್-ಉವ್-ಎ 'ಕೊಡುವೆನು'
ಕೊಡ್-φ- ಅಲು 'ಕೊಡುವಲು'

(iii) ವರ್ತಮಾನಕಾಲ :

ವರ್ತಮಾನಕಾಲಪ್ರತ್ಯಯಕ್ಕೆ ಎರಡು ರೂಪಗಳಿವೆ. -ಉತ್-, ಮತ್ತು -ತ್-. -ತ್- ರಕಾರ ಯಕಾರಾಂತ ಪ್ರಕೃತಿಗಳ ಮುಂದೆಯೂ -ಉತ್- ಮಿಕ್ಕೆಡೆಯೂ ಬರುತ್ತವೆ.

ಉದಾ : ತೆಯ್-ತ್-ಆನ — > ತೆಯ್ತಾನ 'ತೆರೆಯುತ್ತಾನೆ'
ಬರ್-ತ್-ಆನ — > ಬತ್ತಾನ[೧೦] 'ಬರುತ್ತಾನೆ'.

೩.೨.೫. ಸಂಭಾವನಾಪ್ರತ್ಯಯ :

-ಅನೆ- ಎಂಬುದು ಪ್ರತ್ಯಯ. ಶಿ.ಕ.ದಂತೆಯೇ ಭೂತ ಕ್ರಿಯಾಪ್ರಕೃತಿಗೆ ಸಂಭಾವನಾಪ್ರತ್ಯಯ ಹತ್ತುತ್ತದೆ.

ಉದಾ : ಬನ್ -ದ್- ಅನೆ —> ಬಂದನೆ 'ಬಂದರೆ'
ನೋಡ್ -ಇದ್- ಅನೆ — > ನೋಡಿದನೆ 'ನೋಡಿದರೆ'

೩.೨.೬. ಆಜ್ಞಾರ್ಥಕ :

ಸಾಧಾರಣವಾಗಿ ಆಜ್ಞಾರ್ಥಕ ಕ್ರಿಯಾಮೂಲದ ಮೂಲಕವೇ ವ್ಯಕ್ತವಾಗುತ್ತದೆ. ಆದರೆ ಬರ್, ಓಗ್ ಮುಂತಾದವು ಬಾ, ಓ ಎಂದಾಗುತ್ತವೆ.

ದ್ವಿತೀಯಪುರುಷ ಗೌರವಾರ್ಥ ಬಹುವಚನದಲ್ಲಿ –ಣ್ಡ ಎಂಬ ಪ್ರತ್ಯಯ ಬರುತ್ತದೆ.

ಉದಾ : ಬರಣ್ಡ 'ಬನ್ನಿ'
ಓವುಣ್ಡ 'ಹೋಗಿ'

೩.೨.೭. **ನಿಷೇಧಾರ್ಥ :**

ನಿಷೇಧಾರ್ಥದ ಇಲ್ಲ, ಅಲ್ಲಗಳಲ್ಲಿ ಇಲ್ಲ ಎಂಬುದು ಪೂರ್ಣಕ್ರಿಯಾಪದದ ತೃತೀಯಪುರುಷ ನಪುಂಸಕ ಏಕವಚನದ ನಂತರವೇ ಬರುತ್ತದೆ.

ಉದಾ : ಬರ್ – ಆದು – ಇಲ್ಲ → ಬರಾದಿಲ್ಲ.
ಬರ್ + ನ್ದ್ – ಉದು – ಇಲ್ಲ → ಬನ್ದುದಿಲ್ಲ.

ಅಲ್ಲ ಎಂಬುದು ಕ್ರಿಯಾಮೂಲಕ್ಕೆ ಹತ್ತುತ್ತದೆ. ಇದನ್ನು ಆಕೃತಿಮಾ ವಿಶ್ಲೇಷಣೆಗೊಳಪಡಿಸಬಹುದಾದರೂ ಇದರ ಕ್ರಿಯೆಯ ಕಾಲವನ್ನು ವಾಕ್ಯ ವಿಶ್ಲೇಷಣೆಯಲ್ಲಷ್ಟೇ ಗುರುತಿಸಲು ಸಾಧ್ಯ.

ಉದಾ : ನಾನು ನಿನ್ನೆ ಬರಲ್ಲ
ನಾನು ಇಂದು ಬರಲ್ಲ
ನಾನು ನಾಲಿಯೆ ಬರಲ್ಲ

ನಿಷೇಧಪ್ರತ್ಯಯಗಳಾದ –ಅಲ್ ಮತ್ತು –ಉದ್ ರೂಪಗಳಲ್ಲಿ –ಅಲ್ ಯಾವಾಗಲೂ ಪ್ರಕಾರವಾಚಕ (manner suffix) ಪ್ರತ್ಯಯದ ಹಿಂದೆಯೂ –ಉದ್ ಮಿಕ್ಕೆಡೆಯೂ ಬರುತ್ತವೆ.

ಉದಾ : ಬರಲಾಂಗೆ 'ಬರದೆ'
ಓಡಲಾಂಗೆ 'ಓಡದೆ'
ಬರುದು ಆಲು 'ಬರದ ಆಳು'
ಅಳುದು ಮೊಗು 'ಅಳದ ಮಗು'

೩.೨.೮. **ನಾಮವಿಶೇಷಣಪ್ರತ್ಯಯ :**

ನಾಮವಿಶೇಷಣಪ್ರತ್ಯಯವು ಭೂತ, ಭವಿಷತ್ ಮತ್ತು ನಿಷೇಧ ಕ್ರಿಯಾ ಪ್ರಕೃತಿಗಳಿಗೆ ಸೇರುತ್ತದೆ. ಈ ಪ್ರತ್ಯಯಕ್ಕೆ ಎರಡು ರೂಪಗಳಿವೆ : –ಅ– ಮತ್ತು –ಉ–.

–ಉ–, ನಿಷೇದಕ್ರಿಯಾರೂಪದ ನಂತರವೂ
–ಅ–, ಮಿಕ್ಕೆಡೆಯೂ ಬರುತ್ತವೆ.

ಉದಾ : ಅಳುದ್-ಉ ಮೊಗು —> ಅಳುದು ಮೊಗು 'ಅಳದವುಗು'.
ಬರ್-ನ್ದ್-ಅ ಎಯ್ದ —> ಬನ್ದ ಎಯ್ದ 'ಬಂದ ಹುಡುಗ'.

೩.೨.೯ ಕ್ರಿಯಾವಿಶೇಷಣ ಪ್ರತ್ಯಯ :

ಕ್ರಿಯಾವಿಶೇಷಣ ಪ್ರತ್ಯಯಗಳು ಭೂತಕ್ರಿಯಾ ಪ್ರಕೃತಿಗಳಿಗೆ ಸೇರುತ್ತವೆ.

$\begin{bmatrix} \varphi \\ u \end{bmatrix}$ / [–ಇದ್–ಭೂತಕಾಲ ಪ್ರತ್ಯಯದ ನಂತರ.
ಮಿಕ್ಕೆಡೆಯಲ್ಲಿ.

ಉದಾ : ಅಮುಕ್–ಇದ್– —> ಅಮುಕ್ಕಿ.
ಬರ್–ನ್ದ್–ಉ —> ಬಂದು,

೩.೩ ವಿಶೇಷ ವಿಚಾರ :

ಸ್ವಲ್ಪ ಎಂಬ ಅರ್ಥದಲ್ಲಿ 'ದವಾಟ್ಟು' ಎಂಬ ಶಬ್ದ ಬಳಕೆಯಲ್ಲಿದೆ. ಇದಕ್ಕೆ ಸಮನಾಗಿ ಒಳನಾಡ ಕನ್ನಡದಲ್ಲಿಯೂ 'ರವಷ್ಟು' 'ರವೋಟು' (<ರವೆಯುಷ್ಟು) ಎಂಬ ಪದಗಳು ಬಳಕೆಯಲ್ಲಿವೆ. ಸಂಭಾಷಣಾ ಕಾಲದಲ್ಲಿ ಒಬ್ಬರು ಇನ್ನೊಬ್ಬರನ್ನು ಏನಾದರೂ ಕೇಳುವಾಗ 'ಇದೊ ಅಷ್ಟು ಕೊಡು' ಎಂದು ಕೈಯಿಂದ ಒಂದು ಅಳತೆಯನ್ನು ತೋರಿಸಿ ಕೇಳುವುದು ವಾಡಿಕೆ. ಇಂಥ ಪ್ರಯೋಗಗಳಲ್ಲಿ 'ಇದೊ' ಮತ್ತು 'ಅಷ್ಟು' ಎಂಬ ಎರಡೂ ಪದಗಳು ಸೇರಿ ದೊವಾಷ್ಟು>ದವಾಷ್ಟು>ದವಾಟ್ಟು ಎಂದು ಆಗಿರಬೇಕು ಎಂದು ಊಹಿಸಬಹುದಾದರೂ 'ಅಷ್ಟು' ಎಂಬ ಪದ ಮ.ಕದಲ್ಲಿ ಇಲ್ಲ. 'ರವೋಟು' ಪದವೇ 'ದವಾಟ್ಟು' ಆಗಿರಬೇಕೆನ್ನುವುದಕ್ಕೆ ರ>ದ ಬದಲಾವಣೆಗೆ ಆಧಾರಗಳಿಲ್ಲ. ಮತ್ತೊಂದು ಊಹೆ: ತಮಿಳಿನ ಪದ 'ದಮ್ಮಾ ತೂಂಡು' (ಇದೇ ಅರ್ಥದಲ್ಲಿ) ಮತ್ತು ಕನ್ನಡದ 'ರವೋಟು' ಎರಡರ ಹೈಬ್ರಿಡ್ ರೂಪವಿರಬಹುದು.

ಸಂಬಂಧವಾಚಿ ಪದಗಳಲ್ಲಿ ಯಾವುದೇ ಪುಲ್ಲಿಂಗರೂಪಕ್ಕೆ ಸಾಧಾರಣವಾಗಿ ಸ್ತ್ರೀಲಿಂಗರೂಪವೂ ಇರುತ್ತದೆ. ಉದಾ : ಅಜ್ಜ–ಅಜ್ಜಿ. ಆದರೆ ತಾತ ಎಂಬ ಪುಲ್ಲಿಂಗರೂಪಕ್ಕೆ ಸ್ತ್ರೀಲಿಂಗರೂಪ ಯಾವುದೇ ದ್ರಾವಿಡಭಾಷೆಗಳಲ್ಲಿ ಇದ್ದಂತೆ ಕಾಣುವುದಿಲ್ಲ, ಮಧುರೈ ಕನ್ನಡದ ಹೊರತು. ಮ. ಕ. ದಲ್ಲಿ 'ತಾತ್ತ' ಪದದೊಡನೆ 'ತಾತ್ತಿ' ರೂಪವೂ ಬಳಕೆಯಲ್ಲಿದೆ. ಇದು ಹಳಗನ್ನಡದಲ್ಲಾಗಲೀ ಮೂಲದ್ರಾವಿಡದಲ್ಲಾಗಲೀ ಇದ್ದಂತೆ ಇಲ್ಲ. ಬಹುಶಃ ಸಾದೃಶ್ಯ ಸೃಷ್ಟಿರೂಪವೇ ಇರಬೇಕು. ಆದರೂ ಇದೊಂದು ಗಮನಾರ್ಹ ವೈಶಿಷ್ಟ್ಯವೇ ಸರಿ.

ಶಿ. ಕ. ದಲ್ಲಿ ‘ತಿರುಗಿ’ ಮತ್ತು ‘ಮತ್ತೆ’ ಎಂಬ ಎರಡು ಪದಗಳ ಮಧ್ಯ ಅರ್ಥ ವ್ಯತ್ಯಾಸವಿದೆ.

ಉದಾ : ತಿರುಗಿ ಹೋಗು ‘go back’
ಮತ್ತೆ ಹೋಗು ‘go again’

ಆದರೆ ಮು. ಕ. ದಲ್ಲಿ ಈ ಅರ್ಥವ್ಯತ್ಯಾಸವಿಲ್ಲ. ಮತ್ತೆ, ಪದ ಬಳಕೆಯಲ್ಲಿಲ್ಲ.

ಉದಾ : ತಿರಿಸಿ ಓ ‘go again’

ಆಚ್ಚಿ ಎಂಬ ತುಣುಕನ್ನು ಎರಡು ಅರ್ಥದಲ್ಲಿ ಬಳಸಲಾಗುತ್ತದೆ. ೧. ಆದರೂ ೨. ಆಯಿತು.

ಉದಾ : ಅವ್ನಾಚ್ಚಿ ಬಂದನಾ ? ‘ಅವನಾದರೂ ಬಂದನೇ’
ನೀನಾಚ್ಚಿ ನಾನಾಚ್ಚಿ ! ‘ನೀನಾಯ್ತು, ನಾನಾಯ್ತು’

‘ಬರುವ ಹೊತ್ತಿನಲ್ಲಿ’ ಎಂಬ ರಚನೆಯಲ್ಲಿ ಶಿ. ಕ. ದಲ್ಲಿ ಕ್ರಿಯಾಪ್ರಕೃತಿಗೆ ಹತ್ತುವ ಪ್ರತ್ಯಯ ನಾಮವಿಶೇಷಣವಾದರೆ, ಮು. ಕ. ದಲ್ಲಿ ಭಾವರೂಪ ಪ್ರತ್ಯಯ (?) ಹತ್ತುತ್ತದೆ.

ಉದಾ : ಬರಾಕ್ಕೆ ಓತಿಲೆ ‘ಬರುವ ಹೊತ್ತಿನಲ್ಲಿ’

ಈ ಪ್ರತ್ಯಯವನ್ನು ಕೆಲವು ವಿದ್ವಾಂಸರು ಸತಿಸಪ್ತಮಿಯೆಂದೂ, ಮತ್ತೆ ಕೆಲವರು ಸಂಯೋಜನಾತ್ಮಕ ಕ್ರಿಯಾಪ್ರತ್ಯಯವೆಂದೂ ಕರೆದಿದ್ದಾರೆ. (ನೋಡಿ: ಮಾಡ್ತಾ : ೧೯೭೫ : ೯೯)

ಶಿ. ಕ. ದಲ್ಲಿ ಚಪ್ಪರಕ್ಕೆ ಹಂದರ (ಆಡುನುಡಿಯಲ್ಲಿ ಪೆಚ್ಚಾಗಿ) ಎಂಬ ಶಬ್ದವೂ ಬಳಕೆಯಲ್ಲಿದೆ. ಮು. ಕ. ದಲ್ಲಿ ‘ಅಂದರ’ವೊಂದೇ ಚಪ್ಪರವೆಂಬರ್ಥವನ್ನು ಕೊಡುತ್ತದೆ. ಚಪ್ಪರ ಶಬ್ದಕ್ಕೆ ಅರ್ಥ ಸಂಕುಚಿತತೆಯಾಗಿ ಈಗ ‘ಜಟ್ಟಿ’ ‘ಸಣ್ಣ ತೇರು’ ಎಂಬರ್ಥದಲ್ಲಿ ಬಳಕೆಯಾಗುತ್ತದೆ. (ಹೆಣವನ್ನು ಸಾಗಿಸಲು ಸಣ್ಣ ತೇರು ಕಟ್ಟುವುದೂ ಉಂಟು.)

‘(ಕೈ)ಮುಗಿ’ ‘ನಮಸ್ಕರಿಸು’ ಎಂಬರ್ಥದಲ್ಲಿ ‘ಮೊಕ್ಕು’ ಎಂಬ ಪದ ಮು. ಕ. ದಲ್ಲಿ ಬಳಕೆಯಲ್ಲಿದೆ. ಶಿ. ಕ. ದಲ್ಲಿ ಇದಕ್ಕೆ ‘ ’ ಎಂಬ ರೂಪ ಬಂದಿದೆ. ಹಳಗನ್ನಡ ‘ಪೊಳ್ಗು’. (ನೋಡಿ : DED ೪೨೦೮).

ಇದು ಮಧುರೈಕನ್ನಡದ ಸ್ಥೂಲವಿವೇಚನೆ. ವ್ಯವಸ್ಥಿತ ಸರ್ವೇಕ್ಷಣೆ ನಡೆದರೆ ಇನ್ನೂ ಹೊಸ ಜಗತ್ತು ಹೊರಬರುತ್ತದೆಯೆಂದು ಮಾತ್ರ ಹೇಳಬಯಸುತ್ತೇನೆ.

ಅಡಿ ಟಿಪ್ಪಣಿಗಳು

೧. ಶಿ. ಕ. ದಿಂದ ವ್ಯತ್ಯಾಸವಿರುವ ಪದಗಳಿಗಷ್ಟೇ ಕಂಸದಲ್ಲಿ ಅರ್ಥವನ್ನು ಕೊಡಲಾಗಿದೆ.

೨. Ṽ – ನಾಸಿಕ್ಯಸ್ವರ, B – ಘೋಷಸ್ಪರ್ಶ, P – ಅಘೋಷ ಸ್ಪರ್ಶ, N –ಅನುನಾಸಿಕ.

೩. ಸಪ್ತಮಿಯ –ತ್ರು, ಪಂಚಮಿಯ ಪ್ರತ್ಯಯ –ದ್ದು (ಘೋಷ) ವಿನ ಪ್ರಭಾವದಿಂದ ಘೋಷ ವಾಗಿ –ದ್ರು ಆಗಿದೆ.

೪. ಸಪ್ತಮಿಯಪ್ರತ್ಯಯ –ಲಿ, ನಾಮಪದಕ್ಕೆ ಹತ್ತುವಾಗ ಮಿಕ್ಕ ಪ್ರಭೇದಗಳಲ್ಲಿಯಂತೆ –ಅರ್ ಶೂನ್ಯಪ್ರತ್ಯಯವು ಆಗಮವಾಗುವುದಿಲ್ಲ. ನೇರವಾಗಿಯೇ ಹತ್ತುತ್ತದೆ.

೫. ಇಲ್ಲಿಯೂ ಪದೋತ್ತರರೂಪ (Post-Position) 'ಕೂಡ' ಶಿ. ಕ. ದಲ್ಲಿಯಂತೆ ಷಷ್ಠಿಯ ನಾಮಪ್ರಕೃತಿಗೆ ಹತ್ತದೆ, ನೇರವಾಗಿ ನಾಮಮೂಲಕ್ಕೇ ಹತ್ತುತ್ತದೆ.

೬. ತಂಗಿ, ತಮ್ಮ ಮುಂತಾದವರು ವಯಸ್ಸಿನಲ್ಲಿ ಚಿಕ್ಕವರಾದ ಕಾರಣ ಈ ಸಂಬಂಧವಾಚಿಗಳಿಗೆ ಗೌರವ ಸೂಚಕ –ಅರು ಹತ್ತದೆ, ಬಹುವಚನ ಪ್ರತ್ಯಯ –ಗಳು ನೇರವಾಗಿ ನಾಮ ಮೂಲಕ್ಕೇ ಹತ್ತುತ್ತದೆ.

೭. ಇದರ ಬದಲಾವಣೆಯನ್ನು ಹೀಗೂ ಹೇಳಬಹುದೆನ್ನುತ್ತಾರೆ ಡಾ. ಗೌಡರು (ಚರ್ಚಾಕಾಲದಲ್ಲಿ):

(೧) ಎರಡು —> ಅರಡು —> ಅರ್ಡು —> ಅಡ್ಡು.

(೨) ಎರಡು —> ರಡ್ಡು —> ಅಡ್ಡು.

ಮೊದಲನೆಯದರಲ್ಲಿ ಎ —> ಅ ಆದುದು ಸಮರೂಪಧಾರಣೆಯಿಂದ. ಮೂಲದ್ರಾವಿಡದ ಇ – ಕನ್ನಡದಲ್ಲಿ ಎಕಾರವಾಗಿದೆ (ನೋಡಿ : ಇಬ್ಬರು, ಇನ್ನೂರು ಇತ್ಯಾದಿ). ಆದರೆ ಈ ಎಕಾರ ಮತ್ತೆ ಅಕಾರವಾದುದಕ್ಕೆ ಆಧಾರವಿಲ್ಲ. ಎರಡನೆಯ ಸಾಧ್ಯತೆಯಂತೆ ರಡ್ಡು ರೂಪ ತುಳುವಿನಲ್ಲಿದೆ. ಆದರೆ ಆದಿಯ ರಕಾರ ಬಿಟ್ಟುಹೋಗುವ ಗುಣ ಕನ್ನಡದಲ್ಲಿ ಇಲ್ಲ. ಆದರೆ ತಮಿಳಿನಲ್ಲಿ ರಕಾರದಿಂದ ಪ್ರಾರಂಭವಾಗುವ ಪದಗಳೇ ಇಲ್ಲ. ಈ ಪ್ರಭಾವ ದಿಂದೇನಾದರೂ ರಕಾರವನ್ನು ಕಳೆದುಕೊಂಡಿರಬಹುದೇ ? ಲೇಖನದಲ್ಲಿ ಹೇಳಿರುವಂತೆ ಎಡ್ಡು > ಅಡ್ಡು ಆಗುವ ಸಂಭವವೂ ಕಡಿಮೆ. ಏಕೆಂದರೆ ಎಟ್ಟು > ಅಟ್ಟು ಆಗಿಲ್ಲ.

೮. ತಮಿಳು : ಎಟುಪದು – 'ಎಪ್ಪತ್ತು', ತೊನ್ನೂರು – 'ತೊಂಬತ್ತು', ಲಚ್ಚಂ – 'ಲಕ್ಷ' ಕೋಡಿ – 'ಕೋಟಿ'.

೯. ಪಿರಿಚ್ಚಿದೆ ಕ್ರಿಯಾಪದದಲ್ಲಿ –ಇದ್ ಮತ್ತು –ಎ ಕನ್ನಡ ಪ್ರತ್ಯಯಗಳಾದರೂ ಪಿರಿಚ್ಚ್—, ತಮಿಳಿನಿಂದ ಪಡೆದ ಕ್ರಿಯಾಪ್ರಕೃತಿಯ ಭೂತರೂಪ. ಇಲ್ಲಿ ಪಿರಿ – ಎಂಬ ಕ್ರಿಯಾ ಮೂಲಕ್ಕೆ –ಚ್– ಭೂತಪ್ರತ್ಯಯ ಹತ್ತಿದೆ. ಇದನ್ನೇ ಮ. ಕ. ದಲ್ಲಿ ಕ್ರಿಯಾಮೂಲವಾಗಿ ಭ್ರಮಿಸಿ ಇದಕ್ಕೆ ಮತ್ತೊಂದು ಕನ್ನಡದ ಭೂತಪ್ರತ್ಯಯ –ಇದ್– ಅನ್ನು ಹಚ್ಚಿ ಬಳಸುತ್ತದೆ.

೧೦. ಬತ್ತಾನೆ, ತತ್ತಾನೆ ಮುಂತಾದುವುಕ್ಕೆ ಕ್ರಿಯಾಮೂಲ ಬರ್, ತರ್. ಇವುಗಳಿಗೆ ವರ್ತಮಾನ ಪ್ರತ್ಯಯ –ತ್– ಹತ್ತಿ ಸಮರೂಪಧಾರಣೆ ಕಾರಣ ಪ್ರಕೃತಿ ಬತ್– ತತ್– ಎಂದಾಗಿದೆ. ಈ ತೆರನಾದ ಬದಲಾವಣೆಯನ್ನು ಒಳನಾಡ ಕನ್ನಡದಲ್ಲಿಯೂ ಗುರುತಿಸಬಹುದು.

೧೧. ತಮಿಳುರೂಪ 'ದಮ್ಮಾತ್ರ್ತಾಂಡು' < ಇದೋ ಅಮ್ಮಾತ್ರಾಂಡು "ಇದೋ ಅಪ್ಪು". ಆಡುವಾಗ ಇದೋ > ದೋ ಎಂದಾಗುವುದು ಸಹಜ.

ಸಹಾಯಕ ಗ್ರಂಥಗಳು

Burrow, T and Emeneau, M. B: 1961, *Dravidian Etymological Dictionary*, Oxford, London.

Caldwell, R.: 1974, *A comparative Grammar of the Dravidian or South Indian family of Languages*, Orient Books Reprint Corporation, Delhi-55.

Chandran: 1972, *The Phonology and Morphology of Madurai Kannada*, M.A. Thesis, Annamalai University, A.Nagar.

Gowda, K. Kushalappa: 1972, *A Grammar of Kannada*, Annamalai University, Annamalai Nagar, Tamil-Nad.

Kittel, F.: 1970 (Ed: Marriappa Bhatt) *Kannada-English Dictionary*, University of Madras, Madras.

Ramaswamy, C.: 1975, *Influence of Kannada on Educated Tamil Speakers of Hiriyur (Karnatak)*, 7th Karuttarangu Malar, Annamali Nagar.

ಕುಶಾಲಪ್ಪಗೌಡ, ಕೆ.: ೧೯೬೭, ಕನ್ನಡದ ಈಗಿನ ಪ್ರಾದೇಶಿಕಪ್ರಭೇದಗಳು, ಸುವರ್ಣ ಸಂಚಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಕುಶಾಲಪ್ಪಗೌಡ, ಕೆ.: ೧೯೭೫, ಮುದ್ದಣ್ಣನ ತಿರುಳ್ಗನ್ನಡ ಬೆಳ್ನುಡಿ, ಮುದ್ದಣ್ಣನ ೭೫ನೇ ಸ್ಮಾರಕ ಸಂಚಿಕೆ (ಅಚ್ಚಿನಲ್ಲಿದೆ), ಬೆಂಗಳೂರು.

ಚಿದಾನಂದಮೂರ್ತಿ, ಎಂ.: ೧೯೭೧. ಭಾಷಾವಿಜ್ಞಾನದ ಮೂಲತತ್ವಗಳು, ಮೈಸೂರು.

ವಿಲ್ಯಂ ಮಾಡ್ತ. ೧೯೭೫, ಕನ್ನಡ ಭಾಷೆಯ ರೂಪರೇಷೆಗಳು, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ

ಹಿರೇಮಠ, ಆರ್. ಸಿ.: ೧೯೬೭, ಧಾರವಾಡ_ವಿಜಾಪುರಗಳ ಕನ್ನಡ, ಸುವರ್ಣ ಸಂಚಯ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

• •

ಕೇರಳಪ್ರಾಂತದ ಕನ್ನಡ

● ಪಿ. ಶ್ರೀಕೃಷ್ಣ ಭಟ್

ಕೇರಳಪ್ರಾಂತದ ಉತ್ತರ ಮತ್ತು ಈಶಾನ್ಯ ಗಡಿಗಳಿಗೆ ತಾಗಿಕೊಂಡಿರುವ ಕರ್ನಾಟಕ ರಾಜ್ಯದ ಜಿಲ್ಲೆಗಳು ದಕ್ಷಿಣ ಕನ್ನಡ, ಕೊಡಗು ಮತ್ತು ಮೈಸೂರು. ಕೇರಳದ ಕಣ್ಣಾನೂರು ಜಿಲ್ಲೆಯ ಕಾಸರಗೋಡು ಮತ್ತು ಹೊಸದುರ್ಗ ತಾಲೂಕುಗಳು ದಕ್ಷಿಣಕನ್ನಡ ಜಿಲ್ಲೆಗೂ ತಲಚ್ಚೇರಿ ತಾಲೂಕು ಕೊಡಗು ಜಿಲ್ಲೆಗೂ ಉತ್ತರ ವಯನಾಡು ತಾಲೂಕು ಕೊಡಗು ಮತ್ತು ಮೈಸೂರು ಜಿಲ್ಲೆಗಳಿಗೂ ದಕ್ಷಿಣ ವಯನಾಡು ತಾಲೂಕು (ಕಲ್ಲಿಕೋಟೆ ಜಿಲ್ಲೆ) ಮೈಸೂರು ಜಿಲ್ಲೆಗೂ ತಾಗಿಕೊಂಡಿವೆ. ಈ ಗಡಿಪ್ರದೇಶಗಳಲ್ಲಿ ಕನ್ನಡ ತಾಯಿನುಡಿಯಾಗಿರುವ ಜನರಿರುವುದು ಸಹಜವೂ ಅನಿವಾರ್ಯವೂ ಆಗಿದೆ. ಪರಿಸರದ ಭಾಷೆಗಳ ಮತ್ತು ಸಂಸ್ಕೃತಿಗಳ ಸಂಪರ್ಕದಿಂದಾಗಿ ಹಲವಾರು ಪ್ರಭೇದಗಳಿಂದ ಕೂಡಿಕೊಂಡಿರುವ, ಅಧ್ಯಯನಯೋಗ್ಯವಾಗಿರುವ ಈ ಎಲ್ಲ ಪ್ರದೇಶಗಳ ಕನ್ನಡ ಭಾಷೆ "ಕೇರಳ ಪ್ರಾಂತದ ಕನ್ನಡ"ದ ಪರಿಧಿಯೊಳಗೆ ಬರುವುದಾದರೂ ಪುಟಗಳ ನಿರ್ದಿಷ್ಟ ಮಿತಿ ಮತ್ತು ಅಧ್ಯಯನಕ್ಕೆ ಬೇಕಾದ ಸಮಯ ಸವಲತ್ತುಗಳ ಅಭಾವ– ಈ ಕಾರಣಗಳಿಂದ ಕೇವಲ ಕಾಸರಗೋಡು ಮತ್ತು ಹೊಸದುರ್ಗ ತಾಲೂಕುಗಳಲ್ಲಿನ 'ಕನ್ನಡಗಳ' ಕೆಲವೊಂದು ಪ್ರಭೇದಗಳಿಗಷ್ಟೇ ಈ ಲೇಖನವನ್ನು ಸೀಮಿತಗೊಳಿಸಲಾಗಿದೆ.

ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಭಾಗವಾಗಿದ್ದು ಭಾಷಾವಾರು ಪ್ರಾಂತ ರಚನೆಯ ಬಳಿಕ ಕೇರಳರಾಜ್ಯಾಂತರ್ಗತವಾದ ಕಾಸರಗೋಡು ಮತ್ತು ಹೊಸದುರ್ಗ ತಾಲೂಕುಗಳು ದ್ರಾವಿಡ ಭಾಷಾಭ್ಯಾಸಿಗೆ ತವನಿಧಿಯೇ ಸರಿ. ಚಂದ್ರಗಿರಿ ಹೊಳೆಯಿಂದ ದಕ್ಷಿಣದಲ್ಲಿ ಕನ್ನಡ, ಮಲೆಯಾಳಗಳೂ ಉತ್ತರದಲ್ಲಿ ಕನ್ನಡ, ತುಳು, ಮಲೆಯಾಳಗಳೂ ಸಹಜೀವಿಗಳಾಗಿವೆ. ದಕ್ಷಿಣಕನ್ನಡ ಜಿಲ್ಲೆಯ ಗಡಿಯಲ್ಲಿ ಮಲೆಯಾಳ ಕಡಿಮೆ. ತೆಂಕುದಿಕ್ಕಿಗೆ ಸರಿದಂತೆ ತುಳುವಿನ ಪ್ರಭಾವ ಕಡಿಮೆಯಾಗಿ ಮಲಯಾಳದ ಪ್ರಾಬಲ್ಯ ಹೆಚ್ಚುತ್ತಹೋಗುವುದು. ಕಾಞ್ಞಂಗಾಡಿನಿಂದ ದಕ್ಷಿಣಕ್ಕೆ ಹೋದಂತೆ ಕನ್ನಡ ಮಾಯವಾಗುವುದು. ಈ ಪ್ರದೇಶಗಳಲ್ಲಿ ಕೊಂಕಣಿ, ಮರಾಠಿ ಭಾಷೆಗಳೂ ಜೀವಂತವಾಗಿವೆ. ಇಲ್ಲೆಲ್ಲ ಕನ್ನಡ, ತುಳು, ಮಲಯಾಳಗಳು ವಾಣಿಜ್ಯಾದಿ ಸಾರ್ವಜನಿಕ ಕ್ಷೇತ್ರಗಳಲ್ಲಿ ವ್ಯವಹಾರದ ಮಾಧ್ಯಮಗಳಾಗಿವೆ. ಭಾಷಾಸ್ವಭಾವಕ್ಕನುಸರಿಸಿ ಈ ಭಾಷೆಗಳಲ್ಲಿ

ಪರಸ್ಪರ ಕೊಡುಕೊಳ್ಳೆ ಯಥಾಶಕ್ತಿ ನಡೆದಿದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ, ವಿಭಿನ್ನ ಮಾತೃಭಾಷೆಗಳ ಜನರು ದಕ್ಷಿಣಕನ್ನಡ ಜಿಲ್ಲೆಯವರಂತೆ, ಸಾರ್ವಜನಿಕ ಕ್ಷೇತ್ರಗಳಲ್ಲಿ ಗ್ರಾಂಥಿಕಕನ್ನಡವನ್ನೇ ಬಳಸುತ್ತಾರೆ. ಆದುದರಿಂದ ಇಲ್ಲಿನ ಕನ್ನಡದಲ್ಲಿ ಪ್ರಾದೇಶಿಕಪ್ರಭೇದಗಳು ಗಮನಾರ್ಹವಾಗಿ ಹೆಚ್ಚಾಗಲು ಎಡೆಯಾಗಿಲ್ಲ. ಕೇವಲ ಉಚ್ಚಾರ ಸಂಬಂಧವಾದ ವ್ಯತ್ಯಾಸವಿದೆ. ಉದಾ : ಕೊಂಕಣಿ ಕನ್ನಡ. ಆದರೆ ಸಾಮಾಜಿಕಪ್ರಭೇದಗಳ ದೃಷ್ಟಿಯಿಂದ ಈ ಎರಡು ತಾಲೂಕುಗಳೂ ಕನ್ನಡ ಉಪಭಾಷೆಗಳ ಅಭ್ಯಾಸಿಗೆ ಸುವರ್ಣಭೂಮಿಯೆಂದರೆ ತಪ್ಪಾಗದು. 'ಜಾತಿಗೊಂದು ಭಾಷೆ, ಊರಿಗೊಂದು ಭಾಷೆ' ಎನ್ನುವ ಮಾತಿಗೆ ನಿದರ್ಶನವನ್ನಿಲ್ಲಿ ಕಾಣಬಹುದು. ಸಾಮಾಜಿಕಪ್ರಭೇದಗಳಲ್ಲಿಯೂ ಚಂದ್ರಗಿರಿಹೊಳೆಯ ತೆಂಕುದಿಕ್ಕಿನಲ್ಲಿ ಮಲಯಾಳದ ಪ್ರಭಾವವನ್ನೂ ಬಡಗುದಿಕ್ಕಿನಲ್ಲಿ ತುಳು, ಮಲಯಾಳಗಳ ಪ್ರಭಾವನ್ನೂ ಗುರುತಿಸಬಹುದು.

ಇಲ್ಲಿನ ಕನ್ನಡದ ಸಾಮಾಜಿಕಪ್ರಭೇದಗಳಲ್ಲಿ ಹವ್ಯಕ ಕನ್ನಡ, ಕೋಟ ಕನ್ನಡ, ಕೋಟೆ ಕನ್ನಡ, ಬೈರ ಕನ್ನಡ, ಓಜಿ ಕನ್ನಡ, ಗೌಡ ಕನ್ನಡ, ಕುರುಬ ಕನ್ನಡ, ಹೆಗ್ಡೆ ಕನ್ನಡ, ಕುಮಾರ ಕ್ಷತ್ರಿಯರ(ಹಳೆಪೈಕರ) ಕನ್ನಡ, ಕ್ಷೌರಿಕ ಕನ್ನಡ, ಅಗಸರ ಕನ್ನಡ –ಹೀಗೆ ಉಲ್ಲೇಖನೀಯವಾದ ಒಂದೊಂದೂ ಪ್ರತ್ಯೇಕ ಪ್ರತ್ಯೇಕವಾದ ಉಪಭಾಷೆಗಳೇ ಆಗಿವೆ. ಇವುಗಳಲ್ಲಿ ಹವ್ಯಕ ಕನ್ನಡ, ಕೋಟ ಕನ್ನಡ, ಕೋಟೆ ಕನ್ನಡ, ಓಜಿಕನ್ನಡ ಮತ್ತು ಮಾದಿಗ ಕನ್ನಡ – ಇವುಗಳ ಸ್ಥೂಲಪರಿಚಯವನ್ನಷ್ಟೇ ಈ ಲೇಖನದಲ್ಲಿ ಕೊಡುವ ಪ್ರಯತ್ನ ಮಾಡಲಾಗಿದೆ.

ಹವ್ಯಕ ಕನ್ನಡ

ಕಾಸರಗೋಡು ತಾಲೂಕಿನ ಕೊಳ್ಯೂರು ಮತ್ತು ಕುಂಬಳೆ ಸೀಮೆ[೧]ಗಳಲ್ಲಿ ಹವ್ಯಕ ಬ್ರಾಹ್ಮಣರು ಹೆಚ್ಚಾಗಿ ನೆಲೆಯೂರಿದ್ದಾರೆ. ಅವರ ಮನೆಮಾತೇ ಹವ್ಯಕ ಕನ್ನಡ. ದಕ್ಷಿಣಕನ್ನಡ ಜಿಲ್ಲೆಯ ವಿಟ್ಲಪುತ್ತೂರು ಪಂಜಸೀಮೆಗಳ ಹವ್ಯಕರ ನುಡಿಗಿಂತ ಕುಂಬಳೆ ಮತ್ತು ಕೊಳ್ಯೂರು ಸೀಮೆಗಳ ಹವ್ಯಕರ ಮಾತು ತುಸು ಭಿನ್ನವಾಗಿದೆ.

ಕಾಸರಗೋಡಿನ ಹವ್ಯಕ ಕನ್ನಡದಲ್ಲಿ ಪ್ರಮಾಣಕನ್ನಡದ (Standard Kannada) ಎಲ್ಲಾ ಧ್ವನಿಮಾ[೨]ಗಳಿವೆ. ಜೊತೆಯಲ್ಲಿ ಐ, ಞಗಳೂ ಧ್ವನಿಮಾಗಳಾಗಿವೆ.

---

೧. ಸೀಮೆ = ಪ್ರದೇಶ : ಹಿಂದೆ ಒಬ್ಬೊಬ್ಬ ತುಂಡರಸರು ಆಳುತ್ತಿದ್ದ ಪ್ರದೇಶಗಳನ್ನು ಇಲ್ಲಿ 'ಸೀಮೆ' ಎಂದು ಕರೆಯುತ್ತಿದ್ದರು.

೨. ನೋಡಿರಿ : ವರ್ಣನಾತ್ಮಕ ಭಾಷಾವಿಜ್ಞಾನ. ಡಾ. ಜಿ. ಎಸ್. ಕುಳ್ಳಿ. ಪುಟ : ೬೯

ಬಜ್ಜ - ಕಷ್ಟ, ತೊಂದರೆ   ಪೋಞ್ಞ = ತಿಳಿಗೇಡಿ   ನಕ್ಕು = ನೆಕ್ಕು
ಞತ್ತೊಜ್ಜ = ಬುದ್ಧಿಹೀನ, ಪೆದ್ದ   ಕುಞ್ಞ = ಹುಡುಗ   ಞಕ್ಕು = ಜಜ್ಜು

ಕೆಲವು ಅಕಾರಾಂತ ಶಬ್ದಗಳ ಕೊನೆಯಲ್ಲಿ ಬರುವ ಅನುನಾಸಿಕೋಚ್ಚಾರ "ಁ" ಈ ಭಾಷೆಯ ವೈಶಿಷ್ಟ್ಯಗಳಲ್ಲೊಂದು. ಕನಿಷ್ಠಯುಗ್ಮಗಳ ಮೂಲಕ ಅದನ್ನು ಸ್ಪಷ್ಟೀಕರಿಸಬಹುದು.

ಅಪ್ಪಁ = ತಂದೆ,   ಗೆಂಡಁ = ಗಂಡ,
ಅಪ್ಪ = ಒಂದು ಬಗೆಯ ಖಾದ್ಯ,   ಗೆಂಡ = ಕೆಂಡ,
ಕುಂಟಁ = ಕುಳ್ಳ,   ಕಿಟ್ಟಁ = ಕಿಟ್ಟ ಎಂಬ ಹೆಸರಿನ ವ್ಯಕ್ತಿ
ಕುಂಟ = ಗೂಟ,   ಕಿಟ್ಟ = ಮಣ್ಣಿನ ಪಾತ್ರೆಯ ತೂತನ್ನು ಮುಚ್ಚಲು ಬಳಸುವ ಸಾಧನ.

ಪ್ರಥಮಪುರುಷವಾಚಕ ಕ್ರಿಯಾಪದದ ಏಕವಚನದಲ್ಲೂ ಈ ಅನುನಾಸಿಕೋಚ್ಚಾರವಿದೆ.

ಓಡ = ಓಡದು   ಒಳಿಯ = ಉಳಿಯದು   ಬಾರ = ಬಾರದು
ಓಡಁ = ಓಡನು   ಒಳಿಯಁ = ಒಳಿಯನು   ಬಾರಁ = ಬಾರನು

ಹವ್ಯಕ ಕನ್ನಡದ ಎಷ್ಟೋ ಶಬ್ದಗಳು ಪ್ರಮಾಣಕನ್ನಡದ ಶಬ್ದಗಳಿಗಿಂತ ರೂಪದಲ್ಲಿ ಭಿನ್ನವಾಗಿವೆ. ಕೆಲವನ್ನು ನೋಡಬಹುದು :

ಪ್ರ. ಕ.	ಹ. ಕ.	ಪ್ರ. ಕ.	ಹ. ಕ.
ಅಕಳಿಕೆ	ಆವಳಿಗೆ	ಬಿಸಿ	ಬೆಶಿ
ತುರಿಸು	ತೊರುಸು	ಕತ್ತಲೆ	ಕಸ್ತಲೆ
ಗಂಡ	ಗೆಂಡಁ	ಕೊಕ್ಕರೆ	ಕೊಂಗ್ರ್ (ತುಳು)
ಸಸಿ	ಸೆಸಿ	ಗೆಣಸು	ಗೆಣಂಗು (ಕೆಳಂಗು–ತುಳು)
ನಂದಿಸು	ನನ್ಸು	ಬಳಸು	ಬಡುಸು
ಮೇಲೆ	ಮೇಗೆ	ನಾಳೆ	ನಾಳಂಗೆ
ಸಾಸಿವೆ	ಸಾಸಮೆ	ಕೆಳಗೆ	ಕೆಳ

ಹವ್ಯಕ ಕನ್ನಡದ ಕೆಲವು ವಿಶಿಷ್ಟ ಪದಗಳು :

ಶಿಮ್ಮ (ರೆಪ್ಪೆಯ ಕೂದಲು), ಮಿಯಾಣ (ಸ್ನಾನ), ಏಕ್ಕಡು (ಥಕ್ಕನೆ ಬರುವ ಮೇಲುಸಿರು), ಇಂದ್ರಾಣ (ಇಂದಿನ), ಮುನ್ನಾಣದಿನ (ಹಿಂದಿನ ದಿನ), ಇವಾರ (ಎರಡನೇ ಸರ್ತಿ), ಮುತ್ತಾರ (ಮೂರನೇ ಸರ್ತಿ), ಕುದುಕ್ಕ (ನರಿ), ಕಿಂಕಿಲು (ಕಪ್ಪುಂಕುಳು), ಕಿಕ್ಕಿಳಿ (ಕಚಗುಳಿ), ನೆರ (ಬಣ್ಣ), ಪವುರ (ಅತಿಯಾಸೆ), ಅಪ್ಪ (ತುಂಬ) ಇತ್ಯಾದಿ.

ತುಳು ಮತ್ತು ಹವ್ಯಕದಲ್ಲಿ ಸಮಾನವಾಗಿ ಪ್ರಯೋಗವಾಗುವ ಶಬ್ದಗಳು ಹಲವು : ಉಜುಂಬು, ಉರುವೇಲು, ಒಳಚ್ಚಾಲು, ಓಡಾರಿ, ಕಡೆಕೊಡಿ, ಕಿರಿಂಚಿ, ಕುಚ್ಚಿ (ತಲೆಕೂದಲು), ಕುಡೆ, ಕುರೆ, ಕೂಕಿಲು, ಪುಚ್ಚೆ (ಬೆಕ್ಕು) ಇತ್ಯಾದಿ. ಕಾಸರಗೋಡಿನ ಹವ್ಯಕ ಕನ್ನಡ, ದಕ್ಷಿಣ ಕನ್ನಡದ ಹವ್ಯಕ ಕನ್ನಡಕ್ಕಿಂತ ಸ್ವಲ್ಪ ಭಿನ್ನವಾಗಿರುವುದಕ್ಕೆ ಕೆಲವು ಉದಾಹರಣೆಗಳು. (ಪದಪ್ರಯೋಗಗಳಲ್ಲಿ) :

ದಕ್ಷಿಣ ಕನ್ನಡದ ಹವ್ಯಕ	ಕಾಸರಗೋಡಿನ ಹವ್ಯಕ
ಒಗ್ಗರಣೆ ಸಟ್ಟುಗು	ಕರಂಡಿ
ಎಣ್ಣೆ ಬಾಳ	ಚೀಂಚಟ್ಟಿ
ಸವುಟು	ಕೈಲು
ಕೆದೆ	ಹಟ್ಟಿ
ದನ	ಹಶು
ದೊಡ್ಡೋರು	ದೊಡ್ಡೊವು
ದೊಡ್ಡೋನು	ದೊಡ್ಡಪ್ಪೆ
ಮುಟ್ಟು	ಕಿಟ್ಟು
ಎಲಸಂದಿಗೆ	ಅಳತ್ತಂಡೆ
ಮಿಂದ	ಹನಿಯು
ಜೆರಳೆ	ತೋಳೆ ಜೆರಳೆ

ಸಂಬಂಧವಾಚಕಗಳು : ಅಪ್ಪೆ (ತಂದೆ), ಅಬ್ಬೆ, ಅಮ್ಮೆ. ಮಾವೆ, ಅಣ್ಣೆ, ತಮ್ಮೆ, ಅಕ್ಕೆ, ತಂಗೆ, ಅಜ್ಜೆ, ಅಜ್ಜಿ, ಗೆಂಡೆ, ಹೆಂಡತ್ತಿ, ಅಪ್ಪಚ್ಚಿ (ಚಿಕ್ಕಪ್ಪ), ಕಿರಿಯಬ್ಬೆ (ಚಿಕ್ಕಮ್ಮ), ದೊಡ್ಡಪ್ಪೆ, ಹೆರಿಯಪ್ಪೆ, ಹೆರಿಯಬ್ಬೆ, ಮೈದಿನಿ ಇತ್ಯಾದಿ ಕಾಸರಗೋಡು ಹವ್ಯಕದಲ್ಲಿ ರೂಢವಾಗಿವೆ.

.ಲಿಂಗ : ದ್ರಾವಿಡಭಾಷಾ ಸ್ವಭಾವಕ್ಕನುಸರಿಸಿ ಎರಡು ಲಿಂಗಗಳು : ಮೇಲು ವರ್ಗ ಮತ್ತು ಕೆಳವರ್ಗ. ಮೇಲುವರ್ಗದ ನಾಮಪದಗಳಲ್ಲಿ ಪುರುಷ–ಸ್ತ್ರೀ ವಿವಕ್ಷೆಯಿದೆ. ಕೆಳವರ್ಗದ ನಾಮಗಳಲ್ಲಿ ಕೆಲವನ್ನು ಬಿಟ್ಟರೆ ಗಂಡು–ಹೆಣ್ಣು ಎಂಬ ವಿವಕ್ಷೆಯಿಲ್ಲ.

ಮೇಲುವರ್ಗ : ಪುಲ್ಲಿಂಗ– ಅರಸೆ, ಮಾಲಿಂಗೆ, ನಾಣೆ, ಹೊಲೆಯೆ, ಮಾದಿಗೆ ಇತ್ಯಾದಿ.

ಸ್ತ್ರೀಲಿಂಗ– ಅಕ್ಕೆ, ಶಾರದೆ, ಅರಸೆತ್ತಿ, ಪಾರ್ತಿ, ಹೊಲತ್ತಿ, ಮಾದಿಗೆತ್ತಿ ಇತ್ಯಾದಿ.

ಕೆಳವರ್ಗ : ಗಂಡು : ಗೋಣಿ, ಎತ್ತು, ಕಂಟಿ (ಗಂಡು ಬೆಕ್ಕು), ಬೊಗ್ಗೆ (ಗಂಡು ನಾಯಿ) ಇತ್ಯಾದಿ.

ಹೆಣ್ಣು : ಎಮ್ಮೆ, ಹಶು, ಮಂಗು (ಹೆಣ್ಣು ಬೆಕ್ಕು), ಬೊಗ್ಗಿ (ಹೆಣ್ಣು ನಾಯಿ) ಇತ್ಯಾದಿ.

ಗಂಡು ಹೆಣ್ಣು ಎಂಬ ಅರಿವಿಲ್ಲ : ಕತ್ತೆ, ನಾಯಿ, ಪುಚ್ಚೆ, ಮರ, ಹಲಸು, ಆನೆ ಇತ್ಯಾದಿ.

ವಚನ : ಎರಡು ವಚನಗಳು– ಏಕ ಮತ್ತು ಬಹು. "ಂದ್ರು, ಅಕ್ಕೊ, ಗೊ, ಏರು, ಓರು, ಗಳು"– ಬಹುವಚನ ಪ್ರತ್ಯಯಗಳು. ಇವು ಪ್ರಕೃತಿಯನ್ನು ಸೇರುವಲ್ಲಿ ಒಂದು ವಿಶೇಷವಾದ, ಖಚಿತವಾದ ವ್ಯವಸ್ಥೆಯನ್ನು ಕಾಣಬಹುದು.

'ಂದ್ರು' – ಅಕಾರಾಂತ ಸಂಬಂಧವಾಚಕಗಳಿಗೆ ಮಾತ್ರ ಬರುವ ಪ್ರತ್ಯಯ.

ಅಣ್ಣಂದ್ರು, ಅಕ್ಕಂದ್ರು, ಬಾಪಂದ್ರು, ಮಾಪಂದ್ರು, ಇತ್ಯಾದಿ.

'ಅಕ್ಕೊ, ಕ್ಕೊ-' ಅಕಾರ ಹೊರತಾದ ಸ್ವರಾಂತ ಸಂಬಂಧವಾಚಕಗಳಿಗೆ ಬರುವ ಪ್ರತ್ಯಯ.

ಹೆಂಡತ್ತ್ಯಕ್ಕೊ, ಅತ್ತೆಕ್ಕೊ, ಮೈದಿನಿಯಕ್ಕೊ, ಸೊಸೆಯಕ್ಕೊ, ಮಗಳಕ್ಕೊ ಇತ್ಯಾದಿ. ಅಕಾರಾಂತ ನಾಮಗಳ ಮುಂದೆಯೂ ಈ ಪ್ರತ್ಯಯಗಳು ಬರುವುದುಂಟು. ಉದಾ :– ಭಟ್ಟಕ್ಕೊ (ಭಟ್ಟರುಗಳು).

'ಂಗೊ'– ಅಕಾರಾಂತ ನಾಮಗಳಿಗೆ ಬರುವ ಪ್ರತ್ಯಯ.

ಕಳ್ಳಂಗೊ, ನಾಯ್ಕಂಗೊ, ಬಂಟಂಗೊ, ಮರಂಗೊ ಇತ್ಯಾದಿ.

ಇದಕ್ಕೆ ಅಪವಾದ : 'ದನಗೊ' (ದನಗಳು).

'ಗೊ, ಅಗೊ'– ಇತರ ಸ್ವರಾಂತಗಳಿಗೆ ಬರುವ ಪ್ರತ್ಯಯ.

ಕುರಿಗೊ, ಹಶುಗೊ, ಆಳುಗೊ, ಕತ್ತಗೊ, ಎಮ್ಮೆಗೊ.

ಅಪವಾದ : ದನಗೊ.

ಗೌರವಾರ್ಥದ ಬಹುವಚನ– ಓರು : ಅತ್ತ್ಯೋರು (ಗಂಡನ ತಾಯಿ), ಮಾವನೋರು (ಗಂಡನ ತಂದೆ), ಬಾವನೋರು (ಗಂಡನ ಅಣ್ಣ).

ಏರು : ಅತ್ತಿಗೇರು (ಗಂಡನ ಅಕ್ಕ), ಅತ್ತೇರು (ಗಂಡನ ತಾಯಿ).

ಗಳು : ಅತ್ತಗಳು (ಹೆಂಡತಿಯ ತಾಯಿ), ಮಾವಗಳು (ಹೆಂಡತಿಯ ತಂದೆ). ಈ ಬಹುವಚನದ ಮುಂದೆ ಬರುವ ಬಹುವಚನಪ್ರತ್ಯಯ ಅಕ್ಕೊ : ಅತ್ತೇರಕ್ಕೊ, ಮಾವನೋರಕ್ಕೊ, ಮಗಳಕ್ಕೊ ಇತ್ಯಾದಿ.

ವಿಭಕ್ತಿ :

ವಿಭಕ್ತಿ	ಪ್ರತ್ಯಯ	ಪ್ರಯೋಗ
ಪ್ರಥಮಾ	φ	ಮಗ್ಂ, ಮಗಳು, ಕುರಿ, ಮರ, ಬಡಿಗೆ.
ದ್ವಿತೀಯಾ	ಅ	ಮಗನ, ಮಗಳ, ಕುರಿಯ, ಮರವ, ಬಡಿಗೆಯ.
ತೃತೀಯಾ	ಅಲ್ಲಿ, ಲಿ.	ಮರಲ್ಲಿ, ಬಡಿಗೇಲಿ.
ಚತುರ್ಥೀ	ಂಗೆ, ಗೆ, ಕ್ಕೆ.	ಮಗ್ಂಗೆ, ಮಗಳಿಂಗೆ, ಕುರಿಗೆ, ಮರಕ್ಕೆ, ಬಡಿಗಗೆ.
ಪಂಚಮಿ	ಂದ, ಇಂದ.	ಮಗ್ಂದ, ಮಗಳಿಂದ, ಕುರಿಂದ, ಮರಂದ, ಬಡಿಗೆಂದ.
ಷಷ್ಠಿ	ಅ	ಮಗನ, ಮಗಳ, ಕುರಿಯ, ಮರದ, ಬಡಿಗೆಯ.
ಸಪ್ತಮಿ	ಇಲ್ಲಿ, ಲ್ಲ, ಲಿ, ಅತ್ರೆ.	ಮಗನತ್ರೆ, ಮಗಳತ್ರೆ, ಕುರಿಯತ್ರೆ, ಮರಲ್ಲಿ, ಕಾಲಲ್ಲಿ, ಬಡಿಗೆಲಿ.

ಕೆಲವು ಅಕಾರಾಂತಪದಗಳ ಕೊನೆಯಲ್ಲಿರುವ ಅನುನಾಸಿಕೋಚ್ಚಾರ (~)ವನ್ನು ಪ್ರಥಮಾ ವಿಭಕ್ತಿಪ್ರತ್ಯಯವೆಂದು ಕೆಲವರೂ ಪುಲ್ಲಿಂಗ ಸೂಚಕವೆಂದು ಇನ್ನು ಕೆಲವರೂ ಅಭಿಪ್ರಾಯಿಸಿದ್ದುಂಟು. ಆದರೆ ನಿಜಸ್ಥಿತಿ ಹಾಗಿದ್ದಂತೆ ತೋರುವುದಿಲ್ಲ. ಮೇಲು ವರ್ಗ–ಕೆಳವರ್ಗ, ಪುಲ್ಲಿಂಗ–ಸ್ತ್ರೀಲಿಂಗವೆಂಬ ಭೇದವಿಲ್ಲದೆ ಎಲ್ಲ ಅಕಾರಾಂತ ಸಂಬಂಧ ವಾಚಕಗಳ, ಮನುಷ್ಯರ ಅಂಕಿತನಾಮಗಳ, ಪ್ರಾಣಿವಾಚಕಗಳ ಕೊನೆಯಲ್ಲಿ ಅನುನಾಸಿ ಕೋಚ್ಚಾರವಿದೆ. ಅಪ್ರಾಣಿವಾಚಕಗಳ ಕೊನೆಯಲ್ಲಿ ಈ ಉಚ್ಚಾರವಿಲ್ಲ.

ಸಂಬಂಧವಾಚಕಗಳು : ಅಪ್ಪ್ಂ, ಅಣ್ಣ್ಂ, ಅಕ್ಕ್ಂ, ಅಮ್ಮ್ಂ, ಇತ್ಯಾದಿ.

ಅಂಕಿತನಾಮಗಳು : ರಾಮ್ಂ, ಗೋವಿಂದ್ಂ, ಶಾರದ್ಂ, ಕಮಲ್ಂ, ಲಲಿತ್ಂ

ಪ್ರಾಣಿವಾಚಕಗಳು : ಕುಯಿಂಪ್ಂ, ಹೋಂಟ್ಂ, ಪಗೆಲ್ಂ, ಇತ್ಯಾದಿ.

[ದನ ಮತ್ತು ತುಳುಪ್ಂ (ಒಂದು ಜಾತಿಯ ಹಲಸಿನಕಾಯಿ) ಎಂಬಿವು ಈ ನಿಯಮಕ್ಕೆ ಅಪವಾದದಂತಿವೆ. ಆದರೆ ಇದಕ್ಕೆ ಕಾರಣ ಹುಡುಕುವುದು ದುಷ್ಕರವಲ್ಲ. ಇಲ್ಲಿನ ಹವ್ಯಕಕನ್ನಡದಲ್ಲಿ ಮೂಲಭೂತವಾಗಿ 'ದನ' ಶಬ್ದವಿಲ್ಲ. ಅದಕ್ಕೆ ಬದಲಾಗಿ 'ಹಶು' (<ಪಶು) ಪದವಿದೆ. 'ತುಳುಜನ' ಎನ್ನುವ ಅರ್ಥದಲ್ಲೂ ತುಳುಪ್ಂ ಎಂಬ ಪ್ರಯೋಗವಿರುವುದರಿಂದ ಈ ಪದದಲ್ಲಿ ಅನುನಾಸಿಕೋಚ್ಚಾರ ರೂಢವಾಗಿರಬೇಕು].

ಅಪ್ರಾಣಿವಾಚಕಗಳ ಕೊನೆಯ ಅಕಾರ ನಿರನುನಾಸಿಕ.

ಮರ, ಗೆಡ್ಡ, ಸಂಕ, ಕರಟ, ಓಡ, ಸಂಕಟ, ಮಾಟ, ಗುಂಟ ಇತ್ಯಾದಿ.

ವಿಭಕ್ತಿಗಳು ಹತ್ತುವಲ್ಲಿ ಶಬ್ದಾಂತ ಅಕಾರದ ಅನುನಾಸಿಕತೆ ಮತ್ತು ನಿರನುನಾಸಿಕತೆಗಳಿಗನುಸರಿಸಿ ಸ್ಪಷ್ಟವ್ಯತ್ಯಾಸವನ್ನು ಗುರುತಿಸಬಹುದು.

ಗೆಂಡ಼, ಗೆಂಡನ– ಗೆಂಡ಼ಂಗೆ, ಗೆಂಡ಼ಂದ, ಗೆಂಡನ, ಗೆಡನತ್ರೆ

ಗೆಂಡ ಗೆಂಡವ– ಗೆಂಡಕ್ಕೆ ಗೆಂಡಂದ ಗೆಂಡಂದ ಗೆಂಡಲ್ಲಿ.

ಸರ್ವನಾಮ :

ಪ್ರ. ಕ.	ಹ. ಕ.	ಪ್ರ. ಕ.	ಹ. ಕ.	ಪ್ರ. ಕ.	ಹ. ಕ.
ನಾನು	ಆನು	ಅವಳು	ಅದು	ಇವರು	ಇವು
ನಾವು	ನಾವು (ಸಮಾವೇಶಕ)	ಅದು	ಅದು	ಅವುಗಳು	ಅವು
ನಾವು	ಎಂಗೊ಼ (ಅಸಮಾವೇಶಕ)	ಇವನು	ಇವ಼	ಇವುಗಳು	ಇವು
ನೀನು	ನೀನು	ಇವಳು	ಇದು	ಯಾರು	ಆರು
ನೀವು	ನಿಂಗೊ	ಇದು	ಇದು	ಯಾವುದು	ಏದದು
ಅವನು	ಅವ಼	ಅವರು	ಅವು.		

ಪ್ರಥಮಪುರುಷದಲ್ಲಿ ಸ್ತ್ರೀಲಿಂಗಾರ್ಥಕ ಸರ್ವನಾಮವಿಲ್ಲ, ಹಾಗೂ ಬಹುವಚನದಲ್ಲಿ ಪುಂ–ಸ್ತ್ರೀ ಎಂಬ ಭೇದ ಮಾತ್ರವಲ್ಲ, ಮೇಲುವರ್ಗ–ಕೆಳವರ್ಗವೆಂಬ ವ್ಯತ್ಯಾಸವಿಲ್ಲದಿರುವುದೂ ಗಮನಾರ್ಹವಾಗಿದೆ. ಉತ್ತಮ ಪುರುಷಾರ್ಥಕ ಸರ್ವನಾಮದ ಬಹುವಚನ ರೂಪ 'ಎಂಗೊ಼' (Exclusive) ಎಂಬಲ್ಲಿನ ಕೊನೆಯ ಅನುನಾಸಿಕತೆಯೂ ಅವಲೋಕನೀಯ.

ಸರ್ವನಾಮಗಳಿಗೆ ವಿಭಕ್ತಿಗಳು ಸೇರುವಲ್ಲಿ ಉಂಟಾಗುವ ಬದಲಾವಣೆಗಳು :

ವಿಭಕ್ತಿ		ಪ್ರಯೋಗ		
ಪ್ರ	ಆನು	ಎಂಗೊ಼	ಅದು	ಅವು
ದ್ವಿ	ಎನ್ನ	ಎಂಗಳ	ಅದರ	ಅವರ
ತೃ	ಎನ್ನಲ್ಲಿ	ಎಂಗಳಲ್ಲಿ	ಅದರಲ್ಲಿ	—
	ಎನ್ನತ್ರೆ	ಎಂಗಳತ್ರೆ		
ಚ	ಎನಗೆ	ಎಂಗೊಗೆ	ಅದಕ್ಕೆ	ಅವಕ್ಕೆ

ವಿಭಕ್ತಿ		ಪ್ರತ್ಯಯ		
ಪಂ	ಎನ್ನಿಂದ	ಎಂಗಳಿಂದ	ಅದರಿಂದ	ಅವರಿಂದ
ಷ	ಎನ್ನ	ಎಂಗಳ	ಅದರ	ಅವರ
ಸ	ಎನ್ನಲ್ಲಿ	ಎಂಗಳಲ್ಲಿ	ಅದರಲ್ಲಿ	ಅವರಲ್ಲಿ
	ಎನ್ನತ್ರೆ	ಎಂಗಳತ್ರೆ	ಅದರತ್ರೆ	ಅವರತ್ರೆ

ಪ್ರಮಾಣಕನ್ನಡದಲ್ಲಿ ಹೆಚ್ಚಾಗಿ ಪ್ರಯೋಗದಲ್ಲಿಲ್ಲದ ಹಲವಾರು ಶುದ್ಧ ಮೂಲ ಧಾತುಗಳು ಹವ್ಯಕ ಕನ್ನಡದಲ್ಲಿವೆ.

ಧಾತು	ಅರ್ಥ	ಧಾತು	ಅರ್ಥ	ಧಾತು	ಅರ್ಥ
ಹೊರು	ಹಾಯು	ಓಂಗು	ಅತಿಯಾಗಿ ಅಪೇಕ್ಷಿಸು	ಇಡುಕ್ಕು	ಬಿಸಾಡು
ಬಳುಗು	ನೆಲಸಾರಿಸು	ಬಲುಗು	ಎಳೆಯು	ದೇನಿಗೇಳು	ಕರೆಯು
ಸುಮಿ	ಮೂಗನ್ನು ಹಿಂಡು			ಕಿಟ್ಟು	ಸ್ಪರ್ಶಿಸು

ಇಸು ಪ್ರತ್ಯಯವನ್ನು ಪಡೆದ ಧಾತುಗಳು ಸ್ವರಾನುರೂಪ್ಯತೆಯನ್ನು ಹೊಂದುವುದು ಇಲ್ಲಿ ತೀರ ಸಾಮಾನ್ಯ.

ಪ್ರ. ಕ.	ಹ. ಕ.	ಪ್ರ. ಕ.	ಹ. ಕ.
ಹೊಗಿಸು	ಹೊಗುಸು	ನೋಡಿಸು	ನೋಡುಸು
ಹೇಳಿಸು	ಹೇಳುಸು	ಮೂಡಿಸು	ಮೂಡುಸು
ಕಟ್ಟಿಸು	ಕಟ್ಟುಸು	ಕೊಡಿಸು	ಕೊಡುಸು

ಹೆಚ್ಚಾಗಿ ಇಕಾರಾಂತ ಮತ್ತು ಏಕಾಕ್ಷರ ಧಾತುಗಳಿಗೆ 'ಇಸು'ವಿನ ಜಾಗದಲ್ಲಿ 'ಇಶು' ಬರುವುದು. ಎಕಾರಾಂತಕ್ಕೆ 'ಅಶು' ಬರುವುದು.

ಅಗಿಶು, ಇಳಿಶು, ಹಿಡಿಶು, ಕೊದಿಶು, ಮೀಶು, ಬೇಶು, ಮರಶು, ಕಡಶು, ಒಗಶು ಇತ್ಯಾದಿ.

ಕ್ರಿಯಾಪದ ಭೂತಕಾಲ :

ಪ್ರ. ಕ.	ಹ. ಕ.	ಪ್ರ. ಕ.	ಹ. ಕ.
ಮಾಡಿದನು	ಮಾಡಿದ°	(ನೀನು)ಮಾಡಿದೆ	ಮಾಡಿದೆ
ಮಾಡಿದಳು	ಮಾಡಿತ್ತು	ಮಾಡಿದಿರಿ	ಮಾಡಿದಿ
ಮಾಡಿದರು	ಮಾಡಿದೊವು	ಮಾಡಿದೆನು	ಮಾಡಿದೆ
ಮಾಡಿತು	ಮಾಡಿತ್ತು	ಮಾಡಿದೆವು	ಮಾಡಿದಿಯೊ (Exclusive)
ಮಾಡಿದುವು	ಮಾಡಿದೊವು		ಮಾಡಿತ್ತು (Inclusive)

ವರ್ತಮಾನ–ಭವಿಷತ್ :

ಪ್ರ. ಕ.	ಹ.ಕ.	ಪ್ರ.ಕ.	ಹ.ಕ.
ಮಾಡುತ್ತಾನೆ	ಮಾಡುತ್ತೆ	ಮಾಡುತ್ತಿ	ಮಾಡುತ್ತೆ
ಮಾಡುತ್ತಾಳೆ	ಮಾಡುತ್ತು	ಮಾಡುತ್ತೀರಿ	ಮಾಡುತ್ತಿ
ಮಾಡುತ್ತಾರೆ	ಮಾಡುತ್ತೊವು	ಮಾಡುತ್ತೇನೆ	ಮಾಡುತ್ತೆ
ಮಾಡುತ್ತದೆ	ಮಾಡುತ್ತು	ಮಾಡುತ್ತೇವೆ	ಮಾಡುತ್ತಿಯೊ (Exclusive)
ಮಾಡುತ್ತವೆ	ಮಾಡುತ್ತೊವು		ಮಾಡುತ್ತು (Inclusive)
ಮಾಡುವನು	ಮಾಡುಗು	ನೋಡುವಿ	ನೊಡುವೆ
ಮಾಡುವಳು	ಮಾಡುಗು	ನೋಡುವಿರಿ	ನೊಡುವಿ
ಮಾಡುವರು	ಮಾಡುಗು	ನೋಡುವೆನು	ನೋಡುವೆ
ಮಾಡುವುದು	ಮಾಡುಗು	ನೋಡುವೆವು	ನೋಡವಿಯೊ (Exclusive)
ಮಾಡುವುವು	ಮಾಡುಗು		ನೋಡುಗು (Inclusive)

ಉತ್ತಮಪುರುಷ ಬಹುವಚನ ಕ್ರಿಯಾರೂಪದ ಕೊನೆಯ ಅನುನಾಸಿಕೋಚ್ಚಾರ, ಸಮಾವೇಶಕ ಮತ್ತು ಅಸಮಾವೇಶಕ ಸರ್ವನಾಮುಗಳಿಗನುಸರಿಸಿ ಕ್ರಿಯಾರೂಪದಲ್ಲಿ ವ್ಯತ್ಯಾಸ, ಪ್ರಥಮಪುರುಷ ಸ್ತ್ರೀಲಿಂಗ ಏಕವಚನವನ್ನು ಹೇಳುವ ಪ್ರತ್ಯೇಕ ಕ್ರಿಯಾ ರೂಪವಿರದೆ ಅದು ಕೆಳವರ್ಗದ ಏಕವಚನದಂತೇ ಇರುವುದು, ಬಹುವಚನದಲ್ಲಿ ಮೇಲು ವರ್ಗ ಕೆಳವರ್ಗಗಳ ಕ್ರಿಯಾರೂಪ ಸಮಾನವಾಗಿರುವುದು ಮತ್ತು ಭವಿಷ್ಯತ್ಕಾಲದ ಪ್ರಥಮಪುರುಷ ಕ್ರಿಯಾರೂಪದಲ್ಲಿ ವಚನಲಿಂಗಗಳಿಗನುಸರಿಸಿ ಯಾವ ವ್ಯತ್ಯಾಸವೂ ಇಲ್ಲದಿರುವುದು ಹವ್ಯಕ ಕನ್ನಡ ಕ್ರಿಯಾಪದಗಳ ವೈಶಿಷ್ಟ್ಯಗಳಾಗಿವೆ.[೨]

ಪ್ರಥಮ ಪುರುಷದಲ್ಲಿ ಗೌರವಾರ್ಥದ ಸ್ತ್ರೀಲಿಂಗ ಏಕವಚನ ಕ್ರಿಯಾದವೊಂದಿದೆ. ಇದು ಪುತ್ತೂರು ವಿಟ್ಲ ಸೀಮೆಗಳ ಹವ್ಯಕಕನ್ನಡದಲ್ಲಿ ವೈಶಿಷ್ಟ್ಯವಾದರೂ ಕುಂಬ್ಳೆ ಸೀಮೆಯ ಕನ್ನಡದಲ್ಲಿ ಇದರ ಬಳಕೆ ಅಪೂರ್ವವಾಗಿಯಾದರೂ ಇದೆ.

ಪ್ರ. ಕ.	ಹ. ಕ.
ಅಜ್ಜಿ ಬಂದಳು	ಅಜ್ಜಿ ಬಂದ
ಅತ್ತೆ ಹೋಗುತ್ತಾಳೆ	ಅತ್ತೆ ಹೋವುತ್ತ
ಅಕ್ಕ ಬಂದಿದ್ದಾಳೆ	ಅಕ್ಕೆ ಬೈಂದ

ಇನ್ನು ಕೆಲವು ಕ್ರಿಯಾರೂಪಗಳು :

ಪ್ರ. ಕ.	ಹ.ಕ.	ಪ್ರ. ಕ.	ಹ. ಕ.
ಹೋಗಬೇಡ	ಹೋಗೆಡ	ಹೋಗಬೇಕು	ಹೋಯೆಕು

೨. ನೋಡಿರಿ : HAVYAKA : M. Mariappa Bhat, Annals of Oriental Research. Volume xxiii - Part I.

ಪ್ರ.ಕ.	ಹ.ಕ.	ಪ್ರ.ಕ.	ಹ.ಕ.
ತಿನ್ನಬೇಡ	ತಿನ್ನೆಡ	ಕಾಣಬೇಕು	ಕಾಣೆಕು
ನೋಡಬೇಡ	ನೋಡೆಡ	ತಿನ್ನಬೇಕು	ತಿನ್ನೆಕು
ಮಾಡಲಿ	ಮಾಡ್ಳಿ	ಬಂದನಂತೆ	ಬಂದ್ಹಡ
ಕಾಣಲಿ	ಕಾಣ್ಳಿ	ನೋಡುತ್ತಾಳಂತೆ	ನೋಡುತ್ತಾಡ
ಬರಲು	ಬಪ್ಪಲೆ	ಬರುವಳಂತೆ	ಬಕ್ಕಾಡ
ತಿನ್ನಲು	ತಿಂಬಲೆ	ಬಂದಿತಂತೆ	ಬಂತಾಡ

ಪ್ರ. ಕ. : ನಾನು ಮಂಗಳೂರಿಗೆ ಹೋಗಿ ಬಂದೆ.

ಹ. ಕ. ; ಆನು ಮಂಗ್ಳೂರಿಂಗೆ ಹೋಯಿಕ್ಕಿ ಬಂದೆ.

ಪ್ರ ಕ. : ನನಗೆ ಊಟಮಾಡಿ ಪೇಟೆಗೆ ಹೋಗಲಿಕ್ಕುಂಟು.

ಹ. ಕ. : ಎನಗೆ ಉಂಡಿಕ್ಕಿ ಪೇಟೆಗೆ ಹೋಪಲಿದ್ದು.

ಪ್ರ. ಕ. : ಅವನದನ್ನು ತಿಳಿದು ಹೇಳಿಯಾನು.

ಹ. ಕ. : ಅಪ್ಪಿ ಅದರ ತಿಳಿದು ಹೇಳುಗು.

ಹೀಗೆ ಹಲವಾರು ದೃಷ್ಟಿಗಳಿಂದ, ಹವ್ಯಕಕನ್ನಡ ಪ್ರಮಾಣಕನ್ನಡಕ್ಕಿಂತ ಭಿನ್ನವಾಗಿರುವುದು ಮಾತ್ರವಲ್ಲದೆ ಕನ್ನಡದ ಪ್ರಾಚೀನ ರೂಪಗಳನ್ನು ತನ್ನಲ್ಲಿ ಉಳಿಸಿಕೊಂಡಿರುವ ಇಂದಿನ ಕನ್ನಡದ ಉಪಭಾಷೆಗಳಲ್ಲಿ ಮೇಲ್ಪಂಕ್ತಿಯದಾಗುತ್ತದೆ ಎನ್ನುವ ಅಭಿಪ್ರಾಯವೂ ಇದೆ.

ಕೋಟ ಕನ್ನಡ

ಕಾಸರಗೋಡು ತಾಲೂಕಿನ ಬನ್ನೂರು (ಮಧೂರು), ದೇಶಮಂಗಲ (ಸಿರಿಬಾಗಿಲು), ಕೂಡ್ಲು, ಎಡನೀರು, ಮುಳಿಯಾರು, ಬಾರಿಕ್ಕಾಡು, ಪೈವಳಿಕೆ, ಕುಂಬಳೆ, ಬೇಳ ಮುಂತಾದೆಡೆಗಳಲ್ಲಿ ನೆಲಸಿರುವ ಕೋಟಬ್ರಾಹ್ಮಣರ ತಾಯಿನುಡಿ ಕನ್ನಡ. ಅದೇ ಕೋಟಕನ್ನಡ. ಹೆಸರೇ ಸೂಚಿಸುವಂತೆ ಅವರ ಮೂಲಸ್ಥಾನ ದಕ್ಷಿಣ ಕನ್ನಡ ಜಿಲ್ಲೆಯ ಕೋಟ. ಇಂದಿಗೂ ಕೋಟದ ಉಗ್ರನರಸಿಂಹನೇ ಅವರ ಕುಲದೈವ. ತುಳುಭಾಷೆಯ ಪ್ರಭಾವ ಕೋಟಕನ್ನಡದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಕೋಟಕನ್ನಡದಲ್ಲಿ ಪ್ರಮಾಣಕನ್ನಡದಲ್ಲಿರುವ ಎಲ್ಲ ಧ್ವನಿಮಾಗಳೂ ಇವೆ. ಆದರೆ ಪದಾಂತದಲ್ಲಿ (ಕೆಲವೊಮ್ಮೆ ಕ್ರಿಯಾಪದಗಳ ನಡುವಿನಲ್ಲೂ) ಉಕಾರ ಕೆಲವೊಮ್ಮೆ ಅನೌಷ್ಠ್ಯ[೪]ವಾಗಿ ಉಚ್ಚರಿಕವಾಗುವುದು ಈ ಭಾಷೆಯ ವೈಶಿಷ್ಟ್ಯಗಳಲ್ಲೊಂದಾ

೪. ತುಳುವಿನ ಸ್ವರಮಾಲೆ — ತೆಕ್ಕುಂಜೆ ಗೋಪಾಲ ಕೃಷ್ಣ ಭಟ್ಟ, ಮಧುಪುರ, ಪುಟ ೧೯೯.

ಗಿದೆ. (ಆ ಉಕಾರವನ್ನು ಸಾಮಾನ್ಯವಾದ ಉಕಾರಕ್ಕಿಂತ ಭಿನ್ನವೆಂದು ತೋರಿಸುವುದಕ್ಕಾಗಿ "ಉ" ಈ ಚಿಹ್ನೆಯನ್ನು ಬಳಸಲಾಗುವುದು.)

ಹೆಸರು, ಬೇತಿಂಡು, ನಾನು, ನೀನು, ಇತ್ಯಾದಿ.

ಶಬ್ದರೂಪಗಳಲ್ಲಿ ಪ್ರಮಾಣಕನ್ನಡಕ್ಕೂ ಕೋಟಕನ್ನಡಕ್ಕೂ ಕೆಲವೆಡೆ ಸ್ಪಷ್ಟ ವ್ಯತ್ಯಾಸವನ್ನು ಕಾಣಬಹುದು.

ಪ್ರಮಾಣ ಕನ್ನಡ	ಕೋಟ ಕನ್ನಡ	ಪ್ರ. ಕ.	ಕೋ. ಕ.
ಸಾಸಿವೆ	ಸಾಸಮಿ	ಆಡಳಿತ	ಆಡಳ್ತೆ
ಕೆಮ್ಮು	ಸೆಮ್ಮು	ಆಕಳಿಕೆ	ಆವುಳು
ಹತ್ತಿರ	ಹತ್ರೆ	ಗೆಣಸು	ಗೆಣಂಗು
ನೆನಪು	ನೆಂಪು	ಕೊಳಕು	ಕೊಳಕ್ಕು
ಕನ್ನಡಿ	ಕನ್ನಟಿ	ಕತ್ತಲೆ	ಕಸ್ತಲೆ

ಕೋಟಕನ್ನಡದ ಕೆಲವು ವಿಶಿಷ್ಟಪದಗಳು :

ಸೀಂಪ್ಲು (ಸೀನು), ಮಜ್ಜಿಗಳೆ (ಮಜ್ಜಿಗೆ ಹಾಕಿಡುವ ಪಾತ್ರೆ), ಕೈಪ್ಪೆ (ಕಹಿ), ಹಾಲುಸೇಗನು (ಹಾಲು ಕಾಯಿಸುವ ಪಾತ್ರೆ), ಬಸ್ತು (ಅಕ್ಕಿಯನ್ನು ಬೇಯಿಸಿದ ಬಳಿಕ ಅದರ ಸ್ಪರ್ಶದಿಂದ ಉಂಟಾಗುವ ಮಾಲಿನ್ಯ), ತರಿಕ್ಕೆ (ಇರಿಕ್ಕೆ), ಆಕಿರೆ, ಅಕ್ಕಿಟ್ಟು (ಅಕ್ಕಿ ಹಿಟ್ಟು), ಉಳ್ಳಿ (ಕಿಳ್ಳಿ), ಕಾಯಿಮುದ್ದೆ (ಅರೆದ ತೆಂಗಿನಕಾಯಿ), ಕಳಗೆ ಇತ್ಯಾದಿ.

ಸಂಬಂಧವಾಚಕಗಳಲ್ಲಿ ಪ್ರಮಾಣಕನ್ನಡಕ್ಕೂ ಕೋಟಕನ್ನಡಕ್ಕೂ ಹೆಚ್ಚೇನೂ ಅಂತರವಿಲ್ಲ. ಅತ್ತೆಯನ್ನು ಮಾತ್ರ "ಮಾಯಿ" ಎನ್ನುವುದುಂಟು.

ಲಿಂಗ ಮತ್ತು ವಚನವ್ಯವಸ್ಥೆಯಲ್ಲೂ ಯಾವ ವ್ಯತ್ಯಾಸವಿಲ್ಲ. ಆದರೆ ಬಹುವಚನಪ್ರತ್ಯಯಗಳು ಪ್ರಮಾಣಕನ್ನಡಕ್ಕಿಂತ ತುಸು ಭಿನ್ನವಾಗಿವೆ.

ಬಹುವಚನ ಪ್ರತ್ಯಯಗಳು : ಅಕ್ಳು, ಅರು, ಗ್ಳು, ಗಳು

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಅಣ್ಣಂದಿರು	ಅಣ್ಣನಕ್ಳು	ದೇವರು	ದೇವರು
ತಮ್ಮಂದಿರು	ತಮ್ಮನಕ್ಳು	ದೇವಿಯರು	ದೇವಿಯರು
ಗುರುಗಳು	ಗುರುಗಳು	ದನಗಳು	ದನಗ್ಳು
ಹುಡುಗರು	ಗಂಡುಗಳು[೫]	ಕತ್ತೆಗಳು	ಕತ್ತೆಗ್ಳು

೫. ಕೋಟಕನ್ನಡದಲ್ಲಿ ಹುಡುಗ, ಹುಡುಗಿ ಎಂಬ ಪದಗಳಿಲ್ಲ. ಆ ಜಾಗದಲ್ಲಿ ಗಂಡು, ಹೆಣ್ಣು ಎಂಬ ಪದಗಳನ್ನು ಬಳಸಲಾಗುತ್ತದೆ.

ವಿಭಕ್ತಿಪ್ರತ್ಯಯಗಳು : ಅ; ಅಲೆ, ಅಲ್ಲೆ; ಂಗೆ, ಗೆ, ಕ್ಕೆ ; ಂದ, ಇಂದ; ಅ; ಅಲೆ, ಅಲ್ಲೆ, ಅತ್ರೆ – ಇವುಗಳು ದ್ವಿತೀಯಾದಿ ವಿಭಕ್ತಿಪ್ರತ್ಯಯಗಳು.

ವಿಭಕ್ತಿ	ಪ್ರತ್ಯಯ	ಪ್ರಯೋಗ
ಪ್ರ	φ	ಅಣ್ಣ, ಮರೊ, ಏಡು
ದ್ವಿ	ಅ	ಅಣ್ಣನ, ಮರವ, ಏಡ್ನ
ತೃ	ಅಲೆ, ಅಲ್ಲೆ	ಮರಲೆ
ಚ	ಂಗೆ, ಗೆ, ಕ್ಕೆ	ಅಣ್ಣಂಗೆ, ಮರಕ್ಕೆ, ಏಡ್ಗೆ
ಪಂ	ಂದ, ಇಂದ	ಅಣ್ಣಂದ. ಮರಂದ, ಏಡುಂದ
ಷ	ಅ	ಅಣ್ಣನ, ಮರದ, ಏಡ್ನ
ಸ	ಅಲೆ,ಅಲ್ಲೆ,ಅತ್ರೆ	ಅಣ್ಣನತ್ರೆ, ಮರಲೆ, ಏಡ್ನತ್ರೆ

ಸರ್ವನಾಮಗಳು :

ಪ್ರ. ಕ.	ಕೋ. ಕ.	ಪ್ರ. ಕ	ಕೋ. ಕ.
ನಾನು	ನಾನು	ಇವನು	ಇವಿ
ನೀನು	ನೀನು	ಇವಳು	ಇವ್ಳ
ನಾವು	ನಾವು	ಇವರು	ಇವರು
ನೀವು	ನೀವು	ಅದು	ಅದು
ಅವನು	ಅವಿ	ಇದು	ಇದು
ಅವಳು	ಅವ್ಳ	ಯಾರು	ಯಾರು
ಅವರು	ಅವರು	ಯಾವುದು	ಯಾವ್ದ

ಸರ್ವನಾಮಗಳಿಗೆ ವಿಭಕ್ತಿಗಳು ಸೇರುವಾಗ ಉಂಟಾಗುವ ಬದಲಾವಣೆಗಳಿಗೆ ಕೆಲವು ಉದಾಹರಣೆಗಳು :

ವಿಭಕ್ತಿ	ಪ್ರಯೋಗ		
ಪ್ರ	ನಾನು	ನೀನು	ಅವ್ಳ
ದ್ವಿ	ನನ್ನ	ನಿನ್ನ	ಅವ್ಳ
ಚ	ನಂಗೆ	ನಿಂಗೆ	ಅವ್ಳಿಗೆ
ಪಂ	ನನ್ನುಂದ	ನಿನ್ನಂದ	ಅವ್ಳಂದ
ಷ	ನನ್ನ	ನಿನ್ನ	ಅವ್ಳ
ಸ	ನನ್ನತ್ರೆ	ನಿನ್ನತ್ರೆ	ಅವ್ಳತ್ರೆ

ಕೋಟ ಕನ್ನಡದ ಕೆಲವು ಧಾತುಗಳು : ಬುಳ್ಸು (ಅಳು), ಸುಯಿಂಪು (ಮೂಗು ಹಿಂಡು), ಅಷ್ಕು (ಬಿಸಾಡು), ಚೀಂಟು (ಚಿವುಟು), ಬಳಸು (ಬಡಿಸು), ನಾನ್ಸು (ನಂದಿಸು), ಪೆರ್ಕು (ಹೆಕ್ಕು), ಹರಂಕು (ಪರಚು) ಮುಂತಾದ ಶುದ್ಧಧಾತುಗಳಿವೆ. ಧಾತುವಿಗೆ ಸೇರುವ 'ಇಸು' ಪ್ರತ್ಯಯದ ಉಚ್ಚಾರ 'ಇಸು' ಎಂದಾಗುತ್ತದೆ:

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಹೊಗಿಸು	ಹೊಗ್ಸು	ತೋರಿಸು	ತೋರ್ಸ್ಸ
ಹೇಳಿಸು	ಹೇಳ್ಸು	ಅಗೆಯಿಸು	ಅಗ್ಸು
ಮಾಡಿಸು	ಮಾಡ್ಸು	ಕಟ್ಟಿಸು	ಕಟ್ಸು

ಕ್ರಿಯಾಪದಗಳು– ಭೂತಕಾಲ :

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಮಾಡಿದನು	ಮಾಡಿಯು	ಮಾಡಿದಿರಿ	ಮಾಡ್ಯರಿ
ಮಾಡಿದಳು	ಮಾಡ್ಯಳು	ಮಾಡಿದೆನು	ಮಾಡ್ಯೆ
ಮಾಡಿದರು	ಮಾಡ್ಯರು	ಮಾಡಿದೆವು	ಮಾಡ್ಯೆವು
ನೀನು (ಮಾಡಿದೆ)	ಮಾಡ್ಯೆ		

ವರ್ತಮಾನ ಭವಿಷತ್ :

ಮಾಡುತ್ತಾನೆ	ಮಾಡ್ತ	ಮಾಡುತ್ತೀರಿ	ಮಾಡ್ತರಿ
ಮಾಡುತ್ತಾಳೆ	ಮಾಡ್ತಳು	ಮಾಡುತ್ತೇನೆ	ಮಾಡ್ತೆ
ಮಾಡುತ್ತಾರೆ	ಮಾಡ್ತರು	ಮಾಡುತ್ತೇವೆ	ಮಾಡ್ತೊ
ಮಾಡುತ್ತಿ	ಮಾಡ್ತೆ		
ಮಾಡುವನು	ಮಾಡುವ	ಮಾಡುವಿರಿ	ಮಾಡ್ವರಿ
ಮಾಡುವಳು	ಮಾಡ್ವಳು	ಮಾಡುವೆನು	ಮಾಡ್ವೆ
ಮಾಡುವರು	ಮಾಡ್ವರು	ಮಾಡೆವೆವು	ಮಾಡ್ವೊ
ನೀನು ಮಾಡುವೆ (ವಿ)	ಮಾಡ್ವೆ		

ನಿಷೇಧಕ್ರಿಯೆ :

ಮಾಡನು	ಮಾಡ	ಮಾಡಿರಿ	ಮಾಡ
ಮಾಡಳು	ಮಾಡಳು	ಮಾಡೆನು	ಮಾಡೆ
(ನೀನು) ಮಾಡೆ	ಮಾಡೆ	ಮಾಡೆವು	ಮಾಡೊ

ನ್ಯೂನಕ್ರಿಯೆಯ ಪ್ರತ್ಯಯಗಳು : ಇ, ಕ್ಕಿ, ಡು, ತ್ತಾ, ಅದೆ ಇತ್ಯಾದಿ.

ಮಾಡಿ ಬಂದ, ಮಾಡ್ಕಿ ಬಂದ, ಕೊಯ್ದು ತಂದ, ಮಾಡ್ತಾ ಬಂದ, ಮಾಡದೆ ಬಂದ.

ಇಲ್ಲೆ (ಇಲ್ಲ), ಅಲ್ಲಗಳ ಪ್ರಯೋಗ :

ನಾನು ಹಾಗೆ ಮಾಡಲಿಲ್ಲ — ನಾನು ಹಂಗೆ ಮಾಡಿದ್ನೆ.
ಅವನು ಹಾಗೆ ಹೇಳಿದುದಲ್ಲ — ಅಪ್ಪಿ ಹಂಗೆ ಹೇಳಿದ್ದಲ್ಲ.

ಕೆಲವು ವಿಶಿಷ್ಟ ಪ್ರಯೋಗಗಳು :

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಹೋಗಬೇಡ	ಹೋಗಡ	ತಿನ್ನಬೇಕು	ತಿನ್ನಗು
ತಿನ್ನಬೇಡ	ತಿನ್ನಡ	ಹಾರಬೇಕು	ಹಾರಗು
ಹಾರಬೇಡ	ಹಾರಡ	ಉಣ್ಣಬೇಕು	ಉಣ್ಣಗು
ಹೋಗಲು	ಹೋಪಗೆ	ಹಾರಲು	ಹಾರ್ಗೆ
ತಿನ್ನಲು	ತಿಂಬಗೆ	ಕಾಣಲು	ಕಾಂಬಗೆ

ಪ್ರಮಾಣಕನ್ನಡದ 'ಅಂತೆ' ಎಂಬ ಸ್ಥಳದಲ್ಲಿ ಉಂಬ್ರು ಎಂದು ಬಳಸುವುದು ಈ ಭಾಷೆಯ ಮತ್ತೊಂದು ವೈಶಿಷ್ಟ್ಯ.

ಪ್ರ. ಕ.	ಕೋ. ಕ.
ಮಾವ ನಾಳೆ ಬರುತ್ತಾರಂತೆ.	ಮಾವ ನಾಳೆ ಬರುತ್ತರುಂಬ್ರು.
ದೇವಸ್ಥಾನಕ್ಕೆ ನಾಳೆ ಸ್ವಾಮಿಗಳು ಬರುತ್ತಾರಂತೆ, ಎಲ್ಲರಿಗೂ ಊಟದ ಏರ್ಪಾಡು ಉಂಟಂತೆ.	ದೇವಸ್ಥಾನಕ್ಕೆ ನಾಳೆ ಸ್ವಾಮಿಗಳು ಬರುತ್ತರುಂಬ್ರು, ಎಲ್ರಿಗೂ ಊಟದ ಏರ್ಪಾಡು ಉಂಟುಂಬ್ರು.

ಕೆಲವು ವಾಕ್ಯಗಳ ಮೂಲಕ ಭಾಷೆಯ ಸ್ವರೂಪವನ್ನರಿಯಬಹುದು.

ಪ್ರ. ಕ.	ಕೋ. ಕ.
ಅವನನ್ನು ಇತ್ತ ಬರ್ಲಿಕ್ಕೆ ಹೇಳು.	ಅವನ ಇತ್ತ ಬಪ್ಪಗೆ ಹೇಳು.
ನೀನು ಊಟ ಮಾಡುವ ವರೆಗೆ ನಾನು ಇರುತ್ತೇನೆ.	ನೀನು ಉಂಡಪ್ಪಲ್ಲಿ ವರೆಗೆ ನಾನು ಇರುತ್ತೆ.
ಈ ಬೆಂಡೆಕಾಯಿಯ ರುಚಿ ನೋಡಿದ್ದೀರೋ ?	ಈ ಬೆಂಡೆಕಾಯಿಯ ರುಚಿ ಕಂಡರಿಯಾ ?

ಹೀಗೆ ಕೋಟ ಕನ್ನಡ ತನ್ನದೇ ಆದ ಕೆಲವು ವೈಶಿಷ್ಟ್ಯಗಳಿಂದ ಭಾಷಾಭ್ಯಾಸಿಗಳ ಗಮನವನ್ನು ತನ್ನೆಡೆಗೆ ಸೆಳೆಯುತ್ತದೆ.

ಕೋಟೆ ಕನ್ನಡ

ಕೆಳದಿಯ ನಾಯಕರಿಂದ ಸ್ಥಾಪಿತವಾದ ಕೋಟೆಗಳಲ್ಲಿ ಈಗಿನ ಕೇರಳ ರಾಜ್ಯದ ಕಾಸರಗೋಡು, ಪೊಳಲಿ, ಚಂದ್ರಗಿರಿ, ಪನಿಯಾಲ, ಕುಂಡಂಕೋಳಿ, ಬಂದಡ್ಕ, ಬೇಕಲ, ಚಿತ್ತಾರಿ, ಕಾಞ್ಞಂಗಾಡು – ಈ ಪ್ರದೇಶಗಳಲ್ಲಿನ ಕೋಟೆಗಳೂ ಸೇರಿವೆ. ಕೆಳದಿಯ ಅರಸರಲ್ಲಿ ಪ್ರಖ್ಯಾತರಾದ ಹಿರಿಯ ವೆಂಕಟಪ್ಪನಾಯಕ ಮತ್ತು ಶಿವಪ್ಪನಾಯಕರು ತಮ್ಮೊಡನೆ ವಿಜಯದುರ್ಗ (ಈಗಿನ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ)ದಿಂದ ಕಾದಾಳುಗಳನ್ನು ಕರೆತಂದು, ಈ ಕೋಟೆ ಪ್ರದೇಶಗಳಲ್ಲಿ ನೆಲಸುವಂತೆ ಮಾಡಿದರು. ಅರಸರಿಗೆ ಅತಿ ವಿಧೇಯರಾಗಿ ಕೋಟೆಗಳನ್ನು ಕಾಯುವುದು, ವಿರೋಧಿ ಕೋಟೆಗಳನ್ನು ಸ್ವಾಧೀನ ಪಡಿಸುವುದು– ಇವೇ ಮುಂತಾದ ಧೀರ ಕಾರ್ಯಗಳಲ್ಲಿ ನಿಷ್ಣಾತರಾದ ಈ ಕ್ಷತ್ರಿಯರು, ಇತರ ಜನರಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ತಾವು ಕೋಟೆ ಕ್ಷತ್ರಿಯರೆಂದು ಹೇಳಿಕೊಂಡರು. ಈ ಊರಿಗೆ ಬಂದ ಬಳಿಕ ಜನರಿಗೆ ಸೈನಿಕಶಿಕ್ಷಣ ಕೊಟ್ಟು ದಂಡು ಕಟ್ಟುವ ಕಾಯಕವನ್ನು ಹೆಚ್ಚಾಗಿ ಮಾಡುತ್ತಿದ್ದುದರಿಂದ ಅವರನ್ನು ಇಲ್ಲಿನವರು ಸೇರ್ವೆಗಾರರು[೧] (ಸೆರೆಗಾರರು, ಶೇರ್ವೆಗಾರರು) ಎಂದೇ ಕರೆದರು. ರಾಮರಾಜಕ್ಷತ್ರಿಯರೆಂದು ಹೇಳಿಕೊಳ್ಳುತ್ತಿರುವ ಈ ವಂಶಜರ ಮನೆಮಾತು ಕನ್ನಡ. ಕೋಟೆಕ್ಷತ್ರಿಯರ ಕನ್ನಡವೆ ಕೋಟೆಕನ್ನಡ. ಅಂದು ವಿಜಯದುರ್ಗದಿಂದ ಹೊರಟ ಅವರ ಇನ್ನೊಂದು ಗುಂಪು ಹೊನ್ನಾವರ (ಉತ್ತರಕನ್ನಡ)ದಲ್ಲಿ ನೆಲೆನಿಂತಿತ್ತು. ಈಗ ಆ ವಂಶಜರ ಮನೆ ಮಾತು ಕೊಂಕಣಿಯೆಂದು ತಿಳಿದುಬರುತ್ತದೆ. ಇದು ಗಮನಾರ್ಹ.

ಕೋಟೆಕನ್ನಡವು ಪ್ರಮಾಣಕನ್ನಡಕ್ಕೆ ಹತ್ತಿರವಾಗಿದೆ. ಶಬ್ದರೂಪಗಳಲ್ಲಿ ಪ್ರಮಾಣ ಕನ್ನಡಕ್ಕಿಂತ ಭಿನ್ನವಾದವುಗಳು ಸಾಕಷ್ಟಿವೆ.

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಮರುದಿನ	ಮರ್ದಿನ	ಯುವಕ	ಹೊಂತಗಾರ
ಬರಗಾಲ	ಬರ್ಗಾಲ	ಯುವತಿ	ಹೊಂತಗಾರ್ತಿ
ಮೆಟ್ಟಿಲು	ಮೆಟ್ಟಿಗೆ	ಕಿಟಕಿ	ಕಿಡ್ಕಿ
ದಾರುಂದ	ದಾರಿಂದ್ರ	ಪಕ್ಕಾಸು	ಕವ್ವಲೆ (ಮಲೆಯಾಳ)
ಊಟದ ತಟ್ಟೆ	ಬಟ್ಳು	ಹೊಸ್ತಿಲು	ಹೊಸ್ಲು
ದೊಡ್ಡಕತ್ತಿ	ಕಡ್ಗತ್ತಿ	ಬಾಗಿಲು	ಬಾಗ್ಲು
ಒಸಡು	ನಿಜ	ಹೂ	ಹೂಗು
ಸೀನು	ಸೀಂದು	ಸೌದೆ	ಸೌದಿ

೧. ಮಲೆಯಾಳದಲ್ಲಿ ಚೇರ್ಯಕ್ಕಾರನ್ (ಪುಲ್ಲಿಂಗ), ಚೇರ್ಯಕ್ಕಾರ್ತಿ(ಸ್ತ್ರೀಲಿಂಗ), ಚೇರ್ಯಕ್ಕಾರ್ (ಬಹುವಚನ) ಎಂದು ಹೇಳುತ್ತಾರೆ.

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಪೊರಕೆ	ಹಿಡಿಕುಂಟೆ	ರವಿಕೆ	ರವಕ್ಕೆ
ಭಾರ	ಬಾದಿ	ಬೈತಲೆ	ಬೊಗ್ತಲೆ

ಆಹಾರ ಪದಾರ್ಥಗಳನ್ನು ಹೇಳುವ ಪದಗಳು: ಉಪ್ಕರಿ, ತಾಳ್ಳು, ಗಶಿ, ಮೆಣಸ್ಕಾಯಿ, ಚಟ್ಣಿ, ಮುದ್ದುಳಿ ಇತ್ಯಾದಿ.

ಸಂಬಂಧವಾಚಕಗಳು ಪ್ರಮಾಣಕನ್ನಡದಂತೇ ಇದ್ದರೂ ಒಂದೆರಡು ಭಿನ್ನ ವಾಗಿವೆ: ಅಜ್ಜಪ್ಪ (ಅಜ್ಜ), ಅಮ್ಮಮ್ಮ (ಅಜ್ಜಿ), ಅತ್ತಿಗಮ್ಮ (ಅತ್ತಿಗೆ), ನಂಟತ್ತಿ, ಬೀಗ್ತಿ ಇತ್ಯಾದಿ.

ವಿಭಕ್ತಿಗಳು: ಗೆ, ಕ್ಕೆ; ಲಿ, ಗೆ, ಕ್ಕೆ; ಇಂದ; ಅದು, ದು; ಲಿ, ಅತ್ರೆ–ದ್ವಿತೀಯಾದಿ ವಿಭಕ್ತಿಗಳು. ವಿಭಕ್ತಿಪ್ರಯೋಗಕ್ಕೆ ಉದಾಹರಣೆಗಳು:

ವಿಭಕ್ತಿ	ಪ್ರತ್ಯಯ	ಪ್ರಯೋಗ
ಪ್ರ.	φ	ರಾಮು, ಸೀತೆ, ಮರ, ಕೋಲು
ದ್ವಿ.	ಗೆ, ಕ್ಕೆ	ರಾಮ್ನಿಗೆ, ಸೀತೆಗೆ, ಮರಕ್ಕೆ, ಕೋಲಿಗೆ
ತೃ.	ಲ್ಲ, ಅತ್ರ, ಲಿ	ರಾಮ್ನಲ್ಲಿ, ಸೀತೆಯಲ್ಲಿ, ರಾಮ್ನತ್ರ, ಸೀತೆಯತ್ರ, ಮರ್ದಲ್ಲಿ, ಕೋಲ್ನಲ್ಲಿ
ಚ.	ಗೆ, ಕ್ಕೆ	ರಾಮ್ನಿಗೆ, ಸೀತೆಗೆ, ಮರಕ್ಕೆ, ಕೋಲಿಗೆ
ಪಂ.	ಇಂದ	ರಾಮ್ನಿಂದ, ಸೀತೆಯಿಂದ, ಮರ್ದಿಂದ, ಕೋಲ್ನಿಂದ
ಷ.	ಅ, ಅದು, ದು	ರಾಮುಂದು, ಸೀತೇದು, ಮರದ್ದು, ಕೋಲಿಂದು, ರಾಮ್ನ, ಸೀತೆಯ
ಸ.	ಲಿ, ಅತ್ರೆ,	ರಾಮ್ನಲ್ಲಿ, ಸೀತೆಯಲ್ಲಿ, ಮರ್ದಲ್ಲಿ, ಕೋಲ್ನಲ್ಲಿ
	ಅತ್ರ	ರಾಮ್ನತ್ರೆ, ಸೀತೆಯತ್ರೆ, ಮರ್ದತ್ರ, ಕೋಲ್ನತ್ರ, ರಾಮ್ನತ್ರ, ಸೀತೆಯತ್ರ

ದ್ವಿತೀಯೆ ಮತ್ತು ಚತುರ್ಥಿಗೆ ಒಂದೇ ಪ್ರತ್ಯಯ ಬಳಕೆಯಲ್ಲಿರುವುದು ವಿಚಾರಾರ್ಹ.

ಸರ್ವನಾಮ: ನಾನು, ನಾವು, ನೀನು, ನೀವು, ಅವೆ, ಅವ್ಳು, ಅದು, ಇವೆ, ಇವ್ಳು, ಅವ್ರು, ಇವ್ರು, ಯಾರು, ಯಾವ್ದು ಇತ್ಯಾದಿ.

ವಿಭಕ್ತಿಗಳು ಸೇರುವಾಗ ಸರ್ವನಾಮಗಳಲ್ಲಾಗುವ ರೂಪಾಂತರಗಳು :

ವಿಭಕ್ತಿ					
ಪ್ರ.	ನಾನು	ನೀನು	ಅವನು	ಅವ್ರು	ಅವ್ಗಳು
ದ್ವಿ.	ನನ್ನ	ನಿನ್ನ	ಅವನ	ಅವ್ರ	ಅವ್ಗಳ
ತೃ.	ನನ್ನಲ್ಲಿ	ನಿನ್ನಲ್ಲಿ	ಅವ್ನಲ್ಲಿ	ಅವ್ರಲ್ಲಿ	ಅವ್ಗಳಲ್ಲಿ
	ನನ್ನತ್ರ	ನಿನ್ನತ್ರ	ಅವ್ನತ್ರ	ಅವ್ರತ್ರ	ಅವ್ಗಳತ್ರ
ಚ.	ನಂಗೆ	ನಿಂಗೆ	ಅವ್ನಿಗೆ	ಅವ್ರಿಗೆ	ಅವ್ಗಳಿಗೆ
ಪಂ.	ನನ್ನಿಂದ	ನಿನ್ನಿಂದ	ಅವ್ನಿಂದ	ಅವ್ರಿಂದ	ಅವ್ಗಳಿಂದ
ಷ.	ನನ್ನ	ನಿನ್ನ	ಅವ್ನ	ಅವ್ರ	ಅವ್ಗಳ
ಸ.	ನನ್ನತ್ರ	ನಿನ್ನತ್ರ	ಅವ್ನತ್ರ	ಅವ್ರಲ್ಲಿ	ಅವ್ಗಳಲ್ಲಿ
	ನನ್ನಲ್ಲಿ	ನಿನ್ನಲ್ಲಿ	ಅವ್ನಲ್ಲಿ	ಅವ್ರತ್ರ	

ಪ್ರಮಾಣಕನ್ನಡದಲ್ಲಿ ಬಳಕೆಯಲ್ಲಿಲ್ಲದ ಕೆಲವು ಶುದ್ಧಧಾತುಗಳು ಕೋಟೆ ಕನ್ನಡದಲ್ಲಿವೆ. ಕತ್ತು (ಕರಟು), ಬೊಯ್ (ಬಯ್), ಕುತ್ತು (ಹಾಯು ಅಥವಾ ಒದೆ) ಮನಾರ ಮಾಡು (ಮಾಲಿನ್ಯವನ್ನೆಲ್ಲ ಕಳೆದುಹಾಕು), ಪೆದ್ಕು (ಒದ್ದಾಡು), ಪೆಡಚು (ಹೆಣಗಾಡು), ಹರ್ಕು (ಪರಚು), ಹರಗು (ಹರಡು) ಇತ್ಯಾದಿ.

ಧಾತುಗಳಿಗೆ ಇಸು ಪ್ರತ್ಯಯ ಹತ್ತುವಾಗ ಧಾತುವಿನ ಕೊನೆಯ ಸ್ವರ ಮತ್ತು ಇಸುವಿನ ಇಕಾರ ಲೋಪಗೊಳ್ಳುವುದು.

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಮಾಡಿಸು	ಮಾಡ್ಸು	ಹಿಡಿಸು	ಹಿಡ್ಸು
ಕೂಡಿಸು	ಕೂಡ್ಸು	ಕುಡಿಸು	ಕುಡ್ಸು

ಕ್ರಿಯಾಪದ– ಭೂತಕಾಲ :

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಹೇಳಿದನು	ಹೇಳ್ದ	ಹೇಳಿದೆ	ಹೇಳ್ದಿ
ಹೇಳಿದಳು	ಹೇಳಿದ್ಳು	ಹೇಳಿದಿರಿ	ಹೇಳ್ದ್ರಿ
ಹೇಳಿದರು	ಹೇಳ್ದ್ರು	ಹೇಳಿದೆನು	ಹೇಳ್ದೆ
ಹೇಳಿತು	ಹೇಳ್ತು	ಹೇಳಿದೆವು	ಹೇಳ್ದವು

ವರ್ತಮಾನ ಭವಿಷತ್ :

ಹೇಳುತ್ತಾನೆ	ಹೇಳ್ತಾನೆ	ಹೇಳುತ್ತಿ	ಹೇಳ್ತಿ
ಹೇಳುತ್ತಾಳೆ	ಹೇಳ್ತಾಳೆ	ಹೇಳುತ್ತೀರಿ	ಹೇಳ್ತೀರಿ

ಪ್ರ. ಕ.	ಕೋ. ಕ.	ಪ್ರ. ಕ.	ಕೋ. ಕ.
ಹೇಳುತ್ತಾರೆ	ಹೇಳ್ತಾರೆ	ಹೇಳುತ್ತೇನೆ	ಹೇಳ್ತೇನೆ
ಹೇಳುತ್ತದೆ	ಹೇಳ್ತದೆ	ಹೇಳುತ್ತೇವೆ	ಹೇಳ್ತೇವೆ
ಹೇಳುವನು	ಹೇಳಿಯಾನು	ಹೇಳುವೆ	ಹೇಳೀಯು
ಹೇಳುವಳು	ಹೇಳಿಯಾಳು	ಹೇಳುವಿರಿ	ಹೇಳೀರಿ
ಹೇಳುವರು	ಹೇಳಿಯಾರು	ಹೇಳುವೆನು	ಹೇಳಿಯೇನು
ಹೇಳುವುದು	ಹೇಳೀತು	ಹೇಳುವೆವು	ಹೇಳಿಯೇವು

ಬೇರೆ ಕೆಲವು ಕ್ರಿಯಾರೂಪಗಳು :

ಹೋಗಲು	ಹೋಗೆಕ್ಕೆ	ಹೋಗಬೇಡ	ಹೋಗ್ಬೇಡ
ನೋಡಲು	ನೋಡೆಕ್ಕೆ	ನೋಡಬೇಡ	ನೋಡ್ಬೇಡ
ಹಾರಲು	ಹಾರೆಕ್ಕೆ	ಹಾರಬೇಡ	ಹಾರ್ಬೇಡ
ಹೋಗಬೇಕು	ಹೋಗ್ಬೇಕು	ಹೋದನಂತೆ	ಹೋದ್ನಂತೆ
ನೋಡಬೇಕು	ನೋಡ್ಬೇಕು	ಬರುತ್ತಾನಂತೆ	ಬರ್ತಾನಂತೆ

ಹೀಗೆ ಕೋಟೆ ಕನ್ನಡವು ಪ್ರಮಾಣಕನ್ನಡಕ್ಕೆ ಹತ್ತಿರವಾಗಿದೆ.

ಓಜಿ ಕನ್ನಡ

ಕಾಸರಗೋಡು ತಾಲೂಕಿನ ಕುಂಡಂಕೋಳಿ, ಕುಂಟಾರು, ಅಡೂರು, ಮುಳಿಯಾರು, ಎಡನೀರು ಮತ್ತು ಕಾಸರಗೋಡು ಪಟ್ಟಣದ ಪಿಲಿಕ್ಕುಂಜೆ, ಕೊರಕ್ಕೋಡು ಮುಂತಾದೆಡೆಗಳಲ್ಲಿ ಹೆಚ್ಚಾಗಿ ವಾಸಮಾಡಿಕೊಂಡಿರುವ ಶಿವಾಜಿ ಕ್ಷತ್ರಿಯರ ಮನೆಮಾತು ಕನ್ನಡ. ಇವರ ಮೂಲಸ್ಥಾನ ಮಹಾರಾಷ್ಟ್ರವೆಂದೂ ಕೆಲವು ತಲೆಮಾರುಗಳ ಹಿಂದೆ ಇವರ ಮಾತೃಭಾಷೆ ಮರಾಠಿಯಾಗಿತ್ತೆಂದೂ ತಿಳಿದುಬರುತ್ತದೆ. ಹೆಸರಿನ ಕೊನೆಯಲ್ಲಿ 'ಓಜಿ' ಎಂದು ಬರುವುದರಿಂದ ಇವರನ್ನು ಓಜಿಗಳೆಂದು ಕರೆಯುತ್ತಾರೆ. ಓಜಿಕನ್ನಡ ಕೋಟೆಕನ್ನಡಕ್ಕೆ ತೀರ ಹತ್ತಿರವಾಗಿದೆ. ಕೆಲವೊಂದು ವಿಚಾರಗಳಲ್ಲಿ ಅದಕ್ಕಿಂತ ಭಿನ್ನವಾಗಿಯೂ ಇದೆ.

ಓಜಿ ಕನ್ನಡದ ಕೆಲವು ಶಬ್ದಗಳು :

ಪ್ರ. ಕ.	ಓ. ಕ.	ಪ್ರ. ಕ.	ಓ. ಕ.
ಹೊಸ್ತಿಲು	ಮೆಟ್ಟಿಗೆ	ಅಂಗಳ	ಅಂಗ್ಳ
ಮೆಟ್ಟಿಲು	ಮೆಟ್ಟಿಗೆಕಲ್ಲು	ಬಯ್	ಬಯ್
ನರಿ	ಕುದ್ಕ (ತುಳು)	ಆಕಳಿಸು	ಬಾಯಿಕಳೆ
ಹುಲಿ	ನರಿ (ಮಲಯಾಳ)	ಕವುಚು	ಕಮ್ಚು
ತುರಿಮಣೆ	ಹೆರ್ಮಣೆ		

ಕೆಲವು ತಿಂಡಿ ತಿನಿಸುಗಳನ್ನು ಹೇಳುವ ಪದಗಳು : ಕಲ್ತಪ್ಪ (ಮಲೆಯಾಳ), ಕೊಟ್ಟೆ, ಮುಳ್ಕ, ಒಡೆ ಇತ್ಯಾದಿ. ಬೆಂಡೆಮಿಡಿ (ಬೆಂಡೆಕಾಯಿ), ಬದ್ನೆಮಿಡಿ (ಬದನೆ ಕಾಯಿ), ಅಲ್ಸಂಡೆ ತಿರಿ (ಅಲಸಂಡೆ), ಪಟ್ಲಕಾಯಿ (ಪಡುವಲಕಾಯಿ) ಮೊದಲಾದುವು ತರಕಾರಿಗಳನ್ನು ಹೇಳುವ ಪದಗಳು.

ಸಂಬಂಧವಾಚಕಗಳು ಪ್ರಮಾಣಕನ್ನಡದಂತೆಯೇ ಇವೆ. ಬಾಬ (ಚಿಕ್ಕಪ್ಪ), ದೊಡ್ಡ (ದೊಡ್ಡಪ್ಪ) ಎಂಬ ಪದಗಳೂ ಬಳಕೆಯಲ್ಲಿವೆ.

ಲಿಂಗ, ವಚನ ಮತ್ತು ವಿಭಕ್ತಿಗಳು ಪ್ರಮಾಣ ಕನ್ನಡದಂತೆಯೇ ಇವೆ.

ದ್ವಿತೀಯೆಗೆ ಚತುರ್ಥಿಯ ಪ್ರಯೋಗ ಹೆಚ್ಚು ರೂಢವಾಗಿದೆ.

ಪ್ರ. ಕ : ನಾನು ಅವಳನ್ನು ನೋಡಿದೆ.
ಓ. ಕ : ನಾನು ಅವಳಿಗೆ ನೋಡಿದೆ.
ಪ್ರ. ಕ : ನನ್ನ ಮಗನನ್ನು ಪೇಟೆಗೆ ಕಳುಹಿಸಿದ್ದೇನೆ.
ಓ. ಕ : ನನ್ನ ಮಗನಿಗೆ ಪೇಟೆಗೆ ಕಳ್ಸಿದ್ದೇನೆ.

ಹೆಚ್ಚಾಗಿ ತೃತೀಯಾ ವಿಭಕ್ತಿಪ್ರತ್ಯಯವಾಗಿ 'ಇಂದ'ವನ್ನು ಬಳಸುತ್ತಾರೆ.

ಹುಡುಗ ಕತ್ತಿಯಿಂದ ಮರ ಕಡೀತ್ತಾನೆ.
ಅಪ್ಪ ಮಗನಿಗೆ ಕೋಲ್ನಿಂದ ಹೊಡ್ಡ.

ಸರ್ವನಾಮಗಳು ಪ್ರಮಾಣಕನ್ನಡದಂತೆಯೇ ಇದ್ದು ಅವನು, ಇವನು ಈ ಎರಡು ಮಾತ್ರ ಅವ್ನೆ, ಇವ್ನೆ ಎಂದಿವೆ. ಕ್ರಿಯಾಪದಗಳು ಕೋಟೆಕನ್ನಡದಂತೆಯೇ ವರ್ತಿಸುತ್ತವೆ.

ಮಾದಿಗ ಕನ್ನಡ

ಕಾಸರಗೋಡು ತಾಲೂಕಿನ ಕೂಡ್ಲು, ಪಿಲಾಂಕಟ್ಟೆ, ಪಟ್ಲ, ಮುಳ್ಳೇರಿಯ, ಕುಂಟಾರು, ತೆಕ್ಕಿಲು, ಜೋವಿಕ್ಕಾನ, ಉಪ್ಪಳ, ಬಾಡೂರು ಮುಂತಾದೆಡೆಗಳಲ್ಲಿ ನೆಲೆ ನಿಂತಿರುವ ಮಾದಿಗರ ಮಾತೃಭಾಷೆ ಕನ್ನಡ. ಚರ್ಮ ಮತ್ತು ಸುಣ್ಣದ ಕೆಲಸವನ್ನು ಮಾಡುವ ಈ ವರ್ಗದವರಲ್ಲಿ ಹೆಚ್ಚಿನವರು ಅವಿದ್ಯಾವಂತರಾಗಿರುವುದರಿಂದ ಇವರ ನುಡಿ ಬಾಹ್ಯಪ್ರಭಾವಕ್ಕೆ ಅಷ್ಟಾಗಿ ಸಿಲುಕಿಲ್ಲ.

ಮಾದಿಗ ಕನ್ನಡದ ಕೆಲವು ವಿಶಿಷ್ಟ ಪದಗಳು : ಕಿಮಿ (ಕಿವಿ), ಹೌವು (ಹಾವು), ಗೌಯಿ (ಗಾಯ), ಮುಂಡ್ಲಿ (ಮುಂಡೆಲಿ-ತುಳು), ಆಯಿತ್ವಾರ (ಆದಿತ್ಯವಾರ), ಸನಿವಾರ (ಶನಿವಾರ), ಬೇಸ್ವ್ವಾರ (ಬೃಹಸ್ಪತಿವಾರ), ಅಸರೊತ್ತು (ಅಸರ ಹೊತ್ತು-ಸುಮಾರು ಸಂಜೆ ನಾಲ್ಕು ಗಂಟೆಯ ಸಮಯ), ಕಸಾಲೆ (ಕುರ್ಚಿ), ಕೊಬ್ಲ (ಕಬ್ಬಿಣ), ಕುರ್ಸು

(ಕುರ್ಚಿ), ಓಡಿ (ಪೊರಕೆ), ಅರ್ಬೆ (ಅರಿವೆ), ಚಾಳಿ (ಗುಬ್ಬಚ್ಚಿ), ಗೂಟುಗೇಣ್ಸು (ಮರ ಗೆಣಸು), ಜಿಗುಟು (ಚಿವುಟು), ಕೊಪ್ಪರ ಸುಂಟಿ (ದೊಡ್ಡ ಚೇಳು), ಗೋಚು (ಬಾಚು), ದೀಪ ಕೆಡ್ಸು (ದೀಪ ನಂದಿಸು), ದೀಪ ಹೊಚ್ಚು (ದೀಪ ಹೊತ್ತಿಸು), ಬೆಂಕಿ ಹೊಚ್ಚು (ಬೆಂಕಿ ಹಚ್ಚು), ರೊಟ್ಟಿ ಸುಡು, (ರೊಟ್ಟಿ ಬೇಯಿಸು), ಬೆಣ್ತಕ್ಕಿ (ಬೆಳ್ತಿಗೆ ಅಕ್ಕಿ) ಇತ್ಯಾದಿ.

ಪದಾರ್ಥಗಳನ್ನು ಹೇಳುವ ಪದಗಳು: ಪಾರ್ತ (ಪದಾರ್ಥ), ಮೇಲಾಗ್ರ (ಮೇಲೋಗರ), ಚಟ್ನಿ, ಮುದ್ದೆ, ನೀರು (ಮುದ್ದೆ ಪಾರ್ತ, ನೀರು ಪಾರ್ತ) ಇತ್ಯಾದಿ.

ತರಕಾರಿಗಳ ಹೆಸರು: ಸೌಂತೆಕಾಯ್, ಅಲಸೊಂಡೆ, ಹಾಲ್ಸೊರೆ, ಬೆಂಡೆಕಾಯ್, ಪಟ್ಲಕಾಯ್ ಇತ್ಯಾದಿ.

ಚಪ್ಪಲಿ ಹೊಲಿಯುವ ವೃತ್ತಿಯ ಕೆಲವು ಉಪಕರಣಗಳು: ಉಳಿ, ರೊಂಪಿಗೆ, ಹೊಲಿಗೇಂದಿ, ಕೊಡ್ತಿ, ಕೊಕ್ಕೆ ಉಳಿ, ಇತ್ಯಾದಿ.

ಸಂಬಂಧವಾಚಕಗಳು: ಅವ್ವ, ಅಯ್ಯ, ಅಕ್ಕ, ಅಣ್ಣ, ತಮ್ಮ, ತಂಗಿ, ಮಾವ, ಅತ್ತೆ, ಬಾಮೈದ, ಬಾವ ಇತ್ಯಾದಿ.

ಸ್ತ್ರೀ ಪ್ರತ್ಯಯ:

ಹೆಚ್ಚು ಬಳಕೆಯಲ್ಲಿರುವ ಸ್ತ್ರೀ ಪ್ರತ್ಯಯ 'ತ್ತಿ'. ಉದಾ: ಬಿಲ್ಲೊತ್ತಿ, ಹೊಲ್ತಿ, ಕೊರಗ್ತಿ, ಮದುವಳ್ತಿ ಇತ್ಯಾದಿ.

ವಿಭಕ್ತಿ:

ವಿಭಕ್ತಿ	ಪ್ರತ್ಯಯ	ಪ್ರಯೋಗ
ಪ್ರ.	φ	ಅವ್ವ ಬಂದೈತೆ.
		ದನ ಹ್ಹಾಯ್ತು.
ದ್ವಿ.	ಗೆ, ಕ್ಕೆ, φ	ಅವ್ನಿಗೆ ನಾಯಿ ಕಚ್ತು.
		ಅವ್ನ ಮರ ಹತ್ತಾನೆ.
ತೃ.	ಆಗೆ, ಅಲಿ	ಅವ್ನಿಗೆ ಕೈಯಾಗೆ ಒಂದ ಹೊಡ್ದೆ.
ಚ.	ಗೆ, ಕ್ಕೆ	ಕಾಲ್ಗೆ ಗ್ಗಾಯ ಆಗ್ಯೆತೆ.
		ದನಕ್ಕೆ ಅಕ್ಕಚ್ಚು ಕೊಡು.
ಪಂ.	ಇಂದ	ಮರ್ದಿಂದ ಹಣ್ಣು ಬಿದ್ದಾತು.
ಷ.	ಅ	ಬ್ರಾಮ್ಮರ ಗದ್ದೆ, ಎಂಕ್ಟನ ಬಸ್ಸು, ಕೊಬ್ಬದ ಕಸಾಲೆ.
ಸ.	ಆಗೆ, ಅಲಿ	ತಲೆಯಲಿ ಹುಣ್ಣು ಉಂಟು.
		ಮೈಯಾಗೆ ಗ್ಗಾಯ ಉಂಟು.

ಸರ್ವನಾಮ : ನಾನು, ನೀನು, ನಾವು, ನೀವು, ಅವೆ, ಇವೆ, ಅವ್ಳು, ಇವ್ಳು, ಅವ್ರು, ಇವ್ರು, ಅದು, ಇದು ಇತ್ಯಾದಿ.

ಕ್ರಿಯಾಪದ– ಭೂತಕಾಲ :

ಪ್ರ. ಕ.	ಮಾ. ಕ.	ಪ್ರ. ಕ.	ಮಾ. ಕ.
ಬಂದಿದ್ದಾನೆ	ಬಂದಿದಾನೆ	ಬಂದಿದೆ	ಬಂದೆತೆ
ಬಂದನು	ಬಂದ	ಬಂದಿತು	ಬಂತು
ಹೋಗಿದ್ದಾನೆ	ಹೋಗಿದಾನ	(ನೀನು) ಬಂದೆ	ಬಂದಿ
ಬಂದಿದ್ದಾಳೆ	ಬಂದಿದಾಳೆ	ಬಂದಿರಿ	ಬಂದ್ರಿ
ಬಂದಳು	ಬಂದ್ಳು	ಬಂದೆನು	ಬಂದೆ
		ಬಂದೆವು	ಬಂದ್ವು

ವರ್ತಮಾನ ಭವಿಷತ್ :

ಬರುತ್ತಾನೆ	ಬರ್ತಾನೆ	ಬರುತ್ತಿ	ಬರ್ತಿ
ಬರುತ್ತಾಳೆ	ಬರ್ತಾಳೆ	ಬರುತ್ತೀರಿ	ಬರ್ತೀರಿ
ಬರುತ್ತದೆ	ಬರ್ತದೆ	ಬರುತ್ತೇನೆ	ಬರ್ತೇನೆ
ಬರುತ್ತಾರೆ	ಬರ್ತಾರೆ	ಬರುತ್ತೇವೆ	ಬರ್ತೇವೆ
ಬರುತ್ತವೆ	ಬರ್ತವೆ		
ಬರುವನು	ಬಂದಾನು	ಬರುವೆ	ಬಂದೀಯು
ಬರುವಳು	ಬಂದಾಳು	ಬರುವಿರಿ	ಬಂದೀರಿ
ಬರುವುದು	ಬಂದಾತು	ಬರುವೆನು	ಬಂದೇನು
ಬರುವರು	ಬಂದಾರು	ಬರುವೆವು	ಬಂದೇವು
ಬರುವುವು	ಬಂದಾವು		

ಮಾದಿಗ ಕನ್ನಡದಲ್ಲಿ ಗೌರವಾರ್ಥದ ಸ್ತ್ರೀಲಿಂಗ ಕ್ರಿಯಾಪದವೊಂದಿದೆ.

ಅಮ್ಮ ಬಂದಿದ್ದಾಳೆ ಅವ್ವ ಬಂದೈತೆ
ಅಕ್ಕ ಹೋಗಿದ್ದಾಳೆ ಅಕ್ಕ ಹೋಗೈತೆ
ಅಮ್ಮ ಹೋಗುತ್ತಾಳೆ ಅವ್ವ ಹೋಗ್ತೀತು ಇತ್ಯಾದಿ.

ಒಟ್ಟಿಗೆ ಮಾದಿಗ ಕನ್ನಡ ತನ್ನದೇ ಆದ ವೈಶಿಷ್ಟ್ಯಗಳನ್ನುಳಿಸಿಕೊಂಡು ಅಭ್ಯಾಸ ಯೋಗ್ಯವಾಗಿದೆ.

ಒಂದೆಯೇ ಇಲ್ಲಿನ ನಿವಾಸಿಗಳಾಗಿದ್ದ ಅಗಸರ, ಕ್ಷೌರಿಕರ ಮನೆಮಾತು ತುಳು ಇಲ್ಲವೆ ಮಲೆಯಾಳ. ಕನ್ನಡ ಮನೆಮಾತಾಗಿರುವ ಕ್ಷೌರಿಕರು ಮತ್ತು ಅಗಸರು

ಹೊರಗಿನಿಂದ ಬಂದವರು. ಅವರಿಲ್ಲಿಗೆ ಕೆಳದಿಯ ನಾಯಕರೊಂದಿಗೆ ಬಂದವರೆಂದು ಪ್ರತೀತಿ. ಬಂದಡ್ಕದ ಗೌಡಕನ್ನಡ, ದಕ್ಷಿಣಕನ್ನಡದ ಸುಳ್ಯಪಾಲ್ಲೂರುಗಳ ಗೌಡ ಕನ್ನಡಕ್ಕೆ ಸಮೀಪವರ್ತಿ.

ಕೇರಳದ ಕನ್ನಡಮಾಧ್ಯಮದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಕನ್ನಡದಲ್ಲಿ ಅನಾಯಾಸವಾಗಿ ಕೆಲವು ಮಲೆಯಾಳ ಶಬ್ದಗಳು ಪ್ರವೇಶಿಸಿವೆ. ಆ ಪ್ರವೇಶವೂ ಪ್ರತ್ಯೇಕ ದಾರಿಯಲ್ಲಿ ನಡೆದಿದೆ. ಕೇರಳ ರಾಜ್ಯದ ವಿದ್ಯಾಇಲಾಖೆ ಕನ್ನಡ ವಿದ್ಯಾರ್ಥಿಗಳಿಗಾಗಿ ಮಲಯಾಳ ಮಾಧ್ಯಮದ ವಿಜ್ಞಾನ, ಸಾಮಾಜಿಕ ಅಧ್ಯಯನ ಮತ್ತು ಗಣಿತಶಾಸ್ತ್ರಗಳ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸುವಲ್ಲಿ ಅಜ್ಞಾತವಾಗಿ ಮಲೆಯಾಳ ಶಬ್ದಗಳು ಆ ಭಾಷಾಂತರ ಕನ್ನಡದಲ್ಲಿ ಪ್ರವೇಶಪಡೆದಿವೆ. ವಿದ್ಯಾರ್ಥಿಗಳು ಆ ಶಬ್ದಗಳನ್ನೇ ಮುಂದುವರಿಸುವುದು ಸ್ವಾಭಾವಿಕವಷ್ಟೇ.

ಅಂತಹ ಕೆಲವು ಪದಗಳು : ತಾರತಮ್ಯೇನ (ತರತಮ ಸೂಚಕ), ಕಾಲಘಟ್ಟ (ಪರಿಸ್ಥಿತಿ), ಭರಣ ಘಟನೆ (Constitution), ಭರಣ (ಆಡಳಿತೆ), ರಾಷ್ಟ್ರೀಯ (ರಾಜಕೀಯ), ಜನಾಧಿಪತ್ಯ (ಪ್ರಜಾಪ್ರಭುತ್ವ), ಜೀವಿತ (ಜೀವನ) ಇತ್ಯಾದಿ. ಕಾಸರಗೋಡಿನ ವ್ಯಾವಹಾರಿಕ ಕನ್ನಡದಲ್ಲೂ ಇತ್ತೀಚೆಗೆ ಮಲಯಾಳ ಶಬ್ದಗಳು ತಕ್ಕ ಪ್ರಮಾಣದಲ್ಲಿ ಸೇರುತ್ತಿವೆ. ಕೆಲವೊಮ್ಮೆ ಶಬ್ದ ಸಂಸ್ಕೃತದ್ದಾದರೂ ಮಲಯಾಳದಲ್ಲಿ ಅದರ ಅರ್ಥವೇನೋ ಅದೇ ಕನ್ನಡದಲ್ಲೂ ಬರುತ್ತದೆ. ಸಮರ (ಮುಷ್ಕರ), ರಕ್ಷೆ (ರಕ್ಷಣೆ), ಪ್ರಸಂಗ (ಭಾಷಣ), ಮತಪ್ರಸಂಗ (ಧಾರ್ಮಿಕ ಪ್ರವಚನ), ಕುಡಿಕಿಡಪ್ಪು (ಗೇಣಿದಾರಿಕೆ), ಸಂಭವ (ಘಟನೆ), ಅವಸಾನ (ಕೊನೆ), ಸೇವನವಾರ (ಸೇವಾಸಪ್ತಾಹ) ಇತ್ಯಾದಿ ಅಂತಹ ಶಬ್ದಗಳಲ್ಲಿ ಕೆಲವು.

ಕೇರಳದ ವ್ಯಾವಹಾರಿಕ ಕನ್ನಡದ ಹಾಗೂ ಮೇಲೆ ಹೇಳಿದ ಎಲ್ಲ ಸಾಮಾಜಿಕ ಪ್ರಭೇದಗಳ ಸರಿಯಾದ ಅಭ್ಯಾಸ ನಡೆಯಬೇಕು. ಆಗಷ್ಟೇ ಕನ್ನಡ ಭಾಷೆಯ ಎಷ್ಟೋ ವೈಶಿಷ್ಟ್ಯಗಳು ಬೆಳಕಿಗೆ ಬರಲು ಸಾಧ್ಯವಾದೀತು; ಕನ್ನಡ ಭಾಷಾವಿಜ್ಞಾನ ಶ್ರೀಮಂತವಾದೀತು.

● ●

ಆಂಧ್ರಪ್ರದೇಶದ ಕನ್ನಡ

● ಕೆ. ಎಂ. ಕೃಷ್ಣರಾವ್

ಆಂಧ್ರಪ್ರದೇಶ, ಸ್ವತಂತ್ರಭಾರತಗಣರಾಜ್ಯದ ಹದಿನೇಳು ರಾಜ್ಯಗಳಲ್ಲಿ ದಕ್ಷಿಣ ವಲಯದ ನಾಲ್ಕು ರಾಜ್ಯಗಳಲ್ಲಿ ಒಂದಾಗಿದ್ದು, ದಕ್ಷಿಣಭಾರತದ ಪೂರ್ವ ತೀರದ ಮಧ್ಯಪ್ರದೇಶವಾಗಿದೆ.

ಆಂಧ್ರಪ್ರದೇಶದ ಪೂರ್ವಕ್ಕೆ ಬಂಗಾಳಕೊಲ್ಲಿ, ದಕ್ಷಿಣಕ್ಕೆ ತಮಿಳ್ನಾಡು, ಪಶ್ಚಿಮಕ್ಕೆ ಕರ್ಣಾಟಕ – ಮಹಾರಾಷ್ಟ್ರ, ಉತ್ತರಕ್ಕೆ ಮಧ್ಯಪ್ರದೇಶ, ಓರಿಸ್ಸ ಮತ್ತು ಮಹಾರಾಷ್ಟ್ರ ದೇಶಗಳಿವೆ.

ಗೋದಾವರಿ, ಕೃಷ್ಣ, ತುಂಗಭದ್ರ, ಪೆನ್ನಾರ್, ಮುಂಜೀರ, ವಂಶಧಾರ (ಮುಚುಕುಂದ) ಇಲ್ಲಿ ಹರಿಯುವ ಮುಖ್ಯ ನದಿಗಳು. ಭತ್ತ, ಕಡ್ಲೇಕಾಯಿ (ಶೇಂಗಾ) ಮುಖ್ಯ ಬೆಳೆಗಳು. ಹೊಗೆಸೊಪ್ಪು, ಮೆಣಸಿನಕಾಯಿ, ದ್ವಿದಳಧಾನ್ಯಗಳು; ಕಬ್ಬು ಸಹ ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಾರೆ. ಬೋಧನದಲ್ಲಿರುವ 'ನೈಜಾಮ್ ಷುಗರ್ ಫ್ಯಾಕ್ಟರಿ' ಭಾರತದಲ್ಲೇ ದೊಡ್ಡದು ಎನ್ನುತ್ತಾರೆ.

ನಾಗಾರ್ಜುನಸಾಗರ, ನೈಜಾಮ್‌ಸಾಗರ, ತುಂಗಭದ್ರ, ಶ್ರೀಶೈಲ ಪೋಚಂಪಾಡು ಮೊದಲಾದ ಯೋಜನೆಗಳಿಂದ ನೀರಾವರಿ ಹೆಚ್ಚಾಗಿ ಭತ್ತ ಇಲ್ಲಿನ ಭೂಯಿಷ್ಠ ಬೆಳೆಯಾಗಿದೆ. ಆಂಧ್ರಪ್ರದೇಶ, ಭರತಖಂಡದ ಭತ್ತದ ಕಣಜ ಎನ್ನಿಸಿಕೊಂಡಿದೆ.

ಆಂಧ್ರಪ್ರದೇಶದ ಜನಸಂಖ್ಯೆ ೧೯೭೧ರ ಜನಗಣತಿಯ ಪ್ರಕಾರ ನಾಲ್ಕುಕೋಟಿ ಮೂವತ್ತನಾಲ್ಕು ಲಕ್ಷ.

ಹೈದರಾಬಾದ್-ಸಿಕಂದರಾಬಾದ್ ಅವಳಿನಗರ ಭಾರತದಲ್ಲೇ ಐದನೆಯದು. ಮುಂಬೈ, ಕಲ್ಕತ್ತ, ದೆಹಲಿ, ಮದ್ರಾಸ್ ಬಿಟ್ಟರೆ ಹೈದರಾಬಾದೇ ದೊಡ್ಡದು. ಶೇಕಡಾ ೮೦ರಷ್ಟು ಮಂದಿ ವ್ಯವಸಾಯವನ್ನೇ ಅವಲಂಬಿಸಿರುವರು. ಅಕ್ಷರಸ್ಥರ ಸಂಖ್ಯೆ ಶೇಕಡ ೨೫.

ಧಾರ್ಮಿಕದೃಷ್ಟಿಯಿಂದ, ಪ್ರಸಿದ್ಧ ದೇವಾಲಯಗಳ ದೃಷ್ಟಿಯಿಂದ ತಿರುಪತಿ, ಮಂತ್ರಾಲಯ, ಶ್ರೀಶೈಲ, ಅಹೋಬಲ, ಮಹಾನಂದಿ, ಭದ್ರಾಚಲ, ಸಿಂಹಾಚಲ,

ಮಂಗಳಗಿರಿ, ಅಲಂಪೂರ್ ಮೊದಲಾದುವು ಪ್ರಸಿದ್ಧ-ಪ್ರಮುಖ ಕೇಂದ್ರಗಳು. ತಿರುಪತಿ-ತಿರುಮಲ ಕ್ಷೇತ್ರ ಪ್ರಪಂಚದಲ್ಲೇ ದೊಡ್ಡದು ಎನ್ನಲಾಗಿದೆ. ವಾರ್ಷಿಕ ಐದುಕೋಟಿ ರೂಪಾಯಿಗಳ ವರಮಾನವಿರುವ ತಿಮ್ಮಪ್ಪನ ಹೆಸರಿನಲ್ಲಿ ತಿರುಪತಿಯಲ್ಲಿ ಒಂದು ವಿಶ್ವವಿದ್ಯಾಲಯವೇ ನಡೆಯುತ್ತಿದೆ.

ಆಂಧ್ರಪ್ರದೇಶದ ಒಳಗೆ ಮೂರು ಮುಖ್ಯ ಭಾಗಗಳಿವೆ.

ಕಡಲ ತೀರದ ಆಂಧ್ರಜಿಲ್ಲೆಗಳು : ಗುಂಟೂರು, ಶ್ರೀಕಾಕುಲಂ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಪ್ರಕಾಶಂ, ವಿಶಾಖಪಟ್ಟಣ, ನೆಲ್ಲೂರು ಮತ್ತು ಕೃಷ್ಣ ಎಂಬ ಎಂಟು ಜಿಲ್ಲೆಗಳು.

ರಾಯಲಸೀಮೆ : ಚಿತ್ತೂರು, ಕಡಪ, ಕರ್ನೂಲು ಮತ್ತು ಅನಂತಪುರ ಎಂಬ ನಾಲ್ಕು ಜಿಲ್ಲೆಗಳು.

ತೆಲಂಗಾಣ : ಹೈದರಾಬಾದ್, ಮಹಬೂಬನಗರ, ಮೇದಕ್, ನಿಜಮಾಬಾದ್, ಅದಿಲಾಬಾದ್, ಕರೀಂನಗರ, ಓರಂಗಲ್, ಖಮ್ಮಮ್ ಮತ್ತು ನಲ್ಗೊಂಡ ಎಂಬ ಒಂಬತ್ತು ಜಿಲ್ಲೆಗಳು.

ಒಟ್ಟಿಗೆ ೨೧ ಜಿಲ್ಲೆಗಳು ಸೇರಿ ಆಂಧ್ರಪ್ರದೇಶವೆಂಬ ಭಾಷಾಪ್ರಾಂತ ೧೯೫೬ ನವೆಂಬರ್ ಒಂದರಂದು ಅಸ್ತಿತ್ವಕ್ಕೆ ಬಂದಿತು.

ಆಂಧ್ರಪ್ರದೇಶದ ವಿಸ್ತಾರ ೨೭೫,೨೮೦ ಚದರ ಕಿಲೋಮೀಟರು.

ಹೈದರಾಬಾದ್ – ಸಿಕಂದರಾಬಾದ್ ಅವಳಿ ನಗರದಲ್ಲಿ ಸುಮಾರು ಒಂದು ಲಕ್ಷಕ್ಕೂ ಮಿಕ್ಕು ಕನ್ನಡಿಗರಿದ್ದಾರೆಂದು ಅಂದಾಜು ಮಾಡಲಾಗಿದೆ. ಕರ್ಣಾಟಕ ಸಾಹಿತ್ಯ ಮಂದಿರ, ಕನ್ನಡ ಮೈತ್ರೀಸಂಘ, ಕನ್ನಡ ನಾಟ್ಯರಂಗ, ಉಸ್ಮಾನಿಯಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗ, ಬಾಗಲಿಂಗಂಪಲ್ಲಿ ಮತ್ತು ಮಲ್ಕಾಜಿಗಿರಿಗಳಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ಬೃಂದಾವನ ಸನ್ನಿಧಾನ ಮೊದಲಾದ ಸಂಸ್ಥೆಗಳು ಈ ನಗರದ ಕನ್ನಡ ಚಟುವಟಿಕೆಯ ಕೇಂದ್ರಗಳಾಗಿವೆ. ಆಂಧ್ರಪ್ರದೇಶದ ಇತರ ಹಲವು ದೊಡ್ಡ ಸಣ್ಣ ಊರುಗಳಲ್ಲಿಯೂ ಅನೇಕ ಗ್ರಾಮಗಳಲ್ಲಿಯೂ ಕನ್ನಡಿಗರು ಅಲ್ಪಸಂಖ್ಯೆಯಲ್ಲಿ ಇದ್ದಾರೆ. ವಿಜಯವಾಡ, ವಿಶಾಖಪಟ್ಟಣ, ಅನಂತಪುರ, ಕಡಪ, ಕರ್ನೂಲು, ಚಿತ್ತೂರು, ತಿರುಪತಿ ಮುಂತಾದ ದೊಡ್ಡ ಊರುಗಳಲ್ಲಿ; ಗದ್ವಾಲ್, ಮಹಬೂಬನಗರ, ನಾರಾಯಣಪೇಟೆ, ಹಿಂದೂಪುರ, ಎಮ್ಮಿಗನೂರು, ಉರವಕೊಂಡ, ಪೆನುಕೊಂಡ, ಧರ್ಮಾವರ, ಬೋಧನ, ವೇಮುಲವಾಡ, ಆದವಾನಿ, ಮಂತ್ರಾಲಯ ಮುಂತಾದ ಸ್ಥಳಗಳಲ್ಲಿಯೂ ಕನ್ನಡಿಗರಿದ್ದಾರೆ.

ಹೈದರಾಬಾದ್ ಮುಂತಾದ ಪ್ರಸಿದ್ಧ ದೊಡ್ಡ ನಗರಗಳಲ್ಲಿ ಕರ್ಣಾಟಕದ ವಿಜಾಪುರ, ಧಾರವಾಡ, ಬೆಳಗಾವಿ, ರಾಯಚೂರು, ಗುಲ್ಬರ್ಗ, ಬೀದರ್, ಮಂಗಳೂರು,

ಕಾರವಾರ, ಬೆಂಗಳೂರು, ಮೈಸೂರು ಮುಂತಾದ ಭಾಗಗಳಿಂದಲೂ ತಮಿಳ್ನಾಡಿನ ಮದ್ರಾಸ್, ಕೊಯಿಮತ್ತೂರು, ತಂಜಾವೂರು, ಶ್ರೀರಂಗ, ಮಧುರೆ, ಮುಂತಾದ ಭಾಗ ಗಳಿಂದಲೂ ಬಂದ ಕನ್ನಡಿಗರು ಅಧಿಕ ಸಂಖ್ಯೆಯಲ್ಲಿದ್ದಾರೆ. ಉಳಿದ ಪ್ರದೇಶಗಳಲ್ಲಿ ಸ್ಥಳೀಯರೂ ಹೊರಗಿನಿಂದ ಬಂದು ನೆಲೆಸಿದವರೂ ಇದ್ದಾರೆ. ಹೊರಗಿನಿಂದ ಬಂದವ ರಲ್ಲಿ ಬಹುಪಾಲು ವಿದ್ಯಾವಂತರೇ ಎನ್ನಬಹುದು, ಹಲವು ಉದ್ಯೋಗಗಳಲ್ಲಿ ನಿರತ ರಾಗಿರುವವರು ಇವರು.

ಈ ಭಾಗಗಳಲ್ಲೆಲ್ಲಾ ಮಾತನಾಡುವ ಕನ್ನಡ ಭಾಷೆಯ ಮೇಲೆ ಇತರ ಭಾಷೆ ಗಳ ಪ್ರಭಾವ ಆಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಉರ್ದು, ಮರಾಠಿ, ತೆಲುಗು ಭಾಷೆಗಳ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ಬಹುಮಂದಿಗೆ ಕನ್ನಡ ಮಾತನಾಡಲು ಮಾತ್ರ ಬರುತ್ತದೆ. ಇವರಿಗೆ ಕನ್ನಡ ಹಿಂದಿನಿಂದ ಬಂದ ಮಾತೃಭಾಷೆ. ಅದನ್ನು ಅವರು ಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ. ಆದರೆ ಓದಲೂ ಬರೆಯಲೂ ಕಲಿತಿಲ್ಲ. ಇಂಗ್ಲಿಷ್, ತೆಲುಗು ಭಾಷೆಗಳಲ್ಲಿ ವಿದ್ಯಾವಂತರಾದ ಕನ್ನಡಿಗರು ಕನ್ನಡ ವನ್ನು ಕಲಿತಿಲ್ಲ. ತೆಲುಗು ಲಿಪಿಯ ಮೂಲಕ ಕನ್ನಡವನ್ನು ಓದಿ ತಿಳಿಯಬಲ್ಲರು. ಅಂತಹ ಪುಸ್ತಕಗಳನ್ನು ಇವರು ಬಯಸುತ್ತಾರೆ; ಕೆಲವು ಹಾಗೂ ಇವೆ. ಲಗ್ನಪತ್ರಿಕೆ ಮುದ್ರಣಕ್ಕೆ, ಬಂಧುಗಳಿಗೆ ಬರೆಯುವ ಕಾಗದ ಮುಂತಾದುವಕ್ಕೆ ಕೂಡ ಅನೇಕರು ತೆಲುಗು ಲಿಪಿಯಲ್ಲಿ ಕನ್ನಡ ಭಾಷೆಯನ್ನು ಬಳಸುತ್ತಾರೆ! ಇಲ್ಲವೆ ಇಂಗ್ಲೀಷಿಗೆ ಶರಣುಹೋಗುತ್ತಾರೆ. ಹೈದರಾಬಾದಿನಂತಹ ಹಿರಿಯ ನಗರದಲ್ಲಿ ಸದ್ಯ ಒಂದೂ ಕನ್ನಡ ಮುದ್ರಣಾಲಯವಿಲ್ಲದಾಗಿದೆ. ಇದೂ ಈ ಸ್ಥಿತಿಗೆ ಕಾರಣವಿರಬಹುದು.

ಆಂಧ್ರಪ್ರದೇಶದ ಹಲವು ಸ್ಥಳಗಳಲ್ಲಿ ಕನ್ನಡ ಕಲಿಯಲು ಅವಕಾಶವಿದೆ. ರಾಯಚೂರು, ಗುಲ್ಬರ್ಗ, ಬೀದರ್ ಮೂರು ಜಿಲ್ಲೆಗಳು ನೈಜಾಮರ ಆಡಳಿತ ದಲ್ಲಿದ್ದಾಗ– ೧೯೫೬ ನವೆಂಬರ್ ಒಂದರ ವರೆಗೂ ಕನ್ನಡ ಇಲ್ಲಿನ ಒಂದು ಪ್ರಾದೇಶಿಕ ಭಾಷೆಯೇ ಆಗಿದ್ದಿತು. ಪ್ರಾದೇಶಿಕಭಾಷೆಗೆ ಆ ಕಾಲದಲ್ಲಿ ಸಂದಿದ್ದ ಸ್ಥಾನಮಾನ ಕನ್ನಡಕ್ಕೂ ಪ್ರಾಪ್ತವಾಗಿದ್ದಿತು. ಉಸ್ಮಾನಿಯ ವಿಶ್ವವಿದ್ಯಾಲಯ ಅರುವತ್ತು ವರ್ಷಗಳ ಹಿಂದೆ ಸ್ಥಾಪಿತವಾಗುವ ಮುಂಚೆಯೇ ಮದ್ರಾಸ ವಿಶ್ವವಿದ್ಯಾಲಯಕ್ಕೆ ಸೇರಿದ ಇಲ್ಲಿನ ಕಾಲೇಜುಗಳಲ್ಲಿ ಕನ್ನಡಕ್ಕೆ ಅವಕಾಶವಿದ್ದಿತು. ಈಗಲೂ ಬಿ. ಎ., ಬಿ. ಎಸ್‌ಸಿ., ಬಿ. ಕಾಂ ತರಗತಿಗಳಲ್ಲಿ ದ್ವಿತೀಯಭಾಷೆಯಾಗಿ ಕನ್ನಡ ಓದಲು ಅವಕಾಶವಿದೆ. ಬಿ. ಎ. ಪದವಿಗೆ ಕನ್ನಡವನ್ನು ಐಚ್ಛಿಕ ಭಾಷೆಯನ್ನಾಗಿ ತೆಗೆದುಕೊಳ್ಳ ಬಹುದು. ಡಿಪ್. ಓ. ಎಲ್., ಬಿ. ಓ. ಎಲ್. ಪರೀಕ್ಷೆಗಳಿಗೂ ಕನ್ನಡ ಓದಲು ಸಾಧ್ಯ ವಿದೆ. ಅಲ್ಲದೆ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕನ್ನಡ ವಿಭಾಗವೂ ಇದ್ದು ಇಲ್ಲಿ ಕನ್ನಡ ಎಂ. ಎ., ಎಂ. ಲಿಟ್., ಎಂ. ಫಿಲ್. ಮತ್ತು ಪಿಎಚ್. ಡಿ. ಪದವಿಗಳ ವ್ಯಾಸಂಗಕ್ಕೂ ಅವಕಾಶವನ್ನು ಕಲ್ಪಿಸಲಾಗಿದೆ. ಆಂಧ್ರಪ್ರದೇಶ ಸರಕಾರ

ನಡೆಸುವ ತೆಲುಗು ಅಕಾಡಮಿಯಲ್ಲಿ ಕನ್ನಡ ಮಾತೃಭಾಷೆಯಲ್ಲದವರಿಗೆ ಕನ್ನಡ ಕಲಿಸುವ ಡಿಪ್ಲೋಮಾ ಪರೀಕ್ಷೆಯ ಏರ್ಪಾಡು ಸಹ ಇರುತ್ತದೆ.

ಆಂಧ್ರಪ್ರದೇಶ ಸರಕಾರದ ವಿದ್ಯಾ ಇಲಾಖೆಯ ಅಧೀನದಲ್ಲಿ ಹೈದರಾಬಾದಿನಲ್ಲೂ ಇತರ ಹಲವು ಊರುಗಳಲ್ಲಿಯೂ ಇರುವ ಸಾರ್ವಜನಿಕ ಪುಸ್ತಕ ಭಂಡಾರಗಳಲ್ಲಿ ಕನ್ನಡ ವಿಭಾಗವಿದೆ. ಹೈದರಾಬಾದ ನಗರದಲ್ಲಿರುವ ಕೇಂದ್ರಗ್ರಂಥಾಲಯದ ಕನ್ನಡ ವಿಭಾಗ ಸ್ಪಷ್ಟವಾಗಿಯೇ ಬೆಳೆದಿದೆ.

ಹೈದರಾಬಾದ ನಗರದಲ್ಲಿ ನಾಲ್ಕು ಪ್ರೌಢ ಶಾಲೆಗಳಲ್ಲಿ ಕನ್ನಡ ಮಾಧ್ಯಮಕ್ಕೆ ಅವಕಾಶವಿದೆ. ಇಂಟರ್ ಮೀಡಿಯೇಟ್ ತರಗತಿಯಲ್ಲಿ ಕನ್ನಡ ಮಾಧ್ಯಮವುಂಟು. ಆದರೆ ಇಲ್ಲೆಲ್ಲ ವಿದ್ಯಾರ್ಥಿಗಳ ಸಂಖ್ಯೆ ವರ್ಷವರ್ಷವೂ ಕ್ಷೀಣಿಸುತ್ತ ಇದೆ.

ಆಂಧ್ರಪ್ರದೇಶದ ತೆಲಂಗಾಣ, ರಾಯಲಸೀಮೆಗಳ ಕೆಲಭಾಗಗಳು ಕರ್ಣಾಟಕದ ಗಡಿಯಲ್ಲಿ ಇವೆ. ಅನಂತಪುರ ಜಿಲ್ಲೆ ಬೆಂಗಳೂರಿಗೆ ಹೊಂದಿಕೊಂಡೇ ಇದೆ. ಆಂಧ್ರ ಪ್ರದೇಶದ ಅಧಿಕೃತವೂ ಪ್ರಮುಖವೂ ಆದ ತೆಲುಗುಭಾಷೆ, ದ್ರಾವಿಡ ಭಾಷೆಗಳಲ್ಲಿಯೇ ಒಂದಾದುದರಿಂದ ಕನ್ನಡಕ್ಕೆ ಸೋದರ ಸಂಬಂಧವುಳ್ಳದೇ ಆಯಿತು. ಒಬ್ಬಳೇ ತಾಯಿಯ ಇಬ್ಬರು ಮಕ್ಕಳು (ಅವಳಿ ಮಕ್ಕಳು ಎಂದೂ ಹೇಳುವುದುಂಟು) ಕನ್ನಡ ಮತ್ತು ತೆಲುಗು ಎನ್ನಬಹುದು.

ಕನ್ನಡ – ತೆಲುಗು ಭಾಷೆಗಳ ಲಿಪಿಗಳೂ ಅಷ್ಟೆ; ತುಂಬ ಸಾಮ್ಯವುಳ್ಳವು. ಮೂಲ ಒಂದೇ– ಬ್ರಾಹ್ಮೀಲಿಪಿ. ಅಷ್ಟೇ ಅಲ್ಲ ಬಹುಕಾಲ ಈ ಎರಡೂ ಭಾಷೆಗಳಿಗೆ ಒಂದೇ ಲಿಪಿ ಇದ್ದಿತು. ಮುದ್ರಣ ಆರಂಭವಾದಂದಿನಿಂದ, ಅಚ್ಚಿನ ಮೊಳೆಗಳನ್ನು ತಯಾರಿಸುವ ಕಾಲದಲ್ಲಿ ಕ್ರಮೇಣ ಇವು ಪ್ರತ್ಯೇಕವಾಗುತ್ತ ಬಂದುವಾದರೂ, ಈಗಲೂ ಎಷ್ಟೋ ಅಕ್ಷರಗಳಲ್ಲಿ ತುಂಬ ಸಾಮ್ಯವಿರುವುದನ್ನು ಗಮನಿಸಬಹುದು. ತೆಲುಗುಬಾರದ ಕನ್ನಡಿಗರೂ ಆ ಲಿಪಿಯನ್ನು ಹೆಚ್ಚು ಕಷ್ಟವಿಲ್ಲದೆ ಓದಬಲ್ಲರು. ಕನ್ನಡಬಾರದ ತೆಲುಗರೂ ಹಾಗೆಯೇ ಕನ್ನಡ ಲಿಪಿಯನ್ನು ಓದಲು ಸಾಧ್ಯ. ತೆಲುಗರ ಮುಖ್ಯ ಅಹಾರಧಾನ್ಯ ಅಕ್ಕಿಯಾದುದರಿಂದ ಅವರ ಅಕ್ಷರ ಅಕ್ಕೀಕಾಳಿನ ಆಕಾರದಂತೆ ಉದ್ದುದ್ದ ಇವೆ. ಕನ್ನಡಿಗರ ಮುಖ್ಯ ಆಹಾರಧಾನ್ಯ ಜೋಳವಾದುದರಿಂದ ಕನ್ನಡ ಅಕ್ಷರಗಳು ಜೋಳದ ಕಾಳಿನಂತೆ ಗುಂಡಾಗಿ ಸುಂದರವಾಗಿವೆ ಎಂದು ತೆಲುಗು ಲೇಖಕರೊಬ್ಬರು ಹೇಳಿದ್ದಾರೆ. ತೆಲುಗು ಅಕ್ಷರಗಳು ಎತ್ತರವಾಗಿ ಸೆಟೆದುಕೊಂಡಂತೆ ಇರುತ್ತವೆ. ಕನ್ನಡ ಅಕ್ಷರಗಳು ಬಾಗಿಕೊಂಡು ಸೌಮ್ಯವಾಗಿರುತ್ತವೆ ಎಂದು ಆಂಧ್ರದ ಮುಖ್ಯಮಂತ್ರಿಯಾಗಿದ್ದ ಶ್ರೀ ನಿಲಂ ಸಂಜೀವರೆಡ್ಡಿಯವರು ಹೇಳಿದ್ದರು.[೧]

೧. ಸಾಹಿತ್ಯಾವಲೋಕನ (ಪ್ರೊ. ಡಿ. ಕೆ. ಭೀಮಸೇನರಾವ್) ಪುಟ: ೧೪೬.

ಕನ್ನಡ ತೆಲುಗು ರಾಜ್ಯಗಳು ಸುಮಾರು ೧೨ನೆಯ ಶತಮಾನದ ಕೊನೆಯುವರೆಗೆ ಒಂದೇ ಸಾರ್ವಭೌಮತ್ವದ ಅಂಕೆಯಲ್ಲಿದ್ದವು ಎಂದು ಚರಿತ್ರೆ ಹೇಳುತ್ತದೆ. ಒಂದೇ ಆಡಳಿತ್ಕೂ ಅಧಿಕಾರವರ್ಗಕ್ಕೂ ಒಳಪಟ್ಟಿದ್ದುದರಿಂದ ಪರಸ್ಪರ ಸ್ವೀಕಾರ, ಆಚಾರ-ವಿಚಾರ ಭಾಷಾಸ್ವರೂಪಗಳಲ್ಲಿ ಕೊಳ್ಕೊಡೆ ಅನಿವಾರ್ಯವೇ ಆಗಿದೆ.

ಅನ್ಯಭಾಷೆಗಳ ಸಂಪರ್ಕದಿಂದ ಒಂದು ಭಾಷೆಯು ಶಬ್ದಕೋಶ ಹಿಗ್ಗುವುದು ಸಹಜವೇ ಆಗಿದೆ. ಭಾಷೆ ಬೆಳೆಯುವುದೆಂಬುದು ಅದರಿಂದಲೇ. ವಾಕ್ಯರಚನೆಯಲ್ಲೂ ಬದಲಾವಣೆಯಾಗಬಹುದು. ಭಾಷೆಯ ಜಾಯಮಾನವೆಂಬುದು ಅದರ ವಾಕ್ಯರಚನಾಕ್ರಮದಲ್ಲಿ ಇರುತ್ತದೆ. ಅನೇಕವೇಳೆ ಅದು ಸಂಪ್ರದಾಯಶೀಲ ಎಂಬುದೂ ಸುಳ್ಳಲ್ಲ. ಆದರೆ ಅನ್ಯಭಾಷಾ ಸಂಪರ್ಕದಿಂದ, ಪ್ರಭಾವದಿಂದ ಅದರಲ್ಲಿ ಕೊಂಚ ಬದಲಾವಣೆಯಾಗಬಹುದು. ಸಂಸ್ಕೃತ ಬಲ್ಲವರ ಕನ್ನಡ ಬರವಣಿಗೆಯಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದು. ವಾಕ್ಯವನ್ನು ಗಮನಿಸಿ :

"ಸೂರ್ಯನ ತಮ್ಮನಾದ ಅದಿತಿಯ ಮಗನಾದ ಹೆಸರಿನಿಂದ ಸವಿತೃ ಎಂತೆಂದು ಯಾವನು ಪ್ರಸಿದ್ಧನಾದನೋ, ಆತನು ಕೃಷ್ಣನ ದೆಸೆಯಿಂದ ಸತ್ಯಭಾಮೆಯ ಹೊಟ್ಟೆಯಲ್ಲಿ ಹೆಸರಿನಿಂದ ಭಾನು ಎಂತೆಂದು ಹುಟ್ಟಿದನು."[೨]

ಅನ್ಯಭಾಷಾಸಂಪರ್ಕದಿಂದ ಭಾಷೆಯ ಧ್ವನಿವ್ಯವಸ್ಥೆ ಪದರಚನೆಗಳೂ ಕೊಂಚ ಬದಲಾಗುವುದು ಸಾಧ್ಯ. ಹೊಸಧ್ವನಿಗಳು ಬಂದು ಸೇರಬಹುದು.

ವಿಷಯನಿವೇದನೆ, ಭಾವಾಭಿವ್ಯಕ್ತಿ ಭಾಷೆಯ ಮುಖ್ಯ ಗುರಿ ಮತ್ತು ಪ್ರಯೋಜನ. ಇದನ್ನು ಹೇಗೋ ಸಾಧಿಸಿದರೆ ಆಯಿತು ಎಂಬುದು ಸಾಮಾನ್ಯಜನರ ಸ್ವಭಾವ. ರೂಢಿಯಿಂದ ಹೆಚ್ಚು ಕಷ್ಟವಿಲ್ಲದೆ ಇದು ಸಾಧ್ಯವೂ ಆಗುತ್ತದೆ. ಭಾಷೆಯಲ್ಲಾಗುವ ಹಲವು ವ್ಯತ್ಯಾಸಗಳಿಗೆ ಸೌಲಭ್ಯಾಕಾಂಕ್ಷೆಯೇ ಮುಖ್ಯ ಕಾರಣ ತಾನೆ.

ಕನ್ನಡ–ತೆಲುಗು ಎರಡೂ ಭಾಷೆಗಳು ಜೀವಂತ ಭಾಷೆಗಳೇ. ಏಳೆಂಟು ಕೋಟಿ ಜನರು ಮಾತನಾಡುವ ಭಾಷೆಗಳಿವು. ಅನೇಕ ಕಾರಣಗಳಿಂದ ಕನ್ನಡಜನ ಆಂಧ್ರಪ್ರದೇಶದಲ್ಲಿ ಬಂದು ನೆಲೆಸಿದ್ದಾರೆ. ಅಥವಾ ಒಂದೆ ಕನ್ನಡ ಪ್ರದೇಶವಾಗಿದ್ದುದೇ ಈಗ ತೆಲುಗು ಪ್ರದೇಶವಾಗಿರಬಹುದು. ಕನ್ನಡ ಮಾತೃಭಾಷೆಯಾಗುಳ್ಳ ಜನರು ಆ ಭಾಗಗಳಲ್ಲಿ ಇದ್ದೇಇರುವರು. ಆಂಧ್ರದಲ್ಲಿರುವ ಅನೇಕ ಕನ್ನಡ ತಾಯಿಯ ಮಕ್ಕಳಿಗೆ ಕನ್ನಡ ಲಿಪಿ ಬರೆಯಲು ಬಾರದು. ಅವರು ಕನ್ನಡವನ್ನು ತೆಲುಗುಲಿಪಿಯ ಮೂಲಕ

೨. ಶ್ರೀ ಅಗ್ರಹಾರ ನಾರಾಯಣ ತಂತ್ರಿಯವರ ಕನ್ನಡ ಟೀಕಾಸಹಿತ ಶ್ರೀ ಮಹಾಭಾರತ ತಾತ್ಪರ್ಯ ನಿರ್ಣಯವು– ಪುಟ: ೪೪೪.

ಓದುವರು. ಆ ಬಗೆಯ ಅನೇಕ ಪುಸ್ತಕಗಳೇ ಅಚ್ಚಾಗಿವೆ. ಉದಾಹರಣೆಗೆ ಅನೇಕ ಹರಿದಾಸರ ಕೃತಿಗಳು ಮತ್ತು ಶ್ರೀ ಸಂಕರ್ಷಣ ಒಡೆಯರ ವಿಸ್ತಾರ ಟೀಕೆಯುಳ್ಳ ಶ್ರೀ ಹರಿಕಥಾಮೃತಸಾರವೆಂಬ ಕನ್ನಡ ಗ್ರಂಥ ಇತ್ಯಾದಿ. ಆಂಧ್ರ–ಕರ್ನಾಟಕ ರಾಜ್ಯಗಳ ಗಡಿಗಳಲ್ಲಿರುವವರಿಗೂ ಪರಸ್ಪರ ಭಾಷಾಸಂಪರ್ಕ ಅನಿವಾರ್ಯ. ಅದರಿಂದ ಪ್ರಭಾವವೂ ಆಗಿಯೇ ಆಗುತ್ತದೆ. ಪರಸ್ಪರ ಶಬ್ದಕೋಶದ ಬೆಳವಣಿಗೆ ಇದರಿಂದ ಆಗುವ ಒಂದು ಪ್ರಯೋಜನ ಎಂದೂ ಹೇಳಬಹುದು.

ಅದರಲ್ಲೂ ಬಲಿಷ್ಠಭಾಷೆಯ ಪ್ರಭಾವ ದುರ್ಬಲ ಭಾಷೆ– ಜನಾಂಗಗಳ ಮೇಲೆ ಆಗುವುದು ಅಧಿಕ; ಅದು ಸಹಜ. ಸಂಸ್ಕೃತಭಾಷೆಯ ಪ್ರಭಾವ ಹೀಗೆ ಕನ್ನಡದ ಮೇಲೆ ತುಂಬ ಆಗಿದೆ. ಅದು ಬೆಳೆದ ಬಲಿಷ್ಠ ಭಾಷೆಯ ಪರಿಣಾಮಕ್ಕೆ ಉದಾಹರಣೆಯಾದರೆ ರಾಜಕೀಯ ಅಧಿಕಾರದ ಕಾರಣದಿಂದ ಇಂಗ್ಲೀಷಿನ ಪ್ರಭಾವ ಕನ್ನಡದ ಮೇಲೆ, ಏಕೆ ಇಡೀ ಭರತಖಂಡದ ಎಲ್ಲ ಭಾಷೆಗಳ ಮೇಲೂ ಪ್ರಚಂಡವಾಗಿಯೇ ಆಗಿರುವುದನ್ನು ಚೆನ್ನಾಗಿ ಗಮನಿಸಬಹುದು. ಇಷ್ಟು ಪ್ರಭಾವ ತೆಲುಗಿನದು ಕನ್ನಡದ ಮೇಲೆ ಆಗಿಲ್ಲವೆಂದೇ ಹೇಳಬಹುದು. ತೆಲುಗು ರಾಜರು– ಓರಂಗಲ್ಲಿನ ಕಾಕತೀಯ ವಂಶದವರು ಕೆಲವು ಕನ್ನಡ ಪ್ರದೇಶಗಳನ್ನು ವಶಪಡಿಸಿಕೊಂಡಾಗ ತೆಲುಗಿನ ಪ್ರಭಾವ ಅಲ್ಲಿ ವಿಶೇಷವಾಗಿ ಆದುದಷ್ಟೇ ಅಲ್ಲ, ಊರುಗಳ ಹೆಸರುಗಳೂ ಹೋಗಿ ತೆಲುಗು ಹೆಸರುಗಳೇ ಆಗಿವೆ.

ತೆಲುಗು ಭಾಷೆಯಲ್ಲಿ ಸಾಹಿತ್ಯ ಪ್ರಾರಂಭವಾಗುವ ಕಾಲಕ್ಕೆ ಮುಂಚೆಯೇ ಕನ್ನಡದಲ್ಲಿ ಸಾಹಿತ್ಯಸೃಷ್ಟಿಯಾಗಿತ್ತು. ದೊರೆತಿರುವ ಕನ್ನಡದ ಪ್ರಥಮಶಾಸನ ಕ್ರಿ. ಶ. ೪೫೦ ರ ಹಲ್ಮಿಡಿ ಶಾಸನವಾದರೆ, ತೆಲುಗಿನದು ೬ ನೆಯ ಶತಮಾನದ್ದೇ ಮೊದಲನೆಯದು. ತೆಲುಗಿನಲ್ಲಿ ೧೧ ನೆಯ ಶತಮಾನದ ನನ್ನಯ್ಯಭಟ್ಟನೇ ಆದಿಕವಿ. ಕನ್ನಡದಲ್ಲಿ ೧೦ ನೆಯ ಶತಮಾನದ ಪಂಪನೇ ಆದಿಕವಿ. ರಾಜಕೀಯವಾಗಿ ತೆಲುಗು ೧೨ ನೆಯ ಶತಮಾನಾನಂತರವೇ ಪ್ರಾಶಸ್ತ್ಯ ಪಡೆಯಿತು ಎನ್ನುತ್ತಾರೆ. ಕನ್ನಡದಲ್ಲಿ ಆ ಹೊತ್ತಿಗೆ ಪ್ರೌಢಸಾಹಿತ್ಯದ ಕಾಲ ಮುಗಿದು. ಕ್ರಾಂತಿಕಾಲ ಪ್ರಾರಂಭವಾಗಿದ್ದಿತು. ತೆಲುಗು ಭಾಷೆಯಲ್ಲಿ ಸ್ವತಂತ್ರ ಗ್ರಂಥರಚನೆಯಾಗುವ ಹೊತ್ತಿಗಾಗಲೇ ಕನ್ನಡ ಭಾಷೆ ಪುಷ್ಟವಾಗಿ ಬೆಳೆದು ಅನೇಕ ಪ್ರೌಢಗ್ರಂಥಗಳು ಉದಯವಾಗಿದ್ದುವು. ಲಕ್ಷಣಶಾಸ್ತ್ರ ಗ್ರಂಥಗಳೂ ರಚನೆಯಾಗಿದ್ದುವು. ಶಬ್ದಭಂಡಾರ ಬೆಳೆದಿತ್ತು. ಆದ್ದರಿಂದಲೇ ಕನ್ನಡದ ಪ್ರಭಾವವೇ ತೆಲುಗು ಭಾಷೆಯ ಮೇಲೆ ಆಗುವುದು ಸಹಜವೇ ಆಗಿದ್ದಿತು. ಆ ಕಾರಣದಿಂದಲೇ ತೆಲುಗಿನ ಆದಿಕವಿ ನನ್ನಯ್ಯಭಟ್ಟನೇ ಅಲ್ಲದೆ ನನ್ನಿಚೋಡ ಮೊದಲಾದ ತೆಲುಗು ಕವಿಗಳು ಕನ್ನಡ ಕೃತಿಗಳಿಂದ ಉಪಕೃತರಾದರು– ಪ್ರಭಾವ ಹೊಂದಿದರು.

ಚಾರಿತ್ರಿಕವಾಗಿ ವಿಚಾರಮಾಡಿದರೆ ಆಂಧ್ರಪ್ರದೇಶದಲ್ಲಿ ಕನ್ನಡದ ತಿರುಳೇ ಇದ್ದಿತು ಎಂದು ಗೊತ್ತಾಗುತ್ತದೆ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಕಾಣುವ ಹಲವರು ಪ್ರಮುಖ ಕವಿಗಳು ಈಗಿನ ಆಂಧ್ರಪ್ರದೇಶಕ್ಕೆ ಸೇರಿದವರೇ ಆಗಿದ್ದಾರೆ. ಕನ್ನಡದ ಆದಿಕವಿ, ಅಗ್ರಕವಿ ಎಂದು ಹೆಸರಾಂತ ಆದಿಪಂಪ ಹುಟ್ಟಿದ್ದು ವೆಂಗಿಪೞುವಿನಲ್ಲಿ. ಇದು ಈಗಿನ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ವೇಮುಲವಾಡ. ಗೋದಾವರಿ, ಮುಚಕುಂದ (ಮೂಸಿ) ನದಿಗಳ ನಡುವಣ ನಾಡಿದು. ನಿಜಾಮಬಾದ್ (ಇಂದೂರು) ಜಿಲ್ಲೆಯ ಬೋಧನ, ಹೈದರಾಬಾದಿಗೆ ನೂರಿಪ್ಪತ್ತು ಮೈಲಿ ದೂರದಲ್ಲಿದೆ. ಅದು ಹಿಂದೆ ಚಾಲುಕ್ಯ ದೊರೆಗಳ ರಾಜಧಾನಿ. ಆ ವಂಶದ ಅರಿಕೇಸರಿಯ ಆಸ್ಥಾನ ಕವಿ, ದೊರೆಯ ಗೆಳೆಯ, ದಂಡನಾಯಕ ನಮ್ಮ ಆದಿಪಂಪ ಕವಿ-ಕಲಿ ಕವಿತಾಗುಣಾರ್ಣವ. ಇದಲ್ಲದೆ ಸಮಯಪರೀಕ್ಷೆ, ತ್ರೈಲೋಕ್ಯಚೂಡಾಮಣಿ ಕೃತಿಗಳನ್ನು ರಚಿಸಿದ ಬ್ರಹ್ಮಶಿವ ಹೈದರಾಬಾದ್ ಹತ್ತಿರವೇ ಇರುವ ಪಟನ್‌ಚರು (ಪೊಟ್ಟಲಕೆರೆ)ಯ ನಿವಾಸಿಯಾಗಿದ್ದನು. ನಾಗವರ್ಮ, ದುರ್ಗಸಿಂಹ, ಭೀಮಕವಿ, ಭಾಸ್ಕರ ಮೊದಲಾದವರೂ ಆಂಧ್ರ ಪ್ರಾಂತದವರಾಗಿದ್ದಾರೆ.

೧೫-೧೬ ನೆಯ ಶತಮಾನಗಳಲ್ಲಿ ವಿಜಯನಗರಸಾಮ್ರಾಜ್ಯ ಪರಿಸರದಲ್ಲಿ ಉಗಮಹೊಂದಿದ, ಹರಿದಾಸ ಸಂಕೀರ್ತನಸಾಹಿತ್ಯದ ಹೊನಲು ಮುಂದೆ ೧೭-೧೮ನೆಯ ಶತಮಾನಗಳಲ್ಲಿ ಹಿಂದಿನ ಹೈದರಾಬಾದ್ ಪ್ರಾಂತಕ್ಕೆ ಹರಿದು ಬಂದಿತೆಂಬುದು ಐತಿಹಾಸಿಕ ಸಂಗತಿ. ಹರಿಭಕ್ತಿಸುಧೆಯನ್ನು ಊಡಿ, ಸುಳಾದಿಗಳ ಸವಿಯನ್ನು ನೀಡಿ ಜನಮನವನ್ನು ಪಾವನಗೊಳಿಸಿದ ಈ ಸಾಹಿತ್ಯಪ್ರಪಂಚದ ಪ್ರಮುಖ ವ್ಯಕ್ತಿಗಳಲ್ಲಿ ಕೆಲವರು ಈಗಿನ ಆಂಧ್ರಪ್ರದೇಶಕ್ಕೆ ಸೇರಿದವರು.

"ಭಕ್ತಿಯಲಿ ಭಾಗಣ್ಣ", ತ್ರಿಕಾಲಜ್ಞಾನಿ, ಮಂತ್ರಸಿದ್ಧ, ಮಹಾತ್ಯಾಗಿ, ಬ್ರಹ್ಮಚಾರಿ ಎಂದು ಪ್ರಸಿದ್ಧರಾದ ಶ್ರೀ ಗೋಪಾಲದಾಸರು ಮಹಬೂಬ್‌ನಗರ (ಪಾಲ್ಮೂರು) ಜಿಲ್ಲೆಯ ಗದ್ವಾಲಿನ ಹತ್ತಿರದ ಉತ್ತನೂರಿನವರು. ಅಲ್ಲಿಗೆ ನಾಲ್ಕೈದು ಮೈಲಿ ದೂರದ ತುಂಗಭದ್ರಾ ತೀರದ ವೇಣಿಸೋಮಪುರದಲ್ಲಿದ್ದವರು ವಾಸುದೇವ ವಿಠಲಾಂಕಿತರಾದ ಶ್ರೀ ವ್ಯಾಸತತ್ತ್ವಜ್ಞರು. ಇವರ ವೃಂದಾವನ ಈಗಲೂ ಸಹ ಇಲ್ಲಿ ಪೂಜೆಗೊಳ್ಳುತ್ತ ಯಾತ್ರಾಸ್ಥಳವೆನಿಸಿದೆ.

ಗದ್ವಾಲಿಗೆ ಸಮೀಪದಲ್ಲೇ ಇರುವ ಮೊದಲಕಲ್ಲಿನವರು ಶ್ರೀ ಮೊದಲಕಲ್ ಶೇಷದಾಸರು. ಇವರು ಅಲ್ಲೇ ಹತ್ತಿರದ ಚಿಂತಲವೇಲಿಯಲ್ಲಿ ತಪಸ್ಸುಮಾಡಿ ಸಿದ್ಧಿ ಪಡೆದವರು. ಗದ್ವಾಲದಲ್ಲೇ ಇದ್ದವರು ಮತ್ತೊಬ್ಬ ಕೃತಿಕಾರ ಹರಿದಾಸರು ಶ್ರೀಪತಿ ವಿಠಲರು. ಹೆನ್ನೆರಂಗ ವಿಠಲಾಂಕಿತದಲ್ಲಿ ಹಲವು ಕನ್ನಡ ಕೃತಿಗಳನ್ನು ರಚಿಸಿದವರೊಬ್ಬರು ಅನಂತಪುರ ಜಿಲ್ಲೆಯಲ್ಲಿದ್ದವರು ಹೆನ್ನೆರಂಗವಿಠಲರು. ಕರ್ನೂಲು, ಕಡಪ,

ರಾಯಚೂರು, ನಾರಾಯಣಪೇಟೆ, ತಿರುಪತಿ, ಮಂತ್ರಾಲಯ, ಆದವಾನಿ, ಹಿಂದೂಪುರ, ಕಲ್ಯಾಣದುರ್ಗ ಮುಂತಾದ ಕಡೆಗಳಲ್ಲಿ ಅನೇಕ ಕನ್ನಡ ಕೃತಿಕಾರರಿದ್ದರು.

ಆಂಧ್ರಪ್ರದೇಶದಲ್ಲಿನ ಮುಖ್ಯ ಪ್ರಾದೇಶಿಕಭಾಷೆ ತೆಲುಗು ಎಂಬುದು ದಿಟವಾದರೂ, ಆಂಧ್ರದ ರಾಜಧಾನಿ ಹೈದರಾಬಾದ ನಗರದ ಸುತ್ತಲ ಪ್ರದೇಶಗಳಲ್ಲೆಲ್ಲ ಉರ್ದುವಿನ ಪ್ರಭಾವವೇ ಇದೆ.

ಈಗ 'ತೆಲಂಗಾಣ' ಎಂಬ ಹೆಸರಿನ ಒಂಬತ್ತು ಜಿಲ್ಲೆಗಳು ಹೆಸರೇ ಹೇಳುವಂತೆ ತೆಲುಗು ಪ್ರದೇಶ. ಆದರೆ ಅವುಗಳ ಹೆಸರುಗಳು ಹೀಗಿವೆ: ಹೈದರಾಬಾದ್• ಅದಿಲಾಬಾದ್, ನಿಜಾಮಾಬಾದ್, ಮಹಬೂಬ್‌ನಗರ, ಕರೀಂನಗರ, ಖಮ್ಮಮ್, ಮೇದಕ್, ಓರಂಗಲ್ ಮತ್ತು ನಲ್ಗೊಂಡ. ಭಾಗ್ಯನಗರ ಎಂದು ಹೆಸರಿದ್ದುದು ಹೈದರಾಬಾದ ಆಯಿತು. ಇಂದೂರು ನಿಜಾಮಾಬಾದ್ ಆಯಿತು. ಪಾಲ್ಮೂರು ಮಹಬೂಬ್ ನಗರ ಆಯಿತು. ಹೈದರಾಬಾದಿನಲ್ಲಿ ಹರಿಯುವ ಮೂಸಿ ನದಿಯ ಹಿಂದಿನ ಹೆಸರು ಮುಚಕುಂದ ನದಿ! ಅಂತೇ ಇಲ್ಲಿನ ಒಂದು ಭಾಗದ ಹೆಸರು ಶಾಲೆಬಂಡೆ ಎಂಬುದು ಪಾಹ ಅಲಿ ಬಂಡೆ ಆಗಿದೆ.

ನೈಜಾಮರ ಆಡಳಿತ ಬಹುಕಾಲ ಇಲ್ಲಿದ್ದುದೇ ಇದಕ್ಕೆ ಮುಖ್ಯ ಕಾರಣ ಎಂಬುದು ಸ್ಪಷ್ಟವೇ. ಹೈದರಾಬಾದ್ – ಸಿಕಂದರಾಬಾದ್ ಅವಳಿ ನಗರಗಳಲ್ಲಂತೂ ಉರ್ದು ಪ್ರಾಬಲ್ಯ ತುಂಬ. ತೆಲುಗು ಬಾರದಿದ್ದರೂ ಉರ್ದುವಿನ ಸಹಾಯದಿಂದ ಇಲ್ಲಿ ಜೀವಿಸಬಹುದು. ಅಂತೆಯೇ ಇಲ್ಲಿರುವ ಸುಮಾರು ಒಂದು ಲಕ್ಷ ಜನ ಕನ್ನಡಿಗರು ಮಾತನಾಡುವ ಭಾಷೆಯ ಮೇಲೆ ಉರ್ದು ಪ್ರಭಾವವೇ ಹೆಚ್ಚು ಕಾಣುತ್ತದೆ.

ಗೆಳೆಯ ಎಂಬುದಕ್ಕೆ ದೋಸ್ತ್ ಎಂದೇ ಹೇಳುತ್ತಾರೆ. ಮಕಾನದೊಳಗಿಲ್ಲ, ದುಕಾನಿಗೆ ಹೋಗ್ಯಾರೆ (ಮನೆಯೊಳಗಿಲ್ಲ-ಅಂಗಡಿಗೆ ಹೋಗಿದ್ದಾರೆ). ನಾಷ್ಟಾ ಆತೇನು? (ಬೆಳಗಿನ ಉಪಾಹಾರ ಆಯಿತೆ?), ಜರೂರ್ ಬರ್ತೀನಿ. ಬಿಲ್ಕುಲ್-ಟೀಕ್. ಬಜಾರಿಗೆ ಹೋಗಿ ಬರ್ತೀನಿ. ಏನ್ ಬ್ಹಾಳ ಗಡಬಡ್ (ಗಲಾಟೆ) ಅದೇ ಏನು? ಬಸ್ ಠಕ್ಕರ್ (ಡಿಕ್ಕಿ) ಹೊಡೀತು. ಚಮನ್(ಚೌಕ)ದೊಳಗೆ ಇಳಿದ್ಹೋದೆ. ಚೌಕಿದಾರನ ಪರವಾನಿಗಿ (ಅಪ್ಪಣೆ) ಇಲ್ಲದೆ ಒಳಗ್ಹೋಗೋಹಂಗಿಲ್ಲ. ಹವಾ ಗರಂ ಆಗೇದ ಮುಂತಾದ ಪ್ರಯೋಗಗಳು ಇಲ್ಲಿ ಸಾಮಾನ್ಯ.

ಸಂಖ್ಯಾವಾಚಕಗಳೂ ಕೂಡ ಅನ್ಯಭಾಷಾಪ್ರಭಾವಕ್ಕೆ ಪಕ್ಕಾಗಿವೆ. ಅಡೀಚ್ (ಎರಡೂವರೆ), ದೇಡ್ (ಒಂದೂವರೆ), ಸೌ (ನೂರು), ಹಜಾರ್ (ಸಾವಿರ), ಪಂದ್ರಾ (ಹದಿನೈದು), ಬೀಸ್ (ಇಪ್ಪತ್ತು), ಪಚ್ಚೀಸ್ (ಇಪ್ಪತ್ತೈದು), ಪಚಾಸ್ (ಐವತ್ತು)

ಮುಂತಾದುವು ನಿತ್ಯ ಕನ್ನಡಿಗರ ಬಾಯಿಂದಲೂ ಕೇಳುವುದು ಇಲ್ಲಿ ಸಾಮಾನ್ಯ; ಹೊಸಬರಿಗೆ ಪೇಚು.

ಉರ್ದು–ಪರ್ಷಿಯನ್ ಭಾಷೆಗಳ ಪ್ರಭಾವ ಕರ್ಣಾಟಕದಲ್ಲೂ ಆಗಿದೆ. ಸುಮಾರು ೧೩ನೆಯ ಶತಮಾನದಿಂದಲೇ ಕರ್ಣಾಟಕಕ್ಕೆ ಮುಸ್ಲಿಮರ ಸಂಪರ್ಕ ಪ್ರಾರಂಭವಾಯಿತು. ಅನೇಕ ವೇಳೆ ಅವರು ಆಡಳಿತ ನಡೆಸುವ ಪ್ರಭುಗಳೂ ಆಗಿದ್ದರು. ೧೩೪೮ ರಿಂದ ೧೭೦೦ರ ವರೆಗೆ ಕನ್ನಡನಾಡು (ಒಂದಲ್ಲ ಒಂದು ಭಾಗ) ಸುಲ್ತಾನರ ಆಡಳಿತದಲ್ಲಿತ್ತು. ಆಮೇಲೂ ಮೈಸೂರು ಹೈದರ್ ಮತ್ತು ಟೀಪು ತಂದೆಮಕ್ಕಳ ನವಾಬಗಿರಿಯ ಅಧೀನ ದಲ್ಲಿದ್ದಿತು. ಟೀಪುಸುಲ್ತಾನನ ಕಾಲದಲ್ಲಿ ಪರ್ಷಿಯನ್ ಭಾಷೆಯನ್ನೇ ಮೈಸೂರು ದೇಶದ ಆಡಳಿತಭಾಷೆಯನ್ನಾಗಿ ಮಾಡುವ ಪ್ರಯತ್ನವೂ ನಡೆಯಿತು. ತೆಲಂಗಾಣ ದಲ್ಲೂ ನೈಜಾಮರ ಆಡಳಿತ ಕಾಲದಲ್ಲಿ ಬಹುಕಾಲ–ಕ್ರಿ.ಶ. ೧೯೪೮ರ ವರೆಗೆ ಉರ್ದುವೇ ಸರ್ಕಾರಿ ಭಾಷೆಯಾಗಿದ್ದಿತು. ಈ ಕಾರಣಗಳಿಂದ ಈ ಪ್ರಾಂತಗಳ ಕನ್ನಡದ ಮೇಲೆ ಉರ್ದು ಪ್ರಭಾವ ಅಧಿಕವಾಗಿಯೇ ಆಯಿತು.

ಅನೇಕ ಉರ್ದು ಶಬ್ದಗಳು ಈ ಕಾರಣದಿಂದ ಕನ್ನಡದ ಕಣಜಕ್ಕೆ ಬಂದು ಸೇರಿದುವು. ಈಗಲೂ ಪ್ರಯೋಗದಲ್ಲಿವೆ. ಕೆಲವನ್ನು ಮಾತ್ರ ಇಲ್ಲಿ ಗಮನಿಸ ಬಹುದು.

ಫೌಜು, ಗುಲಾಮ, ಹಕ್ಕು, ಖುಷಿ, ಬಂದೀಖಾನೆ, ಬದನಾಮಿ, ದಿವಾಣ, ದಿವಾನ್‌ಖಾನೆ, ಚಾವಡಿ, ಝಗಳ, ರೋಖ, ಬಜಾರ, ಮುಸಲತ್, ಮೆಹರ್‌ಬಾನಿ, ಗರೀಬ, ಬಖೈರು, ಖೈಫಿಯತ್ತು, ಮುನ್ಷಿ, ದುರಸ್ತು, ನಜರು, ಫಕೀರ, ಲಷ್ಕರಿ, ದವಲತ್, ಪಿತೂರಿ, ಫಿರ್ಯಾದಿ, ಪುಕಾರ್, ಬೇಕೂಫ್, ಚಲಾವಣೆ, ಜಮಾವಣೆ, ಜಮಾಬಂದಿ, ವಾಯಿದೆ, ಫಾಯಿದೆ, ಲಡಾಯಿ, ಕಾಸ್ತಾರ, ಲಗಾಮು, ಜವಾಹಿರಿ, ಸಾಮಾನ್, ಚೌಕಶಿ, ಖೋಷಿಷ್, ವಸೂಲ್, ಲಾಯಕ್, ಪಂಚಾಯ್ತಿ, ಪಂಚ ನಾಮೆ, ಗಾಬರಿ, ಗುತ್ತಿಗೆ, ಜಮೀನ್, ಜಬರದಸ್ತ, ಇನಾಮತಿ, ರುಸುಮ್, ಹರಕತ್, ಗಿರಾಯ್ತಿ, ದರಬಾರ್, ಖಾವಂದ್, ಬಾಕಿ, ಕಛೇರಿ, ನಮಾಜು, ಹಾಜರು, ಕಾಯಿದೆ, ಧಫ್ತರ, ಪತಂಗ್, ಪೀಕ್‌ಪಾಸಿ, ಪಾನ್, ಜರದ ಟೋಪಿ, ಟೋಪಿಹಾಕು, ತರಕಾರಿ– ಹೀಗೆ ಈ ಪಟ್ಟಿಯನ್ನು ಬೆಳೆಸಬಹುದು. ಈ ಶಬ್ದಗಳೆಲ್ಲ ಕನ್ನಡಿಗರ ಪ್ರಯೋಗ ದಲ್ಲಿವೆ. ಇವುಗಳಲ್ಲಿ ಅನೇಕ ಶಬ್ದಗಳು ಕರ್ನಾಟಕದಲ್ಲಿನ ಕನ್ನಡದಲ್ಲೂ ರೂಢಿ ಯಲ್ಲಿವೆ. ಹೈದರಾಬಾದ ಮತ್ತು ಸುತ್ತಮುತ್ತಲು ಆಂಧ್ರಪ್ರದೇಶದ ಕನ್ನಡದಲ್ಲಿ ಇನ್ನೂ ವಿಶೇಷವಾಗಿಯೇ ಇವೆ.

ತೆಲುಗು ಭಾಷೆಯ ಪ್ರಭಾವದಿಂದಲೂ ಅನೇಕ ಶಬ್ದಗಳನ್ನು ಕನ್ನಡಿಗರು ಪ್ರಯೋಗ ಮಾಡುತ್ತಾರೆ. ಇದ್ದಿಲನ್ನು ಬಗ್ಗು ಎನ್ನುತ್ತಾರೆ. ಬೆರಣಿಯನ್ನು ಕುಳ್ಳು

(ಕುರುಳು) ಎನ್ನುತ್ತಾರೆ. ತಂಬಾಕು (ಹೊಗೆಸೊಪ್ಪು) ಎಂಬುದೂ ತೆಲಗು ಪ್ರಭಾವ ದಿಂದ ಪ್ರಯೋಗಕ್ಕೆ ಬಂದಿದೆ ಎನ್ನುತ್ತಾರೆ. ತೆಲುಗಿನಲ್ಲಿ ಹೊಗೆಸೊಪ್ಪಿಗೆ ಪೊಗಾಕು ಎನ್ನುತ್ತಾರೆ. ಇದು ಆಂಧ್ರಪ್ರದೇಶದಲ್ಲಿ ಭೂಯಿಷ್ಠವಾಗಿ ಬೆಳೆಯುತ್ತದೆ.

ಏತಕ್ಕೆ ಎಂದು ಕೇಳಲು ಎದಕ ಎನ್ನುತ್ತಾರೆ. ತೆಲುಗಿನ ಎಂದುಕು ಎಂಬುದೇ ಕನ್ನಡಿಗರ ಬಾಯಲ್ಲಿ ಎದಕ್ ಆಗಿದೆ. ತಮುಕು ಎಂಬುದು ತಮುಗೆ ಆಗಿದೆ. ತಲಕ್– (ತಕ್ ಆಗಿ) ಕನ್ನಡದಲ್ಲಿ ತನಕ ಎಂದು ಪ್ರಯೋಗದಲ್ಲಿದೆ ("ಭಾಗ್ಯದ ದೇವಿ ಬಾರೇ ನಮ್ಮನಿ ತನಕ").

ಇರುವೆಗೆ ಚೀಮ ಎನ್ನುತ್ತಾರೆ. ಪೊಗರು (ಅಹಂಕಾರ), ಏಮಾರು (ವೇಗ ಹೋಗು), ಚೆಂಬು (ತಂಬಿಗೆ), ದೊಬ್ಬು (ನೂಕು), ಬುರುಗಲು (ಪುರಿ), ಕಲೆಯೋಣ (ಭೇಟಿಯಾಗೋಣ), ಕಲ್ತೀವಿ (ಸೇರಿದ್ದೇವೆ–ಭೇಟಿಯಾಗಿದ್ದೇವೆ), ಬಂಗರ (ಬಂಗಾರಿ), ಗಿಲಗಂಜಿ (ಕರ್ಜೀಕಾಯಿ), ಬಂಡಿ (ಗಾಡಿ), ಬೀಯಂ ರವ (ಅಕ್ಕೀರವೆ), ದೋಮ (ಸೊಳ್ಳೆ), ರಾಯಿ (ಸಾಸವೆ), ಪಿಲ್ಲಿ (ಬೆಕ್ಕು), ಎಲುಕ (ಇಲಿ), ಚಿಲುಕ (ಗಿಳಿ), ಕಲಮು (ಲೇಖನ), ತಾಳ (ಬೀಗ); ಗೊಡಗು (ಛತ್ರಿ); ಕೊಟ್ಟಿದ (ಹೊಡೆದ), ಮುಕ್ಕು (ಮೂಗು), ಗುಡ್ಡು--ಗುಡ್ಡೆ (ಮೊಟ್ಟೆ), ಅಲ್ಲ (ಶುಂಠಿ), ಚಿಂತಪಂಡು (ಹುಣಸೇಹಣ್ಣು), ಮಿರಿಯಾಲು (ಮೆಣಸು), ಉರುಳಗಡ್ಡೆ (ಆಲೂಗಡ್ಡೆ), ಗುಮ್ಮಡಿ ಕಾಯಿ (ಕುಂಬಳಕಾಯಿ), ಅರಟುಕಾಯಿ (ಬಾಳೇಕಾಯಿ), ಪೊಟ್ಲುಕಾಯಿ (ಪಡುವಲ ಕಾಯಿ), ನವಲು (ಕಾದಂಬರಿ), ಜಂಬು (ಪತ್ರ), ಮಂಗಲಿ (ಕ್ಷೌರದವನು), ರಾಗಿ (ತಾಮ್ರ), ಮಂದು (ಔಷಧ), ಮಂಚಿದಿ (ಒಳ್ಳೆಯದು), ಪಟ್ಟುಬಟ್ಟೆ (ರೇಷ್ಮೆ ಬಟ್ಟೆ), ಗುಡ್ಡ (ಬಟ್ಟೆ), ಬಂಡಿವಾರಾ (ಗಾಡಿ ಹತ್ತು), ನಲ (ತಿಂಗಳು), ಪಲಕು (ಹೇಳು), ಕುಟ್ಟು (ಹೊಲಿ), ಚೆಟ್ಟು (ಗಿಡ), ಆಲಸ್ಯ (ತಡ), ಪ್ರವಚನ ಜರುಗುವುದು (ಪ್ರವಚನ ನಡೆಯುತ್ತದೆ); ಜರುಗದು, ಆಗದು, ಹೋಗದು, ಕೂಡದು, ಸೇರದು ಮುಂತಾದ ತೆಲುಗು ಶಬ್ದಗಳನ್ನು ಕನ್ನಡಿಗರು ಪ್ರಯೋಗದಲ್ಲಿಟ್ಟುಕೊಂಡಿರುವುದು ಕಂಡು ಬರುತ್ತದೆ.

ಅನ್ಯಭಾಷಾಸಂಪರ್ಕದಿಂದ ನುಡಿ ವೈಖರಿಗಳು–ವಾಗ್ವಿಲಾಸಗಳು ಬದಲಾಯಿಸು ತ್ತವೆ–ಹೊಸದಾಗುತ್ತವೆ ಎಂಬುದಕ್ಕೆ ಉದಾಹರಣೆಗಳು ಇಲ್ಲೆಲ್ಲಾ ದೊರೆಯುತ್ತವೆ. ಆಡುನುಡಿ ಜನಾಂಗದ ಉಸಿರು; ಬದುಕಿಗೆ ಅದು ಅಗತ್ಯ. ನಿತ್ಯೋಪಯೋಗಕ್ಕೆ ಇವು ಆವಶ್ಯಕ. ಈ ಮಾತುಗಳನ್ನು ಬಳಸುವಾಗ, ಅವುಗಳಿಂದ ವಾಕ್ಯಗಳನ್ನು ಪ್ರಯೋಗಿಸುವಾಗ ಹೊರಡುವ ಕಾಕು ಮುಖ್ಯ.

ಭಾಷೆ, ತನ್ನ ಉಪಭಾಷೆಗಳಿಂದ ನಲಿಯುವುದು ಸಂತೋಷವೇ. ಜೀವಂತ

ವಾಗಿರುವುದರ ಕುರುಹು ಅದು. ವೈವಿಧ್ಯವೇ ವೈಭವ; ಬೆಳವಣಿಗೆಗೂ ಕಾರಣ. ಕನ್ನಡಕ್ಕೆ ಈ ಬಗೆಯ ವೈಭವವುಂಟು. ಕನ್ನಡಭಾಷಾ ಭಂಡಾರ ಇದರಿಂದ ತುಂಬುತ್ತದೆ; ಭಾಷೆ ಬೆಳೆಯುತ್ತದೆ.

ಈ ದೃಷ್ಟಿಯಿಂದ ಆಂಧ್ರಪ್ರಾಂತದಲ್ಲಿರುವ ಕನ್ನಡದ ಸ್ವರೂಪವನ್ನು ಬಹು ಸ್ಥೂಲವಾಗಿ ಮಾತ್ರ ಇಲ್ಲಿ ಪರಿಶೀಲಿಸಲಾಗಿದೆ. ಈ ಕಾರ್ಯ ಇನ್ನೂ ಶಾಸ್ತ್ರೀಯವಾಗಿ ನಿಧಾನವಾಗಿ ಒಪ್ಪವಾಗಿ ನಡೆಯಬೇಕಾಗಿದೆ. ಆ ನಿಟ್ಟಿನಲ್ಲಿ ಇದೊಂದು ಪ್ರಾರಂಭ ಪ್ರಯತ್ನ ಎಂದು ಮಾತ್ರ ಹೇಳಬಹುದಾಗಿದೆ.

• •

ಮಹಾರಾಷ್ಟ್ರದ ಕನ್ನಡ

● ಕೆ. ಜಿ. ಶಾಸ್ತ್ರಿ

ಮಹಾರಾಷ್ಟ್ರದ ರಾಜಧಾನಿಯಾದ ಮುಂಬಯಿಯಲ್ಲಿಯೋ ಇತರ ಮಹತ್ವದ ಸ್ಥಳಗಳಲ್ಲಿಯೋ ನೆಲಸಿರುವ ಕನ್ನಡಿಗರು ಮನೆಯಲ್ಲಿ, ಕರ್ನಾಟಕದ ಯಾವ ಭಾಗದಿಂದ ಬಂದವರೋ ಆ ಕನ್ನಡದ ಉಪಭಾಷೆಯನ್ನು ಬಳಸುತ್ತ ಹೊರವ್ಯವಹಾರಗಳಿಗೆಲ್ಲ ಮರಾಠಿಯನ್ನೇ ರೂಢಿಸಿಕೊಂಡಿರುವದು ಕಂಡುಬರುತ್ತದೆ. ಅದರಿಂದ ಕನ್ನಡ–ಮರಾಠಿ ದ್ವಿಭಾಷಾ ಸ್ವರೂಪವನ್ನು ನಾವು ಕಾಣಬೇಕಿದ್ದರೆ ಮಹಾರಾಷ್ಟ್ರದ ಗಡಿನಾಡಿನ ಕನ್ನಡವನ್ನೇ ಲಕ್ಷಿಸಬೇಕಾಗುತ್ತದೆ. ಮೊದಲು ಕನ್ನಡದ ಗಂಡುಮೆಟ್ಟುಗಳೇ ಆಗಿದ್ದ ಸಾಂಗಲಿ, ಕೊಲ್ಲಾಪುರ, ಸೊಲ್ಲಾಪುರದಂಥ ಸ್ಥಳಗಳಲ್ಲಿ ಮೂಲಕನ್ನಡಿಗರಾದ ಜೈನ, ವೀರಶೈವ ಜನರಿದ್ದು ಅವರು ಅಭಿಮಾನದಿಂದ ಇಂದಿಗೂ ಕನ್ನಡವನ್ನೇ ಮನೆಮಾತಾಗಿಯೂ, ತಮ್ಮತಮ್ಮೊಳಗೆ ವ್ಯಾವಹಾರಿಕಭಾಷೆಯಾಗಿಯೂ ಬಳಸುತ್ತಿರುವುದು ಕಂಡುಬರುತ್ತದೆ. ಆದರೆ ರಾಜಕೀಯವಾಗಿಯೂ, ಸಾಂಸ್ಕೃತಿಕವಾಗಿಯೂ, ಔದ್ಯಮಿಕವಾಗಿಯೂ ಮರಾಠಿಯ ಎಡೆಬಿಡದ ಪ್ರಭಾವಕ್ಕೊಳಪಡುವದು ಅವಕ್ಕೆ ಅನಿವಾರ್ಯವಾಗಿದೆ. ಇದರ ಪರಿಣಾಮವಾಗಿ ಅವರ ಮಾತಿನ ಧ್ವನಿ ಹಾಗೂ ಉಚ್ಚಾರ, ಆಘಾತಕ್ರಮಗಳಲ್ಲಿ ಮರಾಠಿಯ ಘೋಷ ಕೇಳಿಬಂದು, ಕನ್ನಡದ ಕಿವಿಗೆ ವಿಚಿತ್ರವೆನಿಸುವದು ಸಹಜ. ಇದಲ್ಲದೆ ಅನೇಕ ಮರಾಠಿ ಪದಗಳ ಸೇರ್ಪಡೆ, ನುಡಿಗಟ್ಟುಗಳ ಅನುವಾದ, ವಾಕ್ಯರಚನಾಕ್ರಮಗಳ ಅನುಸರಣೆ ತಲೆದೋರುವದೂ ತೀರ ಸಂಭವ. ಇಂಥವುಗಳನ್ನು ಭಾಷಾವಿಜ್ಞಾನದ ಪರಿಭಾಷೆಯಲ್ಲಿ "ಭಾಷಾಪರ್ಯಂತರ" (Linguistic Interference)ಗಳೆಂದು ಕರೆಯುತ್ತಾರೆ. ಭಾಷಾಸಂಪರ್ಕ (Languages in contact)ದ ಫಲಗಳಾದ ಇಂಥ ಪರ್ಯಂತರಗಳ ಅಂಶಗಳನ್ನು ಹೀಗೆ ವಿವರಿಸಲಾಗುತ್ತದೆ : "Interference implies rearrangement of patterns that result from the introduction of foreign elements into the more highly structured domains of the language, such as the bulk of phonomic system, large part of the morphology and syntax, and some areas of the vocabulary (Kinship, colour, weather etc)"[೧].

೧. Uriel Weinreich : Languages in contact, p. 1.

ಆದ್ದರಿಂದ ಈ ಪರ್ಯಂತರಗಳೆಂದರೆ ಮೂಲರಚನೆಯಲ್ಲಿ ಕಂಡುಬರುವ ಪುನರ್ವ್ಯವಸ್ಥೆಯೆಂದಾಗುತ್ತದೆ. ದ್ವಿಭಾಷಾಪ್ರದೇಶ, ಸಮಾಜಗಳಲ್ಲಿ ಈ ಇಬ್ಬಗೆಯ ನಿಷ್ಠೆ (divided allegiance) ಅನಿವಾರ್ಯವಾಗಿ ಏಕಭಾಷಿಗಳಾದವರಿಗೆ ಅದೊಂದು ಅಸಾಮಾನ್ಯವಾದ, ವಿಚಿತ್ರವಾದ, ದಿಗಿಲುಗೊಳಿಸುವ ವಿಷಯವಾಗುತ್ತದೆ.

ಮೇಲೆ ಸೂಚಿಸಿದ ಸ್ಥಳಗಳಲ್ಲಿ ಸಾಂಗಲಿ, ಕೊಲ್ಲಾಪುರಗಳ ಕಡೆ ಕನ್ನಡ ಜೈನ ವರ್ಗವೂ, ಸೊಲ್ಲಾಪುರದ ಕಡೆ ವೀರಶೈವವರ್ಗವೂ ಹೆಚ್ಚಾಗಿ ಇರುವದು ಕಂಡು ಬರುತ್ತದೆ. ಈ ದ್ವಿಭಾಷಾ ಪರಿಸ್ಥಿತಿಯ ಒಂದು ಮಾದರಿಯೆಂಬ ದೃಷ್ಟಿಯಿಂದ ಸಾಂಗಲಿಯ ಕಡೆಯ ಗಡಿನಾಡಿನ ಕನ್ನಡದ ಕೆಲವು ವೈಶಿಷ್ಟ್ಯಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗುತ್ತದೆ. ಹಾಗೆ ಪರೀಕ್ಷಿಸುವಾಗ ಅದಕ್ಕೆ ಎರಡು ಮುಖಗಳಿರುವುದೂ ಕಂಡುಬರುತ್ತದೆ. ಕನ್ನಡದ ತಾಯಿನೆಲದಿಂದ ದೂರವಾದ, ಬೇರೆಯಾದ ಈ ಕನ್ನಡವು ಮರಾಠಿಯ ಪ್ರಭಾವವನ್ನು ಹೊತ್ತಂತೆ, ತಾನು ಒಂದು ಸ್ವತಂತ್ರ ಉಪಭಾಷೆಯಾಗಿಯೂ ಬೆಳವಣಿಗೆಯನ್ನು ಪಡೆಯುತ್ತಿರುತ್ತದೆ. ಆ ದೃಷ್ಟಿಯಿಂದಲೂ ತನ್ನವೇ ಆದ ಕೆಲವು ವೈಶಿಷ್ಟ್ಯಗಳನ್ನು ಅದು ತೋರಿಸುತ್ತದೆ. ಇವುಗಳಲ್ಲಿ ಮೊದಲನೆಯದಾಗಿ ಉಚ್ಚಾರ ಕ್ರಮ, ವ್ಯಾಕರಣರೂಪಗಳು, ಪದಗಳ ಹಾಗೂ ಅವುಗಳ ಅರ್ಥಗಳ ಬಳಕೆ, ನುಡಿಗಟ್ಟುಗಳ ಪ್ರಯೋಗ ಮುಂತಾದ ವಿವರಗಳಲ್ಲಿ ಮರಾಠಿಯ ಅನುಸರಣೆ ಕಂಡುಬರುವುದನ್ನು ವಿವರಿಸಲಾಗುವದು. ಆ ತರುವಾಯ ಅವೇ ಅಂಶಗಳಲ್ಲಿ ಕಂಡುಬರುವ ಸ್ವತಂತ್ರ ಉಪಭಾಷಾ ಲಕ್ಷಣಗಳನ್ನು ಸೂಚಿಸಲಾಗುವುದು.

ಮರಾಠಿಯ ಪ್ರಭಾವ

೧. ಉಚ್ಚಾರಕ್ರಮ :

(i) ಮರಾಠಿ ಮಾತನಾಡುವವರಂತೆ ಆಘಾತ (Accent) ಪ್ರತಿ ಪದದ ಮೊದಲನೆಯ ಅಕ್ಷರದ ಮೇಲೆ ಬೀಳದೆ ಸಾಮಾನ್ಯವಾಗಿ ಎರಡನೆಯ ಅಕ್ಷರದ ಮೇಲೆ ಬೀಳುವದು. ಉದಾ : 'ಪುಸ್ತಕ (ಕನ್ನಡ)—ಪುಸ್ತ'ಕ

(ii) ಒಟ್ಟಿನ ವಾಕ್ಯೋಚ್ಚಾರಣೆಯ ಏರಿಳಿತ (Intonation)ವೂ ಮರಾಠಿಯ ಕ್ರಮವನ್ನೇ ಅನುಸರಿಸುತ್ತದೆ.

೨. ವ್ಯಾಕರಣ ರೂಪಗಳು :

(i) ದ್ವಿತೀಯಾ ವಿಭಕ್ತಿಯ ಸ್ಥಾನದಲ್ಲಿ ಚತುರ್ಥಿಯ ಪ್ರಯೋಗ. ಉದಾ :
ಗಂಡಗ ಬೆನ್ನುಹತ್ತಿ = ಗಂಡನನ್ನು ಬೆನ್ನುಹತ್ತಿ.
ಗುರುವಿಗೆ ನೆನಿ = ಗುರುವನ್ನು ನೆನೆ.

(ii) ಈ ಕೆಳಗಿನ ರೂಪಗಳಲ್ಲಿ ವಿಸಂಧಿಯಾಗಿಸುವದು :

ಆಡಲಿ ಅಲ್ಲ! = ಆಡ್ಲಲಾ
ಬರಲಿ ಅಲ್ಲ! = ಬರ್ಲಲಾ
ಕುಡೀ ಅಲ್ಲಾ! = ಕುಡ್ಯಲ್ಲಾ!
ಆಗೂದೂಲ್ಲ ಯಾನ? = ಆಗೂದಿಲ್ಲೇನು?

(iii) ಮರಾಠಿ ಪದಗಳಿಗೆ ನೇರವಾಗಿ ಕನ್ನಡ ಪ್ರತ್ಯಯ ಹತ್ತಿಸುವದು :

ನೀ ಲಾಚಾಸ್ತಿ = ನೀ ನಾಚತೀದಿ
ಬೈಲನ ಸಿಂಗ ಮೋಡಸ್ತ = ಎತ್ತಿನ ಕೋಡು ಮುರಿಯಿತು

೩. **ಪದ ಹಾಗೂ ಅರ್ಥಗಳ ಬಳಕೆ** : (ಕನ್ನಡದಲ್ಲಿ ಇಲ್ಲದವು) ಮರಾಠಿಯನ್ನನುಸರಿಸಿ.

(i) ಮಾಯೆ = ಪ್ರೀತಿ; ಹುಜುರ = ಕಿವಿಯೊಳಗಿನ ಚಿಕ್ಕ ಆಭರಣ; ಧಾಬೆ = ಕೊಟ್ಟಿಗೆ; ನೇಟ = ಶಕ್ತಿಯುತ; ಮಕರ = ಮದುವೆಯ ಮಂಟಪ; ಸರಣ = ಸ್ಮಶಾನದಲ್ಲಿ ಹೆಣ ಸುಡಲು ಒಟ್ಟಿದ ಕಟ್ಟಿಗೆ; ಉದೂಳಿಸು = ಮನಸ್ವೀ ಖರ್ಚುಮಾಡು; ದುರುಡಿ = ಬಿದಿರ ಬುಟ್ಟಿ; ಜಾಚ = ತ್ರಾಸ.

(ii) ಬಂಧುವಾಚಕ ಹಾಗೂ ಸಂಖ್ಯಾವಾಚಕ ಪದಗಳೆಲ್ಲ ಮರಾಠಿಯವೇ.

೪. **ನುಡಿಗಟ್ಟುಗಳು :**

(i) ಮನೀ ತೊಳದ ಮುತ್ತುಮಾಡು = ಸರ್ವ ಸಂಪತ್ತು ನಾಶವಾಗು.
ಹೋ/ घरदार खाऊन वांसे तोंडी लावणें[१]
ಕಾಲಕಾ ವೇಳೆ ಕಾಗಂಟ ಬೀಳು = ಅಪಘಾತದ ವೇಳೆಗೆ ಯಮನೂ ಬರುವಿಕೆ.
ಹೋ/ कालाची गति कोणा नावरती[२]
ಪದರಾಗ ಬಿದ್ದದ ಪವಿತ್ರ. ಹೋ/ पदरीं पडलें पवित्र झाले[೪]
ಆನೀಕಾಲನಂಥ ಹೊಲ = ದೊಡ್ಡಹೊಲ. ಹೋ/ हातीच्यापाय.
= ಉದಾರಿ ಮನುಷ್ಯ.[೫]

೧, ೨, ೪, ೫ ನೋಡಿರಿ : महाराष्ट्र वाक्संप्रदायकोश– संपादक : यशवंत रामकृष्ण दाते, चिंतामणि गणेश कर्वे.

(ii) ಈ ಕೆಳಗಿನ ಪ್ರಯೋಗಗಳಿಗೂ ಮರಾಠಿ ಮೂಲಗಳಿವೆಯೋ ಪರೀಕ್ಷಿಸಬೇಕು :

ತಲಿ ಹಗುರು = ಚುರುಕು

ಹರಕ ಹೆಂಗಸು = ತಾಳ್ಮೆಯಿಲ್ಲದ ಹೆಂಗಸು

ಕಣ್ಣಕಿತ್ತು = ದೊಡ್ಡವನಾಗು, ಸೊಂಪಾಗಿ ಬೆಳೆ

ಸುಲದ ಬಡಿಗೆಮಾಡು = ಏನೂ ಉಳಿಯದಂತೆ ಮಾಡು

ಹಲ್ಲ ನುಚ್ಚಮಾಡಕೊ = ಬಹಳಷ್ಟು ಮಾತನಾಡು

ಕರಳು ಬೇಲಿ ಮೇಲೆ ಹಾಕು = ಕಠೋರವಾಗಿ ನಡೆ.

ಸ್ವಂತ ಉಪಭಾಷಾ ಲಕ್ಷಣ

೧. ವ್ಯಾಕರಣ ರೂಪಗಳು :

(i) ಉ. ಕ. ಉಪಭಾಷೆಗಳಲ್ಲಿ ಕಂಡುಬರುವ –ಎ > –ಇ ಬದಲಾವಣೆಯನ್ನು ಅವ್ಯಯಗಳಿಗೂ ವಿಸ್ತರಿಸಿರುವದು :
ಉದಾ : ಮತ್ತಿ (ಮತ್ತೆ), ಮ್ಯಾಲ (ಮೇಲೆ).

(ii) ನಾಮಪದಗಳಲ್ಲಿ –ಉ > –ಅ.
ಉದಾ : ನೀರ, ಹೆಸರ. ಕಣ್ಣ (ನೀರು, ಹಸಿರು, ಕಣ್ಣು). ಇದರ ವ್ಯಾಪ್ತಿ ಎಲ್ಲ ವ್ಯಾಕರಣ ರೂಪಗಳಿಗೂ ವಿಸ್ತರಿಸಿದೆ.

(iii) ವಿಭಕ್ತಿಗಳಲ್ಲಿ ತೃತೀಯರೂಪ ಪಂಚಮಿಯಿಂದ ಬೇರೆಯಾಗಿರುವದು.
ಉದಾ : ಕಲ್ಲಲೇ = ಕಲ್ಲಿನಿಂದ (ತೃ); ಕಲ್ಲದಿಂದ = ಕಲ್ಲಿನಿಂದ (ಪಂ).

(iv) ಸರ್ವನಾಮರೂಪಗಳಲ್ಲಿ ವ್ಯತ್ಯಾಸ :
ನವರ = ನಾವು; ನಿವರ = ನೀವು; ಅವರ = ಅವರು; ಅಕಿ, ಅಕ್ಕಿ = ಆಕೆ; ಇಕಿ, ಇಕ್ಕಿ = ಈಕೆ; ಏನು ? = ಯಾನ ?

(v) ಅನ್ನು, ತರು, ಬರು ಎಂಬ ವಿಶಿಷ್ಟರೂಪಗಳು :
ಅಯ್ನು = ಅಂದೆನು; ತಿಂಯ್ದಾನ = ತಿಂದಾನು; ಬೈಂದಾನ = ಬಂದನು; ಬಯಿಂದೇವ = ಬಂದೆವು.

(vi) ಸಂಭವಾರ್ಥ ಪೂರ್ಣಭೂತದ ರೂಪಗಳು :
ಆದೋತು (ಆದೀತು); ಬಂದೋತ (ಬಂದೀತು); ತಿಂದಾದಾ(ತಿಂದಿನು), ಬೀಳಕ್ಕೆ = ಬಿದ್ದೀಯಂತೆ, ಹಾಕಿಳು = ಹಾಕಿದ್ದಳು; ಇಟದಾ = ಇಟ್ಟಿದ್ದಾನೆ; ಹೋಗೀಳು = ಹೋಗಿದ್ದಳು; ಬಂದೀದ = ಬಂದಿದ್ದಾನೆ.

(vii) ಹೊಸ ಅಥವಾ ವಿಕೃತ ಅವ್ಯಯರೂಪಗಳು :
ಅಂಯ್ದು = ಅಲ್ಲಿಂದ, ಆಮೇಲೆ; ಭಿಗಿ = ಬೇಗ; ಬಕ = ಬಳಿಕ, ಒಂದು ಗಡೆ; ಆಚೆಬ(ಬಾ)ರಿ = ಆಚೆ ವರ್ಷ

(viii) ಅನೇಕ ಸಂಕ್ಷೇಪರೂಪಗಳು :
ಎತಕೋಲಿ = ಎತ್ತಿಕೊಳ್ಳಲಿ; ಉಡಸವಾರು = ಉಡಿಸವೊಲ್ಲರು; ತಿನಕ, ಉಣಕ = ತಿನ್ನಲಿಕ್ಕೆ, ಉಣ್ಣಲಿಕ್ಕೆ; ಹೊಳ್ಳೊಲ = ಹೊರಳುವದಿಲ್ಲ; ತವರಮನಿಗಿರ = ತವರು ಮನೆಗಾದರೂ; ಕಟ್ಟೊಲಕೀತ = ಕಟ್ಟುವದಕ್ಕಿಂತ; ಮಂದಿರ=ಮಂದಿಯಾದರೋ; ನೋಡತೇವರೆ=ನೋಡತೆವಲ್ಲರಿ.

(ix) ವಾಕ್ಯದ ಅಂತ್ಯದ ಕ್ರಿಯಾರೂಪದಲ್ಲಿ "ಖೈ" ವರ್ಣಾಗಮ :
ಯಾನ ತಿನ್ನಖೈದಿ ? = ಏನು ತಿನ್ನಾಕ ಹತ್ತೀದಿ ?

೨. ಹೊಸಪದ, ನುಡಿಗಟ್ಟು ನಿರ್ಮಾಣ :

ಹರಿವತ್ತು = ಬೆಳಗು (ಬೆಳಕು ಹರಿಯುವ ಹೊತ್ತು)
ಹೊತ್ತುಂಟಲೆ = ಬೇಗ, ಹೊತ್ತು ಇರುವಾಗ
ಹುರಬೆಂಡ್ಲ = ಬೆರಕಿ
ನೆಲುವಗಣಿ = ನೇತಾಡುವ ಬಿದುರು
ವಾಸ್ಯಾಡು = ಜಗಳಮಾಡು (ವಾಸಿ = ಪಂಥ ಕಟ್ಟು?)
ಉಡುಗೋಲ = ಕಸಬರಿಗೆ

ಈ ಗಡಿನಾಡಿನ ಭಾಷೆಯ ಕೆಲವು ವೈಲಕ್ಷಣಗಳನ್ನು ಬೀದರಕನ್ನಡದಲ್ಲಿಯೂ ಕಂಡುಕೊಳ್ಳಬಹುದು.[೬] ಬೀದರ ಜಿಲ್ಲೆಯ ಪಶ್ಚಿಮಭಾಗಕ್ಕೆ ಮಹಾರಾಷ್ಟ್ರದ ಗಡಿ ಹೊಂದಿಕೊಳ್ಳುವದು ಅದಕ್ಕೆ ಒಂದು ಕಾರಣವೆಂದರೆ ತಪ್ಪಲ್ಲ.

ಗ್ರಂಥಋಣ

ನಿಸರ್ಗ : ಮಿರ್ಜಿ ಅಣ್ಣಾರಾಯರು.

ಗಡಿನಾಡಿನ ಕನ್ನಡ : ಡಾ. ರಂ. ಶ್ರೀ. ಮುಗಳಿ, ಜೀವನ : ಸಂ. ೧–೮.

Effects of Bilingualism on Bidar Kannada : U. P. Upadhyaya, IL. Vol. 32–2.

महाराष्ट्र वाक्संप्रदायकोश.

೬. Indian Linguistics Vol. 32-2

ಗೋಮಂತಕದಲ್ಲಿ ಕನ್ನಡ

• ಶಾ. ಮಂ. ಕೃಷ್ಣರಾಯ

ಇಲ್ಲಿ 'ಕನ್ನಡ' ಎಂಬ ಪದವನ್ನು ಕನ್ನಡ ಇತಿಹಾಸ, ಸಂಸ್ಕೃತಿ ಹಾಗೂ ಭಾಷೆ ಎಂಬ ವ್ಯಾಪಕದೃಷ್ಟಿಯಿಂದ ನೋಡಲಾಗಿದೆ.

ಸೌಂದರ್ಯಸಿಧಿಯೆನಿಸಿದ ಗೋವಾ ಕಾರವಾರ, ಬೆಳಗಾಂವ, ಧಾರವಾಡಕ್ಕೆ ಹತ್ತಿರ. ಪಡುವಣ ಕಡಲಂಚಿನಲ್ಲಿ, ಅರ್ಧಚಂದ್ರಾಕೃತಿಯಲ್ಲಿ ಪಸರಿಸಿದ ಗೋವಾ ಪ್ರದೇಶದ ಗರಿಷ್ಟ ಉದ್ದಳತೆ ೧೦೫ ಕಿ. ಮೀ. ಗರಿಷ್ಟ ಅಗಲಳತೆ ೬೦ ಕಿ. ಮೀ. ಇದು ೩೬೧೦ ಚದುರ ಕಿ. ಮೀ. ಪ್ರದೇಶವನ್ನಾಕ್ರಮಿಸಿಕೊಂಡಿದ್ದು ಇದರ ಪಡುವಣದ ಅಂಚು ಅರಬೀ ಸಮುದ್ರದಿಂದಲೂ ಮೂಡಣದ ಅಂಚು ಸಹ್ಯಾದ್ರಿಯ ಹರಿತವರ್ಣದ ರಮಣೀಯತೆಯಿಂದಲೂ ತಬ್ಬಿಕೊಂಡಿದೆ. ಇದು ಉತ್ತರ ಅಕ್ಷಾಂಶ ೧೪–೫೦° ಹಾಗೂ ದಕ್ಷಿಣ ಅಕ್ಷಾಂಶ ೧೫–೪೮° ಗಳ ಮಧ್ಯೆ ಹಾಗೂ ೭೩–೪೫° ೭೪–೩೪° ಗ್ರಿನ್‌ವಿಚ್ ದಿಂದ ಪೂರ್ವರೇಖಾಂಶಗಳಲ್ಲಿ ವಿಸ್ತರಿಸಿದೆ.

ಗೋವೆಯು ಉತ್ತರಕ್ಕೆ ತೆರೆಖೋಲ ನದಿ ಮತ್ತು ಸಾವಂತವಾಡಿ ತಾಲೂಕು, ಪಶ್ಚಿಮಕ್ಕೆ ಅರಬೀ ಸಮುದ್ರ, ದಕ್ಷಿಣಕ್ಕೆ ಕಾರವಾರ ಜಿಲ್ಲೆ, ಪೂರ್ವಕ್ಕೆ ಧಾರವಾಡ, ಬೆಳಗಾಂವ ಜಿಲ್ಲೆಗಳು ಹಾಗೂ ಸಹ್ಯಾದ್ರಿಶ್ರೇಣಿ ಪಸರಿಸಿವೆ. ಗೋವೆಯನ್ನು ಮೂರು ದಿಶೆಗಳಲ್ಲಿ ಕನ್ನಡನಾಡು ತಬ್ಬಿಕೊಂಡು ಮಡಿಲಲ್ಲಿರಿಸಿಕೊಂಡಿದೆ.

ಗೋವಾ (Goa) ಎಂಬ ಈಗಿನ ಹೆಸರು ಪ್ರಚಲಿತವಾಗಲು ಗೋಪ, ಗೋಪಕಾ ಪಟ್ಟಣ, ಗೋಪಕಾಪುರ ಎಂಬುದೇ ಕಾರಣ. ಪೋರ್ಚುಗೀಸರು ಇದನ್ನು ಗೋವಾ ಎಂದು ಸಂಕ್ಷಿಪ್ತಗೊಳಿಸಿದರು.

ಸ್ಕಾಂದಪುರಾಣದ ಸಹ್ಯಾದ್ರಿಖಂಡದಲ್ಲಿ ಗೋಮಂತಕದ ಕಥೆ ಬರುತ್ತದೆ. ಅಲ್ಲಿ ಗೋಮಂತಕ 'ಪರಶುರಾಮ ಸೃಷ್ಟಿ' ಎಂದು ಕರೆಯಲ್ಪಟ್ಟಿದೆ.

ಪರಶುರಾಮನು ಯಜ್ಞವಿಧಿಯನ್ನು ಗೋವಾ (Old Goa) ಬಳಿ ಇರುವ 'ಗೋಮಾಂಚಲ' ಪರ್ವತದ ಬಳಿಯೇ ಮಾಡಿದುದರಿಂದ 'ಗೋಮಂತಕ' ಎಂದು ಹೆಸರು ಬಂದಿತೆಂದು ಹೇಳುತ್ತಾರೆ. 'ಗೋಮ' ಎಂಬ ರಾಕ್ಷಸನನ್ನು

ಕೊಂದದ್ದರಿಂದ ಗೋಮಂತಕ ಎಂಬ ಹೆಸರು ಬಂದಿತೆಂದೂ ಹೇಳುತ್ತಾರೆ. ಇನ್ನು 'ಗೌ' ಎಂದರೆ 'ಬಾಣ', 'ಅಂತ' ಎಂದರೆ ಬಾಣ ಅಂತ್ಯವಾದ ಸ್ಥಳ- ಪ್ರದೇಶ. ಇದರಿಂದ 'ಗೋಮಂತ' ಎಂಬ ಶಬ್ದ ಬಂದಿತು. ಅದಕ್ಕೆ 'ಕ' ಎಂಬ ಪ್ರತ್ಯಯ ಕರ್ನಾಟ'ಕ' ಎಂಬಂತೆ ಕೂಡಿಸಲಾಯಿತು ಎನ್ನುತ್ತಾರೆ. ಇವುಗಳಿಗೆಲ್ಲ ಖಚಿತವಾದ ಆಧಾರವಿಲ್ಲದಿದ್ದರೂ 'ಗೋಮಂತಕ' ಎಂಬ ಹೆಸರು ಇಂದಿಗೂ ಪ್ರಚಲಿತವಿದೆಯೆಂಬುದು ಸತ್ಯ.

ಕ್ರಿ. ಶ. ೪ ನೆಯ ಶತಮಾನದಿಂದ ಗೋವಾ ಇತಿಹಾಸದ ಆರಂಭ. ಆಗ ಭೋಜ ಮನೆತನದ ಆಳಿಕೆ. ರಾಜಧಾನಿ ಚಂದ್ರಪುರ (ಈಗಿನ ಚಾಂದರ). ಈ ಅರಸು ಮನೆತನ ೭-೮ ನೆಯ ಶತಮಾನದ ವರೆಗೂ ಅಧಿಕಾರದಲ್ಲಿತ್ತು. ಅವರ ಶಾಸನಗಳು ಸಂಸ್ಕೃತದಲ್ಲಿದ್ದರೂ ಕೆಲವು ಕನ್ನಡ ಪದಪ್ರಯೋಗವಾಗಿವೆ. ಉದಾ : ಮರ್ತಿಕಟ್ಟು, ಕೊತ್ತಿ ಪೆಗ್ಗಿಲಿ, ಎಲಕ್ಕೆಲ್ಲ.

ಶಿಲಾಹಾರದಲ್ಲಿ ದಕ್ಷಿಣ-ಉತ್ತರ ಶಿಲಾಹಾರವೆಂದು ಎರಡು ಪಂಗಡ. ದಕ್ಷಿಣ ಶಿಲಾಹಾರರು ಗೋವೆ, ರತ್ನಾಗಿರಿ, ಸಾವಂತವಾಡಿಯನ್ನು ಆಳಿದರು. ಗೋವಾ ಇವರ ರಾಜಧಾನಿ. ಈ ಶಿಲಾಹಾರರು ಕರ್ನಾಟಕದವರು, ಕನ್ನಡಿಗರು. ಅದೇಕೆ ಉತ್ತರ ಶಿಲಾಹಾರರಲ್ಲೂ 'ವಪ್ಪುವಣ್ಣ', 'ಗೊಗ್ಗಿ', 'ಮುಮ್ಮಣಿ' ಮುಂತಾದ ದೊರೆಗಳ ಹೆಸರೂ 'ನಾಗಣ್ಣಯ್ಯ', 'ವಿಂಟಪ್ಪಯ್ಯ', 'ಜೊಗಳಯ್ಯ' ಮೊದಲಾದ ಮಂತ್ರಿಗಳ ಹೆಸರೂ ಕನ್ನಡದಲ್ಲಿವೆ. ರತ್ನಾಗಿರಿಯಲ್ಲಿ ಕನ್ನಡ ಶಾಸನಗಳೂ ದೊರೆತಿವೆ. ಶಿಲಾಹಾರರು ಕನ್ನಡಿಗರು ಎಂಬುದನ್ನು ಮಹಾರಾಷ್ಟ್ರದ ಖ್ಯಾತ ಸಂಶೋಧಕರು (ಅಲ್ತೇಕರ್) ಒಪ್ಪಿಕೊಂಡಿದ್ದಾರೆ.

ಹನ್ನೊಂದನೆಯ ಶತಮಾನದ ಆರಂಭದಲ್ಲಿ ಕದಂಬರು ಶಿಲಾಹಾರರನ್ನು ಸೋಲಿಸಿದರು. ಗೋವೆಯ ಕದಂಬರು ಕನ್ನಡಿಗರು ಎಂಬುದರಲ್ಲಿ ಸಂದೇಹವಿಲ್ಲ. ಇವರ ಆಳಿಕೆಯಲ್ಲಿ ಕನ್ನಡ ಆಡಳಿತಭಾಷೆಯಾಗಿರಬೇಕು. ಈ ಕದಂಬ ಅರಸರ ಹೆಸರುಗಳಲ್ಲಿ ಚಟ್ಟಯ್ಯ, ಚಟ್ಟಲಾದೇವಿ ಮೊದಲಾದ ಶುದ್ಧಕನ್ನಡ ಹೆಸರುಗಳಿವೆ. ನಾಗಣ್ಣಯ್ಯ, ಅಣ್ಣಯ್ಯ, ತಿಕ್ಕಯ್ಯ, ಸಯ್ಯುನಯ್ಯ, ಸಾವಣ್ಣ, ನ್ಯೂಲಯ್ಯ ಮೊದಲಾದುವು ಕನ್ನಡದ ಹೆಸರುಗಳು. ಗೋವೆಯ ಕದಂಬರ ಕಾಲದ ಶಾಸನ, ನಾಣ್ಯ, ತಾಮ್ರಪಟ, ಮಾಸ್ತಿಕಲ್ಲುಗಳಲ್ಲಿ ಕನ್ನಡದ ಬಳಕೆ ಹೇರಳವಾಗಿವೆ.

ಈ ಪ್ರದೇಶವನ್ನು ಮುಸಲ್ಮಾನರಿಂದ ಬಿಡಿಸಿಕೊಂಡ ವಿಜಯನಗರದರಸರು ಇಲ್ಲಿ ಕನ್ನಡದಲ್ಲಿಯೇ ಆಳಿದರು. ಆಗಿನ ಕಾಲದ ಶಿಲಾಶಾಸನ, ದಾಖಲೆಗಳು ಹಳೆಗನ್ನಡದಲ್ಲಿವೆ. ಆಗ ಕನ್ನಡ ಆಡಳಿತಭಾಷೆಯಷ್ಟೇ ಗೋಮಂತಕೀಯರ ಆಡು ಭಾಷೆಯೂ ಆಗಿರಬೇಕು.

ಸ್ವಾದಿ ಅಥವಾ ಸೋಂದೆ ಎಂಬುದು ಸಿರ್ಸಿಯ ಬಳಿ (ಉ. ಕ.) ಇದೆ. ಅಲ್ಲಿಯ ಅರಸರು ಸ್ವಾದಿಯ ಅರಸುಮನೆತನದವರು. ಇವರು ಧರ್ಮದಿಂದ ವೀರಶೈವರು. ಈ ಸ್ವಾದಿ ಅರಸುಮನೆತನದಲ್ಲಿ ಅರಸಪ್ಪನಾಯಕ, ಸದಾಶಿವಯ್ಯ (ಕ್ರಿ. ಶ. ೧೬೭೪–೧೬೯೭), ಬಸವಲಿಂಗರಾಯ (ಕ್ರಿ. ಶ. ೧೬೯೭–೧೭೪೫) ಮೊದಲಾದವರು ವೈಭವದಿಂದ ರಾಜ್ಯ ಆಳಿದರು. ಈ ಮನೆತನದ ಆಳಿಕೆ ಕುಸಿಯುತ್ತಬಂದಾಗ ಹೈದರ ಅಲಿಯ ದಾಳಿ ನಡೆಯಿತು. ಅಂದಿನ ಪರಿಸ್ಥಿತಿಯ ಒತ್ತಡದಿಂದಾಗಿ ಕ್ರಿ. ಶ. ೧೭೯೧ ರಲ್ಲಿ ತಮ್ಮ ಹಕ್ಕುಗಳನ್ನು ಪೋರ್ಚುಗೀಸರಿಗೆ ಒಪ್ಪಿಸಿ ಒಪ್ಪಂದ ಮಾಡಿಕೊಂಡರು.

ಪೋರ್ಚುಗೀಸರು ಗೋವೆಯ ಒಂದು ಭಾಗವನ್ನು ೧೫೧೦ ರಲ್ಲಿ ಆಕ್ರಮಿಸಿದರೂ ಪೂರ್ತಿ ಗೋವೆಯ ಆಡಳಿತ ಅವರ ಅಧೀನ ಮಾಡಿಕೊಳ್ಳಬೇಕಾದರೆ ಸುಮಾರು ಎರಡುನೂರು ವರ್ಷ ಸೆಣಸಾಡಬೇಕಾಯಿತು. ಈ ಮಧ್ಯೆ ಮುಸಲ್ಮಾನರ-ಮರಾಠರ ಆಳಿಕೆಯಾಯಿತು.

ಹೀಗೆ ಕನ್ನಡ ಅರಸುಮನೆತನಗಳ ಆಳಿಕೆಯ ಕಾಲದಲ್ಲಿ ಗೋಮಂತಕದಲ್ಲಿ ಕನ್ನಡ ಮನೆಮಾತಾದರೂ ವಿಜಯನಗರದ ಪತನದ ನಂತರ, ಸ್ವಾದಿಯ ಅರಸರೂ ಕಳೆಗುಂದಿದ ಬಳಿಕ ಇಲ್ಲಿ ಕ್ರಮೇಣ ಕನ್ನಡದ ಪ್ರಭಾವ ಕಡಿಮೆಯಾಯಿತು. ಕಾರಣ ಗೋಮಾಂತಕೀಯರು ಮೂಲತಃ ಕೊಂಕಣಿಗರು. ಅವರ ಭಾಷೆ ಆರ್ಯಭಾಷಾ ಪಂಗಡಕ್ಕೆ ಸೇರುವ ಕೊಂಕಣಿ. ಮುಂದೆ ಮುಸಲ್ಮಾನರ ದಾಳಿ, ಮರಾಠರ ಆಳಿಕೆ ಹಾಗೂ ಪೋರ್ಚುಗೀಸರ ಆಳಿಕೆಯಿಂದ ಗೋಮಂತಕೀಯರು ಕನ್ನಡವನ್ನು ಮರೆತರು.

ಇದೂ ಅಲ್ಲದೆ ಮುಸಲ್ಮಾನರ ದಾಳಿಯಿಂದ ಕನ್ನಡದ ಶಿಲ್ಪಗಳು, ಶಾಸನಗಳು, ಅನೇಕ ಐತಿಹಾಸಿಕ ದಾಖಲೆಗಳು ನುಚ್ಚುನೂರಾದುವು. ಅನಂತರ ಬಂದ ಪೋರ್ಚುಗೀಸರು ಹದಿನಾರನೆಯ ಶತಮಾನದಲ್ಲಿ ನಡೆಯಿಸಿದ ಧಾರ್ಮಿಕ ಕ್ರಾಂತಿಯಿಂದ ಇತರ ಭಾಷೆ-ಧರ್ಮವನ್ನು ಮರೆಯುವಂತೆ ಮಾಡಿದರು. ಮುಸಲ್ಮಾನರ ಆಕ್ರಮಣದಲ್ಲಿ ಮತಾಂತರಗೊಂಡವರು ಉರ್ದುಭಾಷೆಯನ್ನು ಸ್ವೀಕರಿಸಿದರು, ಪೋರ್ಚುಗೀಸರ ಧರ್ಮಕುಂಡದಲ್ಲಿ ಬಿದ್ದ ಹಿಂದೂಗಳಲ್ಲಿ ಅನೇಕರು ಕ್ರೈಸ್ತಮತ ಸ್ವೀಕರಿಸಿದರು. ಆಗ ಪೋರ್ಚುಗಿಸಭಾಷೆ ಸ್ವೀಕರಿಸುವುದು ಅನಿವಾರ್ಯವಾಯಿತು. ಕ್ರೈಸ್ತರಾಗಲು ಒಪ್ಪದವರು ಕರ್ನಾಟಕಕ್ಕೆ ಹೆಚ್ಚು ಸಂಖ್ಯೆಯಲ್ಲಿ ಓಡಿಬಂದರು. ಉತ್ತರಕನ್ನಡ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ನೆಲೆಸಿದರು. ಕೇರಳಕ್ಕೂ, ಮಹಾರಾಷ್ಟ್ರಕ್ಕೂ ವಲಸೆ ಹೋದವರಿಗಿಂತ ಕರ್ನಾಟಕಕ್ಕೆ ವಲಸೆಬಂದವರ ಸಂಖ್ಯೆ ಹೆಚ್ಚು ಯಾಕೆ ? ಕರ್ನಾಟಕ ಸಂಪದ್ಭರಿತವಾದ ದೇಶ, ಕರ್ನಾಟಕದ ಜನತೆಯ ಬಗ್ಗೆ, ಸಂಸ್ಕೃತಿಯ ಬಗ್ಗೆ ಅಲ್ಲಿ ಆಳಿದ ಕನ್ನಡ ಅರಸರು ಗೌರವ, ಆತ್ಮೀಯತೆ ಮೂಡಿಸಿದ್ದರು. ಅದೂ ಅಲ್ಲದೆ

ಅಂದಿನ ಗೋಮಂತಕೀಯರಿಗೆ ಕನ್ನಡ ಓದಲು, ಬರೆಯಲು ಬರುತ್ತಿತ್ತು. ತಮ್ಮೊಂದಿಗೆ ತಾವು ಮನೆಯಲ್ಲಿ ಮಾತಾಡುತ್ತಿದ್ದ ಕೊಂಕಣಿಭಾಷೆಯನ್ನು ತಂದರು.

ಪೋರ್ಚುಗೀಸರು ಗೋವೆಗೆ ಬಂದಾಗ ಕನ್ನಡದ ಪ್ರಾಬಲ್ಯ ಅಧಿಕವಾಗಿತ್ತು. ಪೋರ್ಚುಗೀಸರು ಕೊಂಕಣಿ ಜನರಿಗೆ (ಗೋಮಂತಕೀಯರಿಗೆ) 'ಕಾನಾರಿ' ಎಂಬ ಒಂದೇ ಹೆಸರಿನಿಂದ ಕರೆಯುತ್ತಿದ್ದರು. ಈ ಮಾತನ್ನು ದೋ ಜುವಾಂವ್ ಕಾಸ್ತ (ಕ್ರಿ. ಶ. ೧೫೪೦) ಒಪ್ಪಿಕೊಂಡಿದ್ದಾನೆ.

ಗೋವೆಗೆ ಜೇಜುಯೇಟರು ಬಂದಾಗ ಕೊಂಕಣಿ ಮತ್ತು ಕನ್ನಡಕ್ಕೆ 'ಕಾನಾರಿ' ಎಂಬ ಒಂದೇ ಹೆಸರಿನಿಂದ ಕರೆಯುತ್ತಿದ್ದರು. ಇದರರ್ಥ ಅದುವರೆಗೂ ಪೋರ್ಚುಗೀಸರಿಗೆ ಕನ್ನಡ ಯಾವುದು, ಕೊಂಕಣಿ ಯಾವುದು ಎಂಬ ಭೇದ ತಿಳಿಯದಷ್ಟು ಅವು ಸಮರಸವಾಗಿದ್ದವು. ಸುಮಾರು ಕ್ರಿ. ಶ. ೧೫೪೬ ರಲ್ಲಿ ಮೊಟ್ಟಮೊದಲು ಕನ್ನಡಕ್ಕೆ 'ಕಾನರಾಸ್' ಎಂದು ಕರೆದುದು ಕಂಡುಬರುತ್ತದೆ.

ಹದಿನೇಳನೆಯ ಶತಮಾನದ ಪೂರ್ವಾರ್ಧದಲ್ಲಿ, ಗೋವಾ ಕ್ರಿಶ್ಚಿಯನ್‌ರಿಗೆ 'ಕಾನಾರಿ' ಎಂದೂ ಹಿಂದೂಗಳಿಗೆ 'ಕೊಂಕಣಿ' ಎಂದೂ ಹೆಸರಾಗಿದ್ದಿತು. ಈ ಮಾತು ಪಾದ್ರಿ ದಿಯೇಗು ರಿಬೈರು ಅವರ ಕೊಂಕಣಿ–ಪೋರ್ತುಗೀಜ ಶಬ್ದಕೋಶದಿಂದ ಸ್ಪಷ್ಟವಾಗುತ್ತದೆ.

ಇಂದು ಗೋಮಂತಕದಲ್ಲಿರುವ ಕನ್ನಡ ಅವಶೇಷಗಳು ಮುಸಲ್ಮಾನರ, ಪೋರ್ಚುಗೀಸರ ಆಕ್ರಮಣದಲ್ಲೂ ಕಣ್ಣುತಪ್ಪಿಸಿ ಉಳಿದವು. ಅನೇಕ ದಾಖಲೆಗಳು ನೀರು ಪಾಲಾದವು, ಕೆಲವು ನೆಲಸಮವಾದವು, ಹಲವು ಸ್ಥಳಾಂತರಗೊಂಡವು, ಅಗ್ನಿಗಾಹುತಿಯಾದುವು. ಇಷ್ಟಾದರೂ ಇಲ್ಲಿ ಇಂದಿಗೂ ಕನ್ನಡದ ಪ್ರಭಾವವನ್ನು ಖಚಿತವಾಗಿ ಗುರುತಿಸಬಹುದು.

ಗೋವೆಯ ಕದಂಬಕುಲದ ಹೆಸರಾಂತ ಅರಸು ಇಮ್ಮಡಿ ಜಯಕೇಶಿಯ ಕಾಲದ ಕನ್ನಡಶಾಸನ ಸಿಕ್ಕಿದೆ. ಹದಿನೈದನೆಯ ಶತಮಾನದ ಮಧ್ಯಕಾಲದ ಇಮ್ಮಡಿ ದೇವರಾಯ(ವಿಜಯನಗರ)ನ ಕಾಲದ ಮೂರು ಶಾಸನಗಳಲ್ಲಿ ಎರಡು ಹಳಗನ್ನಡದಲ್ಲಿವೆ. ಇವು ಪಣಜಿಯ ಪ್ರಾಚ್ಯವಸ್ತು ಸಂಶೋಧನಾಲಯದಲ್ಲಿವೆ. ಕ್ರಿ. ಶ. ೧೪೩೨ ರ ಕನ್ನಡ ಶಾಸನವೊಂದು ನಾಗೇಶಿ ದೇವಾಲಯದ ಪಕ್ಕದಲ್ಲಿದೆ. ಕೆಲವು ಕನ್ನಡ ಶಾಸನಗಳು ಮುಂಬಯಿಯ ಸೇಂಟ ಝೇವಿಯರ್ಸ ಕಾಲೇಜದಲ್ಲಿವೆ. ಇವು ಗೋಮಂತಕದಿಂದ ಒಯ್ದು ಕಾಯ್ದಿರಿಸಿದ ಶಾಸನಗಳು. ವಿಜಯನಗರದ ಎರಡನೆಯ ಹರಿಹರನ ಕಾಲದ (ಕ್ರಿ.ಶ.೧೩೮೦) ಶಾಸನವೊಂದು ಪಣಜಿಯ ಬಳಿಯಲ್ಲಿರುವ ಕಾಲಾಪುರದಲ್ಲಿ ಸಿಕ್ಕಿದೆ. ಇದು ಹಳಗನ್ನಡದಲ್ಲಿದೆ. ರಾಯ್ (ಸಾಸಷ್ಟಿ ತಾಲೂಕು) ಎಂಬಲ್ಲಿ ದೊರೆತ ವೀರಗಲ್ಲು ಕ್ರಿ. ಶ. ೧೦೭೧ ರ ಕಾಲದ್ದು. ಫೋಂಡಾ ಬಳಿ ವೆರೆಂ

ಎಂಬಲ್ಲಿ ಒಂದು ಹಳಗನ್ನಡ ಬರೆಹ ಸಿಕ್ಕಿದೆ. ಹಳೆಯ ಗೋವಾದಲ್ಲಿರುವ ಮ್ಯೂಸಿಯಂ ನಲ್ಲಿರುವ ಕ್ರಿ.ಶ. ಸು. ೧೨೫೪ ರ ವೀರಗಲ್ಲು ವೀರವರ್ಮನ ಕಾಲಕ್ಕೆ ಸೇರಿದ್ದು, ಕನ್ನಡ ಭಾಷೆಯಲ್ಲಿದೆ. ಇದಲ್ಲದೆ ಸಂಸ್ಕೃತಭಾಷೆ. ದೇವನಾಗರಿ ಲಿಪಿಯಲ್ಲಿ ಬರೆದ ಹಲವು ಶಾಸನಗಳಲ್ಲಿ ಕನ್ನಡಪದಪ್ರಯೋಗಗಳು ನುಸುಳಿವೆ. ಗೋಮಂತಕದಲ್ಲಿ ಆಳಿದ ಅನೇಕ ಅರಸುಮನೆತನದ ಶಾಸನಗಳು ಕರ್ನಾಟಕದಲ್ಲೂ ಸಿಕ್ಕಿವೆ. ಇವೆಲ್ಲ ಕನ್ನಡ ಇತಿಹಾಸ, ಸಂಸ್ಕೃತಿ, ಭಾಷೆಯನ್ನು ಸಾರುತ್ತವೆ.

ಇಂದು ಗೋಮಂತಕೀಯರ ಭಾಷೆ, ಕೊಂಕಣಿ. ಕಳೆದ ಮೂರು–ನಾಲ್ಕು ಶತಮಾನಗಳಿಂದ ಇಲ್ಲಿಯ ಜನಕ್ಕೆ ಕನ್ನಡದ ಸಂಪರ್ಕ ಕಡಿದುಹೋಯಿತು. ಆದರೂ ಇಲ್ಲಿಯ ಇಂದಿನ ಪ್ರಚಲಿತ ಕೊಂಕಣಿಯಲ್ಲಿ ಹೇರಳವಾಗಿ ಕನ್ನಡಪದಗಳು ದೊರೆಯುತ್ತವೆ. ಆದರೆ ಪ್ರತಿನಿತ್ಯವೂ ತಮ್ಮ ಭಾಷೆಯಲ್ಲಿ ಉಪಯೋಗಿಸುತ್ತಿರುವ ಕನ್ನಡ ಪದಗಳು ಕನ್ನಡಭಾಷೆಯ ಕಾಣಿಕೆಯೆಂದು ಆ ಜನರು ಅರಿಯರು. ಕನ್ನಡದ ಗಾಢವಾದ ಪ್ರಭಾವ ಇಲ್ಲಿ ಆಗಿದೆ. ಪಲ್ಲಕ್ಕಿ ಎಂಬ ಪದವು ಪಾಲಕಿ ಎಂದಾಗಿದೆ. ಇದೇ ರೀತಿಯಲ್ಲಿ ಮಣೆ–ಮಾಣಾಯ್, ತಂಬಿಗೆ–ತಾಂಬಿಯೋ, ಮಂಚ–ಮಾಚೋ, ಮಡಿವಾಳ–ಮಡಿವಳ, ಬರೆ–ಬರಯ (to write), ಉಲಿ–ಉಲಯ (ಮಾತಾಡು), ತತ್ತಿ–ತಾತಿ (Eggs), ಹುಡುಕು–ಹುಡಕತ, ಧೂಳು–ಧೂಳ (Dust), ದಾಟು–ದಾಟಪ, ಮಂಟಪ–ಮಾಂಟವ್, ಬುಟ್ಟಿ–ಆಕಾಶಬುಟ್ಟಿ, ಹಣತೆ–ಪಣತಿ (ಪಂಟಿ), ಅಂಗಿ–ಅಂಗಿ, ಅಡ್ಡ-ತಿಡ್ಡ–ಆಡತೀಡ, ಪಾಯಸ–ಪಾಯ್ಸ. ಗಾಡಿ-ಗಾಡಿ ಬಾವಿ–ಬಾಂಯ್, ಗೂಡು-ಘುಡ ಎಂದಾಗಿವೆ. ಅಕ್ಕ–ಆಕ್ಕಾ, ಅಣ್ಣ–ಅಣ್ಣ, ಅಜ್ಜ–ಆಜೋ, ಅಜ್ಜಿ–ಆಜೀ ಮೊದಲಾದ ಸಂಬಂಧವಾಚಕಪದಗಳು ಬಳಕೆಯಲ್ಲಿವೆ. ಕೆಲವು ಊರುಗಳ ಹೆಸರು ನೋಡಿ: ಕೇರಿ (Keri), ಫೊಂಡಾ (Ponda)–ಇದು 'ಹೊಂಡ' ಎಂಬ ಪದದಿಂದ ಬಂದಿದ್ದು. ಕಾರಣ ಇದರ ಸುತ್ತುಮುತ್ತು ಸಹ್ಯಾದ್ರಿಯ ಬೆಟ್ಟಗಳ ಸಾಲು ಇದ್ದು, ಈ ಪ್ರದೇಶ ಹೊಂಡದಲ್ಲಿಯೇ ಇದೆ. ಕುಟ್ಟಳ್ಳಿ(Cortalim), ಕುಕ್ಕಳ್ಳಿ (Kunkolim), ದೊಡಾಮಾರ್ಗ–ದೊಡ್ಡಮಾರ್ಗ, ಅಗಸಿ–ಆಗ್ಸಿ (Agosi). ಘರ್ಮಗುಡಿ– ಇಲ್ಲಿ ಗುಡಿ ಎಂಬ ಪದ ಕನ್ನಡದ್ದು. ಮಾಂಡುರ, ಶಿವೋಲಿ (ಶಿವಳ್ಳಿ), ಕೊಲವಾ–ಕಾಲಾಪುರ, ಜಾಂಬಾವಲಿ ಮೊದಲಾದ ಪದಗಳು ಕನ್ನಡದವುಗಳೇ ಎಂದು ಡಾ. ಪಾಂಡುರಂಗರಾವ್ ದೇಸಾಯಿ ಹೇಳಿದ್ದಾರೆ. ಅದೇಕೆ ಜನರ ಹೆಸರುಗಳಲ್ಲಿ ಜಾನಪ್ಪ, ದುರ್ಗಪ್ಪ ಎಂಬ ಹೆಸರುಗಳು ಹೆಗ್ಗಡೆ ಎಂಬ ಕನ್ನಡ ಅಡ್ಡ ಹೆಸರು (Surname) ಗಳು ಇಲ್ಲಿ ಪ್ರಚಲಿತವಾಗಿವೆ. ಇವೆಲ್ಲ ಗೋಮಂತಕದಲ್ಲಿರುವ ಕನ್ನಡದ ಪ್ರಭಾವವೆಂಬುದರಲ್ಲಿ ಸಂದೇಹವಿಲ್ಲ.

ಇಲ್ಲಿಯ ಜಾನಪದ ನೃತ್ಯಗಳಲ್ಲಿ 'ದಶಾವತಾರಿ ಕಾಲಾ' ತುಂಬ ಜನಪ್ರಿಯ. ಇದು ನಮ್ಮ ಕರ್ನಾಟಕದಿಂದ ಬಂದ ಕಲಾಪ್ರಕಾರ. ಆದರೆ ದಶಾವತಾರಿ ಕಾಲಾ

ಇಂದು ಸಂಪೂರ್ಣ ಕೊಂಕಣಿಮಯವಾಗಿದೆ. ಅದು ಅಂದಿನ ಜನಪ್ರಿಯತೆಯನ್ನೂ ಕಳೆದುಕೊಂಡಿದೆ. ಆದರೂ ನಾಂದಿಪದದಲ್ಲಿ ಕನ್ನಡಪದಗಳು ಉಳಿದುಕೊಂಡಿವೆ.

ಕಳೆದ ಎರಡು ಶತಮಾನಗಳಿಂದ ಕರ್ನಾಟಕದೊಂದಿಗಿನ ಸಂಪರ್ಕ ಕನ್ನಡಿಗರಿಗೆ ಕಡಿದುಹೋದುದರಿಂದ ಇಲ್ಲಿ 'ಕನ್ನಡ' ಕ್ರಮೇಣ ಮರೆತುಹೋಯಿತು. ಶಿಕ್ಷಣ-ವೃತ್ತಿ-ವ್ಯಾಪಾರಗಳಿಗೆ ಹೆಚ್ಚಾಗಿ ಮಹಾರಾಷ್ಟ್ರದ ಕಡೆಗೆ ಹೋದರು, ಅಲ್ಲಿ ನೆಲೆಸಿದರು; ರಕ್ತಸಂಬಂಧ ಬೆಳೆಸಿದರು.

ತೀರ ಇತ್ತೀಚಿನ ದಿನಗಳಲ್ಲಿ ಗೋಮಂತಕೀಯರು ಮಹಾರಾಷ್ಟ್ರದತ್ತ ಒಲಿದರು. ೧೯೬೧ ರ ಜನಗಣತಿಯಂತೆ ಗೋವೆಯಲ್ಲಿ ಕನ್ನಡಿಗರ ಸಂಖ್ಯೆ ಕೇವಲ ೮೧೩ (ಆರು ಲಕ್ಷ ಜನಸಂಖ್ಯೆಯಲ್ಲಿ) ಮಾತ್ರ. ಇದು ೧%ಕ್ಕಿಂತ ಈಗ ಹೆಚ್ಚಾಗಿರಬಹುದು. ನಾನು ಓಡಾಡಿ ನೋಡಿದಂತೆ ಇಂದು ಗೋವೆಯಲ್ಲಿ ಕನಿಷ್ಠ. ೬೦-೭೦ ಸಾವಿರ ಜನರು ಕನ್ನಡಿಗರಿದ್ದಾರೆ. ಈ ಕನ್ನಡಿಗರು ಯಾರು ? ಗೋವಾ ೧೯೬೧ ರಲ್ಲಿ ಸ್ವತಂತ್ರವಾದ ಬಳಿಕ ಧಾರವಾಡ, ಬೆಳಗಾಂವ, ಕಾರವಾರ ಜಿಲ್ಲೆಯ ಕನ್ನಡಿಗರು ತಮ್ಮ ವ್ಯಾಪಾರ ನೌಕರಿ, ಕೂಲಿಗಳಿಗಾಗಿ ಗೋವೆಗೆ ಧಾವಿಸಿದರು. ಇಂದು ಮುನಸಿಪಾಲಿಟಿಗಳಲ್ಲಿ ಕಸ ಗೂಡಿಸುವವರಲ್ಲಿ ೧೦೦% ಜನರು ಕನ್ನಡಿಗರು. ಇವರಲ್ಲಿ ಬಹುಸಂಖ್ಯಾಕರು ವಿಜಾಪುರ ಮತ್ತು ಬೆಳಗಾಂವ ಜಿಲ್ಲೆಯವರು. ಕಾರವಾರ ಜಿಲ್ಲೆಯಿಂದ ಬಂದವರಲ್ಲಿ ಅನೇಕರು ನೌಕರಿಯಲ್ಲಿ ಸೇರಿದ್ದಾರೆ. ದ. ಕನ್ನಡ ಜಿಲ್ಲೆಯಿಂದ ಬಂದವರನೇಕರು ಹೊಟೆಲ್ ಉದ್ದಿಮೆ ಸ್ಥಾಪಿಸಿದ್ದಾರೆ. ಅನೇಕ ಕೂಲಿಕಾರರು ಖಣಿಗಳಲ್ಲಿ, ಮಾರ್ಮ ಗೋವಾ ಬಂದರದಲ್ಲಿ ದುಡಿಯುತ್ತಾರೆ. ಇಂದು ಇಲ್ಲಿ ಕನ್ನಡವಿದೆ. ಆದರೆ ಅದು ಕರ್ನಾಟಕದಿಂದ ಬಂದ ಜನರೇ ಆಡುತ್ತಾರೆ. ಕರ್ನಾಟಕದಲ್ಲಿರುವ ಕನ್ನಡದ ವೈವಿಧ್ಯ ವೆಲ್ಲ ಇಲ್ಲಿದೆ. ಇಂದಿಗೂ ಗೋಮಂತಕೀಯರು ಕನ್ನಡ ಕಲಿಯುವುದಿಲ್ಲ. ಕಲಿಯಲು ಅಪೇಕ್ಷಿಸುವುದಿಲ್ಲ. ಕನ್ನಡ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುವುದಿಲ್ಲ.

ಗೋಮಂತಕೀಯ ವ್ಯಾಪಾರಿಗಳಿಗೆ ಕನ್ನಡ ಮಾತನಾಡಲು ಕಲಿಸಿದ ಕೀರ್ತಿ ಅಶಿಕ್ಷಿತ ಕನ್ನಡ ಕೂಲಿಗಳಿಗೇ ಸೇರಬೇಕು. ಇಲ್ಲಿ ಬಂದ ಕೂಲಿಕಾರರಿಗೆ ಕನ್ನಡ ವನ್ನುಳಿದು ಬೇರೆ ಭಾಷೆ ತಿಳಿಯುವುದಿಲ್ಲ. ಅಲ್ಲಿಯ ವ್ಯಾಪಾರಿಗಳಿಗೆ ಕನ್ನಡ ಬರುವು ದಿಲ್ಲ. ಕೈಸನ್ನೆಯಿಂದ ವ್ಯಾಪಾರವಾಗುವುದಿಲ್ಲ. ಆದುದರಿಂದ ಖಣಿಗಳಲ್ಲಿರುವ ಸ್ಥಳೀಯ ವ್ಯಾಪಾರಿಗಳು ತಮ್ಮ ವ್ಯಾಪಾರ ಕುದುರಿಸಿಕೊಳ್ಳಲು, ಗಿರಾಕಿಗಳನ್ನು ಆಕರ್ಷಿಸಲು ಕನ್ನಡ ಕಲಿತಿದ್ದಾರೆ. ಇಂದು ಗೋಮಂತಕಕ್ಕೆ ಕನ್ನಡ ಪತ್ರಿಕೆಗಳು ಪುಸ್ತಕಗಳು ಬರುತ್ತವೆ. ಕನ್ನಡ ಚಲಚಿತ್ರಗಳು ಬರುತ್ತವೆ. ಕನ್ನಡ ಸಾಂಸ್ಕೃತಿ ಕಾರ್ಯಕ್ರಮಗಳು ಆಗುತ್ತವೆ. ಇಷ್ಟಾದರೂ ಗೋಮಂತಕೀಯರು ಕನ್ನಡದತ್ತ ಒಲವು ತೋರುವುದಿಲ್ಲ.



ರಜತಮಹೋತ್ಸವ ಸಮಾರಂಭದ ಉದ್ಘಾಟನೆ

ಡಾ. ಎ. ಎಸ್. ಅಡಕೆ, ಕುಲಪತಿ ಡಾ. ಆರ್. ಸಿ. ಹಿರೇಮಠ (ಅಧ್ಯಕ್ಷರು), ಮಾನ್ಯ ಸಚಿವ ಡಾ. ಟಿ. ಎ. ಪೈ (ಮುಖ್ಯ ಅತಿಥಿಗಳು)

[ಫೋಟೋ : ಪ್ರಭಾಕರ ನಾಯಕ]

ಕುಲಪತಿಗಳ ಸ್ವಾಗತ ಭಾಷಣ

ರಜತಮಹೋತ್ಸವ ಉದ್ಘಾಟನ ಸಮಾರಂಭ

೨೨ ಅಕ್ಟೋಬರ ೧೯೭೪

ಮಾನ್ಯ ಸಚಿವ ಡಾ. ಟಿ. ಎ. ಪೈ ಅವರೇ,

ಮಹಾಜನರೇ,

ಕರ್ನಾಟಕ ವಿಶ್ವವಿದ್ಯಾಲಯದ ರಜತಮಹೋತ್ಸವಕ್ಕೆ ಮಾನ್ಯ ಮಂತ್ರಿಗಳನ್ನೂ ತಮ್ಮನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ವಿಶ್ವವಿದ್ಯಾಲಯದ ಈ ರಜತಮಹೋತ್ಸವಕ್ಕೆ ಕೇಂದ್ರಸರಕಾರದ ಬೃಹದುದ್ಯಮ ಹಾಗೂ ನಾಗರಿಕ ಪೂರೈಕೆಗಳ ಸಚಿವರಾದ ಡಾ. ಟಿ. ಎ. ಪೈ ಅವರು ಮುಖ್ಯ ಅತಿಥಿಗಳಾಗಿ ದೊರೆತುದು ಒಂದು ಭಾಗ್ಯವಿಶೇಷವೆಂದು ಹೇಳಬೇಕು. ಕರ್ನಾಟಕದ ಶ್ರೇಷ್ಠಪುತ್ರರಾದ ಡಾ. ಟಿ. ಎ. ಪೈ ಅವರು ತಮ್ಮ ಬುದ್ಧಿಮತ್ತೆ, ಕರ್ತೃತ್ವಶಕ್ತಿಗಳಿಂದ ಭಾರತೀಯ ಖ್ಯಾತಿಯನ್ನು ಗಳಿಸಿದವರು. ಕರ್ನಾಟಕದ ಇತಿಹಾಸದಲ್ಲಿ ಪೈ ಮನೆತನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಆ ಮನೆತನಕ್ಕೆ ಅಪೂರ್ವರತ್ನವೆನಿಸಿದ ಪದ್ಮಭೂಷಣ ಡಾ. ತೋನ್ಸೆ ಅನಂತ ಪೈಗಳು ಬ್ಯಾಂಕನ್ನು ಕಟ್ಟಲಿ, ಮಂತ್ರಿಪದವನ್ನು ನಿರ್ವಹಿಸಲಿ, ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳಲಿ ತಮ್ಮ ವ್ಯಕ್ತಿತ್ವದ ಪ್ರಭಾವಮುದ್ರೆಯನ್ನು ಸ್ಪಷ್ಟವಾಗಿ ಮೂಡಿಸಿದ್ದಾರೆ. ವಾಸ್ತವವಾದ, ಮಾನವತಾವಾದ, ಲೋಕಕಲ್ಯಾಣ ದೃಷ್ಟಿ ಇವು ಅವರ ವ್ಯಕ್ತಿತ್ವದ ವೈಶಿಷ್ಟ್ಯಗಳು. ಮಾತು ಕಡಿಮೆ, ಕೃತಿ ಹೆಚ್ಚು. ತಮ್ಮ ನಡತೆಯಿಂದಲೇ ಒಂದು ಬಗೆಯ ಆದರ್ಶವನ್ನು ಜನತೆಯ ಮುಂದಿಟ್ಟ ಮಹಾವ್ಯಕ್ತಿಗಳು. ಇವರ ಅಮೃತಹಸ್ತದಿಂದ ಪ್ರಾರಂಭವಾಗುತ್ತಿರುವ ಈ ರಜತಮಹೋತ್ಸವ ಸುವರ್ಣಮಯವಾಗುವುದರಲ್ಲಿ ಸಂದೇಹವಿಲ್ಲ.

ಉದಯ

ಕರ್ನಾಟಕ ವಿಶ್ವವಿದ್ಯಾಲಯವು ಕನ್ನಡಿಗರ "ಸ್ವಯಂಪ್ರಜ್ಞೆ" ಮತ್ತು "ವಿಶ್ವಪ್ರಜ್ಞೆ" ಗಳ ಕನಸಿನ ಮೂರ್ತಸ್ವರೂಪ. ಕಳೆದ ಕೆಲವು ಶತಮಾನಗಳಿಂದ ಕರ್ನಾಟಕವು ಪರಕೀಯ ದಾಸ್ಯ, ಪರಂಪರೆಯ ಅವಜ್ಞೆಗಳ ಮೂಲಕ ನಿಃಶೂನ್ಯಸ್ಥಿತಿಯಲ್ಲಿದ್ದಿತು.

ಉತ್ತರಕರ್ನಾಟಕದ ನಾಲ್ಕು ಜಿಲ್ಲೆಗಳು 'ಸದರ್ನ ಮಹಾರಾಷ್ಟ್ರ' ಎಂದೇ ಕರೆಯಿಸಿಕೊಳ್ಳುತ್ತಿದ್ದವು. ಆಗ ನಾವು ಕನ್ನಡಿಗರು, ನಮ್ಮ ಭೂಮಿ ಕರ್ನಾಟಕ, ನಮ್ಮ ಮಾತು ಕನ್ನಡ ಎಂಬ ಪ್ರಜ್ಞೆ ರಸೆಲ್, ಡೆಪ್ಯುಟಿ ಚೆನ್ನಬಸಪ್ಪ, ವೆಂಕಟ ರಂಗೋ ಕಟ್ಟಿ, ಗಂಗಾಧರ ಮಡಿವಾಳೇಶ್ವರ ತೂರಮರಿ ಅವರಂತಹ ಪುಣ್ಯಜೀವಿಗಳ ಪರಿಶ್ರಮದಿಂದ ಮರುಕಳಿಸಿತು. ಧಾರವಾಡವೇ ಈ ಜಾಗೃತಿಗೆ ಕೇಂದ್ರಸ್ಥಾನವಾಗಿ ಟ್ರೇನಿಂಗಕಾಲೇಜ, ವಿದ್ಯಾವರ್ಧಕ ಸಂಘ, ಎಲ್. ಈ. ಅಸೋಸಿಯೇಶನ್‌ಗಳಂತಹ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸಂಘಗಳು ಮೈದೋರಿದವು. ಅರಟಾಳ ರುದ್ರಗೌಡ, ರೊದ್ದ ಶ್ರೀನಿವಾಸ ರಾಯರಂತಹ ಕರ್ತೃತ್ವ ಶಾಲಿಗಳ ಮುಂಧೋರಣೆ ಹಾಗೂ ಪ್ರಯತ್ನಗಳಿಂದ ೧೯೧೭ರಲ್ಲಿ ಕರ್ನಾಟಕ ಕಾಲೇಜು ಸ್ಥಾಪನೆಯಾಯಿತು. ಇದೇ ಸುಮಾರಿಗೆ ಬೆಳಗಾವಿಯಲ್ಲಿ ಕೆ. ಎಲ್. ಈ. ಸೊಸಾಯಿಟಿ, ಬಾಗಿಲುಕೋಟೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘ, ವಿಜಾಪುರದಲ್ಲಿ ಬಿ. ಎಲ್. ಡಿ. ಈ. ಸೊಸಾಯಿಟಿ, ಧಾರವಾಡದಲ್ಲಿ ಕರ್ನಾಟಕ ಎಜ್ಯುಕೇಶನ್ ಬೋರ್ಡ- ಈ ಶಿಕ್ಷಣಸಂಸ್ಥೆಗಳು ಉದಯವಾಗಿ, ಉಚ್ಚ ಶಿಕ್ಷಣದ ಪ್ರಸಾರಕ್ಕೆ ನಡುಕಟ್ಟಿ ನಿಂತವು. ಈ ಹತ್ತೆಂಟು ವಿದ್ಯಾಸಂಸ್ಥೆಗಳು ಮುಂಬೈ ವಿಶ್ವ ವಿದ್ಯಾಲಯದ ಅಂಗಸಂಸ್ಥೆಗಳಾಗಿ ಬೆಳೆದುಬರುತ್ತಿದ್ದವು. ೧೯೩೨ ರ ಹೊತ್ತಿಗೆ ಆಗಿನ ಮುಂಬೈ ರಾಜ್ಯದ ಶಿಕ್ಷಣಮಂತ್ರಿಗಳಾಗಿದ್ದ ಸರ್ ಸಿದ್ದಪ್ಪ ಕಂಬಳಿ ಅವರ ಕಾಲದಲ್ಲಿ, ಪ್ರಾದೇಶಿಕ ವಿಶ್ವವಿದ್ಯಾಲಯಗಳ ಬಗೆಗೆ ಒಂದು ಸಮ್ಮೇಲನ ಸೇರಿ ಕರ್ನಾಟಕ, ಗುಜರಾಥ, ಮಹಾರಾಷ್ಟ್ರಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಬೇಕೆಂದು ಸ್ವೀಕರಿಸಿದ ನಿರ್ಣಯವು ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯದ ಅವಶ್ಯಕತೆಯಿದ್ದಿತೆಂಬ ಸುಪ್ತ ಚೈತನ್ಯವನ್ನು ಧ್ವನಿಸುತ್ತದೆ.

೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದೊಡನೆಯೇ ಈ ದೇಶದ ಸುಪ್ತಶಕ್ತಿ ಸಹಸ್ರಮುಖವಾಗಿ ಪ್ರಕಟವಾಗತೊಡಗಿತು. ಕರ್ನಾಟಕಕ್ಕೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯದ ಅವಶ್ಯಕತೆಯಿದೆಯೆಂಬುದನ್ನು ಮುಂಬೈ ಸರಕಾರ ಕಂಡುಕೊಳ್ಳುವಲ್ಲಿ, ೧೯೪೯ ರಂದು ಕರ್ನಾಟಕ ವಿಶ್ವವಿದ್ಯಾಲಯದ ಮಸೂದೆಯು ಸ್ವೀಕೃತವಾಗಿ, ೧೯೫೦ ನೆಯ ಮಾರ್ಚ ತಿಂಗಳು ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು.

ಪ್ರಾರಂಭದಲ್ಲಿ ಈ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರ ಉತ್ತರಕರ್ನಾಟಕದ ನಾಲ್ಕು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದಿತು. ಆಗ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟ ಕಾಲೇಜುಗಳ ಸಂಖ್ಯೆ ೧೨, ವಿದ್ಯಾರ್ಥಿಗಳ ಸಂಖ್ಯೆ ೨೩೩೩.

ಮುಂಬೈ ವಿಶ್ವವಿದ್ಯಾಲಯವು ಪ್ರಾರಂಭದಲ್ಲಿ ಪರೀಕ್ಷಾಪ್ರಧಾನವಾದ ವಿದ್ಯಾ ಕೇಂದ್ರವಾಗಿದ್ದುದು ಸರ್ವಶ್ರುತ. ಸಂಶೋಧನ, ವಿಶ್ವವಿದ್ಯಾಲಯದ ಒಂದು ಅಂಗವೆಂಬುದನ್ನು ಅದು ಸ್ಥಾಪಿಸಿದ School of Economics ಸೂಚಿಸುವಂತಿದ್ದಿತು.

ಆದರೆ ಪ್ರಾರಂಭದಲ್ಲಿಯೇ ಬೋಧನೆ, ಸಂಶೋಧನೆ, ಪ್ರಕಟನೆಗಳು ತನ್ನ ಮುಖ್ಯ ಧ್ಯೇಯುಗಳೆಂದು ಕಂಡುಕೊಂಡುದು ಕರ್ನಾಟಕ ವಿಶ್ವವಿದ್ಯಾಲಯುದ ವೈಶಿಷ್ಟ್ಯವಾಗಿದೆ. ಸ್ನಾತಕೋತ್ತರಶಿಕ್ಷಣ ತನ್ನ ಪ್ರಥಮ ಕರ್ತವ್ಯವೆಂದು ಸಾರಿದುದು ಇದರ ಇನ್ನೂ ಹೆಚ್ಚಿನ ವೈಶಿಷ್ಟ್ಯವಾಗಿದೆ. ಅಂತೆಯೇ ವಿಶ್ವವಿದ್ಯಾಲಯ ಸ್ಥಾಪಿತವಾದ ಒಂದು ವರ್ಷದಲ್ಲಿ ಕನ್ನಡ ಮತ್ತು ಸಂಖ್ಯಾಶಾಸ್ತ್ರ— ಈ ಎರಡು ಸ್ನಾತಕೋತ್ತರ ವಿಭಾಗಗಳು ಅಸ್ತಿತ್ವದಲ್ಲಿ ಬಂದವು. ಪ್ರಥಮ ಕುಲಪತಿಗಳಾಗಿ ನಿಯಾಮಕಗೊಂಡ ನ್ಯಾಯಮೂರ್ತಿ ಶ್ರೀ ಆರ್. ಎ. ಜಾಗೀರದಾರ, ಮೊಟ್ಟಮೊದಲನೆಯ ಚುನಾಯಿತ ಕುಲಪತಿಗಳಾದ ಶ್ರೀ ಸಿ. ಸಿ. ಹುಲಕೋಟಿ ಇವರು ವಿಶ್ವವಿದ್ಯಾಲಯುದ ಬಾಲ್ಯದ ಬೆಳವಣಿಗೆಯನ್ನು ಪಿತೃಸದೃಶರಾಗಿ ನೋಡಿಕೊಂಡರು. ಅಂದಿನ ಧನಸಹಾಯ ಮತ್ತು ಆವಶ್ಯಕತೆಗಳಿಗೆ ತಕ್ಕಂತೆ ಕೆಮಿಸ್ಟ್ರಿ, ಫಿಜಿಕ್ಸ ಮತ್ತು ಜಿಯಾಲಜಿ ಸ್ನಾತಕೋತ್ತರ ವಿಭಾಗಗಳು ಮೈದೋರಿದ್ದುದೂ ಡಾ. ತಾವಡೆ, ಡಾ. ನರಗುಂದ ಅವರಂತಹ ಮೇಧಾವಿಗಳು ಪ್ರಾಧ್ಯಾಪಕರಾಗಿ ಬಂದುದೂ ಒಂದು ಭಾಗ್ಯವೆಂದೇ ಹೇಳಬೇಕು. ಈ ಸಮಯುಕ್ಕೆ ಕಾಲೇಜುಗಳ ಸಂಖ್ಯೆ ೧೨ ರಿಂದ ೧೪ ಕ್ಕೆ, ವಿದ್ಯಾರ್ಥಿಗಳ ಸಂಖ್ಯೆ ೨೩೩೫ ರಿಂದ ೬೫೪೯ ಕ್ಕೆ ಏರಿ, ಇಸ್ವಿ ೧೯೫೪ ಸನ್ನಿಹಿತವಾಗುವಲ್ಲಿ ವಿಶ್ವವಿದ್ಯಾಲಯ ತನ್ನ ಉದಯ ಕಾಲವನ್ನು ಕ್ರಮಿಸಿತು.

ವೈಭವ

ವಿಶ್ವವಿದ್ಯಾಲಯುದ ಪುಣ್ಯವೇ ಪುರುಷರೂಪ ತಾಳಿದಂತೆ ರ್‍ಯಾಂಗ್ಲರ ಡಿ. ಸಿ. ಪಾವಟೆ ಅವರು ೧೯೫೪ ರಲ್ಲಿ ಕುಲಪತಿಗಳಾಗಿ ಅಧಿಕಾರವಹಿಸಿಕೊಂಡುದು ಈ ವೈಭವ ಯುಗದ ನಾಂದಿಯೆಂದೇ ಹೇಳಬೇಕು. ಈ ಸಮಯುದಲ್ಲಿ ಅಸ್ತಿತ್ವಕ್ಕೆ ಬಂದ ವಿಶ್ವವಿದ್ಯಾಲಯುದ ಧನಸಹಾಯ ಆಯೋಗ, ಮುಂದೆ ಎರಡು ವರ್ಷಗಳಲ್ಲಿ ರೂಪ ಪಡೆದ ಕರ್ನಾಟಕ ಏಕೀಕರಣ, ಡಾ. ಪಾವಟೆ ಅವರ ಪರ್ವತೋಪಮ ವ್ಯಕ್ತಿತ್ವ— ಈ ಮೂರು ಶಕ್ತಿಗಳ ಮುಪ್ಪುರಿಯಿಂದ ವಿಶ್ವವಿದ್ಯಾಲಯು ವಿಶ್ವವಿದ್ಯಾಲಯುವೇ ಆಯಿತು, ವಿಶ್ವವಿಖ್ಯಾತಿಯುನ್ನು ಪಡೆಯಿತು. ಈಗ ಡಾ. ಪಾವಟೆ ಅವರು ಚಾಲುಕ್ಯ ವಿಕ್ರಮಾದಿತ್ಯನಂತೆ ವಿಶ್ವವಿದ್ಯಾಲಯುದ ಶಕಪುರುಷರಾದರು.

ಪ್ರಾರಂಭದಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕಲೆಕ್ಟರ ಆಫೀಸಿನ ಆವರಣದಲ್ಲಿ ಅಧಿಷ್ಠಾನಗೊಳ್ಳಬೇಕೆಂದು ವಾದಿಸುವವರಿಗೆ ದಂಗುಬಡಿಯುವಂತೆ ವಿಶ್ವವಿದ್ಯಾಲಯು ಬೆಳೆಯಿತು; ಹುಕ್ಕ-ಬುಕ್ಕರು ಅಡವಿಯುನ್ನು ಕಡಿದು ವಿಜಯುನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಅನುಭವ ಪ್ರತ್ಯಕ್ಷವಾಯಿತು. ಎಲ್ಲೋರಾದ ಕೈಲಾಸ ದೇವಾಲಯೋಪಮ ಶಿಕ್ಷಣಸೌಧ ಮೊದಲಾದ ಗಗನಚುಂಬಿ ಕಟ್ಟಡಗಳು ಒಂದೊಂದಾಗಿ ೩೬೫ ಎಕರೆ ಭೂಮಿಯುನ್ನು ವ್ಯಾಪಿಸಿದವು. ದೇಶದ ನಾನಾ ಭಾಗಗಳ ವಿದ್ವಾಂಸರು

ನಡೆದುಬಂದು ಕಲೆ, ವಿಜ್ಞಾನ, ಸಂಸ್ಕೃತಿ ಮುಂತಾದ ದಿಸೆಗಳಲ್ಲಿ ಅಪೂರ್ವ ಸಂಶೋಧನೆಗಳನ್ನು ಕೈಗೆತ್ತಿಕೊಂಡರು. ಇವರ ಅಮೃತ ಸೇವೆಯಿಂದ ಪ್ರತಿಯೊಂದು ವಿಭಾಗ ಸ್ವಯಂಪೂರ್ಣವಾಗಿ ಬೆಳೆದು, ಈ ವಿದ್ಯಾಕೇಂದ್ರ ಭಾರತದ ಅತ್ಯುಚ್ಚ ವಿಶ್ವವಿದ್ಯಾಲಯಗಳ ಸಾಲಿನಲ್ಲಿ ಶೋಭಿಸಿತು. ಒಂದು ಕಡೆಗೆ ಕನ್ನಡಭಾಷೆ, ಸಂಸ್ಕೃತಿ, ಸಾಹಿತ್ಯ, ಇತಿಹಾಸಗಳ ಅಭಿವೃದ್ಧಿ ವಿವಿಧ ಮುಖವಾಗಿ ನಡೆದರೆ, ಇನ್ನೊಂದು ಕಡೆಗೆ ವಿದೇಶ ಭಾಷೆಗಳ ಅಧ್ಯಯನ, ವಿಜ್ಞಾನದ ಸಂಶೋಧನೆ, ಸಮಾಜಶಾಸ್ತ್ರಗಳ ವಿವೇಚನೆಗಳು ಭರದಿಂದ ನಡೆದವು. ಇಲ್ಲಿಯ ನೂರಾರು ಜನ ಪ್ರಾಧ್ಯಾಪಕರು ತಮ್ಮ ಸಂಶೋಧನೆಯ ಸಾಮರ್ಥ್ಯವನ್ನು ದೇಶ ವಿದೇಶಗಳಲ್ಲಿ ಪ್ರಕಟಿಸಿದರು. ಕರ್ನಾಟಕ ವಿಶ್ವವಿದ್ಯಾಲಯ **'ಅಭಿನವ ನಲಂದಾ'** ವಿಶ್ವವಿದ್ಯಾಲಯವೆನಿಸಿತು.

ಇದಕ್ಕೆ ಜೊತೆಜೊತೆಯಾಗಿ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರ ೪ ಜಿಲ್ಲೆಗಳಿಂದ ೮ ಜಿಲ್ಲೆಗಳಿಗೆ ವ್ಯಾಪಿಸಿತು. ಕರ್ನಾಟಕ ಆರ್ಟ್ಸ ಕಾಲೇಜು, ಸೈನ್ಸ ಕಾಲೇಜು, ಕಾಲೇಜ ಆಫ್ ಎಜ್ಯುಕೇಶನ್, ಲಾ ಕಾಲೇಜು, ಪಬ್ಲಿಕ್ ಸ್ಕೂಲ್, ಪ್ರಾಥಮಿಕ ಶಾಲೆ- ಹೀಗೆ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ವಿಶ್ವವಿದ್ಯಾಲಯ ಮೈಚಾಚಿತು. ಈ ಅವಧಿಯ ಕಾಲೇಜು ಸಂಖ್ಯೆ ೧೪ ರಿಂದ ೭೨ ಕ್ಕೆ, ವಿದ್ಯಾರ್ಥಿಗಳ ಸಂಖ್ಯೆ ೬೩೪೯ ರಿಂದ ೩೮೩೪೫ ಕ್ಕೆ ಏರಿತು. ಡಾ. ಪಾವಟೆ ಅವರು ವಿಶ್ವವಿದ್ಯಾಲಯದ ಮಹಾಶಿಲ್ಪಿಯಾಗಿ ನಿಂತು ಈ ಸರ್ವ ವೈಭವಗಳನ್ನು ಸಾಧ್ಯಮಾಡಿ ತೋರಿದರು.

ವಿಕಾಸ

ಹೀಗೆ ಪರಿಪೂರ್ಣದೆಡೆಗೆ ನಡೆದ ವಿಶ್ವವಿದ್ಯಾಲಯಕ್ಕೆ ಧಾರವಾಡ ಕೇಂದ್ರ ಸಾಲದಾಯಿತು; ವಿಕಾಸ ಅನಿವಾರ್ಯವೆನಿಸಿತು. ಈ ಸಮಯಕ್ಕೆ ಕುಲಪತಿ ಸ್ಥಾನದ ಹೊಣೆ ಹೊತ್ತವರು ಡಾ. ಎ. ಎಸ್. ಅಡಕೆ ಅವರು. ಸುಪ್ರಸಿದ್ಧ ಎಂಜನಿಯರಾಗಿ, ಸುರತ್ಕಲ್ ಎಂಜನಿಯರಿಂಗ ಕಾಲೇಜಿನ ಶಿಲ್ಪಿಗಳಾಗಿದ್ದ ಅವರು ಈ ವಿಕಸನ ಕಾರ್ಯವನ್ನು ಸಮರ್ಥರೀತಿಯಿಂದ ನಿರ್ವಹಿಸಿದರು.

ಕಲಬುರ್ಗಿಯ ಸ್ನಾತಕೋತ್ತರ ಕೇಂದ್ರ, ಈ ಪ್ರಯತ್ನದ ಪ್ರಥಮ ಫಲ. ಕರ್ನಾಟಕ ವಿಶ್ವವಿದ್ಯಾಲಯ ಆಗ ೩೬೫ ಎಕರೆ ಭೂಮಿಯನ್ನು ಪಡೆದಿದ್ದರೆ ಈಗ ಕಲಬುರ್ಗಿ ಸ್ನಾತಕೋತ್ತರ ಕೇಂದ್ರ ೮೩೫ ಎಕರೆ ಭೂಮಿಯನ್ನು ಪಡೆದು ಹೊಸ ಹೊಸ ಕಟ್ಟಡಗಳಿಂದ ಕನ್ನಡ, ಇಂಗ್ಲೀಷ, ಕೆಮಿಸ್ಟ್ರಿ, ಮ್ಯಾಥಮೆಟಿಕ್ಸ, ಪೊಲಿಟಿಕಲ್ ಸೈನ್ಸ ವಿಭಾಗಗಳಿಂದ ಶೋಭಿಸಿತು.

ಇಂತಹದೇ ಇನ್ನೊಂದು ಪವಾಡ, ಸೊಂಡೂರಿನಲ್ಲಿ ಸ್ಥಾಪಿತವಾದ ಸ್ನಾತಕೋತ್ತರ ತಾಂತ್ರಿಕ ಶಿಕ್ಷಣಕೇಂದ್ರ, ವಿಜಯನಗರ ಸ್ಟೀಲಪ್ಲ್ಯಾಂಟ ಅಸ್ತಿತ್ವಕ್ಕೆ ಬಂದಾಗ ಅದಕ್ಕೆ

ಬೇಕಾಗುವ ತಜ್ಞರನ್ನು, ಸಹಾಯ ಸಲಕರಣೆಗಳನ್ನು ಹೊರಗಿನಿಂದ ತರುವಂತಾಗದೆ ಇಲ್ಲಿಂದಲೇ ಪೂರೈಸುವಂತಾಗಬೇಕೆಂಬ ಮಹದಾಕಾಂಕ್ಷೆಯ ಫಲ ಈ ಕೇಂದ್ರ. ಕರ್ನಾಟಕ ರಾಜ್ಯಸರಕಾರ ಈ ಕೇಂದ್ರದ ಸ್ಥಾಪನೆಗೆ ಅನುಮತಿಯನ್ನಿತ್ತು, ವಿಶೇಷ ಧನಸಹಾಯ ನೀಡಿದುದು ಪ್ರಶಂಸನೀಯವಾಗಿದೆ.

ಈ ಅವಧಿಯ ಇನ್ನೊಂದು ಸಾಧನೆಯೆಂದರೆ ಕಾರವಾರದಲ್ಲಿ ಸ್ಥಾಪಿಸಿದ 'ಮರಿನ್ ಬಯೋಲಜಿ' ಅಧ್ಯಯನಕೇಂದ್ರ. ಬಹುದಿನಗಳ ಆವಶ್ಯಕತೆಯನ್ನು ಪೂರೈಸುವ ರೀತಿಯಲ್ಲಿ ಈ ಕೇಂದ್ರ ಅನುಷ್ಠಾನಗೊಂಡು ವ್ಯವಸ್ಥಿತವಾಗಿ ಮುನ್ನಡೆದಿದೆ.

ಹೀಗೆ ಹೊರಗಿನ ಕೇಂದ್ರಗಳಲ್ಲಿ ವಿಶ್ವವಿದ್ಯಾಲಯದ ಪ್ರಗತಿ ದಿಟವಾಗತೊಡಗಿದಂತೆ, ಕೇಂದ್ರಸ್ಥಾನವಾದ ಧಾರವಾಡದ ಸ್ನಾತಕೋತ್ತರ ವಿಭಾಗಗಳೂ ವಿಸ್ತಾರವಾಗತೊಡಗಿದವು. ಕೆಲವು ಹೊಸ ವಿಭಾಗಗಳೂ ಅಸ್ತಿತ್ವಕ್ಕೆ ಬಂದು, ಎಲ್ಲ ವಿಭಾಗಗಳಲ್ಲಿ ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಇಮ್ಮಡಿ ಮುಮ್ಮಡಿ ವರ್ಧಿಸಿತು. ಈ ಅವಧಿಯಲ್ಲಿ ಕಾಲೇಜುಗಳ ಸಂಖ್ಯೆ ೭೨ ರಿಂದ ೧೧೪ ಕ್ಕೆ ಏರಿತು.

ಹೀಗೆ ಸಾರ್ಥಕವಾದ ೨೫ ವರ್ಷಗಳನ್ನು ಕಳೆದು ರಜತೋತ್ಸವಕ್ಕೆ ಸಿದ್ಧವಾದಾಗ, ವಿಶ್ವವಿದ್ಯಾಲಯಕ್ಕೆ ಒಂದು ಹೊಸತಿರುವು ಸಂಪ್ರಾಪ್ತವಾಯಿತು. ಶ್ರೀಮತಿ ಜಯಲಕ್ಷಮ್ಮಣ್ಣಿ ಅವರು ಕುಲಪತಿಗಳಾಗಿ ಬಂದು, ಒಂದು ವರ್ಷ ದಕ್ಷತೆಯಿಂದ ಈ ವಿದ್ಯಾಸಂಸ್ಥೆಯನ್ನು ಮುನ್ನಡೆಸಿದರು; ಇದರ ಉಚ್ಚ ಪರಂಪರೆಯನ್ನು ಕಾಯ್ದುಕೊಂಡು ಬಂದರು. ಸಧ್ಯ ನಮ್ಮ ಕಾಲೇಜುಗಳ ಸಂಖ್ಯೆ ೧೧೪ ರಿಂದ ೧೩೮ ಕ್ಕೆ ಏರಿದೆ.

ಇದು ಇಪ್ಪತ್ತೈದು ವರ್ಷಗಳ ಪ್ರಗತಿಪಥ. ಈ ನಡೆದುಬಂದ ದಾರಿಯಲ್ಲಿ ಇನ್ನೂ ಕೆಲವು ಅವಿಸ್ಮರಣೀಯ ಹೆಜ್ಜೆಗಳನ್ನು ಗುರುತಿಸಬಹುದು.

ಗ್ರಂಥಭಾಂಡಾರ, ವಿಶ್ವವಿದ್ಯಾಲಯ ಸರಸ್ವತಿಯ ಹಣೆಯ ಕುಂಕುಮ. ಇದನ್ನು ವಿಶ್ವವಿದ್ಯಾಲಯ ಬಹಳ ಎಚ್ಚರಿಕೆ, ದಕ್ಷತೆಗಳಿಂದ ಬೆಳೆಸಿಕೊಂಡು ಬಂದಿದೆ. ಪ್ರಾರಂಭದ ಒಂದು ವರ್ಷದಲ್ಲಿ ಸುಮಾರು ೧೨ ಸಾವಿರ ಹೊತ್ತಿಗೆಗಳನ್ನು ಹೊಂದಿದ್ದ ಇದರ ಗ್ರಂಥಸಂಪತ್ತು ಈಗ ೨ ಲಕ್ಷಕ್ಕೆ, ನಿಯತಕಾಲಿಕೆಗಳ ಸಂಪತ್ತು ೧೫೦೦ ಕ್ಕೆ ಮುಟ್ಟಿ ಅದು ಈಗ ನಮ್ಮ ದೇಶದ ಉನ್ನತ ಗ್ರಂಥಭಾಂಡಾರಗಳಲ್ಲಿ ಒಂದೆನಿಸಿದೆ. ವೈಜ್ಞಾನಿಕತೆ, ವ್ಯವಸ್ಥೆ, ವಿತರಣೆ ದೃಷ್ಟಿಯಿಂದ ಅಪೂರ್ವವೆನಿಸಿದೆ.

ಸಂಶೋಧನೆಯ ಕ್ಷೇತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಉನ್ನತ ಸ್ಥಾನದಲ್ಲಿವೆಯೆಂದು ಹೇಳಲು ಹೆಮ್ಮೆಯೆನಿಸುತ್ತದೆ. ಇಲ್ಲಿಯ ೨೭ ವಿಭಾಗಗಳಲ್ಲಿ ಅಧ್ಯಯನ, ಅಧ್ಯಾಪನ, ಸಂಶೋಧನ ನಿರಂತರ ನಡೆದಿದೆ. ೨೫ ವರ್ಷಗಳ ಅವಧಿಯಲ್ಲಿ ೨೦೦

ಪಿಎಚ್. ಡಿ. ಪ್ರಬಂಧಗಳು ಹೊರಬಂದು, ಅನೇಕ ಕ್ಷೇತ್ರಗಳಲ್ಲಿ ಸಂಶೋಧನೆಯ ಕ್ಷಿತಿಜವನ್ನು ವಿಸ್ತರಿಸಿವೆ.

ಈ ವಿಶ್ವವಿದ್ಯಾಲಯದ ಇನ್ನೊಂದು ವೈಶಿಷ್ಟ್ಯವೆಂದರೆ ಇದರ ಪ್ರಕಟನೆಗಳು. ಕನ್ನಡ, ಇಂಗ್ಲಿಷ, ಸಂಸ್ಕೃತ ಭಾಷೆಗಳಲ್ಲಿ ವಿಶ್ವವಿದ್ಯಾಲಯ ಪ್ರಕಟಿಸಿದ ೪೦೦ ಪ್ರಕಟನೆಗಳು ದೇಶ ವಿದೇಶಗಳ ಜನತೆಯ ಚಿತ್ತವನ್ನು ಆಕರ್ಷಿಸಿದ್ದು, ನಮ್ಮಲ್ಲಿ ಧನ್ಯತೆಯನ್ನು ಉಕ್ಕಿಸುತ್ತದೆ. ಈ ಪ್ರಕಟನಾ ವಿಭಾಗದ ಇನ್ನೊಂದು ಕಾರ್ಯ ವ್ಯಾಸಂಗವಿಸ್ತರಣ. ವಿಶ್ವವಿದ್ಯಾಲಯವೆಂಬ ಅಭಿದಾನಕ್ಕೆ ಅರ್ಥತುಂಬುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು, ನಗರ ಪ್ರದೇಶಗಳಲ್ಲಿ ವಿಶೇಷೋಪನ್ಯಾಸಗಳನ್ನು ನಡೆಸಿಕೊಂಡು ಬಂದುದು ಜ್ಞಾನದಾಸೋಹಕ್ಕೆ ಉದಾಹರಣೆಯಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಅಸ್ತಿತ್ವದಲ್ಲಿ ಬಂದುದರ ಪ್ರಥಮೋದ್ದೇಶ ಪ್ರಾದೇಶಿಕ ಸಂಸ್ಕೃತಿ ಅರಳುವಂತೆ, ಮಗಮಗಿಸುವಂತೆ ಮಾಡುವುದು. ಈ ಕಾರ್ಯವನ್ನು ಪೂರೈಸಲು ಪಣತೊಟ್ಟ ರೀತಿಯಲ್ಲಿ ಅದು ಮೊಟ್ಟಮೊದಲು ಕನ್ನಡ ವಿಭಾಗವನ್ನು ಸ್ಥಾಪಿಸಿ, ಅದರ ಅಭಿವೃದ್ಧಿ ತನ್ನ ಪ್ರಥಮ ಕರ್ತವ್ಯವೆಂದು ಭಾವಿಸಿತು. ಬೋಧನ, ಸಂಶೋಧನ, ಪ್ರಕಟನ ಕಾರ್ಯಗಳ ಮೂಲಕ ಕನ್ನಡ ವಿಭಾಗ ಕ್ಷಿಪ್ರದಲ್ಲಿ ಹೆಮ್ಮರವಾಗಿ ಬೆಳೆದು, ಈಗ ಕನ್ನಡ ಅಧ್ಯಯನಪೀಠವಾಗಿ ಪರಿವರ್ತನಗೊಂಡಿದೆ. ಈ ವಿಭಾಗ ಪ್ರಕಟಿಸಿದ ವಚನಸಾಹಿತ್ಯ, ಶೂನ್ಯಸಂಪಾದನೆಯ ಭಾಷಾಂತರಗಳು ಜಾಗತಿಕ ಸಾಹಿತ್ಯಕ್ಕೆ ಅಪೂರ್ವಕಾಣಿಕೆಯಾಗಿವೆ. ಪಠ್ಯಪುಸ್ತಕ ರಚನೆ ತೃಪ್ತಿಕರವಾಗಿ ನಡೆದಿದೆ. ಅಧ್ಯಯನಪೀಠ ಈ ವರೆಗೆ ೨೭ ಪಿಎಚ್. ಡಿ. ಪ್ರಬಂಧಗಳನ್ನು, ೧೬೬ ಗ್ರಂಥಗಳನ್ನು ಬೆಳಕಿಗೆತಂದುದು ಹೆಮ್ಮೆಯ ಸಂಗತಿಯಾಗಿದೆ.

ಭಾರತೀಯ ಪುರಾತತ್ತ್ವದ ಅವಶೇಷಗಳು ಲೋಕವಿಖ್ಯಾತವಾಗಿವೆ. ಇವುಗಳ ಸಂಗ್ರಹ–ಸಂರಕ್ಷಣೆಯ ಕಾರ್ಯವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆ ಯಶಸ್ಸಿನಿಂದ ನಡೆಸಿಕೊಂಡು ಬಂದಿದೆ. ಇಲ್ಲಿಯ ವಸ್ತು ಸಂಗ್ರಹಾಲಯ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಮುಖ ಆಕರ್ಷಣೆಯೆನಿಸಿದೆ.

ರಾಷ್ಟ್ರಪಿತ ಗಾಂಧೀಜಿಯವರ ಶುಭನಾಮ, ಕರ್ನಾಟಕ ವಿಶ್ವವಿದ್ಯಾಲಯದ ಗಾಂಧೀ ಭವನದಲ್ಲಿ ನಂದಾದೀಪವಾಗಿ ನಿಂತಿದೆ. ಗಾಂಧೀಜಿಯವರಿಗೆ ಪಂಚಪ್ರಾಣವಾಗಿದ್ದ ಸಮಾಜಸೇವೆ, ಅಹಿಂಸೆ, ಶಾಂತಿ, ಸತ್ಯ, ಪತಿತೋದ್ಧಾರ ತತ್ತ್ವಗಳ ಅಧ್ಯಯನ, ಅನುಷ್ಠಾನಗಳಿಗೆ ನೆಲೆಯಾಗಿ ಇದು ಬೆಳೆಯುತ್ತಲಿದೆ.

ವಿದ್ಯಾರ್ಥಿಗಳೇ ವಿಶ್ವವಿದ್ಯಾಲಯದ ಉಸಿರು. ೨೫ ವರ್ಷಗಳುದ್ದಕ್ಕೂ ಅವರ ಬೌದ್ಧಿಕ, ದೈಹಿಕ, ಮಾನಸಿಕ ಅಭಿವೃದ್ಧಿಗಾಗಿ ವಿಶ್ವವಿದ್ಯಾಲಯ ಶ್ರೀಗಂಧವಾಗಿ

ಸವೆದಿದೆ. ಅವರಿಗೋಸ್ಕರ ಕಟ್ಟಿದ ಭವ್ಯವಾದ ವಸತಿಗೃಹಗಳು, ಕ್ರೀಡಾರಂಗ, ಕಲಾರಂಗ ಕೇಂದ್ರಗಳು ವಿಶ್ವವಿದ್ಯಾಲಯಕ್ಕೆ ಮಂಗಲಪ್ರದವಾಗಿ ನಿಂತಿವೆ. ಇದಕ್ಕೆ ತಕ್ಕಂತೆ ನಡೆದುಕೊಂಡ ನಮ್ಮ ವಿದ್ಯಾರ್ಥಿಗಳ ಶಿಸ್ತು, ಸಂಯಮ, ಸಂಘಟನ, ಯಶಸ್ಸುಗಳು ಭಾರತೀಯ ವಿಶ್ವವಿದ್ಯಾಲಯಗಳಲ್ಲಿಯೇ ಆದರ್ಶಪ್ರಾಯವೆನಿಸಿವೆ.

ವಿಶ್ವವಿದ್ಯಾಲಯದ ನಡೆವಳಿಕೆಯಲ್ಲಿ ವಿಶಿಷ್ಟ ಪಾತ್ರವನ್ನು ವಹಿಸಿದೆ, ಇಲ್ಲಿಯ ಆಡಳಿತವರ್ಗ. ಒಂದು ಸಂಸ್ಥೆಯ ಔನ್ನತ್ಯಕ್ಕೆ ಅವಶ್ಯವಾಗಿರುವ ಪರಿಶುದ್ಧ ಶೀಲ–ಚಾರಿತ್ರ್ಯಗಳಿಂದ ಆಡಳಿತವನ್ನು ನಡೆಸಿಕೊಂಡು ಬಂದ ಶ್ರೇಯಸ್ಸು, ಈ ಆಡಳಿತ ವರ್ಗಕ್ಕೆ ಸಲ್ಲುತ್ತದೆ.

ವಿಶ್ವವಿದ್ಯಾಲಯ ಒಂದು ದೊಡ್ಡ ಕುಟುಂಬ. ಇದರ ಸರ್ವಸದಸ್ಯರ ಯೋಗ ಕ್ಷೇಮ ವಿಶ್ವವಿದ್ಯಾಲಯದ ಪ್ರಥಮ ಕರ್ತವ್ಯ. ಈ ದೃಷ್ಟಿಯಿಂದ ಪ್ರಾರಂಭಿಸಿದ ಹಲವು ಅನುಕೂಲತೆಗಳಲ್ಲಿ ಒಂದಾದ ಆರೋಗ್ಯಕೇಂದ್ರ, ಕಳೆದ ಹಲವು ವರ್ಷಗಳಿಂದ ಸೇವೆಸಲ್ಲಿಸುತ್ತ ಬಂದಿದೆ.

ದಿನ ಬೆಳಗಾದರೆ ಕಟ್ಟಡ ವಿಭಾಗ, ಉದ್ಯಾನ ವಿಭಾಗ, ವರ್ಕಶಾಪ್ ವಿಭಾಗಗಳು ವಿಶ್ವವಿದ್ಯಾಲಯದ ಕಾರ್ಯಭಾರವನ್ನು ಮುಮ್ಮುಖವಾಗಿ ಮುನ್ನಡೆಸುತ್ತವೆ. ಇಲ್ಲಿಯ ನಿಸರ್ಗರಮಣೀಯತೆಗೆ ಒಪ್ಪುವಂತೆ ಸಾಲುಸಾಲಾಗಿ ಸೌಧಗಳನ್ನು ನಿರ್ಮಿಸುತ್ತಿರುವ ಕಟ್ಟಡ ವಿಭಾಗದ ಮೂಲಕ ಈ ಸೌಧಗಳ ಸುಸ್ಥಿತಿ, ಆವರಣದ ಓರಣಗಳನ್ನು ಕಾಪಾಡಲಾಗುತ್ತಿದೆ.

ಸುತ್ತಲಿನ ಗುಡ್ಡ, ಸದಾ ಹಚ್ಚಹಸಿರಾಗಿ ಶೋಭಿಸುತ್ತಿರುವ ಕೊಳ್ಳಗಳಿಂದ ವಿಶ್ವವಿದ್ಯಾಲಯದ ಪರಿಸರ ಸಹಜಸೌಂದರ್ಯಶಾಲಿನಿಯಾಗಿದೆ. ಉದ್ಯಾನ ವಿಭಾಗದ ಪರಿಶ್ರಮದಿಂದ ಇಲ್ಲಿಯ ವನೋಪವನಗಳು ಸದಾ ಪ್ರಫುಲ್ಲಿತವಾಗಿ ವಿಶ್ವವಿದಾಲಯದ ಆವರಣಕ್ಕೆ ಅಮರಾವತಿಶೋಭೆಯನ್ನು ನೀಡಿವೆ. ಇಲ್ಲಿಯ ಬೊಟಾನಿಕಲ್ ಗಾರ್ಡನ್ ಒಂದೆಡೆ ಸಸ್ಯಶಾಸ್ತ್ರದ ಅಧ್ಯಯನಕ್ಕೆ ಉಪಯುಕ್ತವಾದರೆ, ಇನ್ನೊಂದೆಡೆ ರುದ್ರ ರಮಣೀಯತೆಯನ್ನು ಬೀರುತ್ತಿದೆ.

ವಿಜ್ಞಾನ ವಿಭಾಗಗಳಿಗೆ ಬೇಕಾಗುವ ಸಲಕರಣೆಗಳ ಉತ್ಪಾದನೆ, ತಿದ್ದುಪಡಿ, ಪರಿವರ್ತನೆ ಮುಂತಾದ ಕಾರ್ಯಗಳನ್ನು ಸೆಂಟ್ರಲ್ ವರ್ಕಶಾಪ್ ಸಮರ್ಥವಾಗಿ ಹೊತ್ತು ನಿತ್ತರಿಸುತ್ತಿವೆ.

ವಿಶ್ವವಿದ್ಯಾಲಯದಲ್ಲಿ ಮುದ್ರಣಕಾರ್ಯದ ಒತ್ತಡ, ದಿನದಿನವೂ ಅಧಿಕವಾಗುತ್ತ ನಡೆದಿದೆ. ಇದನ್ನು ಶಕ್ತಿಮೀರಿ ಕೈಗೂಡಿಸಿಕೊಡುತ್ತಿದೆ, ನಮ್ಮ ಮುದ್ರಣಾಲಯ.

ಇದು ೨೫ ವರ್ಷಗಳ ಸಾಧನೆಯ ವಿಹಂಗಮನೋಟ.

ಭವಿಷ್ಯ

ಒಬ್ಬ ವ್ಯಕ್ತಿಯ ಜೀವನದಲ್ಲಿ ಗಣನೀಯವೆನಿಸುವ ೨೫ ವರ್ಷಗಳ ಅವಧಿ, ಒಂದು ಮಹಾಸಂಸ್ಥೆಯ ಜೀವನಲ್ಲಿ ೨೫ ನಿಮಿಷಗಳಿಗೆ ಸಮಾನವಾದುದು. ಇಷ್ಟು ಕಿರಿಯ ಅವಧಿಯಲ್ಲಿ ಈ ವಿಶ್ವವಿದ್ಯಾಲಯ ಪಡೆದ ಸಿದ್ಧಿ ಹಿರಿದು. ಆದರೆ ಇಷ್ಟರಿಂದಲೇ ನಾವು ತೃಪ್ತಿಪಡುವಂತಿಲ್ಲ. ರಜತೋತ್ಸವವನ್ನು ಆಚರಿಸುತ್ತಿರುವ ಈ ಮಂಗಲಪ್ರಸಂಗದಲ್ಲಿ ಮುಂದಿನ ಸುಳುಹುಗಳನ್ನು ರೂಪಿಸಿಕೊಳ್ಳುವುದು ಅವಶ್ಯವೆನಿಸಿದೆ.

ವಿಶ್ವವಿದ್ಯಾಲಯದ ಆರ್ಥಿಕವ್ಯವಸ್ಥೆಯನ್ನು ನೋಡಿದರೆ ಇಲ್ಲಿ ಸರಕಾರ, ವಿಶ್ವವಿದ್ಯಾಲಯದ ಧನಸಹಾಯ ಆಯೋಗಗಳ ಪಾತ್ರ ಒಡೆದುಕಾಣುತ್ತದೆ. ಹಿಂದಿನ ನಲಂದಾ, ತಕ್ಷಶಿಲಾದಂತಹ ವಿಶ್ವವಿದ್ಯಾಲಯಗಳೂ ಘಟಿಕಾಸ್ಥಾನಗಳೂ ಸಾರ್ವಜನಿಕರ ಉದಾರ ದಾನಗಳಿಂದ ಪೋಷಿತವಾಗುತ್ತಿದ್ದವೆಂದು ಇಲ್ಲಿಯ ಕಲ್ಲುಗಳು ಸಾರುತ್ತಿವೆ. ಈ ಪರಂಪರೆಯನ್ನು ಕನ್ನಡಿಗರು ಮುಂದುವರಿಸಿಕೊಂಡು ಬಂದಿರುವರೆಂಬುದಕ್ಕೆ ಅವರು ಕಟ್ಟಿ ಬೆಳೆಸಿದ ಬೆಳಗಾವಿಯ ಕೆ. ಎಲ್. ಈ. ಸೊಸೈಟಿ, ಬಾಗಿಲುಕೋಟೆಯ ಬಸವೇಶ್ವರ ವಿದ್ಯಾವರ್ಧಕಸಂಘ, ವಿಜಾಪುರದ ಬಿ. ಎಲ್. ಡಿ. ಈ. ಅಸೋಸಿಯೇಶನ್, ಧಾರವಾಡದ ಕರ್ನಾಟಕ ಎಜ್ಯುಕೇಶನ್ ಬೋರ್ಡ, ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘ, ಕಲಬುರ್ಗಿಯ ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಮತ್ತು ಹೈದ್ರಾಬಾದ ಕರ್ನಾಟಕ ಎಜ್ಯುಕೇಶನ್ ಸೊಸಾಯಿಟಿ, ಕಾರವಾರದ ಕೆನರಾ ವೆಲ್‌ಫೇರ್ ಟ್ರಸ್ಟ ಮುಂತಾದ ಮಹಾಸಂಸ್ಥೆಗಳೇ ಸಾಕ್ಷಿ. ಈ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ೧೩೭ ಕಾಲೇಜುಗಳಲ್ಲಿ ೧೨೦ ಸಾರ್ವಜನಿಕರಿಂದ ನಡೆಯುತ್ತಿರುವ ಖಾಸಗಿ ಕಾಲೇಜುಗಳೆಂಬುದು ಅತ್ಯಂತ ಗಮನಾರ್ಹ. ಈ ಸಂಸ್ಥೆಗಳಿಗೆ ಸರಕಾರ ಉದಾರ ಧನಸಹಾಯವನ್ನು ಸಲ್ಲಿಸುತ್ತಿದ್ದರೂ ಅವುಗಳ ಅಭಿವೃದ್ಧಿಯಲ್ಲಿ ಸಾರ್ವಜನಿಕರ ಪಾಲು, ಪಾತ್ರ ಅವಿಸ್ಮರಣೀಯ. ಇವುಗಳನ್ನು ಪೋಷಿಸಿದ ಸಾರ್ವಜನಿಕರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತ, ಅದೇ ಸಾರ್ವಜನಿಕರು ವಿಶ್ವವಿದ್ಯಾಲಯಕ್ಕೂ ಧನಸಹಾಯವನ್ನು ಸಲ್ಲಿಸುವುದು ಈಗ ಅವಶ್ಯವಿದೆಯೆಂಬುದನ್ನು ಪ್ರಕಟಪಡಿಸುತ್ತೇನೆ.

ರಜತೋತ್ಸವದ ಅಂಗವಾಗಿ ಸಾರ್ವಜನಿಕರ ಧನಸಹಾಯದಿಂದ ಕೆಲವು ವಿಶೇಷ ಸಂಸ್ಥೆಗಳನ್ನು ಸ್ಥಾಪಿಸಬೇಕೆಂಬ ಸಂಕಲ್ಪ, ವಿಶ್ವವಿದ್ಯಾಲಯಕ್ಕಿದೆ. ಈ ಧ್ಯೇಯವನ್ನರಿತು ಉದಾರದಾನಿ ಶ್ರೀ ತಮ್ಮಪ್ಪಣ್ಣ ಕೌಸಾಳಿ ಅವರು ೧ ಲಕ್ಷ ರೂಪಾಯಿಗಳ ನಿಧಿಯನ್ನು ಅರ್ಪಿಸಲು ಮುಂದೆ ಬಂದುದು ಈ ವಿಶ್ವವಿದ್ಯಾಲಯದ ೨೫ ವರ್ಷಗಳ ಇತಿಹಾಸದಲ್ಲಿ ಪ್ರಥಮ ದಾಖಲೆಯೆನಿಸಿದೆ. ಇದೇರೀತಿ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಉದ್ದಿಮ

ದಾರರು, ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕರು, ಮಠಾಧೀಶರು ಈ ಕಾರ್ಯದಲ್ಲಿ ನಿರತರಾಗಿರುವುದೊಂದು ಸಂತೋಷದ ಸಂಗತಿ. ಇವರೆಲ್ಲರಿಗೆ ಕೃತಜ್ಞತೆಗಳು.

ವಿಶ್ವವಿದ್ಯಾಲಯಕ್ಕೆ ಈಗಿರುವ ಮುಖ್ಯ ಕೊರತೆಗಳೆಂದರೆ ಆಡಿಟೋರಿಯಂ, ಸ್ಟೇಡಿಯಂ ಮತ್ತು ಎಂಟೂ ಜಿಲ್ಲೆಗಳ ಹೆಸರಿನಲ್ಲಿ ವಿದ್ಯಾರ್ಥಿಗಳ ವಸತಿಗಾಗಿ ಜಿಲ್ಲಾಭವನಗಳು. ಇದಲ್ಲದೆ ವಿಶ್ವವಿದ್ಯಾಲಯದ ಅಂತಃಶಕ್ತಿಗೆ ಒಪ್ಪುವಂತಹ, ಘನತೆಯನ್ನು ಎತ್ತಿತೋರಿಸುವಂತಹ ಒಂದು ಗ್ರಂಥಭಂಡಾರ ಕಟ್ಟಡದ ಆವಶ್ಯಕತೆ, ಕಳೆದ ೨೫ ವರ್ಷಗಳಿಂದಲೂ ಇದ್ದು, ಈ ರಜತೋತ್ಸವದ ಸ್ಮಾರಕವಾಗಿ ಅದನ್ನು ಬೇಗ ಪೂರೈಸುವ ದೃಢಸಂಕಲ್ಪ ಮಾಡಲಾಗಿದೆ. ಶಾಖೋಪಶಾಖೆಯಾಗಿ ಬೆಳೆದು ನಿಂತ ಕನ್ನಡ ಅಧ್ಯಯನಪೀಠಕ್ಕೂ ಭೌತಶಾಸ್ತ್ರ ವಿಭಾಗಕ್ಕೂ ಸ್ವತಂತ್ರ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಕಲಾ ಮಹಾವಿದ್ಯಾಲಯ, ಮುದ್ರಣಾಲಯ, ಅತಿಥಿಗೃಹ, ಪ್ರಾಧ್ಯಾಪಕವರ್ಗದ ವಸತಿಗೃಹ, ಆಡಳಿತವರ್ಗದ ವಸತಿಗೃಹಗಳ ನಿರ್ಮಾಣಕಾರ್ಯವೂ ಆಡಳಿತ ಕಟ್ಟಡದ ವಿಸ್ತರಣೆ ಕಾರ್ಯವೂ ವಿಶ್ವವಿದ್ಯಾಲಯದ ಕಣ್ಣಮುಂದಿರುವ ಆವಶ್ಯಕಥೆಗಳು. ಈ ಆವಶ್ಯಕತೆಗಳ ಅನುಷ್ಠಾನದ ಜೊತೆಗೆ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಪ್ರಾಧ್ಯಾಪಕರಿಗೆ ಸಂಶೋಧನ ವೇತನಗಳ ವ್ಯವಸ್ಥೆ ಮಾಡುವ ಸಂಕಲ್ಪವಿದೆ. ಲೋಕವಿಖ್ಯಾತ ಪ್ರಕಟನೆಗಳನ್ನು ಹೊರತರುವ ಹಂಬಲವಿದೆ. ಎಲ್ಲಕ್ಕೂ ಮಿಗಿಲಾಗಿ ಲಲಿತಕಲೆ, ಬಿಸಿನೆಸ್ ಮ್ಯಾನೇಜಮೆಂಟ, ಪತ್ರಿಕೋದ್ಯಮ, ಗಾಂಧೀ ಅಧ್ಯಯನ, ಸೆಂಟ್ರಲ್ ಇನ್ಸ್ಟ್ರುಮೆಂಟೇಶನ್ ಲೆಬರೊಟರಿ, ಮರಿನ್‌ಸೈನ್ಸ, ಮೈಕ್ರೊಬಯಾಲಜಿ, ಓಶಿಯಾನೊಗ್ರಾಫಿ, ಎನ್‌ವಿರಾನಮೆಂಟಲ್ ಬಯಾಲಜಿ ಇತ್ಯಾದಿ ವಿಭಾಗಗಳು ಇಷ್ಟರಲ್ಲಿಯೇ ಮೂರ್ತಸ್ವರೂಪ ತಾಳಲಿವೆ.

ಇದೇರೀತಿ ಕಲಬುರ್ಗಿ, ಸೊಂಡೂರ, ಕಾರವಾರಗಳಲ್ಲಿಯ ವಿಶ್ವವಿದ್ಯಾಲಯ ಕೇಂದ್ರಗಳ ಅಭಿವೃದ್ಧಿ ಭರದಿಂದ ನಡೆಯಬೇಕಾಗಿದೆ. ಒಂದು ಹೊಸ ವಿಶ್ವವಿದ್ಯಾಲಯಕ್ಕೆ ಬೇಕಾಗುವ ಎಲ್ಲ ಸೌಕರ್ಯಗಳನ್ನು ಕಲಬುರ್ಗಿ ಕೇಂದ್ರಕ್ಕೆ ಪೂರೈಸಬೇಕೆಂಬ ನಿರ್ಧಾರ ವಿಶ್ವವಿದ್ಯಾಲಯಕ್ಕಿದೆ. ಸೊಂಡೂರದಲ್ಲಿ ಅರ್ಥಸೈನ್ಸಗಳಿಗೆ ಸಂಬಂಧಪಟ್ಟ ಹೊಸಹೊಸ ವಿಭಾಗಗಳನ್ನು ಪ್ರಾರಂಭಿಸಿ, ಭೂಗತವಾಗಿರುವ ನಿಸರ್ಗಸಂಪತ್ತನ್ನು ಹೊರಗೆ ತೆಗೆಯುವ ಮಹತ್ಕಾರ್ಯ ಆಗಬೇಕಾಗಿದೆ. ಈ ರಜತೋತ್ಸವ ಪ್ರಸಂಗದ ಇನ್ನೊಂದು ಪವಿತ್ರ ಸಂಕಲ್ಪವೆಂದರೆ ಬೆಳಗಾವಿಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರತಿಷ್ಠಾಪಿಸುವುದು. ಶೈಕ್ಷಣಿಕ ಅಭಿವೃದ್ಧಿ, ಗುಣಮಟ್ಟಗಳ ದೃಷ್ಟಿಯಿಂದ ಬೆಳಗಾವಿಗೆ ಗಮನಾರ್ಹ ಸ್ಥಾನ ಸಲ್ಲುತ್ತದೆ. ಅಲ್ಲಿ ಸ್ನಾತಕೋತ್ತರ ಕೇಂದ್ರದ ಆವಶ್ಯಕತೆಯಿದೆಯೆಂಬುದು ನಿರ್ವಿವಾದ. ಈ ಕಾರ್ಯವನ್ನು ಪೂರೈಸಿದರೆ ಕರ್ನಾಟಕ ವಿಶ್ವವಿದ್ಯಾಲಯ ಕೃತಾರ್ಥವಾಗುತ್ತದೆ.

ಇಂದಿನ ಶಿಕ್ಷಣಪದ್ಧತಿ ಸೂರ್ಯವತ್ತು ವರ್ಷಗಳಿಂದ ನಡೆದುಬಂದ ನವಕಲು ದಾರಿ. ಸದ್ಯದ ಸಮಾಜದ ಆವಶ್ಯಕತೆಗಳನ್ನು ಪೂರೈಸುವ ಸಾಮರ್ಥ್ಯ ಅದಕ್ಕಿಲ್ಲ. ಈ ಕೊರತೆಯನ್ನು ತುಂಬಿಕೊಡುವುದು ನಮ್ಮ ವಿಶ್ವವಿದ್ಯಾಲಯಗಳ ಮುಂದಿರುವ ಜ್ವಲಂತ ಪ್ರಶ್ನೆಯಾಗಿದೆ. ವಿಶ್ವವಿದ್ಯಾಲಯ ಸಮಾಜವನ್ನು ಬಿಟ್ಟು ದೂರ ನಿಲ್ಲ ಬೇಕೆಂಬ ವಿಚಾರ ಒಂದು ಭ್ರಮೆ. ಕಾರಣ ಸರಕಾರ, ವಿಶ್ವವಿದ್ಯಾಲಯ ಮತ್ತು ಸಮಾಜ ಈ ಮೂರೂ ಸೇರಿ ಸಮಾಜದ ಸಮಸ್ಯೆಗಳನ್ನು ಬಗೆಹರಿಸುವಂತಹ ಶಿಕ್ಷಣ ಪದ್ಧತಿಯನ್ನು ರೂಪಿಸಬೇಕಾಗಿದೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಈ ಪ್ರಜ್ಞೆ ಈಗಾಗಲೇ ಒಡಮೂಡಿ ಆ ದಿಕ್ಕಿನಲ್ಲಿ ಪ್ರಯತ್ನಿಸುತ್ತಲಿದೆ. ನಮ್ಮ ಅಭ್ಯಾಸಕ್ರಮ, ಬೋಧನಪದ್ಧತಿ, ಸಂಶೋಧನರೀತಿ, ಪರೀಕ್ಷಾವಿಧಾನ ಈ ಎಲ್ಲ ಹಂತಗಳಲ್ಲಿಯೂ ನವೀನ ಉಪಕ್ರಮಗಳನ್ನು ಕಂಡುಹಿಡಿವ ಕಾರ್ಯದಲ್ಲಿ ಅದು ಆಸಕ್ತಿಹೊಂದಿದೆ.

ಇವೆಲ್ಲ ಯೋಜನೆಗಳು ಕಾರ್ಯಗತವಾಗುವುದಕ್ಕಾಗಿ ಸರಕಾರ, ಧನಸಹಾಯ ಆಯೋಗ, ಸಾರ್ವಜನಿಕರು, ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಆಡಳಿತವರ್ಗ–ತ್ರಿಕರಣಪೂರ್ವಕ ಪಾಲುಗೊಳ್ಳುವುದು ಅವಶ್ಯವಿದೆ. ಯಾವ ಮಹೋದ್ದೇಶಕ್ಕಾಗಿ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದೆಯೋ ಅದನ್ನು ಸಾರ್ಥಕಗೊಳಿಸಲು ನಾವೆಲ್ಲ ಪ್ರಯತ್ನಿಸಬೇಕಾಗಿದೆ. ಈ ಪ್ರಸಂಗದಲ್ಲಿ ನಮ್ಮ ಕಣ್ಣುಮುಂದೆ, ಪಂಡಿತ ಜವಾಹರಲಾಲ ನೆಹರೂ ಅವರ ಉಕ್ತಿ ಸದಾ ನಿಲ್ಲಲೆಂದು ಹಾರೈಸುತ್ತೇನೆ.

"A University stands for humanism, for tolerance, for reason, for progress, for the adventure of ideas and for the search for truth. It stands for the onward march of the human race towards even higher objectives. If the universities discharge their duty adequately, then it is well with the nation and the people. But if the temple of learning itself becomes a home of narrow bigotry and petty objectives, how then will the nation prosper or a people grow in stature?"

ಇನ್ನೊಮ್ಮೆ ಮಾನ್ಯ ಮಂತ್ರಿಗಳಿಗೂ ತಮ್ಮೆಲ್ಲರಿಗೂ ಸ್ವಾಗತ ಕೋರಿ ವಿರಮಿಸುತ್ತೇನೆ.

• •

ಸಂಪಾದಕೀಯ

ಬೆಳ್ಳಿಹಬ್ಬದ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ೨೫ ವರ್ಷ ತುಂಬುವಲ್ಲಿ "ಕರ್ನಾಟಕ ಭಾರತಿ"ಗೆ ೮ ವರ್ಷ ತುಂಬುತ್ತಲಿವೆ. ಒಂದು ಸಂಸ್ಥೆಯು, ಒಂದು ಪತ್ರಿಕೆಯು ವಯೋಮಾನದಲ್ಲಿ ಇಷ್ಟು ವರ್ಷಗಳು ಬಹಳವಲ್ಲದಿದ್ದರೂ ಅಡಿಪಾಯ ಹಾಕಿದ ಆರಂಭದ ದಿನಗಳೆಂಬ ಕಾರಣದಿಂದ ಇವುಗಳನ್ನು ಮಹತ್ವದ ವರ್ಷಗಳೆಂದೇ ಪರಿಗಣಿಸಬೇಕಾಗುತ್ತದೆ.

ಮಾತೃಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ 'ಬೆಳ್ಳಿ ಹೊಸ್ತಿಲು' ದಾಟುತ್ತಲಿರುವ ಹಬ್ಬದ ಸಂದರ್ಭದಲ್ಲಿ ಒಂದು ಕಲಶಕೃತಿಯಾಗಿ ಬರುತ್ತಲಿದೆ, 'ಕರ್ನಾಟಕ ಭಾರತಿ'. ಇಂದಿನ ಕಾಲದಲ್ಲಿ ಜನತಾಮಟ್ಟ ಮತ್ತು ವಿದ್ವಜ್ಜನತಾಮಟ್ಟಗಳಲ್ಲಿ ಪತ್ರಿಕೆಗಳು ವಹಿಸುವ ಪಾತ್ರ ತುಂಬಾ ಹಿರಿದು. ಅವರ ಸಂವೇದನೆ–ಸಂಶೋಧನೆಗಳಿಗೆ ಧ್ವನಿಯಾಗಿ ನಿಂತ, ಕರ್ನಾಟಕದ ಇಂಥ ಪ್ರಮುಖಪತ್ರಿಕೆಗಳಲ್ಲಿ 'ಕರ್ನಾಟಕ ಭಾರತಿ'ಯೂ ಒಂದು. ಅಯನ ಪತ್ರಿಕೆಯಾಗಿ ಹುಟ್ಟಿ, ತ್ರೈಮಾಸಿಕ ಪತ್ರಿಕೆಯಾಗಿ ಬೆಳೆಯುತ್ತಲಿರುವ ಇದು ಕರ್ನಾಟಕದ ಒಳಹೊರಗಿನ ಕನ್ನಡಿಗರಿಗೆ ತಕ್ಕ ವೇದಿಕೆಯಾಗಿ ನಿಂತು, ಈ ವರೆಗೆ ಸಂಶೋಧನೆ, ಸಂಪಾದನೆ, ಕಾವ್ಯ, ಕಥೆ, ನಾಟಕ, ಪ್ರಬಂಧ ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದ ಸುಮಾರು **ಐದುಸಾವಿರ ಪುಟಗಳ** ಸಾಹಿತ್ಯವನ್ನು ಪ್ರಕಟಿಸಿದೆ. ಈಗ ತನ್ನ ಘನತೆಗೆ ತಕ್ಕ ರೀತಿಯಲ್ಲಿ ಕನ್ನಡ 'ಭಾಷಾಪ್ರಭೇದ' ವಿಷಯಕ್ಕೆ ಸಂಬಂಧಪಟ್ಟ ವಿಶೇಷಸಂಚಿಕೆಯನ್ನು ಪ್ರಕಟಿಸುತ್ತಲಿದೆ.

'ಬಹುರತ್ನಾ ಹಿ ವಸುಂಧರಾ' ಎಂಬುದು ಎಷ್ಟು ಸತ್ಯವೋ 'ಬಹುಭಾಷಾ ಹಿ ವಸುಂಧರಾ' ಎಂಬುದೂ ಅಷ್ಟೇ ಸತ್ಯ. ವಿದ್ವಾಂಸರ ಸಂಶೋಧನೆಗೆ ನಿಲುಕದೆ ಅಜ್ಞಾತವಾಸದಲ್ಲಿರುವ ಅನೇಕ ಭಾಷೆಗಳನ್ನು ಬಿಟ್ಟರೂ ಈ ವರೆಗೆ ಪತ್ತೆಹಚ್ಚಲಾದ ಜಗತ್ತಿನ ಭಾಷೆಗಳ ಸಂಖ್ಯೆ ಸುಮಾರು ೪೦೦೦. ಭಾರತದಲ್ಲಿಯೇ ಸುಮಾರು ೧೫೦೦ ಭಾಷೆಗಳು ಪ್ರಚಾರದಲ್ಲಿವೆ. ಇವುಗಳಲ್ಲಿ ಕನ್ನಡ, ಸುದೀರ್ಘವಯೋಮಾನ ಶ್ರೀಮಂತ ಸ್ಥಾನಮಾನಗಳನ್ನು ಹೊಂದಿದೆ.

೧೯೭೧ನೆಯ ವರ್ಷದ ಜನಗಣತಿ ಪ್ರಕಾರ ಭಾರತದಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ೨,೧೭,೦೭,೯೧೮. ಇವರಲ್ಲಿ ಕರ್ನಾಟಕದಲ್ಲಿ ವಾಸಿಸುವವರು

೧,೯೩,೨೮,೨೭೦; ಹೊರನಾಡಿನಲ್ಲಿ ವಾಸಿಸುವವರು ೨೩,೭೯,೬೪೮. ಇಷ್ಟು ಜನರಲ್ಲಿ ಪ್ರಾಣವಾಗಿ ಪ್ರವಹಿಸುತ್ತಲಿದೆ ಕನ್ನಡ.

ಬಸವಣ್ಣನವರ "ಈ ಲೋಕದೊಳಗೆ ಮತ್ತೆ ಅನಂತಲೋಕ" ಎಂಬ ಮಾತಿನಂತೆ "ಈ ಕನ್ನಡದೊಳಗೆ ಮತ್ತೆ ಅನಂತಕನ್ನಡ"ಗಳು ಪದರುಪದರಾಗಿ ಸೇರಿಕೊಂಡುದು ತೀರ ಸಹಜವಾಗಿದೆ. ಯಾವುದೇ ಜನಾಂಗದ ವಚೋರೂಪವನ್ನು ಭಾಷೆ (Language), ಪ್ರಾಂತಭೇದ (Dialect), ಭಾಷಾಪ್ರಭೇದ (Language Variation), ವ್ಯಕ್ತಿಭಾಷೆ (Idiolect) ಎಂದು ವಿಂಗಡಿಸಿ ಅಭ್ಯಸಿಸುವ ರೂಢಿಯಿದೆ. ಇವುಗಳಲ್ಲಿ ಪ್ರಸ್ತುತ ಸಂಚಿಕೆ ಕನ್ನಡ ನುಡಿಯ 'ಭಾಷಾಪ್ರಭೇದ'ದ ವಿವೇಚನೆಗೆ ಮೀಸಲಾಗಿದೆ. ಅಲ್ಲಲ್ಲಿ ಬಂದ ಒಂದೆರಡು ಬಿಡಿಪುಸ್ತಕ, ಬಿಡಿಲೇಖನಗಳನ್ನು ಬಿಟ್ಟರೆ ಕನ್ನಡ ಭಾಷಾಪ್ರಭೇದದ ಬಗ್ಗೆ ಸಮಗ್ರದೃಷ್ಟಿಯಿಂದ ನಡೆದ ಪ್ರಥಮ ಅಭ್ಯಾಸವಿದು. ಇಷ್ಟೇ ಏಕೆ ಭಾರತದ ಯಾವ ಪ್ರಾಂತದಲ್ಲಿಯೂ ಈ ಬಗೆಯ ಅಭ್ಯಾಸ ನಡೆದಂತಿಲ್ಲ. ಮಾತೃಸಂಸ್ಥೆಯಾದ ಕರ್ನಾಟಕ ವಿಶ್ವವಿದ್ಯಾಲಯದ ಘನತೆಗೆ ತಕ್ಕಂತೆ 'ಕರ್ನಾಟಕ ಭಾರತಿ' ಪ್ರಕಟಿಸುತ್ತಿರುವ ಈ 'ಕನ್ನಡದ ಕಥೆ', ರಜತಮಹೋತ್ಸವದ ಒಂದು ಉಜ್ವಲ ಸಾಧನೆಯೆಂದು ನಮ್ರವಾಗಿ ನಿವೇದಿಸಬಯಸುತ್ತೇವೆ.

ಈ ಸಂಚಿಕೆಯಲ್ಲಿ ಆದಿಶಿಲ್ಪ, ಮಧ್ಯಶಿಲ್ಪ, ಅಂತ್ಯಶಿಲ್ಪ ಹೆಸರಿನ ಮೂರು ವಿಭಾಗಗಳನ್ನು ಕಲ್ಪಿಸಲಾಗಿದೆ. **'ಆದಿಶಿಲ್ಪ'**ವು 'ಭಾಷಾಪ್ರಭೇದ'ದ ಲಕ್ಷಣ, ಅಭ್ಯಾಸದ ವಿಧಾನ– ಆವಶ್ಯಕತೆ ಮತ್ತು ಕನ್ನಡ 'ಭಾಷಾಪ್ರಭೇದ'ದ ಲಕ್ಷಣ, ಅಧ್ಯಯನದ ಚರಿತ್ರೆ ಇತ್ಯಾದಿ ಅಂಶಗಳನ್ನೊಳಗೊಂಡಿದೆ. ಈ ನಿಟ್ಟಿನಲ್ಲಿ ಅಭ್ಯಾಸ ಕೈಕೊಳ್ಳ ಬಯಸುವವರಿಗೆ ಶಾಸ್ತ್ರರೂಪದ ಒಂದು ಬೆಲೆಯುಳ್ಳ ಪ್ರವೇಶಿಕೆಯೆನಿಸಿದೆ, ಈ ಭಾಗ.

'ಮಧ್ಯಶಿಲ್ಪ', ಈ ಸಂಚಿಕೆಯ ಉದ್ದೇಶದ ಸಾರ್ಥಕ ಭಾಗ. ಕನ್ನಡನಾಡಿನ ಹತ್ತೊಂಬತ್ತು ಜಿಲ್ಲೆಗಳ ಭಾಷಾಸ್ವರೂಪವನ್ನು ವಿಶ್ಲೇಷಿಸುವ, ವಿವೇಚಿಸುವ, ವಿವರಿಸುವ ಈ ಭಾಗ, ಕನ್ನಡಭಾಷೆ ಬಹುರೂಪಿಣಿ ಎಂಬುದನ್ನು ಎತ್ತಿತೋರಿಸುತ್ತದೆ. ಭೌಗೋಲಿಕ (Geographical), ಸಾಮಾಜಿಕ (Sociological) –ಇತ್ಯಾದಿ ದೃಷ್ಟಿಗಳಿಂದ ಆಯಾ ಜಿಲ್ಲೆಯ ಭಾಷೆಗಳ ಅಂತರಂಗ– ಬಹಿರಂಗಗಳನ್ನು ಬಿಚ್ಚಿ ಬಿಚ್ಚಿ ಕಣ್ಣಿಗೆ ಹಿಡಿಯುತ್ತದೆ. ಇದರಿಂದಾಗಿ ಕನ್ನಡಭಾಷೆಯ ಸೂಕ್ಷ್ಮ ಒಳಪದರುಗಳು ಪ್ರಥಮಬಾರಿಗೆ ತಕ್ಕಮಟ್ಟಿಗಾದರೂ ವಿದ್ವಾಂಸರ ಗಮನಕ್ಕೆ ಬರುತ್ತಿವೆಯೆಂದು ಹೇಳಬಹುದು.

'ಅಂತ್ಯಶಿಲ್ಪ' ಹೊರನಾಡಿನ ಕನ್ನಡಭಾಷೆಯ ಸ್ವರೂಪವನ್ನು ವಿವರಿಸುವ ಒಂದು ಸಣ್ಣ ಪ್ರಯತ್ನ. ಭಾಷೆ ಪಾತ್ರದಂತೆ ಗಾತ್ರ ಪಡೆಯುವ ಗುಣಧರ್ಮವುಳ್ಳದು.

ಹೀಗಾಗಿ ನೆರೆಯ ಕೇರಳಪ್ರಾಂತ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋಮಂತಕಗಳಲ್ಲಿ ಬದುಕುತ್ತಲಿರುವ ಕನ್ನಡನುಡಿ ಆಯಾ ಭಾಷೆಗಳ ಬಾಂಧವ್ಯದಿಂದ ಬೆಳಗುತ್ತಲಿದೆ, ಬೆಳೆಯುತ್ತಲಿದೆ. ಪರಪ್ರಾಂತಗಳಲ್ಲಿಯ ಈ ಮಿಶ್ರಗನ್ನಡ ಓದುಗರಿಗೆ ತುಂಬಾ ಕುತೂಹಲಕಾರಿ ಅಂಶಗಳನ್ನು ಒದಗಿಸುತ್ತದೆ.

ಹಿಂದಿನ ದಿನಗಳಿಗಿಂತ ಇಂದು ವಿದ್ವಾಂಸರಿಂದ ಲೇಖನ ಸಂಗ್ರಹಿಸುವದು, ಅದರಲ್ಲಿಯೂ ವಿಶೇಷಪರಿಶ್ರಮಗಳ ಬಲದಿಂದ ಬರೆಯಬೇಕಾದ ಶಾಸ್ತ್ರೀಯ–ಸಂಶೋಧನ ಲೇಖನಗಳನ್ನು ಸಂಗ್ರಹಿಸುವದು ಇನ್ನೂ ಕಷ್ಟದ ಕೆಲಸ. ಭಾಷಾಪರಿವೀಕ್ಷಣೆಯ ಕಾರ್ಯ ತುಂಬ ಉಪೇಕ್ಷಿತವಾಗಿರುವ ನಮ್ಮ ನಾಡಿನಲ್ಲಿ. ಕನ್ನಡಗಳನ್ನು ಕುರಿತು ಲೇಖನ ಬರೆಯುವವರಿಗೆ ಅವಶ್ಯವಾದ ಸಿದ್ಧಸಾಮಗ್ರಿ ದೊರೆಯುವದು ದುರ್ಲಭ. ಇಂತಹ ಪರಿಸ್ಥಿತಿಯಲ್ಲಿ ವಿದ್ವಾಂಸರು ಹಳ್ಳಿಪಟ್ಟಣಗಳ ಹಾದಿಬೀದಿಗಳನ್ನು ತುಳಿದು, ಅಲ್ಲಿಯ ಭಾಷೆಯನ್ನು ಸ್ವತಃ ಪರಿವೀಕ್ಷಣೆಗೈದು ಲೇಖನ ಬರೆಯಬೇಕಾಗುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದ ಮೇಲಿನ ಅಭಿಮಾನ ಕಾರಣವಾಗಿ ಇಂತಹ ಏನೆಲ್ಲ ಶ್ರಮವಹಿಸಿ, ವಿದ್ವಾಂಸರು ಈ ಸಂಚಿಕೆಗೆ ಲೇಖನಗಳನ್ನು ಒದಗಿಸಿದ್ದಾರೆ.

ಈ ಕಾರ್ಯವನ್ನು ಯೋಜಿಸುವಲ್ಲಿ, ಕಾರ್ಯಗತಗೊಳಿಸುವಲ್ಲಿ ಕರ್ನಾಟಕ ಭಾರತಿಯ ಸಂಸ್ಥಾಪಕ ಸಂಪಾದಕರೂ ಸ್ವತಃ ಭಾಷಾವಿಜ್ಞಾನಿಗಳೂ ಆದ ಕುಲಪತಿ ಡಾ. ಆರ್. ಸಿ. ಹಿರೇಮಠ ಅವರು ಅಮೂಲ್ಯ ಸಲಹೆ–ಪ್ರೋತ್ಸಾಹಗಳನ್ನು ನಿರಂತರ ನೀಡಿದ್ದಾರೆ. 'ಭಾರತಿ'ಯ ಸಂಪಾದಕ ವರ್ಗದವರಾದ ಡಾ. ಎಂ. ಎಸ್. ಸುಂಕಾಪೂರ, ಡಾ, ಕೆ. ಕೃಷ್ಣಮೂರ್ತಿ, ಡಾ. ಶಂಕರ ಮೊಕಾಶಿ ಪುಣೇಕರ, ಡಾ. ಎಂ. ಎಂ. ಕಲಬುರ್ಗಿ ಅವರು ಹಗಲೆಂದರೆ ಹಗಲು ರಾತ್ರಿಯೆಂದರೆ ರಾತ್ರಿ ಈ ಸಂಚಿಕೆ ರೂಪಗೊಳ್ಳುವ ಸಲುವಾಗಿ ಮೈದಣಿ–ಮನದಣಿ ದುಡಿದಿದ್ದಾರೆ. ನಮ್ಮ ವಿಶ್ವವಿದ್ಯಾಲಯದ 'ಪ್ರಕಟನ ವಿಭಾಗ'ಕ್ಕೆ ಇನ್ನೊಂದು ಹೆಸರು ಪರಿಶ್ರಮ–ಪ್ರಯತ್ನ. ಇದಕ್ಕೆ ಸಾಕ್ಷಿಯೆನ್ನುವಂತೆ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರು, ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕರು ನಾವು ಕೇಳಿದುದಕ್ಕೆಲ್ಲ 'ಸೈ' ಎಂದು ಸಹಿ ಹಾಕಿದ್ದಾರೆ. ಪತ್ರವ್ಯವಹಾರ, ಅಚ್ಚಿನಭಾರ ಮೊದಲಾದ ಕಾರ್ಯಗಳಲ್ಲಿ ನಿಂತ ಕಾಲಮೇಲೆ ಕೆಲಸ ಮಾಡಿದವರು– ಬಿ. ಆರ್. ಹಿರೇಮಠ, ಪಿ. ಮುರಿಗೆಪ್ಪ, ಎಚ್. ಎಂ. ಮಹೇಶ್ವರಯ್ಯ. ಇಂಥ ಉತ್ಸಾಹೀಯುವಕರೊಡನೆ ಕೆಲಸ ಮಾಡುವುದೇ ಒಂದು ಸಂತೋಷ.

ಇವು ಹಣಕ್ಕಾಗಿ ಮಾಡುವ ಕೆಲಸಗಳಲ್ಲ; ಹಣ ಕೊಟ್ಟರೂ ಆಗುವ ಕೆಲಸಗಳಲ್ಲ. ಕೆಲಸದ ಮೇಲಿನ ಪ್ರೀತಿಗಾಗಿ ಮಾಡುವಂತಹವು; ವಿದ್ವತ್ತಿನ ಮೇಲಿನ ಪ್ರೀತಿಗಾಗಿ ಮಾಡುವಂತಹವು. ಈ ಭಾವನೆಯಿಂದ ಲೇಖಕರು, ಸಂಪಾದಕರು, ಮನ

ಮುಟ್ಟಿ ಈ ಕಾರ್ಯ ಮಾಡಿದ್ದಾರೆ. ಅವರ ಈ ಅನನ್ಯ ಕಳಕಳಿಗೆ 'ಕರ್ನಾಟಕ ಭಾರತಿ' ಕೃತಜ್ಞತೆಗಳನ್ನು ಅರ್ಪಿಸುತ್ತದೆ ಎಂದು ಹೇಳಿದರೆ ಏನೂ ಹೇಳಿದಂತಲ್ಲ.

ಭಾಷಾವಿಜ್ಞಾನದ ಲೇಖನಗಳ ಮುದ್ರಣಕಾರ್ಯ ತುಂಬಾ ಜಟಿಲವಾದುದು. ಅನೇಕ ಬಗೆಯ ತಂತ್ರವಿನ್ಯಾಸಗಳೂ ಸಂಕೇತಗಳೂ ಮುದ್ರಣಕಾರ್ಯವನ್ನು ಹೆಜ್ಜೆ ಹೆಜ್ಜೆಗೂ ತಡೆದು ನಿಲ್ಲಿಸುತ್ತವೆ. ಹೀಗಿದ್ದೂ ತುಂಬ ಸಹನೆಯಿಂದ ಈ ಸಂಚಿಕೆಯನ್ನು ಮುದ್ರಿಸಿದ ಮನೋಹರ ಮುದ್ರಣಾಲಯದ ಒಡೆಯರಿಗೆ ನಮ್ಮ ನೆನಕೆಗಳು ಸಲ್ಲಬೇಕು.

ಕೊನೆಯದಾಗಿ ಒಂದು ಮಾತು : ಇದು ಅನೇಕ ವಿದ್ವಾಂಸರ ಸಂಯುಕ್ತ ಪ್ರಯತ್ನ. ಹೀಗಾಗಿ ಅವರವರ ದೃಷ್ಟಿಕೋನ, ಬರವಣಿಗೆಯ ವಿನ್ಯಾಸ, ಲಭ್ಯಸಾಮಗ್ರಿ ಇವುಗಳಿಗನುಗುಣವಾಗಿ ಇಲ್ಲಿಯ ಲೇಖನಗಳಲ್ಲಿ ಒಂದೇ ಬಗೆಯ ಚೌಕಟ್ಟಾಗಲೀ ಒಂದೇ ಮಟ್ಟವಾಗಲೀ ಕೆಲವು ವೇಳೆ ಸಾಧ್ಯವಾಗದೇ ಹೋಗಿರಬಹುದು. ಎರಡು ಕಣ್ಣಲ್ಲ, ನಾಲ್ಕು ಕಣ್ಣುಗಳಿಂದ ನೋಡಿದರೂ ಅಲ್ಲಲ್ಲಿ ಅಚ್ಚಿನ ದೋಷಗಳು ಉಳಿದಿರಬಹುದು. ಅವುಗಳನ್ನು ಮನ್ನಿಸಬೇಕೆಂದೂ "ದೋಷಮಿದಱೊಳೇನಾನುಮುಳ್ಳೊಡಂ ಪ್ರಿಯದಿಂ ತಿರ್ದುವುದು" ಎಂದೂ 'ಭಾರತಿ' ಓದುಗರಲ್ಲಿ ಬಿನ್ನವಿಸಿಕೊಳ್ಳುತ್ತದೆ.

• •

ಈ ಸಂಚಿಕೆಯ ಲೇಖಕರು

ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

- ಭಾರತದ ಅಗ್ರಮಾನ್ಯ ಭಾಷಾವಿಜ್ಞಾನಿಗಳಲ್ಲಿ ಒಬ್ಬರು.

ಶ್ರೀ ವಿಲ್ಯಂ ಮಾಡ್ತ, ಎಂ.ಎ., ಎಂ.ಎ., ಎಲ್.ಪಿಎಚ್., ಸಿ.ಎಸ್.ಜಿ.ಎಮ್.
ಭಾಷಾಶಾಸ್ತ್ರ ಅಧ್ಯಾಪಕರು
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

- ಪಿಎಚ್.ಡಿ. ವಿಷಯ : 'ಕ್ರೈಸ್ತಕೊಂಕಣಿಯ ಭಾಷಾವೈಜ್ಞಾನಿಕ ವಿಶ್ಲೇಷಣೆ'
- ಕೃತಿಗಳು : ೧. 'ಕನ್ನಡ ಭಾಷೆಯ ರೂಪರೇಷೆಗಳು', (೧೯೭೩)
  ೨. 'ಅನ್ಯಭಾಷಾ ಬೋಧೆ', (೧೯೭೬)
- ಲೇಖನಗಳು : ಪ್ರಬುದ್ಧಕರ್ನಾಟಕ, ಮಾನವಿಕ ಕರ್ನಾಟಕ, ಕರ್ನಾಟಕ ಭಾರತಿ ಮುಂತಾದ ಪತ್ರಿಕೆಗಳಲ್ಲಿ
- ಯೋಜನೆ . ೧. ಅನ್ಯಭಾಷೆಯಿಂದ ಕನ್ನಡಕ್ಕೆ ಭಾಷಾಂತರ
  ೨. ಕನ್ನಡ ವ್ಯಾಕರಣದ ವೈಜ್ಞಾನಿಕ ವಿಶ್ಲೇಷಣೆ
  ೩. ವೀರಶೈವ ಮತ್ತು ಕ್ರೈಸ್ತ ಧರ್ಮಗಳ ಬಗ್ಗೆ ತುಲನಾತ್ಮಕ ಗ್ರಂಥಗಳು
- ಒಲವಿನ ಶಾಖೆಗಳು : ಭಾಷಾವಿಜ್ಞಾನ ಮತ್ತು ಜಾನಪದ ವಿಜ್ಞಾನ, ವ್ಯಾಕರಣ ಪರಿಶೀಲನೆ, ತತ್ವಶಾಸ್ತ್ರ ಮತ್ತು ದೇವಶಾಸ್ತ್ರ, ಧರ್ಮಗಳ ತೌಲನಿಕ ಅಧ್ಯಯನ, ಹೋಮಿಯೋಪಥಿ ಚಿಕಿತ್ಸೆ.

ಶ್ರೀ ಕೃ. ಗೋವಿಂದರೆಡ್ಡಿ, ಎಂ.ಎ.
ಭಾಷಾಶಾಸ್ತ್ರದ ಸಹಾಯಕ ಅಧ್ಯಾಪಕರು
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

- ಪಿಎಚ್.ಡಿ. ವಿಷಯ : 'ತೆಲುಗುಭಾಷೆ ಒಂದು ಸಾಮಾಜಿಕ ಭಾಷಾಶಾಸ್ತ್ರ ಅಧ್ಯಯನ'
- ಲೇಖನಗಳು : 'ಕರ್ನಾಟಕ ಭಾರತಿ' ಮುಂತಾದ ಪತ್ರಿಕೆಗಳಲ್ಲಿ
- ಯೋಜನೆ : ೧. ಕನ್ನಡದಲ್ಲಿ ಬರುವ -ಇ, -ಎ ವ್ಯತ್ಯಾಸಗಳ ಬಗ್ಗೆ ಅಧ್ಯಯನ.
  ೨. ಭಾಷಾಬೋಧನೆಯ ಕೆಲವು ಹೊಸರೀತಿಗಳ ಸಂಶೋಧನೆ
- ಒಲವಿನ ಶಾಖೆಗಳು : ತಮಿಳು ಸಾಹಿತ್ಯ, ಸಾಹಿತ್ಯದ ತೌಲನಿಕ ಅಧ್ಯಯನ, ಕವಿತೆ, ದ್ರಾವಿಡಭಾಷೆಗಳ ತೌಲನಿಕ ಅಧ್ಯಯನ, ಅನುವಾದ, ಉಪಭಾಷಾಧ್ಯಾಯನ ಮುಂತಾದವು.

ಶ್ರೀ ಅಂಕದ ಮುರಿಗೆಪ್ಪ, ಎಂ.ಎ.
ಸಂಶೋಧನ ವಿದ್ಯಾರ್ಥಿ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

- ಪಿಎಚ್.ಡಿ. ವಿಷಯ : 'ಬೀದರ ಜಿಲ್ಲೆಯ ಆಡುಗನ್ನಡದ ವಿಶ್ಲೇಷಣೆ'
- ಲೇಖನಗಳು : ಕರ್ನಾಟಕ ಭಾರತಿಯಲ್ಲಿ
- ಒಲವಿನ ಶಾಖೆಗಳು : ಭಾಷಾಶಾಸ್ತ್ರ, ಸಾಹಿತ್ಯ, ನಾಟಕ ಇತ್ಯಾದಿ.

ಶ್ರೀ ಸಂಗಮೇಶ ಸವದತ್ತಿಮಠ, ಎಂ.ಎ.
ಸಂಶೋಧನ ಸಹಾಯಕರು
ಕನ್ನಡ ವಿಭಾಗ
ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ

- ಪಿಎಚ್.ಡಿ. ವಿಷಯ : 'ಹರಿಪರನ ರಗಳೆಗಳ ಭಾಷಾವೈಜ್ಞಾನಿಕ ಅಧ್ಯಯನ'
- ಕೃತಿಗಳು : ೧. ಪ್ರಸಾದವಾಣಿ (೧೯೬೯)
  ೨. ಬಯಲು (೧೯೭೩)
  ೩. ದ್ರಾವಿಡಭಾಷೆಗಳು (೧೯೭೪)
  ೪. ದ್ರಾವಿಡಭಾಷಾ ವ್ಯಾಸಂಗ (೧೯೭೭)
- ಲೇಖನಗಳು : ಕರ್ನಾಟಕ ಭಾರತಿ ಇತ್ಯಾದಿ ಪತ್ರಿಕೆಗಳಲ್ಲಿ
- ಯೋಜನೆ : 'ಕಲಬುರ್ಗಿ ಜಿಲ್ಲೆಯ ಕನ್ನಡಭಾಷೆಯ ಅಧ್ಯಯನ'
- ಒಲವಿನ ಶಾಖೆಗಳು : ಭಾಷಾವಿಜ್ಞಾನ, ವಿಮರ್ಶೆ, ಸಂಪಾದನೆ ಇತ್ಯಾದಿ.

ಶ್ರೀ ಎಚ್. ಎಂ. ಮಹೇಶ್ವರಯ್ಯ, ಎಂ.ಎ.
ಸಂಶೋಧನ ವಿದ್ಯಾರ್ಥಿ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

- ಪಿಎಚ್.ಡಿ. ವಿಷಯ : 'ದೀವರ ಕನ್ನಡದ ಭಾಷಾವೈಜ್ಞಾನಿಕ ಅಧ್ಯಯನ'
- ಗ್ರಂಥಗಳು : ಕುಮುದ್ವತಿ (ಕವನಸಂಕಲನ) ೧೯೭೧
- ಲೇಖನಗಳು : ಕರ್ನಾಟಕ ಭಾರತಿ ಇತ್ಯಾದಿ ಪತ್ರಿಕೆಗಳಲ್ಲಿ
- ಯೋಜನೆ : ೧. ಶಿವಮೊಗ್ಗೆಯ ದೊಂಬರ ಸಂಸ್ಕೃತಿ ಮತ್ತು ಭಾಷೆ, ಜಾನಪದಗಳ ಬಗ್ಗೆ ಪುಸ್ತಕ ರಚನೆ
  ೨. ದೀವರ ಕನ್ನಡದ ಪದಕೋಶ
  ೩. ಮಲೆನಾಡಿನ ಜಾನಪದ ಔಷಧಿಗಳು (Folk Medicines)
- ಒಲವಿನ ಶಾಖೆಗಳು : ಸಾಹಿತ್ಯ, ಜಾನಪದ, ನಿಘಂಟುಶಾಸ್ತ್ರ, ಭಾಷಾಬೋಧನ, ಪ್ರಕಾಶನ, ಪ್ರಕಟಣೆ.

ಶ್ರೀ ಬಿ. ಮಲ್ಲಿಕಾರ್ಜುನ, ಎಂ.ಎ.
ಸಂಶೋಧನ ಸಹಾಯಕರು
ಭಾರತೀಯ ಭಾಷಾಸಂಸ್ಥಾನ
ಮಾನಸಗಂಗೋತ್ರಿ, ಮೈಸೂರು–೬

- ಪಿಎಚ್.ಡಿ. ವಿಷಯ : 'A Syntactic Study of Kannada Verbs.'
- ಕೃತಿಗಳು : ೧. State School Reader (Level-1) Kannada, CIIL (in press)
  ೨. ಧರ್ಮಗ್ರಂಥಗಳು ಮತ್ತು ಭಾಷೆ (ಅಚ್ಚಿನಲ್ಲಿ)
- ಯೋಜನೆ : ಕನ್ನಡಭಾಷೆಯನ್ನು ದ್ವಿತೀಯ ಭಾಷೆಯಾಗಿ ಕಲಿಯುವವರಿಗೆ ಪುಸ್ತಕರಚನೆ
- ಒಲವಿನ ಶಾಖೆಗಳು : Applied Linguistics, Curriculum planning and Curriculum development.

ಶ್ರೀ ಪಿ. ಪಿ. ಗಿರಿಧರ, ಎಂ.ಎ., ಎಂ.ಎ., ಬಿ.ಎಡ್.
ಸಂಶೋಧನ ಸಹಾಯಕರು
ಭಾರತೀಯ ಭಾಷಾಸಂಸ್ಥಾನ
ಮಾನಸಗಂಗೋತ್ರಿ, ಮೈಸೂರು–೬

- ಪಿಎಚ್.ಡಿ. ವಿಷಯ : 'A Case Grammar of Kannada'
  ಯೋಜನೆ : 'ಅಂಗಾಮಿನಾಗ' ಎಂಬ ಭಾಷೆಯ ವ್ಯಾಕರಣ ಮತ್ತು ನಿಘಂಟು ತಯಾರಿಕೆ
- ಒಲವಿನ ಶಾಖೆಗಳು : Case Grammar, Linguistic poetics (Stylistics).

ಶ್ರೀ ಕೆ. ಎಂ. ವೀರಭದ್ರಶರ್ಮ, ಎಂ.ಎ.
ಕನ್ನಡ ಅಧ್ಯಾಪಕರು
ಎಸ್. ಸಿ. ಆರ್. ಜೆ. ಕಾಲೇಜು
ಹೊನ್ನಾಳಿ (ಜಿಲ್ಲಾ : ಶಿವಮೊಗ್ಗ)

- ಪಿಎಚ್.ಡಿ. ವಿಷಯ : 'Descriptive Analysis of Bellary Kannada'
- ಒಲವಿನ ಶಾಖೆಗಳು : ಜನಪದಸಾಹಿತ್ಯ, ಭಾಷಾಶಾಸ್ತ್ರ, ಸಂಸ್ಕೃತ ಹಾಗೂ ತತ್ವಶಾಸ್ತ್ರ.

ಡಾ. ಜಯವಂತ ಎಸ್. ಕುಳ್ಳಿ, ಎಂ.ಎ., ಎಂ.ಎ., ಪಿಎಚ್.ಡಿ.
ಭಾಷಾಶಾಸ್ತ್ರ ರೀಡರ್
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

- ಪಿಎಚ್.ಡಿ. ವಿಷಯ : 'Kēśirājā's Śabdamaṇidarpaṇa' (1971)
- ಕೃತಿಗಳು : ೧. ಆಧುನಿಕ ಭಾಷಾವಿಜ್ಞಾನ ೧೯೬೭, ೧೯೭೨
  ೨. ವರ್ಣನಾತ್ಮಕ ಭಾಷಾವಿಜ್ಞಾನ ೧೯೭೧, ೧೯೭೬
  ೩. ಭಾಷಾಸೌಧ ೧೯೭೪, ೧೯೭೬
  ೪. ಐತಿಹಾಸಿಕ ಭಾಷಾವಿಜ್ಞಾನ ೧೯೭೪
  ೫. ಅನುವಾದಕಲೆ ೧೯೭೬
  ೬. Shabdamanidarpana ೧೯೭೬

- ಲೇಖನಗಳು : ಕರ್ನಾಟಕ ಭಾರತಿ, Journal of the Karnataka University ಇತ್ಯಾದಿ ಪತ್ರಿಕೆಗಳಲ್ಲಿ
- ಯೋಜನೆಗಳು : ೧. ಭಾಷಾವಿಜ್ಞಾನ ಪದಕೋಶ
  ೨. ಗೊಂಡಿಭಾಷೆಯ ಅಧ್ಯಯನ
- ಒಲವಿನ ಶಾಖೆಗಳು : ಭಾಷಾವಿಜ್ಞಾನ, ನಿಘಂಟುಶಾಸ್ತ್ರ, ಕನ್ನಡ ವ್ಯಾಕರಣಗಳು, ಜಾನಪದ ಮತ್ತು ಭಾಷಾವಿಜ್ಞಾನ

ಶ್ರೀ ಎಂ. ಬಿ. ಭೋಯಿ, ಎಂ.ಎ.
ಕನ್ನಡ ಅಧ್ಯಾಪಕರು
ಕಾಡಸಿದ್ಧೇಶ್ವರ ಆರ್ಟ್ಸ ಕಾಲೇಜ ಮತ್ತು
ಎಚ್. ಎಸ್. ಕೋತಂಬರಿ ಸೈನ್ಸ್ ಇನ್‌ಸ್ಟಿಟ್ಯೂಟ, ಹುಬ್ಬಳ್ಳಿ–೨೧

- ಪಿಎಚ್.ಡಿ. ವಿಷಯ : 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಮತ್ತು ಸಾಹಿತ್ಯಿಕ ಅಧ್ಯಯನ' (ಕ್ರಿ.ಶ. ೪೫೦ ರಿಂದ ೮೫೦)
- ಲೇಖನಗಳು : ಕರ್ನಾಟಕ ಭಾರತಿ ಮುಂತಾದ ಪತ್ರಿಕೆಗಳಲ್ಲಿ
- ಒಲವಿನ ಶಾಖೆಗಳು : ಕನ್ನಡ ವ್ಯಾಕರಣಶಾಸ್ತ್ರ, ಭಾಷಾಶಾಸ್ತ್ರ, ಪ್ರಾಚೀನ ಕನ್ನಡಸಾಹಿತ್ಯ.

ಶ್ರೀಮತಿ ಶಾಲಿನಿ ರಘುನಾಥ, ಎಂ.ಎ., ಬಿ.ಲಿಟ್.
ಕನ್ನಡ ಅಧ್ಯಾಪಿಕೆ
ಎಂ. ಎಂ. ಆರ್ಟ್ಸ ಅ್ಯಂಡ ಸೈನ್ ಕಾಲೇಜ
ಶಿರಸಿ (ಜಿಲ್ಲೆ : ಉತ್ತರಕನ್ನಡ)

- ಪಿಎಚ್.ಡಿ. ವಿಷಯ : A comparative study of two social-dialects of North Kanara : Havyaka and Halakki
- ಕೃತಿಗಳು : ೧. ಮಹಿಳೆ ಮತ್ತು ಶಿಕ್ಷಣ (೧೯೬೫)
  ೨. ಕನ್ನಡದ ಕೆಲವು ಉಪಭಾಷೆಗಳು (ಅಚ್ಚಿನಲ್ಲಿ)
- ಯೋಜನೆಗಳು : ೧. ಉತ್ತರಕನ್ನಡ ಜಿಲ್ಲೆಯ ಭಾಷಾಪರಿವೀಕ್ಷಣೆ
  ೨. ಉತ್ತರಕನ್ನಡ ಜಿಲ್ಲೆಯ ಜಾನಪದಸಂಗ್ರಹ
- ಒಲವಿನ ಶಾಖೆಗಳು : ಸಾಹಿತ್ಯ, ಭಾಷಾಶಾಸ್ತ್ರ, ಶಾಸನಶಾಸ್ತ್ರ, ಜಾನಪದ.

ಡಾ. ಅಲೆವೂರು ಶ್ರೀರಮಣ ಆಚಾರ್ಯ, ಎಂ.ಎ., ಪಿಎಚ್.ಡಿ.
ಭಾಷಾಶಾಸ್ತ್ರ ಅಧ್ಯಾಪಕರು
ಭಾಷಾಶಾಸ್ತ್ರ ವಿಭಾಗ
ಪುಣೆ ವಿದ್ಯಾಪೀಠ, ಪುಣೆ–೬

- ಪಿಎಚ್.ಡಿ. ವಿಷಯ : 'Non-Indo-Aryan Elements in Sanskrit Vocabulary' (೧೯೭೩)
- ಕೃತಿಗಳು : ೧. ಹಾಲಕ್ಕಿ ಕನ್ನಡ (ಪುಣೆ ವಿದ್ಯಾಪೀಠ ೧೯೬೭)
  ೨. ಬಾರಕೂರು ಕನ್ನಡ (ಪುಣೆ ವಿದ್ಯಾಪೀಠ ೧೯೭೧)
  ೩. ತಿಪ್ಟೂರು ಕನ್ನಡ .. .. ..
- ಯೋಜನೆ : ಸಂಸ್ಕೃತ ಇತಿಹಾಸಕೋಶ
- ಒಲವಿನ ಶಾಖೆಗಳು : ಸಂಸ್ಕೃತ ಸಾಹಿತ್ಯ, ಭಾಷಾಶಾಸ್ತ್ರ.

ಶ್ರೀ ಬಿ. ವಿ. ವೀರಭದ್ರಪ್ಪ, ಎಂ.ಎ.
ಕನ್ನಡ ರೀಡರ್
ಎಸ್. ಆರ್. ಜಿ. ಕಲಾ ಮತ್ತು ವಾಣಿಜ್ಯ ಕಾಲೇಜು
ದಾವಣಗೆರೆ–೪

- ಕೃತಿಗಳು : ದ್ವಿತೀಯ ಭಾಷಾಬೋಧನೆ (ಅಚ್ಚಿನಲ್ಲಿ)
  ಲೇಖನಗಳು : ಪ್ರಬುದ್ಧಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ
- ಒಲವಿನ ಶಾಖೆಗಳು : ಭಾಷಾವಿಜ್ಞಾನ, ತತ್ತ್ವಶಾಸ್ತ್ರ ಇತ್ಯಾದಿ.

ಡಾ. ಕೆ. ಎಸ್. ಗುರುಬಸವೇಗೌಡ, ಎಂ.ಎ., ಪಿಎಚ್.ಡಿ.
ಸಂಶೋಧನಾಧಿಕಾರಿಗಳು
ಭಾರತೀಯ ಭಾಷಾಸಂಸ್ಥಾನ
ಮಾನಸಗಂಗೋತ್ರಿ, ಮೈಸೂರು–೬

- ಪಿಎಚ್.ಡಿ. ವಿಷಯ : 'Descriptive Analysis of Soliga' (1969)
- ಕೃತಿಗಳು : 1. AO-Naga Phonetic Reader Pub. CIIL - 1972
  2. Kannada Pathavali Pub. CIIL - 1973
  3. Kannada Kāpipustaka Pub. CIIL - 1973
  4. AO-Naga Grammar Pub. CIIL - 1974
- ಲೇಖನಗಳು : Indian Linguistics, ಜೀವನ, ಕನ್ನಡನುಡಿ, ಮಾನವಿಕ ಕರ್ನಾಟಕ ಇತ್ಯಾದಿ ಪತ್ರಿಕೆಗಳಲ್ಲಿ.

ಶ್ರೀಮತಿ ಎಂ. ಎನ್. ಲೀಲಾವತಿ, ಎಂ.ಎ.
ಕನ್ನಡ ಅಧ್ಯಾಪಿಕೆ
ಭಾರತೀಯ ಭಾಷಾಸಂಸ್ಥಾನ
ಮಾನಸಗಂಗೋತ್ರಿ, ಮೈಸೂರು–೬

- ಕನ್ನಡೇತರರಿಗೆ ಕನ್ನಡಬೋಧನೆ
- ಕೃತಿಗಳು : ಹರಿಹರನ ಐದು ರಗಳೆಗಳು (ಸಂಪಾದಿತ) ೧೯೭೧
- ಯೋಜನೆ : ಜೇನುಕುರುಬರ ಭಾಷೆಯ ವೈಜ್ಞಾನಿಕ ವಿಶ್ಲೇಷಣೆ
- ಒಲವಿನ ಶಾಖೆ : ಭಾಷಾಬೋಧನೆ.

ಶ್ರೀ ಲಿಂಗದೇವರು ಹಳೇಮನೆ, ಎಂ.ಎ.
ಸಂಶೋಧನ ಸಹಾಯಕರು
ಭಾರತೀಯ ಭಾಷಾಸಂಸ್ಥಾನ
ಮಾನಸಗಂಗೋತ್ರಿ, ಮೈಸೂರು–೬

- ಲೇಖನಗಳು : ಸಾಧನೆ, ಕರ್ನಾಟಕ ಭಾರತಿಗಳಲ್ಲಿ
- ಯೋಜನೆ : ೧. ಭಾಷಾವಿಜ್ಞಾನದ ಇತಿಹಾಸವನ್ನು ಕುರಿತು ಪುಸ್ತಕ ರಚನೆ
  ೨. ಬೇಂದ್ರೆಯವರ ಕವನಗಳ Stylistics ದೃಷ್ಟಿಯ ವಿಶ್ಲೇಷಣೆ
- ಒಲವಿನ ಶಾಖೆಗಳು : ವಿಮರ್ಶೆ, ಕಾವ್ಯ, Stylistics in Linguistics, ಭಾಷಾಬೋಧನೆ.

ಶ್ರೀ ಕೆ. ನಾರಾಯಣ, ಎಂ.ಎ.
ಸಂಶೋಧನ ಸಹಾಯಕರು
ಭಾರತೀಯ ಭಾಷಾಸಂಸ್ಥಾನ
ಮಾನಸಗಂಗೋತ್ರಿ, ಮೈಸೂರು–೬

- ಪಿಎಚ್.ಡಿ. ವಿಷಯ : 'ಬುಡುಬುಡುಕೆ ಜನಾಂಗದ ಮರಾಠಿ ಕನ್ನಡ ದ್ವಿಭಾಷಿಕತೆ'
- ಕೃತಿಗಳು : ತುಂಬೇ ಹೂವಿಟ್ಟು ಶರಣೆನ್ನಿ (೧೯೬೯)
- ಲೇಖನಗಳು : ಪ್ರಬುದ್ಧಕರ್ನಾಟಕ ಇತರ ಪತ್ರಿಕೆಗಳಲ್ಲಿ
- ಯೋಜನೆಗಳು : ೧. ಜೇನುಕುರುಬರ ಮಕ್ಕಳ ವಿದ್ಯಾಭ್ಯಾಸ ಸಮಸ್ಯೆಗಳು ಮತ್ತು ಪರಿಹಾರ,
  ೨. ಜೇನುಕುರುಬರ ಜಾನಪದ ಗೀತೆಗಳ ಭಾಷಾಶಾಸ್ತ್ರೀಯ ಅಧ್ಯಯನ
- ಒಲವಿನ ಶಾಖೆಗಳು : ಸಾಮಾಜಿಕ ಭಾಷಾಶಾಸ್ತ್ರ, ಅನ್ವಯಿಕ ಭಾಷಾಶಾಸ್ತ್ರ, ಸಾಹಿತ್ಯ.

ಶ್ರೀ ಕೃಷ್ಣಪರಮೇಶ್ವರ ಭಟ್ಟ, ಎಂ.ಎ.
ಕನ್ನಡ ಅಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–೫೬

ಪಿಎಚ್,ಡಿ. ವಿಷಯ : 'ಕನ್ನಡ–ತೆಲುಗು ದ್ವಿಭಾಷಾ ಸಂಪರ್ಕದ ಅಧ್ಯಯನ'
- ಕೃತಿಗಳು : ಉಪಭಾಷೆ (ಬೆಂಗಳೂರು ವಿಶ್ವವಿದ್ಯಾಲಯ) ೧೯೭೨
- ಲೇಖನಗಳು : ಕರ್ನಾಟಕ ಭಾರತಿ, ಸಾಧನೆ ಮುಂತಾದ ಪತ್ರಿಕೆಗಳಲ್ಲಿ
- ಯೋಜನೆ : ಕನ್ನಡ ಉಪಭಾಷಾಕೋಶ
- ಒಲವಿನ ಶಾಖೆಗಳು : ಶೈಲಿವಿಜ್ಞಾನ, ರೂಪಾಂತರವ್ಯಾಕರಣ.

ಡಾ. ಕೆ. ಕೆಂಪೇಗೌಡ, ಎಂ.ಎ., ಪಿಎಚ್.ಡಿ.
ಭಾಷಾಶಾಸ್ತ್ರ ಅಧ್ಯಾಪಕರು
ಕನ್ನಡ ಅಧ್ಯಯನಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬

- ಪಿಎಚ್.ಡಿ. ವಿಷಯ : 'ಇರುಳರ ಭಾಷಾವಿಶ್ಲೇಷಣೆ' ೧೯೭೪,
- ಕೃತಿಗಳು : ೧. 'ಭಾಷಾವಿಜ್ಞಾನಕೋಶ', ೧೯೭೬
  ೨. ಆಕೃತಿಮಾ ವಿಜ್ಞಾನ (ಅಚ್ಚಿನಲ್ಲಿದೆ)
- ಯೋಜನೆ : ೧. ವಿವಿಧ ವೃತ್ತಿಪದಕೋಶ
  ೨. ಕಾಡುಕುರುಬರ ಭಾಷಾ ಅಧ್ಯಯನ
- ಒಲವಿನ ಶಾಖೆಗಳು : ದ್ರಾವಿಡ ಭಾಷಾವಿಜ್ಞಾನ, ಸಾಮಾನ್ಯ ಭಾಷಾವಿಜ್ಞಾನ.

ಶ್ರೀ ಬಿ. ನಂ. ಚಂದ್ರಯ್ಯ, ಎಂ.ಎ.
ಕನ್ನಡ ರೀಡರ್
ಕನ್ನಡ ವಿಭಾಗ
ಯುವರಾಜ ಕಾಲೇಜು, ಮೈಸೂರು

- ಪಿಎಚ್.ಡಿ. ವಿಷಯ : 'A study of kannada dialect spoken by Harijans in and around the city of Mysore'
- ಕೃತಿಗಳು : ಧ್ರುವಸಾಮಿನಿ (೧೯೬೩), ಚಿತ್ರಲೇಖಾ (೧೯೬೪), ಮಲ್ಲಿಕಾ (೧೯೬೬), ಆಲದ ನೆರಳು (೧೯೬೮), ಪ್ರಸಾದರ ಎರಡು ನಾಟಕಗಳು (೧೯೭೩), ಬಸವಪವಾಡ (೧೯೬೭), ಪೂರ್ವದ ಹಳಗನ್ನಡ (೧೯೭೨) ಇತ್ಯಾದಿ
- ಯೋಜನೆ : ೧. Modern evalution of Shabdamanidarpana
  ೨. ಜಾನಪದ ಸಾಹಿತ್ಯ (ತೌಲನಿಕ ಅಧ್ಯಯನ: ಉತ್ತರ, ದಕ್ಷಿಣ)
  ೩. ಮೈಸೂರು ಜಿಲ್ಲೆಯ ಉಪಭಾಷಾ ಪರಿವೀಕ್ಷಣೆ
- ಒಲವಿನ ಶಾಖೆಗಳು : ಭಾಷಾವಿಜ್ಞಾನ, ಜಾನಪದಸಾಹಿತ್ಯ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಅನ್ಯಭಾಷೆ.

ಡಾ. ಕೆ. ಕುಶಾಲಪ್ಪಗೌಡ, ಎಂ.ಎ., ಪಿಎಚ್.ಡಿ.
ಪ್ರಾಧ್ಯಾಪಕರು ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು
ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್

- ಪಿಎಚ್.ಡಿ. ವಿಷಯ : 'A Grammar of Kannada' (Based on the Insriptions of Coorg, South Kanara and North Kanara Dist. 1000 - 14000 A. D.) 1972,
- ಕೃತಿಗಳು : 'Gowda Kannada', Annamalai University, 1970
- ಲೇಖನಗಳು : ಅನೇಕ ಪ್ರೌಢಲೇಖನಗಳು ಪ್ರಕಟವಾಗಿವೆ
- ಯೋಜನೆ : ಶಾಸನಗಳ ಭಾಷಾ ಅಧ್ಯಯನ, ಕನ್ನಡದ ಚಾರಿತ್ರಿಕ ವ್ಯಾಕರಣ
- ಒಲವಿನ ಶಾಖೆಗಳು : ಭಾಷಾಶಾಸ್ತ್ರ ಹಾಗೂ ಸಾಹಿತ್ಯ.

ಶ್ರೀ ಜೆ. ರಾಮಸ್ವಾಮಿ, ಎಂ.ಎ., ಎಂ.ಎ., ಬಿ.ಲಿಟ್.
ಭಾಷಾಶಾಸ್ತ್ರ ಅಧ್ಯಾಪಕರು
ಭಾಷಾವಿಜ್ಞಾನ ಪ್ರೌಢ ಸಂಶೋಧನ ಕೇಂದ್ರ
ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈನಗರ–೧ (ತಮಿಳನಾಡ)

- ಪಿಎಚ್.ಡಿ. ವಿಷಯ : 'The Language of Kannada Inscriptions of Northern Karnataka from 1000 to 1400 A. D.'
- ಲೇಖನಗಳು : 'ಕರ್ನಾಟಕ ಭಾರತಿ' ಇತ್ಯಾದಿ ಪತ್ರಿಕೆಗಳಲ್ಲಿ
- ಯೋಜನೆ : 'ಲೆಬೊರಾಟರಿ ಮ್ಯಾನುಅಲ್' (Laboratary Manual)
- ಒಲವಿನ ಶಾಖೆಗಳು : ಹಳಗನ್ನಡ ವ್ಯಾಕರಣ, ಕನ್ನಡ ಭಾಷಾಧ್ಯಯನ, ಸಾಹಿತ್ಯಶೈಲಿಶಾಸ್ತ್ರ.

ಶ್ರೀ ಪಿ. ಕೃಷ್ಣಭಟ್ಟ, ಎಂ.ಎ.
ಕನ್ನಡ ಅಧ್ಯಾಪಕರು
ಸರಕಾರಿ ಕಾಲೇಜು, ಕಾಸರಗೋಡು
ಅಂಚೆ : ವಿದ್ಯಾನಗರ–೩

- ಪಿಎಚ್.ಡಿ. ವಿಷಯ : 'ಕನ್ನಡ ವ್ಯಾಕರಣಪರಂಪರೆಯ ಮೇಲೆ ಸಂಸ್ಕೃತದ ಪ್ರಭಾವ'
- ಲೇಖನಗಳು : ಕರ್ನಾಟಕ ಭಾರತಿ ಮುಂತಾದ ಪತ್ರಿಕೆಗಳಲ್ಲಿ
- ಒಲವಿನ ಶಾಖೆಗಳು : ವ್ಯಾಕರಣ ಮತ್ತು ಭಾಷಾವಿಜ್ಞಾನ
  ಜಾನಪದ, ಮಲೆಯಾಳ ಸಾಹಿತ್ಯ ಇತ್ಯಾದಿ.

ಡಾ. ಕೆ. ಎಂ. ಕೃಷ್ಣರಾವ್, ಎಂ.ಎ., ಪಿಎಚ್.ಡಿ.
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ–೭

- ಪಿಎಚ್.ಡಿ. ವಿಷಯ : 'ಶ್ರೀ ಜಗನ್ನಾಥದಾಸರು'
- ಕೃತಿಗಳು : ೧. ಶ್ರೀ ಜಗನ್ನಾಥದಾಸರು, ಉಷಾ ಸಾಹಿತ್ಯಮಾಲೆ, ಮೈಸೂರು ೧೯೫೬
  ೨. ಕನಕದಾಸರ ಕೀರ್ತನೆಗಳು (ಸಂ.) ಮೈಸೂರು ಸರಕಾರ ೧೯೬೫
  ೩. ಯಕ್ಷಗಾನಸಾಹಿತ್ಯ, ಮಿಂಚಿನಬಳ್ಳಿ, ಧಾರವಾಡ ೧೯೫೬
  ೪. ಗೊಮ್ಮಟದರ್ಶನ, ಸುರುಚಿ ಪ್ರಕಾಶನ, ಮೈಸೂರು ೧೯೬೨
  ೫. ಕಾವ್ಯಸೌರಭ (ಸಂ.) ಕ. ಸಾ. ಪರಿಷತ್ ಬೆಂಗಳೂರು, ೧೯೬೩
  ೬. ಕನ್ನಡ ಭಾಷಾಸ್ವರೂಪ, ಉಷಾ ಸಾಹಿತ್ಯಮಾಲೆ, ಮೈಸೂರು ೧೯೬೮
  ೭. ಕನ್ನಡ, I. B. H. ಪ್ರಕಾಶನ
- ಯೋಜನೆಗಳು : ೧. ಜಗನ್ನಾಥದಾಸರ ಕೃತಿಗಳ ಪ್ರಕಟಣೆ
  ೨. ಹರಿದಾಸ ಪದಕೋಶ
  ೩. ಜಯೇಶ ವಿಠಲರ ಕೃತಿಗಳ ಸಂಪಾದನೆ–ಪ್ರಕಟಣೆ
- ಒಲವಿನ ಶಾಖೆಗಳು : ಹರಿದಾಸ ಸಾಹಿತ್ಯ, ಯಕ್ಷಗಾನ, ಭಾಷಾಶಾಸ್ತ್ರ.

ಡಾ. ಕೆ. ಜಿ. ಶಾಸ್ತ್ರಿ, ಎಂ.ಎ., ಪಿಎಚ್.ಡಿ.
ರೀಡರ್, ಬ್ರಾಹ್ಮಣಸಾಹಿತ್ಯ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

- ಪಿಎಚ್.ಡಿ. ವಿಷಯ : 'The Havyak Dialect of North Kanara' (1966)
- ಕೃತಿಗಳು : ೧. ಪೌಲೋಮ ಆಸ್ತೀಕಪರ್ವ
  ೨. ಐರಾವತನೋಂಪಿ
  ೩. ಕರ್ನಾಟಕ ಸಾಂಸ್ಕೃತಿಕ ಪರಂಪರೆ
- ಲೇಖನಗಳು : ಕನ್ನಡನುಡಿ, ಜಯಕರ್ನಾಟಕ, Karnatak University Journal, ಇತ್ಯಾದಿ ಪತ್ರಿಕೆಗಳಲ್ಲಿ

- ಯೋಜನೆಗಳು : ೧. A Plan for a Havyak Dialectal Dictionary
  ೨. A Comparative Study of Northern and Southern Havyak Dialects
- ಒಲವಿನ ಶಾಖೆಗಳು : ಭಾಷಾವಿಜ್ಞಾನ, ಜಾನಪದಸಾಹಿತ್ಯ, ವಿಮರ್ಶೆ, ಸಂಪಾದನೆ, ಸಂಸ್ಕೃತಿ.

ಶ್ರೀ ಶಾ. ಮಂ. ಕೃಷ್ಣರಾಯ
'ಸಾಹಿತ್ಯಸದನ'
ಬಾಣ, ವಾಸ್ಕೊ-ಡ-ಗಾಮಾ, ಗೋವಾ

- ಕೃತಿಗಳು : ೧. ರಸಚೇತನ
  ೨. ಚಿರಚೇತನ
  ೩. ಬರಹಗಾರನ ಬದುಕು
  ೪. ಉತ್ತರಭೂಪ– ಬೀchi
  ೫. ದೇವಭೂಮಿ ಗೋಮಂತಕ
  ೬. ಮಾಮೂಲು
  ೭. ಮುತ್ಮಾಳರು
  ೮. ತಿಂಮದರ್ಶನ
- ಯೋಜನೆಗಳು : ಹೊರನಾಡುಗಳಲ್ಲಿರುವ ಕನ್ನಡಿಗರಿಗಾಗಿ ಗ್ರಂಥರಚನೆ, ವಾಚನಾಲಯ ಸ್ಥಾಪನೆ
- ಒಲವಿನ ಶಾಖೆಗಳು : ಹೊರನಾಡುಗಳಲ್ಲಿ ಕನ್ನಡ ಪ್ರಸಾರ, ಸಾಂಸ್ಕೃತಿಕ ಚಟುವಟಿಕೆ, ಕಥೆ, ನಾಟಕ, ಸಂಪಾದನೆ.

• •

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗ ವಿಸ್ತರಣ – ಪ್ರಕಟನ ವಿಭಾಗ

ರಜತಮಹೋತ್ಸವದ ಪ್ರಕಟನೆಗಳು

ಸಂಶೋಧನ ಗ್ರಂಥಮಾಲೆ

೧ ಸಿದ್ಧರಾಮ ಶಿವಯೋಗಿ —ಎಂ. ಬಿ. ಕೊಟ್ರಶೆಟ್ಟಿ ೨೪–೦೦
೨ ಹೊಸಗನ್ನಡ ಸಾಹಿತ್ಯದ ಉದಯಕಾಲ —ರಾ.ಯ.ಧಾರವಾಡಕರ ೩೫–೦೦
೩ ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ —ಎಂ. ಎಸ್. ಲಕ್ಷ್ಮೆ ೨೩–೦೦
೪ Economic Conditions in Karnataka 24–00
—G. R Kuppuswamy
೫ ಶ್ರವಣಬೆಳ್ಗೊಳ —ಬಿ. ವ್ಹಿ. ಶಿರೂರ ೩೮–೦೦
೬ Kallapur : A South Indian Village 33–00
—K. G. Gurumurthy
೭ Kesiraja's Sabdamani Darpana —J S Kulli 37–00
೮ Reading Interests & abilities of Adolescents & Adults —S. N. Naik 45-00
೯ ಮಧುರಚೆನ್ನ : ಜೀವನ ಹಾಗೂ ಕೃತಿಗಳ ಸಮೀಕ್ಷೆ ೩೮–೦೦
—ಜಿ. ಎಸ್. ಕಾಪಸೆ

ವಿಶೇಷ ಉಪನ್ಯಾಸ ಗ್ರಂಥಮಾಲೆ

೧೦ ಮಹಾಕಾವ್ಯ ಸ್ವರೂಪ —ಜಿ. ಎಸ್. ಶಿವರುದ್ರಪ್ಪ ೬–೦೦
೧೧ Winged Words : Vocabulary of Poetry 2–00
—V. K. Gokak
೧೨ Sanskrit Drama —G. K. Bhat 10–00
೧೩ ಶ್ರೀರಾಮಾಯಣದರ್ಶನಂ ಮಹಾಕಾವ್ಯ (ಸಾ.)೭–೦೦
—ಎಚ್. ತಿಪ್ಪೇರುದ್ರಸ್ವಾಮಿ (ಕ್ಯಾ.)೯–೦೦

ಕನ್ನಡ ಅಧ್ಯಯನಪೀಠ : ವಿಶೇಷ ಉಪನ್ಯಾಸಮಾಲೆ

೧೪ ಚಿತ್ರ, ಶಿಲ್ಪ, ವಾಸ್ತುಕಲೆಗಳು —ಶಿವರಾಮ ಕಾರಂತ ೪–೦೦

೧೫ ಪಾಶ್ಚಾತ್ಯ ವಿಮರ್ಶೆಯ ಮಧ್ಯಯುಗ —ವ್ಹಿ. ಎಂ. ಇನಾಮದಾರ ೬–೦೦

೧೬ ವೀರಶೈವ ಧರ್ಮವಿವೇಚನ —ನಾಗಭೂಷಣಶಾಸ್ತ್ರಿ ೪–೫೦

೧೭ ಕನ್ನಡ ಜಾನಪದ ಸಾಹಿತ್ಯ —ಬೆಟಗೇರಿ ಕೃಷ್ಣಶರ್ಮ ೬–೦೦

೧೮ ಶರಣರ, ಅನುಭವ, ಅನುಭಾವ ಅನುಭೂತಿ ೭–೦೦
—ಆರ್. ಆರ್. ದಿವಾಕರ

ಕನ್ನಡ ಕಾವ್ಯಮಾಲೆ

೧೯ ಅನಂತನಾಥ ಪುರಾಣಂ —ಸಂ. : ಬಿ. ಬಿ. ಮಹೀಶವಾಡಿ ೧೫–೦೦

೨೦ ಸಮ್ಯಕ್ತ್ವ ಕೌಮುದಿ —ಸಂ. : ಬಿ. ಬಿ. ಮಹೀಶವಾಡಿ ೧೬–೦೦

೨೧ ಹರಿಹರದೇವಕೃತ ನೂತನ ಪುರಾತನರ ರಗಳೆಗಳು ೨೫–೦೦
—ಸಂ. : ಎಂ. ಎಸ್. ಸುಂಕಾಪುರ

೨೨ ಶಬರ ಶಂಕರ ವಿಳಾಸ —ಸಂ. : ಎಂ. ಎಸ್. ಸುಂಕಾಪುರ ೧೬–೦೦

೨೩ ಪ್ರಸನ್ನ ಶಂಕರಲಿಂಗ ರಗಳೆಗಳು —ಸಂ. : ಎಂ. ಎಸ್. ಸುಂಕಾಪುರ ೨೦–೦೦

೨೪ ಹರಿಹರದೇವಕೃತ ಶಿವಭಕ್ತಿ ಮಹಿಮಾ ರಗಳೆಗಳು ೨೭–೦೦
—ಸಂ. : ಎಂ. ಎಸ್. ಸುಂಕಾಪುರ

೨೫ ಪ್ರಭುಲಿಂಗಲೀಲೆ —ಸಂ. : ಎಂ. ಎಸ್. ಸುಂಕಾಪುರ ೨೦–೦೦

ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

೨೬ ಕನ್ನಡದಲ್ಲಿ ಷಟ್ಪದಿ ಸಾಹಿತ್ಯ ೫–೦೦

೨೭ ಕರ್ನಾಟಕ ಮತ್ತು ಜೈನ ಸಂಸ್ಕೃತಿ ೫–೦೦

೨೮ ಕಿತ್ತೂರ ನಾಡಿನ ಇತಿಹಾಸ ಮತ್ತು ಸಂಸ್ಕೃತಿ ೮–೦೦

ಜನಪದ ಸಾಹಿತ್ಯಮಾಲೆ

೨೯ ಜೀವನ ಜೋಕಾಲಿ ಭಾಗ–೬ : ಡೊಳ್ಳಿನ ಹಾಡು ೫–೦೦
—ಸಂ. : ಎಂ. ಎಸ್. ಸುಂಕಾಪುರ

೩೦ ಉತ್ತರಕನ್ನಡ ಜನಪದ ಕಥೆಗಳು —ಸಂ. : ಎಲ್. ಆರ್. ಹೆಗಡೆ ೧೦–೦೦

೩೧ ಕನ್ನಡ ಬಯಲಾಟ : ಪ್ರಮೀಳೆ —ಸಂ. : ಎಂ. ಎಸ್. ಸುಂಕಾಪುರ ೫–೦೦

೩೨ ಕನ್ನಡ ಗಾದೆಮಾತುಗಳು —ಸಂ. : ಎಸ್. ಎಂ. ನಾಯಕ ೧೨–೦೦

೩೩ ಜಾನಪದ ಸಾಹಿತ್ಯದರ್ಶನ–೨ (ಸಾ.)೧೩–೦೦
—ಸಂ. : ಎಂ. ಎಸ್. ಸುಂಕಾಪುರ (ಕ್ಯಾ.)೧೫–೦೦

೩೪ ಜೀವನ ಜೋಕಾಲಿ ಭಾಗ–೭ : ಗಂಗೆ–ಗೌರಿ ಸಂವಾದ ೧೩–೦೦
—ಸಂ. : ಎಂ. ಎಸ್. ಸುಂಕಾಪುರ

೩೫ ಜೀವನ ಜೋಕಾಲಿ ಭಾಗ– ೮ : ಕೋಲುಪದ ೧೧–೦೦
—ಸಂ. : ಎಂ. ಎಸ್. ಸುಂಕಾಪುರ

Library of Social Work & Social Work Education

೩೬ Sectarian and Secular Bases of Welfare (Ord.)6–00
—Ed. H. M. Marulasiddaiah (H.C.)9–00

ವಚನಸಾಹಿತ್ಯ

೩೭ ಲಿಂಗಚಿದಮೃತಬೋಧೆ —ಸಂ. : ಎಂ. ಎಸ್. ಸುಂಕಾಪುರ ೧೨–೦೦

೩೮ ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು ೧೬–೦೦
—ಸಂ. : ಎಚ್. ಪಿ. ಮಲ್ಲೇದೇವರು

೩೯ ಉರಿಲಿಂಗ ಪೆದ್ದಿಗಳ ವಚನಗಳು ೧೬–೦೦
—ಸಂ. : ಎಚ್. ಪಿ. ಮಲ್ಲೇದೇವರು

೪೦ भक्ति भंडारी बसवेश्वर के वचन १६–००
—सं : एम्. बि. कोट्रशेट्टि

೪೧ ಬಸವಸ್ತೋತ್ರದ ವಚನಗಳು —ಸಂ. : ಎಂ. ಎಂ. ಕಲಬುರ್ಗಿ ೧೫–೦೦

೪೨ ಶಿವಯೋಗ ಪ್ರದೀಪಿಕಾ —ಸಂ. : ಎಂ. ಎಂ. ಕಲಬುರ್ಗಿ ೧೦–೦೦
—ಸಂ. : ಎಂ. ನಾಗಭೂಷಣ ಶಾಸ್ತ್ರಿ

೪೩ ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನ (ಸಾ.)೪೦–೦೦
ಪದಪ್ರಯೋಗ ಕೋಶ —ಸಂ. : ಎಸ್. ಆರ್. ಗುಂಜಾಳ (ಕ್ಯಾ.)೪೫–೦೦
—ಟಿ. ಎಲ್. ಬ್ಯಾಡಗಿ

ಇತರ ಪ್ರಕಟನೆಗಳು

೪೪ Silver Tongue —Ed.: M. K. Naik (Ord.)10–00
(H.C.)12–00

೪೫ Daya Vibhaga —I. S. Pawate 20–00

೪೬ ಧಾರವಾಡ ಜಿಲ್ಲೆಯ ಶಾಸನ ಸೂಚಿ (ಸಾ.)೨೦-೦೦
—ಸಂ. : ಎಂ. ಎಂ. ಕಲಬುರ್ಗಿ (ಕ್ಯಾ.)೩೦–೦೦

೪೭ ನನ್ನದು ಈ ಕನ್ನಡ ನಾಡು —ಪಾಟೀಲ ಪುಟ್ಟಪ್ಪ ೫–೦೦

೪೮ ಕನ್ನಡದಲ್ಲಿ ಕಾನೂನು ಸಾಹಿತ್ಯ —ರಾ. ಯ. ಧಾರವಾಡಕರ ೯–೦೦

೪೯ The Proceedings of the III All India Conference of Dravidian Linguists 43–00
—Ed. R. C. Hiremath
—J. S. Kulli

೪೯ Some Aspects of Trade and growth : an Indian Experience —B. M. Wali (Ord.)16–00 (H.C.)20–00

೫೦ ಧಾರವಾಡ ತಾಲೂಕಿನ ಶಾಸನಗಳು (ಸಾ.)೨೪–೦೦
ಸಂ. : ಎಂ. ಎಂ. ಕಲಬುರ್ಗಿ (ಕ್ಯಾ.)೩೦–೦೦

ಉಪನ್ಯಾಸ ಗ್ರಂಥಮಾಲೆ : ವಿವಿಧ ವಿಷಯಗಳನ್ನು ಕುರಿತು ೬೨ ಕಿರುಹೊತ್ತಗೆಗಳು; ಪ್ರತಿಯೊಂದರ ಬೆಲೆ : ೨೫ ಪೈಸೆ.

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ ೧ ರಿಂದ ಮಾರ್ಚ ೩೧ ರ ವರೆಗೆ
ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತ
ಗಳನ್ನು ಕೊಳ್ಳುವವರಿಗೆ ಶೆ. ೩೩⅓ ದಂತೆ ಕಮೀಶನ್ ಕೊಡಲಾಗುವದು

ವಿಶ್ವವಿದ್ಯಾಲಯದ ರಜತಮಹೋತ್ಸವದ ನೆನಪಿಗಾಗಿ
ವಿಶೇಷ ರಿಯಾಯಿತಿ

- ೧೦೦ ರೂ. ಹಾಗು ಅದಕ್ಕೂ ಮೇಲ್ಪಟ್ಟು ಪುಸ್ತಕಗಳ (ಪಠ್ಯಪುಸ್ತಕ ಹೊರತು ಪಡಿಸಿ
ಖರೀದಿಗೆ ಶೇ. ೨೫ + ಶೇ. ೧೫
- ೫,೦೦೦ ರೂ. ಹಾಗೂ ಅದಕ್ಕೂ ಮೇಲ್ಪಟ್ಟು ಖರೀದಿಗೆ ಶೇ. ೩೩⅓ + ಶೇ. ೧

ವಿಜ್ಞಾನ ಭಾರತಿ
(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೪ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ
(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲ
ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯ
ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವ
ಮಾಡಲಾಗುವುದು.

'ಮಾನವಿಕ ಭಾರತಿ'
(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೬
ಬಿಡಿ ಪ್ರತಿ : ರೂ. ೩-೫೦ (ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪-೦೦

(ಹಣವನ್ನು ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ
ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩